॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೮

ದ್ರೋಣಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ದ್ರೋಣಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ದ್ರೋಣಪರ್ವ - ಭಾಗ ೧೮

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-75-0

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	X + 514 = 524
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಪ್ರಹ್ಲಾದ ದೇಶಪಾಂಡೆ ಹಾಗೂ ಎಂ. ಶರತ್ ಚಂದ್ರ
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು.
ಮುದ್ರಕರು	-	**ಪವನ್ ಪ್ರಿಂಟರ್ಸ್**, ಬೆಂಗಳೂರು-18 **ಮೊಬೈಲ್ : 9686489131**
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್

ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್

ಶ್ರೀಮದ್ಗಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಯುನೀನ್ನುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೮

ದ್ರೋಣಪರ್ವ

ಪುಟ ಸಂ.

102. ಸಾತ್ಯಕಿಯಿಂದ ದುರ್ಯೋಧನ ಮತ್ತು ಕೃತವರ್ಮರ ಪರಾಜಯ 01

103. ಸಾತ್ಯಕಿಯ ಪರಾಕ್ರಮ. ಅವನಿಂದ ದ್ರೋಣರ ಪರಾಭವ 10

104. ಸಾತ್ಯಕಿಯಿಂದ ಸುದರ್ಶನ ರಾಜನ ವಧೆ 18

105. ಸಾತ್ಯಕಿಯ ಪರಾಕ್ರಮ 24

106. ಸಾತ್ಯಕಿಯ ಯುದ್ಧದ ವರ್ಣನೆ 34

107. ಯುದ್ಧದಲ್ಲಿ ಸಾತ್ಯಕಿಯ ಪರಾಕ್ರಮ 44

108. ಸಾತ್ಯಕಿಯ ಭಯದಿಂದ ಓಡುತ್ತಿದ್ದ ದುಶ್ಶಾಸನನಿಗೆ ದ್ರೋಣರಿಂದ ನಿಂದೆ.
ದ್ರೋಣ-ಧೃಷ್ಟದ್ಯುಮ್ನರ ಯುದ್ಧ. 55

109. ಸಾತ್ಯಕಿಯಿಂದ ಪುನಃ ದುಶ್ಶಾಸನನ ಪರಾಜಯ 69

110. ಸಂಕುಲ ಯುದ್ಧವರ್ಣನೆ. ಸಾತ್ಯಕಿಯಿಂದ ಅರ್ಜುನನ ದರ್ಶನ 76

111. ದ್ರೋಣರ ಪರಾಕ್ರಮ. ಅವರಿಂದ ಬೃಹತ್ಕ್ಷತ್ರ, ಕ್ಷೇಮವರ್ಮ,
ಧೃಷ್ಟಕೇತು ಮೊದಲಾದವರ ವಧೆ 85

112. ಅರ್ಜುನನ ವಾರ್ತೆಯನ್ನು ತಿಳಿಯಲು ಯುಧಿಷ್ಠಿರನಿಂದ
ಸಾತ್ಯಕಿಯನ್ನು ಕಳುಹಿಸಿ ಪುನಃ ಭೀಮಸೇನನ ಪ್ರೇಷಣ 100

113. ಅರ್ಜುನನನ್ನು ನೋಡಿ ಭೀಮನ ಸಿಂಹನಾದ
ಅದನ್ನು ಕೇಳಿದ ಯುಧಿಷ್ಠಿರನ ಹರ್ಷ. 122

114. ಭೀಮಸೇನನಿಂದ ಕರ್ಣನ ಪರಾಜಯ 131

115. ದ್ರೋಣ-ದುರ್ಯೋಧನರ ಸಂವಾದ. ಯುಧಾಮನ್ಯು-
ಉತ್ತಮೌಜರ ಜೊತೆಯಲ್ಲಿ ದುರ್ಯೋಧನನ ಯುದ್ಧ 138

116. ಭೀಮನಿಂದ ಕರ್ಣನ ಪರಾಜಯ 145

117. ಭೀಮಸೇನ ಮತ್ತು ಕರ್ಣರ ಯುದ್ಧ 156

118 ಭೀಮನಿಂದ ಕರ್ಣನ ಸಹಾಯಕ್ಕೆ ಬಂದ ದುರ್ಜಯನ ವಧೆ 164

119. ಭೀಮನಿಂದ ಪರಾಜಿತನಾದ ಕರ್ಣನ ಪಲಾಯನ 173

120. ಭೀಮಸೇನನಿಂದ ದುರ್ಯೋಧನ ತಮ್ಮಂದಿರಾದ
ದುರ್ಮರ್ಷಣಾದಿ ಐವರ ವಧೆ 180

121. ಭೀಮಸೇನನಿಂದ ಚಿತ್ರೋಪಚಿತ್ರ ಮೊದಲಾದ ದುರ್ಯೋಧನನ
ಏಳು ಸಹೋದರರ ವಧೆ 188

122. ಭೀಮಸೇನನಿಂದ ವಿಕರ್ಣಾದಿ ಸಪ್ತ ದುರ್ಯೋಧನನ ಸಹೋದರರ ವಧೆ 195

123. ಭೀಮ ಮತ್ತು ಕರ್ಣರ ಯುದ್ಧ 204

124. ಭೀಮ-ಕರ್ಣರ ಯುದ್ಧ 210

125. ಸಾತ್ಯಕಿಯಿಂದ ಅಲಂಬುಸನ ವಧೆ 231

126. ಸಾತ್ಯಕಿಯಿಂದ ಅರ್ಜುನನ ದರ್ಶನ 238

127. ಸಾತ್ಯಕಿ ಮತ್ತು ಭೂರಿಶ್ರವನ ಯುದ್ಧ. ಅರ್ಜುನನಿಂದ
ಭೂರಿಶ್ರವನ ದಕ್ಷಿಣ ಬಾಹುವಿನ ಛೇದ 246

128. ಭೂರಿಶ್ರವನ ಪ್ರಾಯೋಪ್ರವೇಶ. ಸಾತ್ಯಕಿಯಿಂದ ಭೂರಿಶ್ರವನ ಶಿರಚ್ಛೇದ 261

129. ಸಂಜಯನಿಂದ ಧೃತರಾಷ್ಟ್ರನನ್ನು ಕುರಿತು ಭೂರಿಶ್ರವನಿಂದ ಸಾತ್ಯಕಿಯ
ಪರಾಭವಕ್ಕೆ ಕಾರಣ ಕಥನ ಮತ್ತು ಯಾದವರ ಪ್ರಶಂಸೆ 278

130. ಕೃಷ್ಣಾರ್ಜುನರ ಸಂವಾದ. ಕರ್ಣ-ಸಾತ್ಯಕಿ ಮೊದಲಾದವರ ಯುದ್ಧ 284

131. ಅರ್ಜುನನಿಂದ ಸೈಂಧವನ ಶಿರಚ್ಛೇದ 323

132. ಸೈಂಧವನ ಶಿರಸ್ಸನ್ನು ರಣರಂಗದಲ್ಲಿ ಬೀಳಿಸದಿರಲು ಕೃಷ್ಣನಿಂದ
ಕಾರಣ ನಿರೂಪಣೆ. ಸೈಂಧವನ ತಂದೆಯ ತೊಡೆಯಲ್ಲಿ ಶಿರಸ್ಸಿನ
ಪಾತ ಮತ್ತು ಅವನ ಮರಣ 341

೬. ಘಟೋತ್ಕಚವಧಪರ್ವ

133. ಸೈಂಧವವಧೆಯಿಂದ ಪಾಂಡವರ ಹರ್ಷ. ಸತ್ಕಾರ ಮತ್ತು ಸಲ್ಲಾಪ 350

134. ಭೀಮಸೇನನನ್ನು ಅವಹೇಳನ ಮಾಡಿದ ಕರ್ಣನನ್ನು ಕುರಿತು ಅರ್ಜುನನ ಮಾತುಗಳು. ಅರ್ಜುನನ ಪುತ್ರನ ವಧೆಯ ಪ್ರತಿಜ್ಞೆ. ಕೃಷ್ಣನಿಂದ ಅರ್ಜುನನ ಪ್ರಶಂಸೆ ಮತ್ತು ಅರ್ಜುನನಿಗೆ ರಣರಂಗದ ಪ್ರದರ್ಶನ 369

135. ಯುಧಿಷ್ಠಿರನಿಂದ ಕೃಷ್ಣ-ಭೀಮ-ಸಾತ್ಯಕಿಗಳ ಸತ್ಕಾರ 378

136. ಸೈಂಧವ ವಧೆಯಿಂದ ದುರ್ಯೋಧನನ ಶೋಕ ಮತ್ತು ಆತ್ಮನಿಂದೆ 385

137. ದುರ್ಯೋಧನನನ್ನು ನಿಂದಿಸಿ ರಾತ್ರಿ ಯುದ್ಧಕ್ಕಾಗಿ ದ್ರೋಣರ ಪ್ರಸ್ಥಾನ 392

138. ಜಯದ್ರಥನ ವಧೆಗಾಗಿ ದ್ರೋಣರನ್ನು ನಿಂದಿಸುವ ದುರ್ಯೋಧನನನ್ನು ನಿರಾಕರಿಸಿ ದೈವಹೇತುತ್ವ ಸಮರ್ಥನೆ 400

139. ರಾತ್ರಿಯುದ್ಧದಲ್ಲಿ ದುರ್ಯೋಧನನಿಂದ ಯುಧಿಷ್ಠಿರ ಪರಾಜಯ 406

140. ರಾತ್ರಿಯುದ್ಧದ ಪ್ರಾರಂಭ. ದ್ರೋಣರ ಪರಾಕ್ರಮ 413

141. ಭೀಮಸೇನನಿಂದ ದುರ್ಮದ-ದುಷ್ಕರ್ಣಾದಿಗಳ ವಧೆ 421

142. ಸಾತ್ಯಕಿಯಿಂದ ಸೋಮದತ್ತನ ಪರಾಜಯ. ಅಶ್ವತ್ಥಾಮ-ಘಟೋತ್ಕಚರ ಯುದ್ಧ. ಅಶ್ವತ್ಥಾಮರಿಂದ ದ್ರುಪದ ಪುತ್ರರ ಮತ್ತು ಕುಂತಿಭೋಜ ಪುತ್ರರ ವಧೆ 430

143. ಭೀಮಸೇನನಿಂದ ಬಾಹ್ಲೀಕ ರಾಜನ, ದುರ್ಯೋಧನ ಹತ್ತು ತಮ್ಮಂದಿರ ಮತ್ತು ಶಕುನಿಯ ಐದು ತಮ್ಮಂದಿರ ವಧೆ 457

144. ದುರ್ಯೋಧನನ ಎದುರಿನಲ್ಲಿ ಕರ್ಣ ಮತ್ತು ಕೃಪರ ಕಲಹ 466

145. ಕರ್ಣನಿಂದ ಕೃಪರ ನಿಂದೆಯನ್ನು ಕೇಳಿ ಕರ್ಣನ ಜೊತೆಯಲ್ಲಿ ಅಶ್ವತ್ಥಾಮರ ಕಲಹ. ದುರ್ಯೋಧನನಿಂದ ಕಲಹದ ಉಪಶಮನ ಮತ್ತು ಅಶ್ವತ್ಥಾಮರನ್ನು ಕುರಿತು ಪಾಂಚಾಲರನ್ನು ಕೊಲ್ಲುವಂತೆ ಒತ್ತಾಯ 480

146. ಅಶ್ವತ್ಥಾಮ ಮತ್ತು ಧೃಷ್ಟದ್ಯುಮ್ನರ ಯುದ್ಧ. ಅಶ್ವತ್ಥಾಮರ ಪರಾಕ್ರಮ 498

147. ಸಂಕುಲಯುದ್ಧ 510

★ ★ ★ ★ ★

ಮಹಾಭಾರತ

ದ್ರೋಣಪರ್ವ

ನೂರ ಎರಡನೆಯ ಅಧ್ಯಾಯ

ಸಾತ್ಯಕಿಯಿಂದ ದುರ್ಯೋಧನ ಮತ್ತು ಕೃತವರ್ಮರ ಪರಾಜಯ.

ಸಂಜಯಃ

ತೇ ಕಿರಂತಃ ಶರವ್ರಾತಾನ್ ಸರ್ವೇ ಯತ್ತಾಃ ಪ್ರಹಾರಿಣಃ ।
ತ್ವದಮಾರ್ಗಾ ಮಹಾರಾಜ ಯುಯುಧಾನಮಯೋಧಯನ್ ॥ ೧ ॥

ಸಂಜಯ– ಎಲೈ ಮಹಾರಾಜನೇ, ಪ್ರಹಾರಶೂರರಾದ ಅವರೆಲ್ಲರೂ ಅವಧಾನ ಪೂರ್ವಕವಾಗಿ ಸಾತ್ಯಕಿಯ ಮೇಲೆ ಜಾಗ್ರತೆಯಾಗಿ ಬಾಣಗಳ ಮಳೆಯನ್ನು ಸುರಿಸುತ್ತಾ ಅವನ ಜೊತೆಯಲ್ಲಿಯುದ್ಧವನ್ನು ಮಾಡಿದರು.

ತಂ ದ್ರೋಣಃ ಸಪ್ತಸಪ್ತತ್ಯಾ ಜಘಾನ ನಿಶಿತೈಃ ಶರೈಃ ।
ದುರ್ಮರ್ಷಣಶ್ಚೋ ದ್ದಾದಶಭಿರ್ದುಃಸಹೋ ದಶಭಿಃ ಶರೈಃ ॥ ೨ ॥

ದ್ರೋಣರು ಅವನನ್ನು ತೀಕ್ಷ್ಣವಾದ ಎಪ್ಪತ್ತೇಳು ಬಾಣಗಳಿಂದಲೂ, ದುರ್ಮರ್ಷಣನು ಹನ್ನೆರಡು ಬಾಣಗಳಿಂದಲೂ, ದುಸ್ಸಹನು ಹತ್ತು ಬಾಣಗಳಿಂದಲೂ ಹೊಡೆದರು.

ವಿಕರ್ಣಶ್ಚಾಪಿ ನಿಶಿತೈಸ್ತ್ರಿಂಶದ್ಭಿಃ ಕಂಕಪತ್ರಿಭಿಃ ।
ವಿವ್ಯಾಧ ಸವ್ಯೇ ಪಾರ್ಶ್ವೇ ತು ಸ್ತನಾಭ್ಯಾಮಂತರೇ ತಥಾ ॥ ೩ ॥

ವಿಕರ್ಣನೂ ಸಹ ಕಂಕಪತ್ರಗಳನ್ನು ಹೊಂದಿದ್ದ ತೀಕ್ಷ್ಣವಾದ ಮೂವತ್ತು ಬಾಣಗಳಿಂದ ಸಾತ್ಯಕಿಯ ಎಡಪಕ್ಕೆಯಲ್ಲಿಯೂ ಮತ್ತು ಸ್ತನಗಳ ಮಧ್ಯದಲ್ಲಿಯೂ ಹೊಡೆದನು.

ದುರ್ಮುಖೋ ದಶಭಿರ್ಬಾಣೈಸ್ತಥಾ ದುಃಶಾಸನೋಷ್ಟಭಿಃ ।
ಚಿತ್ರಸೇನಶ್ಚ ಶೈನೇಯಂ ದ್ವಾಭ್ಯಾಂ ವಿವ್ಯಾಧ ಮಾರಿಷ ॥ ೪ ॥

ಎಲೈ ಪೂಜ್ಯನೇ, ದುರ್ಮುಖನು ಹತ್ತು ಬಾಣಗಳಿಂದಲೂ, ದುಶ್ಶಾಸನನು ಎಂಟು ಬಾಣಗಳಿಂದಲೂ ಮತ್ತು ಚಿತ್ರಸೇನನು ಎರಡು ಬಾಣಗಳಿಂದಲೂ ಸಾತ್ಯಕಿಯನ್ನು ಹೊಡೆದರು.

ದುರ್ಯೋಧನಶ್ಚ ಮಹತಾ ಶರವರ್ಷೇಣ ಮಾಧವಮ್ ।
ಅಪೀಡಯದ್ ರಣೇ ರಾಜನ್ ಶೂರಾಶ್ಚಾನ್ಯೇ ಮಹಾರಥಾಃ ॥ ೫ ॥

ಎಲೈ ರಾಜನೇ, ದುರ್ಯೋಧನನು ದೊಡ್ಡ ಬಾಣಗಳ ಮಳೆಯಿಂದ ಮಧುಕುಲೋತ್ಪನ್ನನಾದ ಸಾತ್ಯಕಿಯನ್ನು ಪೀಡಿಸಿದನು. ಉಳಿದ ಶೂರರಾದ ಮಹಾರಥರೂ ಹಾಗೆಯೇ ಪೀಡಿಸಿದರು.

ಸರ್ವತಃ ಪ್ರತಿವಿದ್ಧಸ್ತು ತವ ಪುತ್ರೈರ್ಮಹಾರಥೈಃ ।
ತಾನ್ ಪ್ರತ್ಯವಿದ್ಧ್ಯಚ್ಛೈನೇಯಃ ಪೃಥಕ್ಪೃಥಗಜಿಹ್ಮಗೈಃ ॥ ೬ ॥

ಭಾರದ್ವಾಜಂ ತ್ರಿಭಿರ್ಬಾಣೈರ್ದುಃಸಹಂ ನವಭಿಸ್ತಥಾ ।
ವಿಕರ್ಣಂ ಪಂಚವಿಂಶತ್ಯಾ ಚಿತ್ರಸೇನಂ ಚ ಸಪ್ತಭಿಃ ॥ ೭ ॥

ದುರ್ಮರ್ಷಣಂ ದ್ವಾದಶಭಿಶ್ಚತುರ್ಭಿಶ್ಚ ವಿವಿಂಶತಿಮ್ ।
ಸತ್ಯವ್ರತಂ ಚ ನವಭಿರ್ವಿಜಯಂ ದಶಭಿಃ ಶರೈಃ ॥ ೮ ॥

ಎಲ್ಲ ಕಡೆಗಳಿಂದಲೂ ಮಹಾರಥರಾದ ನಿನ್ನ ಪುತ್ರರಿಂದ ಹೊಡೆಯಲ್ಪಟ್ಟ ಸಾತ್ಯಕಿಯು ನೇರವಾಗಿ ಸಾಗುವ ಬಾಣಗಳಿಂದ ಅವರನ್ನು ಪ್ರತ್ಯೇಕವಾಗಿ ಹೊಡೆದನು. ದ್ರೋಣರನ್ನು ಮೂರು ಬಾಣಗಳಿಂದಲೂ, ದುಸ್ಸಹನನ್ನು ಒಂಬತ್ತು ಬಾಣಗಳಿಂದಲೂ,

ವಿಕರ್ಣನನ್ನು ಇಪ್ಪತ್ತೈದು ಬಾಣಗಳಿಂದಲೂ, ಚಿತ್ರಸೇನನನ್ನು ಏಳು ಬಾಣಗಳಿಂದಲೂ, ದುರ್ಮರ್ಷಣನನ್ನು ಹನ್ನೆರಡು ಬಾಣಗಳಿಂದಲೂ, ವಿವಿಂಶತಿಯನ್ನು ನಾಲ್ಕು ಬಾಣಗಳಿಂದಲೂ, ಸತ್ಯವ್ರತನನ್ನು ಒಂಬತ್ತು ಬಾಣಗಳಿಂದಲೂ, ವಿಜಯನನ್ನು ಹತ್ತು ಬಾಣಗಳಿಂದಲೂ ಹೊಡೆದನು.

ತತೋ ರುಗ್ಮಾಂಗದಂ ಚಾಪಂ ವಿಧುನ್ವಾನೋ ಮಹಾರಥಃ ।
ಅಭ್ಯಯಾತ್ ಸಾತ್ಯಕಿಸ್ತೂರ್ಣಂ ಪುತ್ರಂ ತವ ಮಹಾರಥಮ್ ॥ ೯ ॥

ಆನಂತರ ಮಹಾರಥನಾದ ಸಾತ್ಯಕಿಯು ನಿನ್ನ ಪುತ್ರನೂ, ಮಹಾರಥನೂ ಧನುಸ್ಸನ್ನು ತೂಗಾಡಿಸುತ್ತಿದ್ದವನೂ ಆದ ಸುವರ್ಣಮಯವಾದ ಅಂಗವನ್ನು ಧರಿಸಿದ್ದ ದುರ್ಯೋಧನನ ಮೇಲೆ ಶೀಘ್ರವಾಗಿ ಸಾಗಿ ಹೋದನು.

ರಾಜಾನಂ ಸರ್ವಲೋಕಸ್ಯ ಸರ್ವಶಸ್ತ್ರಭೃತಾಂ ವರಮ್ ।
ಶರೈರಭ್ಯಾಹನದ್ ಗಾಢಂ ತತೋ ಯುದ್ಧಮಭೂತ್ ತಯೋಃ ॥ ೧೦ ॥

ಸರ್ವಲೋಕಕ್ಕೂ ರಾಜನಾದ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅವನನ್ನು ಬಾಣದಿಂದ ಗಾಢವಾಗಿ ಹೊಡೆದನು. ಆನಂತರ ಅವರಿಬ್ಬರಿಗೂ ಯುದ್ಧವು ನಡೆಯಿತು.

ವಿಮುಚ್ಯಂತೌ ಶರಾಂಸ್ತೀಕ್ಷ್ಣಾನ್ ಸಂದಧಾನೌ ಚ ಸಾಯಕಾನ್ ।
ಅದೃಶ್ಯಂ ಸಮರೇನ್ಯೋನ್ಯಂ ಚಕ್ರತುಸ್ತೌ ಮಹಾರಥೌ ॥ ೧೧ ॥

ಮಹಾರಥರಾದ ಅವರಿಬ್ಬರೂ ಧನುಸ್ಸುಗಳಲ್ಲಿ ತೀಕ್ಷ್ಣವಾದ ಬಾಣಗಳನ್ನು ಹೂಡುತ್ತಾ, ಅವುಗಳನ್ನು ಪ್ರಯೋಗಿಸುತ್ತಾ ರಣಭೂಮಿಯಲ್ಲಿ ಪರಸ್ಪರವಾಗಿ ಅದೃಶ್ಯರನ್ನಾಗಿ ಮಾಡಿದರು.

ಸಾತ್ಯಕಿಃ ಕುರುರಾಜೇನ ನಿರ್ವಿದ್ಧೋ ಬಹ್ವಶೋಭತ ।
ಅಸ್ರವದ್ ರುಧಿರಂ ಭೂರಿ ಸ್ವರಸಂ ಚಂದನೋ ಯಥಾ ॥ ೧೨ ॥

ಕುರುರಾಜನಿಂದ ಗಾಢವಾಗಿ ಹೊಡೆಯಲ್ಪಟ್ಟ ಸಾತ್ಯಕಿಯು ಬಹಳವಾಗಿ ಶೋಭಿಸಿದನು. ಚಂದನ ವೃಕ್ಷವು ಸ್ವರಸವನ್ನು ಸುರಿಸಿದಂತೆ ಅವನ ದೇಹದಿಂದ ಬಹಳ ರಕ್ತವು ಸುರಿಯಿತು.

ಸಾತ್ವತೇನ ಚ ಬಾಣೌಘೈರ್ನಿರ್ವಿಸ್ತನಯಸ್ತವ ।
ಶಾತಕುಂಭಮಯಾಪೀಡೋ ಬಭೌ ಯೂಪ ಇವೋಚ್ಛ್ರಿತಃ ॥ ೧೩ ॥

ಸಾತ್ಯಕಿಯಿಂದ ಬಾಣಗಳ ಸಮೂಹದಿಂದ ಗಾಢವಾಗಿ ಹೊಡೆಯಲ್ಪಟ್ಟ ಸುವರ್ಣಮಯವಾದ ಕಿರೀಟವನ್ನು ಧರಿಸಿದ ನಿನ್ನ ಪುತ್ರನು ಎತ್ತರವಾದ ಯೂಪದಂತೆ ಶೋಭಿಸಿದನು.

ಮಾಧವಸ್ತು ರಣೇ ರಾಜನ್ ಕುರುರಾಜಸ್ಯ ಧನ್ವಿನಃ ।
ಧನುಶ್ಚಿಚ್ಛೇದ ಸಹಸಾ ಕ್ಷುರಪ್ರೇಣ ಹಸನ್ನಿವ ।
ಅಥೈನಂ ಭಿನ್ನಧನ್ವಾನಂ ಶರೈರ್ಬಹುಭಿರಾಚಿನೋತ್ ॥ ೧೪ ॥

ಎಲೈ ರಾಜನೇ, ಮಾಧವನಾದ ಸಾತ್ಯಕಿಯು ನಗುತ್ತಾ ಕ್ಷುರಪ್ರದಿಂದ ಶೀಘ್ರವಾಗಿ ಧನುರ್ಧಾರಿಯಾದ ಕುರುರಾಜನಾದ ದುರ್ಯೋಧನನ ಧನುಸ್ಸನ್ನು ಕತ್ತರಿಸಿದನು. ಧನುಸ್ಸನ್ನು ಕತ್ತರಿಸಿ ಅನಂತರ ಅನೇಕ ಬಾಣಗಳಿಂದ ಅವನ ಶರೀರವನ್ನು ತುಂಬಿದನು.

ನಿರ್ಭಿನ್ನಶ್ಚ ಶರೈಸ್ತೇನ ದ್ವಿಷತಾ ಕ್ಷಿಪಕಾರಿಣಾ ।
ನಾಮೃಷ್ಯತ ರಣೇ ರಾಜಾ ಶತ್ರೋರ್ವಿಜಯಲಕ್ಷಣಮ್ ॥ ೧೫ ॥

ಕ್ಷಿಪ್ರಕಾರಿಯಾದ ಆ ಶತ್ರುವಿನಿಂದ ಆ ರೀತಿಯಲ್ಲಿ ಗಾಯಗೊಳಿಸಲ್ಪಟ್ಟ ರಾಜನಾದ ದುರ್ಯೋಧನನು ರಣರಂಗದಲ್ಲಿ ಶತ್ರುವಿನ ಆ ವಿಜಯ ಚಿಹ್ನೆಯನ್ನು ನೋಡಿ ಸಹಿಸಲಿಲ್ಲ.

ಅಥಾನ್ಯದ್ ಧನುರಾದಾಯ ಹೇಮಪೃಷ್ಠಂ ದುರಾಸದಮ್ ।
ವಿವ್ಯಾಧ ಸಾತ್ಯಕಿಂ ತೂರ್ಣಂ ಸಾಯಕಾನಾಂ ಶತೇನ ಹ ॥ ೧೬ ॥

ಆಗ ಅವನು ಸುವರ್ಣಪೃಷ್ಠವನ್ನು ಹೊಂದಿದ ಬಗ್ಗಿಸಲು ಕಷ್ಟ ಸಾಧ್ಯವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ನೂರು ಬಾಣಗಳನ್ನು ಪ್ರಯೋಗಿಸಿ ಶೀಘ್ರವಾಗಿ ಸಾತ್ಯಕಿಯನ್ನು ಹೊಡೆದನು.

ಸೋಽತಿವಿದ್ಧೋ ಬಲವತಾ ಪುತ್ರೇಣ ತವ ಧನ್ವಿನಾ ।
ಅಮರ್ಷವಶಮಾಪನ್ನಸ್ತವ ಪುತ್ರಮಪೀಡಯತ್ ॥ ೧೭ ॥

ಬಲಿಷ್ಠನೂ, ಧನುರ್ಧಾರಿಯೂ ಆದ ನಿನ್ನ ಪುತ್ರನಿಂದ ಗಾಢವಾಗಿ ಹೊಡೆಯಲ್ಪಟ್ಟ ಸಾತ್ಯಕಿಯು ಕ್ರೋಧವಶನಾಗಿ ನಿನ್ನ ಪುತ್ರನನ್ನು ಪೀಡಿಸಿದನು.

ಪೀಡಿತಂ ನೃಪತಿಂ ದೃಷ್ಟ್ವಾ ತವ ಪುತ್ರಾ ಮಹಾರಥಾಃ ।
ಸಾತ್ವತಂ ಶರವರ್ಷೇಣ ಛಾದಯಾಮಾಸುರಂಜಸಾ ॥ ೧೮ ॥

ಪೀಡಿತನಾದ ರಾಜನನ್ನು ನೋಡಿ ಮಹಾರಥರಾದ ನಿನ್ನ ಪುತ್ರರು ಬಾಣಗಳ ಮಳೆಯಿಂದ ಸಾತ್ಯಕಿಯನ್ನು ಚೆನ್ನಾಗಿ ಮುಚ್ಚಿದರು.

ಸ ಛಾದ್ಯಮಾನೋ ಬಹುಭಿಸ್ತವ ಪುತ್ರೈರ್ಮಹಾರಥೈಃ ।
ಏಕೈಕಂ ಪಂಚಭಿರ್ವಿದ್ಧ್ವಾ ಪುನರ್ವಿವ್ಯಾಧ ಸಪ್ತಭಿಃ ॥ ೧೯ ॥

ಮಹಾರಥರಾದ ನಿನ್ನ ಅನೇಕ ಪುತ್ರರಿಂದ ಆ ರೀತಿಯಲ್ಲಿ ಬಾಣಗಳಿಂದ ಮುಚ್ಚಲ್ಪಟ್ಟ ಅವನು ಅವರಲ್ಲಿ ಒಬ್ಬೊಬ್ಬರನ್ನೂ ಐದು ಬಾಣಗಳಿಂದ ಹೊಡೆದು, ಪುನಃ ಏಳೇಳು ಬಾಣಗಳಿಂದ ಹೊಡೆದನು.

ದುರ್ಯೋಧನಂ ಚ ತ್ವರಿತೋ ವಿವ್ಯಾಧಾಷ್ಟಭಿರಾಶುಗೈಃ ।
ಪ್ರಹಸಂಶ್ಚಾಸ್ಯ ಚಿಚ್ಛೇದ ಕಾರ್ಮುಕಂ ರಿಪುಭೀಷಣಮ್ ॥ ೨೦ ॥

ಅನಂತರ ಶೀಘ್ರವಾಗಿ ಶೀಘ್ರಗಾಮಿಗಳಾದ ಎಂಟು ಬಾಣಗಳಿಂದ ನಗುತ್ತಲೇ ದುರ್ಯೋಧನನ ಶತ್ರುಭಯಂಕರವಾದ ಧನುಸ್ಸನ್ನು ಕತ್ತರಿಸಿದನು.

ನಾಗಂ ಮಣಿಮಯಂ ಚೈವ ಶರೈರ್ಧ್ವಜಮಪಾತಯತ್ ।
ಹತ್ವಾ ತು ಚತುರೋ ವಾಹಾಂಶ್ಚತುರ್ಭಿರ್ನಿಶಿತೈಃ ಶರೈಃ ।
ಸಾರಥಿಂ ಪಾತಯಾಮಾಸ ಕ್ಷುರಪ್ರೇಣ ಮಹಾಯಶಾಃ ॥ ೨೧ ॥

ತನ್ನ ಬಾಣಗಳಿಂದ ಮಣಿಮಯವಾದ ಸರ್ಪವುಳ್ಳ ಅವನ ಧ್ವಜವನ್ನು ಕೆಡವಿ ನಾಲ್ಕು ತೀಕ್ಷ್ಣವಾದ ಬಾಣಗಳಿಂದ ರಥದ ನಾಲ್ಕು ಕುದುರೆಗಳನ್ನು ಕೊಂದು ಮಹಾಕೀರ್ತಿವಂತನಾದ ಸಾತ್ಯಕಿಯು ಕ್ಷುರಪ್ರದಿಂದ ಅವನ ಸಾರಥಿಯನ್ನು ಕೆಡವಿದನು.

ಏತಸ್ಮಿನ್ನಂತರೇ ಚೈವ ಕುರುರಾಜಂ ಮಹಾರಥಮ್ ।
ಅವಾಕಿರಚ್ಛರೈರ್ಹೃಷ್ಟೋ ಬಹುಭಿರ್ಮರ್ಮಭೇದಿಭಿಃ ॥ ೨೨ ॥

ಸ ವಧ್ಯಮಾನಃ ಸಮರೇ ಶೈನೇಯಸ್ಯ ಶರೋತ್ತಮೈಃ ।
ಪ್ರಾದ್ರವತ್ ಸಹಸಾ ರಾಜನ್ದುರ್ಯೋಧನಸ್ತವ ।
ಆಪ್ಲುತಶ್ಚ ತತೋ ಯಾನಂ ಚಿತ್ರಸೇನಸ್ಯ ಧನ್ವಿನಃ ॥ ೨೩ ॥

ಈ ಮಧ್ಯದಲ್ಲಿ ಸಂತೋಷಗೊಂಡ ಸಾತ್ಯಕಿಯು ಮಹಾರಥನಾದ ಕುರುರಾಜನ ಮೇಲೆ ಮರ್ಮಭೇದಿಗಳಾದ ಅನೇಕ ಬಾಣಗಳ ಮಳೆಯನ್ನು ಸುರಿಸಿದನು. ಎಲೈ ರಾಜನೇ, ನಿನ್ನ ಪುತ್ರನಾದ ದುರ್ಯೋಧನನು ರಣರಂಗದಲ್ಲಿ ಸಾತ್ಯಕಿಯ ಶ್ರೇಷ್ಠವಾದ ಬಾಣಗಳಿಂದ ಹೊಡೆಯಲ್ಪಟ್ಟು ತನ್ನ ರಥದಿಂದ ಧನುರ್ಧಾರಿಯಾದ ಚಿತ್ರಸೇನನ ರಥಕ್ಕೆ ಹಾರಿ ರಣರಂಗದಿಂದ ಓಡಿಹೋದನು.

ಹಾಹಾಭೂತಂ ಜಗಚ್ಚಾಪೀದ್ ದೃಷ್ಟ್ವಾ ರಾಜಾನಮಾಹವೇ ।
ಗ್ರಸ್ಯಮಾನಂ ಸಾತ್ಯಕಿನಾ ಖೇ ಸೋಮಮಿವ ರಾಹುಣಾ ॥ ೨೪ ॥

ಆಕಾಶದಲ್ಲಿ ರಾಹುವಿನಿಂದ ಚಂದ್ರನು ನುಂಗಲ್ಪಟ್ಟಂತೆ ಯುದ್ಧದಲ್ಲಿ ಸಾತ್ಯಕಿಯಿಂದ ಕುರುರಾಜನು ನುಂಗಲ್ಪಡುವುದನ್ನು ನೋಡಿ ಜಗತ್ತಿನಲ್ಲಿ ಹಾಹಾಕಾರವುಂಟಾಯಿತು.

ತಂ ತು ಶಬ್ದಂ ಮಹಚ್ಛ್ರುತ್ವಾ ಕೃತವರ್ಮಾ ಮಹಾರಥಃ ।
ಅಭ್ಯಯಾತ್ ಸಹಸಾ ತತ್ರ ಯತ್ರಾಸ್ತೇ ಮಾಧವಃ ಪ್ರಭುಃ ॥ ೨೫ ॥

ಆ ದೊಡ್ಡ ಶಬ್ದವನ್ನು ಕೇಳಿದ ಮಹಾರಥನಾದ ಕೃತವರ್ಮನು ಶೀಘ್ರವಾಗಿ ಮಹಾಬಲನಾದ ಸಾತ್ಯಕಿಯು ಇದ್ದಲ್ಲಿಗೆ ಧಾವಿಸಿಬಂದನು.

ವಿಧುನ್ವಾನೋ ಧನುಃಶ್ರೇಷ್ಠಂ ಚೋದಯಂಶ್ಚೈವ ವಾಜಿನಃ ।
ಭೃತ್ಯಸನ್ ಸಾರಥಿಂ ಚೋಗ್ರಂ ಯಾಹಿ ಯಾಹೀತಿ ಸತ್ವರಃ ॥ ೨೬ ॥

ತನ್ನ ದೊಡ್ಡ ಧನುಸ್ಸನ್ನು ತೂಗಾಡಿಸುತ್ತಾ, ತನ್ನ ಅಶ್ವಗಳನ್ನು ಪ್ರಚೋದಿಸುತ್ತಾ, ಸಾರಥಿಯನ್ನು ಕುರಿತು ಉಗ್ರವಾಗಿ ಶೀಘ್ರವಾಗಿ ಹೋಗು, ಹೋಗು ಎಂದು ಗದರಿಸುತ್ತಾ ಅಲ್ಲಿಗೆ ಬಂದನು.

ತಮಾಪತಂತಂ ಸಂಪ್ರೇಕ್ಷ್ಯ ವ್ಯಾದಿತಾಸ್ಯಮಿವಾಂತಕಮ್ ।
ಯುಯುಧಾನೋ ಮಹಾರಾಜ ಯಂತಾರಮಿದಮಬ್ರವೀತ್ ॥ ೨೭ ॥

ಕೃತವರ್ಮಾ ರಥೇನೈಷ ದ್ರುತಮಾಪತತೇ ಶರೀ ।
ಪ್ರತ್ಯುದ್ಯಾಹಿ ರಥೇನೈನಂ ಪ್ರವರಂ ಸರ್ವಧನ್ವಿನಾಮ್ ॥ ೨೮ ॥

ಬಾಯಿ ತೆರೆದ ಮೃತ್ಯುವಿನಂತೆ ಅಲ್ಲಿಗೆ ಬಂದ ಕೃತವರ್ಮನನ್ನು ನೋಡಿ ಎಲೈ ಮಹಾರಾಜನೇ, ಸಾತ್ಯಕಿಯು ತನ್ನ ಸಾರಥಿಯನ್ನು ಕುರಿತು- 'ಕೈಯಲ್ಲಿ ಬಾಣವನ್ನು ಹಿಡಿದ ಈ ಕೃತವರ್ಮನು ಶೀಘ್ರವಾಗಿ ರಥದಿಂದ ಬರುತ್ತಿದ್ದಾನೆ. ಸರ್ವ-ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಅವನ ಕಡೆಗೆ ನನ್ನ ರಥವನ್ನು ತೆಗೆದುಕೊಂಡು ಹೋಗು' ಎಂದು ಹೇಳಿದನು.

ತತಃ ಪ್ರಜವಿತಾಶ್ವೇನ ವಿಧಿವತ್ ಕಲ್ಪಿತೇನ ಚ ।
ಆಸಸಾದ ರಣೇ ಭೋಜಂ ಪ್ರತಿಮಾನಂ ಧನುಷ್ಮತಾಮ್ ॥ ೨೯ ॥

ಆಗ ಶಾಸ್ತ್ರೋಕ್ತ ರೀತಿಯಲ್ಲಿ ಸಿದ್ಧಪಡಿಸಿದ ವೇಗಶಾಲಿಯಾದ ಅಶ್ವಗಳನ್ನು ಹೊಂದಿದ ತನ್ನ ರಥದಿಂದ ಧನುರ್ಧಾರಿಗಳಿಗೆ ಆದರ್ಶನಾಗಿದ್ದ ಭೋಜವಂಶದ ಕೃತವರ್ಮನನ್ನು ಸಾತ್ಯಕಿಯು ರಣರಂಗದಲ್ಲಿ ಸಮೀಪಿಸಿದನು.

ತತಃ ಪರಮಸಂಕ್ರುದ್ಧೌ ಜ್ವಲಂತಾವಿವ ಪಾವಕೌ ।
ಸಮೇಯಾತಾಂ ನರವ್ಯಾಘ್ರೌ ವ್ಯಾಘ್ರಾವಿವ ತರಸ್ವಿನೌ ॥ ೩೦ ॥

ಆನಂತರ ವೇಗಶಾಲಿಗಳಾದ ಆ ಇಬ್ಬರು ನರಶ್ರೇಷ್ಠರು ಬಹಳ ಕೋಪಗೊಂಡು ಉರಿಯುವ ಅಗ್ನಿಗಳಂತೆ, ವ್ಯಾಘ್ರಗಳಂತೆ ಪರಸ್ಪರವಾಗಿ ಸೆಣೆಸಿದರು.

ಕೃತವರ್ಮಾ ತು ಶೈನೇಯಂ ಷಡ್ವಿಂಶತ್ಯಾ ಸಮಾರ್ಪಯತ್ ।
ನಿಶಿತೈಃ ಸಾಯಕೈಸ್ತೀಕ್ಷ್ಣೈರ್ಯಂತಾರಂ ಚಾಸ್ಯ ಸಪ್ತಭಿಃ ॥ ೩೧ ॥

ಕೃತವರ್ಮನು ಸಾತ್ಯಕಿಯನ್ನು ತೀಕ್ಷ್ಣವಾದ ಇಪ್ಪತ್ತಾರು ಬಾಣಗಳಿಂದ ಹೊಡೆದು ಅವನ ಸಾರಥಿಯನ್ನೂ ಏಳು ಬಾಣಗಳಿಂದ ಹೊಡೆದನು.

ಚತುರಶ್ಚ ಹಯೋದಾರಾಂಶ್ಚತುರ್ಭಿಃ ಪರಮೇಷುಭಿಃ ।
ಅವಿಧ್ಯತ್ ಸಾಧು ದಾಂತಾನ್ ವೈ ಸೈಂಧವಾನ್ ಸಾತ್ವತಸ್ಯ ಹ ॥ ೩೨ ॥

ಚೆನ್ನಾಗಿ ಪಳಗಿದ ಸೈಂಧವ ದೇಶದ ನಾಲ್ಕು ಶ್ರೇಷ್ಠವಾದ ರಥಾಶ್ವಗಳನ್ನು ಶ್ರೇಷ್ಠವಾದ ನಾಲ್ಕು ಬಾಣಗಳಿಂದ ಚೆನ್ನಾಗಿ ಹೊಡೆದನು.

ರುಗ್ಮದ್ವಜೋ ರುಗ್ಮಕೃಷ್ಣಂ ಮಹದ್ ವಿಷ್ಫಾರ್ಯ ಕಾರ್ಮುಕಮ್ ।
ರುಗ್ಮಾಂಗದೀ ರುಗ್ಮವರ್ಮಾ ರುಗ್ಮಪುಂಖಾನವಾಕಿರತ್ ॥ ೩೩ ॥

ಸುವರ್ಣಮಯವಾದ ಧ್ವಜವುಳ್ಳವನಾಗಿ, ಸುವರ್ಣಮಯವಾದ ಅಂಗದವನ್ನೂ ಮತ್ತು ಕವಚವನ್ನೂ ಧರಿಸಿ, ಸುವರ್ಣಮಯವಾದ ಪುಂಖಗಳನ್ನೂ ಮತ್ತು ಹಿಂಭಾಗವನ್ನೂ ಹೊಂದಿದ್ದ ತನ್ನ ದೊಡ್ಡ ಧನುಸ್ಸನ್ನು ತೂಗಾಡಿಸುತ್ತಾ ಸಾತ್ಯಕಿಯ ಮೇಲೆ ಬಾಣಗಳ ಮಳೆಯನ್ನು ಕರೆದನು.

ತತೋಽತಿಂ ಶಿನೇಃ ಪೌತ್ರಃ ಸಾಯಕಾನ್ ಕೃತವರ್ಮಣೇ ।
ಪ್ರಾಹಿಣೋತ್ ತ್ವರಯಾ ಯುಕ್ತೋ ದ್ರಷ್ಟುಕಾಮೋ ಧನಂಜಯಮ್ ॥

ಆಗ ಅರ್ಜುನನನ್ನು ನೋಡುವ ತ್ವರೆಯಲ್ಲಿದ್ದ ಶಿನಿಯ ಪೌತ್ರನಾದ ಸಾತ್ಯಕಿಯು ಕೃತವರ್ಮನ ಮೇಲೆ ಎಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ಸೋಽತಿವಿದ್ಧೋ ಬಲವತಾ ಶತ್ರುಣಾ ಶತ್ರುತಾಪನಃ ।
ಸಮಕಂಪತ ದುರ್ಧರ್ಷಃ ಕ್ಷಿತಿಕಂಪೇ ಯಥಾಽಚಲಃ ॥ ೩೫ ॥

ಶತ್ರುತಾಪನನೂ, ದುರ್ಧರ್ಷನೂ ಆದ ಕೃತವರ್ಮನು ಬಲಿಷ್ಠನಾದ ಶತ್ರುವಿನಿಂದ ಗಾಢವಾಗಿ ಹೊಡೆಯಲ್ಪಟ್ಟು ಭೂಕಂಪದ ಸಮಯದಲ್ಲಿ ಪರ್ವತವು ನಡುಗುವಂತೆ ನಡುಗಿದನು.

ತ್ರಿಷಷ್ಟ್ಯಾ ಚತುರೋಽಸ್ಯಾಶ್ವಾನ್ ಸಪ್ತಭಿಃ ಸಾರಥಿಂ ಶರೈಃ ।
ವಿವ್ಯಾಧ ನಿಶಿತೈಸ್ತೂರ್ಣಂ ಸಾತ್ಯಕಿಃ ಕೃತವರ್ಮಣಃ ॥ ೩೬ ॥

ಸಾತ್ಯಕಿಯು ಕೃತವರ್ಮನ ನಾಲ್ಕು ಅಶ್ವಗಳನ್ನು ಅರವತ್ಮೂರು ಬಾಣಗಳಿಂದಲೂ ಮತ್ತು ಅವನ ಸಾರಥಿಯನ್ನು ನಿಶಿತವಾದ ಏಳು ಬಾಣಗಳಿಂದಲೂ ಹೊಡೆದನು.

ಸುವರ್ಣಪುಂಖಂ ನಿಶಿತಂ ಸಮಾಧಾಯ ಸ ಸಾತ್ಯಕಿಃ ।
ವ್ಯಸೃಜತ್ತಂ ಮಹಾಜ್ವಾಲಂ ಸಂಕ್ರುದ್ಧಮಿವ ಪನ್ನಗಮ್ ॥ ೩೭ ॥

ಸುವರ್ಣಪುಂಖವುಳ್ಳ ತೀಕ್ಷ್ಣವಾದ ಒಂದು ಬಾಣವನ್ನು ಸಾತ್ಯಕಿಯು ಧನುಸ್ಸಿನಲ್ಲಿ ಹೂಡಿ, ಕೋಪಗೊಂಡ ಸರ್ಪದಂತಿದ್ದ ಮಹಾಜ್ವಾಲೆಯಿಂದ ಕೂಡಿದ ಅದನ್ನು ಕೃತವರ್ಮನ ಮೇಲೆ ಪ್ರಯೋಗಿಸಿದನು.

ಸೋಽಶಿತ್ ಕೃತವರ್ಮಾಣಂ ಯಮದಂಡೋಪಮಃ ಶರಃ ।
ಜಾಂಬೂನದವಿಚಿತ್ರಂ ಚ ವರ್ಮ ನಿರ್ಭಿದ್ಯ ಭಾನುಮತ್ ।
ಅಭ್ಯಗಾದ್ಧರಣೀಮುಗ್ರೋ ರುಧಿರೇಣ ಸಮುಕ್ಷಿತಃ ॥ ೩೮ ॥

ಯಮದಂಡಕ್ಕೆ ಸದೃಶವಾದ ಆ ಬಾಣವು ಕೃತವರ್ಮನನ್ನು ಸಮೀಪಿಸಿ ಸುವರ್ಣಮಯವಾದ ಅವನ ಕವಚವನ್ನೂ ಭೇದಿಸಿ, ಅವನ ಶರೀರವನ್ನೂ ಭೇದಿಸಿ ರಕ್ತದಿಂದ ತೊಯ್ದು ಭೂಮಿಯನ್ನು ಪ್ರವೇಶಿಸಿತು.

ಸಂಜಾತರುಧಿರಶ್ಚಾಪೌ ಸಾತ್ವತೇಷುಭಿರರ್ದಿತಃ ।
ಪ್ರಚಲನ್ ಧನುರುತ್ಸೃಜ್ಯ ನ್ಯಪತತ್ ಸ್ಯಂದನೋತ್ತಮೇ ॥ ೩೯ ॥

ಸಾತ್ಯಕಿಯ ಬಾಣಗಳಿಂದ ಪೀಡಿತನಾಗಿ ಬಹಳ ರಕ್ತವನ್ನು ಸುರಿಸುತ್ತಿದ್ದ ಅವನು ತನ್ನ ಧನುಸ್ಸನ್ನು ಬಿಟ್ಟು ತಟ್ಟಾಡುತ್ತಾ ತನ್ನ ಶ್ರೇಷ್ಠ ರಥದಲ್ಲಿ ಬಿದ್ದನು.

ಸ ಸಿಂಹದಂಷ್ಟ್ರೋ ಜಾನುಭ್ಯಾಮಾಪನ್ನೋಽಮಿತವಿಕ್ರಮಃ ।
ಶರಾರ್ದಿತಃ ಸಾತ್ಯಕಿನಾ ರಥೋಪಸ್ಥೇ ನರರ್ಷಭಃ ॥ ೪೦ ॥

ಅಮಿತವಿಕ್ರಮನಾದ, ನರರ್ಷಭನಾದ, ಸಿಂಹದಂಷ್ಟ್ರನಾದ ಅವನು ಸಾತ್ಯಕಿಯ ಬಾಣಗಳಿಂದ ಪೀಡಿತನಾಗಿ ರಥದ ಪೀಠದಲ್ಲಿ ತನ್ನ ಮಂಡಿಗಳ ಮೇಲೆ ಬಿದ್ದನು.

ಸಹಸ್ರಬಾಹೋಃ ಸದೃಶಮಕ್ಷೋಭ್ಯಮಿವ ಸಾಗರಮ್ ।
ನಿವಾರ್ಯ ಕೃತವರ್ಮಾಣಂ ಸಾತ್ಯಕಿಃ ಪ್ರಯಯೌ ತತಃ ॥ ೪೧ ॥

ಸಹಸ್ರಬಾಹುವಿಗೆ ಸದೃಶನಾದ, ಸಾಗರದಂತೆ ಅಕ್ಷೋಭ್ಯನಾದ ಕೃತವರ್ಮನನ್ನು ನಿವಾರಿಸಿ ಸಾತ್ಯಕಿಯು ಅಲ್ಲಿಂದ ಮುಂದೆ ಹೊರಟನು.

ಖಡ್ಗಶಕ್ತಿಧನುಃಕೀರ್ಣಾಂ ಗದಾಶರ್ಷ್ಟಿಥಸಂಕುಲಾಮ್ ।
ಪ್ರವರ್ತಿತೋಗ್ರರುಧಿರಾಂ ಶತಶಃ ಕ್ಷತ್ರಿಯರ್ಷಭೈಃ ॥ ೪೨ ॥

ಪ್ರೇಕ್ಷತಾಂ ಸರ್ವಸೈನ್ಯಾನಾಂ ಮಧ್ಯೇನ ಶಿನಿಪುಂಗವಃ ।
ಅಭ್ಯಗಾದ್ ವಾಹಿನೀಂ ಭಿತ್ತ್ವಾ ವೃತ್ರಹೇವಾಸುರೀಂ ಚಮೂಮ್ ॥

ಶಿನಿಪುಂಗವನಾದ ಸಾತ್ಯಕಿಯು ಎಲ್ಲಸೈನ್ಯಗಳೂ ನೋಡುತ್ತಿರುವಂತೆಯೇ ಖಡ್ಗ-ಶಕ್ತಿ-ಧನುಸ್ಸುಗಳಿಂದ ನಿಬಿಡವಾದ, ಗಜಾಶ್ವ-ರಥಗಳಿಂದ ತುಂಬಿದ, ಶ್ರೇಷ್ಠರಾದ ನೂರಾರು ಕ್ಷತ್ರಿಯರಿಂದ ಪ್ರವರ್ತಿತವಾದ ರಕ್ತದ ನದಿಯ ಮಧ್ಯದಲ್ಲಿ ಇಂದ್ರನು ಅಸುರಸೇನೆಯನ್ನು ಭೇದಿಸಿದಂತೆ ಕೌರವರ ಸೇನೆಯನ್ನು ಭೇದಿಸಿಕೊಂಡು ಮುಂದೆ ಸಾಗಿದನು.

ಸಮಾಶ್ವಾಸ್ಯ ಚ ಹಾರ್ದಿಕ್ಯೋ ಗೃಹ್ಯ ಚಾನ್ಯನ್ಮಹದ್ಧನುಃ ।
ತಸ್ಥೌ ತತ್ರೈವ ಬಲವಾನ್ ವಾರಯನ್ ಯುಧಿ ಪಾಂಡವಾನ್ ॥ ೪೪ ॥

ಕೃತವರ್ಮನಾದರೋ ಸ್ವಲ್ಪಸುಧಾರಿಸಿಕೊಂಡು ಇನ್ನೊಂದು ದೊಡ್ಡ ಧನುಸ್ಸನ್ನು ತೆಗೆದುಕೊಂಡು ಬಲಿಷ್ಠನಾದ ಅವನು ಯುದ್ಧದಲ್ಲಿ ಪಾಂಡವರನ್ನು ನಿವಾರಿಸುತ್ತಾ ಅಲ್ಲಿಯೇ ನಿಂತನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವ್ಯಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಷಡ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂರನೆಯ ಅಧ್ಯಾಯ

ಸಾತ್ಯಕಿಯ ಪರಾಕ್ರಮ. ಅವನಿಂದ ದ್ರೋಣರ ಪರಾಭವ.

ಸಂಜಯಃ

ಕಾಲ್ಯಮಾನೇಷು ಸೈನ್ಯೇಷು ಶೈನೇಯೇನ ತತಸ್ತತಃ ।
ಭಾರದ್ವಾಜಃ ಶರವ್ರಾತೈರ್ಮಹದ್ಭಿಃ ಸಮವಾಕರತ್ ॥ ೧ ॥

ಸಂಜಯ– ಸಾತ್ಯಕಿಯಿಂದ ಕೌರವರ ಸೇನೆಯು ಅಲ್ಲಲ್ಲಿ ಆರ್ತಾಡಲ್ಪಡುತ್ತಿರಲು ದ್ರೋಣರು ಅವನ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಸುರಿಸಿದರು.

ಸ ಸಂಪ್ರಹಾರಸ್ತುಮುಲೋ ದ್ರೋಣಸಾತ್ವತಯೋರಭೂತ್ ।
ಪಶ್ಯತಾಂ ಸರ್ವಸೈನ್ಯಾನಾಂ ಬಲಿವಾಸವಯೋರಿವ ॥ ೨ ॥

ಎಲ್ಲಸೈನ್ಯಗಳ ಎದುರಿಗೇ ದ್ರೋಣ ಮತ್ತು ಸಾತ್ಯಕಿಯರ ಯುದ್ಧವು ಬಲಿ ಮತ್ತು ಇಂದ್ರನ ಯುದ್ಧದಂತೆ ತೀವ್ರವಾಗಿದ್ದಿತು.

ತತೋ ದ್ರೋಣಃ ಶಿನೇಃ ಪೌತ್ರಂ ಚಿತ್ರೈಃ ಸರ್ವಾಯಸೈಃ ಶರೈಃ ।
ತ್ರಿಭಿರಾಶೀವಿಷಾಕಾರೈರ್ಲಲಾಟೇ ಸಮವಿಧ್ಯತ ॥ ೩ ॥

ಆಗ ದ್ರೋಣರು ವಿಚಿತ್ರವಾದ, ಪೂರ್ಣವಾಗಿ ಕಬ್ಬಿಣದಿಂದ ಮಾಡಿದ ಸರ್ಪಾಕಾರವನ್ನು ಹೊಂದಿದ ಮೂರು ಬಾಣಗಳಿಂದ ಸಾತ್ಯಕಿಯನ್ನು ಅವನ ಹಣೆಯಲ್ಲಿ ಹೊಡೆದರು.

ತೈರ್ಲಲಾಟಾರ್ಪಿತೈರ್ಬಾಣೈರ್ಯುಧಾನಸ್ತ ಜಿಹ್ಮಗೈಃ ।
ವ್ಯರೋಚತ ಮಹಾರಾಜ ತ್ರಿಶೃಂಗ ಇವ ಪರ್ವತಃ ॥ ೪ ॥

ಎಲೈ ಮಹಾರಾಜನೇ, ನೇರವಾಗಿ ಸಾಗಿ ಹಣೆಯಲ್ಲಿ ನೆಟ್ಟ ಆ ಮೂರು ಬಾಣಗಳಿಂದ ಸಾತ್ಯಕಿಯು ಮೂರು ಶಿಖರಗಳುಳ್ಳ ಪರ್ವತದಂತೆ ಶೋಭಿಸಿದನು.

ತತೋಽಸ್ಯ ಬಾಣಾನಪರಾನಿಂದ್ರಾಶನಿಸಮಸ್ವನಾನ್ ।
ಭಾರದ್ವಾಜೋಽಂತರಪ್ರೇಕ್ಷೀ ಪ್ರೇಷಯಾಮಾಸ ಸಂಯುಗೇ ॥ ೫ ॥

ಆನಂತರ ದ್ರೋಣರು ಅವನ ಒಂದು ಸಣ್ಣ ಅವಕಾಶವನ್ನು ಕಾಯುತ್ತಾ, ಇಂದ್ರನ ವಜ್ರಾಯುಧಕ್ಕೆ ಸಮವಾದ ಘೋಷವುಳ್ಳ ಬೇರೆ ಬಾಣಗಳನ್ನು ರಣರಂಗದಲ್ಲಿ ಅವನ ಮೇಲೆ ಪ್ರಯೋಗಿಸಿದರು.

ತಾನ್ ದ್ರೋಣಚಾಪನಿರ್ಮುಕ್ತಾನ್ ದಾಶಾರ್ಹಃ ಪತತಃ ಶರಾನ್ ।
ದ್ವಾಭ್ಯಾಂ ದ್ವಾಭ್ಯಾಂ ಸುಪುಂಖಾಭ್ಯಾಂ ಚಿಚ್ಛೇದ ಪರಮಾಸ್ತ್ರವಿತ್ ॥ ೬ ॥

ಪರಮಾಸ್ತ್ರವೇತ್ತನಾದ, ದಾಶಾರ್ಹನಾದ ಸಾತ್ಯಕಿಯು ದ್ರೋಣರ ಬಿಲ್ಲಿನಿಂದ ಹೊರಟು ತನ್ನೆಡೆಗೆ ಬರುತ್ತಿದ್ದ ಆ ಬಾಣಗಳಲ್ಲಿ ಒಂದೊಂದನ್ನೂ ಒಳ್ಳೆಯ ಪುಂಖವನ್ನು ಹೊಂದಿದ ಎರಡೆರಡು ಬಾಣಗಳಿಂದ ಕತ್ತರಿಸಿದನು.

ತಾಮಸ್ಯ ಲಘುತಾಂ ದ್ರೋಣಃ ಸಮವೇಕ್ಷ್ಯ ವಿಶಾಂಪತೇ ।
ಪ್ರಹಸ್ಯ ಸಹಸಾವಿದ್ಧ್ಯದ್ ಏಂಶತ್ಯಾ ಶಿನಿಪುಂಗವಮ್ ॥ ೭ ॥

ಎಲೈ ರಾಜನೇ, ಅವನ ಶೀಘ್ರತೆಯನ್ನು ನೋಡಿದ ದ್ರೋಣರು ನಕ್ಕು, ತಕ್ಷಣ ಇಪ್ಪತ್ತು ಬಾಣಗಳಿಂದ ಸಾತ್ಯಕಿಯನ್ನು ಹೊಡೆದರು.

ಪುನಃ ಪಂಚಶತೇಷೂಣಾಂ ಶತೇನ ಚ ಸಮಾರ್ಪಯತ್ ।
ಲಘುತಾಂ ಯುಯುಧಾನಸ್ಯ ಲಾಘವೇನ ವಿಶೇಷಯನ್ ॥ ೮ ॥

ಪುನಃ ಸಾತ್ಯಕಿಯ ಕ್ಷಿಪ್ರತೆಗಿಂತಲೂ ಹೆಚ್ಚಿನ ಕ್ಷಿಪ್ರತೆಯನ್ನು ತೋರಿಸುವವರಾಗಿ ಅವನ ಮೇಲೆ ಐದು ಸಾವಿರ ಬಾಣಗಳನ್ನು ಪ್ರಯೋಗಿಸಿದರು.

ಸಮುತ್ಪತಂತಿ ವಲ್ಮೀಕಾದ್ ಯಥಾ ಕ್ರುದ್ಧಾ ಮಹೋರಗಾಃ ।
ತಥಾ ದ್ರೋಣರಥಾದ್ ರಾಜನ್ನುತ್ಪತಂತಿ ತನುಚ್ಛಿದಃ ॥ ೯ ॥

ಎಲೈ ರಾಜನೇ, ಕ್ರುದ್ಧವಾದ ಮಹಾಸರ್ಪಗಳು ಹುತ್ತದಿಂದ ಮೇಲೆ ಮೇಲೆ ಬಂದಂತೆ ಶರೀರಭೇದಕವಾದ ಬಾಣಗಳು ದ್ರೋಣರ ರಥದಿಂದ ಹಾರಿ ಬರತೊಡಗಿದವು.

ತಥೈವ ಯುಯುಧಾನೇನ ಸೃಷ್ಟಾಃ ಶತಸಹಸ್ರಶಃ ।
ಅವಾಕಿರನ್ ದ್ರೋಣರಥಂ ಶರಾ ರುಧಿರಭೋಜನಾಃ ॥ ೧೦ ॥

ಹಾಗೆಯೇ ಸಾತ್ಯಕಿಯೂ ನೂರಾರು ಸಾವಿರಾರು ಸಂಖ್ಯೆಯಲ್ಲಿ ಪ್ರಯೋಗಿಸಿದ ರಕ್ತಭೋಜಿಗಳಾದ ಬಾಣಗಳು ದ್ರೋಣರ ರಥದ ಮೇಲೆ ಬಿದ್ದವು.

ಲಾಘವಾದ್ ದ್ವಿಜಮುಖ್ಯಸ್ಯ ಸಾತ್ವತಸ್ಯ ಚ ಮಾರಿಷ ।
ವಿಶೇಷಂ ನಾಧ್ಯಗಚ್ಛಾಮ ಸಮಾವಾಸ್ತಾಂ ನರರ್ಷಭೌ ॥ ೧೧ ॥

ಎಲೈ ಪೂಜ್ಯನೇ, ಲಾಘವದ ವಿಷಯದಲ್ಲಿ ಬ್ರಾಹ್ಮಣಶ್ರೇಷ್ಠರಾದ ದ್ರೋಣರಿಗೂ ಮತ್ತು ಸಾತ್ಯಕಿಗೂ ನಾವು ಯಾವ ವಿಶೇಷವನ್ನೂ ಕಾಣಲಿಲ್ಲ. ನರಶ್ರೇಷ್ಠರಿಬ್ಬರೂ ಸಮರಾಗಿಯೇ ಇದ್ದರು.

ಸಾತ್ಯಕಿಸ್ತು ತತೋ ದ್ರೋಣಂ ನವಭಿರ್ನತಪರ್ವಭಿಃ ।
ಆಜಘಾನ ಭೃಶಂ ಕ್ರುದ್ಧೋ ಧ್ವಜಂ ಚ ನಿಶಿತೈಃ ಶರೈಃ ।
ಸಾರಥಿಂ ಚ ಶತೇನೈವ ಭಾರದ್ವಾಜಸ್ಯ ಪಶ್ಯತಃ ॥ ೧೨ ॥

ಅನಂತರ ಸಾತ್ಯಕಿಯು ಬಹಳ ಕೋಪಗೊಂಡು ಬಾಗಿದ ತುದಿಯುಳ್ಳ ಒಂಬತ್ತು ಬಾಣಗಳಿಂದ ದ್ರೋಣರನ್ನು ಹೊಡೆದನು. ಅನಂತರ ತೀಕ್ಷ್ಣವಾದ ಬಾಣಗಳಿಂದ ಅವರ ಧ್ವಜವನ್ನೂ ಮತ್ತು ದ್ರೋಣರು ನೋಡುತ್ತಿರುವಂತೆಯೇ ನೂರು ಬಾಣಗಳಿಂದ ಅವರ ಸಾರಥಿಯನ್ನೂ ಹೊಡೆದನು.

ಲಾಘವಂ ಯುಯುಧಾನಸ್ಯ ದೃಷ್ಟ್ವಾ ದ್ರೋಣೋ ಮಹಾರಥಃ ।
ಸಪ್ತತ್ಯಾ ಸಾತ್ಯಕಿಂ ವಿದ್ಧ್ವಾ ತುರಗಾಂಶ್ಚ ತ್ರಿಭಿಸ್ತ್ರಿಭಿಃ ।
ಧ್ವಜಮೇಕೇನ ವಿವ್ಯಾಧ ಮಾಧವಸ್ಯ ರಥೇ ಸ್ಥಿತಮ್ ॥ ೧೩ ॥

ಮಹಾರಥರಾದ ದ್ರೋಣರು ಸಾತ್ಯಕಿಯ ಲಾಘವವನ್ನು (ಕ್ಷಿಪ್ರಕಾರಿತ್ವವನ್ನು) ನೋಡಿ ಎಪ್ಪತ್ತು ಬಾಣಗಳಿಂದ ಅವನನ್ನು ಹೊಡೆದು, ಮೂರು-ಮೂರು ಬಾಣಗಳಿಂದ ಅವನ ಅಶ್ವಗಳನ್ನು ಹೊಡೆದು, ಒಂದು ಬಾಣದಿಂದ ಅವನ ರಥದ ಧ್ವಜಕ್ಕೆ ಹೊಡೆದರು.

ಅಥಾಪರೇಣ ಭಲ್ಲೇನ ಹೇಮಪುಂಖೇನ ಪತ್ರಿಣಾ ।
ಧನುಶ್ಚಿಚ್ಛೇದ ಸಮರೇ ಮಾಧವಸ್ಯ ಮಹಾತ್ಮನಃ ॥ ೧೪ ॥

ಅನಂತರ ಹೇಮಪುಂಖವನ್ನೂ ಮತ್ತು ಪತ್ರಗಳನ್ನೂ ಹೊಂದಿದ್ದ ಇನ್ನೊಂದು ಭಲ್ಲದಿಂದ ರಣರಂಗದಲ್ಲಿ ಮಹಾತ್ಮನಾದ ಸಾತ್ಯಕಿಯ ಧನುಸ್ಸನ್ನು ಕತ್ತರಿಸಿದರು.

ಸಾತ್ಯಕಿಸ್ತು ತತಃ ಕ್ರುದ್ಧೋ ಧನುಸ್ಸ್ಯಕ್ತ್ವಾ ಮಹಾರಥಃ ।
ಗದಾಂ ಜಗ್ರಾಹ ಮಹತೀಂ ಭಾರದ್ವಾಜಾಯ ಚಾಕ್ಷಿಪತ್ ॥ ೧೫ ॥

ಮಹಾರಥನಾದ ಸಾತ್ಯಕಿಯಾದರೋ ಕೋಪಗೊಂಡು ಆ ಧನುಸ್ಸನ್ನು ಬಿಟ್ಟುದೊಡ್ಡ ಗದೆಯನ್ನು ತೆಗೆದುಕೊಂಡು ದ್ರೋಣರ ಮೇಲೆ ಎಸೆದನು.

ತಾಮಾಪತಂತೀಂ ಸಹಸಾ ಪಟ್ಟಬದ್ಧಮಯಸ್ಮಯೀಮ್ ।
ನ್ಯವಾರಯಚ್ಛರೈರ್ದ್ರೋಣೋ ಬಹುಭಿರ್ಬಹುರೂಪಿಭಿಃ ॥ ೧೬ ॥

ತಮ್ಮ ಕಡೆಗೆ ಬರುತ್ತಿದ್ದ ಕಬ್ಬಿಣದ ಪಟ್ಟಿಗಳನ್ನು ಹೊಂದಿದ್ದ ಆ ಕಬ್ಬಿಣದ ಗದೆಯನ್ನು ದ್ರೋಣರು ತಕ್ಷಣ ನಾನಾ ಆಕಾರವುಳ್ಳ ಅನೇಕ ಬಾಣಗಳಿಂದ ನಿವಾರಿಸಿದರು.

ಅಥಾನ್ಯದ್ ಧನುರಾದಾಯ ಸಾತ್ಯಕಿಃ ಸತ್ಯವಿಕ್ರಮಃ ।
ವಿವ್ಯಾಧ ಬಹುಭಿರ್ವೀರಂ ಭಾರದ್ವಾಜಂ ಶಿಲಾಶಿತೈಃ ॥ ೧೭ ॥

ಆಗ ಸತ್ಯಪರಾಕ್ರಮನಾದ ಸಾತ್ಯಕಿಯು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ವೀರರಾದ ದ್ರೋಣರನ್ನು, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಅನೇಕ ಬಾಣಗಳಿಂದ ಹೊಡೆದನು.

ಸ ವಿದ್ಧ್ವಾ ಸಮರೇ ದ್ರೋಣಂ ಸಿಂಹನಾದಮಮುಂಚತ ।
ತಂ ವೈ ನ ಮಮೃಷೇ ದ್ರೋಣಃ ಸರ್ವಶಸ್ತ್ರಭೃತಾಂ ವರಃ ॥ ೧೮ ॥

ಅವನು ದ್ರೋಣರನ್ನು ಹೊಡೆದು ರಣರಂಗದಲ್ಲಿ ಸಿಂಹನಾದವನ್ನು ಮಾಡಿದನು. ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ಅದನ್ನು ಸಹಿಸಲಿಲ್ಲ.

ತತಃ ಶಕ್ತಿಂ ಗೃಹೀತ್ವಾ ತು ರುಗ್ಣದಂಡಾಮಯಸ್ಮಯೀಮ್ ।
ತರಸಾ ಪ್ರೇಷಯಾಮಾಸ ಮಾಧವಸ್ಯ ರಥಂ ಪ್ರತಿ ॥ ೧೯ ॥

ಆಗ ಅವರು ಚಿನ್ನದ ಹಿಡಿಯನ್ನು ಹೊಂದಿದ ಕಬ್ಬಿಣದ ಒಂದು ಶಕ್ತಿಯನ್ನು ತೆಗೆದುಕೊಂಡು ಅದನ್ನು ವೇಗದಿಂದ ಸಾತ್ಯಕಿಯ ರಥದ ಮೇಲೆ ಎಸೆದರು.

ಅನಾಸಾದ್ಯ ತು ಶೈನೇಯಂ ಸಾ ಶಕ್ತಿಃ ಕಾಲಸನ್ನಿಭಾ ।
ಭಿತ್ತ್ವಾ ರಥಂ ಜಗಾಮೋಗ್ರಾ ಧರಣೀಂ ದಾರುಣಸ್ವನಾ ॥ ೨೦ ॥

ಯಮನಂತಿದ್ದ ಆ ಘೋರವಾದ ಶಕ್ತಿಯು ಸಾತ್ಯಕಿಯನ್ನು ತಲುಪದೇ ಅವನ ರಥವನ್ನು ಭೇದಿಸಿ ದಾರುಣವಾದ ನಾದವನ್ನು ಮಾಡುತ್ತಾ ಭೂಮಿಯ ಒಳಗೆ ಇಳಿಯಿತು.

ತತೋ ದ್ರೋಣಂ ಶನೈಃ ಪೌತ್ರೋ ರಾಜನ್ ವಿವ್ಯಾಧ ಪತ್ರಿಣಾ ।
ದಕ್ಷಿಣಂ ಭುಜಮಾಸಾದ್ಯ ಪೀಡಯನ್ ಭರತರ್ಷಭ ॥ ೨೧ ॥

ಎಲೈ ರಾಜನೇ, ಭರತಶ್ರೇಷ್ಠನೇ, ಆಗ ಶಿನಿಯ ಪೌತ್ರನಾದ ಸಾತ್ಯಕಿಯು ಪತ್ರವನ್ನು ಹೊಂದಿದ ಬಾಣದಿಂದ ದ್ರೋಣರ ದಕ್ಷಿಣ ಭುಜವನ್ನು ಪೀಡಿಸಿದನು.

ದ್ರೋಣೋಽಪಿ ಸಮರೇ ರಾಜನ್ ಮಾಧವಸ್ಯ ಮಹದ್ಧನುಃ ।
ಅರ್ಧಚಂದ್ರೇಣ ಚಿಚ್ಛೇದ ರಥಶಕ್ತ್ಯಾ ಚ ಸಾರಥಿಮ್ ॥ ೨೨ ॥

ಎಲೈ ರಾಜನೇ, ದ್ರೋಣರೂ ಸಹ ರಣರಂಗದಲ್ಲಿ ಸಾತ್ಯಕಿಯ ದೊಡ್ಡ ಧನುಸ್ಸನ್ನು ಅರ್ಧಚಂದ್ರದಿಂದ ಕತ್ತರಿಸಿ ರಥಶಕ್ತಿಯಿಂದ ಅವನ ಸಾರಥಿಯನ್ನು ಹೊಡೆದರು.

ಮುಮೋಹ ಸಾರಥಿಸ್ತಸ್ಯ ರಥಶಕ್ತ್ಯಾ ಸಮಾಹತಃ ।
ಸ ರಥೋಪಸ್ಥಮಾಸಾದ್ಯ ಮುಹೂರ್ತಂ ಸನ್ನ್ಯಷೀದತ ॥ ೨೩ ॥

ರಥಶಕ್ತಿಯಿಂದ ಹೊಡೆಯಲ್ಪಟ್ಟ ಅವನ ಸಾರಥಿಯು ಮೂರ್ಛೆಗೆ ಒಳಗಾಗಿ ರಥದ ಪೀಠವನ್ನು ತಲುಪಿ ಒಂದು ಮುಹೂರ್ತದ ಕಾಲ ಕುಸಿದು ಕುಳಿತನು.

ಚಕಾರ ಸಾತ್ಯಕೇ ರಾಜಂಸ್ತತ್ರ ಕರ್ಮಾತಿಮಾನುಷಮ್ ।
ಅಯೋಧಯಚ್ಚ ಯದ್ ದ್ರೋಣಂ ರಶ್ಮೀನ್ ಜಗ್ರಾಹ ಚ ಸ್ವಯಮ್ ॥

ಎಲೈ ರಾಜನೇ, ಆಗ ಸಾತ್ಯಕಿಯು ಸ್ವತಃ ಅಶ್ವಗಳ ಕಡಿವಾಣವನ್ನೂ ಹಿಡಿದು ದ್ರೋಣರ ಜೊತೆಯಲ್ಲಿ ಯುದ್ಧವನ್ನೂ ಮಾಡಿ ಅತಿಮಾನುಷ ಕರ್ಮವನ್ನು ಮಾಡಿದನು.

ತತಃ ಶರಶತೇನೈವ ಯುಯುಧಾನೋ ಮಹಾರಥಃ ।
ಅವಿದ್ಧ್ಯದ್ ಬ್ರಾಹ್ಮಣಂ ಸಂಖೇ ಹೃಷ್ಟರೂಪೋ ವಿಶಾಂಪತೇ ॥ ೨೫ ॥

ಎಲೈ ರಾಜನೇ, ಆಗ ಮಹಾರಥನಾದ ಯುಯುಧಾನನು ಬಹಳ ಸಂತೋಷಗೊಂಡು ರಣರಂಗದಲ್ಲಿ ನೂರು ಬಾಣಗಳಿಂದ ಬ್ರಾಹ್ಮಣರಾದ ದ್ರೋಣರಿಗೆ ಹೊಡೆದನು.

ತಸ್ಯ ದ್ರೋಣಃ ಶರಾನ್ ಪಂಚ ಪ್ರೇಷಯಾಮಾಸ ಭಾರತ ।
ತೇ ತಸ್ಯ ಕವಚಂ ಭಿತ್ತ್ವಾ ಪಪುಃ ಶೋಣಿತಮಾಹವೇ ॥ ೨೬ ॥

ಎಲೈ ಭಾರತನೇ, ದ್ರೋಣರು ಅವನ ಮೇಲೆ ಐದು ಬಾಣಗಳನ್ನು ಪ್ರಯೋಗಿಸಿದರು. ಅವು ಅವನ ಕವಚವನ್ನು ಭೇದಿಸಿ ರಕ್ತವನ್ನು ಕುಡಿದವು.

ನಿರ್ವಿದ್ಧಸ್ತು ಶರೈಘೋರೈರಕುಧ್ಯತ್ ಸಾತ್ಯಕಿರ್ಭೃಶಮ್ ।
ಸಾಯಕಾನ್ ವ್ಯಸೃಜಚ್ಚಾಪಿ ವೀರೋ ರುಗ್ಮರಥಂ ಪ್ರತಿ ॥ ೨೭ ॥

ಘೋರವಾದ ಬಾಣಗಳಿಂದ ತೀವ್ರವಾಗಿ ಹೊಡೆಯಲ್ಪಟ್ಟ ಸಾತ್ಯಕಿಯು ಬಹಳ ಕೋಪಗೊಂಡು ದ್ರೋಣರ ರಥದ ಮೇಲೆ ವೀರನಾದ ಅವನು ಅನೇಕ ಬಾಣಗಳನ್ನು ಪ್ರಯೋಗಿಸಿದನು.

ತತೋ ದ್ರೋಣಸ್ಯ ಯಂತಾರಂ ನಿಪಾತ್ಯೈಕೇಷುಣಾ ಭುವಿ ।
ಅಶ್ವಾನ್ ವ್ಯದ್ರಾವಯದ್ ಬಾಣೈರ್ಹತಸೂತಾನ್ ಮಹಾತ್ಮನಃ ॥ ೨೮ ॥

ಅನಂತರ ಒಂದು ಬಾಣದಿಂದ ದ್ರೋಣರ ಸಾರಥಿಯನ್ನು ಭೂಮಿಯ ಮೇಲೆ ಕೆಡವಿ ಅನೇಕ ಬಾಣಗಳಿಂದ ಸಾರಥಿಯಿಲ್ಲದ ಆ ಮಹಾತ್ಮರ ಅಶ್ವಗಳನ್ನು ಓಡಿಸಿದನು. .

ಸ ರಥಃ ಪ್ರದ್ರುತಃ ಸಂಖೇ ಮಂಡಲಾನಿ ಸಹಸ್ರಶಃ ।
ಚಕಾರ ರಾಜತೋ ರಾಜನ್ ಭ್ರಾಜಮಾನ ಇವಾಂಶುಮಾನ್ ॥ ೨೯ ॥

ಎಲೈ ರಾಜನೇ, ಆ ಬೆಳ್ಳಿಯ ರಥವು ಸೂರ್ಯನಂತೆ ಪ್ರಕಾಶಿಸುತ್ತಾ ರಣರಂಗದಲ್ಲಿ ಸಹಸ್ರಾರು ಮಂಡಲಗಳಲ್ಲಿ ಧಾವಿಸಿತು.

ಅಭಿದ್ರವತ ಗೃಹ್ಣೀತ ಹಯಾನ್ ದ್ರೋಣಸ್ಯ ಧಾವತಃ ।
ಇತಿ ಸ್ಮ ಚುಕ್ರುಶುಃ ಸರ್ವೇ ರಾಜಪುತ್ರಾಃ ಸರಾಜಕಾಃ ॥ ೩೦ ॥

ಎಲ್ಲ ರಾಜಪುತ್ರರು ಮತ್ತು ರಾಜರು ಓಡುತ್ತಿರುವ ದ್ರೋಣರ ಅಶ್ವಗಳನ್ನು ಹಿಂಬಾಲಿಸಿ, ಹಿಡಿಯಿರಿ ಎಂದು ಕಿರುಚಿದರು.

ತೇ ಸಾತ್ಯಕಿಮಪಾಸ್ಯಾಶು ರಾಜನ್ ಯುಧಿ ಮಹಾರಥಾಃ ।
ಯತೋ ದ್ರೋಣ ಸ್ತತಃ ಸರ್ವೇ ಸಹಸಾ ಸಮುಪಾದ್ರವನ್ ॥ ೩೧ ॥

ಎಲೈ ರಾಜನೇ, ಆ ಮಹಾರಥರೆಲ್ಲರೂ ರಣರಂಗದಲ್ಲಿ ಸಾತ್ಯಕಿಯನ್ನು ಶೀಘ್ರವಾಗಿ ಬಿಟ್ಟು ದ್ರೋಣರಿದ್ದ ಕಡೆಗೆ ಶೀಘ್ರವಾಗಿ ಬಂದರು.

ತಾನ್ ದೃಷ್ಟ್ವಾ ಪ್ರದ್ರುತಾನ್ ಸರ್ವಾನ್ ಸಾತ್ವತೇನ ಶರಾರ್ದಿತಾನ್ ।
ಪ್ರಭಗ್ನಂ ಪುನರೇವಾಸೀತ್ತವ ಸೈನ್ಯಂ ಸಮಾಕುಲಮ್ ॥ ೩೨ ॥

ಸಾತ್ಯಕಿಯ ಬಾಣಗಳಿಂದ ಪೀಡಿತರಾಗಿ ಓಡಿಹೋದ ಅವರನ್ನು ನೋಡಿ ನಿನ್ನ ಸೈನ್ಯವು ಪುನಃ ವ್ಯಥೆಗೊಂಡು ಭಗ್ನವಾಯಿತು.

ವ್ಯೂಹಸ್ಯೈವ ಪುನರ್ದ್ವಾರಂ ಗತ್ವಾ ದ್ರೋಣೋ ವ್ಯವಸ್ಥಿತಃ ।
ವಾತಾಯಮಾನೈಸ್ತೈರಶ್ವೈರ್ಹತೋ ವೃಷ್ಣಿಶರಾರ್ದಿತೈಃ ॥ ೩೩ ॥

ದ್ರೋಣರು ಸಾತ್ಯಕಿಯ ಬಾಣಗಳಿಂದ ಪೀಡಿತರಾಗಿ ಎದುಸಿರು ಬಿಡುತ್ತಿದ್ದ ಅಶ್ವಗಳಿಂದ ಎಳೆಯಲ್ಪಟ್ಟು ಪುನಃ ವ್ಯೂಹದ ದ್ವಾರದಲ್ಲಿಯೇ ಹೋಗಿ ನಿಂತರು.

ಪಾಂಡುಪಾಂಚಾಲಸಂಭಗ್ನಂ ವ್ಯೂಹಮಾಲೋಕ್ಯ ವೀರ್ಯವಾನ್ ।
ಶೈನೇಯೇ ನಾಕರೋದ್ ಯತ್ನಂ ವ್ಯೂಹಸ್ಯೈವಾಭಿರಕ್ಷಣೇ ॥ ೩೪ ॥

ಪರಾಕ್ರಮಶಾಲಿಗಳಾದ ಅವರು ಪಾಂಡವರಿಂದಲೂ ಮತ್ತು ಪಾಂಚಾಲರಿಂದಲೂ ಭಗ್ನವಾದ ತಮ್ಮ ವ್ಯೂಹವನ್ನು ನೋಡಿ ಸಾತ್ಯಕಿಯ ಜೊತೆಯಲ್ಲಿ ಯುದ್ಧವನ್ನು ಮಾಡಲು ಪ್ರಯತ್ನ ಪಡಲಿಲ್ಲ. ವ್ಯೂಹವನ್ನು ರಕ್ಷಿಸುವುದರಲ್ಲಿಯೇ ಆಸಕ್ತರಾಗಿ ನಿಂತರು.

ನಿವಾರ್ಯ ಪಾಂಡುಪಾಂಚಾಲಾನ್ ದ್ರೋಣಾಗ್ನಿಃ ಪ್ರದಹನ್ನಿವ ।
ತಸ್ಥೌ ಕ್ರೋಧಾಗ್ನಿಸಂದೀಪ್ತಃ ಕಾಲಸೂರ್ಯ ಇವೋದಿತಃ ॥ ೩೫ ॥

ದ್ರೋಣರೆಂಬ ಅಗ್ನಿಯು ಪಾಂಡುಪಾಂಚಾಲರನ್ನು ನಿವಾರಿಸಿ, ಉದಯಿಸಿದ ಕಾಲಸೂರ್ಯನಂತೆ ದಹಿಸುತ್ತಾ ಕ್ರೋಧಾಗ್ನಿಯಿಂದ ಜ್ವಲಿಸುತ್ತಾ ನಿಂತಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರ್ಯಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಾಲ್ಕನೆಯ ಅಧ್ಯಾಯ

ಸಾತ್ಯಕಿಯಿಂದ ಸುದರ್ಶನರಾಜನ ವಧೆ.

ಸಂಜಯಃ

ದ್ರೋಣಂ ಸ ಜಿತ್ವಾ ಪುರುಷಪ್ರವೀರಸ್ತಥೈವ
ಹಾರ್ದಿಕ್ಯಮುಖಾಂಸ್ತ್ವದೀಯಾನ್ ।
ಪ್ರಹಸ್ಯ ಸೂತಂ ವಚನಂ ಬಭಾಷೇ
ಶಿನಿಪ್ರವೀರಃ ಕುರುಪುಂಗವಾಗ್ರ್ಯ ॥ ೧ ॥

ನಿಮಿತ್ತಮಾತ್ರಂ ವಯಮತ್ರ ಸೂತ
ದಗ್ಧಾರಯಃ ಕೇಶವಫಲ್ಗುನಾಭ್ಯಾಮ್ ।
ಹತಾನ್ನಿಹನ್ಮೇಹ ನರರ್ಷಭೇಣ
ವಯಂ ಸುರೇಶಾತ್ಮಸಮುದ್ಭವೇನ ॥ ೨ ॥

ಸಂಜಯ– ಎಲೈ ಕುರುಪುಂಗವಶ್ರೇಷ್ಠನೇ, ಪುರುಷಶ್ರೇಷ್ಠನಾದ ಆ ಸಾತ್ಯಕಿಯು ದ್ರೋಣರನ್ನೂ ಮತ್ತು ಕೃತವರ್ಮನೇ ಮೊದಲಾದ ನಿನ್ನವರನ್ನೂ ಜಯಿಸಿ, ತನ್ನ ಸೂತನನ್ನು ಕುರಿತು ನಕ್ಕು, ಎಲೈ ಸೂತನೇ, ಕೇಶವಾರ್ಜುನರಿಂದಲೇ ಎಲ್ಲ ಶತ್ರುಗಳೂ ಮೊದಲೇ ದಗ್ಧರಾಗಿದ್ದಾರೆ. ಇಲ್ಲಿ ನಾವು ನಿಮಿತ್ತ ಮಾತ್ರ. ಇಂದ್ರಪುತ್ರನಾದ ನರಶ್ರೇಷ್ಠನಾದ ಅರ್ಜುನನಿಂದ ಕೊಲ್ಲಲ್ಪಟ್ಟ ಅವರನ್ನು ನಾವು ಇಲ್ಲಿ ಕೊಲ್ಲುತ್ತಿದ್ದೇವೆ ಎಂದು ಹೇಳಿದನು.

ತಮೇವಮುಕ್ತ್ವಾ ಶಿನಿಪುಂಗವಸ್ತದಾ
ಮಹಾಮೃಧೇ ಸೋಽಗ್ರ್ಯಧನುರ್ಧರೋಽರಿಹಾ ।
ಕಿರನ್ ಸಮಂತಾತ್ಸಹಸಾ ಶರಾನ್ ಬಲೀ
ಸಮಾಪತಚ್ಚ್ಯೇನ ಇವಾಮಿಷಂ ಯಥಾ ॥ ೩ ॥

ಶಿನಿಪುಂಗವನೂ, ಶ್ರೇಷ್ಠಧನುರ್ಧಾರಿಯೂ, ಶತ್ರುಸಂಹಾರಕನೂ ಆದ ಸಾತ್ಯಕಿಯು ಆ ದೊಡ್ಡ ಯುದ್ಧದಲ್ಲಿ ಸೂತನನ್ನು ಕುರಿತು ಹೀಗೆ ಹೇಳಿ, ತಕ್ಷಣ ಎಲ್ಲ ಕಡೆಗಳಲ್ಲಿಯೂ ಬಾಣಗಳನ್ನು ಪ್ರಯೋಗಿಸುತ್ತಾ ಗಿಡುಗವು ಮಾಂಸದ ತುಂಡಿನ ಮೇಲೆ ಎರಗಿದಂತೆ ಬಲಿಷ್ಠನಾದ ಅವನು ಶತ್ರುಗಳ ಮೇಲೆ ಎರಗಿದನು.

ತಂ ಯಾಂತಮಶ್ವೈಃ ಶಶಿಶಂಖವರ್ಣೈ-
ರ್ವಿಗಾಹ್ಯ ಸೈನ್ಯಂ ಪುರುಷಪ್ರವೀರಮ್ ।
ನಾಶಕ್ನುವನ್ ವಾರಯಿತುಂ ಸಮಂತಾ-
ದಾದಿತ್ಯರಶ್ಮಿಪ್ರತಿಮಂ ನರಾಗ್ಯಮ್ ॥ ೪ ॥

ಶತ್ರುಸೈನ್ಯವನ್ನು ಭೇದಿಸಿ, ಸೂರ್ಯರಶ್ಮಿಯಂತೆ ತನ್ನ ಚಂದ್ರಶಂಖವರ್ಣದ ಅಶ್ವಗಳಿಂದ ಮುಂದೆ ಸಾಗುವ ಆ ನರಶ್ರೇಷ್ಠನನ್ನು ತಡೆಯಲು ನಿನ್ನವರು ಯಾರೂ ಸಮರ್ಥರಾಗಲಿಲ್ಲ.

ಅಸಹ್ಯವಿಕ್ರಾಂತಮದೀನಸತ್ತ್ವಂ
ಸರ್ವೇ ಗತಾ ಭಾರತ ದುರ್ವಿಷಹ್ಯಮ್ ।
ಸಹಸ್ರನೇತ್ರಪ್ರತಿಮಪ್ರಭಾವಂ
ದಿವೀವ ಸೂರ್ಯಂ ಜಲದವ್ಯಪಾಯೇ ॥ ೫ ॥

ಎಲೈ ಭಾರತನೇ, ಬೇಸಿಗೆಯ ಸೂರ್ಯನಂತೆ ಪ್ರಕಾಶಿಸುತ್ತಾ, ಸಹಸ್ರಜಿತನಾದ ಇಂದ್ರನಿಗೆ ಹೋಲುವ ಸಾಮರ್ಥ್ಯವನ್ನು ಹೊಂದಿದ, ಸಹಿಸಲು ಅಸಾಧ್ಯವಾದ ಪರಾಕ್ರಮವನ್ನು ಹೊಂದಿದವನೂ, ಮಹಾಧೈರ್ಯಶಾಲಿಯೂ, ಯುದ್ಧದಲ್ಲಿ ತಡೆಯಲು ಅಸಾಧ್ಯನಾದವನೂ ಆದ ಅವನನ್ನು ನಿನ್ನ ಸೈನ್ಯ ಸಮೂಹಗಳು (ನೋಡಲೂ ಸಮರ್ಥವಾಗಲಿಲ್ಲ).

ಅಮರ್ಷಪೂರ್ಣಸ್ತ್ವಚಿತ್ರಯೋಧೀ
ಶರಾಸನೀ ಕಾಂಚನವರ್ಮಧಾರೀ ।
ಸುದರ್ಶನಃ ಸಾತ್ಯಕಿಮಾಪತಂತಂ
ನ್ಯವಾರಯದ್ ರಾಜವರಃ ಪ್ರಸಹ್ಯ ॥ ೬ ॥

ರೋಷದಿಂದ ಪೂರ್ಣನಾದವನೂ, ವಿಚಿತ್ರವಾಗಿ ಯುದ್ಧವನ್ನು ಮಾಡುವವನೂ, ಧನುರ್ಧಾರಿಯೂ, ಸುವರ್ಣಮಯವಾದ ಕವಚವನ್ನು ಧರಿಸಿದವನೂ, ರಾಜಶ್ರೇಷ್ಠನೂ ಆದ ಸುದರ್ಶನನು ಮೇಲೆರಗಿ ಬರುತ್ತಿದ್ದ ಸಾತ್ಯಕಿಯನ್ನು ತನ್ನ ಸಾಮರ್ಥ್ಯದಿಂದ ತಡೆದನು.

ತಯೋರಭೂದ್ ಭಾರತ ಸಂಪ್ರಹಾರಃ
ಸುದಾರುಣಸ್ತಂ ಸಮಭಿಪ್ರಶಂಸನ್ ।
ಯೋಧಾಸ್ತ್ವದೀಯಾಶ್ಚ ಹಿ ಸೋಮಕಾಶ್ಚ
ವೃತ್ರೇಂದ್ರಯೋರ್ಯುದ್ಧಮಿವಾಮರೌಘಾಃ ॥ ೭ ॥

ಎಲೈ ಭಾರತನೇ, ಅವರಿಬ್ಬರಿಗೂ ದಾರುಣವಾದ ಯುದ್ಧವು ನಡೆಯಿತು. ಆ ಯುದ್ಧವನ್ನು ನಿನ್ನ ಯೋಧರೂ ಮತ್ತು ಸೋಮಕರೂ ಸಹ ದೇವತೆಗಳ ಸಮೂಹವು ಇಂದ್ರ-ವೃತ್ರರ ಯುದ್ಧವನ್ನು ಪ್ರಶಂಸಿಸಿದಂತೆ ಪ್ರಶಂಸಿಸಿದರು.

ಶರೈಃ ಸುತೀಕ್ಷ್ಣೈಃ ಶತಶೋಽಭ್ಯವಿಧ್ಯತ್
ಸುದರ್ಶನಃ ಸಾತ್ವತಮುಖ್ಯಮಾಜೌ ।
ಅನಾಗತಾನೇವ ತು ತಾನ್ ಪೃಷತ್ಕಾಂ-
ಶ್ಚಿಚ್ಛೇದ ಬಾಣೈಃ ಶಿನಿಪುಂಗವೋಽಪಿ ॥ ೮ ॥

ಸುದರ್ಶನನು ಸಾತ್ವತ ವೀರನಾದ ಸಾತ್ಯಕಿಯನ್ನು ರಣರಂಗದಲ್ಲಿ ನೂರಾರು ಬಾಣಗಳಿಂದ ಪೀಡಿಸಿದನು. ಶಿನಿಪುಂಗವನಾದ ಸಾತ್ಯಕಿಯಾದರೋ ಆ ಬಾಣಗಳು ತನ್ನನ್ನು ತಲುಪುವುದಕ್ಕಿಂತ ಮುಂಚೆಯೇ ತನ್ನ ಬಾಣಗಳಿಂದ ಅವುಗಳನ್ನು ಕತ್ತರಿಸಿದನು.

ತಥೈವ ಶಕ್ರಪ್ರತಿಮೋಽಪಿ ಸಾತ್ಯಕಿಃ
ಸುದರ್ಶನೇ ಯಾನ್ ಕ್ಷಿಪತಿ ಸ್ಮ ಸಾಯಕಾನ್ ।
ದ್ವಿಧಾ ತ್ರಿಧಾ ತಾನಕರೋತ್ ಸುದರ್ಶನಃ
ಶರೋತ್ತಮೈಃ ಸ್ಕಂದನವರ್ಯಮಾಸ್ಥಿತಃ ॥ ೯ ॥

ಹಾಗೆಯೇ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಸಾತ್ಯಕಿಯು ಸುದರ್ಶನನ ಮೇಲೆ ಎಷ್ಟು ಬಾಣಗಳನ್ನು ಪ್ರಯೋಗಿಸಿದನೋ ಅವುಗಳನ್ನು ಸುದರ್ಶನನು ತನ್ನ ಶ್ರೇಷ್ಠ ರಥದಲ್ಲಿಯೇ ಇದ್ದವನಾಗಿ ತನ್ನ ಶ್ರೇಷ್ಠವಾದ ಬಾಣಗಳಿಂದ ಎರಡು ಭಾಗವಾಗಿ, ಮೂರು ಭಾಗವಾಗಿ ಕತ್ತರಿಸಿದನು.

ಸಂಪ್ರೇಕ್ಷ್ಯ ಬಾಣಾನ್ ನಿಹತಾಂಸ್ತದಾನೀಂ
ಸುದರ್ಶನಃ ಸಾತ್ಯಕಿಬಾಣವೇಗೈಃ ।

ಕ್ರೋಧಾದ್ ದಿಧಕ್ಷನ್ನಿವ ತಿಗ್ಮತೇಜಾಃ
ಶರಾನಮುಂಚತ್ತಪನೀಯಚಿತ್ರಾನ್ ॥ ೧೦ ॥

ಆಗ ತನ್ನ ಬಾಣಗಳು ಸಾತ್ಯಕಿಯ ಬಾಣಗಳ ವೇಗದಿಂದ ಹತವಾಗುತ್ತಿರುವುದನ್ನು ನೋಡಿದ, ಕ್ರೂರವಾದ ತೇಜಸ್ಸುಳ್ಳ ಸುದರ್ಶನನು ಕ್ರೋಧದಿಂದ ಸುವರ್ಣಾಲಂಕೃತವಾದ, ವಿಚಿತ್ರವಾದ ಬಾಣಗಳನ್ನು ಸಾತ್ಯಕಿಯ ಮೇಲೆ ಪ್ರಯೋಗಿಸಿದನು.

ಪುನಃ ಸ ಬಾಣೈಸ್ತ್ರಿಭಿರಗ್ನಿಕಲ್ಪೈ-
ರಾಕರ್ಣ ಪೂರ್ಣೈರ್ನಿಶಿತೈಃ ಸುಪುಂಖೈಃ ।
ವಿವ್ಯಾಧ ದೇಹಾವರಣಂ ವಿಭಿದ್ಯ
ತೇ ಸಾತ್ಯಕೇರಾವಿವಿಶುಃ ಶರೀರಮ್ ॥ ೧೧ ॥

ಪುನಃ ಅವನು ಅಗ್ನಿಸದೃಶವಾದ ಒಳ್ಳೆಯ ಪುಂಖಗಳನ್ನು ಹೊಂದಿದ ಮೂರು ತೀಕ್ಷ್ಣವಾದ ಬಾಣಗಳನ್ನು ಹೆದೆಯನ್ನು ಕಿವಿಯವರೆಗೂ ಎಳೆದು ಪ್ರಯೋಗಿಸಿದನು. ಅವು ಸಾತ್ಯಕಿಯ ಕವಚವನ್ನು ಭೇದಿಸಿ ಅವನ ಶರೀರದಲ್ಲಿ ಇಳಿದವು.

ತಥೈವ ತಸ್ಯಾವನಿಪಾಲಪುತ್ರಃ
ಸಂಧಾಯ ಬಾಣೈರಪರೈರ್ಜ್ವಲದ್ಭಿಃ ।
ಆಜಘ್ನಿವಾಂಸ್ತಾನ್ ರಜತಪ್ರಕಾಶಾಂ-
ಶ್ಚತುರ್ಭಿರಶ್ವಾಂಶ್ಚತುರಃ ಪ್ರಸಹ್ಯ ॥ ೧೨ ॥

ಹಾಗೆಯೇ ರಾಜಪುತ್ರನಾದ ಸುದರ್ಶನನು ಬೆಳ್ಳಿಯ ಪ್ರಕಾಶವನ್ನು ಹೊಂದಿದ್ದ ಜ್ವಲಿಸುವ ಬೇರೆ ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಅವನ ನಾಲ್ಕು ಕುದುರೆಗಳನ್ನು ಕೊಂದನು.

ತಥಾ ತು ತೇನಾಭಿಹತಸ್ತರಸ್ವೀ
ನಪ್ತಾ ಶಿನೇರಿಂದ್ರಸಮಾನವೀರ್ಯಃ ।
ಸುದರ್ಶನಸ್ಯೇಷುಗಣೈಃ ಸುತೀಕ್ಷ್ಣೈಃ
ಹಯಾನ್ ನಿಹತ್ಯಾಶು ನನಾದ ನಾದಮ್ ॥ ೧೩ ॥

ಆ ರೀತಿಯಲ್ಲಿ ಅವನಿಂದ ಪೀಡಿತನಾದ ಶಿನಿಯ ಮೊಮ್ಮಗನೂ, ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನೂ ಆದ ಸಾತ್ಯಕಿಯು ಬಹಳ ತೀಕ್ಷ್ಣವಾದ ಬಾಣಗಳ ಸಮೂಹದಿಂದ ಸುದರ್ಶನನ ರಥದ ಅಶ್ವಗಳನ್ನು ಕೊಂದು ಸಿಂಹನಾದವನ್ನು ಮಾಡಿದನು.

ಅಥಾಸ್ಯ ಸೂತಸ್ಯ ಶಿರೋ ನಿಕೃತ್ಯ
ಭಲ್ಲೇನ ವಜ್ರಾಶನಿಸನ್ನಿಭೇನ ।
ಸುದರ್ಶನಸ್ಯಾಪಿ ಶಿನಿಪ್ರವೀರಃ
ಕ್ಷುರೇಣ ಚಿಚ್ಛೇದ ಶಿರಃ ಪ್ರಸಹ್ಯ ॥ ೧೪ ॥

ಆನಂತರ ವಜ್ರಸಿಡಿಲುಗಳನ್ನು ಹೋಲುವ ಭಲ್ಲದಿಂದ ಅವನ ಸೂತನ ಶಿರಸ್ಸನ್ನು ಕತ್ತರಿಸಿ, ಶಿನಿಪ್ರವೀರನಾದ ಸಾತ್ಯಕಿಯು ಕ್ಷುರದಿಂದ ತನ್ನ ಸಾಮರ್ಥ್ಯದಿಂದ ಸುದರ್ಶನನ ಶಿರಸ್ಸನ್ನೂ ಕತ್ತರಿಸಿದನು.

ಸಕುಂಡಲಂ ಪೂರ್ಣಶಶಿಪ್ರಕಾಶಂ
ಭ್ರಾಜಿಷ್ಣು ವಕ್ತ್ರಂ ನಿಚಕರ್ತ ದೇಹಾತ್ ।
ಯಥಾ ಪುರಾ ವಜ್ರಧರಃ ಪ್ರಸಹ್ಯ
ಬಲಸ್ಯ ಸಂಖೇಽತಿಬಲಸ್ಯ ರಾಜನ್ ॥ ೧೫ ॥

ಎಲೈ ರಾಜನೇ, ಹಿಂದೆ ವಜ್ರಧರನಾದ ಇಂದ್ರನು ತನ್ನ ಸಾಮರ್ಥ್ಯದಿಂದ ಯುದ್ಧದಲ್ಲಿ ಅತಿಬಲನಾದ ಬಲನ ಶಿರಸ್ಸನ್ನು ಕತ್ತರಿಸಿದಂತೆ ಅವನು ಕುಂಡಲಸಹಿತವಾದ, ಪೂರ್ಣಚಂದ್ರಕಾಂತಿಯನ್ನು ಹೊಂದಿದ್ದ, ಪ್ರಕಾಶಮಾನವಾದ ಸುದರ್ಶನನ ಶಿರಸ್ಸನ್ನು ದೇಹದಿಂದ ಕತ್ತರಿಸಿದನು.

ನಿಹತ್ಯ ತಂ ಪಾರ್ಥಿವ ಪುತ್ರಪೌತ್ರಂ
ರಣೇ ಯದೂನಾಮೃಷಭಸ್ತರಸ್ವೀ ।
ಮುದಾ ಸಮೇತಃ ಪರಯಾ ಮಹಾತ್ಮಾ
ರರಾಜ ರಾಜನ್ ಸುರರಾಜಕಲ್ಪಃ ॥ ೧೬ ॥

ಎಲೈ ರಾಜನೇ, ಯದುಶ್ರೇಷ್ಠನೂ, ವೇಗಶಾಲಿಯೂ, ಮಹಾತ್ಮನೂ, ಇಂದ್ರನಿಗೆ ಸದೃಶನಾದವನೂ ಆದ ಸಾತ್ಯಕಿಯು ರಾಜನ ಪುತ್ರನ ಪೌತ್ರನಾದ ಸುದರ್ಶನನನ್ನು ಯುದ್ಧದಲ್ಲಿ ಕೊಂದು ಬಹಳ ಸಂತೋಷದಿಂದ ಕೂಡಿದವನಾಗಿ ಕೋಭಿಸಿದನು.

ತತೋ ಯಯಾವರ್ಜುನಮೇವ ಯೇನ
ನಿವಾರ್ಯ ಸೈನ್ಯಂ ತವ ಮಾರ್ಗಣೌಘೈಃ ।
ಸದಶ್ವಯುಕ್ತೇನ ರಥೇನ ನಿರ್ಯಾ-
ಲ್ಲೋಕಾನ್ ವಿಸಿಸ್ಮಾಪಯಿಷುರ್ನವೀರಃ ॥ ೧೭ ॥

ಆನಂತರ ಒಳ್ಳೆಯ ಅಶ್ವಗಳನ್ನು ಹೂಡಿದ ರಥದಲ್ಲಿ ಸಾಗಿ ನರಶ್ರೇಷ್ಠನಾದ ಅವನು ಎಲ್ಲ ಲೋಕಗಳಿಗೂ ವಿಸ್ಮಯವನ್ನುಂಟು ಮಾಡುತ್ತಾ, ತನ್ನ ಬಾಣಗಳ ಸಮೂಹದಿಂದ ನಿನ್ನ ಸೈನ್ಯವನ್ನು ನಿವಾರಿಸುತ್ತಾ ಅರ್ಜುನನಿದ್ದ ಕಡೆಗೆ ಹೊರಟನು.

ತತ್ತಸ್ಯ ವಿಸ್ಮಾಪನೀಯಮಗ್ರ್ಯ-
ಮಪೂಜಯನ್ಯೋಧವರಾಃ ಸಮೇತಾಃ ।
ಯದ್ವರ್ತಮಾನಾನಿಷುಗೋಚರೇऽರೀನ್
ದದಾಹ ಬಾಣೈರ್ಹುತಭುಗ್ಯಥೈವ ॥ ೧೮ ॥

ತನ್ನ ಬಾಣದ ವ್ಯಾಪ್ತಿಗೆ ಗೋಚರವಾದ ಎಲ್ಲ ಶತ್ರುಗಳನ್ನೂ ಅಗ್ನಿಯಂತೆ ತನ್ನ ಬಾಣಗಳಿಂದ ದಹಿಸಿದ ಅವನ ವಿಸ್ಮಯಕರವಾದ ಶ್ರೇಷ್ಠವಾದ ಪ್ರತಾಪವನ್ನು ಶ್ರೇಷ್ಠರಾದ ಯೋಧರೆಲ್ಲರೂ ಒಟ್ಟಿಗೆ ಪೂಜಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುರಧಿಕಶತತಮೋऽಧ್ಯಾಯಃ ॥

॥ ಜಯದ್ರಥವಧಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐದನೆಯ ಅಧ್ಯಾಯ

ಸಾತ್ಯಕಿಯ ಪರಾಕ್ರಮ.

ಸಂಜಯಃ

ತತಃ ಸ ಸಾತ್ಯಕಿರ್ಧೀಮಾನ್ ಮಹಾತ್ಮಾ ವೃಷ್ಣಿಪುಂಗವಃ ।
ಸುದರ್ಶನಂ ನಿಹತ್ಯಾಜೌ ಯಂತಾರಮಿದಮಬ್ರವೀತ್ ॥ ೧ ॥

ರಥಾಶ್ವನಾಗಕಲಿಲಂ ಶರಶಕ್ತ್ಯೃರ್ಮಿಮಾಲಿನಮ್ ।
ಖಡ್ಗಮತ್ಸ್ಯಂ ಗದಾಗ್ರಾಹಂ ಶೂರಾಯುಧಮಹಾಸ್ವನಮ್ ॥ ೨ ॥

ಪ್ರಾಣಾಪಹಾರಿಣಂ ರೌದ್ರಂ ವಾದಿತ್ರೋತ್ಕೃಷ್ಟನಾದಿತಮ್ ।
ಯೋಧಾನಾಮಸುಖಸ್ಪರ್ಶಂ ದುರ್ಧರ್ಷಮಜಯೈಷಿಣಾಮ್ ॥ ೩ ॥

ತೀರ್ಣಾಃ ಸ್ಮ ದುಸ್ತರಂ ತಾತ ದ್ರೋಣಾನೀಕಮಹಾರ್ಣವಮ್ ।
ಜಲಸಂಧಬಲೇನಾಜೌ ಪುರುಷಾದೈರಿವಾವೃತಮ್ ॥ ೪ ॥

ಸಂಜಯ– ಅನಂತರ ವೃಷ್ಣಿಪುಂಗವನೂ, ಮೇಧಾವಿಯೂ, ಮಹಾತ್ಮನೂ ಆದ ಸಾತ್ಯಕಿಯು ಸುದರ್ಶನನನ್ನು ಕೊಂದು, ರಣರಂಗದಲ್ಲಿ ತನ್ನ ಸಾರಥಿಯನ್ನು ಕುರಿತು ಈ ಮಾತುಗಳನ್ನು ಆಡಿದನು. ರಥಾಶ್ವ-ಗಜಗಳಿಂದ ನಿಬಿಡವಾಗಿದ್ದ, ಬಾಣಗಳು ಶಕ್ತಿಗಳು ಎಂಬ ತರಂಗಮಾಲೆಯನ್ನು ಹೊಂದಿದ, ಖಡ್ಗವೆಂಬ ಮತ್ಸ್ಯಗಳನ್ನೂ, ಗದೆಗಳೆಂಬ ಮೊಸಳೆಗಳನ್ನೂ ಹೊಂದಿದ್ದ, ಶೂರರ ಆಯುಧಗಳ ಮಹಾನಾದದಿಂದ ಕೂಡಿದ್ದ, ಭಯಂಕರವೂ, ಪ್ರಾಣಾಪಹಾರಿಯೂ, ವಾದ್ಯಗಳ ಉತ್ಕೃಷ್ಟನಿನಾದದಿಂದ ಕೂಡಿದುದೂ, ಯೋಧರಿಗೆ ದುಃಖವನ್ನುಂಟು ಮಾಡುವಂತಹದೂ, ಜಯದ ಅಭಿಲಾಷೆಯಿಲ್ಲದವರಿಗೆ ಸೋಲಿಸಲು ಅಸಾಧ್ಯವೂ ಆದ, ರಾಕ್ಷಸರಂತಿದ್ದ ಜಲಸಂಧನ ಸೇನೆಯಿಂದ ಆವೃತವಾದಂತಹ ದಾಟಲು ಕಷ್ಟಸಾಧ್ಯವಾದ, ದ್ರೋಣರ ಸೈನ್ಯವೆಂಬ ಮಹಾಸಾಗರವನ್ನು ಎಲೈ ಪ್ರೀತಿಪಾತ್ರನೇ, ನಾವು ದಾಟಿದ್ದೇವೆ.

ಅತೋಽನ್ಯಂ ಪೃತನಾಶೇಷಂ ಮನ್ಯೇ ಕುನದಿಕಾಮಿವ ।
ತರ್ತವ್ಯಾಮಲ್ಪಸಲಿಲಾಂ ಚೋದಯಾಶ್ವಾನಸಂಭ್ರಮಮ್ ॥ ೫ ॥

ಉಳಿದ ಸೈನ್ಯದ ಭಾಗವು ಅಲ್ಪಜಲವಿರುವ ಸಣ್ಣ ನದಿ ಇದ್ದಂತೆ ಎಂದು ಭಾವಿಸುತ್ತೇನೆ. ಅದನ್ನು ದಾಟಬೇಕಾಗಿದೆ. ಗಾಬರಿಯಿಲ್ಲದೆ ಅಶ್ವಗಳನ್ನು ಪ್ರಚೋದಿಸು.

ಹಸ್ತಪ್ರಾಪ್ತಮಹಂ ಮನ್ಯೇ ಸಾಂಪ್ರತಂ ಸವ್ಯಸಾಚಿನಮ್ ।
ನಿರ್ಜಿತ್ಯ ದುರ್ಧರಂ ದ್ರೋಣಂ ಸಪದಾನುಗಮಾಹವೇ ॥ ೬ ॥

ಹಾರ್ದಿಕ್ಯಂ ಯೋಧವರ್ಯಂ ಚ ಪ್ರಾಪ್ತಂ ಮನ್ಯೇ ಧನಂಜಯಮ್ ।
ನ ಹಿ ಮೇ ಜಾಯತೇ ತ್ರಾಸೋ ದೃಷ್ಟ್ವಾ ಸೈನ್ಯಾನ್ಯನೇಕಶಃ ॥ ೭ ॥

ಎದುರಿಸಲು ಅಸಾಧ್ಯರಾದ, ತಮ್ಮ ಅನುಯಾಯಿಗಳಿಂದ ಕೂಡಿದ ದ್ರೋಣರನ್ನೂ ಹಾಗೆಯೇ ಶ್ರೇಷ್ಠ ಯೋಧನಾದ ಕೃತವರ್ಮನನ್ನೂ ಜಯಿಸಿ ಈ ನಾನು ಸವ್ಯಸಾಚಿಯಾದ ಧನಂಜಯನು ನನ್ನ ಕೈಗೆ ಸಿಲುಕಿದ್ದಾನೆ ಎಂದು ಭಾವಿಸುತ್ತೇನೆ. ಈ ಅನೇಕ ಸೈನ್ಯವನ್ನು ನೋಡಿದರೂ ನನಗೆ ಭಯವುಂಟಾಗುವುದಿಲ್ಲ.

ವಹ್ನೇರಿವ ಪ್ರದೀಪ್ತಸ್ಯ ಗ್ರೀಷ್ಮೇ ಶುಷ್ಕಂ ತೃಕಾಲಯಮ್ ।
ದ್ರವತೇ ತದ್ ಯಥಾ ಸೈನ್ಯಂ ತೇನ ಭಗ್ನಂ ಮಹಾತ್ಮನಾ ॥ ೮ ॥

ರಥೈರ್ವಿಪರಿಧಾವದ್ಭಿಃ ಗಜೈರಶ್ವೈಶ್ಚ ಸಾರಥೇ ।
ಕೌಶೇಯಾರುಣಸಂಕಾಶಮೇತದುದ್ಧೂಯತೇ ರಜಃ ॥ ೯ ॥

ಬೇಸಿಗೆ ಕಾಲದಲ್ಲಿ ಒಣಗಿದ ಹುಲ್ಲಿನ ಮನೆಯನ್ನು ಪ್ರವೇಶಿಸಿದ ಪ್ರದೀಪ್ತವಾದ ಅಗ್ನಿಯು ಉರಿಯುವಂತೆ, ಮಹಾತ್ಮನಾದ ಅರ್ಜುನನು ಕೌರವಸೈನ್ಯವನ್ನು ಭಗ್ನಗೊಳಿಸುತ್ತಿದ್ದಾನೆ. ಎಲೈ ಸಾರಥಿಯೇ, ಧಾವಿಸುವ ರಥಗಳಿಂದಲೂ, ಗಜಗಳಿಂದಲೂ ಮತ್ತು ಅಶ್ವಗಳಿಂದಲೂ ರೇಶ್ಮೆಯಂತೆ ಕೆಂಪುಬಣ್ಣವನ್ನು ಹೊಂದಿರುವ ಈ ಧೂಳು ಮೇಲಕ್ಕೇರುತ್ತಿದೆ.

ಪಶ್ಯ ಪಾಂಡವಮುಖ್ಯೇನ ಯಾತಾಂ ಭೂಮಿಂ ಕಿರೀಟಿನಾ ।
ಪತ್ತ್ಯಶ್ವರಥನಾಗೌಘೈಃ ಪತಿತೈರ್ವಿಷಮೀಕೃತಾಮ್ ॥ ೧೦ ॥

ಭೂಮಿಯ ಮೇಲೆ ಬಿದ್ದಿರುವ ಪದಾತಿಗಳಿಂದ, ಅಶ್ವಗಳಿಂದ, ರಥಗಳಿಂದ ಮತ್ತು ಗಜಗಳ ಸಮೂಹದಿಂದ ವಿಷಮವಾಗಿರುವ, ಪಾಂಡವಶ್ರೇಷ್ಠನಾದ ಅರ್ಜುನನು ಹಾದು ಹೋಗಿರುವ, ಈ ಭೂಮಿಯನ್ನು ನೋಡು.

ಅಧ್ಯಾಶಸ್ತಮಹಂ ಮನ್ಯೇ ಶ್ವೇತಾಶ್ವಂ ಕೃಷ್ಣಸಾರಥಿಮ್ ।
ಸ ಏಷ ಶ್ರೂಯತೇ ಶಬ್ದೋ ಗಾಂಡೀವ ಸ್ಯಾಮಿತೌಜಸಃ ॥ ೧೧ ॥

ಕೃಷ್ಣಸಾರಥಿಯಾದ ಅರ್ಜುನನು ಸಮೀಪದಲ್ಲಿಯೇ ಇರುವನೆಂದು ತಿಳಿಯುತ್ತೇನೆ. ಬಹಳ ಸಾಮರ್ಥ್ಯವುಳ್ಳ ಗಾಂಡೀವ ಧನುಸ್ಸಿನ ಈ ಶಬ್ದವು ಕೇಳಿ ಬರುತ್ತಿದೆ.

ಯಾದೃಶಾನಿ ನಿಮಿತ್ತಾನಿ ಮಮ ಪ್ರಾದುರ್ಭವಂತಿ ವೈ ।
ಅಸ್ತಂಗತ ಆದಿತ್ಯೋ ಹಂತಾ ಸೈಂಧವಮರ್ಜುನಃ ॥ ೧೨ ॥

ನನಗೆ ತೋರುತ್ತಿರುವ ಶಕುನಗಳಿಗೆ ಅನುಸಾರವಾಗಿ ಈ ದಿನ ಸೂರ್ಯನು ಅಸ್ತಂಗತನಾಗುವುದರೊಳಗೆ ಅರ್ಜುನನು ಸೈಂಧವನನ್ನು ಕೊಲ್ಲುವನು.

ಶಸ್ಯೈರ್ವಿಶ್ರಂಭಯನ್ಹಾಸ್ತಾನ್ ಯಾಹಿ ಯತ್ತೋಽರಿವಾಹಿನೀಮ್ ।
ಯಚ್ಛೈತೇ ಸತನುತ್ರಾಣಾಃ ಸುಯೋಧನಪುರೋಗಮಾಃ ॥ ೧೩ ॥

ದಂಶಿತಾಃ ಕ್ರೂರಕರ್ಮಾಣಃ ಕಾಂಬೋಜಾ ಯುದ್ಧದುರ್ಮದಾಃ ।
ಶರಬಾಣಾಸನಧರಾ ಯವನಾಶ್ಚ ಪ್ರಹಾರಿಣಃ ॥ ೧೪ ॥

ಶಕಾಃ ಕಿರಾತಾ ದರದಾ ಬರ್ಬರಾಸ್ತಾಮ್ರಲಿಪ್ತಕಾಃ ।
ಅನ್ಯೇ ಚ ಬಹವೋ ಮ್ಲೇಚ್ಛಾ ವಿವಿಧಾಯುಧಪಾಣಯಃ ।
ಮಾಮೇವಾಭಿಮುಖಾಃ ಸರ್ವೇ ತಿಷ್ಠಂತಿ ಸಮರಾರ್ಥಿನಃ ॥ ೧೫ ॥

ಅಶ್ವಗಳಿಗೆ ಸ್ವಲ್ಪ ಸಮಾಧಾನವನ್ನುಂಟು ಮಾಡುತ್ತಾ, ಎಲ್ಲ ಕವಚವನ್ನು ಧರಿಸಿದ ದುರ್ಯೋಧನ ಮೊದಲಾದವರೂ, ಕವಚವನ್ನು ಧರಿಸಿದ ಕ್ರೂರಕರ್ಮಿಗಳಾದ ಯುದ್ಧದುರ್ಮದರಾದ ಕಾಂಬೋಜರೂ, ಧನುರ್ಬಾಣಗಳನ್ನು ಧರಿಸಿದ ಪ್ರಹಾರಶೀಲರಾದ ಯವನರೂ, ಶಕರೂ, ಕಿರಾತರೂ, ದರದರೂ, ಬರ್ಬರರೂ, ತಾಮ್ರಲಿಪ್ತಕರೂ ಮತ್ತು ನನ್ನ ಜೊತೆಯಲ್ಲಿ ಯುದ್ಧವನ್ನು ಬಯಸಿ ನನ್ನನ್ನೇ ಎದುರು ನೋಡುತ್ತಿರುವ ಕೈಯಲ್ಲಿ ಅನೇಕ ವಿಧವಾದ ಆಯುಧಗಳನ್ನು ಹಿಡಿದಿರುವ ಅನೇಕ ಮ್ಲೇಚ್ಛರು ಇದ್ದಾರೆಯೋ ಅಂತಹ ಶತ್ರುಸೈನ್ಯದ ಭಾಗಕ್ಕೆ ಎಚ್ಚರಿಕೆಯಿಂದ ನಿಧಾನವಾಗಿ ಹೋಗು.

ಏತಾನ್ ಸರಥನಾಗಾಶ್ವಾನ್ ನಿಹತ್ಯಾಜೌ ಸಪತ್ತಿನಃ ।
ಇದಂ ದುರ್ಗಂ ಮಹಾಘೋರಂ ತೀರ್ಣಮೇವೋಪಧಾರಯ ॥ ೧೬ ॥

ಪದಾತಿಗಳಿಂದ ಕೂಡಿದ, ರಥ-ಗಜಾಶ್ವಗಳಿಂದ ಕೂಡಿದ ಇವರನ್ನು ರಣರಂಗದಲ್ಲಿ ಕೊಂದು ಈ ಮಹಾಘೋರವಾದ, ದುರ್ಗಮವಾದ ಸೈನ್ಯವನ್ನು ದಾಟಿದ್ದೇವೆ ಎಂದೇ ತಿಳಿದುಕೊ.

ಸೂತಃ

ನ ಸಂಭ್ರಮೋ ಮೇ ವಾರ್ಷ್ಣೇಯ ವಿದ್ಧತೇ ಸತ್ಯವಿಕ್ರಮ ।
ಯದ್ಯಪಿ ಸ್ಯಾತ್ ಸುಸಂಕ್ರುದ್ಧೋ ಜಾಮದಗ್ನ್ಯೋಽಗ್ರತಃ ಸ್ಥಿತಃ ॥ ೧೭ ॥

ಸೂತ– ಎಲೈ ವಾರ್ಷ್ಣೇಯನೇ, ಸತ್ಯವಿಕ್ರಮನೇ, ಕೋಪಗೊಂಡ ಸಾಕ್ಷಾತ್ ಪರಶುರಾಮನೇ ಎದುರಿಗೆ ನಿಂತಿದ್ದರೂ ನನಗೆ ಯಾವ ಗಾಬರಿಯೂ ಇಲ್ಲ.

ದ್ರೋಣೋ ವಾ ರಥಿನಾಂ ಶ್ರೇಷ್ಠಃ ಕೃಪೋ ಮದ್ರೇಶ್ವರೋಽಪಿ ವಾ ।
ತಥಾಪಿ ಸಂಭ್ರಮೋ ನ ಸ್ಯಾತ್ ತ್ವಾಮಾಶ್ರಿತ್ಯ ಮಹಾಭುಜ ॥ ೧೮ ॥

ಎಲೈ ಮಹಾಭುಜನೇ, ನಿನ್ನನ್ನು ಆಶ್ರಯಿಸಿದ ನನಗೆ ರಥಿಶ್ರೇಷ್ಠರಾದ ದ್ರೋಣರೇ ಆಗಲಿ, ಕೃಪರೇ ಆಗಲಿ, ಮದ್ರೇಶ್ವರನಾದ ಶಲ್ಯನೇ ಆಗಲಿ, ಎದುರಿಗೆ ಬಂದರೂ ಯಾವ ಗಾಬರಿಯೂ ಆಗಲಾರದು.

ತ್ವಯಾ ಸುಬಹವೋ ಯುದ್ಧೇ ನಿರ್ಜಿತಾಃ ಶತ್ರುಸೂದನ ।
ನ ಚ ಮೇ ಸಂಭ್ರಮಃ ಕಶ್ಚಿದ್ ಭೂತಪೂರ್ವಃ ಕದಾಚನ ।
ಕಿಮು ಚೈತತ್ ಸಮಾಸಾದ್ಯ ವೀರ ಸಂಯುಗಗೋಷ್ಪದಮ್ ॥ ೧೯ ॥

ಎಲೈ ಶತ್ರುಸೂದನನೇ, ನೀನು ಯುದ್ಧದಲ್ಲಿ ಅನೇಕರನ್ನು ಗೆದ್ದಿದ್ದೀಯೆ. ನಾನು ಹಿಂದೆ ಎಂದೂ ರಣರಂಗದಲ್ಲಿ ಗಾಬರಿಯನ್ನು ಹೊಂದಿಲ್ಲ. ಹೀಗಿರುವಾಗ ಎಲೈ ವೀರನೇ, ಗೋಪಾದಂತಿರುವ ಈ ಸೈನ್ಯವನ್ನು ಸಂಧಿಸಿದಾಗ ಏಕೆ ಗಾಬರಿಗೊಳ್ಳಬೇಕು?

ಆಯುಷ್ಮನ್ ಕತರೇಣ ತ್ವಾ ಪ್ರಾಪಯಾಮಿ ಧನಂಜಯಮ್ ।
ಕೇಷಾಂ ಕ್ರುದ್ಧೋಽಸಿ ವಾರ್ಷ್ಣೇಯ ಕೇಷಾಂ ಮೃತ್ಯುರುಪಸ್ಥಿತಃ ।
ಕೇಷಾಂ ಸಂಯಮನೀಮದ್ಯ ಗಂತುಮುತ್ಸಹತೇ ಮನಃ ॥ ೨೦ ॥

ಆಯುಷ್ಮಂತನೇ, ಯಾವ ಮಾರ್ಗದಿಂದ ನಾನು ನಿನ್ನನ್ನು ಅರ್ಜುನನ ಬಳಿಗೆ ಕರೆದುಕೊಂಡು ಹೋಗಲಿ? ಎಲೈ ವಾರ್ಷ್ಣೇಯನೇ, ಯಾರ ಮೇಲೆ ನಿನಗೆ ಕೋಪವಿದೆ? ಯಾರಿಗೆ ಈ ದಿನ ಮೃತ್ಯುವು ಸನ್ನಿಹಿತವಾಗಿದೆ? ಯಾರ ಮನಸ್ಸು ಈ ದಿನ ಯಮಪಟ್ಟಣಕ್ಕೆ ಹೋಗಲು ಉತ್ಸುಕವಾಗಿದೆ?

ಕೇ ತ್ವಾಂ ಯುಧಿ ಪರಾಕ್ರಾಂತಂ ಕಾಲಾಂತಕಯಮೋಪಮಮ್ ।
ದೃಷ್ಟ್ವಾ ವಿಕ್ರಮಸಂಪನ್ನಂ ವಿದ್ರವಿಷ್ಯಂತಿ ಸಂಯುಗೇ ।
ಕೇಷಾಂ ವೈವಸ್ವತೋ ರಾಜಾ ಸ್ಮರತೇಽದ್ಯ ಮಹಾಭುಜ ॥ ೨೧ ॥

ಕಾಲಾಂತಕ ಯಮನಂತೆ ಯುದ್ಧದಲ್ಲಿ ಪರಾಕ್ರಮಶಾಲಿಯಾದ ನಿನ್ನನ್ನು ನೋಡಿ ರಣರಂಗದಲ್ಲಿ ಈ ದಿನ ಯಾರು ಓಡಿಹೋಗುವರು? ಎಲೈ ಮಹಾಭುಜನೇ, ಈ ದಿನ ಯಮರಾಜನು ಯಾರನ್ನು ಸ್ಮರಿಸುತ್ತಾನೆ?

ಇತ್ಯೇವಂ ಕರ್ಮ ಕುರ್ವಾಣಮಂತಕಪ್ರತಿಮಂ ರಣೇ ।
ಶಿನೇಃ ಪೌತ್ರಮಥೋಽವಾಚ ಯಂತಾ ಸಂಹೃಷ್ಟಮಾನಸಃ ॥ ॥ ೨೨ ॥

ಹೀಗೆ ಯುದ್ಧದಲ್ಲಿ ಯಮನಂತೆ ಅಸದೃಶಕರ್ಮವನ್ನು ಮಾಡುತ್ತಿದ್ದ ಶಿನಿಯ ಪೌತ್ರನಾದ ಸಾತ್ಯಕಿಯನ್ನು ಕುರಿತು ಸಂತೋಷವನ್ನು ಹೊಂದಿದ ಸಾರಥಿಯು ಮಾತನಾಡಿದನು.

ಸಾತ್ಯಕಿಃ

ಮುಂಡಾನೇತಾನ್ ಹನಿಷ್ಯಾಮಿ ದಾನವಾನಿವ ವಾಸವಃ ।
ಪ್ರತಿಜ್ಞಾಂ ಪಾರಯಿಷ್ಯಾಮಿ ಕಾಂಬೋಜಾನೇವ ಮಾ ವಹ ।
ಅದ್ಯೈಷಾಂ ಕದನಂ ಕೃತ್ವಾ ಕ್ಷಿಪ್ರಂ ಯಾಸ್ಯಾಮಿ ಪಾಂಡವಮ್ ॥ ೨೩ ॥

ಸಾತ್ಯಕಿ– ಇಂದ್ರನು ದಾನವರನ್ನು ಸಂಹರಿಸಿದಂತೆ ನಾನು ಕಾಂಬೋಜದೇಶದ ಈ ಮುಂಡರನ್ನು ಕೊಂದು ನನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸುವೆನು. ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು. ಈ ದಿನ ಅವರ ಜೊತೆಯಲ್ಲಿ ಯುದ್ಧವನ್ನು ಮಾಡಿ ಶೀಘ್ರವಾಗಿ ಅರ್ಜುನನ ಬಳಿಗೆ ಹೋಗುವೆನು.

ಅದ್ಯ ದ್ರಕ್ಷ್ಯಂತಿ ಮೇ ವೀರ್ಯಂ ಕೌರವಾಃ ಸಸುಯೋಧನಾಃ ।
ಮುಂಡಾನೀಕೇ ಹತೇ ಸೂತ ಸರ್ವಸೈನ್ಯೇಷು ಚಾಸಕೃತ್ ॥ ೨೪ ॥

ಎಲೈ ಸೂತನೇ, ಎಲ್ಲ ಸೈನ್ಯಗಳಲ್ಲಿ ಮುಂಡರ ಸೈನ್ಯವು ಈ ದಿನ ನನ್ನಿಂದ ಅನೇಕ ಬಾರಿ ಹತವಾಗುತ್ತಿರುವಾಗ ದುರ್ಯೋಧನನ ಜೊತೆಯಲ್ಲಿ ಎಲ್ಲ ಕೌರವರೂ ನನ್ನ ಪರಾಕ್ರಮವನ್ನು ನೋಡುವರು.

ಅದ್ಯ ಕೌರವಸೈನ್ಯಸ್ಯ ದೀರ್ಯಮಾಣಸ್ಯ ಸಂಯುಗೇ ।
ಶ್ರುತ್ವಾ ವಿರಾವಂ ಬಹುಧಾ ಸಂತಪ್ಸ್ಯತಿ ಸುಯೋಧನಃ ॥ ೨೫ ॥

ಈ ದಿನ ರಣರಂಗದಲ್ಲಿ ನನ್ನಿಂದ ಭಗ್ನಗೊಳಿಸಲ್ಪಡುವ ಕೌರವಸೈನ್ಯದ ಅನೇಕ ವಿಧವಾದ ಚೀರಾಟವನ್ನು ಕೇಳಿ ಸುಯೋಧನನು ತಾಪಪಡುವನು.

ಅದ್ಯ ಪಾಂಡವಮುಖ್ಯಸ್ಯ ಶ್ವೇತಾಶ್ವಸ್ಯ ಮಹಾತ್ಮನಃ ।
ಆಚಾರ್ಯಕಕೃತಂ ಮಾರ್ಗಂ ದರ್ಶಯಿಷ್ಯಾಮಿ ಸಂಯುಗೇ ॥ ೨೬ ॥

ಮಹಾತ್ಮನಾದ, ಪಾಂಡವಶ್ರೇಷ್ಠನಾದ ಅರ್ಜುನನು ಗುರುವಾಗಿ ನನಗೆ ತೋರಿಸಿದ ಮಾರ್ಗವನ್ನು ಈ ದಿನ ರಣರಂಗದಲ್ಲಿ ತೋರಿಸುವೆನು.

ಅದ್ಯ ಮದ್ಬಾಣನಿಹತಾನ್ ಯೋಧಮುಖ್ಯಾನ್ ಸಹಸ್ರಶಃ ।
ದೃಷ್ಟ್ವಾ ದುರ್ಯೋಧನೋ ರಾಜಾ ಪಶ್ಚಾತ್ತಾಪಂ ಗಮಿಷ್ಯತಿ ॥ ೨೭ ॥

ಈ ದಿನ ನನ್ನ ಬಾಣಗಳಿಂದ ಹೊಡೆಯಲ್ಪಟ್ಟು ಸಹಸ್ರ ಸಂಖ್ಯೆಯಲ್ಲಿ ಮೃತರಾದ ಶ್ರೇಷ್ಠ ಯೋಧರನ್ನು ನೋಡಿ, ರಾಜನಾದ ದುರ್ಯೋಧನನು ಪಶ್ಚಾತ್ತಾಪವನ್ನು ಪಡುವನು.

ಅದ್ಯ ಮೇ ಕ್ಷಿಪ್ರಹಸ್ತಸ್ಯ ಕ್ಷಿಪತಃ ಸಾಯಕೋತ್ತಮಾನ್ ।
ಅಲಾತಚಕ್ರಪ್ರತಿಮಂ ಧನುರ್ದ್ರಕ್ಷ್ಯಂತಿ ಕೌರವಾಃ ॥ ೨೮ ॥

ಕ್ಷಿಪ್ರಹಸ್ತವುಳ್ಳ ನಾನು ಶ್ರೇಷ್ಠವಾದ ಬಾಣಗಳನ್ನು ಪ್ರಯೋಗಿಸುವಾಗ ಈ ದಿನ ಅಲಾತಚಕ್ರದಂತೆ ಮಂಡಲಾಕಾರವಾಗಿರುವ ನನ್ನ ಧನುಸ್ಸನ್ನು ಕೌರವರು ನೋಡುವರು.

ಮತ್ಸಾಯಕಚಿತಾಂಗಾನಾಂ ರುಧಿರಂ ಸ್ರವತಾಂ ಬಹು ।
ಸೈನಿಕಾನಾಂ ವಧಂ ದೃಷ್ಟ್ವಾ ಸಂತಪ್ಸ್ಯತಿ ಸುಯೋಧನಃ ॥ ೨೯ ॥

ನನ್ನ ಬಾಣಗಳು ಶರೀರದಲ್ಲಿ ನಾಟಿ ಬಹಳ ರಕ್ತವು ಸೋರುತ್ತಾ ಉಂಟಾಗುವ ತನ್ನ ಸೈನಿಕರ ವಧೆಯನ್ನು ನೋಡಿ ಸುಯೋಧನನು ಸಂತಾಪಪಡುವನು.

ಅದ್ಯ ಮೇ ಕ್ರುದ್ಧರೂಪಸ್ಯ ನಿಘ್ನತಶ್ಚ ವರಾನ್ವರಾನ್ ।
ದ್ವಿರರ್ಜುನಮಿಮಂ ಲೋಕಂ ಮಂಸ್ಯತೇ ಸ ಸುಯೋಧನಃ ॥ ೩೦ ॥

ಈ ದಿನ ನಾನು ಕ್ರುದ್ಧನಾಗಿ ಕೌರವಸೇನೆಯಲ್ಲಿ ಶ್ರೇಷ್ಠರನ್ನು ಆರಿಸಿ, ಆರಿಸಿ ಕೊಲ್ಲುವಾಗ ಸುಯೋಧನನು ಈ ಲೋಕದಲ್ಲಿ ಇಬ್ಬರು ಅರ್ಜುನರಿದ್ದಾರೆ ಎಂದು ತಿಳಿಯುವನು.

ಅದ್ಯ ರಾಜಸಹಸ್ರಾಣಿ ನಿಹತಾನಿ ಮಯಾ ರಣೇ ।
ದೃಷ್ಟ್ವಾ ದುರ್ಯೋಧನೋ ರಾಜಾ ಸಂತಪ್ಸ್ಯತಿ ಮಹಾಮೃಧೇ ॥ ೩೧ ॥

ಈ ದಿನ ದೊಡ್ಡ ಯುದ್ಧದಲ್ಲಿ ನನ್ನಿಂದ ಕೊಲ್ಲಲ್ಪಟ್ಟ ಸಹಸ್ರಾರು ರಾಜರನ್ನು ನೋಡಿ ರಾಜನಾದ ದುರ್ಯೋಧನನು ಸಂತಾಪಪಡುವನು.

ಅದ್ಯ ಸ್ನೇಹಂ ಚ ಭಕ್ತಿಂ ಚ ಪಾಂಡವೇಷು ಮಹಾತ್ಮಸು ।
ಹತ್ವಾ ರಾಜಸಹಸ್ರಾಣಿ ದರ್ಶಯಿಷ್ಯಾಮಿ ರಾಜಸು ॥
ವರಂ ವೀರ್ಯಂ ಕೃತಜ್ಞತ್ವಂ ಮಮ ಜ್ಞಾಸ್ಯಂತಿ ಕೌರವಾಃ ॥ ೩೨ ॥

ಈ ದಿನ ಸಹಸ್ರ ರಾಜರನ್ನು ಕೊಂದು ಎಲ್ಲ ರಾಜರಿಗೆ ಮಹಾತ್ಮರಾದ ಪಾಂಡವರಲ್ಲಿ ನನಗಿರುವ ಸ್ನೇಹವನ್ನೂ ಮತ್ತು ನಿಷ್ಠೆಯನ್ನೂ ತೋರಿಸುವೆನು. ಕೌರವರು ನನ್ನ ಶ್ರೇಷ್ಠವಾದ ಸಾಮರ್ಥ್ಯವನ್ನೂ ಮತ್ತು ಕೃತಜ್ಞತೆಯನ್ನೂ ತಿಳಿಯುವರು.

ಸಂಜಯಃ

ಏವಮುಕ್ತ್ವಸ್ತದಾ ಸೂತಃ ಶಿಕ್ಷಿತಾನ್ ಸಾಧುವಾಹಿನಃ ।
ಶಶಾಂಕಸನ್ನಿಕಾಶಾನ್ ವೈ ವಾಜಿನೋಽಚೋಚುದದ್ ಭೃಶಮ್ ॥ ೩೩ ॥

ಸಂಜಯ– ಹೀಗೆ ಹೇಳಲ್ಪಟ್ಟ ಸೂತನು ಆಗ ಸುಶಿಕ್ಷಿತಗಳಾದ, ಚೆನ್ನಾಗಿ ರಥವನ್ನು ಎಳೆಯುವ, ಚಂದ್ರನ ಕಾಂತಿಯನ್ನು ಹೊಂದಿದ ಅಶ್ವಗಳನ್ನು ಶೀಘ್ರವಾಗಿ ಪ್ರಚೋದಿಸಿದನು.

ತೇ ಪಿಬಂತ ಇವಾಕಾಶಂ ಯುಯುಧಾನಂ ಹಯೋತ್ತಮಾಃ ।
ಪ್ರಾಪಯನ್ ಯವನಾನ್ ಶೀಘ್ರಂ ಮನಃಪವನರಂಹಸಃ ॥ ೩೪ ॥

ಮನೋವೇಗವನ್ನೂ ಮತ್ತು ವಾಯುವೇಗವನ್ನು ಹೊಂದಿದ ಆ ಶ್ರೇಷ್ಠವಾದ ಅಶ್ವಗಳು ಆಕಾಶವನ್ನೇ ಪಾನಮಾಡುವಂತೆ ಯುಯುಧಾನನನ್ನು ಶೀಘ್ರವಾಗಿ ಯವನರ ಸೇನೆಯ ಬಳಿಗೆ ಕರೆದುಕೊಂಡು ಹೋದವು.

ಸಾತ್ಯಕಿಂ ತೇ ಸಮಾಸಾದ್ಯ ಪೃತನಾಸ್ತನಿವರ್ತಿನಮ್ ।
ಬಹವೋ ಲಘುಹಸ್ತಾಶ್ಚ ಶರವರ್ಷೈರವಾಕಿರನ್ ॥ ೩೫ ॥

ಯುದ್ಧದಲ್ಲಿ ಹಿಮ್ಮೆಟ್ಟದಿರುವ ಸಾತ್ಯಕಿಯನ್ನು ಸಮೀಪಿಸಿದ, ಕ್ಷಿಪ್ರಹಸ್ತರಾದ ಅನೇಕ ಯವನರು ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತೇಷಾಮಿಷೂನಥಾಸ್ತ್ರಾಣಿ ವೇಗವನ್ತತಪರ್ವಭಃ ।
ಅಚ್ಛಿನತ್ ಸಾತ್ಯಕೀ ರಾಜನ್ನೈನಂ ತೇ ಪ್ರಾಪ್ನುವನ್ ಶರಾಃ ॥ ೩೬ ॥

ಎಲೈ ರಾಜನೇ, ಸಾತ್ಯಕಿಯು ಅವರ ಬಾಣಗಳನ್ನೂ ಮತ್ತು ಅಸ್ತ್ರಗಳನ್ನೂ ಬಾಗಿದ ತುದಿಯುಳ್ಳ ತನ್ನ ಬಾಣಗಳಿಂದ ಶೀಘ್ರವಾಗಿ ಕತ್ತರಿಸಿದನು. ಆ ಬಾಣಗಳು ಯಾವುವೂ ಸಾತ್ಯಕಿಯ ಬಳಿಯೇ ಬರಲಿಲ್ಲ.

ರುಗ್ಮಪುಂಖೈಃ ಸುನಿಶಿತೈರ್ಗಾರ್ಧ್ರಪತ್ರೈರಜಿಹ್ಮಗೈಃ ।
ಉಚ್ಚಕರ್ತ ಶಿರಾಂಸ್ಯುಗ್ರೋ ಯವನಾನಾಂ ಭುಜಾನಪಿ ॥ ೩೭ ॥

ಉಗ್ರನಾದ ಸಾತ್ಯಕಿಯು ಸುವರ್ಣಪುಂಖಗಳನ್ನು ಹೊಂದಿದ್ದ ಬಹಳ ತೀಕ್ಷ್ಣವಾದ, ಹದ್ದಿನ ಗರಿಗಳನ್ನು ಹೊಂದಿದ್ದ, ನೇರವಾಗಿ ಸಾಗುವ ಬಾಣಗಳಿಂದ ಯವನರ ಶಿರಸ್ಸುಗಳನ್ನೂ ಮತ್ತು ಭುಜಗಳನ್ನೂ ಕತ್ತರಿಸಿದನು.

ಶೈಕ್ಯಾಯಸಾನಿ ವರ್ಮಾಣಿ ಕಾಂಸ್ಯಾನಿ ಚ ಸಮಂತತಃ ।
ಭಿತ್ತ್ವಾ ದೇಹಾಂಸ್ತಥಾ ತೇಷಾಂ ಶರಾ ಜಗ್ಮುರ್ಮಹೀತಳಮ್ ॥ ೩೮ ॥

ಪೂರ್ಣವಾಗಿ ಅಯಸ್ಮಯವಾದ ಅಥವಾ ಕಂಚಿನಿಂದ ಮಾಡಿದ ಅವರ ಕವಚಗಳನ್ನು ಎಲ್ಲ ಕಡೆಯಲ್ಲಿಯೂ ಭೇದಿಸಿ, ಹಾಗೆಯೇ ಅವರ ದೇಹಗಳನ್ನೂ ಭೇದಿಸಿ ಆ ಬಾಣಗಳು ಭೂಮಿಯ ಮೇಲೆ ಬಿದ್ದವು.

ತೇ ಹನ್ಯಮಾನಾ ವೀರೇಣ ಮ್ಲೇಚ್ಛಾಃ ಸಾತ್ಯಕಿನಾ ರಣೇ ।
ಶತಶೋ ನ್ಯಪತಂಸ್ತತ್ರ ವ್ಯಸವೋ ವಸುಧಾತಳೇ ॥ ೩೯ ॥

ವೀರನಾದ ಸಾತ್ಯಕಿಯಿಂದ ರಣರಂಗದಲ್ಲಿ ಹೊಡೆಯಲ್ಪಟ್ಟ ಮ್ಲೇಚ್ಛರು ನೂರರ ಸಂಖ್ಯೆಯಲ್ಲಿ ಪ್ರಾಣವನ್ನು ಕಳೆದುಕೊಂಡು ಭೂತಳದಲ್ಲಿ ಬಿದ್ದರು.

ಸುಪೂರ್ಣಾಯತಮುತ್ಸೃಷ್ಟಾನವ್ಯವಚ್ಛಿನ್ನಪಿಂಡಿತೈಃ ।
ಪಂಚ ಷಟ್‌ಸಪ್ತ ಚಾಷ್ಟೌ ಚ ಬಿಭೇದ ಯವನಾನ್ ಶರೈಃ ॥ ೪೦ ॥

ಪೂರ್ಣವಾಗಿ ಹೆದೆಯನ್ನು ಎಳೆದು ಪ್ರಯೋಗಿಸಿದ, ಒಂದಕ್ಕೊಂದು ಸೇರಿಕೊಂಡ ಬಾಣಗಳಿಂದ ಅವನು ಒಂದೇ ಬಾರಿಗೆ ಐದಾರು-ಏಳೆಂಟು ಯವನರನ್ನು ಭಗ್ನಗೊಳಿಸಿದನು.

ಕಾಂಬೋಜಾನಾಂ ಸಹಸ್ರೈಸ್ತು ಶಕಾನಾಂ ಚ ವಿಶಾಂಪತೇ ।
ಶಬರಾಣಾಂ ಕಿರಾತಾನಾಂ ಬರ್ಬರಾಣಾಂ ತಥೈವ ಚ ॥ ೪೧ ॥

ಅಗಮ್ಯರೂಪಾಂ ಪೃಥಿವೀಂ ಮಾಂಸಶೋಣಿತಕರ್ದಮಾಮ್ ।
ಕೃತವಾಂಸ್ತತ್ರ ಶೈನೇಯಃ ಕ್ಷಪಯಂಸ್ತಾವಕಂ ಬಲಮ್ ॥ ೪೨ ॥

ಎಲೈ ರಾಜನೇ, ಸಾತ್ಯಕಿಯು ನಿನ್ನ ಸೈನ್ಯವನ್ನು ನಾಶಗೊಳಿಸುತ್ತಾ, ರಣರಂಗದಲ್ಲಿ ಸಹಸ್ರಾರು ಕಾಂಬೋಜರ, ಶಕರ, ಶಬರರ, ಕಿರಾತರ ಮತ್ತು ಬರ್ಬರರ ಮಾಂಸ-ರಕ್ತ-ಕೆಸರಿನಿಂದ ಕೂಡಿದ ರಣಭೂಮಿಯನ್ನು ಸಂಚರಿಸಲು ಅಸಾಧ್ಯವನ್ನಾಗಿ ಮಾಡಿದನು.

ದಸ್ಯೂನಾಂ ಸಶಿರಸ್ತ್ರಾಣೈಃ ಶಿರೋಭಿರ್ಲೂನ ಮೂರ್ಧಜೈಃ ।
ತತ್ರ ತತ್ರ ಮಹೀ ಕೀರ್ಣಾ ವಿಬಭ್ರೈರಂಡಜೈರಿವ ॥ ೪೩ ॥

ತಲೆಯ ಕೇಶಗಳನ್ನು ಕಳೆದುಕೊಂಡು, ಶಿರಸ್ತ್ರಾಣ ಸಹಿತವಾಗಿ ಭೂಮಿಯ ಮೇಲೆ ಹರಡಿದ ದಸ್ಯುಗಳ ಶಿರಸ್ಸುಗಳು ಪುಕ್ಕಗಳಿಲ್ಲದ ಪಕ್ಷಿಗಳಂತೆ ಕಂಡುಬಂದವು.

ರುಧಿರೋಕ್ಷಿತಸರ್ವಾಂಗೈಸ್ತೈದಾಯೋಧನಂ ಬಭೌ ।
ಕಬಂಧೈಃ ಸಂವೃತಂ ಸರ್ವಂ ತಾಮ್ರಾಭೈಃ ಖಮಿವಾವೃತಮ್ ॥ ೪೪ ॥

ರಕ್ತದಿಂದ ತೋಯಿಸಲ್ಪಟ್ಟ ಸರ್ವಾಯವಗಳುಳ್ಳ ಕಬಂಧಗಳಿಂದ (ರುಂಡಗಳು) ಆವೃತವಾದ ರಣಭೂಮಿಯು ಕೆಂಪು ಮೋಡಗಳಿಂದ ಆವೃತವಾದ ಆಕಾಶದಂತೆ ಇದ್ದಿತು.

ವಜ್ರಾಶನಿಸಮಸ್ಪರ್ಶೈಃ ಸುಪರ್ವಭಿರಜಿಹ್ಮಗೈಃ ।
ತೇ ಸಾಶ್ವಯಾನಾ ನಿಹತಾಃ ಸಮಾವವ್ರುರ್ವಸುಂಧರಾಮ್ ॥ ೪೫ ॥

ವಜ್ರಾಯುಧಕ್ಕೂ, ಸಿಡಿಲಿಗೂ ಸಮವಾದ ಸ್ಪರ್ಶವುಳ್ಳ, ಒಳ್ಳೆಯ ಅಲುಗುಗಳನ್ನು ಹೊಂದಿದ, ನೇರವಾಗಿ ಸಾಗುವ ಬಾಣಗಳಿಂದ ಹೊಡೆಯಲ್ಪಟ್ಟ ಅವರು ಅಶ್ವ-ಗಜಾದಿ ವಾಹನಗಳ ಜೊತೆಯಲ್ಲಿ ಹತರಾಗಿ ಬಿದ್ದು ಭೂಮಿಯನ್ನು ಮುಚ್ಚಿದರು.

ಅಲ್ಪಾವಶಿಷ್ಟಾಃ ಸಂಭಗ್ನಾಃ ಕೃಚ್ಛ್ರಪ್ರಾಣಾ ವಿಚೇತಸಃ ।
ಜಿತಾಃ ಸಂಖೇ ಮಹಾರಾಜ ಯುಯುಧಾನೇನ ದಂಸಿತಾಃ ॥ ೪೬ ॥

ಪಾರ್ಷ್ಣಿಭಿಶ್ಚ ಕಶಾಭಿಶ್ಚ ತಾಡಯಂತಸ್ತುರಂಗಮಾನ್ ।
ಜವಮುತ್ತಮಮಾಸ್ಥಾಯ ಸರ್ವತಃ ಪ್ರಾದ್ರವನ್ ಭಯಾತ್ ॥ ೪೭ ॥

ಎಲೈ ಮಹಾರಾಜನೇ, ಸಾತ್ಯಕಿಯ ಬಾಣಗಳಿಂದ ಘಾತಿಸಲ್ಪಟ್ಟು, ಪ್ರಾಣ ಸಂಶಯವನ್ನು ಹೊಂದಿ ಪ್ರಜ್ಞಾಶೂನ್ಯಪ್ರಾಯರಾದ, ಭಗ್ನಗೊಂಡು ಯುದ್ಧದಲ್ಲಿ ಪರಾಜಿತರಾದ, ಅವಶಿಷ್ಟರಾದ ಅಲ್ಪಯೋಧರು ತಮ್ಮ ಹಿಮ್ಮಡಿಗಳಿಂದಲೂ ಮತ್ತು ಚಾವಟಿಗಳಿಂದಲೂ ಅಶ್ವಗಳನ್ನು ಹೊಡೆಯುತ್ತಾ ಉತ್ತಮವೇಗವನ್ನು ಅವಲಂಬಿಸಿ ಭಯದಿಂದ ಎಲ್ಲ ಕಡೆಗಳಲ್ಲಿಯೂ ಓಡಿಹೋದರು.

ಕಾಂಭೋಜಸೈನ್ಯಂ ವಿದ್ರಾವ್ಯ ದುರ್ಜಯಂ ಯುಧಿ ಭಾರತ ।
ಯವನಾನಾಂ ಚ ತತ್ ಸೈನ್ಯಂ ಶಕಾನಾಂ ಚ ಮಹದ್ ಬಲಮ್ ॥

ಸ ತತಃ ಪುರುಷವ್ಯಾಘ್ರಃ ಸಾತ್ಯಕಿಃ ಸತ್ಯವಿಕ್ರಮಃ ।
ಪ್ರಹಷ್ಟಸ್ತಾವಕಾನ್ ಜಿತ್ವಾ ಸೂತಂ ಯಾಹೀತ್ಯಚೋದಯತ್ ॥ ೪೯ ॥

ಎಲೈ ಭಾರತನೇ, ಪುರುಷವ್ಯಾಘ್ರನೂ, ಸತ್ಯವಿಕ್ರಮನೂ ಆದ ಸಾತ್ಯಕಿಯು ದುರ್ಜಯವಾದ ಕಾಂಬೋಜ ಸೈನ್ಯವನ್ನೂ, ಯವನರ ಸೈನ್ಯವನ್ನೂ, ಶಕರ ದೊಡ್ಡ ಸೈನ್ಯವನ್ನೂ ಓಡಿಸಿ ಮತ್ತು ನಿನ್ನ ಯೋಧರನ್ನು ಗೆದ್ದು ಸಂತೋಷಗೊಂಡು ಸಾರಥಿಯನ್ನು ಕುರಿತು ಮುಂದೆ ಹೋಗು ಎಂದು ಪ್ರಚೋದಿಸಿದನು.

ತಂ ಯಾಂತಂ ಪೃಷ್ಠಗೋಪ್ತಾರಮರ್ಜುನಸ್ಯ ವಿಶಾಂಪತೇ ।
ನ ಕೇಚಿದಭ್ಯವರ್ತಂತ ತಾವಕಾ ವೃಷ್ಣಿನಂದನಮ್ ॥ ೫೦ ॥

ಎಲೈ ರಾಜನೇ, ಅರ್ಜುನನ ಪೃಷ್ಠರಕ್ಷಕನಾಗಿ ಹೋಗುತ್ತಿದ್ದ ವೃಷ್ಣಿನಂದನನಾದ ಸಾತ್ಯಕಿಯನ್ನು ನಿನ್ನವರು ಯಾರೂ ಎದುರಿಸಲಿಲ್ಲ.

ತತ್ತಸ್ಯ ಸಮರೇ ಕರ್ಮ ದೃಷ್ಟ್ವಾನ್ಯೈರಕೃತಂ ಪುರಾ ।
ಚಾರಣಾಃ ಪ್ರೇಕ್ಷ್ಯ ಸಂಹೃಷ್ಟಾಸ್ತ್ವದೀಯಾಶ್ಚಾಪ್ಯಪೂಜಯನ್ ॥ ೫೧ ॥

ಹಿಂದೆ ಯಾರೂ ಮಾಡದಿದ್ದ ರಣರಂಗದಲ್ಲಿನ ಅವನ ಕರ್ಮವನ್ನು ನೋಡಿ ಚಾರಣರು ಹರ್ಷಗೊಂಡರು. ನಿನ್ನವರೂ ಸಹ ಅದನ್ನು ಪೂಜಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಏಕೋನತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಆರನೆಯ ಅಧ್ಯಾಯ

ಸಾತ್ಯಕಿಯ ಯುದ್ಧದ ವರ್ಣನೆ.

ಸಂಜಯಃ

ಜಿತ್ವಾ ಯವನಕಾಂಬೋಜಾನ್ ಯುಯುಧಾನಸ್ತತೋಽರ್ಜುನಮ್ ।
ಜಗಾಮ ತವ ಸೈನ್ಯಸ್ಯ ಮಧ್ಯೇನ ರಥಿನಾಂ ವರಃ ॥ ೧ ॥

ಸಂಜಯ– ರಥಿಕರಲ್ಲಿ ಶ್ರೇಷ್ಠನಾದ ಸಾತ್ಯಕಿಯು ಯವನರನ್ನೂ, ಕಾಂಬೋಜರನ್ನೂ ಗೆದ್ದು ನಿನ್ನ ಸೈನ್ಯದ ಮಧ್ಯದಿಂದಲೇ ಅರ್ಜುನನ ಬಳಿಗೆ ಹೋದನು.

ಶರದಂಷ್ಟ್ರೋ ನರವ್ಯಾಘ್ರೋ ವಿಚಿತ್ರಕವಚಚ್ಛವಿಃ ।
ಮೃಗಾನ್ ವ್ಯಾಘ್ರ ಇವಾಜಿಘ್ರಂಸ್ತವ ಸೈನ್ಯಮಭೀಷಯತ್ ॥ ೨ ॥

ಶರಗಳೆಂಬ ದಂಷ್ಟ್ರವುಳ್ಳವನೂ, ವಿಚಿತ್ರವಾದ ಕವಚಗಳ ಕಾಂತಿಯನ್ನು ಹೊಂದಿದವನೂ ಆದ ಆ ನರವ್ಯಾಘ್ರನು, ವ್ಯಾಘ್ರವು ಜಿಂಕೆಗಳನ್ನು ಮೂಸಿನೋಡುವಂತೆ ಮುಂದೆ ಸಾಗುತ್ತಾ ನಿನ್ನ ಸೈನ್ಯವನ್ನು ಎದುರಿಸಿದನು.

ಸ ರಥೇನ ಚರನ್ ಮಾರ್ಗಾನ್ ಧನುರಭ್ರಾಮಯದ್ ಭೃಶಮ್ ।
ರುಗ್ಮಪೃಷ್ಠಂ ಮಹಾವೇಗಂ ರುಗ್ಮಚಂದ್ರಕಸಂಕುಲಮ್ ॥ ೩ ॥

ಅವನು ತನ್ನ ರಥದಿಂದ ವಿವಿಧ ಮಾರ್ಗಗಳಲ್ಲಿ ಚಲಿಸುತ್ತಾ, ಸುವರ್ಣ ಪೃಷ್ಠವನ್ನು ಹೊಂದಿದ್ದ, ಸುವರ್ಣಮಯವಾದ ಚಂದ್ರಚಿಹ್ನೆಗಳನ್ನು ಹೊಂದಿದ್ದ ಮಹಾ ವೇಗಶಾಲಿಯಾದ ಧನುಸ್ಸನ್ನು ತೀವ್ರವಾಗಿ ತಿರುಗಿಸಿದನು.

ರುಗ್ಮಾಂಗದಶಿರಸ್ತ್ರಾಣೋ ರುಗ್ಮವರ್ಮಸಮಾವೃತಃ ।
ರುಗ್ಮಧ್ವಜವರಃ ಶೂರೋ ಮೇರುಶೃಂಗ ಇವಾಬಭೌ ॥ ೪ ॥

ಸುವರ್ಣಮಯವಾದ ಅಂಗದವನ್ನೂ, ಕಿರೀಟವನ್ನೂ, ಕವಚವನ್ನೂ ಧರಿಸಿದ ಶೂರನಾದ ಅವನು ಸುವರ್ಣಮಯವಾದ ಶ್ರೇಷ್ಠ ಧ್ವಜವನ್ನು ಹೊಂದಿದವನಾಗಿ ಮೇರುಪರ್ವತದ ಶಿಖರದಂತೆ ಶೋಭಿಸಿದನು.

ಸಧನುರ್ಮಂಡಲಃ ಸಂಖೇ ತೇಜೋಭಾಸ್ವರರಶ್ಮಿಮಾನ್ ।
ಶರದೀವೋದಿತಃ ಸೂರ್ಯೋ ನೃಸೂರ್ಯೋ ವಿರರಾಜ ಹ ॥ ೫ ॥

ರಣರಂಗದಲ್ಲಿ ಮಂಡಲಾಕಾರವಾದ ಧನುಸ್ಸಿನಿಂದ ಕೂಡಿದ, ಪುರುಷ ಸೂರ್ಯನಾದ ಅವನು ತನ್ನ ತೇಜಸ್ಸಿನಿಂದ ಬೆಳಗುವ ಕಿರಣಗಳಿಂದ ಕೂಡಿದ ಶರತ್ಕಾಲದಲ್ಲಿ ಉದಯಿಸಿದ ಸೂರ್ಯನಂತೆ ವಿರಾಜಿಸಿದನು.

ವೃಷಭಸ್ಕಂಧವಿಕ್ರಾಂತೋ ವೃಷಭಾಕ್ಷೋ ನರರ್ಷಭಃ ।
ತಾವಕಾನಾಂ ಬಭೌ ಮಧ್ಯೇ ಗವಾಂ ಮಧ್ಯೇ ಯಥಾ ವೃಷಃ ॥ ೬ ॥

ವೃಷಭಸ್ಕಂಧವನ್ನು ಹೊಂದಿದ, ಪರಾಕ್ರಮಶಾಲಿಯಾದ, ವೃಷಭಾಕ್ಷನಾದ ಆ ನರರ್ಷಭನು ನಿನ್ನ ಸೈನ್ಯದ ಮಧ್ಯದಲ್ಲಿ ಗೋವುಗಳ ಮಧ್ಯೆ ವೃಷಭದಂತೆ ಶೋಭಿಸಿದನು.

ಮತ್ತದ್ವಿರದಸಂಕಾಶಂ ಮತ್ತದ್ವಿರದಗಾಮಿನಮ್ ।
ಪ್ರಭಿನ್ನಮಿವ ಮಾತಂಗಂ ಯೂಥಮಧ್ಯೇ ವ್ಯವಸ್ಥಿತಮ್ ॥
ವ್ಯಾಘ್ರ ಇವ ಜಿಘಾಂಸಂತಸ್ತ್ವದೀಯಾಭ್ಯದ್ರವನ್ ರಣೇ ॥ ೬ ॥

ಮದಗಜವನ್ನು ಹೋಲುವ, ಮದಗಜದ ನಡಿಗೆಯನ್ನು ಹೊಂದಿದ, ಗುಂಪಿನ ಮಧ್ಯದಲ್ಲಿರುವ, ಮದೋದಕವನ್ನು ಸ್ರವಿಸುವ ಮದಗಜದಂತೆ ಇದ್ದ ಅವನನ್ನು ಕೊಲ್ಲಲು ಬಯಸಿ ನಿನ್ನ ಯೋಧರು ವ್ಯಾಘ್ರಗಳಂತೆ ರಣರಂಗದಲ್ಲಿ ಅವನ ಕಡೆಗೆ ಓಡಿದರು.

ದ್ರೋಣಾನೀಕಮತಿಕ್ರಾಂತಂ ಭೋಜಾನೀಕಂ ಚ ದುಸ್ತರಮ್ ।
ಜಲಸಂಧಾರ್ಣವಂ ತೀರ್ತ್ವಾ ಕಾಂಬೋಜಾನಾಂ ಚ ವಾಹಿನೀಮ್ ॥೮॥

ಹಾರ್ದಿಕ್ಯಮಕರೋನ್ಮುಕ್ತಂ ತೀರ್ಣಂ ವೈ ಸೈನ್ಯಸಾಗರಮ್ ।
ಪರಿವವ್ರುಃ ಸುಸಂಕ್ರುದ್ಧಾಸ್ತ್ವದೀಯಾಃ ಸಾತ್ಯಕಿಂ ರಥಾಃ ॥ ೯ ॥

ದ್ರೋಣರ ಸೈನ್ಯವನ್ನು ದಾಟಿ, ದುಸ್ತರವಾದ ಕೃತವರ್ಮನ ಸೈನ್ಯವನ್ನೂ ದಾಟಿ, ಜಲಸಂಧನ ಸೈನ್ಯ ಸಾಗರವನ್ನೂ, ಕಾಂಬೋಜ ಸೈನ್ಯವನ್ನೂ ದಾಟಿ, ಕೃತವರ್ಮನೆಂಬ ಮೊಸಳೆಯಿಂದ ಮುಕ್ತನಾದ ಆ ಸಾತ್ಯಕಿಯನ್ನು ಬಹಳ ಕ್ರುದ್ಧರಾದ ನಿನ್ನ ರಥರು ಸುತ್ತುವರಿದರು.

ದುರ್ಯೋಧನಶ್ಚಿತ್ರಸೇನೋ ದುಃಶಾಸನವಿವಿಂಶತೀ ।
ಶಕುನಿರ್ದುಃಸಹಶ್ಚೈವ ಯುವಾ ದುರ್ಮರ್ಷಣಃ ಕೃಥಃ ॥ ೧೦ ॥

ಅನ್ಯೇ ಚ ಬಹವಃ ಶೂರಾಃ ಶಸ್ತ್ರವಂತೋ ದುರಾಸದಾಃ ।
ಪೃಷ್ಠತಃ ಸಾತ್ಯಕಿಂ ಯಾಂತಮನ್ವಧಾವನ್ನಮರ್ಷಿತಾಃ ॥ ೧೧ ॥

ದುರ್ಯೋಧನ, ಚಿತ್ರಸೇನ, ದುಶ್ಶಾಸನ, ವಿವಿಂಶತಿ, ಶಕುನಿ, ದುಸ್ಸಹ, ಯುವಕನಾದ ದುರ್ಮರ್ಷಣ, ಕೃಥ ಮತ್ತು ದುರಾಸದರಾದ ಶಸ್ತ್ರಧಾರಿಗಳಾದ ಇನ್ನೂ

ಅನೇಕ ಶೂರರು ಕೋಪಗೊಂಡು ಮುಂದೆ ಸಾಗುತ್ತಿದ್ದ ಸಾತ್ಯಕಿಯನ್ನು ಹಿಂಬಾಲಿಸಿ ಓಡಿದರು.

ಅಥ ಶಬ್ದೋ ಮಹಾನಾಸೀತ್ತವ ಸೈನ್ಯಸ್ಯ ಮಾರಿಷ ।
ಮಾರುತೋದ್ಧೂತವೇಗಸ್ಯ ಸಾಗರಸ್ಯೇವ ಪರ್ವಣಿ ॥ ೧೨ ॥

ಎಲೈ ಪೂಜ್ಯನೇ, ಆಗ ಪರ್ವಕಾಲದಲ್ಲಿ ವಾಯುವಿನಿಂದ ಕ್ಷುಬ್ಧವಾದ ಸಾಗರದ ಘೋಷದಂತೆ ನಿನ್ನ ಸೈನ್ಯದಲ್ಲಿ ದೊಡ್ಡ ಶಬ್ದವು ಉಂಟಾಯಿತು.

ತಾನಭಿದ್ರವತಃ ಸರ್ವಾನ್ ಸಮೀಕ್ಷ್ಯ ಶಿನಿಪುಂಗವಃ ।
ಶನೈರ್ಯಾಹೀತಿ ಯಂತಾರಮಬ್ರವೀತ್ ಪ್ರಹಸನ್ನಿವ ॥ ೧೩ ॥

ಶಿನಿಪುಂಗವನಾದ ಸಾತ್ಯಕಿಯು ತನ್ನೆಡೆಗೆ ಓಡಿಬರುತ್ತಿದ್ದ ಅವರೆಲ್ಲರನ್ನೂ ನೋಡಿ ತನ್ನ ಸಾರಥಿಯನ್ನು ನೋಡಿ ನಗುತ್ತಾ ನಿಧಾನವಾಗಿ ಹೋಗು ಎಂದು ಹೇಳಿದನು.

ಇದಮೇತಿ ಸಮುದ್ಧೂತಂ ಧಾರ್ತರಾಷ್ಟ್ರಸ್ಯ ಯದ್ಬಲಮ್ ।
ಮಾಮೇವಾಭಿಮುಖಂ ತೂರ್ಣಂ ಗಜಾಶ್ವರಥಪತ್ತಿಮತ್ ॥ ೧೪ ॥

ನಾದಯನ್ವೈ ದಿಶಃ ಸರ್ವಾ ರಥಘೋಷೇಣ ಸಾರಥೇ ।
ಪೃಥಿವೀಂ ಚಾಂತರಿಕ್ಷಂ ಚ ಕಂಪಯನ್ ಸಾಗರಾನಪಿ ॥ ೧೫ ॥

ಗಜಾಶ್ವ-ರಥ-ಪದಾತಿಗಳಿಂದ ಕೂಡಿದ ದುರ್ಯೋಧನನ ಈ ದೊಡ್ಡ ಸೈನ್ಯವು ಎಲೈ ಸಾರಥಿಯೇ, ರಥಘೋಷದಿಂದ ಎಲ್ಲ ದಿಕ್ಕುಗಳನ್ನೂ ಪ್ರತಿಧ್ವನಿಸುತ್ತಾ, ಭೂಮಿಯನ್ನೂ, ಅಂತರಿಕ್ಷವನ್ನೂ ಮತ್ತು ಸಾಗರವನ್ನೂ ನಡುಗಿಸುತ್ತಾ ತೀಕ್ಷ್ಣವಾಗಿ ನನಗೆ ಅಭಿಮುಖವಾಗಿಯೇ ಬರುತ್ತಿದೆ.

ಏತದ್ಬಲಾರ್ಣವಂ ತಾತ ವಾರಯಿಷ್ಯೇ ಮಹಾರಣೇ ।
ಪೌರ್ಣಮಾಸ್ಯಾಮಿವೋದ್ಧೂತಂ ವೇಲೇವ ಸಲಿಲಾಶಯಮ್ ॥ ೧೬ ॥

ಎಲೈ ಪ್ರೀತಿಪಾತ್ರನೇ, ಪೌರ್ಣಮಾಸಿಯ ದಿನ ಕ್ಷುಬ್ಧಸಾಗರವನ್ನು ತೀರವು ತಡೆದಂತೆ ರಣರಂಗದಲ್ಲಿ ಈ ಸೈನ್ಯಸಾಗರವನ್ನು ನಾನು ತಡೆಯುವೆನು.

ಪಶ್ಯ ಮೇ ಸೂತ ವಿಕ್ರಾಂತಮಿಂದ್ರಸ್ಯೇವ ಮಹಾಮೃಧೇ ।
ಏಷ ಸೈನ್ಯಾನಿ ಶತ್ರೂಣಾಂ ವಿಧಮಾಮಿ ಶಿತೈಃ ಶರೈಃ ॥ ೧೭ ॥

ಎಲೈ ಸೂತನೇ, ದೊಡ್ಡ ಯುದ್ಧದಲ್ಲಿ ಇಂದ್ರನ ಪರಾಕ್ರಮದಂತಿರುವ ನನ್ನ ಪರಾಕ್ರಮವನ್ನು ನೋಡು. ಈ ನಾನು ನಿಶಿತವಾದ ಬಾಣಗಳಿಂದ ಶತ್ರುಗಳ ಸೈನ್ಯವನ್ನು ನಾಶಗೊಳಿಸುತ್ತೇನೆ.

ನಿಹತಾನಾಹವೇ ಪಶ್ಯ ಪದಾತ್ಯಶ್ವರಥದ್ವಿಪಾನ್ ।
ಮಚ್ಛರೈರಗ್ನಿಸಂಕಾಶೈರ್ವಿದೇಹಾಸೂನ್ ಸಹಸ್ರಶಃ ॥ ೧೮ ॥

ಅಗ್ನಿಸದೃಶವಾದ ನನ್ನ ಬಾಣಗಳಿಂದ ಸಹಸ್ರ ಸಂಖ್ಯೆಯಲ್ಲಿ ತಮ್ಮ ಶರೀರಗಳನ್ನು ಮತ್ತು ಪ್ರಾಣಗಳನ್ನು ಕಳೆದುಕೊಳ್ಳುವ ಅಶ್ವ-ರಥ-ಗಜ-ಪದಾತಿಗಳನ್ನು ನೋಡು.

ಇತ್ಯೇವಂ ಬ್ರುವತಸ್ತಸ್ಯ ಸಾತ್ಯಕೇರಮಿತೌಜಸಃ ।
ಸಮೀಪಂ ಸೈನಿಕಾಸ್ತೇ ತು ಶೀಘ್ರಮೀಯುರ್ಯುಯುತ್ಸವಃ ।
ಜಹ್ಯಾದ್ರವಸ್ವ ತಿಷ್ಠೇತಿ ಪಶ್ಯ ಪಶ್ಯೇತಿ ವಾದಿನಃ ॥ ೧೯ ॥

ಅಮಿತ ಪರಾಕ್ರಮಿಯಾದ ಸಾತ್ಯಕಿಯು ಹೀಗೆ ಹೇಳುತ್ತಿರುವಾಗ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿದ ಕೌರವ ಸೈನಿಕರು 'ಕೊಲ್ಲು, ಓಡು, ನಿಲ್ಲು, ನೋಡು-ನೋಡು' ಎಂದು ಹೇಳುತ್ತಾ ಅವನ ಸಮೀಪಕ್ಕೆ ಬಂದರು.

ತಾನೇವಂ ಬ್ರುವತೋ ವೀರಾನ್ ಸಾತ್ಯಕಿರ್ನಿಶಿತೈಃ ಶರೈಃ ।
ಜಘಾನ ತ್ರಿಶತಾನಶ್ವಾನ್ ಕುಂಜರಾಂಶ್ಚ ಚತುಃಶತಾನ್ ॥ ೨೦ ॥

ಆ ವೀರರು ಹೀಗೆ ಹೇಳುತ್ತಿರುವಾಗ ಸಾತ್ಯಕಿಯು ನಿಶಿತವಾದ ಬಾಣಗಳಿಂದ ಅವರ ಸೈನ್ಯದಲ್ಲಿ ಮುನ್ನೂರು ಅಶ್ವಗಳನ್ನೂ ಮತ್ತು ನಾಲ್ನೂರು ಗಜಗಳನ್ನೂ ಕೊಂದನು.

ಸ ಸಂಪ್ರಹಾರಸ್ತುಮುಲಸ್ತಸ್ಯ ತೇಷಾಂ ಚ ಧನ್ವಿನಾಮ್ ।
ದೇವಾಸುರರಣಪ್ರಖ್ಯಃ ಪ್ರಾವರ್ತತ ಜನಕ್ಷಯಃ ॥ ೨೧ ॥

ದೇವಾಸುರ ಯುದ್ಧಕ್ಕೆ ಸದೃಶವಾದ, ಜನವಿನಾಶಕಾರಕವಾದ ತೀವ್ರವಾದ ಯುದ್ಧವು ಅವನಿಗೂ ಮತ್ತು ಆ ಧನುರ್ಧಾರಿಗಳಿಗೂ ನಡೆಯಿತು.

ಮೇಘಜಾಲನಿಭಂ ಸೈನ್ಯಂ ತವ ಪುತ್ರಸ್ಯ ಮಾರಿಷ ।
ಪ್ರತ್ಯಗೃಹ್ಣಾಚ್ಛಿನೇಃ ಪೌತ್ರಃ ಶರೈರಾಶೀವಿಷೋಪಮೈಃ ॥ ೨೨ ॥

ಎಲೈ ಪೂಜ್ಯನೇ, ಮೇಘಸಮೂಹವನ್ನು ಹೋಲುವ ನಿನ್ನ ಪುತ್ರನ ಸೈನ್ಯವನ್ನು ಶಿನಿಯ ಪೌತ್ರನಾದ ಸಾತ್ಯಕಿಯು ಸರ್ಪಸದೃಶವಾದ ತನ್ನ ಬಾಣಗಳಿಂದ ಸ್ವೀಕರಿಸಿದನು.

ಪ್ರಚ್ಛಾದ್ಯಮಾನಃ ಸಮರೇ ಶರಜಾಲೈಃ ಸ ವೀರ್ಯವಾನ್ ।
ಅಸಂಭ್ರಾಂತೋ ಮಹಾರಾಜ ತಾವಕಾನವಧೀದ್ ಬಹೂನ್ ॥ ೨೩ ॥

ಎಲೈ ಮಹಾರಾಜನೇ, ಬಾಣಗಳ ಸಮೂಹದಿಂದ ರಣರಂಗದಲ್ಲಿ ಮುಚ್ಚಲ್ಪಟ್ಟ ಪರಾಕ್ರಮಶಾಲಿಯಾದ ಅವನು ಸಂಭ್ರಮರಹಿತನಾಗಿ ನಿನ್ನ ಅನೇಕ ಯೋಧರನ್ನು ಕೊಂದನು.

ಆಶ್ಚರ್ಯಂ ತತ್ರ ರಾಜೇಂದ್ರ ಸುಮಹದ್ ದೃಷ್ಟವಾನಹಮ್ ।
ನ ಮೋಘಃ ಸಾಯಕಃ ಕಶ್ಚಿತ್ ಸಾತ್ಯಕೇರಭವತ್ ಪ್ರಭೋ ॥ ೨೪ ॥

ಎಲೈ ಪ್ರಭುವೇ, ರಾಜೇಂದ್ರನೇ, ಅಲ್ಲಿ ಸಾತ್ಯಕಿಯು ಪ್ರಯೋಗಿಸಿದ ಯಾವ ಒಂದು ಬಾಣವೂ ವ್ಯರ್ಥವಾಗದ ದೊಡ್ಡ ಆಶ್ಚರ್ಯವನ್ನು ನೋಡಿದೆನು.

ರಥನಾಗಾಶ್ವಕಲಿಲಃ ಪದಾತ್ಯೂರ್ಮಿಸಮಾಕುಲಃ ।
ಶೈನೇಯವೇಲಾಮಾಸಾದ್ಯ ಸ್ಥಿತಃ ಸೈನ್ಯಮಹಾರ್ಣವಃ ॥ ೨೫ ॥

ರಥ-ಗಜಾಶ್ವಗಳಿಂದ ನಿಬಿಡವಾದ, ಪದಾತಿಗಳೆಂಬ ಅಲೆಗಳಿಂದ ಪೂರ್ಣವಾದ ಆ ಕೌರವ ಸೈನ್ಯಸಾಗರವು ಸಾತ್ಯಕ ಎಂಬ ತೀರವನ್ನು ಸಮೀಪಿಸಿ ನಿಂತಿತು.

ಸಂಭ್ರಾಂತನರನಾಗಾಶ್ವಮಾವರ್ತತ ಮುಹುರ್ಮುಹುಃ ।
ತತ್ಸೈನ್ಯಮಿಷುಭಿಸ್ತೇನ ವಧ್ಯಮಾನಂ ಸಮಂತತಃ ॥ ೨೬ ॥

ಸಾತ್ಯಕಿಯಿಂದ ಎಲ್ಲ ಕಡೆಗಳಿಂದಲೂ ಬಾಣಗಳಿಂದ ಹೊಡೆಯಲ್ಪಟ್ಟ ಆ ಸೈನ್ಯವು ದಿಗ್ಭ್ರಮೆಗೊಂಡ ನರ-ಗಜಾಶ್ವಗಳಿಂದ ಯುಕ್ತವಾಗಿ ಪುನಃ ಪುನಃ ಅಲ್ಲಲ್ಲಿಯೇ ತಿರುಗಿತು.

ಬಭ್ರಾಮ ತತ್ರ ತತ್ರೈವ ಗಾವಃ ಶೀತಾರ್ದಿತಾ ಇವ ।
ರಥಿನಃ ಪತ್ತಿನಾಗಾಶ್ವಾಃ ಸಾದಿನಶ್ಚ ಶರಾಹತಾಃ ॥ ೨೭ ॥

ಸಾತ್ಯಕಿಯ ಬಾಣಗಳಿಂದ ಹೊಡೆಯಲ್ಪಟ್ಟ ರಥಿಕರೂ, ಪದಾತಿಗಳೂ, ಗಜಾಶ್ವಗಳೂ ಮತ್ತು ಅಶ್ವಾರೋಹಿಗಳು ಶೀತದಿಂದ ಪೀಡಿಸಲ್ಪಟ್ಟ ಗೋವುಗಳಂತೆ ಅಲ್ಲಲ್ಲಿಯೇ ತಿರುಗಾಡಿದರು.

ಪದಾತಿನಂ ರಥಂ ನಾಗಂ ಸಾದಿನಂ ತುರಗಂ ತಥಾ ।
ಅವಿದ್ಧಂ ತತ್ರ ನಾದ್ರಾಕ್ಷಂ ಯುಯುಧಾನಸ್ಯ ಸಾಯಕೈಃ ॥ ೨೮ ॥

ಸಾತ್ಯಕಿಯ ಬಾಣಗಳಿಂದ ಗಾಯಗೊಳ್ಳದ ಪದಾತಿಯನ್ನಾಗಲೀ, ರಥವನ್ನಾಗಲೀ, ಗಜವನ್ನಾಗಲೀ, ಅಶ್ವಾರೋಹಿಯನ್ನಾಗಲೀ ಅಥವಾ ಅಶ್ವವನ್ನಾಗಲೀ ನಾನು ಅಲ್ಲಿ ನೋಡಲಿಲ್ಲ.

ನ ತಾದೃಕ್ಕದನಂ ರಾಜನ್ ಕೃತವಾಂಸ್ತತ್ರ ಫಲ್ಗುನಃ ।
ಯಾದೃಕ್ ಕ್ಷಯಮನೀಕಾನಾಮಕರೋತ್ ಸಾತ್ಯಕಿರ್ನೃಪ ॥ ೨೯ ॥

ಎಲೈ ರಾಜನೇ, ಸಾತ್ಯಕಿಯು ಪರಸೈನ್ಯದಲ್ಲಿ ಎಂತಹ ನಾಶವನ್ನುಂಟು ಮಾಡಿದನೋ ಅಂತಹ ಕದನವನ್ನು ಅರ್ಜುನನೂ ಮಾಡಲಿಲ್ಲ.

ಅತ್ಯರ್ಜುನಂ ಶಿನೇಃ ಪೌತ್ರೋ ಯುದ್ಧ್ಯತೇ ಭರತರ್ಷಭ ॥
ವೀತಭೀರ್ಲಾಘವೋಪೇತಃ ಕೃತಿತ್ವಂ ಸಂಪ್ರದರ್ಶಯತ್ ॥ ೩೦ ॥

ಎಲೈ ಭರತಶ್ರೇಷ್ಠನೇ, ಸಾತ್ಯಕಿಯು ನಿರ್ಭಯನಾಗಿ ಕ್ಷಿಪ್ರತೆಯಿಂದ ಕೂಡಿ ಕೌಶಲವನ್ನು ಪ್ರದರ್ಶಿಸುತ್ತಾ ಅರ್ಜುನನನ್ನೂ ಮೀರಿಸಿ ಯುದ್ಧವನ್ನು ಮಾಡಿದನು.

ತತೋ ದುರ್ಯೋಧನೋ ರಾಜಾ ಸಾತ್ವತಸ್ಯ ತ್ರಿಭಿಃ ಶರೈಃ ।
ವಿವ್ಯಾಧ ಸೂತಂ ನಿಶಿತೈಶ್ಚತುರ್ಭಿಶ್ಚತುರೋ ಹಯಾನ್ ॥ ೩೧ ॥

ಆಗ ರಾಜನಾದ ದುರ್ಯೋಧನನು ಮೂರು ಬಾಣಗಳಿಂದ ಸಾತ್ಯಕಿಯ ಸಾರಥಿಯನ್ನೂ, ನಾಲ್ಕು ತೀಕ್ಷ್ಣ ಬಾಣಗಳಿಂದ ಅವನ ರಥದ ನಾಲ್ಕು ಕುದುರೆಗಳನ್ನೂ ಹೊಡೆದನು.

ಸಾತ್ಯಕಿಂ ಚ ತ್ರಿಭಿರ್ವಿದ್ಧ್ವಾ ಪುನರ್ವಿವ್ಯಾಧ ಸೋಽಷ್ಟಭಿಃ ।
ದುಃಶಾಸನಃ ಷೋಡಶಭಿರ್ವಿವ್ಯಾಧ ಶಿನಿಪುಂಗವಮ್ ॥ ೩೨ ॥

ಪುನಃ ಸಾತ್ಯಕಿಯನ್ನು ಮೂರು ಬಾಣಗಳಿಂದ ಹೊಡೆದು, ಪುನಃ ಎಂಟು ಬಾಣಗಳಿಂದ ಹೊಡೆದನು. ದುಶ್ಶಾಸನನು ಶಿನಿಪುಂಗವನನ್ನು ಹದಿನಾರು ಬಾಣಗಳಿಂದ ಹೊಡೆದನು.

ಶಕುನಿಃ ಪಂಚವಿಂಶತ್ಯಾ ಚಿತ್ರಸೇನಶ್ಚ ಪಂಚಭಿಃ ।
ದುಃಸಹಃ ಪಂಚದಶಭಿರ್ವಿವ್ಯಾಧೋರಸಿ ಸಾತ್ಯಕಿಮ್ ॥ ೩೩ ॥

ಶಕುನಿಯು ಇಪ್ಪತ್ತೈದು ಬಾಣಗಳಿಂದಲೂ, ಚಿತ್ರಸೇನನು ಐದು ಬಾಣಗಳಿಂದಲೂ, ದುಸ್ಸಹನು ಹದಿನೈದು ಬಾಣಗಳಿಂದಲೂ ಸಾತ್ಯಕಿಗೆ ಅವನ ಎದೆಯಲ್ಲಿ ಹೊಡೆದನು.

ಉತ್ಸ್ಮಯನ್ ವೃಷ್ಣಿಶಾರ್ದೂಲಸ್ತಥಾ ಬಾಣೈಃ ಸಮಾಹತಃ ।
ತಾನವಿದ್ಧ್ಯನ್ಮಹಾರಾಜ ಸರ್ವಾನೇವ ತ್ರಿಭಿಸ್ತ್ರಿಭಿಃ ॥ ೩೪ ॥

ಎಲೈ ಮಹಾರಾಜನೇ, ಹಾಗೆ ಬಾಣಗಳಿಂದ ಹೊಡೆಯಲ್ಪಟ್ಟ, ವೃಷ್ಣಿ ಶಾರ್ದೂಲನಾದ ಸಾತ್ಯಕಿಯು ನಗುತ್ತಾ ಅವರೆಲ್ಲರನ್ನೂ ಮೂರು-ಮೂರು ಬಾಣಗಳಿಂದ ಹೊಡೆದನು.

ಗಾಢವಿದ್ಧಾನರೀನ್ ಕೃತ್ವಾ ಮಾರ್ಗಣೈಃ ಸೋಽತಿತೇಜನೈಃ ।
ಶೈನೇಯಃ ಶ್ಯೇನವತ್ ಸಂಖೇ ವ್ಯಚರಲ್ಲಘುವಿಕ್ರಮಃ ॥ ೩೫ ॥

ಸಾತ್ಯಕಿಯು ಅತಿತೀಕ್ಷ್ಣವಾದ ಬಾಣಗಳಿಂದ ಶತ್ರುಗಳಿಗೆ ಬಲವಾಗಿ ಹೊಡೆದು ಕ್ಷಿಪ್ರತೆಯನ್ನೂ ಮತ್ತು ಪರಾಕ್ರಮವನ್ನೂ ಹೊಂದಿ ರಣರಂಗದಲ್ಲಿ ಶ್ಯೇನದಂತೆ (ಗಿಡುಗ) ಸಂಚರಿಸಿದನು.

ಸೌಬಲಸ್ಯ ಧನುಶ್ಚಿತ್ತ್ವಾ ಹಸ್ತಾವಾಪಂ ನಿಕೃತ್ಯ ಚ ।
ದುರ್ಯೋಧನಂ ತ್ರಿಭಿರ್ಬಾಣೈರಭ್ಯವಿದ್ಧ್ಯತ್ ಸ್ತನಾಂತರೇ ॥ ೩೬ ॥

ಶಕುನಿಯ ಧನುಸ್ಸನ್ನು ಕತ್ತರಿಸಿ, ಬತ್ತಳಿಕೆಯನ್ನೂ ಕತ್ತರಿಸಿ, ದುರ್ಯೋಧನನಿಗೆ ಅವನ ಸ್ತನಗಳ ಮಧ್ಯದಲ್ಲಿ ಮೂರು ಬಾಣಗಳಿಂದ ಹೊಡೆದನು.

ಚಿತ್ರಸೇನಂ ಶತೇನೈವ ದಶಭಿರ್ದುಃಸಹಂ ತಥಾ ।
ದುಃಶಾಸನಂ ಚ ವಿಂಶತ್ಯಾ ವಿವ್ಯಾಧ ಶಿನಿಪುಂಗವಃ ॥ ೩೭ ॥

ಶಿನಿಪುಂಗವನಾದ ಸಾತ್ಯಕಿಯು ಚಿತ್ರಸೇನನನ್ನು ನೂರು ಬಾಣಗಳಿಂದಲೂ, ದುಸ್ಸನನನ್ನೂ ಹತ್ತು ಬಾಣಗಳಿಂದಲೂ ಹಾಗೂ ದುಶ್ಶಾಸನನನ್ನು ಇಪ್ಪತ್ತು ಬಾಣಗಳಿಂದಲೂ ಹೊಡೆದನು.

ಅಥಾನ್ಯದ್ಧನುರಾದಾಯ ಸ್ಯಾಲಸ್ತವ ವಿಶಾಂಪತೇ ।
ಅಷ್ಟಭಿಃ ಸಾತ್ಯಕಿಂ ವಿದ್ಧ್ವಾ ಪುನರ್ವಿವ್ಯಾಧ ಪಂಚಭಿಃ ॥ ೩೮ ॥

ಎಲೈ ರಾಜನೇ, ಆಗ ನಿನ್ನ ಭಾವಮೈದುನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಸಾತ್ಯಕಿಯನ್ನು ಎಂಟು ಬಾಣಗಳಿಂದ ಹೊಡೆದು, ಪುನಃ ಐದು ಬಾಣಗಳಿಂದ ಹೊಡೆದನು.

ದುಃಶಾಸನಶ್ಚ ದಶಭಿರ್ದುಃಸಹಶ್ಚ ತ್ರಿಭಿಃ ಶರೈಃ ।
ದುರ್ಮುಖಶ್ಚ ದ್ವಾದಶಭೀ ರಾಜನ್ ವಿವ್ಯಾಧ ಸಾತ್ಯಕಿಮ್ ॥ ೩೯ ॥

ಎಲೈ ರಾಜನೇ, ದುಶ್ಶಾಸನನು ಹತ್ತು ಬಾಣಗಳಿಂದಲೂ, ದುಸ್ಸಹನು ಮೂರು ಬಾಣಗಳಿಂದಲೂ, ದುರ್ಮುಖನು ಹನ್ನೆರಡು ಬಾಣಗಳಿಂದಲೂ ಸಾತ್ಯಕಿಯನ್ನು ಹೊಡೆದರು.

ದುರ್ಯೋಧನಸ್ತ್ರಿಸಪ್ತತ್ಯಾ ವಿದ್ಧ್ವಾ ಭಾರತ ಮಾಧವಮ್ ।
ತತೋಽಸ್ಯ ನಿಶಿತೈರ್ಬಾಣೈಸ್ತ್ರಿಭಿರ್ವಿವ್ಯಾಧ ಸಾರಥಿಮ್ ॥ ೪೦ ॥

ಎಲೈ ಭಾರತನೇ, ದುರ್ಯೋಧನನು ಮಧುಕುಲೋತ್ಪನ್ನನಾದ ಸಾತ್ಯಕಿಯನ್ನು ಎಪ್ಪತ್ಮೂರು ಬಾಣಗಳಿಂದ ಹೊಡೆದು, ಮೂರು ಹದವಾದ ಬಾಣಗಳಿಂದ ಅವನ ಸಾರಥಿಯನ್ನು ಹೊಡೆದನು.

ತಾನ್ ಸರ್ವಾನ್ ಸಹಿತಾನ್ ಶೂರಾನ್ ಯತಮಾನಾನ್ ಮಹಾರಥಾನ್ ।
ಪಂಚಭಿಃ ಪಂಚಭಿರ್ಬಾಣೈಃ ಪುನರ್ವಿವ್ಯಾಧ ಸಾತ್ಯಕಿಃ ॥ ೪೧ ॥

ಸಾತ್ಯಕಿಯು ತನ್ನ ಜೊತೆಯಲ್ಲಿಯುದ್ಧವನ್ನು ಮಾಡಲು ಪ್ರಯತ್ನಿಸುತ್ತಿದ್ದ ಒಟ್ಟಾದ ಆ ಎಲ್ಲ ಮಹಾರಥರ ಮೇಲೆ ಐದೈದು ಬಾಣಗಳನ್ನು ಪ್ರಯೋಗಿಸಿದನು.

ತತಃ ಸ ರಥಿನಾಂ ಶ್ರೇಷ್ಠಸ್ತವ ಪುತ್ರಸ್ಯ ಸಾರಥಿಮ್ ।
ಆಜಘಾನಾಶು ಭಲ್ಲೇನ ಸ ಹತೋ ನ್ಯಪತದ್ ಭುವಿ ॥ ೪೨ ॥

ಆನಂತರ ರಥಿಕರಲ್ಲಿ ಶ್ರೇಷ್ಠನಾದ ಅವನು ನಿನ್ನ ಪುತ್ರನ ಸಾರಥಿಯನ್ನು ಭಲ್ಲದಿಂದ ಶೀಘ್ರವಾಗಿ ಹೊಡೆದನು. ಅವನು ಮೃತನಾಗಿ ಭೂಮಿಯಲ್ಲಿ ಬಿದ್ದನು.

ಪಾತಿತೇ ಸಾರಥೌ ತಸ್ಮಿಂಸ್ತವ ಪುತ್ರರಥಃ ಪ್ರಭೋ ।
ವಾತಾಯಮಾನೈಸ್ತೈರಶ್ವೈರಪಾನೀಯತ ಸಂಗರಾತ್ ॥ ೪೩ ॥

ಎಲೈ ಪ್ರಭುವೇ, ಸಾರಥಿಯು ಹತನಾಗುತ್ತಿರಲು ನಿನ್ನ ಪುತ್ರನ ರಥವು ವಾಯುವೇಗವನ್ನು ಹೊಂದಿದ ಆಶ್ವಗಳಿಂದ ರಣರಂಗದಿಂದ ಹೊರಗೆ ಎಳೆದೊಯ್ಯಲ್ಪಟ್ಟಿತು.

ತತಸ್ತವ ಸುತಾ ರಾಜನ್ ಸೈನಿಕಾಶ್ಚ ವಿಶಾಂಪತೇ ।
ರಾಜ್ಞೋ ರಥಮಭಿಪ್ರೇಕ್ಷ್ಯ ವಿದ್ರುತಾಃ ಶತಶೋಽಭವನ್ ॥ ೪೪ ॥

ಎಲೈ ರಾಜನೇ, ಆಗ ನಿನ್ನ ಪುತ್ರರೂ ಮತ್ತು ಸೈನಿಕರೂ ರಾಜರಥವನ್ನು ನೋಡಿ ನೂರರ ಸಂಖ್ಯೆಯಲ್ಲಿ ಓಡಿ ಹೋದರು.

ವಿದ್ರುತಂ ತತ್ರ ತತ್ಸೈನ್ಯಂ ದೃಷ್ಟ್ವಾ ಭಾರತ ಸಾತ್ಯಕಿಃ ।
ಅವಾಕಿರಚ್ಛರೈಸ್ತೀಕ್ಷ್ಣೈ ರುಗ್ಮಪುಂಖೈಃ ಶಿಲಾಶಿತೈಃ ॥ ೪೫ ॥

ಎಲೈ ಭಾರತನೇ, ಓಡಿಹೋಗುತ್ತಿದ್ದ ಆ ಸೈನ್ಯವನ್ನು ನೋಡಿ ಸಾತ್ಯಕಿಯು ರುಗ್ಮಪುಂಖಗಳನ್ನು ಹೊಂದಿದ್ದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ತೀಕ್ಷ್ಣವಾದ ಬಾಣಗಳ ಮಳೆಯನ್ನು ಅವರ ಮೇಲೆ ಸುರಿಸಿದನು.

ವಿದ್ರಾವ್ಯ ಸರ್ವಸೈನ್ಯಾನಿ ತಾವಕಾನಿ ಸಮಂತತಃ ।
ಪ್ರಯಯೌ ಸಾತ್ಯಕೀ ರಾಜನ್ ಶ್ವೇತಾಶ್ವಸ್ಯ ರಥಂ ಪ್ರತಿ ॥ ೪೬ ॥

ಎಲೈ ರಾಜನೇ, ಸಾತ್ಯಕಿಯು ನಿನ್ನ ಎಲ್ಲಾ ಸೈನ್ಯಗಳನ್ನು ಎಲ್ಲ ಕಡೆಗಳಲ್ಲಿಯೂ ಓಡಿಸಿ ಅರ್ಜುನನ ರಥದ ಕಡೆಗೆ ಹೊರಟನು.

ತಂ ಶರಾನಾದದಾನಂ ಚ ರಕ್ಷಮಾಣಂ ಚ ಸಾರಥಿಮ್ ।
ಆತ್ಮಾನಂ ಮೋಚಯಂತಂ ಚ ತಾವಕಾಃ ಸಮಪೂಜಯನ್ ॥ ೪೭ ॥

ಸಾರಥಿಯನ್ನೂ ರಕ್ಷಿಸುತ್ತಾ ತನ್ನನ್ನೂ ರಕ್ಷಿಸಿಕೊಳ್ಳುತ್ತಾ ಬಾಣಗಳನ್ನು ತೆಗೆದುಕೊಂಡು ಪ್ರಯೋಗಿಸುತ್ತಿದ್ದ ಅವನನ್ನು ನಿನ್ನವರೂ ಪೂಜಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಡಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಏಳನೆಯ ಅಧ್ಯಾಯ

ಯುದ್ಧದಲ್ಲಿ ಸಾತ್ಯಕಿಯ ಪರಾಕ್ರಮ.

ಧೃತರಾಷ್ಟ್ರಃ

ಸಂಪ್ರಮೃದ್ಯ ಮಹತ್ ಸೈನ್ಯಂ ಯಾಂತಂ ಶೈನೇಯಮರ್ಜುನಮ್ ।
ನಿರ್ಹ್ರೀಕಾ ಮಮ ತೇ ಪುತ್ರಾಃ ಕಿಮಕುರ್ವತ ಸಂಜಯ ॥ ೧ ॥

ಧೃತರಾಷ್ಟ್ರ- ಎಲೈ ಸಂಜಯನೇ, ಸಾತ್ಯಕಿಯು ನಮ್ಮ ದೊಡ್ಡ ಸೈನ್ಯವನ್ನು ಮರ್ದಿಸಿ ಅರ್ಜುನನ ಬಳಿಗೆ ಹೋಗುವಾಗ ನಾಚಿಕೆಯಿಲ್ಲದ ನನ್ನ ಆ ಪುತ್ರರು ಏನು ಮಾಡಿದರು?

ಕಥಂ ಚೈಷಾಂ ತಥಾ ಯುದ್ಧೇ ಧೃತಿರಾಸೀನ್ಮುಮೂರ್ಷತಾಮ್ ।
ಶೈನೇಯಚರಿತಂ ದೃಷ್ಟ್ವಾ ಸದೃಶಂ ಸವ್ಯಸಾಚಿನಃ ॥ ೨ ॥

ಸಾತ್ಯಕಿಯು ಯುದ್ಧದಲ್ಲಿ ಅರ್ಜುನನಿಗೆ ಸದೃಶವಾದ ಕಾರ್ಯವನ್ನು ಮಾಡುತ್ತಿರುವುದನ್ನು ನೋಡಿ ಮರಣವು ಸನ್ನಿಹಿತವಾದ ನನ್ನ ಪುತ್ರರಿಗೆ ಯುದ್ಧದ ವಿಷಯದಲ್ಲಿ ಹೇಗೆ ಧೈರ್ಯವು ಬಂದಿತು?

ಕಂ ನು ವಕ್ಷ್ಯಂತಿ ತೇ ಕ್ಷತ್ರಂ ಸೈನ್ಯಮಧ್ಯೇ ಪರಾಜಿತಾಃ ।
ಕಥಂ ಚ ಸಾತ್ಯಕಿಯುರ್ದ್ಧೇ ವ್ಯತಿಕ್ರಾಂತೋ ಮಹಾಯಶಾಃ ॥ ೩ ॥

ಸೈನ್ಯಮಧ್ಯದಲ್ಲಿ ಪರಾಜಿತರಾದ ಅವರು ಕ್ಷತ್ರಿಯರನ್ನು ಕುರಿತು ಏನು ಹೇಳುವರು? ಮಹಾಕೀರ್ತಿವಂತನಾದ ಸಾತ್ಯಕಿಯಾದರೂ ಯುದ್ಧದಲ್ಲಿ ಅವರನ್ನು ಹೇಗೆ ದಾಟಿದನು?

ಕಥಂ ಚ ಮಮ ಪುತ್ರಾಣಾಂ ಜೀವತಾಂ ತತ್ರ ಸಂಜಯ ।
ಶೈನೇಯೋಽಭಿಯಯೌ ಯುದ್ಧೇ ತನ್ಮಾಚಕ್ಷ್ವ ತತ್ತ್ವತಃ ॥ ೪ ॥

ಎಲೈ ಸಂಜಯನೇ, ನನ್ನ ಪುತ್ರರು ಬದುಕಿರುವಾಗ ಸಾತ್ಯಕಿಯು ರಣರಂಗದಲ್ಲಿ ಅವರನ್ನು ಹೇಗೆ ದಾಟಿದನೆಂದು ನನಗೆ ಯಥಾರ್ಥವಾಗಿ ಹೇಳು.

ಆತ್ಯದ್ಭುತಮಿದಂ ತಾತ ತತ್ತಸ್ಯಾಶ್ಚರ್ಯಕೋಮ್ಯಹಮ್ ।
ಏಕಸ್ಯ ಬಹುಭಿರ್ಯದ್ಧಂ ಶತ್ರುಭಿರ್ವೈ ಮಹಾರಥೈಃ ॥ ೫ ॥

ಎಲೈ ಪ್ರೀತಿಪಾತ್ರನೇ, ಒಬ್ಬನು ಮಹಾರಥರಾದ ಅನೇಕ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡಿದ ಅದ್ಭುತ ವಿಷಯವನ್ನು ನಾನು ನಿನ್ನಿಂದ ಕೇಳುತ್ತಿದ್ದೇನೆ.

ವಿಪರೀತಮಹಂ ಮನ್ಯೇ ಮಂದಭಾಗ್ಯಾನ್ ಸುತಾನ್ ಪ್ರತಿ ।
ಯತ್ರಾವದ್ಧ್ಯಂತ ಸಮರೇ ಸಾತ್ವತೇನ ಮಹಾತ್ಮನಾ ॥ ೬ ॥

ಮಹಾತ್ಮನಾದ ಸಾತ್ಯಕಿಯಿಂದ ಯುದ್ಧದಲ್ಲಿ ಪರಾಜಿತರಾದ, ನನ್ನ ಮಂದಭಾಗ್ಯರಾದ ಪುತ್ರರಿಗೆ ಎಲ್ಲವೂ ತಲೆಕೆಳಗಾಗಿದೆ ಎಂದು ನಾನು ಭಾವಿಸುತ್ತೇನೆ.

ಏಕಸ್ಯ ಹಿ ನ ಪರ್ಯಾಪ್ತಂ ಮತ್ಸೈನ್ಯಂ ತಸ್ಯ ಸಂಜಯ ।
ಕ್ರುದ್ಧಸ್ಯ ಯುಯುಧಾನಸ್ಯ ಸರ್ವೇ ತಿಷ್ಠಂತು ಪಾಂಡವಾಃ ॥ ೭ ॥

ಎಲೈ ಸಂಜಯನೇ, ಎಲ್ಲ ಪಾಂಡವರು ಹಾಗಿರಲಿ. ಕೋಪಗೊಂಡ ಸಾತ್ಯಕಿಯೊಬ್ಬನಿಗೇ ನನ್ನ ಸೈನ್ಯವು ಸಾಕಾಗುವುದಿಲ್ಲ.

ನಿರ್ಜಿತ್ಯ ಸಮರೇ ದ್ರೋಣಂ ಕೃತಿನಂ ಯುದ್ಧದುರ್ಮದಮ್ ।
ಯಥಾ ಪಶುಗಣಾನ್ ಸಿಂಹಸ್ತದ್ವದ್ಧಂತಾ ಸುತಾನ್ ಮಮ ॥ ೮ ॥

ಯುದ್ಧದುರ್ಮದರೂ, ಕುಶಲರೂ ಆದ ದ್ರೋಣರನ್ನು ಯುದ್ಧದಲ್ಲಿ ಪರಾಭವಗೊಳಿಸಿ ಸಾತ್ಯಕಿಯು ಸಿಂಹವು ಪಶುಸಮೂಹವನ್ನು ಕೊಲ್ಲುವಂತೆ ನನ್ನ ಪುತ್ರರನ್ನು ಕೊಲ್ಲುವನು.

ಕೃತವರ್ಮಾದಿಭಿಃ ಶೂರೈರ್ತತ್ತೈರ್ಬಹುಭಿರಾಹವೇ ।
ಯುಯುಧಾನೋ ನ ಶಕ್ತೋ ಹಂತುಂ ಯಃ ಪುರುಷರ್ಷಭಃ ॥ ೯ ॥

ಕೃತವರ್ಮ ಮೊದಲಾದ ಶೂರರು ರಣರಂಗದಲ್ಲಿ ಬಹಳ ಪ್ರಯತ್ನಪಟ್ಟರೂ ಪುರುಷಶ್ರೇಷ್ಠನಾದ ಯುಯುಧಾನನನ್ನು ಕೊಲ್ಲಲು ಸಮರ್ಥರಾಗಲಿಲ್ಲ.

ನೈತದೀದೃಶಕಂ ಯುದ್ಧಂ ಕೃತವಾಂಸ್ತತ್ರ ಫಲ್ಗುನಃ ।
ಯಾದೃಶಂ ಕೃತವಾನ್ ಯುದ್ಧಂ ಶಿನೇರ್ನಪ್ತಾ ಮಹಾಯಶಾಃ ॥ ೧೦ ॥

ಶಿನಿಯ ಪೌತ್ರನಾದ ಮಹಾಕೀರ್ತಿವಂತನಾದ ಸಾತ್ಯಕಿಯು ಎಂತಹ ಯುದ್ಧವನ್ನು ಮಾಡಿದನೋ ಅಂತಹ ಯುದ್ಧವನ್ನು ಅಲ್ಲಿ ಅರ್ಜುನನೂ ಮಾಡಲಿಲ್ಲ.

ಸಂಜಯಃ

ಶೃಣುಷ್ವ ರಾಜನ್ ಸಂಗ್ರಾಮಂ ನರವಾಜಿಗಜಕ್ಷಯಮ್ ।
ದುರ್ಯೋಧನಾಪನೀತೇನ ತವ ದುರ್ಮಂತ್ರಿತೇನ ಚ ॥ ೧೧ ॥

ಸಂಜಯ– ಎಲೈ ರಾಜನೇ, ದುರ್ಯೋಧನನ ಅಪಚಾರದಿಂದ ಮತ್ತು ನಿನ್ನ ದುರ್ಮಂತ್ರಣದಿಂದ ಉಂಟಾದ ಪದಾತಿ-ಗಜಾಶ್ವಕ್ಷಯಕಾರಕವಾದ ಯುದ್ಧವನ್ನು ಕೇಳು.

ತೇ ಪುನಃ ಸನ್ನ್ಯವರ್ತಂತ ಸರ್ವೇ ಸಂಶಪ್ತಕಾ ಮಿಥಃ ।
ಪರಾಂ ಯುದ್ಧೇ ಮತಿಂ ಕೃತ್ವಾ ಪುತ್ರಸ್ಯ ತವ ಶಾಸನಾತ್ ॥ ೧೨ ॥

ನಿನ್ನ ಪುತ್ರನ ಶಾಸನವನ್ನು ಕೇಳಿ ಸಂಶಪ್ತಕರು ಪರಸ್ಪರವಾಗಿ ಮಾತನಾಡಿಕೊಂಡು, ಯುದ್ಧ ಮಾಡುವುದರಲ್ಲಿ ಉದಾತ್ತವಾದ ಬುದ್ಧಿಯನ್ನು ಹೊಂದಿ, ಎಲ್ಲರೂ ಹಿಂದಿರುಗಿದರು.

ತ್ರೀಣಿ ಸಾದಿಸಹಸ್ರಾಣಿ ದುರ್ಯೋಧನಪುರೋಗಮಾಃ ।
ಶಕಾಃ ಕಾಂಬೋಜಬಾಹ್ಲೀಕಾ ಯವನಾಃ ಪಾರದಾಸ್ತಥಾ ॥ ೧೩ ॥

ಕುಣಿಂದಾಸ್ತಂಗಣಾಂಬಷ್ಠಾಃ ಪೈಶಾಚಾಶ್ಚ ಸಮಂದರಾಃ ।
ಅಭ್ಯದ್ರವಂತ ಶೈನೇಯಂ ಶಲಭಾಃ ಪಾವಕಂ ಯಥಾ ॥ ೧೪ ॥

ದುರ್ಯೋಧನನನ್ನು ಮುಂದೆ ಮಾಡಿಕೊಂಡ ಮೂರು ಸಾವಿರ ಅಶ್ವಾರೋಹಿಗಳೂ, ಶಕರೂ, ಕಾಂಬೋಜರೂ, ಬಾಹ್ಲೀಕರೂ, ಯವನರೂ,

ಪಾರದರೂ, ಕುಣಿಂದರೂ, ತಂಗಣರೂ, ಆಂಬಷ್ಠರೂ, ಪೈಶಾಚರೂ, ಮಂದರರೂ ಎಲ್ಲರೂ ಪತಂಗಗಳು ಅಗ್ನಿಯನ್ನು ಮುತ್ತಿದಂತೆ ಸಾತ್ಯಕಿಯನ್ನು ಮುತ್ತಿದರು.

ಯುಕ್ತಾಶ್ಚ ಪಾರ್ವತೀಯಾನಾಂ ರಥಾಃ ಪಾಷಾಣಯೋಧಿನಾಮ್ ।
ಶೂರಾಃ ಪಂಚಶತಾ ರಾಜನ್ ಶೈನೇಯಂ ಸಮುಪಾದ್ರವನ್ ॥ ೧೫ ॥

ಎಲೈ ರಾಜನೇ, ಬಂಡೆಗಳಿಂದ ಯುದ್ಧವನ್ನು ಮಾಡುವ ಪರ್ವತಪ್ರದೇಶದ ಶೂರರಾದ ಯೋಧರು ಸಜ್ಜುಗೊಳಿಸಿದ ಐದುನೂರು ರಥಗಳಿಂದ ಸಾತ್ಯಕಿಯ ಕಡೆಗೆ ಧಾವಿಸಿದರು.

ತತೋ ರಥಸಹಸ್ರೇಣ ಮಹಾರಥಶತೇನ ಚ ।
ದ್ವಿರದಾನಾಂ ಸಹಸ್ರೇಣ ದ್ವಿಸಾಹಸ್ರೈಶ್ಚ ವಾಜಿಭಿಃ ॥ ೧೬ ॥

ಶರವರ್ಷಾಣಿ ಮುಂಚಂತೋ ವಿವಿಧಾನಿ ಮಹಾರಥಾಃ ।
ಅಭ್ಯದ್ರವಂತ ಶೈನೇಯಮಸಂಖ್ಯೇಯಾಶ್ಚ ಪತ್ತಯಃ ॥ ೧೭ ॥

ಆನಂತರ ಒಂದು ಸಹಸ್ರ ರಥಗಳಿಂದಲೂ, ನೂರು ಮಹಾರಥರಿಂದಲೂ, ಸಹಸ್ರ ಗಜಗಳಿಂದಲೂ, ಎರಡು ಸಹಸ್ರ ಅಶ್ವಗಳಿಂದಲೂ, ಅಸಂಖ್ಯಾತರಾದ ಪದಾತಿಗಳಿಂದಲೂ ಸಹಿತರಾದ ಮಹಾರಥರು ಅನೇಕ ವಿಧವಾದ ಬಾಣಗಳ ಮಳೆಯನ್ನು ಸುರಿಸುತ್ತಾ ಸಾತ್ಯಕಿಯ ಮೇಲೆ ಎರಗಿದರು.

ತಾಂಶ್ಚ ಸಂಚೋದಯನ್ ಸರ್ವಾನ್ ಘ್ನತೈನಮಿತಿ ಭಾರತ ।
ದುಃಶಾಸನೋ ಮಹಾರಾಜ ಸಾತ್ಯಕಿಂ ಪರ್ಯವಾರಯತ್ ॥ ೧೮ ॥

ಎಲೈ ಭಾರತನೇ, ಮಹಾರಾಜನೇ, ದುಶ್ಶಾಸನನು ಅವರೆಲ್ಲರನ್ನೂ ಈ ಸಾತ್ಯಕಿಯನ್ನು ಕೊಲ್ಲಿ ಎಂದು ಪ್ರಚೋದಿಸುತ್ತಾ ಸಾತ್ಯಕಿಯನ್ನು ತಡೆದನು.

ತತ್ರಾದ್ಭುತಮಪಶ್ಯಾಮ ಶೈನೇಯಚರಿತಂ ಮಹತ್ ।
ಯದೇಕೋ ಬಹುಭಿಃ ಸಾರ್ಧಮಸಂಭ್ರಾಂತಮಯುದ್ಧ್ಯತ ॥ ೧೯ ॥

ಒಬ್ಬನೇ ಆದ ಸಾತ್ಯಕಿಯು ಅನೇಕ ಮಹಾರಥರ ಜೊತೆಯಲ್ಲಿ ಗಾಬರಿಯಿಲ್ಲದೆ ಯುದ್ಧವನ್ನು ಮಾಡಿದ ಸಾತ್ಯಕಿಯ ದೊಡ್ಡ ಅದ್ಭುತವಾದ ಚರಿತೆಯನ್ನು ನಾವು ಅಲ್ಲಿ ನೋಡಿದೆವು.

ಅವಧೀಚ್ಚ ರಥಾನೀಕಂ ದ್ವಿರದಾನಾಂ ಚ ತದ್ಬಲಮ್ ।
ಸಾದಿನಶ್ಚೈವ ತಾನ್ ಸರ್ವಾನ್ ದಸ್ಯೂನಪಿ ಚ ಸರ್ವಶಃ ॥ ೨೦ ॥

ಅವನು ರಥಸಮೂಹವನ್ನೂ, ಗಜಸೇನೆಯನ್ನೂ, ಆ ಎಲ್ಲ ಅಶ್ವಾರೋಹಿಗಳನ್ನೂ ಮತ್ತು ದಸ್ಯುಗಳನ್ನೂ ಎಲ್ಲ ಕಡೆಗಳಲ್ಲಿಯೂ ಕೊಂದನು.

ತತ್ರ ಚಕ್ರೈರ್ವಿಮಥಿತೈರ್ಭಗ್ನೈಶ್ಚ ಪರಮಾಯುಧೈಃ ।
ಅಕ್ಷೈಶ್ಚ ಬಹುಧಾ ಭಗ್ನೈರೀಷಾದಂಡಕಬಂಧುರೈಃ ॥ ೨೧ ॥

ಕೂಬರೈರ್ಮಥಿತೈಶ್ಚಾಪಿ ಧ್ವಜೈಶ್ಚಾಪಿ ನಿಪಾತಿತೈಃ ।
ವರ್ಮಭಿಶ್ಚಾಮರೈಶ್ಚೈವ ವ್ಯವಕೀರ್ಣಾ ವಸುಂಧರಾ ॥ ೨೨ ॥

ಅಲ್ಲಿ ಮುರಿದ ಚಕ್ರಗಳು, ಭಗ್ನವಾದ ಶ್ರೇಷ್ಠವಾದ ಆಯುಧಗಳು, ಬಹಳವಾಗಿ ಮುರಿದುಹೋದ ರಥದ ತೂಬುಗಳು, ಮೂಕಿಯ ಮರಗಳು, ಬಂಧುರಗಳು, ಭಗ್ನವಾದ ಕೂಬರಗಳು, ಕೆಡವಲ್ಪಟ್ಟ ಧ್ವಜಗಳು, ಕವಚಗಳು ಮತ್ತು ಚಾಮರಗಳು, ಇವುಗಳಿಂದ ಭೂಮಿಯು ತುಂಬಿಹೋಯಿತು.

ಸ್ರಗ್ಭಿರಾಭರಣೈರ್ವಸ್ತ್ರೈರನುಕರ್ಷೈಶ್ಚ ಮಾರಿಷ ।
ಸಂಛನ್ನಾ ವಸುಧಾ ತತ್ರ ದ್ಯೌರ್ಗ್ರಹೈರಿವ ಭಾರತ ॥ ೨೩ ॥

ಎಲೈ ಪೂಜ್ಯನೇ, ಭಾರತನೇ, ಅಲ್ಲಿ ಮಾಲೆಗಳಿಂದಲೂ, ಆಭರಣಗಳಿಂದಲೂ, ವಸ್ತ್ರಗಳಿಂದಲೂ, ಸಣ್ಣನೊಗಗಳಿಂದಲೂ ಭೂಮಿಯು ಆಕಾಶವು ಗ್ರಹಗಳಿಂದ ತುಂಬಿ ಹೋದಂತೆ ತುಂಬಿಹೋಯಿತು.

ಗಿರಿರೂಪಧರಾಶ್ಚಾಪಿ ಪತಿತಾಃ ಕುಂಜರೋತ್ತಮಾಃ ।
ಅಂಜನಸ್ಯ ಕುಲೇ ಜಾತಾ ವಾಮನಸ್ಯ ಚ ಭಾರತ ।
ಸುಪ್ರತೀಕಕುಲೇ ಜಾತಾ ಮಹಾಪದ್ಮಕುಲೇ ತಥಾ ॥ ೨೪ ॥

ಐರಾವತಕುಲೇ ಚೈವ ತಥಾನ್ಯೇಷು ಕುಲೇಷು ಚ ।
ಜಾತಾ ದಂತಿವರಾ ರಾಜನ್ ಶೇರತೇ ಬಹವೋ ಹತಾಃ ।
ಹತಾಃ ಸಾತ್ವತವೀರೇಣ ನಾರಾಚೈರಗ್ನಿಸನ್ನಿಭೈಃ ॥ ೨೫ ॥

ಪರ್ವತಪ್ರಾಯವಾಗಿದ್ದ ಶ್ರೇಷ್ಠ ಗಜಗಳು ಬಿದ್ದವು. ದಿಗ್ಗಜಗಳಾದ ಅಂಜನನ ಕುಲದಲ್ಲಿ, ವಾಮನನ ಕುಲದಲ್ಲಿ, ಐರಾವತ ಕುಲದಲ್ಲಿ, ಮಹಾಪದ್ಮ ಕುಲದಲ್ಲಿ, ಹಾಗೆಯೇ ಸುಪ್ರತೀಕ ಕುಲದಲ್ಲಿಮತ್ತು ಬೇರೆ ಬೇರೆ ಕುಲದಲ್ಲಿ ಜನಿಸಿದ ಶ್ರೇಷ್ಠವಾದ ಅನೇಕ ಗಜಗಳು, ಎಲೈ ರಾಜನೇ, ಭಾರತನೇ, ಸತ್ತು ಮಲಗಿದವು. ಸಾತ್ವತವೀರನಾದ ಸಾತ್ಯಕಿಯಿಂದ ಆಗ್ನಿಸದೃಶವಾದ ನಾರಾಚಗಳಿಂದ ಅವು ಹತವಾದವು.

ವನಾಯುಜಾನ್ ಪಾರ್ವತೀಯಾನ್ ಕಾಂಬೋಜಾರಟ್ಟಬಾಹ್ಲಿಕಾನ್ ।
ತಥಾ ಹಯವರಾನ್ ರಾಜನ್ ನಿಜಘ್ನೇ ತತ್ರ ಸಾತ್ಯಕಿಃ ॥ ೨೬ ॥

ಎಲೈ ರಾಜನೇ, ಅಲ್ಲಿ ಸಾತ್ಯಕಿಯು ವನಾಯು ದೇಶದ, ಪರ್ವತದೇಶದ, ಕಾಂಬೋಜ, ಅರಟ್ಟಮತ್ತು ಬಾಹ್ಲೀಕ ದೇಶದ ಶ್ರೇಷ್ಠವಾದ ಅಶ್ವಗಳನ್ನು ಕೊಂದನು.

ನಾನಾದೇಶಸಮುತ್ಥಾಂಶ್ಚ ನಾನಾಜಾತ್ಯಾಂಶ್ಚ ಪತ್ತಿನಃ ।
ನಿಜಘ್ನೇ ತತ್ರ ಶೈನೇಯಃ ಶತಶೋಽಥ ಸಹಸ್ರಶಃ ॥ ೨೭ ॥

ಸಾತ್ಯಕಿಯು ಅಲ್ಲಿನಾನಾ ದೇಶಗಳಿಂದ ಬಂದ ನಾನಾ ಜಾತಿಯ ಪದಾತಿಗಳನ್ನು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಕೊಂದನು.

ತೇಷು ಪ್ರಕಾಲ್ಯಮಾನೇಷು ದಸ್ಯೂನ್ ದುಃಶಾಸನೋಽಬ್ರವೀತ್ ।
ನಿವರ್ತಧ್ವಮಧರ್ಮಜ್ಞಾ ಯುದ್ಧ್ಯಧ್ವಂ ಕಿಂ ಸೃತೇನ ವಃ ॥ ೨೮ ॥

ಸೈನ್ಯವು ಹಾಗೆ ಸಾತ್ಯಕಿಯಿಂದ ಅಟ್ಟಾಡಲ್ಪಡುತ್ತಿರಲು ದುಶ್ಶಾಸನನು ದಸ್ಯುಗಳನ್ನು ಕುರಿತು ಧರ್ಮಜ್ಞಾನಶೂನ್ಯರಾದವರೇ ಏತಕ್ಕೆ ಓಡುತ್ತಿದ್ದೀರಿ? ಹಿಂದಿರುಗಿ ಬಂದು ಯುದ್ಧವನ್ನು ಮಾಡಿ ಎಂದು ಹೇಳಿದನು.

ತಾಂಶ್ಚಾಪಿ ಸರ್ವಾನ್ ಸಂಪ್ರೇಕ್ಷ್ಯ ಪುತ್ರೋ ದುಃಶಾಸನಸ್ತವ ।
ಪಾಷಾಣಯೋಧಿನಃ ಶೂರಾನ್ ಪಾರ್ವತೀಯಾನಚೋದಯತ್ ॥೨೯॥

ಅಶ್ಮಯುದ್ಧೇಷು ಕುಶಲಾ ನೈತಜ್ಜಾನಾತಿ ಸಾತ್ಯಕಿಃ ।
ಅಶ್ಮಯುದ್ಧಮಜಾನಂತಂ ಘ್ನತೈನಂ ಯುದ್ಧಕಾಮುಕಮ್ ॥ ೩೦ ॥

ಪರ್ವತಪ್ರದೇಶದ ಪಾಷಾಣಯೋಧಿಗಳಾದ ಎಲ್ಲ ಶೂರರನ್ನೂ ನೋಡಿ ನಿನ್ನ ಪುತ್ರನಾದ ದುಶ್ಶಾಸನನು, ಶಿಲಾಯುದ್ಧರಲ್ಲಿ ಕುಶಲರಾದ ಶೂರರೇ, ಸಾತ್ಯಕಿಗೆ ಈ ಯುದ್ಧದ ಜ್ಞಾನವಿಲ್ಲ. ಶಿಲಾಯುದ್ಧವನ್ನು ತಿಳಿಯದೆ ಯುದ್ಧವನ್ನು ಮಾಡಲು ಬಯಸಿರುವ ಇವನನ್ನು ಕೊಲ್ಲಿ.

ತಥೈವ ಕುರವಃ ಸರ್ವೇ ನಾಶ್ಮಯುದ್ಧವಿಶಾರದಾಃ ।
ಅಭದ್ರವತ ಮಾ ಭೈಷ್ಟ ನ ವಃ ಪ್ರಾಪ್ಸ್ಯತಿ ಸಾತ್ಯಕಿಃ ॥ ೩೧ ॥

ಹಾಗೆಯೇ ಕುರುಗಳು ಯಾರೂ ಅಶ್ಮಯುದ್ಧದಲ್ಲಿ ವಿಶಾರದರಲ್ಲ. ಆದ್ದರಿಂದ ಹೆದರಬೇಡಿ, ಮುನ್ನುಗ್ಗಿ. ಸಾತ್ಯಕಿಯು ನಿಮ್ಮ ಬಳಿಗೆ ಬರುವುದಿಲ್ಲ ಎಂದು ಪ್ರಚೋದಿಸಿದನು.

ತತೋ ಗಜಶಿಶುಪ್ರಖ್ಯೈ ರುಪಲೈಃ ಶೈಲವಾಸಿನಃ ।
ಉದ್ಯತೈರ್ಯುಯುಧಾನಸ್ಯ ಸ್ಥಿತಾ ಮರಣಕಾಂಕ್ಷಿಣಃ ॥ ೩೨ ॥

ಆಗ ಪರ್ವತವಾಸಿಗಳಾದ ಶೂರರು ಆನೆಯ ಮರಿಗಳಂತಹ ಬಂಡೆಗಳನ್ನು ಬಾಹುಗಳಿಂದ ಎತ್ತಿಹಿಡಿದು ಸಾತ್ಯಕಿಯ ವಧೆಯನ್ನು ಮಾಡಲು ಬಯಸಿ ನಿಂತರು.

ಕ್ಷೇಪಣೀಯೈಸ್ತಥಾಪ್ಯನ್ಯೇ ಸಾತ್ವತಸ್ಯ ವಧೈಷಿಣಃ ।
ಚೋದಿತಾಸ್ತವ ಪುತ್ರೇಣ ರುರುಧುಃ ಸರ್ವತೋ ದಿಶಮ್ ॥ ೩೩ ॥

ನಿನ್ನ ಪುತ್ರನಿಂದ ಪ್ರಚೋದಿತರಾದ ಇನ್ನು ಕೆಲವು ಶೂರರು ಸಾತ್ಯಕಿಯ ವಧೆಯನ್ನು ಬಯಸಿ, ಕ್ಷೇಪಣಿಗಳನ್ನು (ಮಿಸೈಲ್ಸ್) ಸಿದ್ಧಗೊಳಿಸಿ, ಎಲ್ಲ ದಿಕ್ಕುಗಳಲ್ಲಿಯೂ ಅವನನ್ನು ತಡೆದರು.

ತೇಷಾಮಾಪತತಾಮೇವ ಶಿಲಾಯುದ್ಧಂ ಚಿಕೀರ್ಷತಾಮ್ ।
ಸಾತ್ಯಕಿಃ ಪ್ರತಿಸಂಧಾಯ ತ್ರಿಂಶತಂ ಪ್ರಾಹಿಣೋಚ್ಛರಾನ್ ॥ ೩೪ ॥

ಹೀಗೆ ಶಿಲಾಯುದ್ಧವನ್ನು ಮಾಡಲು ಬಯಸಿ ತನ್ನೆಡೆಗೆ ಬರುತ್ತಿದ್ದ ಅವರನ್ನು ನೋಡಿ ಸಾತ್ಯಕಿಯು ಮುನ್ನೂರು ಬಾಣಗಳನ್ನು ಬಿಲ್ಲಿನಲ್ಲಿ ಹೂಡಿ ಅವರನ್ನು ಹೊಡೆದನು.

ತಾಮಶ್ಮವೃಷ್ಟಿಂ ತುಮುಲಾಂ ಪಾರ್ವತೀಯೈಃ ಸಮೀರಿತಾಮ್ ।
ಬಭೇದೋರಗಸಂಕಾಶೈರ್ನಾರಾಚೈಃ ಶಿನಿಪುಂಗವಃ ॥ ೩೫ ॥

ಶಿನಿಪುಂಗವನಾದ ಅವನು ಪರ್ವತಪ್ರದೇಶದ ಶೂರರಿಂದ ಮಾಡಲ್ಪಟ್ಟ ಶಿಲಾವೃಷ್ಟಿಯನ್ನು ಸರ್ಪದಂತಿದ್ದ ನಾರಾಚಗಳಿಂದ ಭೇದಿಸಿದನು.

ತೈರಶ್ಮಚೂರ್ಣೈರ್ದೀಪ್ಯದ್ಭಿಃ ಖದ್ಯೋತಾನಾಮಿವ ವ್ರಜೈಃ ।
ಪ್ರಾಯಃ ಸೈನ್ಯಾನ್ಯವಧ್ಯಂತ ಹಾಹಾಭೂತಾನಿ ಮಾರಿಷ ॥ ೩೬ ॥

ಎಲೈ ಪೂಜ್ಯನೇ, ಅವನ ನಾರಾಚಗಳ ಸಂಘರ್ಷದಿಂದ ಉಂಟಾದ, ಮಿಣುಕು ಹುಳಗಳ ಸಮೂಹದಂತಿರುವ ಜ್ವಲಿಸುವ ಶಿಲೆಯ ಚೂರುಗಳು ಪ್ರಾಯಃ ನಿನ್ನ ಸೈನ್ಯಗಳನ್ನು ಕೊಂದು ಸೈನ್ಯದಲ್ಲಿ ಹಾಹಾಕಾರವುಂಟಾಯಿತು.

ತತಃ ಪಂಚಶತಾಃ ಶೂರಾಃ ಸಮುದ್ಯತಮಹಾಶಿಲಾಃ ।
ನಿಕೃತ್ತಬಾಹವೋ ರಾಜನ್ನಿಪೇತುರ್ಧರಣೀತಳೇ ॥ ೩೭ ॥

ಅನಂತರ ಕೈಯಲ್ಲಿ ದೊಡ್ಡ ಬಂಡೆಗಳನ್ನು ಎತ್ತಿಹಿಡಿದ ಶೂರರ ಬಾಹುಗಳು ಸಾತ್ಯಕಿಯಿಂದ ಕತ್ತರಿಸಲ್ಪಟ್ಟು ರಾಜನೇ, ಐದು ನೂರು ಶೂರರು ಭೂತಳದಲ್ಲಿ ಬಿದ್ದರು.

ಪಾಷಾಣಯೋಧಿನಃ ಶೂರಾನ್ ಯತಮಾನಾನವಸ್ಥಿತಾನ್ ।
ಅವಧೀದ್ ಬಹುಸಾಹಸ್ರಾಂಸ್ತದದ್ಭುತಮಿವಾಭವತ್ ॥ ೩೮ ॥

ಬಹಳ ಪ್ರಯತ್ನಪಟ್ಟು ರಣರಂಗದಲ್ಲಿ ನಿಂತ ಅನೇಕ ಸಹಸ್ರಸಂಖ್ಯೆಯ ಶೂರರಾದ ಪಾಷಾಣ ಯೋಧರನ್ನು ಸಾತ್ಯಕಿಯು ಕೊಂದನು. ಅದು ಅದ್ಭುತವಾಗಿದ್ದಿತು.

ತತಃ ಪುನರ್ಬಸ್ತಮುಖೈರಶ್ಮವೃಷ್ಟಿಂ ಸಮಂತತಃ ।
ಅಯೋಹಸ್ತೈಃ ಶೂಲಹಸ್ತೈರ್ದರದೈಃ ಖಶತಂಗಣೈಃ ॥ ೩೯ ॥

ಅಂಬಷ್ಠೈಶ್ಚ ಕುಣಿಂದೈಶ್ಚ ಕ್ಷಿಪ್ತಾಂ ಕ್ಷಿಪ್ತಾಂ ಸ ಸಾತ್ಯಕಿಃ ।
ನಾರಾಚೈಃ ಪ್ರತಿವಿವ್ಯಾಧ ಪ್ರೇಕ್ಷಮಾಣೋ ಮಹಾಬಲಃ ॥ ೪೦ ॥

ಅನಂತರ ಮಹಾಬಲನಾದ ಸಾತ್ಯಕಿಯು ಎಲ್ಲಕಡೆಗಳಲ್ಲಿಯೂ ಬಸ್ತಮುಖದಿಂದ, ಕಬ್ಬಿಣದ ಆಯುಧವನ್ನೂ ಮತ್ತು ಶೂಲವನ್ನೂ ಕೈಯಲ್ಲಿ ಹಿಡಿದ ದರದರಿಂದ, ಖಶರಿಂದ, ತಂಗಣರಿಂದ, ಅಂಬಷ್ಠರಿಂದ, ಕುಣಿಂದರಿಂದ ಎಸೆಯಲ್ಪಟ್ಟ ಶಿಲೆಗಳೆಲ್ಲವನ್ನೂ ಮಹಾಬಲನಾದ ಅವನು ನೋಡುತ್ತಾ ನಾರಾಚಗಳಿಂದ ಹೊಡೆದನು.

ಅದ್ರೀಣಾಂ ಭಧ್ಯಮಾನಾನಾಮಂತರಿಕ್ಷೇ ಶಿತೈಃ ಶರೈಃ ।
ಶಬ್ದೇನ ಪ್ರಾದ್ರವನ್ ರಾಜನ್ ಗಜಾಶ್ವರಥಪತ್ತಯಃ ॥ ೪೧ ॥

ಎಲೈ ರಾಜನೇ, ಪರ್ವತದಂತಹ ದೊಡ್ಡ ಬಂಡೆಗಳು ಅಂತರಿಕ್ಷದಲ್ಲಿ ಸಾತ್ಯಕಿಯ ನಾರಾಚದಿಂದ ಹೊಡೆಯಲ್ಪಟ್ಟು ಭಗ್ನವಾಗುವಾಗ ಉಂಟಾದ ಶಬ್ದಗಳಿಂದ ಗಜಾಶ್ವ-ರಥ-ಪದಾತಿಗಳು ಓಡಿ ಹೋದರು.

ಅಶ್ಮಚೂರ್ಣೈಃ ಸಮಾಕೀರ್ಣಾ ಮನುಷ್ಯಾಶ್ಚ ವಯಾಂಸಿ ಚ ।
ನಾಶಕ್ನುವನ್ನವಸ್ಥಾತುಂ ಭ್ರಮರೈರಿವ ದಂಸಿತಾಃ ॥ ೪೨ ॥

ಕಲ್ಲಿನ ಪುಡಿಗಳಿಂದ ತುಂಬಿಹೋದ ಮನುಷ್ಯರು ಮತ್ತು ದನ್ಯುಗಳು ಕಣಜದಿಂದ ಕಡಿಯಲ್ಪಟ್ಟವರಂತೆ ಅಲ್ಲಿ ನಿಲ್ಲಲು ಸಮರ್ಥರಾಗಲಿಲ್ಲ.

ಹತಶಿಷ್ಟಾ ವಿರುಧಿರಾ ಭಿನ್ನಮಸ್ತಕಪಿಂಡಿಕಾಃ ।
ಕುಂಜರಾಃ ಸಂನ್ಯವರ್ತಂತ ಯುಯುಧಾನರಥಂ ಪ್ರತಿ ॥ ೪೩ ॥

ಅಳಿದುಳಿದ ರಕ್ತವನ್ನು ಸ್ರವಿಸುತ್ತಿದ್ದ ಶರೀರವುಳ್ಳ ಮತ್ತು ತಲೆಗಳನ್ನು ಒಡೆದುಕೊಂಡ ಗಜಗಳು ಸಾತ್ಯಕಿಯ ರಥದ ಬಳಿಗೆ ಬಂದವು.

ತತಃ ಶಬ್ದಃ ಸಮಭವತ್ತವ ಸೈನ್ಯಸ್ಯ ಮಾರಿಷ ।
ಮಾಧವೇನಾರ್ದ್ಯಮಾನಸ್ಯ ಸಾಗರಸ್ಯೇವ ದಾರುಣಃ ॥ ೪೪ ॥

ಎಲೈ ಪೂಜ್ಯನೇ, ಆಗ ಸಾತ್ಯಕಿಯಿಂದ ಪೀಡಿಸಲ್ಪಡುವ ಗಜಸೇನೆಯ ಶಬ್ದವು ಸಮುದ್ರಘೋಷದಂತೆ ದಾರುಣವಾಗಿದ್ದಿತು.

ತಂ ಶಬ್ದಂ ತುಮುಲಂ ಶ್ರುತ್ವಾ ದ್ರೋಣೋ ಯಂತಾರಮಬ್ರವೀತ್ ।
ಏಷ ಸೂತ ರಣೇ ಕ್ರುದ್ಧಃ ಸಾತ್ವತಾನಾಂ ಮಹಾರಥಃ ॥ ೪೫ ॥

ದಾರಯನ್ ಬಹುಧಾ ಸೈನ್ಯಂ ರಣೇ ಚರತಿ ಕಾಲವತ್ ।
ಯತ್ರೈಷ ಶಬ್ದಸ್ತುಮುಲಸ್ತತ್ರ ಸೂತ ರಥಂ ನಯ ॥ ೪೬ ॥

ಆ ತೀವ್ರವಾದ ಶಬ್ದವನ್ನು ಕೇಳಿದ ದ್ರೋಣರು ತಮ್ಮ ಸಾರಥಿಯನ್ನು ಕುರಿತು ಎಲೈ ಸಾರಥಿಯೇ, ರಣರಂಗದಲ್ಲಿ ಸಾತ್ವತ ಮಹಾರಥನಾದ ಸಾತ್ಯಕಿಯು ನಮ್ಮ

ಸೈನ್ಯವನ್ನು ಬಹಳವಾಗಿ ಭಗ್ನಗೊಳಿಸುತ್ತಾ ಮೃತ್ಯುವಿನಂತೆ ಸಂಚರಿಸುತ್ತಿದ್ದಾನೆ. ಎಲೈ ಸೂತನೇ, ಈ ತೀವ್ರವಾದ ಶಬ್ದವು ಬರುತ್ತಿರುವ ಕಡೆಗೆ ನನ್ನ ರಥವನ್ನು ತೆಗೆದುಕೊಂಡು ಹೋಗು ಎಂದು ಹೇಳಿದರು.

ಪಾಷಾಣ ಯೋಧಿಭಿರ್ನೂನಂ ಯುಯುಧಾನಃ ಸಮಾಗತಃ ।
ತಥಾ ಹಿ ರಥಿನಃ ಸರ್ವೇ ಹ್ರಿಯಂತೇ ವಿದ್ರುತೈರ್ಹಯೈಃ ॥ ೪೭ ॥

ವಿಶಸ್ತ್ರವಚಾ ರುಗ್ಣಸ್ತತ್ರ ತತ್ರ ಪತಂತಿ ಚ ।
ನ ಶಕ್ನುವಂತಿ ಯಂತಾರಃ ಸಂಯಂತುಂ ತುಮುಲೇ ಹಯಾನ್ ॥೪೮॥

ಸಾತ್ಯಕಿಯು ಪಾಷಾಣಯೋಧರ ಜೊತೆಯಲ್ಲಿ ಸಮಾಗತನಾಗಿದ್ದಾನೆ ಎಂದು ತಿಳಿಯುತ್ತಿದೆ. ಏಕೆಂದರೆ ಎಲ್ಲ ರಥಿಕರೂ ಧಾವಿಸುತ್ತಿರುವ ಅಶ್ವಗಳಿಂದ ಯುದ್ಧ ಭೂಮಿಯನ್ನು ಬಿಡುತ್ತಿದ್ದಾರೆ. ಶಸ್ತ್ರ-ಕವಚಗಳನ್ನು ಕಳೆದುಕೊಂಡು, ಗಾಯಗೊಂಡು ಅಲ್ಲಲ್ಲಿ ಬೀಳುತ್ತಿದ್ದಾರೆ. ಈ ತೀವ್ರ ಯುದ್ಧದಲ್ಲಿ ಸಾರಥಿಗಳಿಗೆ ಅಶ್ವವನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ (ಎಂದು ಹೇಳಿದರು).

ಇತ್ಯೇವಂ ಬ್ರುವತೋ ರಾಜನ್ ಭಾರದ್ವಾಜಸ್ಯ ಧೀಮತಃ ।
ಪ್ರತ್ಯುವಾಚ ತತೋ ಯಂತಾಂ ದ್ರೋಣಂ ಶಸ್ತ್ರಭೃತಾಂ ವರಮ್ ॥ ೪೯॥

ಎಲೈ ರಾಜನೇ, ಮೇಧಾವಿಯಾದ ದ್ರೋಣರು ಹೀಗೆ ಹೇಳುತ್ತಿರಲು ಸಾರಥಿಯು ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಅವರನ್ನು ಕುರಿತು ಮಾತನಾಡಿದನು.

ಆಯುಷ್ಮನ್ ದ್ರವತೇ ಸೈನ್ಯಂ ಕೌರವೇಯಂ ಸಮಂತತಃ ।
ಪಶ್ಯ ಯೋಧಾನ್ ರಣೇ ಭಗ್ನಾನ್ ಧಾವಮಾನಾಂಸ್ತತಸ್ತತಃ ॥ ೫೦ ॥

ಪೂಜ್ಯರೇ, ಕೌರವರ ಸೈನ್ಯವು ಎಲ್ಲಕಡೆಗಳಲ್ಲಿಯೂ ಓಡಿಹೋಗುತ್ತಿದೆ. ಯುದ್ಧದಲ್ಲಿ ಭಗ್ನರಾಗಿ ಎಲ್ಲ ಕಡೆಗಳಲ್ಲಿಯೂ ಓಡುತ್ತಿರುವ ಯೋಧರನ್ನು ನೋಡಿ.

ಏತೇ ಚ ಸಹಿತಾಃ ಶೂರಾಃ ಪಾಂಚಾಲಾಃ ಪಾಂಡವೈಃ ಸಹ ।
ತ್ವಾಮೇವ ಹಿ ಜಿಘಾಂಸಂತಃ ಪ್ರಾದ್ರವಂತಿ ಸಮಂತತಃ ॥ ೫೧ ॥

ಪಾಂಡವರಿಂದ ಸಹಿತರಾದ, ಶೂರರಾದ ಈ ಪಾಂಚಾಲರು ನಿಮ್ಮನ್ನೇ ಕೊಲ್ಲಲು ಬಯಸಿ ಎಲ್ಲ ಕಡೆಗಳಿಂದ ಓಡಿ ಬರುತ್ತಿದ್ದಾರೆ.

ಅತ್ರ ಕಾರ್ಯಂ ಸಮಾಧತ್ಸ್ವ ಪ್ರಾಪ್ತಕಾಲಮರಿಂದಮ ।
ಸ್ಥಾನೇ ವಾ ಗಮನೇ ವಾಪಿ ದೂರಂ ಯಾತಶ್ಚ ಸಾತ್ಯಕಿಃ ॥ ೫೨ ॥

ಎಲೈ ಅರಿಂದಮರೇ, ಈಗ ಮಾಡಬೇಕಾದ ಕಾರ್ಯವನ್ನು ವಿಮರ್ಶೆ ಮಾಡಿ, ಇಲ್ಲಿ ನಿಲ್ಲಬೇಕೋ ಅಥವಾ ಹೊರಡಬೇಕೋ ಎಂದು ನಿರ್ಧರಿಸಿ. ಸಾತ್ಯಕಿಯು ಈಗಾಗಲೇ ದೂರ ಹೋಗಿದ್ದಾನೆ (ಎಂದು ಹೇಳಿದನು).

ತಥೈವಂ ವದತಸ್ತಸ್ಯ ಭಾರದ್ವಾಜಸ್ಯ ಮಾರಿಷ ।
ಪ್ರತ್ಯದೃಶ್ಯತ ಶೈನೇಯೋ ನಿಘ್ನನ್ ಬಹುವಿಧಾನ್ ರಥಾನ್ ॥ ೫೩ ॥

ಎಲೈ ಪೂಜ್ಯನೇ, ಸೂತನು ದ್ರೋಣರನ್ನು ಕುರಿತು ಹೀಗೆ ಹೇಳುತ್ತಿರುವಷ್ಟರಲ್ಲಿ ಅನೇಕ ವಿಧವಾದ ಮಹಾರಥರನ್ನು ಕೊಲ್ಲುತ್ತಿರುವ ಸಾತ್ಯಕಿಯು ಕಂಡುಬಂದನು.

ತೇ ವಧ್ಯಮಾನಾಃ ಸಮರೇ ಯುಯುಧಾನೇನ ತಾವಕಾಃ ।
ಯುಯುಧಾನರಥಂ ತ್ಯಕ್ತ್ವಾ ದ್ರೋಣಾನೀಕಾಯ ದುದ್ರುವುಃ ॥ ೫೪ ॥

ರಣರಂಗದಲ್ಲಿ ಸಾತ್ಯಕಿಯಿಂದ ಪೀಡಿಸಲ್ಪಡುವ ನಿನ್ನ ಮಹಾರಥರು ಸಾತ್ಯಕಿಯ ರಥವನ್ನು ಬಿಟ್ಟು ದ್ರೋಣರ ಸೇನೆಯ ಕಡೆಗೆ ಓಡಿ ಬಂದರು.

ಯೈಸ್ತು ದುಃಶಾಸನಃ ಸಾರ್ಧಂ ರಥೈಃ ಪೂರ್ವಂ ನ್ಯವರ್ತತ ।
ತೇ ಭೀತಾಸ್ತ್ವಭ್ಯಧಾವಂತ ಸರ್ವೇ ದ್ರೋಣರಥಂ ಪ್ರತಿ ॥ ೫೫ ॥

ದುಶ್ಶಾಸನನು ಮೊದಲು ಯಾವ ಮಹಾರಥರನ್ನು ಹಿಂದೆ ನಿಲ್ಲಿಸಿದ್ದನೋ ಅವರೂ ಸಹ ಭೀತರಾಗಿ ದ್ರೋಣರ ರಥದ ಕಡೆಗೆ ಎಲ್ಲರೂ ಓಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಏಕತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಟನೆಯ ಅಧ್ಯಾಯ

ಸಾತ್ಯಕಿಯ ಭಯದಿಂದ ಓಡುತ್ತಿದ್ದ ದುಶ್ಶಾಸನನಿಗೆ ದ್ರೋಣರಿಂದ ನಿಂದೆ. ದ್ರೋಣ-ಧೃಷ್ಟದ್ಯುಮ್ನರ ಯುದ್ಧ.

ಸಂಜಯಃ

ದುಃಶಾಸನರಥಂ ದೃಷ್ಟ್ವಾ ಸಮೀಪೇ ಪರ್ಯವಸ್ಥಿತಮ್ ।
ಭಾರದ್ವಾಜಸ್ತತೋ ವಾಕ್ಯಂ ದುಃಶಾಸನಮಥಾಬ್ರವೀತ್ ॥ ೧ ॥

ಸಂಜಯ– ಸಮೀಪಕ್ಕೆ ಬಂದು ನಿಂತ ದುಶ್ಶಾಸನನ ರಥವನ್ನು ನೋಡಿ ದ್ರೋಣರು ಅವನನ್ನು ಕುರಿತು ಹೇಳಿದರು.

ದುಃಶಾಸನ ರಥಾಃ ಸರ್ವೇ ಕಸ್ಮಾದೇತೇ ಪ್ರವಿದ್ರುತಾಃ ।
ಕಚ್ಚಿತ್ ಕ್ಷೇಮಂ ತು ನೃಪತೇಃ ಕಚ್ಚಿಜ್ಜೀವತಿ ಸೈಂಧವಃ ॥ ೨ ॥

ಎಲೈ ದುಶ್ಶಾಸನನೇ, ಈ ಎಲ್ಲ ರಥರೂ ಏಕೆ ಓಡಿಹೋಗುತ್ತಿದ್ದಾರೆ? ರಾಜನಿಗೆ ಕ್ಷೇಮವಷ್ಟೆ? ಸೈಂಧವನು ಬದುಕಿದ್ದಾನೆಯೇ?

ರಾಜಪುತ್ರೋ ಭವಾನತ್ರ ರಾಜಭ್ರಾತಾ ಮಹಾರಥಃ ।
ಕಿಮರ್ಥಂ ದ್ರವಸೇ ಯುದ್ಧೇ ಯೌವರಾಜ್ಯಮವಾಪ್ಯ ಹಿ ॥ ೩ ॥

ನೀನು ರಾಜಪುತ್ರನೂ, ರಾಜನ ಸಹೋದರನೂ ಆದ ಮಹಾರಥ. ಯೌವರಾಜ್ಯವನ್ನು ಹೊಂದಿದ ನೀನು ಯುದ್ಧದಲ್ಲಿ ಏಕೆ ಓಡಿಹೋಗುತ್ತಿದ್ದೀಯೆ?

ಸ್ವಯಂ ವೈರಂ ಮಹತ್ಕೃತ್ವಾ ಪಾಂಚಾಲ್ಯೈಃ ಪಾಂಡವೈಃ ಸಹ ।
ಏಕಂ ಸಾತ್ಯಕಿಮಾಸಾದ್ಯ ಕಥಂ ಭೀತೋಽಸಿ ಸಂಯುಗೇ ॥ ೪ ॥

ಪಾಂಚಾಲರ ಮತ್ತು ಪಾಂಡವರ ಜೊತೆಯಲ್ಲಿ ಸ್ವತಃ ದೊಡ್ಡ ವೈರವನ್ನು ಮಾಡಿ ಯುದ್ಧದಲ್ಲಿ ಒಬ್ಬ ಸಾತ್ಯಕಿಯನ್ನು ಎದುರಿಸಿ ಏಕೆ ಭೀತನಾಗಿದ್ದೀಯೆ?

ನ ಜಾನೀಷೇ ಪುರಾ ತ್ವಂ ತು ಗೃಹ್ಣನ್ಕ್ಷಾನ್ ದುರೋದರೇ ।
ಶರಾ ಹ್ಯೇತೇ ಭವಿಷ್ಯಂತಿ ದಾರುಣಾಶೀವಿಷೋಪಮಾಃ ॥ ೫ ॥

ಹಿಂದೆ ದ್ಯೂತದಲ್ಲಿ ದಾಳಗಳನ್ನು ಹಿಡಿಯುವಾಗ ನೀನು ಕ್ರೂರವಾದ ಸರ್ಪಗಳಂತೆ ಇರುವ ಬಾಣಗಳಾಗುವುವು ಎಂಬುದನ್ನು ತಿಳಿಯಲಿಲ್ಲ.

ಅಪ್ರಿಯಾಣಾಂ ಚ ವಚನಂ ಪಾಂಡವೇಷು ವಿಶೇಷತಃ ।
ದ್ರೌಪದ್ಯಾಶ್ಚ ಪರಿಕ್ಲೇಶಸ್ಯ ನ್ನೋಲೋ ಹ್ಯಭವತ್ ಪುರಾ ॥ ೬ ॥

ಪಾಂಡವರನ್ನು ಕುರಿತು ವಿಶೇಷವಾಗಿ ಆಡಿದ ಅಪ್ರಿಯವಾದ ವಚನಗಳಿಗೂ ಮತ್ತು ದ್ರೌಪದಿಯ ಪರಿಕ್ಲೇಶಕ್ಕೂ ಹಿಂದೆ ನೀನೇ ಮೂಲಕಾರಣನಾಗಿದ್ದೀಯೆ.

ದಾಸೀ ಜೆತಾಸಿ ದ್ಯೂತೇ ತ್ವಂ ಯಥಾಕಾಮಚರೀ ಭವ ।
ವಾಸವಂ ವಾಹಿಕಾ ರಾಜ್ಞೀ ಭ್ರಾತುರ್ಜ್ಯೇಷ್ಠಸ್ಯ ಮೇ ಭವ ॥ ೭ ॥

ನ ಸಂತಿ ಪತಯಃ ಸರ್ವಾಸ್ತಥಾ ಷಂಡತಿಲೈಃ ಸಮಾಃ ॥ ೮ ॥

ನೀನು ದ್ಯೂತರಲ್ಲಿ ಪರಾಜಿತಳಾಗಿ ದಾಸಿಯಾಗಿದ್ದೀಯೆ. ನೀನು ಮನಸ್ಸಿಗೆ ಬಂದಂತೆ ಕಾಮಚಾರಿಯಾಗಿರು. ನನ್ನ ಅಣ್ಣನ ವಸ್ತ್ರಗಳನ್ನು ಒಗೆಯುವ ದಾಸಿಯಾಗಿರು ಅಥವಾ ರಾಣಿಯಾಗಿರು. ನಿನ್ನ ಪತಿಗಳು ಇಲ್ಲ. ಅವರೆಲ್ಲರೂ ಕೊಳೆತುಹೋದ ಎಳ್ಳುಕಾಳುಗಳಿಗೆ ಸಮಾನರಾಗಿದ್ದಾರೆ.

ದುಃಶಾಸನೈವಂ ಕಸ್ಥಾತ್ತ್ವಂ ಪೂರ್ವಮುಕ್ತ್ವಾ ಪಲಾಯಸೇ ।
ಸ್ವಯಂ ವೈರಂ ಮಹತ್ ಕೃತ್ವಾ ಪಾಂಚಾಲ್ಯೈಃ ಪಾಂಡವೈಸ್ತಥಾ ।
ಏಕಂ ಸಾತ್ಯಕಿಮಾಸಾದ್ಯ ಕಸ್ಮಾದ್ ಭೀತೋಽಸಿ ಸಂಯುಗೇ ॥ ೯ ॥

ಎಲೈ ದುಶ್ಶಾಸನನೇ, ನೀನು ಹಿಂದೆ ಹೀಗೆ ಹೇಳಿ, ಈಗ ಏಕೆ ಪಲಾಯನ ಮಾಡುತ್ತಿದ್ದೀಯೆ? ಸ್ವತಃ ಪಾಂಚಾಲರ ಮತ್ತು ಪಾಂಡವರ ಜೊತೆಯಲ್ಲಿ ದೊಡ್ಡ ವೈರವನ್ನು ಮಾಡಿ, ಒಬ್ಬ ಸಾತ್ಯಕಿಯನ್ನು ಸಮೀಪಿಸಿ ಯುದ್ಧದಲ್ಲಿ ಏಕೆ ಹೆದರುತ್ತಿದ್ದೀಯೆ.

ಕ್ವ ತೇ ಮಾನಶ್ಚ ದರ್ಪಶ್ಚ ಕ್ವ ಚ ತದ್ವೀರ ಗರ್ಜಿತಮ್ ।
ಆಶೀವಿಷಸಮಾನ್ ಪಾರ್ಥಾನ್ ಕೋಪಯಿತ್ವಾ ಕ್ವ ಯಾಸ್ಯಸಿ ॥ ೧೦॥

ನಿನ್ನ ಮಾನ ಮತ್ತು ಅಹಂಕಾರಗಳು ಎಲ್ಲಿ ಹೋದವು? ಎಲೈ ವೀರನೇ, ನಿನ್ನ ಗರ್ಜನೆಯು ಎಲ್ಲಿ ಹೋಯಿತು? ಸರ್ಪಸದೃಶರಾದ ಪಾಂಡವರನ್ನು ಕೋಪಗೊಳಿಸಿ ಎಲ್ಲಿಗೆ ಹೋಗುವಿ?

ಶೋಚ್ಯೋಯಂ ಭಾರತೀ ಸೇನಾ ರಾಜಾ ಚೈವ ಸುಯೋಧನಃ ।
ಯಸ್ಯ ತ್ವಂ ಕರ್ಕಶೋ ಭ್ರಾತಾ ಪಲಾಯನಪರಾಯಣಃ ॥ ೧೧ ॥

ಕ್ರೂರ ಸಹೋದರನಾದ ಯಾವ ನೀನು ಪಲಾಯನಪರಾಯಣನಾಗಿದ್ದೀಯೋ ಅಂತಹ ರಾಜನಾದ ಸುಯೋಧನನು ಮತ್ತು ಕೌರವರ ಸೇನೆಯು ಶೋಚನೀಯವಾದ ಪರಿಸ್ಥಿತಿಯನ್ನು ಹೊಂದಿದೆ.

ನನು ನಾಮ ತ್ವಯಾ ವೀರ ದೀರ್ಯಮಾಣಾ ಭಯಾರ್ದಿತಾ ।
ಸ್ವಬಾಹುಬಲಮಾಸ್ಥಾಯ ರಕ್ಷಿತವ್ಯಾ ಹ್ಯನೀಕಿನೀ ।
ಸ ತ್ವಮದ್ಯ ರಣಂ ತ್ಯಕ್ತ್ವಾ ಭೀತೋ ಹರ್ಷಯಸೇ ಪರಾನ್ ॥ ೧೨ ॥

ಎಲೈ ವೀರನೇ, ಭಯದಿಂದ ಭಗ್ನವಾಗುವ ಸೇನೆಯನ್ನು ನಿನ್ನ ಬಾಹುಬಲದಿಂದ ನೀನು ರಕ್ಷಿಸಬೇಕಷ್ಟೆ! ಅಂತಹ ನೀನು ಈ ದಿನ ಹೆದರಿ ಯುದ್ಧವನ್ನು ಬಿಟ್ಟು ಶತ್ರುಗಳಿಗೆ ಸಂತೋಷವನ್ನುಂಟು ಮಾಡುತ್ತಿದ್ದೀಯೆ.

ವಿದ್ಯತೇ ತ್ವಯಿ ಸೈನ್ಯಸ್ಯ ನಾಯಕೇ ಶತ್ರುಸೂದನ ।
ಕೋಽನ್ಯಃ ಸ್ಥಾಸ್ಯತಿ ಸಂಗ್ರಾಮೇ ಭೀತೋ ಭೀತೇ ವ್ಯಪಾಶ್ರಯೇ ॥೧೩॥

ಎಲೈ ಶತ್ರುಸೂದನನೇ, ಭಯಗೊಂಡವರಿಗೆ ಆಶ್ರಯನೂ ಮತ್ತು ಸೈನ್ಯದ ನಾಯಕನೂ ಆದ ನೀನು ಓಡಿಹೋದಮೇಲೆ ರಣರಂಗದಲ್ಲಿ ಬೇರೆ ಯಾವನು ನಿಲ್ಲುವನು?

ಏಕೇನ ಸಾತ್ವತೇನಾದ್ಯ ಯುಧ್ಯಮಾನಸ್ಯ ಚಾನಘ ।
ಪಲಾಯನೇ ತವ ಮತಿಃ ಸಂಗ್ರಾಮಾದ್ವಿ ಪ್ರವರ್ತತೇ ॥ ೧೪ ॥

ಎಲೈ ಅನಘನೇ, ಒಬ್ಬ ಸಾತ್ಯಕಿಯ ಜೊತೆಯಲ್ಲಿ ಯುದ್ಧವನ್ನು ಮಾಡುವಾಗಲೇ ನಿನಗೆ ರಣರಂಗದಿಂದ ಪಲಾಯನ ಮಾಡಬೇಕೆಂಬ ಬುದ್ಧಿಯು ಉಂಟಾಗಿದೆ.

ಯದಾ ಗಾಂಡೀವಧನ್ವಾನಂ ಭೀಮಸೇನಂ ಚ ಕೌರವ ।
ಯಮೌ ಚ ಯುಧಿ ದ್ರಕ್ಷ್ಯಸಿ ತದಾ ತ್ವಂ ಕಿಂ ಕರಿಷ್ಯಸಿ ॥ ೧೫ ॥

ಎಲೈ ಕೌರವನೇ, ಯುದ್ಧದಲ್ಲಿ ಗಾಂಡೀವ ಧನುರ್ಧಾರಿಯಾದ ಅರ್ಜುನನ್ನಾಗಲೀ, ಭೀಮಸೇನನನ್ನಾಗಲೀ, ನಕುಲ-ಸಹದೇವರನ್ನಾಗಲೀ ನೋಡುವಾಗ ನೀನು ಏನು ಮಾಡುವಿ?

ಯುಧಿ ಫಲ್ಗುನಬಾಣಾನಾಂ ಸೂರ್ಯಾಗ್ನಿಸಮತೇಜಸಾಮ್ ।
ನ ತುಲ್ಯಾಃ ಸಾತ್ಯಕಿಶರಾ ಯೇಷಾಂ ಭೀತಃ ಪಲಾಯಸೇ ॥ ೧೬ ॥

ಯಾವ ಸಾತ್ಯಕಿಯ ಬಾಣಗಳಿಗೆ ಹೆದರಿ ನೀನು ಪಲಾಯನ ಮಾಡುತ್ತಿದ್ದೀಯೋ ಅಂತಹ ಸಾತ್ಯಕಿಯ ಬಾಣಗಳು ಸೂರ್ಯಾಗ್ನಿಗೆ ಸಮಾನವಾದ ತೇಜಸ್ಸುಳ್ಳ ಅರ್ಜುನನ ಬಾಣಗಳಿಗೆ ಸಮವಾದವುಗಳಲ್ಲ.

ಯದಿ ತಾವತ್ಕೃತಾ ಬುದ್ಧಿಃ ಪಲಾಯನಪರಾಯಣಾ ।
ಪೃಥಿವೀ ಧರ್ಮರಾಜಸ್ಯ ಶಮೇನೈವ ಪ್ರದೀಯತಾಮ್ ॥ ೧೭ ॥

ನಿನಗೆ ಪಲಾಯನ ಮಾಡಬೇಕೆಂಬ ಬುದ್ಧಿಯಿದ್ದರೆ ಅದರ ಬದಲು ಸಂಧಿಯನ್ನು ಮಾಡಿಕೊಂಡು ಯುಧಿಷ್ಠಿರನಿಗೆ ಭೂಮಿಯನ್ನು ಕೊಡು.

ಯಾವತ್ ಫಲ್ಗುನನಾರಾಚಾ ನಿರ್ಮುಕ್ತೋರಗಸನ್ನಿಭಾಃ ।
ನಾವಿಶಂತಿ ಶರೀರಂ ತೇ ತಾವತ್ ಸಂಶಾಮ್ಯ ಪಾಂಡವೈಃ ॥ ೧೮ ॥

ಪೊರೆಯನ್ನು ಕಳಚಿದ ಸರ್ಪಗಳಂತಿರುವ ಅರ್ಜುನನ ನಾರಾಚಗಳು ನಿನ್ನ ಶರೀರವನ್ನು ಪ್ರವೇಶಿಸುವುದಕ್ಕಿಂತ ಮೊದಲೇ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ.

ಯಾವತ್ತೇ ಪೃಥಿವೀಂ ಪಾರ್ಥಾ ಹತ್ವಾ ಭ್ರಾತೃಶತಂ ರಣೇ ।
ನಾಕ್ಷಿಪಂತಿ ಮಹಾತ್ಮಾನಸ್ತಾವತ್ ಸಂಶಾಮ್ಯ ಪಾಂಡವೈಃ ॥ ೧೯ ॥

ಮಹಾತ್ಮರಾದ ಪಾಂಡವರು ಯುದ್ಧದಲ್ಲಿ ಸಹೋದರರಾದ ನಿಮ್ಮ ನೂರು ಮಂದಿಯನ್ನು ಕೊಂದು, ಭೂಮಿಯನ್ನು ನಿನ್ನಿಂದ ಕಿತ್ತುಕೊಳ್ಳುವುದಕ್ಕಿಂತ ಮೊದಲೇ ಅವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ.

ಯಾವನ್ನ ಕ್ರುದ್ಧತೇ ರಾಜಾ ಧರ್ಮಪುತ್ರೋ ಯುಧಿಷ್ಠಿರಃ ।
ಕೃಷ್ಣಶ್ಚ ಸಮರಶ್ಲಾಘೀ ತಾವತ್ ಸಂಶಾಮ್ಯ ಪಾಂಡವೈಃ ॥ ೨೦ ॥

ಎಲ್ಲಿಯವರೆಗೆ ಧರ್ಮಪುತ್ರನಾದ ಯುಧಿಷ್ಠಿರನು ಮತ್ತು ಯುದ್ಧಾಕಾಂಕ್ಷಿಯಾದ ಕೃಷ್ಣನು ಕೋಪಗೊಳ್ಳುವುದಿಲ್ಲವೋ ಅಷ್ಟರೊಳಗೆ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ.

ಯಾವದ್ಭೀಮೋ ಮಹಾಬಾಹುರ್ವಿಗಾಹ್ಯ ಮಹತೀಂ ಚಮೂಮ್ ।
ಸೋದರಾಂಸ್ತೇ ನ ಮೃದ್ನಾತಿ ತಾವತ್ ಸಂಶಾಮ್ಯ ಪಾಂಡವೈಃ ॥ ೨೧ ॥

ಮಹಾಬಾಹುವಾದ ಭೀಮಸೇನನು ನಿಮ್ಮ ಸೈನ್ಯವನ್ನು ಪ್ರವೇಶಿಸಿ, ಸಹೋದರರಾದ ನಿಮ್ಮನ್ನು ಮರ್ದಿಸುವುದಕ್ಕಿಂತ ಮೊದಲೇ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ.

ಪೂರ್ವಮುಕ್ತಶ್ಚ ತೇ ಭ್ರಾತಾ ಭೀಷ್ಮೇಣ ಸ ಸುಯೋಧನಃ ।
ಅಜೇಯಾಃ ಪಾಂಡವಾಃ ಸಂಖೇ ಸೌಮ್ಯ ಸಂಶಾಮ್ಯ ಪಾಂಡವೈಃ ।
ನ ಚ ತತ್ ಕೃತವಾನ್ ಮಂದಸ್ತವ ಭ್ರಾತಾ ಸುಯೋಧನಃ ॥ ೨೨ ॥

ಭೀಷ್ಮರು ಹಿಂದೆಯೇ ನಿನ್ನ ಅಣ್ಣನಾದ ಸುಯೋಧನನನ್ನು ಕುರಿತು, ಪ್ರೀತಿಪಾತ್ರನೇ, ಪಾಂಡವರು ಯುದ್ಧದಲ್ಲಿ ಅಜೇಯರಾದವರು. ಅವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ ಎಂದು ಹೇಳಿದರು. ಮಂದನಾದ ನಿನ್ನ ಅಣ್ಣನಾದ ಸುಯೋಧನನು ಆ ಮಾತನ್ನು ಕೇಳಲಿಲ್ಲ.

ಸ ಯುದ್ಧೇ ಧೃತಿಮಾಸ್ಥಾಯ ಯತ್ತೋ ಯುಧ್ಯಸ್ವ ಪಾಂಡವೈಃ ।
ಗಚ್ಛ ತೂರ್ಣಂ ರಥೇನೈವ ಯತ್ರ ತಿಷ್ಠತಿ ಸಾತ್ಯಕಿಃ ॥ ೨೩ ॥

ಅಂತಹ ನೀನು ಯುದ್ಧದ ವಿಷಯದಲ್ಲಿ ಧೈರ್ಯವನ್ನು ತಂದುಕೊಂಡು ಪ್ರಯತ್ನ ಪೂರ್ವಕವಾಗಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡು. ಸಾತ್ಯಕಿ ಇರುವಲ್ಲಿಗೆ ಶೀಘ್ರವಾಗಿ ನಿನ್ನ ರಥವನ್ನು ತೆಗೆದುಕೊಂಡು ಹೋಗು.

ತ್ವಯಾ ಹೀನಂ ಬಲಂ ಹ್ಯೇತದ್ ವಿದ್ರವಿಷ್ಯತಿ ಭಾರತ ।
ಆತ್ಮಾರ್ಥಂ ಯೋಧಯ ರಣೇ ಸಾತ್ಯಕಿಂ ಸತ್ಯವಿಕ್ರಮಮ್ ॥ ೨೪ ॥

ಎಲೈ ಭಾರತನೇ, ನೀನಿಲ್ಲದಿದ್ದರೆ ಈ ಕೌರವ ಸೇನೆಯು ಓಡಿ ಹೋಗುವುದು. ನಿನ್ನ ಮರ್ಯಾದೆಯ ಸಲುವಾಗಿಯಾದರೂ ಯುದ್ಧದಲ್ಲಿ ಸತ್ಯವಿಕ್ರಮನಾದ ಸಾತ್ಯಕಿಯನ್ನು ಎದುರಿಸು.

ಏವಮುಕ್ತಸ್ತವ ಸುತೋ ನಾಬ್ರವೀತ್ ಕಿಂಚಿದಪ್ಯಸೌ ।
ಶ್ರುತಂ ಚಾಶ್ರುತವತ್ ಕೃತ್ವಾ ಪ್ರಾಯಾದ್ಯೇನ ಸ ಸಾತ್ಯಕಿಃ ॥ ೨೫ ॥

ಹೀಗೆ ಹೇಳಲ್ಪಟ್ಟ ನಿನ್ನ ಪುತ್ರನು ಏನನ್ನೂ ಮಾತನಾಡಲಿಲ್ಲ. ಎಲ್ಲವನ್ನು ಕೇಳಿದರೂ ಕೇಳದಿದ್ದವನಂತೆ ಸಾತ್ಯಕಿ ಇರುವ ಸ್ಥಳಕ್ಕೆ ಹೋದನು.

ಸೈನ್ಯೇನ ಮಹತಾ ಯುಕ್ತೋ ಮ್ಲೇಚ್ಛಾನಾಮನಿವರ್ತಿನಾಮ್ ।
ಆಸಾದ್ಯ ಚ ರಣೇ ಯತ್ತೋ ಯುಯುಧಾನಮಯೋಧಯತ್ ॥ ೨೬ ॥

ರಣರಂಗದಿಂದ ಹಿಮ್ಮೆಟ್ಟದಿರುವ ಮ್ಲೇಚ್ಛರ ದೊಡ್ಡ ಸೈನ್ಯದಿಂದ ಕೂಡಿ ಸಾತ್ಯಕಿಯನ್ನು ಸಮೀಪಿಸಿ ರಣರಂಗದಲ್ಲಿ ಪ್ರಯತ್ನಪೂರ್ವಕವಾಗಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ದ್ರೋಣೋಽಪಿ ರಥಿನಾಂ ಶ್ರೇಷ್ಠಃ ಪಾಂಚಾಲಾನ್ ಪಾಂಡವಾಂಸ್ತಥಾ ।
ಅಭ್ಯದ್ರವತ ಸಂಕ್ರುದ್ಧೋ ಜವಮಾಸ್ಥಾಯ ಮಧ್ಯಮಮ್ ॥ ೨೭ ॥

ರಥಶ್ರೇಷ್ಠರಾದ ದ್ರೋಣರೂ ಸಹ ಕೋಪಗೊಂಡು, ಮಧ್ಯಮವೇಗವನ್ನು ಆಶ್ರಯಿಸಿ, ಪಾಂಚಾಲರ ಮತ್ತು ಪಾಂಡವರ ಮೇಲೆ ಧಾವಿಸಿದರು.

ಪ್ರವಿಶ್ಯ ಚ ರಣೇ ದ್ರೋಣಃ ಪಾಂಚಾಲಾನಾಂ ವರೂಥಿನೀಮ್ ।
ದ್ರಾವಯಾಮಾಸ ಯೋಧಾನ್ ವೈ ಶತಶೋಽಥ ಸಹಸ್ರಶಃ ॥ ೨೮ ॥

ದ್ರೋಣರು ರಣರಂಗದಲ್ಲಿ ಪಾಂಚಾಲರ ಸೇನೆಯನ್ನು ಪ್ರವೇಶಿಸಿ, ನೂರರ ಸಂಖ್ಯೆಯಲ್ಲಿ ಮತ್ತು ಸಾವಿರದ ಸಂಖ್ಯೆಯಲ್ಲಿ ಸೈನಿಕರನ್ನು ಓಡಿಸಿದರು.

ತತೋ ದ್ರೋಣೋ ಮಹಾರಾಜ ನಾಮ ವಿಶ್ರಾವ್ಯ ಸಂಯುಗೇ ।
ಪಾಂಡುಪಾಂಚಾಲಮತ್ಸ್ಯಾನಾಂ ಪ್ರಚಕ್ರೇ ಕದನಂ ಮಹತ್ ॥ ೨೯ ॥

ಎಲೈ ಮಹಾರಾಜನೇ, ಅನಂತರ ದ್ರೋಣರು ರಣರಂಗದಲ್ಲಿ ತಮ್ಮ ಹೆಸರನ್ನು ಘೋಷಿಸುತ್ತಾ, ಪಾಂಡು-ಪಾಂಚಾಲ-ಮತ್ಸ್ಯರ ಸೇನೆಯ ಜೊತೆಯಲ್ಲಿ ದೊಡ್ಡ ಯುದ್ಧವನ್ನು ಮಾಡಿದರು.

ತಂ ಜಯಂತಮನೀಕಾನಿ ಭಾರದ್ವಾಜಂ ತತಸ್ತತಃ ।
ಪಾಂಚಾಲಪುತ್ರೋ ದ್ಯುತಿಮಾನ್ ವೀರಕೇತುಃ ಸಮಭ್ಯಯಾತ್ ॥ ೩೦ ॥

ತಮ್ಮ ಸೈನ್ಯವನ್ನು ಅಲ್ಲಲ್ಲಿ ಪರಾಭವಗೊಳಿಸುತ್ತಿದ್ದ ದ್ರೋಣರ ಕಡೆಗೆ ಪಾಂಚಾಲ ಪುತ್ರನೂ, ಕಾಂತಿಯುಕ್ತನೂ ಆದ ವೀರಕೇತುವು ಧಾವಿಸಿ ಬಂದನು.

ಸ ದ್ರೋಣಂ ಪಂಚಭಿರ್ವಿದ್ಧ್ವಾ ಶರೈಃ ಸನ್ನತಪರ್ವಭಿಃ ।
ಧ್ವಜಮೇಕೇನ ವಿವ್ಯಾಧ ಸಾರಥಿಂ ಚಾಸ್ಯ ಸಪ್ತಭಿಃ ॥ ೩೧ ॥

ಅವನು ಬಾಗಿದ ತುದಿಯುಳ್ಳ ಐದು ಬಾಣಗಳಿಂದ ದ್ರೋಣರನ್ನು ಹೊಡೆದು, ಒಂದು ಬಾಣದಿಂದ ಅವರ ಧ್ವಜವನ್ನೂ ಮತ್ತು ಏಳು ಬಾಣಗಳಿಂದ ಅವರ ಸಾರಥಿಯನ್ನೂ ಹೊಡೆದನು.

ತತ್ರಾದ್ಭುತಂ ಮಹಾರಾಜ ದೃಷ್ಟವಾನಸ್ಮಿ ಸಂಯುಗೇ ।
ಯದ್ ದ್ರೋಣೋ ರಭಸಂ ಯುದ್ಧೇ ಪಾಂಚಾಲ್ಯಂ ನಾಭ್ಯವರ್ತತ ॥

ಎಲೈ ಮಹಾರಾಜನೇ, ದ್ರೋಣರು ಯುದ್ಧದಲ್ಲಿ ವೇಗಶಾಲಿಯಾದ ಪಾಂಚಾಲ ಪುತ್ರನಾದ ವೀರಕೇತುವನ್ನು ದಾಟದ ಒಂದು ಅದ್ಭುತವನ್ನು ನಾನು ರಣರಂಗದಲ್ಲಿ ನೋಡಿದೆನು.

ಸನ್ನಿರುದ್ಧಂ ರಣೇ ದ್ರೋಣಂ ಪಾಂಚಾಲಾ ವೀಕ್ಷ್ಯ ಮಾರಿಷ ।
ಆವವ್ರುಃ ಸರ್ವತೋ ರಾಜನ್ ಧರ್ಮಪುತ್ರಜಯೈಷಿಣಃ ॥ ೩೩ ॥

ಎಲೈ ಪೂಜ್ಯನೇ, ಪಾಂಚಾಲರು ರಣರಂಗದಲ್ಲಿ ದ್ರೋಣರು ತಡೆಯಲ್ಪಟ್ಟುದನ್ನು ನೋಡಿ, ಯುಧಿಷ್ಠಿರನ ಜಯವನ್ನು ಆಶಿಸುತ್ತಾ, ದ್ರೋಣರನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ತೇ ಶರೈರಗ್ನಿಸಂಕಾಶೈಸ್ತೋಮರೈಶ್ಚ ಮಹಾಧನೈಃ ।
ಶಸ್ತ್ರೈಶ್ಚ ವಿವಿಧೈ ರಾಜನ್ ದ್ರೋಣಮೇಕಮವಾಕಿರನ್ ॥ ೩೪ ॥

ಎಲೈ ರಾಜನೇ, ಅವರು ಅಗ್ನಿಯಂತಹ ಬಾಣಗಳಿಂದಲೂ, ಬೆಲೆಬಾಳುವ ತೋಮರಗಳಿಂದಲೂ ಮತ್ತು ಅನೇಕ ವಿಧವಾದ ಶಸ್ತ್ರಗಳಿಂದಲೂ ಒಬ್ಬ ದ್ರೋಣರ ಮೇಲೆ ಆಯುಧಗಳ ಮಳೆಯನ್ನು ಸುರಿಸಿದರು.

ನಿಹತ್ಯ ತಾನ್ ಬಾಣಗಣಾನ್ ದ್ರೋಣೋ ರಾಜನ್ ಸಮಂತತಃ ।
ಮಹಾಜಲಧರಾನ್ ವ್ಯೋಮ್ನಿ ಮಾತರಿಶ್ವಾ ವಿವಾನಿವ ॥ ೩೫ ॥

ತತಃ ಶರಂ ಮಹಾಘೋರಂ ಸೂರ್ಯಪಾವಕಸನ್ನಿಭಮ್ ।
ಸಂದಧೇ ಪರವೀರಘ್ನೋ ವೀರಕೇತುರಥಂ ಪ್ರತಿ ॥ ೩೬ ॥

ಎಲೈ ರಾಜನೇ, ಆಗ ದ್ರೋಣರು ಬಲವಾಗಿ ಬೀಸುವ ವಾಯುವು ಆಕಾಶದಲ್ಲಿ ದೊಡ್ಡಮೋಡಗಳನ್ನು ಚದುರಿಸುವಂತೆ ಅವರನ್ನು ಹೊಡೆದು, ವೀರಕೇತುವಿನ ರಥವನ್ನು ಉದ್ದೇಶಿಸಿ ಸೂರ್ಯಾಗ್ನಿ ಸದೃಶವಾದ ಮಹಾಘೋರವಾದ ಒಂದು ಬಾಣವನ್ನು ಶತ್ರುಸಂಹಾರಕರಾದ ಅವರು ಧನುಸ್ಸಿನಲ್ಲಿ ಹೂಡಿದರು.

ಸ ಭಿತ್ತ್ವಾ ತು ಶರೋ ರಾಜನ್ ಪಾಂಚಾಲ್ಯಂ ಕುಲನಂದನಮ್ ।
ಅಭ್ಯಗಾದ್ ಧರಣೀಂ ತೂರ್ಣಂ ಲೋಹಿತಾರ್ದ್ರೋ ಜ್ವಲನ್ನಿವ॥ ೩೭ ॥

ಎಲೈ ರಾಜನೇ, ಆ ಬಾಣವು ಪಾಂಚಾಲಪುತ್ರನೂ, ಕುಲನಂದನನೂ ಆದ ವೀರಕೇತುವನ್ನು ಭೇದಿಸಿ, ರಕ್ತಸಿಕ್ತವಾಗಿ ಪ್ರಕಾಶಿಸುತ್ತಾ ಶೀಘ್ರವಾಗಿ ಭೂಮಿಯೊಳಗೆ ಇಳಿಯಿತು.

ತತೋಽಪತದ್ ರಥಾತ್ ತೂರ್ಣಂ ಪಾಂಚಾಲ್ಯಃ ಕುಲನಂದನಃ ।
ಪರ್ವತಾಗ್ರಾದಿವ ಮಹಾಂಶ್ಚಂಪಕೋ ವಾಯುಪೀಡಿತಃ ॥ ೩೮ ॥

ಆಗ ವಾಯುವಿನ ಹೊಡೆತಕ್ಕೆ ಸಿಲುಕಿದ ದೊಡ್ಡ ಚಂಪಕವೃಕ್ಷವು ಪರ್ವತದ ಶಿಖರದಿಂದ ಬಿದ್ದಂತೆ ಪಾಂಚಾಲರ ಪುತ್ರನೂ, ಕುಲನಂದನನೂ ಆದ ವೀರಕೇತುವು ಶೀಘ್ರವಾಗಿ ತನ್ನ ರಥದಿಂದ ಬಿದ್ದನು.

ತಸ್ಮಿನ್ ಹತೇ ಮಹೇಷ್ವಾಸೇ ರಾಜಪುತ್ರೇ ಮಹಾಬಲೇ ।
ಪಾಂಚಾಲಾಸ್ತ್ವರಿತಾ ದ್ರೋಣಂ ಸಮಂತಾತ್ ಪರ್ಯವಾರಯನ್ ॥

ಮಹಾಧನುರ್ಧಾರಿಯೂ, ಮಹಾಬಲನೂ ಆದ ಆ ರಾಜಕುಮಾರನು ಹತನಾಗುತ್ತಿರಲು ಪಾಂಚಾಲರು ಶೀಘ್ರವಾಗಿ ಎಲ್ಲ ಕಡೆಗಳಿಂದಲೂ ದ್ರೋಣರನ್ನು ಸುತ್ತುವರಿದರು.

ಚಿತ್ರಕೇತುಃ ಸುಧನ್ವಾ ಚ ಚಿತ್ರವರ್ಮಾ ಚ ಭಾರತ ।
ತಥಾ ಚಿತ್ರರಥಶ್ಚೈವ ಭ್ರಾತೃವ್ಯಸನಕರ್ಶಿತಾಃ ॥ ೪೦ ॥

ಅಭ್ಯದ್ರವಂತ ಸಹಿತಾ ಭಾರದ್ವಾಜಂ ಯುಯುತ್ಸವಃ ।
ಮುಂಚಂತಃ ಶರವರ್ಷಾಣಿ ತಪಾಂತೇ ಜಲದಾ ಇವ ॥ ೪೧ ॥

ಎಲೈ ಭಾರತನೇ, ಚಿತ್ರಕೇತು, ಸುಧನ್ವಾ ಚಿತ್ರವರ್ಮ ಮತ್ತು ಚಿತ್ರರಥ ಇವರು ಸಹೋದರನಾದ ವೀರಕೇತುವಿನ ವಧೆಯ ವ್ಯಸನದಿಂದ ಕರ್ಶಿತರಾಗಿ ದ್ರೋಣರ ಜೊತೆಯಲ್ಲಿ ಯುದ್ಧಮಾಡಲು ಬಯಸಿ, ಬೇಸಿಗೆಯು ಕಳೆದ ಮೇಲೆ ಮಳೆಗಾಲದಲ್ಲಿ ಮೋಡಗಳು ಜಲಧಾರೆಯನ್ನು ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸುತ್ತಾ ದ್ರೋಣರ ಕಡೆಗೆ ಒಟ್ಟಿಗೆ ಓಡಿಬಂದರು.

ಸ ವಧ್ಯಮಾನೋ ಬಹುಧಾ ರಾಜಪುತ್ರೈರ್ಮಹಾರಥೈಃ ।
ವ್ಯಶ್ವಸೂತರಥಾಂಶ್ಚಕ್ರೇ ಕುಮಾರಾನ್ ಕುಪಿತೋ ರಣೇ ॥ ೪೨ ॥

ಮಹಾರಥರಾದ ರಾಜಪುತ್ರರಿಂದ ಅನೇಕ ರೀತಿಯಲ್ಲಿ ಹೊಡೆಯಲ್ಪಟ್ಟ ದ್ರೋಣರು ರಣರಂಗದಲ್ಲಿ ಕುಪಿತರಾಗಿ ಆ ಕುಮಾರರ ಅಶ್ವ-ಸೂತ-ರಥಗಳನ್ನು ನಾಶಮಾಡಿದರು.

ತಥಾಪರೈಃ ಸುನಿಶಿತೈಭರ್ಲ್ಲೈಸ್ತೇಷಾಂ ಮಹಾಯಶಾಃ ।
ಪುಷ್ಪಾಣೀವ ವಿಚಿನ್ವನ್ ಹಿ ಸೋತ್ತಮಾಂಗಾನ್ಯಪಾತಯತ್ ॥ ೪೩॥

ಮಹಾಕೀರ್ತಿಗಳಾದ ಅವರು ತೀಕ್ಷ್ಣವಾದ ಭಲ್ಲಗಳಿಂದ ಅವರ ಶಿರಸ್ಸುಗಳನ್ನು ಪುಷ್ಪಗಳನ್ನು ಕೆಡವಿದಂತೆ ಕೆಡವಿದರು.

ಕ್ರೋಧಮಾಹಾರಯತ್ತೇಷಾಮಭಾವಾಯ ದ್ವಿಜರ್ಷಭಃ ।
ತತಃ ಶರಮಯಂ ಜಾಲಂ ದ್ರೋಣಸ್ತೇಷಾಮವಾಸೃಜತ್ ॥ ೪೪ ॥

ಬ್ರಾಹ್ಮಣಶ್ರೇಷ್ಠರಾದ ದ್ರೋಣರು ಅವರನ್ನು ವಿನಾಶಗೊಳಿಸಲು ಉದ್ದೇಶಿಸಿ ಬಹಳ ಕ್ರೋಧವನ್ನು ತಂದುಕೊಂಡು ಬಾಣಗಳ ಒಂದು ಜಾಲವನ್ನೇ ಸೃಷ್ಟಿಮಾಡಿದರು.

ತೇ ಹನ್ಯಮಾನಾ ದ್ರೋಣಸ್ಯ ಶರೈರಾಕರ್ಣಚೋದಿತೈಃ ।
ಕರ್ತವ್ಯಂ ನಾಭ್ಯಜಾನನ್ ವೈ ಕುಮಾರಾ ರಾಜಸತ್ತಮ ॥ ೪೫ ॥

ಎಲೈ ರಾಜಶ್ರೇಷ್ಠನೇ, ಕಿವಿಯವರೆಗೂ ಎಳೆದು ಪ್ರಯೋಗಿಸಿದ ದ್ರೋಣರ ಆ ಬಾಣಗಳಿಂದ ಹೊಡೆಯಲ್ಪಟ್ಟ ಕುಮಾರರು ರಣರಂಗದಲ್ಲಿ ಕರ್ತವ್ಯ ಮೂಢರಾದರು.

ತಾನ್ ವಿಮೂಢಾನ್ ರಣೇ ದ್ರೋಣಃ ಪ್ರಹಸನ್ನಿವ ಭಾರತ ।
ವ್ಯಶ್ವಸೂತರಥಾಂಶ್ಚಕ್ರೇ ಕುಪಿತಃ ಕಂಕಪತ್ರಿಭಿಃ ॥ ೪೬ ॥

ಎಲೈ ಭಾರತನೇ, ಕೋಪಗೊಂಡ ದ್ರೋಣರು ವಿಮೂಢರಾದ ಆ ರಾಜಕುಮಾರರನ್ನು ಕಂಕಪತ್ರವನ್ನು ಹೊಂದಿದ್ದ ಬಾಣಗಳಿಂದ ಹೊಡೆದು, ಅಶ್ವ-ಸಾರಥಿ-ರಥಗಳಿಂದ ರಹಿತರನ್ನಾಗಿ ಮಾಡಿದರು.

ತೇ ರಥೇಭ್ಯೋ ಹತಾಃ ಪೇತುಃ ಕ್ಷಿತೌ ರಾಜನ್ ಸುವರ್ಚಸಃ ।
ದೇವಾಸುರೇ ಪುರಾ ಯುದ್ಧೇ ಯಥಾ ದೈತೇಯದಾನವಾಃ ॥ ೪೭ ॥

ಎಲೈ ರಾಜನೇ, ಹಿಂದೆ ದೇವಾಸುರ ಯುದ್ಧದಲ್ಲಿ ದೈತ್ಯದಾನವರು ಬಿದ್ದಂತೆ ಒಳ್ಳೆಯ ಕಾಂತಿಯನ್ನು ಹೊಂದಿದ ಆ ರಾಜಕುಮಾರರು ಮೃತರಾಗಿ ಭೂಮಿಯ ಮೇಲೆ ಬಿದ್ದರು.

ತಾನ್ ನಿಹತ್ಯ ರಣೇ ರಾಜನ್ ಭಾರದ್ವಾಜಃ ಪ್ರತಾಪವಾನ್ ।
ಕಾರ್ಮುಕಂ ಭ್ರಾಮಯಾಮಾಸ ಹೇಮಪೃಷ್ಠಂ ದುರಾಸದಮ್ ॥ ೪೮ ॥

ಎಲೈ ರಾಜನೇ, ಪ್ರತಾಪಶಾಲಿಯಾದ ದ್ರೋಣರು ರಣರಂಗದಲ್ಲಿ ಅವರನ್ನು ಕೊಂದು, ಹೇಮಪೃಷ್ಠವುಳ್ಳದ್ದೂ ಮತ್ತು ಸಮೀಪಿಸಲು ಅಸಾಧ್ಯವೂ ಆದ ಅವರ ಧನುಸ್ಸನ್ನು ತಿರುಗಿಸಿದರು.

ಪಾಂಚಾಲಾನ್ನಿಹತಾನ್ ದೃಷ್ಟ್ವಾ ದೇವಕಲ್ಪಾನ್ ಮಹಾರಥಾನ್ ।
ಧೃಷ್ಟದ್ಯುಮ್ನೋ ಭೃಶಂ ಕ್ರುದ್ಧೋ ನೇತ್ರಾಭ್ಯಾಂ ಪಾತಯನ್ ಜಲಮ್ ।
ಅಭ್ಯವರ್ತತ ಸಂಗ್ರಾಮೇ ಕ್ರುದ್ಧೋ ದ್ರೋಣರಥಂ ಪ್ರತಿ ॥ ೪೯ ॥

ದೇವಕಲ್ಪರೂ, ಮಹಾರಥರೂ ಆದ ಪಾಂಚಾಲರಾಜಕುಮಾರರು ಹತರಾದುದನ್ನು ನೋಡಿ ಧೃಷ್ಟದ್ಯುಮ್ನನು ಬಹಳ ಕೋಪಗೊಂಡು ಕಣ್ಣೀರನ್ನು ಸುರಿಸುತ್ತಾ ರಣರಂಗದಲ್ಲಿ ಕ್ರುದ್ಧನಾಗಿ ದ್ರೋಣರ ರಥದ ಕಡೆಗೆ ಧಾವಿಸಿದನು.

ತತೋ ಹಾಹೇತಿ ಸಹಸಾ ನಾದಃ ಸಮಭವನ್ನೃಪ ।
ಪಾಂಚಾಲ್ಯೇನ ರಣೇ ದೃಷ್ಟ್ವಾ ದ್ರೋಣಮಾವಾರಿತಂ ಶರೈಃ ॥ ೫೦ ॥

ಎಲೈ ರಾಜನೇ, ಪಾಂಚಾಲ್ಯನಾದ ಮತ್ತು ಧೃಷ್ಟದ್ಯುಮ್ನನಿಂದ ದ್ರೋಣರು ರಣರಂಗದಲ್ಲಿ ಬಾಣಗಳಿಂದ ಮುಚ್ಚಲ್ಪಟ್ಟುದನ್ನು ನೋಡಿ ತಕ್ಷಣ ಹಾಹಾಕಾರವುಂಟಾಯಿತು.

ಸಂಭಾದ್ಯಮಾನೋ ಬಹುಧಾ ಪಾರ್ಷತೇನ ಮಹಾತ್ಮನಾ ।
ನ ವಿವ್ಯಥೇ ತತೋ ದ್ರೋಣಃ ಶ್ಮಯನ್ನೇವಾನ್ವಯುಧ್ಯತ ॥ ೫೧ ॥

ಮಹಾತ್ಮನಾದ ಧೃಷ್ಟದ್ಯುಮ್ನನಿಂದ ಅನೇಕ ರೀತಿಯಲ್ಲಿ ಆಚ್ಛಾದಿತರಾದರೂ ದ್ರೋಣರು ವ್ಯಥೆಪಡಲಿಲ್ಲ ಮತ್ತು ನಗುತ್ತಲೇ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತತೋ ದ್ರೋಣಂ ಮಹಾರಾಜ ಪಾಂಚಾಲ್ಯಃ ಕ್ರೋಧಮೂರ್ಚ್ಛಿತಃ ।
ಆಜಘಾನೋರಸಿ ಕ್ರುದ್ಧೋ ನವತ್ಯಾ ನತಪರ್ವಣಾಮ್ ॥ ೫೨ ॥

ಎಲೈ ಮಹಾರಾಜನೇ, ಆಗ ಧೃಷ್ಟದ್ಯುಮ್ನನು ಕ್ರೋಧಮೂರ್ಛಿತನಾಗಿ, ಬಾಗಿದ ತುದಿಯುಳ್ಳ ತೊಂಬತ್ತು ಬಾಣಗಳಿಂದ ದ್ರೋಣರಿಗೆ ಅವರ ಎದೆಯಲ್ಲಿ ಹೊಡೆದನು.

ಸ ಗಾಢವಿದ್ಧೋ ಬಲಿನಾ ಭಾರದ್ವಾಜೋ ಮಹಾಯಶಾಃ ।
ನಿಷಸಾದ ರಥೋಪಸ್ಥೇ ಕಶ್ಮಲಂ ಚ ಜಗಾಮ ಹ ॥ ೫೩ ॥

ಮಹಾಕೀರ್ತಿವಂತರಾದ ದ್ರೋಣರು ಬಲಿಷ್ಠನಾದ ಧೃಷ್ಟದ್ಯುಮ್ನನಿಂದ ಗಾಢವಾಗಿ ಹೊಡೆಯಲ್ಪಟ್ಟು ರಥಪೀಠದಲ್ಲಿ ಕುಳಿತು ಸ್ವಲ್ಪ ಮೂರ್ಛೆಯನ್ನು ಹೊಂದಿದರು.

ತಂ ವೈ ತಥಾಗತಂ ದೃಷ್ಟ್ವಾ ಧೃಷ್ಟದ್ಯುಮ್ನಃ ಪರಾಕ್ರಮೀ ।
ಸಮುತ್ಸೃಜ್ಯ ಧನುಸ್ತೂರ್ಣಮಸಿಂ ಜಗ್ರಾಹ ವೀರ್ಯವಾನ್ ॥ ೫೪ ॥

ದ್ರೋಣರ ಆ ಪರಿಸ್ಥಿತಿಯನ್ನು ನೋಡಿ ಪರಾಕ್ರಮಶಾಲಿಯೂ, ಶೂರನೂ ಆದ ಧೃಷ್ಟದ್ಯುಮ್ನನು ಧನುಸ್ಸನ್ನು ಬಿಟ್ಟು ಶೀಘ್ರವಾಗಿ ಖಡ್ಗವನ್ನು ತೆಗೆದುಕೊಂಡನು.

ಅವಪ್ಲುತ್ಯ ರಥಾಚ್ಚಾಪಿ ತ್ವರಿತಃ ಸ ಮಹಾರಥಃ ।
ಆರುರೋಹ ರಥಂ ತೂರ್ಣಂ ಭಾರದ್ವಾಜಸ್ಯ ಮಾರಿಷ ।
ಹರ್ತುಮೈಚ್ಛಚ್ಛರೈಃ ಕಾಯಾತ್ ಕ್ರೋಧಸಂರಕ್ತಲೋಚನಃ ॥ ೫೫ ॥

ಎಲೈ ಪೂಜ್ಯನೇ, ಮಹಾರಥನಾದ ಅವನು ಶೀಘ್ರವಾಗಿ ತನ್ನ ರಥದಿಂದ ಹಾರಿ ದ್ರೋಣರ ರಥವನ್ನು ಏರಿದನು. ಕ್ರೋಧದಿಂದ ಕೆಂಪಾದ ಕಣ್ಣುಳ್ಳ ಅವನು ದ್ರೋಣರ ಶಿರಸ್ಸನ್ನು ಕತ್ತರಿಸಲು ಬಯಸಿದನು.

ಪ್ರತ್ಯಾಶ್ವಸ್ತಸ್ತತೋ ದ್ರೋಣೋ ಧನುರ್ಗೃಹ್ಯ ಮಹಾಬಲಃ ।
ಶರೈರ್ವ್ಯತಸ್ತಿಕೈ ರಾಜನ್ ನಿತ್ಯಮಾಸನ್ನಯೋಧಿಭಃ ।
ಯೋಧಯಾಮಾಸ ಸಮರೇ ಧೃಷ್ಟದ್ಯುಮ್ನಂ ಮಹಾರಥಮ್ ॥ ೫೬ ॥

ಆ ವೇಳೆಗೆ ಚೇತರಿಸಿಕೊಂಡ ಮಹಾಬಲಶಾಲಿಗಳಾದ ದ್ರೋಣರು ಸಮೀಪದಿಂದ ಮಾತ್ರ ಪ್ರಯೋಗಿಸಬಹುದಾದ ಒಂದು ಗೇಣಿನಷ್ಟು ಉದ್ದವಾದ ಬಾಣಗಳನ್ನು ತೆಗೆದುಕೊಂಡು ಅವುಗಳಿಂದ ಮಹಾರಥನಾದ ಧೃಷ್ಟದ್ಯುಮ್ನನನ್ನು ಹೊಡೆದರು.

ತೇ ಹಿ ವೈತಸ್ತಿಕಾ ನಾಮ ಶರಾ ಆಸನ್ನಯೋಧಿನಃ ।
ದ್ರೋಣಸ್ಯ ವಿದಿತಾ ರಾಜನ್ ಧೃಷ್ಟದ್ಯುಮ್ನಮವಾಕ್ಷಿಪನ್ ॥ ೫೭ ॥

ಎಲೈ ರಾಜನೇ, ದ್ರೋಣರಿಗೆ ಮಾತ್ರ ತಿಳಿದಿದ್ದಂತಹ ಆ ವೈತಸ್ತ ಬಾಣಗಳು ಧೃಷ್ಟದ್ಯುಮ್ನನನ್ನು ಅಲ್ಲಿಂದ ಹಾರಿಸಿದವು.

ಸ ವಧ್ಯಮಾನೋ ಬಹುಭಿಃ ಸಾಯಕೈಸ್ತೈರ್ಮಹಾಬಲಃ ।
ಅವಪ್ಲುತ್ಯ ರಥಾತ್ತೂರ್ಣಂ ಭಗ್ನವೇಗಃ ಪರಾಕ್ರಮೀ ।
ಹತಸಂಕಲ್ಪಭೂಯಿಷ್ಠಃ ಪ್ರಾದ್ರವತ್ ಸ್ವರಥಂ ಪ್ರತಿ ॥ ೫೮ ॥

ಅಂತಹ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟ ಮಹಾಬಲನೂ, ಪರಾಕ್ರಮಶಾಲಿಯೂ ಆದ ಧೃಷ್ಟದ್ಯುಮ್ನನು ತನ್ನ ವೇಗವನ್ನು ಕಳೆದುಕೊಂಡು ತನ್ನ ಸಂಕಲ್ಪವು ಪ್ರಾಯಶಃ ದೂರವಾಗುತ್ತಿರಲು ಆ ರಥದಿಂದ ಕೆಳಗೆ ಹಾರಿ ತನ್ನ ರಥದ ಕಡೆಗೆ ಓಡಿದನು.

ಆರುಹ್ಯ ಸ್ವರಥಂ ವೀರಃ ಪ್ರಗೃಹ್ಯ ಚ ಮಹದ್ಧನುಃ ।
ವಿವ್ಯಾಧ ಸಮರೇ ದ್ರೋಣಂ ಧೃಷ್ಟದ್ಯುಮ್ನೋ ಮಹಾರಥಃ ॥ ೫೯ ॥

ಮಹಾರಥನೂ, ವೀರನೂ ಆದ ಧೃಷ್ಟದ್ಯುಮ್ನನು ತನ್ನ ರಥವನ್ನು ಏರಿ ದೊಡ್ಡ ಧನುಸ್ಸನ್ನು ತೆಗೆದುಕೊಂಡು ರಣರಂಗದಲ್ಲಿ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತದದ್ಭುತಂ ತಯೋಯುರ್ದ್ಧಂ ಭೂತಸಂಘಹ್ಯಪೂಜಯನ್ ।
ಕ್ಷತ್ರಿಯಾಶ್ಚ ಮಹಾರಾಜ ಯೇ ಚಾನ್ಯೇ ತತ್ರ ಸೈನಿಕಾಃ ॥ ೬೦ ॥

ಎಲೈ ಮಹಾರಾಜನೇ, ಅವರಿಗೆ ನಡೆದ ಅದ್ಭುತವಾದ ಆ ಯುದ್ಧವನ್ನು ಅಲ್ಲಿ ನೆರೆದ ಭೂತಸಂಘಗಳೂ, ಕ್ಷತ್ರಿಯರೂ ಮತ್ತು ಉಳಿದ ಸೈನಿಕರೂ ಪೂಜಿಸಿದರು.

ತ್ರೈಲೋಕ್ಯಕಾಂಕ್ಷಿಣೋರಾಸೀಚ್ಚಕ್ರಪ್ರಹ್ಲಾದಯೋರಿವ ।
ಮಂಡಲಾನಿ ವಿಚಿತ್ರಾಣಿ ಯಾಮಕಾನೀತರಾಣಿ ಚ ॥ ೬೧ ॥

ಚರಂತೌ ಯುದ್ಧಮಾರ್ಗಜ್ಞೌ ತತಕ್ಷತುರಥೇಷುಭಿಃ ।
ಕ್ಷೋಭಯಂತೌ ಮನಾಂಸ್ಯಾಜೌ ಯೋಧಾನಾಂ ದ್ರೋಣಪಾರ್ಷತೌ ॥

ಮೂರುಲೋಕದ ಅಧಿಪತ್ಯವನ್ನು ಬಯಸಿದ ವೀರ ಪ್ರಹ್ಲಾದರು ರಣರಂಗದಲ್ಲಿ ವಿಚಿತ್ರವಾದ ಸವ್ಯದಕ್ಷಣ ಮಂಡಲಗಳಲ್ಲಿ ಚಲಿಸಿದಂತೆ ಯುದ್ಧಮಾರ್ಗವನ್ನು ತಿಳಿದ ದ್ರೋಣ-ಧೃಷ್ಟದ್ಯುಮ್ನರಿಬ್ಬರೂ ಯೋಧರ ಮನಸ್ಸುಗಳಿಗೆ ಕ್ಷೋಭೆಯನ್ನುಂಟು ಮಾಡುತ್ತಾ ಬಾಣಗಳಿಂದ ಒಬ್ಬರನ್ನೊಬ್ಬರು ಗಾಯಗೊಳಿಸಿದರು.

ಸೃಜಂತೌ ಶರವರ್ಷಾಣಿ ವರ್ಷಾಸ್ವಿವ ಬಲಾಹಕೌ ।
ಛಾದಯಂತೌ ಮಹಾತ್ಮಾನೌ ಶರೈರ್ವ್ಯೋಮ ದಿಶೋ ಮಹೀಮ್ ।
ತದದ್ಭುತಂ ತಯೋರ್ಯುದ್ಧಂ ಭೂತಸಂಘಾಹ್ಯಪೂಜಯನ್ ॥ ೬೩ ॥

ಮಳೆಗಾಲದ ಮೋಡಗಳಂತೆ ಬಾಣಗಳ ಮಳೆಯನ್ನು ಸೃಷ್ಟಿಮಾಡುತ್ತಾ, ತಮ್ಮ ಬಾಣಗಳಿಂದ ಆಕಾಶವನ್ನೂ, ಭೂಮಿಯನ್ನೂ ಮತ್ತು ದಿಕ್ಕುಗಳನ್ನೂ ಮುಚ್ಚುತ್ತಾ ಆ ಇಬ್ಬರು ಮಹಾತ್ಮರು ಯುದ್ಧವನ್ನು ಮಾಡಿದರು. ಅದ್ಭುತವಾದ ಅವರ ಯುದ್ಧವನ್ನು ಭೂತಸಂಘಗಳು ಪೂಜಿಸಿದವು.

ಅವಶ್ಯಂ ಸಮರೇ ದ್ರೋಣೋ ಧೃಷ್ಟದ್ಯುಮ್ನೇನ ಸಂಗತಃ ।
ವಶಮೇಷ್ಯತಿ ನೋ ರಾಜ್ಞಃ ಪಾಂಚಾಲಾ ಇತಿ ಚುಕ್ರುಶುಃ ॥ ೬೪ ॥

ಧೃಷ್ಟದ್ಯುಮ್ನನ ಸಮಾಗಮವನ್ನು ಹೊಂದಿದ ದ್ರೋಣರು ಖಂಡಿತವಾಗಿ ನಮ್ಮ ರಾಜನಾದ ಧೃಷ್ಟದ್ಯುಮ್ನನಿಗೆ ವಶರಾಗುವರು ಎಂದು ಪಾಂಚಾಲರು ಕಿರುಚಿದರು.

ದ್ರೋಣಸ್ತು ತ್ವರಿತೋ ಯುದ್ಧೇ ಧೃಷ್ಟದ್ಯುಮ್ನಸ್ಯ ಸಾರಥೇಃ ।
ಶಿರಃ ಪ್ರಚ್ಯಾವಯಾಮಾಸ ಫಲಂ ಪಕ್ವಂ ತರೋರಿವ ।
ತತಸ್ತೇ ಪ್ರದ್ರುತಾ ವಾಹಾ ರಾಜಂಸ್ತಸ್ಯ ಮಹಾತ್ಮನಃ ॥ ೬೫ ॥

ಯುದ್ಧದಲ್ಲಿ ಕ್ಷಿಪ್ರಕಾರಿಗಳಾದ ದ್ರೋಣರು ಧೃಷ್ಟದ್ಯುಮ್ನನ ಸಾರಥಿಯ ಶಿರಸ್ಸನ್ನು ಮರದಿಂದ ಮಾಗಿದ ಹಣ್ಣನ್ನು ಕೆಡವುವಂತೆ ಕೆಡವಿದರು. ಎಲೈ ರಾಜನೇ, ಆಗ ಮಹಾತ್ಮನಾದ ಧೃಷ್ಟದ್ಯುಮ್ನನ ಅಶ್ವಗಳು ಓಡಿಹೋದವು.

ತೇಷು ಪ್ರದ್ರವಮಾಣೇಷು ಪಾಂಚಾಲಾನ್ ಸೃಂಜಯಾಂಸ್ತಥಾ ।
ವ್ಯದ್ರಾವಯದ್ ರಣೇ ದ್ರೋಣಸ್ತತ್ರ ತತ್ರ ಪರಾಕ್ರಮೀ ॥ ೬೬ ॥

ಧೃಷ್ಟದ್ಯುಮ್ನನ ಅಶ್ವಗಳು ಓಡಿಹೋಗುತ್ತಿರಲು ಪರಾಕ್ರಮಶಾಲಿಗಳಾದ ದ್ರೋಣರು ಪಾಂಚಾಲರನ್ನೂ ಮತ್ತು ಸೃಂಜಯರನ್ನೂ ರಣರಂಗದಲ್ಲಿ ಓಡಿಸಿದರು.

ವಿಜಿತ್ಯ ಪಾಂಡುಪಾಂಚಾಲಾನ್ ಭಾರದ್ವಾಜಃ ಪ್ರತಾಪವಾನ್ ।
ಸ್ವಂ ವ್ಯೂಹಂ ಪುನರಾಸ್ಥಾಯ ಸ್ಥಿರೋಽಭವದರಿಂದಮಃ ॥
ನ ಚೈನಂ ಪಾಂಡವಾ ಯುದ್ಧೇ ಜೇತುಮುತ್ಸಹಿರೇ ಪ್ರಭೋ ॥ ೬೭ ॥

ಪ್ರತಾಪಶಾಲಿಗಳೂ, ಅರಿಂದಮರೂ ಆದ ದ್ರೋಣರು ಪಾಂಡು-ಪಾಂಚಾಲರ ಮಧ್ಯದಲ್ಲಿ ಪುನಃ ತಮ್ಮ ವ್ಯೂಹಕ್ಕೆ ಬಂದು ಸ್ಥಿರವಾಗಿ ನಿಂತರು. ಎಲೈ ಪ್ರಭುವೇ, ಆಗ ಪಾಂಡವರು ಅವರನ್ನು ಯುದ್ಧದಲ್ಲಿ ಗೆಲ್ಲುವ ಉತ್ಸಾಹವನ್ನು ತೋರಿಸಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಾಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂಬತ್ತನೆಯ ಅಧ್ಯಾಯ

ಸಾತ್ಯಕಿಯಿಂದ ಪುನಃ ದುಶ್ಶಾಸನನ ಪರಾಜಯ.

ಸಂಜಯಃ

ತತೋ ದುಃಶಾಸನೋ ರಾಜನ್ ಶೈನೇಯಂ ಸಮುಪಾದ್ರವತ್ ।
ಕರನ್ ಶರಸಹಸ್ರಾಣಿ ಪರ್ಜನ್ಯ ಇವ ವೃಷ್ಟಿಮಾನ್ ॥ ೧ ॥

ರಥವ್ರಾತೇನ ಮಹತಾ ನಾನಾದೇಶೋದ್ಭವೇನ ಚ ।
ಸರ್ವತೋ ಭರತಶ್ರೇಷ್ಠ ವಿಸೃಜನ್ ಸಾಯಕಾನ್ ಬಹೂನ್ ।
ಪರ್ಜನ್ಯ ಇವ ಘೋಷೇಣ ನಾದಯನ್ ವಿದಿಶೋ ದಶ ॥ ೨ ॥

ಸಂಜಯ– ಎಲೈ ರಾಜನೇ, ಆಗ ದುಶ್ಶಾಸನನು ನಾನಾ ದೇಶಗಳಿಂದ ಬಂದ ದೊಡ್ಡ ರಥಸಮೂಹಗಳೊಡನೆ ಕೂಡಿ ಮಳೆಯನ್ನು ಸುರಿಸುವ ಪರ್ಜನ್ಯನಂತೆ ಬಾಣಗಳನ್ನು ಸುರಿಸುತ್ತಾ, ಪರ್ಜನ್ಯಘೋಷದಂತೆ ದಿಕ್ಕುದಿಕ್ಕುಗಳನ್ನು ಪ್ರತಿಧ್ವನಿಸುತ್ತಾ ಸಾತ್ಯಕಿಯ ಕಡೆಗೆ ಧಾವಿಸಿದನು.

ತಮಾಪತಂತಮಾಲೋಕ್ಯ ಸಾತ್ಯಕಿಃ ಕೌರವಂ ರಣೇ ।
ಅಭಿದ್ರುತ್ಯ ಮಹಾಬಾಹುಃ ಭಾದಯಾಮಾಸ ಸಾಯಕೈಃ ॥ ೩ ॥

ತೇ ಚ್ಛಾದ್ಯಮಾನಾ ಬಾಣೌಘೈಃ ದುಃಶಾಸನಪುರೋಗಮಾಃ ।
ಪ್ರಾದ್ರವನ್ ಸಮರೇ ಭೀತಾಸ್ತವ ಪುತ್ರಸ್ಯ ಪಶ್ಯತಃ ॥ ೪ ॥

ಮಹಾಬಾಹುವಾದ ಸಾತ್ಯಕಿಯು ರಣರಂಗದಲ್ಲಿ ತನ್ನೆಡೆಗೆ ಬರುತ್ತಿದ್ದ ದುಶ್ಶಾಸನನನ್ನು ನೋಡಿ, ಅವನ ಕಡೆಗೆ ಓಡಿ ತನ್ನ ಬಾಣಗಳಿಂದ ಮುಚ್ಚಿದನು. ಸಾತ್ಯಕಿಯ ಬಾಣಸಮೂಹಗಳಿಂದ ಮುಚ್ಚಲ್ಪಟ್ಟ ದುಶ್ಶಾಸನನನ್ನು ಮುಂದೆ ಮಾಡಿಕೊಂಡ ಯೋಧರು ಯುದ್ಧದಲ್ಲಿ ಭೀತರಾಗಿ ದುಶ್ಶಾಸನನ ಕಣ್ಣೆದುರಿಗೇ ಓಡಿಹೋದರು.

ತೇಷು ದ್ರವತ್ಸು ರಾಜೇಂದ್ರ ಪುತ್ರೋ ದುಃಶಾಸನಸ್ತವ ।
ತಸ್ಥೌ ವ್ಯಪೇತಭೀ ರಾಜನ್ ಸಾತ್ಯಕಿಂ ಚಾರ್ದಯನ್ ಶರೈಃ ॥ ೫ ॥

ಎಲೈ ರಾಜನೇ, ಅವರು ಓಡಿಹೋಗುತ್ತಿರಲು ನಿನ್ನ ಪುತ್ರನಾದ ದುಶ್ಶಾಸನನು ನಿರ್ಭಯನಾಗಿ ನಿಂತು ಸಾತ್ಯಕಿಯನ್ನು ಬಾಣಗಳಿಂದ ಪೀಡಿಸಿದನು.

ಸಾತ್ಯಕಿಂ ಚ ಶತೇನಾಜೌ ವಿದ್ವಾ ನಾದಂ ಮುಮೋಚ ಸಃ ॥ ೬ ॥

ಸಾತ್ಯಕಿಯನ್ನು ನೂರು ಬಾಣಗಳಿಂದ ಹೊಡೆದು ದೊಡ್ಡ ನಾದವನ್ನು ಮಾಡಿದನು.

ತತಃ ಕ್ರುದ್ಧೋ ಮಹಾರಾಜ ಮಾಧವಸ್ತಸ್ಯ ಸಂಯುಗೇ ।
ರಥಂ ಸೂತಂ ಧ್ವಜಂ ತಂ ಚ ಚಕ್ರೇಽದೃಶ್ಯಮಜಿಹ್ಮಗೈಃ ॥ ೭ ॥

ಎಲೈ ಮಹಾರಾಜನೇ, ಆಗ ಮಧುಕುಲದಲ್ಲಿ ಜನಿಸಿದ ಸಾತ್ಯಕಿಯು ಯುದ್ಧದಲ್ಲಿ ನೇರವಾಗಿ ಸಾಗುವ ತನ್ನ ಬಾಣಗಳಿಂದ ದುಶ್ಶಾಸನನ ರಥ-ಸಾರಥಿ ಮತ್ತು ಧ್ವಜಗಳನ್ನು ಅದೃಶ್ಯಗಳನ್ನಾಗಿ ಮಾಡಿದನು.

ತತೋ ದುಃಶಾಸನಃ ಕ್ರುದ್ಧೋ ಯುದ್ಧ್ವಾ ಸಾತ್ಯಕಿಮಾಹವೇ ।
ನಾಕಂಪಯತ್ ಸ್ಥಿತಂ ಯುದ್ಧೇ ಮೈನಾಕಮಿವ ಪರ್ವತಮ್ ॥ ೮ ॥

ಆಗ ದುಶ್ಶಾಸನನು ರಣರಂಗದಲ್ಲಿ ಸಾತ್ಯಕಿಯ ಜೊತೆಯಲ್ಲಿ ಕ್ರುದ್ಧನಾಗಿ ಯುದ್ಧವನ್ನು ಮಾಡಿದರೂ ಮೈನಾಕ ಪರ್ವತದಂತಿದ್ದ ಅವನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ.

ಸ ತು ದುಃಶಾಸನಂ ವೀರಃ ಸಾಯಕೈರಾವೃಣೋದ್ ಭೃಶಮ್ ।
ಮಶಕಂ ಸಮನುಪ್ರಾಪ್ತಮೂರ್ಣನಾಭಿರಿವೋರ್ಣಯಾ ॥ ೯ ॥

ಜೇಡರ ಬಲೆಯಲ್ಲಿ ಬಿದ್ದ ನೊಣವನ್ನು ಜೇಡವು ತನ್ನ ಬಲೆಯಿಂದ ಮುಚ್ಚಿದಂತೆ ವೀರನಾದ ಸಾತ್ಯಕಿಯು ತನ್ನ ಬಾಣಗಳಿಂದ ದುಶ್ಶಾಸನನನ್ನು ತೀವ್ರವಾಗಿ ಮುಚ್ಚಿದನು.

ದೃಷ್ಟ್ವಾ ದುಃಶಾಸನಂ ರಾಜಾ ತಥಾ ಶರಶತಾಚಿತಮ್ ।
ತ್ರಿಗರ್ತಾಂಶ್ಚೋದಯಾಮಾಸ ಯುಯುಧಾನರಥಂ ಪ್ರತಿ ॥ ೧೦ ॥

ದುಶ್ಶಾಸನನು ನೂರಾರು ಬಾಣಗಳಿಂದ ಹೊಡೆಯಲ್ಪಟ್ಟುದನ್ನು ನೋಡಿ (ಅವನ ಶರೀರದಲ್ಲಿ ನೂರಾರು ಬಾಣಗಳು ನಾಟಿದುದನ್ನು ನೋಡಿ) ರಾಜನಾದ ದುರ್ಯೋಧನನು ತ್ರಿಗರ್ತರನ್ನು ಸಾತ್ಯಕಿಯ ರಥದ ಕಡೆಗೆ ಹೋಗುವಂತೆ ಪ್ರಚೋದಿಸಿದನು.

ತೇಽಗಚ್ಛನ್ ಯುಯುಧಾನಸ್ಯ ಸಮೀಪಂ ಕ್ರೂರಕಾರಿಣಃ ।
ತ್ರಿಗರ್ತಾನಾಂ ತ್ರಿಸಾಹಸ್ರಾ ರಥಾ ಯುದ್ಧವಿಶಾರದಾಃ ॥ ೧೧ ॥

ಯುದ್ಧವಿಶಾರದರಾದ, ಕೂರಕರ್ಮಿಗಳಾದ ತ್ರಿಗರ್ತರ ಮೂರುಸಹಸ್ರ ರಥರು ಸಾತ್ಯಕಿಯ ಸಮೀಪಕ್ಕೆ ಹೋದರು.

ತೇ ತು ತಂ ರಥವಂಶೇನ ಮಹತಾ ಪರ್ಯವಾರಯನ್ ।
ಸ್ಥಿರಾಂ ಕೃತ್ವಾ ಮತಿಂ ಯುದ್ಧೇ ಮರಣಾಯ ಜಯಾಯ ವಾ ॥ ೧೨ ॥

ಅವರು ಮರಣ ಅಥವಾ ಜಯಕ್ಕಾಗಿ ಯುದ್ಧದಲ್ಲಿ ಸ್ಥಿರವಾದ ಬುದ್ಧಿಯನ್ನು ಹೊಂದಿ ತಮ್ಮ ದೊಡ್ಡ ರಥಸಮೂಹದಿಂದ ಸಾತ್ಯಕಿಯನ್ನು ಸುತ್ತುವರಿದರು.

ತೇಷಾಂ ಪ್ರಯತತಾಂ ಯುದ್ಧೇ ಶರವರ್ಷಾಣಿ ಮುಂಚತಾಮ್ ।
ಯೋಧಾನ್ ಪಂಚಶತಾನ್ ಮುಖ್ಯಾನಗ್ರಾನೀಕೇ ವ್ಯಪೋಥಯತ್ ॥

ಸಾತ್ಯಕಿಯಾದರೋ ಬಾಣಗಳ ಮಳೆಯನ್ನು ಕರೆಯುತ್ತಾ, ಯುದ್ಧವನ್ನು ಮಾಡಲು ಪ್ರಯತ್ನಪಡುತ್ತಿದ್ದ ಅವರಲ್ಲಿ ಮುಖ್ಯರಾದ ಐದುನೂರು ಯೋಧರನ್ನು ಸೇನೆಯ ಮುಂಭಾಗದಲ್ಲಿ ನಾಶಗೊಳಿಸಿದನು.

ತೇಽಪತಂತ ಹತಾಸ್ಸೂರ್ಣಂ ಶಿನಿಪ್ರವರಸಾಯಕೈಃ ।
ಮಹಾಮಾರುತವೇಗೇನ ರುಗ್ಣಾ ಇವ ಮಹಾದ್ರುಮಾಃ ॥ ೧೪ ॥

ದೊಡ್ಡ ಬಿರುಗಾಳಿಯ ವೇಗಕ್ಕೆ ಸಿಲುಕಿ ಬಿದ್ದ ವೃಕ್ಷಗಳಂತೆ ಶಿನಿಪ್ರವರನಾದ ಸಾತ್ಯಕಿಯಿಂದ ಹೊಡೆಯಲ್ಪಟ್ಟ ಅವರು ಶೀಘ್ರವಾಗಿ ಬಿದ್ದರು.

ರಥೈಶ್ಚ ಬಹುಧಾ ಭಿನ್ನೈರ್ಧ್ವಜೈಶ್ಚೈವ ವಿಶಾಂಪತೇ ।
ಹಯೈಶ್ಚ ಕನಕಾಪೀಡೈಃ ಪತಿತೈಸ್ತತ್ರ ಮೇದಿನೀ ॥ ೧೫ ॥

ಶೈನೇಯಶರಸಂಕೃತ್ತೈಃ ಶೋಣಿತೌಘಪರಿಪ್ಲುತೈಃ ।
ಅಶೋಭತ ಮಹಾರಾಜ ಕಿಂಶುಕೈರಿವ ಪುಷ್ಪಿತೈಃ ॥ ೧೬ ॥

ಎಲೈ ರಾಜನೇ, ಸಾತ್ಯಕಿಯ ಬಾಣಗಳಿಂದ ಕತ್ತರಿಸಲ್ಪಟ್ಟ ರಥ-ಧ್ವಜಗಳಿಂದಲೂ, ಮತ್ತು ರಕ್ತದಿಂದ ತೊಯ್ದ ಶಿರಸ್ಸಿನಲ್ಲಿ ಸುವರ್ಣಮಯವಾದ ಆಭರಣವನ್ನು ಹೊಂದಿ ಬಿದ್ದ ಅಶ್ವಗಳಿಂದಲೂ ಭೂಮಿಯು ಹೂವರಳಿದ ಮುತ್ತುಗವೃಕ್ಷದಂತೆ ಶೋಭಿಸಿತು.

ತೇ ವಧ್ಯಮಾನಾಃ ಸಮರೇ ಯುಯುಧಾನೇನ ತಾವಕಾಃ ।
ತ್ರಾತಾರಂ ನಾಧ್ಯಗಚ್ಛಂತ ಪಂಕಮಗ್ನಾ ಇವ ದ್ವಿಪಾಃ ॥ ೧೬ ॥

ಯುದ್ಧದಲ್ಲಿ ಯುಯುಧಾನನ ಬಾಣಗಳ ಹೊಡೆತಕ್ಕೆ ಸಿಲುಕಿದ ಅವರು ಕೆಸರಿನಲ್ಲಿ ಬಿದ್ದ ಗಜಗಳಂತೆ ಯಾವ ರಕ್ಷಕನನ್ನೂ ಕಾಣಲಿಲ್ಲ.

ತತಸ್ತೇ ಪರ್ಯವರ್ತಂತ ಸರ್ವೇ ದ್ರೋಣರಥಂ ಪ್ರತಿ ।
ಭಯಾತ್ ಪತಗರಾಜಸ್ಯ ಗರ್ತಾನೀವ ಮಹೋರಗಾಃ ॥ ೧೪ ॥

ಆಗ ಅವರೆಲ್ಲರೂ ಗರುಡನ ಭಯದಿಂದ ಬಿಲಗಳನ್ನು ಸೇರುವ ಮಹಾ ಸರ್ಪಗಳಂತೆ ದ್ರೋಣರ ರಥದ ಕಡೆಗೆ ತಿರುಗಿದರು.

ಹತ್ವಾ ಪಂಚಶತಾನ್ ಯೋಧಾನ್ ಶರೈರಾಶೀವಿಷೋಪಮೈಃ ।
ಪ್ರಯಾತ್ಸು ಶನಕೈರ್ವೀರೋ ಧನಂಜಯರಥಂ ಪ್ರತಿ ॥ ೧೯ ॥

ವೀರನಾದ ಸಾತ್ಯಕಿಯು ಸರ್ಪಸದೃಶವಾದ ಬಾಣಗಳಿಂದ ಐದುನೂರು ಯೋಧರನ್ನು ಕೊಂದು ಅರ್ಜುನನ ರಥದ ಕಡೆಗೆ ಹೊರಟನು.

ವಿವ್ಯಾಧ ನವಭಿಸ್ತೂರ್ಣಂ ಶರೈಃ ಸನ್ನತಪರ್ವಭಿಃ ।
ಶೈನೇಯಸ್ತು ತತಸ್ತೂರ್ಣಂ ವಿದ್ವಾ ಪಂಚಭಿರಾಶುಗೈಃ ॥ ೨೦ ॥

ಹಾಗೆ ಹೊರಟ ರಥಶ್ರೇಷ್ಠನಾದ ಅವನನ್ನು ನಿನ್ನ ಪುತ್ರನಾದ ದುಶ್ಶಾಸನನು ಬಾಗಿದ ತುದಿಯುಳ್ಳ ಒಂಬತ್ತು ಬಾಣಗಳಿಂದ ಹೊಡೆದನು.

ಕ್ಷುರಪ್ರೇಣ ಧನುಶ್ಚಿತ್ವಾ ಪ್ರಹಸನ್ನಭ್ಯವರ್ತತ ।
ಧನುರನ್ಯತ್ ಸಮಾದಾಯ ಪುತ್ರೋ ದುಃಶಾಸನಸ್ತವ ॥
ಪಂಚಭಿಃ ಪ್ರತಿವಿವ್ಯಾಧ ಶರೈಃ ಸನ್ನತಪರ್ವಭಿಃ ॥ ೨೧ ॥

ಸಾತ್ಯಕಿಯಾದರೂ ಅವನನ್ನು ಶೀಘ್ರವಾಗಿ ಶೀಘ್ರಗಾಮಿಗಳಾದ ಐದು ಬಾಣಗಳಿಂದ ಹೊಡೆದು, ಕ್ಷುರಪ್ರದಿಂದ ಅವನ ಧನುಸ್ಸನ್ನು ಕತ್ತರಿಸಿ ನಗುತ್ತಾ ಮುಂದೆ ಸಾಗಿದನು.

ನಿನ್ನ ಪುತ್ರನಾದ ದುಶ್ಶಾಸನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಅವನನ್ನು ಬಾಗಿದ ತುದಿಯುಳ್ಳ ಐದು ಬಾಣಗಳಿಂದ ಹೊಡೆದನು.

ಸ ತು ತಂ ಪ್ರತಿವಿವ್ಯಾಧ ಪಂಚಭಿರ್ನಿಶಿತೈಃ ಶರೈಃ ।
ರುಗ್ಮಪುಂಖೈರ್ಮಹೇಷ್ವಾಸೋ ಗಾರ್ಧಪತ್ರೈರಜಿಹ್ಮಗೈಃ ॥ ೨೨ ॥

ಮಹಾಧನುರ್ಧಾರಿಯಾದ ಸಾತ್ಯಕಿಯಾದರೋ ಗೃಧ್ರಪತ್ರಗಳನ್ನು ಹೊಂದಿದ್ದ, ಸುವರ್ಣಪುಂಖಗಳನ್ನು ಹೊಂದಿದ್ದ, ನೇರವಾಗಿ ಸಾಗುವ ಐದು ತೀಕ್ಷ್ಣವಾದ ಬಾಣಗಳಿಂದ ಅವನನ್ನು ಪ್ರತಿಯಾಗಿ ಹೊಡೆದನು.

ಸಾತ್ಯಕಿಂ ತು ಮಹಾರಾಜ ಪ್ರಹಸನ್ನಿವ ಭಾರತ ।
ದುಃಶಾಸನಸ್ತ್ರಿಭಿರ್ವಿದ್ಧ್ವಾ ಪುನರ್ವಿವ್ಯಾಧ ಪಂಚಭಿಃ ॥ ೨೩ ॥

ಎಲೈ ಭಾರತನೇ, ಮಹಾರಾಜನೇ, ದುಶ್ಶಾಸನನು ನಗುತ್ತಲೇ ಸಾತ್ಯಕಿಯನ್ನು ಮೂರು ಬಾಣಗಳಿಂದ ಹೊಡೆದು, ಪುನಃ ಐದು ಬಾಣಗಳಿಂದ ಹೊಡೆದನು.

ಶೈನೇಯಸ್ತವ ಪುತ್ರಂ ತು ವಿದ್ಧ್ವಾ ಪಂಚಭಿರಾಶುಗೈಃ ।
ಧನುಶ್ಚಾಸ್ಯ ರಣೇ ಛಿತ್ತ್ವಾ ವಿಸ್ಮಯನ್ನರ್ಜುನಂ ಯಯೌ ॥ ೨೪ ॥

ಸಾತ್ಯಕಿಯು ನಿನ್ನ ಪುತ್ರನನ್ನು ಶೀಘ್ರಗಾಮಿಗಳಾದ ಐದು ಬಾಣಗಳಿಂದ ಹೊಡೆದು, ರಣರಂಗದಲ್ಲಿ ಅವನ ಧನುಸ್ಸನ್ನೂ ಕತ್ತರಿಸಿ, ನಗುತ್ತಾ ಅರ್ಜುನನ ಕಡೆಗೆ ಹೊರಟನು.

ತತೋ ದುಃಶಾಸನಃ ಕ್ರುದ್ಧೋ ವೃಷ್ಣಿವೀರಾಯ ಗಚ್ಛತೇ ।
ಸರ್ವಪಾರಶವೀಂ ಶಕ್ತಿಂ ವಿಸಸರ್ಜ ಜಿಘಾಂಸಯಾ ॥ ೨೫ ॥

ಆಗ ದುಶ್ಶಾಸನನು ಕೋಪಗೊಂಡು ಹೋಗುತ್ತಿದ್ದ ಸಾತ್ಯಕಿಯ ಮೇಲೆ ಅವನನ್ನು ಕೊಲ್ಲುವ ಉದ್ದೇಶದಿಂದ ಅಯಸ್ಮಯವಾದ ಒಂದು ಶಕ್ತ್ಯಾಯುಧವನ್ನು ಎಸೆದನು.

ತಾಂ ತು ಶಕ್ತಿಂ ತದಾ ಘೋರಾಂ ತವ ಪುತ್ರಸ್ಯ ಸಾತ್ಯಕಿಃ ।
ಚಿಚ್ಛೇದ ಶತಧಾ ರಾಜನ್ನಿಶಿತೈಃ ಕಂಕಪತ್ರಿಭಿಃ ॥ ೨೬ ॥

ಎಲೈ ರಾಜನೇ, ನಿನ್ನ ಪುತ್ರನು ಪ್ರಯೋಗಿಸಿದ ಆ ಘೋರವಾದ ಶಕ್ತಿಯನ್ನು ಸಾತ್ಯಕಿಯು ಕಂಕಪತ್ರಗಳನ್ನು ಹೊಂದಿದ ತೀಕ್ಷ್ಣವಾದ ಬಾಣಗಳಿಂದ ನೂರು ಭಾಗವಾಗಿ ಕತ್ತರಿಸಿದನು.

ಅಥಾನ್ಯದ್ಧನುರಾದಾಯ ಪುತ್ರಸ್ತವ ಜನೇಶ್ವರ ।
ಸಾತ್ಯಕಿಂ ದಶಭಿರ್ವಿದ್ಧ್ವಾ ಸಿಂಹನಾದಂ ನನಾದ ಹ ॥ ೨೭ ॥

ಎಲೈ ಜನೇಶ್ವರನೇ, ಆಗ ನಿನ್ನ ಪುತ್ರನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಸಾತ್ಯಕಿಯನ್ನು ಹತ್ತು ಬಾಣಗಳಿಂದ ಹೊಡೆದು ಸಿಂಹನಾದವನ್ನು ಮಾಡಿದನು.

ಸಾತ್ಯಕಿಸ್ತು ರಣೇ ಕ್ರುದ್ಧೋ ಮೋಹಯಿತ್ವಾ ಸುತಂ ತವ ।
ಶರೈರಗ್ನಿಶಿಖಾಕಾರೈರಾಜಘಾನ ಸ್ತನಾಂತರೇ ।
ಸರ್ವಾಯಸೈಸ್ತೀಕ್ಷ್ಣವಕ್ತ್ರೈರಷ್ಟಭಿರ್ವಿಷ್ಣುತೇಜಸಾ ॥ ೨೮ ॥

ಸಾತ್ಯಕಿಯಾದರೋ ರಣರಂಗದಲ್ಲಿ ಕೋಪಗೊಂಡು ನಿನ್ನ ಪುತ್ರನನ್ನು ಮರುಳುಗೊಳಿಸಿ, ಅಗ್ನಿಜ್ವಾಲೆಯಂತಿದ್ದ ಬಾಣಗಳಿಂದ ಅವನನ್ನು ಸ್ತನಗಳ ಮಧ್ಯದಲ್ಲಿ ಹೊಡೆದನು. ಪುನಃ ಪೂರ್ಣವಾಗಿ ಕಬ್ಬಿಣದಿಂದ ಮಾಡಿದ ತೀಕ್ಷ್ಣವಾದ ಅಸ್ತ್ರಭಾಗವುಳ್ಳ ಎಂಟು ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ದುಃಶಾಸನಸ್ತು ವಿಂಶತ್ಯಾ ಸಾತ್ಯಕಿಂ ಪ್ರತ್ಯವಿಧ್ಯತ ।
ಸಾತ್ವತೋಽಪಿ ಮಹಾರಾಜ ತಂ ವಿವ್ಯಾಧ ಸ್ತನಾಂತರೇ ।
ತ್ರಿಭಿರೇವ ಮಹಾವೇಗೈಃ ಶರೈಃ ಸನ್ನತಪರ್ವಭಿಃ ॥ ೨೯ ।

ದುಶ್ಶಾಸನನಾದರೂ ಸಾತ್ಯಕಿಯ ಮೇಲೆ ಇಪ್ಪತ್ತು ಬಾಣಗಳನ್ನು ಪ್ರಯೋಗಿಸಿದನು. ಎಲೈ ಮಹಾರಾಜನೇ, ಸಾತ್ಯಕಿಯೂ ಕೂಡ ಮಹಾವೇಗವುಳ್ಳ, ಬಾಗಿದ ತುದಿಯುಳ್ಳ ಮೂರು ಬಾಣಗಳಿಂದಲೇ ಅವನನ್ನು ಸ್ತನಗಳ ಮಧ್ಯದಲ್ಲಿ ಹೊಡೆದನು.

ತತೋಽಸ್ಯ ವಾಹಾನ್ನಿಶಿತೈಃ ಶರೈರ್ಜಘ್ನೇ ಮಹಾರಥಃ ।
ಸಾರಥಿಂ ಚ ಸುಸಂಕ್ರುದ್ಧೋ ಶರೈಃ ಸನ್ನತಪರ್ವಭಿಃ ॥ ೩೦ ॥

ಆನಂತರ ಮಹಾರಥನಾದ ಸಾತ್ಯಕಿಯು ಅವನ ರಥದ ಅಶ್ವಗಳನ್ನು ತೀಕ್ಷ್ಣವಾದ ಬಾಣಗಳಿಂದ ಕೊಂದು, ಬಾಗಿದ ತುದಿಯುಳ್ಳ ಬಾಣಗಳಿಂದ ಅವನು ಅವನ ಸಾರಥಿಯನ್ನೂ ಕೊಂದನು.

ಧನುರೇಕೇನ ಭಲ್ಲೇನ ಹಸ್ತಾವಾಪಂ ಚ ಪಂಚಭಿಃ ।
ಧ್ವಜಂ ಚ ರಥಶಕ್ತಿಂ ಚ ಭಲ್ಲಾಭ್ಯಾಂ ಪರಮಾಸ್ತ್ರವಿತ್ ।
ಚಿಚ್ಛೇದ ವಿಶಿಖೈಸ್ತೀಕ್ಷ್ಣೈಸ್ತಥೋಭೌ ಪಾರ್ಷ್ಣಿಸಾರಥೀ ॥ ೩೧ ॥

ಪರಮಾಸ್ತ್ರವೇತ್ತನಾದ ಸಾತ್ಯಕಿಯು ಒಂದು ಭಲ್ಲದಿಂದ ಅವನ ಧನುಸ್ಸನ್ನೂ, ಐದು ಭಲ್ಲಗಳಿಂದ ಅವನ ಬತ್ತಳಿಕೆಯನ್ನೂ, ಎರಡು ಭಲ್ಲಗಳಿಂದ ಅವನ ಧ್ವಜ ಮತ್ತು ರಥಶಕ್ತಿಯನ್ನೂ ಕತ್ತರಿಸಿ, ತೀಕ್ಷ್ಣವಾದ ಬಾಣಗಳಿಂದ ಅವನ ಇಬ್ಬರು ಪಾರ್ಷ್ಣಿ ಸಾರಥಿಗಳನ್ನು ಹೊಡೆದನು.

ಸ ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ತ್ರಿಗರ್ತಸೇನಾಪತಿನಾ ಸ್ವರಥೇನಾಪವಾಹಿತಃ ॥ ೩೨ ॥

ಧನುಸ್ಸು ಕತ್ತರಿಸಲ್ಪಟ್ಟು, ರಥಾಶ್ವಸಾರಥಿಗಳಿಂದ ಹೀನನಾದ ಅವನನ್ನು ತ್ರಿಗರ್ತರ ಸೇನಾಧಿಪತಿಯು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ರಣರಂಗದಿಂದ ಹೊರಗೆ ಕರೆದುಕೊಂಡು ಹೋದನು.

ತಮಭಿದ್ರುತ್ಯ ಶೈನೇಯೋ ಮುಹೂರ್ತಮಿವ ಭಾರತ ।
ನ ಜಘಾನ ಮಹಾಬಾಹುರ್ಭೀಮಸೇನವಚಃ ಸ್ಮರನ್
ತಂ ಪ್ರಾಪ್ತಮಪಿ ನೇಯೇಷ ಹಂತುಂ ದುಃಶಾಸನಂ ನೃಪ ॥ ೩೩॥

ಎಲೈ ಭಾರತನೇ, ಮಹಾಬಾಹುವಾದ ಸಾತ್ಯಕಿಯು ಒಂದು ಮುಹೂರ್ತದ ಕಾಲ ಅವನನ್ನು ಹಿಂಬಾಲಿಸಿದರೂ ಭೀಮಸೇನನ ಮಾತನ್ನು ಸ್ಮರಿಸಿ ಅವನನ್ನು ಕೊಲ್ಲಲಿಲ್ಲ. ಎಲೈ ರಾಜನೇ, ದುಶ್ಶಾಸನನು ತನ್ನ ಕೈಗೆ ಸಿಲುಕಿದರೂ ಅವನನ್ನು ಕೊಲ್ಲಲು ಬಯಸಲಿಲ್ಲ.

ಭೀಮಸೇನೇನ ಹಿ ವಧಃ ಸುತಾನಾಂ ತವ ಭಾರತ ।
ಪ್ರತಿಜ್ಞಾತಃ ಸಭಾಮಧ್ಯೇ ಸರ್ವೇಷಾಮೇವ ಸಂಯುಗೇ ॥ ೩೪ ॥

ಎಲೈ ಭಾರತನೇ, ಸಭಾಮಧ್ಯದಲ್ಲಿ ನಿನ್ನ ಎಲ್ಲ ಪುತ್ರರನ್ನೂ ಯುದ್ಧದಲ್ಲಿ ತಾನೇ ಕೊಲ್ಲುವೆನೆಂದು ಭೀಮಸೇನನು ಪ್ರತಿಜ್ಞೆ ಮಾಡಿದ್ದಾನಷ್ಟೆ?

ತಥಾ ದುಃಶಾಸನಂ ಜಿತ್ವಾ ಸಾತ್ಯಕಿಃ ಸಂಯುಗೇ ಪ್ರಭೋ ।
ಜಗಾಮ ತ್ವರಿತೋ ರಾಜನ್ ಯೇನ ಯಾತೋ ಧನಂಜಯಃ ॥ ೩೫ ॥

ಎಲೈ ಪ್ರಭುವೇ, ಸಾತ್ಯಕಿಯು ಯುದ್ಧದಲ್ಲಿ ಆ ರೀತಿಯಲ್ಲಿ ದುಶ್ಶಾಸನನನ್ನು ಗೆದ್ದು ಶೀಘ್ರವಾಗಿ ಧನಂಜಯನು ಹೋದ ಮಾರ್ಗದಲ್ಲಿಯೇ ಹೋದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ನವಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ತ್ರಯಸ್ತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತನೆಯ ಅಧ್ಯಾಯ

ಸಂಕುಲ ಯುದ್ಧವರ್ಣನೆ. ಸಾತ್ಯಕಿಯಿಂದ ಅರ್ಜುನನ ದರ್ಶನ.

ಧೃತರಾಷ್ಟ್ರಃ

ಕಿಂ ತಸ್ಯಾಂ ಮಮ ಸೇನಾಯಾಂ ನಾಸನ್ ಕೇಚಿನ್ಮಹಾರಥಾಃ ।
ಯೇ ತಥಾ ಸಾತ್ಯಕಿಂ ಯಾಂತಂ ನೈವಾಘ್ನನ್ ನಾಪ್ಯವಾರಯನ್ ॥ ೧ ॥

ಧೃತರಾಷ್ಟ್ರ– ಎಲೈ ಸಂಜಯನೇ, ಆ ರೀತಿಯಲ್ಲಿ ಹೋಗುತ್ತಿದ್ದ ಸಾತ್ಯಕಿಯನ್ನು ಕೊಲ್ಲಲು ಅಥವಾ ತಡೆಯಲು ನನ್ನ ಸೈನ್ಯದಲ್ಲಿ ಯಾವ ಮಹಾರಥರೂ ಇರಲಿಲ್ಲವೇ?

ಏಕೋ ಹಿ ಸಮರೇ ಕರ್ಮ ಕೃತವಾನ್ ಸತ್ಯವಿಕ್ರಮಃ ।
ಶಕ್ರತುಲ್ಯಬಲೋ ಯುದ್ಧೇ ಮಹೇಂದ್ರೋ ದಾನವೇಷ್ವಿವ ॥ ೨ ॥

ಇಂದ್ರನಿಗೆ ಸಮವಾದ ಬಲವುಳ್ಳ, ಸತ್ಯಪರಾಕ್ರಮನಾದ ಅವನು ಇಂದ್ರನು ದಾನವರ ಜೊತೆಯಲ್ಲಿ ಮಾಡಿದಂತೆ ಒಬ್ಬನೇ ಯುದ್ಧದಲ್ಲಿ ಅದ್ಭುತವಾದ ಕರ್ಮವನ್ನು ಮಾಡಿದನು.

ಅಥ ವಾ ಶೂನ್ಯಮಾಸೀತ್ ತದ್ ಯೇನ ಯಾತಃ ಸ ಸಾತ್ಯಕಿಃ ।
ಏಕೋ ವೈ ಬಹುಲಾಃ ಸೇನಾಃ ಪ್ರಮೃದ್ನನ್ ಪುರುಷರ್ಷಭಃ ॥ ೩ ॥

ಅಥವಾ ಸಾತ್ಯಕಿಯು ಹೋದ ಮಾರ್ಗವು ಶೂನ್ಯವಾಗಿದ್ದಿತೆ? ಏಕೆಂದರೆ ಪುರುಷಶ್ರೇಷ್ಠನಾದ ಅವನೊಬ್ಬನೇ ಬಹಳ ಸೈನ್ಯಗಳನ್ನು ವಿನಾಶಮಾಡಿದನಷ್ಟೆ?

ಯತ್ ಕೃತಂ ವೃಷ್ಣಿವೀರೇಣ ಕರ್ಮ ಶಂಸಸಿ ಮೇ ರಣೇ ।
ನೈತದುತ್ಸಹತೇ ಕರ್ಮ ಕರ್ತುಂ ಶಕ್ರೋಽಪಿ ಸಂಜಯ ॥ ೪ ॥

ಎಲೈ ಸಂಜಯನೇ, ನೀನು ವೃಷ್ಣಿವೀರನಾದ ಸಾತ್ಯಕಿಯು ಯುದ್ಧದಲ್ಲಿ ಎಂತಹ ಕರ್ಮವನ್ನು ಮಾಡಿದನೆಂದು ಹೇಳುತ್ತಿದ್ದಿಯೋ ಅದನ್ನು ಇಂದ್ರನೂ ಮಾಡಲಾರ.

ಅಶ್ರದ್ದೇಯಮಚಿಂತ್ಯಂ ಚ ಕರ್ಮ ತಸ್ಯ ಮಹಾತ್ಮನಃ ।
ವೃಷ್ಣ್ಯಂಧಕಪ್ರವೀರಸ್ಯ ಶ್ರುತ್ವಾ ಮೇ ವ್ಯಥಿತಂ ಮನಃ ॥ ೫ ॥

ವೃಷ್ಣ್ಯಂಧಕವೀರನಾದ, ಮಹಾತ್ಮನಾದ ಅವನ ನಂಬಲು ಅಸಾಧ್ಯವಾದ, ಅಚಿಂತ್ಯವಾದ ಕರ್ಮವನ್ನು ಕೇಳಿ ನನ್ನ ಮನಸ್ಸಿಗೆ ವ್ಯಥೆಯಾಗಿದೆ.

ಕಥಂ ಚ ಯುದ್ಧ್ಯಮಾನಾನಾಮಪಕ್ರಾಂತೋ ಮಹಾತ್ಮನಾಮ್ ।
ಏಕೋ ಬಹೂನಾಂ ಶೈನೇಯಸ್ತನ್ಮಾಚಕ್ಷ್ವ ಸಂಜಯ ।
ನ ಸಂತಿ ತಸ್ಯಾತ್ ಪುತ್ರಾ ಮೇ ಯಥಾ ಸಂಜಯ ಭಾಷಸೇ ॥ ೬ ॥

ಎಲೈ ಸಂಜಯನೇ, ಅನೇಕ ಮಹಾತ್ಮರು ಯುದ್ಧ ಮಾಡುತ್ತಿದ್ದರೂ ಸಾತ್ಯಕಿಯೊಬ್ಬನೇ ಅಲ್ಲಿಂದ ಹೇಗೆ ಹೋದನೆಂದು ನನಗೆ ಹೇಳು. ಎಲೈ ಸಂಜಯನೇ, ನೀನು ಮಾತನಾಡುತ್ತಿರುವುದನ್ನು ಕೇಳಿದರೆ ನನ್ನ ಪುತ್ರರು ಇಲ್ಲವೆಂದೇ ಭಾವಿಸುತ್ತೇನೆ.

ಸಂಜಯಃ

ರಾಜನ್ ಸೇನಾಸಮುದ್ಯೋಗೋ ರಥನಾಗಾಶ್ವಪತ್ತಿಮಾನ್ ।
ಆತುಲ್ಯಸ್ತವ ಸೈನ್ಯಾನಾಂ ಯುಗಾಂತಸದೃಶೋಽಭವತ್ ॥ ೭ ॥

ಸಂಜಯ– ಎಲೈ ರಾಜನೇ, ರಥ-ಗಜಾಶ್ವ-ಪದಾತಿಗಳಿಂದ ಕೂಡಿದ ನಿನ್ನ ಸೈನ್ಯದ ಪ್ರಯತ್ನವು ಅಸದೃಶವಾಗಿ ಯುಗಾಂತ ಕಾಲದಂತೆ ಇದ್ದಿತು.

ಆಹಿತೇಷು ಸಮೂಹೇಷು ತವ ಸೈನ್ಯಸ್ಯ ಮಾನದ ।
ನಾಸ್ತಿ ಲೋಕೇ ಸಮಃ ಕಶ್ಚಿತ್ ಸಮೂಹ ಇತಿ ಮೇ ಮತಿಃ ॥ ೮ ॥

ಎಲೈ ಮಾನದನೇ, ನಿನ್ನ ಸೈನ್ಯವನ್ನು ಪ್ರತಿದಿವಸವೂ ಹೇಗೆ ವ್ಯೂಹಗೊಳಿಸಿದರೋ ಅಂತಹ ವ್ಯೂಹಕ್ಕೆ ಸಮನಾದ ವ್ಯೂಹವು ಲೋಕದಲ್ಲಿ ಯಾವುದೂ ಇಲ್ಲ ಎಂದು ನನ್ನ ಅಭಿಪ್ರಾಯ.

ತತ್ರ ದೇವಾಃ ಸ್ಮ ಭಾಷಂತೇ ಚಾರಣಾಶ್ಚ ಸಮಾಗತಾಃ ।
ಏತದಂತಾಃ ಸಮೂಹಾ ವೈ ಭವಿಷ್ಯಂತಿ ಮಹೀತಳೇ ॥ ೯ ॥

ಅಲ್ಲಿಗೆ ಬಂದ ದೇವತೆಗಳು ಮತ್ತು ಚಾರಣರು ಭೂಮಿಯಲ್ಲಿ ಇದೇ ವ್ಯೂಹಗಳ ಕೊನೆಯ ತುದಿ ಎಂದು ಮಾತನಾಡಿಕೊಂಡರು.

ನ ಚೈವ ತಾದೃಶಃ ಕಶ್ಚಿದ್ ವ್ಯೂಹ ಆಸೀದ್ ವಿಶಾಂಪತೇ ।
ಯಾದೃಗ್ ಜಯದ್ರಥವಧೇ ದ್ರೋಣೇನ ವಿಹಿತೋಽಭವತ್ ॥ ೧೦ ॥

ಎಲೈ ರಾಜನೇ, ಜಯದ್ರಥನ ವಧೆಯ ದಿವಸ ದ್ರೋಣರು ಎಂತಹ ವ್ಯೂಹವನ್ನು ರಚಿಸಿದರೋ ಅಂತಹ ಇನ್ನೊಂದು ವ್ಯೂಹವು ಎಂದೂ ಇರಲಿಲ್ಲ.

ಚಂಡವಾತಾಭಿಪನ್ನಾನಾಂ ಸಮುದ್ಯಾನಾಮಿವ ಸ್ವನಃ ।
ರಣೇಽಭವದ್ ಬಲೌಘಾನಾಮನ್ಯೋನ್ಯಮಭಿಧಾವತಾಮ್ ॥ ೧೧ ॥

ರಣರಂಗದಲ್ಲಿ ಪರಸ್ಪರವಾಗಿ ಧಾವಿಸುವ ಸೈನ್ಯಗಳಿಂದ ಉಂಟಾದ ನಾದವು ಬಿರುಗಾಳಿಗೆ ಸಿಲುಕಿದ ಸಮುದ್ರಗಳ ಘೋಷದಂತೆ ಇದ್ದಿತು.

ಪಾರ್ಥಿವಾನಾಂ ಸಮೇತಾನಾಂ ಬಹೂನ್ಯಾಸನ್ ನರೋತ್ತಮ ।
ತ್ವದ್ಬಲೇ ಪಾಂಡವಾನಾಂ ಚ ಸಹಸ್ರಾಣಿ ಶತಾನಿ ಚ ॥ ೧೨ ॥

ಎಲೈ ನರಶ್ರೇಷ್ಠನೇ, ನಿನ್ನ ಸೈನ್ಯದಲ್ಲಿಯೂ ಮತ್ತು ಪಾಂಡವರ ಸೈನ್ಯದಲ್ಲಿಯೂ ಒಟ್ಟುಗೂಡಿದ ರಾಜರು ಅನೇಕ ಶತಸಹಸ್ರಸಂಖ್ಯೆಯಲ್ಲಿದ್ದರು.

ಸಂರಬ್ಧಾನಾಂ ಪ್ರವೀರಾಣಾಂ ಸಮರೇ ದೃಢಕರ್ಮಣಾಮ್ ।
ತತ್ರಾಸೀತ್ ಸುಮಹಾನ್ ಶಬ್ದಸ್ತುಮುಲೋ ಲೋಮಹರ್ಷಣಃ ॥೧೩॥

ಯುದ್ಧದಲ್ಲಿ ದೃಢವಾದ ಕಾರ್ಯವನ್ನು ಮಾಡುವ ಕೋಪಗೊಂಡ ಆ ಪ್ರವೀರರಿಂದ ಉಂಟಾದ ದೊಡ್ಡ ಶಬ್ದವು ತೀವ್ರವೂ ರೋಮಾಂಚಕಾರಿಯೂ ಆಗಿದ್ದಿತು.

ಆಥಾಕ್ರಂದದ್ ಭೀಮಸೇನೋ ಧೃಷ್ಟದ್ಯುಮ್ನಶ್ಚ ಮಾರಿಷ ।
ನಕುಲಃ ಸಹದೇವಶ್ಚ ಧರ್ಮರಾಜಶ್ಚ ಪಾಂಡವಃ ॥ ೧೫ ॥

ಆಗಚ್ಛತ ಪ್ರಹರತ ಬಲವತ್ ಪರಿಧಾವತ ।
ಪ್ರವಿಷ್ಟಾವರಿಸೇನಾಂ ಹಿ ವೀರೌ ಮಾಧವಪಾಂಡವೌ ॥ ೧೬ ॥

ಯಥಾ ಸುಖೇನ ಗಚ್ಛೇತಾಂ ಜಯದ್ರಥವಧಂ ಪ್ರತಿ ।
ತಥಾ ಪ್ರಕುರುತ ಕ್ಷಿಪ್ರಮಿತಿ ಸೈನ್ಯಾನ್ಯಚೋದಯತ್ ।
ತಯೋರಭಾವೇ ಕುರವಃ ಕೃತಾರ್ಥಾಃ ಸ್ಯುರ್ವಯಂ ಜಿತಾಃ ॥ ೧೭ ॥

ತೇ ಯೂಯಂ ಸಹಿತಾ ಭೂತ್ವಾ ತೂರ್ಣಮೇವ ಬಲಾರ್ಣವಮ್ ।
ಕ್ಷೋಭಯದ್ವಂ ಮಹಾವೇಗಾಃ ಪವನಾಃ ಸಾಗರಂ ಯಥಾ ॥ ೧೮ ॥

ಆಗ ಎಲೈ ಪೂಜ್ಯನೇ, ಭೀಮಸೇನನೂ, ಧೃಷ್ಟದ್ಯುಮ್ನನೂ, ನಕುಲ-ಸಹದೇವರೂ ಮತ್ತು ಧರ್ಮರಾಜನೂ ತಮ್ಮ ಸೈನ್ಯವನ್ನು ಕುರಿತು ಉಚ್ಚಸ್ವರದಲ್ಲಿ- 'ಬನ್ನಿ, ಬಲವಾಗಿ ಪ್ರಹಾರವನ್ನು ಮಾಡಿ, ಎಲ್ಲ ಕಡೆಯಲ್ಲಿಯೂ ಓಡಿ, ವೀರರಾದ ಕೃಷ್ಣಾರ್ಜುನರು ಶತ್ರುಸೈನ್ಯವನ್ನು ಪ್ರವೇಶಿಸಿದ್ದಾರೆ. ಜಯದ್ರಥನ ವಧೆಗಾಗಿ ಅವರಿಬ್ಬರೂ ಸುಖವಾಗಿ ಹೋಗುವಂತೆ ಕ್ಷಿಪ್ರವಾಗಿ ವ್ಯವಸ್ಥೆ ಮಾಡಿ. ಅವರಿಲ್ಲದಿದ್ದರೆ ಕುರುಗಳು ಕೃತಾರ್ಥರಾಗುತ್ತಾರೆ ಮತ್ತು ನಾವು ಪರಾಜಿತರಾಗುತ್ತೇವೆ. ಆದ್ದರಿಂದ ನೀವೆಲ್ಲರೂ ಒಟ್ಟಾಗಿ ಮಹಾವೇಗವನ್ನು ಹೊಂದಿದ ವಾಯುವು ಸಾಗರವನ್ನು ಕ್ಷೋಭೆಗೊಳಿಸಿದಂತೆ ಕೌರವರ ಬಲಸಾಗರವನ್ನು ಕ್ಷೋಭೆಗೊಳಿಸಿ' ಎಂದು ಪ್ರಚೋದಿಸಿದರು.

ಭೀಮಸೇನೇನ ತೇ ರಾಜನ್ ಪಾಂಚಾಲ್ಯೇನ ಚ ಚೋದಿತಾಃ ।
ಆಜಘ್ನುಃ ಕೌರವಾನ್ ಸಂಖೇ ತ್ಯಕ್ತ್ವಾ ಸೂನಾತ್ಮನಃ ಪ್ರಿಯಾನ್ ॥ ೨೦ ॥

ಎಲೈ ರಾಜನೇ, ಭೀಮಸೇನನಿಂದಲೂ ಮತ್ತು ಧೃಷ್ಟದ್ಯುಮ್ನನಿಂದಲೂ ಪ್ರಚೋದಿಸಲ್ಪಟ್ಟ ಅವರು ತಮಗೆ ಪ್ರಿಯವಾದ ಪ್ರಾಣಗಳನ್ನು ಲೆಕ್ಕಿಸದೆ ರಣರಂಗದಲ್ಲಿ ಕೌರವರನ್ನು ಹೊಡೆದರು.

ಇಚ್ಛಂತೋ ನಿಧನಂ ಯುದ್ಧೇ ಶಸ್ತ್ರೈರುತ್ತಮತೇಜಸಃ ।
ಸ್ವರ್ಗಾರ್ಥಂ ಮಿತ್ರಕಾರ್ಯಾರ್ಥಂ ನಾಭ್ಯರಕ್ಷಂತ ಜೀವಿತಮ್ ॥ ೨೧ ॥

ಉತ್ತಮ ತೇಜಸ್ವಿಗಳಾದ ಅವರು ಯುದ್ಧದಲ್ಲಿ ಶಸ್ತ್ರಗಳಿಂದ ವಧೆಯನ್ನು ಬಯಸುತ್ತಾ, ಸ್ವರ್ಗಪ್ರಾಪ್ತಿಗಾಗಿ ಮತ್ತು ಮಿತ್ರಕಾರ್ಯಕ್ಕಾಗಿ ತಮ್ಮ ಜೀವಿತವನ್ನು ರಕ್ಷಿಸಿಕೊಳ್ಳಲಿಲ್ಲ.

ತಥೈವ ತಾವಕಾ ರಾಜನ್ ಪ್ರಾರ್ಥಯಂತೋ ಮಹದ್ಯಶಃ ।
ಆರ್ಯಾಂ ಯುದ್ಧೇ ಮತಿಂ ಕೃತ್ವಾ ಯುದ್ಧಾಯೈವೋಪತಸ್ಥಿರೇ ॥ ೨೨ ॥

ಎಲೈ ರಾಜನೇ, ಹಾಗೆಯೇ ನಿನ್ನವರೂ ಸಹ ದೊಡ್ಡ ಕೀರ್ತಿಯನ್ನು ಬಯಸುತ್ತಾ ಯುದ್ಧದಲ್ಲಿ ಶ್ರೇಷ್ಠವಾದ ಬುದ್ಧಿಯನ್ನು ಹೊಂದಿ ಯುದ್ಧಕ್ಕಾಗಿಯೇ ನಿಂತರು.

ತಸ್ಮಿಂಸ್ತು ತುಮುಲೇ ಯುದ್ಧೇ ವರ್ತಮಾನೇ ಭಯಾವಹೇ ।
ಹತ್ವಾ ಸರ್ವಾಣಿ ಸೈನ್ಯಾನಿ ಪ್ರಾಯಾತ್ ಸಾತ್ಯಕಿರರ್ಜುನಮ್ ॥ ೨೩ ॥

ಮಹಾಭಯಂಕರವಾದ ತೀವ್ರವಾದ ಆ ಯುದ್ಧವು ನಡೆಯುತ್ತಿರಲು ಸಾತ್ಯಕಿಯು ಎಲ್ಲ ಸೈನ್ಯಗಳನ್ನೂ ಕೊಂದು ಅರ್ಜುನನ ಬಳಿಗೆ ಹೋದನು.

ಕವಚಾನಾಂ ಪ್ರಭಾಸ್ತತ್ರ ಸೂರ್ಯರಶ್ಮಿವಿಚಿತ್ರಿತಾಃ ।
ದೃಷ್ಟೀಃ ಸಂಜೇ ಸೈನಿಕಾನಾಂ ಪ್ರತಿಜಹ್ರುಃ ಸಮಂತತಃ ।
ಧ್ವಜಶಸ್ತ್ರಪ್ರತಿಹತಾ ಲೋಕಾನ್ ಸಮವದೀಪಯನ್ ॥ ೨೪ ॥

ಸೂರ್ಯರಶ್ಮಿಯು ಬಿದ್ದ ಕವಚದ ಪ್ರಭೆಗಳು ರಣರಂಗದಲ್ಲಿ ಎಲ್ಲ ಕಡೆಗಳಲ್ಲಿಯೂ ಸೈನಿಕರ ದೃಷ್ಟಿಗಳನ್ನು ಕೋರೈಸಿದವು. ಧ್ವಜಗಳ ಮತ್ತು ಶಸ್ತ್ರಗಳ ಮೇಲೆ ಬಿದ್ದ ಸೂರ್ಯ ರಶ್ಮಿಗಳು ಪ್ರತಿಫಲಿತವಾಗಿ ಎಲ್ಲ ಲೋಕವನ್ನೂ ಬೆಳಗಿದವು.

ತಥಾ ಪ್ರಯತಮಾನೇಷು ಪಾಂಡವೇಯೇಷು ನಿರ್ಭಯಃ ।
ದುರ್ಯೋಧನೋ ಮಹಾರಾಜ ವ್ಯಗಾಹತ ಮಹದ್ಬಲಮ್ ॥ ೨೫ ॥

ಪಾಂಡವರ ಸೈನ್ಯಗಳು ಆ ರೀತಿ ಪ್ರಯತ್ನಪಡುತ್ತಿರಲು ಎಲೈ ಮಹಾರಾಜನೇ, ದುರ್ಯೋಧನನು ನಿರ್ಭಯನಾಗಿ ಆ ದೊಡ್ಡ ಸೈನ್ಯವನ್ನು ಪ್ರವೇಶಿಸಿದನು.

ಸ ಸನ್ನಿಪಾತಸ್ತುಮುಲಸ್ತೇಷಾಂ ತಸ್ಯ ಚ ಭಾರತ ।
ಅಭವತ್ ಸರ್ವಸೈನ್ಯಾನಾಮಭಾವಕರಣೋ ಮಹಾನ್ ॥ ೨೬ ॥

ಎಲೈ ಭಾರತನೇ, ನಿನ್ನ ಸೈನ್ಯಕ್ಕೂ ಮತ್ತು ಪಾಂಡವರ ಸೈನ್ಯಕ್ಕೂ ಸರ್ವಸೈನ್ಯ ವಿನಾಶಕವಾದ ದೊಡ್ಡ ಸಂಘರ್ಷವು ಉಂಟಾಯಿತು.

ಧೃತರಾಷ್ಟ್ರಃ

ತಥಾ ಗತೇಷು ಸೈನ್ಯೇಷು ತಥಾ ಕೃಚ್ಛ್ರಗತಃ ಸ್ವಯಮ್ ।
ಕಚ್ಚಿದ್ದುರ್ಯೋಧನಃ ಸೂತ ನಾಕಾರ್ಷೀತ್ಪೃಷ್ಠತೋ ರಣಮ್ ॥ ೨೭ ॥

ಧೃತರಾಷ್ಟ್ರ– ಎಲೈ ಸೂತನೇ, ಸೈನ್ಯಗಳು ಹಾಗೆ ಹೋಗುತ್ತಿರಲು ಸ್ವತಃ ಕಷ್ಟಕ್ಕೆ ಸಿಲುಕಿದ ದುರ್ಯೋಧನನು ರಣರಂಗದಿಂದ ವಿಮುಖನಾಗಲಿಲ್ಲವೇ?

ಏಕಸ್ಯ ಚ ಬಹೂನಾಂ ಚ ಸನ್ನಿಪಾತೋ ಮಹಾಹವೇ ।
ವಿಶೇಷತೋ ನೃಪತಿನಾ ವಿಷಮಃ ಪ್ರತಿಭಾತಿ ಮೇ ॥ ೨೮ ॥

ಒಬ್ಬನು, ಅದರಲ್ಲಿಯೂ ವಿಶೇಷವಾಗಿ ರಾಜನಾದವನು ಅನೇಕರ ಜೊತೆಯಲ್ಲಿ ರಣರಂಗದಲ್ಲಿ ಯುದ್ಧವನ್ನು ಮಾಡುವುದು ವಿಷಮವೆಂದು ನನಗೆ ತೋರುತ್ತದೆ.

ಸೋಽತ್ಯಂತಸುಖಸಂವೃದ್ಧೋ ಲಕ್ಷ್ಮ್ಯಾ ಲೋಕಸ್ಯ ಚೇಶ್ವರಃ ।
ಏಕೋ ಬಹೂನ್ ಸಮಾಸಾದ್ಯ ಕಚ್ಚಿನ್ನಾಸೀತ್ ಪರಾಙ್ಮುಖಃ ॥ ೨೯ ॥

ಅತ್ಯಂತ ಸುಖದಿಂದ ಬೆಳೆದವನೂ, ತನ್ನ ಕಾಂತಿಯಿಂದ ಲೋಕಕ್ಕೆ ಪ್ರಭುವಾದವನೂ ಆದ ಅವನೊಬ್ಬನೇ ಅನೇಕರನ್ನು ಎದುರಿಸಿ ಯುದ್ಧಕ್ಕೆ ಪರಾಙ್ಮುಖನಾಗಲಿಲ್ಲವೇ?

ಸಂಜಯಃ

ರಾಜನ್ ಸಂಗ್ರಾಮಮಾಶ್ಚರ್ಯಂ ತವ ಪುತ್ರಸ್ಯ ಭಾರತ ।
ಏಕಸ್ಯ ಚ ಬಹೂನಾಂ ಚ ಶೃಣುಷ್ವ ಗದತೋಽದ್ಭುತಮ್ ॥ ೩೦ ॥

ಸಂಜಯ– ರಾಜನೇ, ಭಾರತನೇ, ಒಬ್ಬನಾದ ನಿನ್ನ ಪುತ್ರನಿಗೂ ಮತ್ತು ಅನೇಕರಿಗೂ ನಡೆದ ಅದ್ಭುತವಾದ, ಆಶ್ಚರ್ಯಕರವಾದ, ನಾನು ಹೇಳುವ ಯುದ್ಧದ ವಿವರವನ್ನು ಕೇಳು.

ದುರ್ಯೋಧನೇನ ಸಹಸಾ ಪಾಂಡವೀ ಪೃತನಾ ರಣೇ ।
ನಳಿನೀ ದ್ವಿರದೇನೇವ ಸಮಂತಾದ್ ವಿಪ್ರಲೋಡಿತಾ ॥ ೩೧ ॥

ದುರ್ಯೋಧನನಿಂದ ರಣರಂಗದಲ್ಲಿ ಪಾಂಡವಸೇನೆಯು ಆನೆಯಿಂದ ದೊಡ್ಡ ಸರೋವರವು ಕಲಕಲ್ಪಡುವಂತೆ ತಕ್ಷಣ ಕಲಕಾಡಲ್ಪಟ್ಟತು.

ತಥಾ ಸೇನಾಂ ಕೃತಾಂ ದೃಷ್ಟ್ವಾ ತವ ಪುತ್ರೇಣ ಕೌರವ ।
ಭೀಮಸೇನಪುರೋಗಾಸ್ತಂ ಪಾಂಚಾಲಾಃ ಸಮುಪಾದ್ರವನ್ ॥ ೩೨ ॥

ಎಲೈ ಕೌರವನೇ, ತಮ್ಮ ಸೈನ್ಯವು ನಿನ್ನ ಪುತ್ರನಿಂದ ಆ ಪರಿಸ್ಥಿತಿಗೆ ಬಂದುದನ್ನು ನೋಡಿ, ಭೀಮಸೇನನನ್ನು ಮುಂದೆ ಮಾಡಿಕೊಂಡ ಪಾಂಚಾಲರು ಅವನ ಕಡೆಗೆ ಧಾವಿಸಿದರು.

ಸ ಭೀಮಸೇನಂ ದಶಭಿರ್ಮಾದ್ರೀಪುತ್ರೌ ತ್ರಿಭಿಸ್ತ್ರಿಭಿಃ ।
ವಿರಾಟದ್ರುಪದೌ ಷಡ್ಭಿಃ ಶತೇನ ಚ ಶಿಖಂಡಿನಮ್ ॥ ೩೩ ॥

ಧೃಷ್ಟದ್ಯುಮ್ನಂ ಚ ವಿಂಶತ್ಯಾ ಧರ್ಮಪುತ್ರಂ ಚ ಸಪ್ತಭಿಃ ।
ಕೇಕಯಾನ್ ದಶಭಿರ್ವಿದ್ವಾ ದ್ರೌಪದೇಯಾಂಶ್ಚತುಶ್ಚತುರ್ಭಿಃ ॥ ೩೪ ॥

ಶತಶಶ್ಚಾಪರಾನ್ ಯೋಧಾನ್ ಸದ್ವಿಪಾಂಶ್ಚ ರಥಾನ್ ರಣೇ ।
ಶರೈರವಚಕರ್ತೋಗ್ರೈಃ ಕ್ರುದ್ಧೋಂತಕ ಇವ ಪ್ರಜಾಃ ॥ ೩೫ ॥

ದುರ್ಯೋಧನನು ಭೀಮಸೇನನನ್ನು ಹತ್ತು ಬಾಣಗಳಿಂದಲೂ, ನಕುಲ-ಸಹದೇವರನ್ನು ಮೂರು-ಮೂರು ಬಾಣಗಳಿಂದಲೂ, ವಿರಾಟ-ದ್ರುಪದರನ್ನು ಆರು ಬಾಣಗಳಿಂದಲೂ, ಶಿಖಂಡಿಯನ್ನು ನೂರು ಬಾಣಗಳಿಂದಲೂ, ಧೃಷ್ಟದ್ಯುಮ್ನನನ್ನು ಇಪ್ಪತ್ತು ಬಾಣಗಳಿಂದಲೂ, ಯುಧಿಷ್ಠಿರನನ್ನು ಏಳು ಬಾಣಗಳಿಂದಲೂ, ಕೇಕಯರನ್ನು ಹತ್ತು ಬಾಣಗಳಿಂದಲೂ, ದ್ರೌಪದಿಯ ಪುತ್ರರನ್ನು ಮೂರು-ಮೂರು ಬಾಣಗಳಿಂದಲೂ, ಗಜ-ರಥಸಹಿತರಾದ ಉಳಿದ ಯೋಧರನ್ನು ನೂರಾರು ಉಗ್ರವಾದ ಬಾಣಗಳಿಂದಲೂ ಕೋಪಗೊಂಡ ಯಮನು ಪ್ರಜೆಗಳನ್ನು ಸಂಹರಿಸುವಂತೆ ಕತ್ತರಿಸಿದನು.

ನ ಸಂದಧನ್ ವಿಮುಂಚನ್ ವಾ ಮಂಡಲೀಕೃತಕಾರ್ಮುಕಃ ।
ಅದೃಶ್ಯತ ರಿಪೂನ್ ನಿಘ್ನನ್ ಶಿಕ್ಷಯಾऽಸ್ತ್ರಬಲೇನ ಚ ॥ ೩೬ ॥

ಅವನು ಬತ್ತಳಿಕೆಯಿಂದ ಬಾಣವನ್ನು ತೆಗೆದುಕೊಂಡು, ಧನುಸ್ಸಿನಲ್ಲಿ ಹೂಡಿದರೂ, ಪ್ರಯೋಗಿಸಿ ಶತ್ರುಗಳನ್ನು ಕೊಂದರೂ, ಅವನ ಶಿಕ್ಷಾ ಮತ್ತು ಅಸ್ತ್ರಬಲದಿಂದ ಅವನ ಧನುಸ್ಸು ಮಂಡಲಾಕಾರವಾಗಿಯೇ ಕಂಡುಬರುತ್ತಿದ್ದಿತು.

ತಸ್ಯ ತಾನ್ ನಿಘ್ನತಃ ಶತ್ರೂನ್ ಹೇಮಪೃಷ್ಠಂ ಮಹದ್ಧನುಃ ।
ಭಲ್ಲಾಭ್ಯಾಂ ಪಾಂಡವೋ ಜ್ಯೇಷ್ಠಶ್ಚಿಚ್ಛೇದ ಮಾರಿಷ ॥ ೩೭ ॥

ಎಲೈ ಪೂಜ್ಯನೇ, ಹಾಗೆ ಶತ್ರುಗಳನ್ನು ತನ್ನ ಬಾಣಗಳಿಂದ ಹೊಡೆಯುತ್ತಿದ್ದ ಅವನ ಚಿನ್ನದ ಹಿಂಭಾಗವುಳ್ಳ ದೊಡ್ಡ ಧನುಸ್ಸನ್ನು ಪಾಂಡವ ಜ್ಯೇಷ್ಠನಾದ ಯುಧಿಷ್ಠಿರನು ಎರಡು ಭಲ್ಲಗಳಿಂದ ಮೂರು ಭಾಗಗಳಾಗಿ ಕತ್ತರಿಸಿದನು.

ವಿವ್ಯಾಧ ಚೈನಂ ಬಹುಭಿಃ ಸಮ್ಯಗ್ಯತೈಃ ಶಿತೈಃ ಶರೈಃ ।
ಮರ್ಮಾಣ್ಯಾಶು ಸಮಾಸಾದ್ಯ ತೇ ಭಗ್ನಾಃ ಕ್ಷಿತಿಮಾವಿಶನ್ ॥ ೩೮ ॥

ಮತ್ತು ಚೆನ್ನಾಗಿ ಪ್ರಯೋಗಿಸಿದ ನಿಶಿತವಾದ ಅನೇಕ ಬಾಣಗಳಿಂದ ಅವನನ್ನು ಹೊಡೆದನು. ಆ ಬಾಣಗಳು ಶೀಘ್ರವಾಗಿ ಅವನ ಮರ್ಮಸ್ಥಾನಗಳನ್ನು ತಲುಪಿ, ಭೇದಿಸಿ (ಭಗ್ನಗೊಂಡು) ಭೂಮಿಯ ಒಳಗೆ ಇಳಿದವು.

ತತಃ ಪ್ರಮುದಿತಾಃ ಪಾರ್ಥಾಃ ಪರಿವವ್ಯುರ್ಯುಧಿಷ್ಠಿರಮ್ ।
ಯಥಾ ವೃತ್ರವಧೇ ದೇವಾ ಮುದಾ ಶಕ್ರಂ ಮಹರ್ಷಿಭಿಃ ॥ ೩೯ ॥

ಆಗ, ವೃತ್ರವಧೆಯಾದಾಗ ಮಹರ್ಷಿಗಳ ಜೊತೆಯಲ್ಲಿ ದೇವತೆಗಳು ಇಂದ್ರನನ್ನು ಸುತ್ತುವರಿದಂತೆ ಸಂತೋಷಗೊಂಡ ಪಾಂಡವರು ಯುಧಿಷ್ಠಿರನನ್ನು ಸುತ್ತುವರಿದರು.

ಅಥ ದುರ್ಯೋಧನೋ ರಾಜಾ ದೃಢಮಾದಾಯ ಕಾರ್ಮುಕಮ್ ।
ತಿಷ್ಠ ತಿಷ್ಠೇತಿ ರಾಜಾನಂ ಬ್ರುವನ್ ಪಾಂಡವಮಭ್ಯಯಾತ್ ॥ ೪೦ ॥

ಆಗ ರಾಜನಾದ ದುರ್ಯೋಧನನು ದೃಢವಾದ ಧನುಸ್ಸನ್ನು ತೆಗೆದುಕೊಂಡು 'ನಿಲ್ಲು, ನಿಲ್ಲು' ಎಂದು ಯುಧಿಷ್ಠಿರನಿಗೆ ಹೇಳುತ್ತಾ ಅವನ ಕಡೆಗೆ ಧಾವಿಸಿದನು.

ತಂ ತಥಾವಾದಿನಂ ರಾಜಂಸ್ತವ ಪುತ್ರಂ ಮಹಾರಥಮ್ ।
ಪ್ರತ್ಯುದ್ಯಯುಃ ಪ್ರಮುದಿತಾಃ ಪಾಂಚಾಲಾ ಜಯಗೃದ್ಧಿನಃ ॥ ೪೧ ॥

ಎಲೈ ರಾಜನೇ, ಹಾಗೆ ಹೇಳುತ್ತಾ ಮುಂದುವರಿಯುತ್ತಿದ್ದ ಮಹಾರಥನಾದ ನಿನ್ನ ಪುತ್ರನನ್ನು ಸಂತೋಷಗೊಂಡ ಜಯಾಕಾಂಕ್ಷಿಗಳಾದ ಪಾಂಚಾಲರು ಎದುರಿಸಿದರು.

ತಾನ್ ದ್ರೋಣಃ ಪ್ರತಿಜಗ್ರಾಹ ಪರೀಪ್ಸನ್ ಯುಧಿ ಪಾಂಡವಮ್ ।
ಚಂಡವಾತೋದ್ಧತಾನ್ ಮೇಘಾನ್ ಸಜಲಾನಚಲೋ ಯಥಾ ॥

ಚಂಡಮಾರುತದಿಂದ ಎದ್ದ ನೀರುತುಂಬಿದ ಮೋಡಗಳನ್ನು ಪರ್ವತವು ತಡೆದು ನಿಲ್ಲಿಸುವಂತೆ ಧರ್ಮರಾಜನನ್ನು ಯುದ್ಧದಲ್ಲಿ ಹಿಡಿಯಲು ಬಯಸಿದ ದ್ರೋಣರು ಪಾಂಚಾಲರನ್ನು ಸ್ವೀಕರಿಸಿದರು (ಎದುರಿಸಿದರು).

ತತ್ರ ರಾಜನ್ ಮಹಾನಾಸೀತ್ ಸಂಗ್ರಾಮೋ ಭಯವರ್ಧನಃ ।
ಪಾಂಡವಾನಾಂ ಮಹಾರಾಜ ತಾವಕಾನಾಂ ಚ ಸಂಯುಗೇ ॥ ೪೩ ॥

ಎಲೈ ಮಹಾರಾಜನೇ, ಆಗ ನಿನ್ನವರಿಗೂ ಮತ್ತು ಪಾಂಡವರಿಗೂ ಭಯಜನಕವಾದ ದೊಡ್ಡ ಯುದ್ಧವು ನಡೆಯಿತು.

ತತಃ ಶಬ್ದೋ ಮಹಾನಾಸೀದ್ ಯಾತೋ ಯೇನ ಧನಂಜಯಃ ।
ಅತೀವ ಸರ್ವಶಬ್ದೇಭ್ಯೋ ರೋಮಹರ್ಷಕರಃ ಪ್ರಭೋ ॥ ೪೪ ॥

ಆಗ ಎಲೈ ಪ್ರಭುವೇ, ಅರ್ಜುನನು ಹೋದ ಮಾರ್ಗದಲ್ಲಿ ಎಲ್ಲ ಶಬ್ದಗಳನ್ನೂ ಮೀರಿಸುವ ರೋಮಾಂಚಕರವಾದ ದೊಡ್ಡ ಶಬ್ದವುಂಟಾಯಿತು.

ರುದ್ರಸ್ಯಾಕ್ರೀಡಸಂಕಾಶಃ ಸಂಹಾರಃ ಸರ್ವದೇಹಿನಾಮ್ ।
ಅರ್ಜುನಸ್ಯ ಮಹಾಬಾಹೋ ತಾವಕಾನಾಂ ಚ ಧನ್ವಿನಾಮ್ ॥ ೪೫ ॥

ಎಲೈ ಮಹಾಬಾಹುವೇ, ಅರ್ಜುನನಿಗೂ ಮತ್ತು ನಿನ್ನ ಧನುರ್ಧಾರಿಗಳಿಗೂ ಸರ್ವದೇಹಕ್ಷಯಕಾರಕವಾದ, ರುದ್ರದೇವರ ಆಟದ ಬಯಲಿಗೆ ಸದೃಶವಾದ ಸಂಹಾರವು ಉಂಟಾಯಿತು.

ಮಧ್ಯೇ ಭಾರತಸೈನ್ಯಸ್ಯ ಮಾಧವಸ್ಯ ಮಹಾರಣೇ ।
ದ್ರೋಣಸ್ಯಾಪಿ ಪರೈಃ ಸಾರ್ಧಂ ವ್ಯೂಹದ್ವಾರೇ ಮಹಾರಣೇ ॥ ೪೬ ॥

ಕೌರವರ ಸೈನ್ಯದ ಮಧ್ಯದಲ್ಲಿ ಮಹಾಯುದ್ಧದಲ್ಲಿ ಇದ್ದ ಸಾತ್ಯಕಿಯಿಂದಲೂ ಮತ್ತು ತಮ್ಮ ವ್ಯೂಹದ್ವಾರದಲ್ಲಿ ನಿಂತ ದ್ರೋಣರಿಂದಲೂ ಪರಸ್ಪರವಾಗಿ ಶತ್ರುಗಳ ಜೊತೆಯಲ್ಲಿ ಅಂತಹ ಸಂಹಾರಕಾರಣವಾದ ಯುದ್ಧವು ನಡೆಯಿತು.

ಏವಮೇವ ಕ್ಷಯೋ ವೃತ್ತಃ ಪೃಥಿವ್ಯಾಂ ಪೃಥಿವೀಪತೇ ।
ಕುರ್ವದ್ದೇರ್ಜುನೇ ತಥಾ ದ್ರೋಣೇ ಸಾತ್ವತೇ ಚ ಮಹಾರಥೇ ॥ ೪೭ ॥

ಎಲೈ ರಾಜನೇ, ಅರ್ಜುನನೂ, ದ್ರೋಣರೂ ಮತ್ತು ಮಹಾರಥನಾದ ಸಾತ್ಯಕಿಯೂ ಕೋಪಗೊಳ್ಳುತ್ತಿರಲು ಹೀಗೆಯೇ ರಣರಂಗದಲ್ಲಿ ಯೋಧರ ಕ್ಷಯಕಾರಕವಾದ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದಶಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಚತುಸ್ತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೊಂದನೆಯ ಅಧ್ಯಾಯ

ದ್ರೋಣರ ಪರಾಕ್ರಮ. ಅವರಿಂದ ಬೃಹತ್ಕ್ಷತ್ರ, ಕ್ಷೇಮವರ್ಮ, ಧೃಷ್ಟಕೇತು ಮೊದಲಾದವರ ವಧೆ.

ಸಂಜಯಃ

ಅಪರಾಹ್ಣೇ ಮಹಾರಾಜ ಸಂಗ್ರಾಮಃ ಸಮಪದ್ಯತ ।
ಪರ್ಜನ್ಯಸಮನಿರ್ಘೋಷಃ ಪುನರ್ದ್ರೋಣಸ್ಯ ಸೋಮಕೈಃ ॥ ೧ ॥

ಸಂಜಯ– ಎಲೈ ಮಹಾರಾಜನೇ, ಅಪರಾಹ್ಣದಲ್ಲಿ ಪುನಃ ದ್ರೋಣರಿಗೂ ಮತ್ತು ಸೋಮಕರಿಗೂ ಪರ್ಜನ್ಯಘೋಷಕ್ಕೆ ಸಮಾನವಾದ ಘೋಷವುಳ್ಳ ಯುದ್ಧವು ಜರುಗಿತು.

ಶೋಣಾಶ್ವಂ ರಥಮಾಸ್ಥಾಯ ನರವೀರಃ ಸಮಾಹಿತಃ ।
ಸಮರೇಽಭ್ಯದ್ರವತ್ ಪಾಂಡೂನ್ ಜವಮಾಸ್ಥಾಯ ಮಧ್ಯಮಮ್ ॥೨॥

ಶೋಣಾಶ್ವಗಳನ್ನು ಹೂಡಿದ ರಥದಲ್ಲಿ ನಿಂತ ನರವೀರರಾದ ದ್ರೋಣರು ಸಮಾಧಾನದಿಂದ ಮಧ್ಯಮವೇಗವನ್ನು ಆಶ್ರಯಿಸಿ ಯುದ್ಧದಲ್ಲಿ ಪಾಂಡವರ ಕಡೆಗೆ ಧಾವಿಸಿದರು.

ತವ ಪ್ರಿಯಹಿತೇ ಯುಕ್ತೋ ಮಹೇಷ್ವಾಸೋ ಮಹಾಬಲಃ ।
ಚಿತ್ರಪುಂಖೈಃ ಶಿತೈರ್ಬಾಣೈಃ ಕಲಶೋತ್ತಮಸಂಭವಃ ॥ ೩ ॥

ವರಾನ್ ವರಾನ್ ಹಿ ಯೋಧಾನಾಂ ವಿಚಿನ್ವನ್ನಿವ ಭಾರತ ।
ಆಕ್ರೀಡತ ರಣೇ ರಾಜನ್ ಭಾರದ್ವಾಜಃ ಪ್ರತಾಪವಾನ್ ॥ ೪ ॥

ಮಹಾಧನುರ್ಧಾರಿಗಳೂ, ಮಹಾಬಲವುಳ್ಳವರೂ, ಶ್ರೇಷ್ಠವಾದ ಕಲಶದಿಂದ ಜನಿಸಿದವರೂ, ನಿನ್ನ ಪ್ರಿಯಹಿತದಲ್ಲಿ ನಿರತರಾದವರೂ ಆದ, ಪ್ರತಾಪಶಾಲಿಗಳಾದ ದ್ರೋಣರು ಎಲೈ ರಾಜನೇ, ಭಾರತನೇ, ಪಾಂಡವರ ಸೈನ್ಯದಲ್ಲಿ ಶ್ರೇಷ್ಠರಾದ, ಶ್ರೇಷ್ಠರಾದ ಯೋಧರನ್ನು ಆರಿಸುವಂತೆ ರಣರಂಗದಲ್ಲಿ ಕ್ರೀಡಿಸಿದರು.

ತಮಭ್ಯಯಾದ್ ಬೃಹತ್ಕ್ಷತ್ರಃ ಕೇಕಯಾನಾಂ ಮಹಾರಥಃ ।
ಭ್ರಾತೄಣಾಂ ವೀರಪಂಚಾನಾಂ ಜ್ಯೇಷ್ಠಃ ಸಮರಕರ್ಕಶಃ ॥ ೫ ॥

ವಿಮುಂಚನ್ ವಿಶಿಖಾಂಸ್ತೀಕ್ಷ್ಣಾನಾಚಾರ್ಯಂ ಭಾದಯನ್ ಭೃಶಮ್ ।
ಮಹಾಮೇಘೋ ಯಥಾ ವರ್ಷಂ ವಿಮುಂಚನ್ ಗಂಧಮಾದನೇ ॥೬॥

ಕೇಕಯರ ವೀರರಾದ ಐವರು ಸಹೋದರರಲ್ಲಿ ಜ್ಯೇಷ್ಠನೂ, ಸಮರಕರ್ಕಶನೂ, ಮಹಾರಥನೂ ಆದ ಬೃಹತ್ಕ್ಷತ್ರನು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಗಂಧಮಾದನ ಪರ್ವತದ ಮೇಲೆ ಮಹಾಮೇಘವು ಮಳೆಯನ್ನು ಸುರಿಸುವಂತೆ ಆಚಾರ್ಯರನ್ನು ತನ್ನ ಬಾಣಗಳಿಂದ ಆವರಿಸಿದನು.

ತಸ್ಯ ದ್ರೋಣೋ ಮಹಾರಾಜ ಸ್ವರ್ಣಪುಂಖಾನ್ ಶಿಲಾಶಿತಾನ್ ।
ಪ್ರೇಷಯಾಮಾಸ ಸಂಕ್ರುದ್ಧಃ ಸಾಯಕಾನ್ ದಶ ಸಪ್ತ ಚ ॥ ೭ ॥

ಎಲೈ ಮಹಾರಾಜನೇ, ದ್ರೋಣರು ಕ್ರುದ್ಧರಾಗಿ ಸ್ವರ್ಣಪುಂಖಗಳಿಂದ ಕೂಡಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಹದಿನೇಳು ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದರು.

ತಾಂಸ್ತು ದ್ರೋಣಧನುರ್ಮುಕ್ತಾನ್ ಘೋರಾನಾಶೀವಿಷೋಪಮಾನ್ ।
ಏಕೈಕಂ ದಶಭಿರ್ಬಾಣೈರ್ಯುಧಿ ಚಿಚ್ಛೇದ ಹೃಷ್ಟವತ್ ॥ ೮ ॥

ಬೃಹತ್ಕ್ಷತ್ರನು ಸಂತೋಷಗೊಂಡು ದ್ರೋಣರ ಧನುಸ್ಸಿನಿಂದ ಹೊರಹೊಮ್ಮಿದ ಸರ್ಪದಂತಿದ್ದ ಘೋರವಾದ ಒಂದೊಂದು ಬಾಣವನ್ನೂ ಹತ್ತು ಬಾಣಗಳಿಂದ ಕತ್ತರಿಸಿದನು.

ತಸ್ಯ ತಲ್ಲಾಘವಂ ದೃಷ್ಟ್ವಾ ಪ್ರಹಸನ್ ದ್ವಿಜಸತ್ತಮಃ ।
ಪ್ರೇಷಯಾಮಾಸ ವಿಶಿಖಾನಷ್ಟೌ ಸನ್ನತಪರ್ವಣಃ ॥ ೯ ॥

ದ್ವಿಜಶ್ರೇಷ್ಠರಾದ ದ್ರೋಣರು ಅವನ ಕ್ಷಿಪ್ರತೆಯನ್ನು ನೋಡಿ ನಗುತ್ತಾ ಬಾಗಿದ ತುದಿಯುಳ್ಳ ಎಂಟು ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದರು.

ತಾನ್ ದೃಷ್ಟ್ವಾ ಪತತಃ ಶೀಘ್ರಂ ದ್ರೋಣಚಾಪಚ್ಯುತಾನ್ ಶರಾನ್ ।
ಅವಾರಯಚ್ಛರೈರೇವ ತಾವದ್ಭಿರ್ನಿಶಿತೈರ್ದೃಢೈಃ ॥ ೧೦ ॥

ದ್ರೋಣರ ಧನುಸ್ಸಿನಿಂದ ಹೊರಟು ತನ್ನ ಕಡೆಗೆ ಶೀಘ್ರವಾಗಿ ಬರುತ್ತಿದ್ದ ಆ ಬಾಣಗಳನ್ನು ನೋಡಿ ಬೃಹತ್ಕ್ಷತ್ರನು ನಿಶಿತವೂ, ದೃಢವೂ ಆದ ಅಷ್ಟೇ ಬಾಣಗಳಿಂದ ಅವುಗಳನ್ನು ನಿವಾರಿಸಿದನು.

ತತೋಽಭವತ್ ಮಹಾರಾಜ ತವ ಸೈನ್ಯಸ್ಯ ವಿಸ್ಮಯಃ ।
ಬೃಹತ್ಕ್ಷತ್ರೇಣ ತತ್ಕರ್ಮ ಕೃತಂ ದೃಷ್ಟ್ವಾ ಸುದುಷ್ಕರಮ್ ॥ ೧೧ ॥

ಎಲೈ ಮಹಾರಾಜನೇ, ಬೃಹತ್ಕ್ಷತ್ರನು ಮಾಡಿದ ಆ ದುಷ್ಕರವಾದ ಕರ್ಮವನ್ನು ನೋಡಿ ನಿನ್ನ ಸೈನ್ಯಕ್ಕೆ ವಿಸ್ಮಯವುಂಟಾಯಿತು.

ತತೋ ದ್ರೋಣೋ ಮಹಾರಾಜ ಕೇಕಯಂ ವೈ ವಿಶೇಷಯನ್ ।
ಪ್ರದುಶ್ಚಕ್ರೇ ರಣೇ ದಿವ್ಯಂ ಬ್ರಾಹ್ಮಮಸ್ತ್ರಂ ಮಹಾತಪಾಃ ॥ ೧೨ ॥

ಅನಂತರ ಮಹಾತಪಸ್ವಿಗಳಾದ ದ್ರೋಣರು ಕೇಕಯರಾಜನಾದ ಬೃಹತ್ಕ್ಷತ್ರನನ್ನು ಮೀರಿಸುತ್ತಾ ರಣರಂಗದಲ್ಲಿ ದಿವ್ಯವಾದ ಬ್ರಹ್ಮಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದರು.

ತದಸ್ಯ ರಾಜನ್ ಕೈಕೇಯಃ ಪ್ರತ್ಯವಾರಯದಚ್ಯುತಃ ।
ಬ್ರಾಹ್ಮೇಣೈವ ಮಹಾಬಾಹುರಾಹವೇ ಸಮುದೀರಿತಮ್ ॥ ೧೩ ॥

ಎಲೈ ರಾಜನೇ, ಮಹಾಬಾಹುವೂ, ತನ್ನ ಗುಣಗಳಿಂದ ಚ್ಯುತನಾದವನೂ ಆದ ಕೇಕಯನು ದ್ರೋಣರು ಪ್ರಯೋಗಿಸಿದ ಆ ಬ್ರಹ್ಮಾಸ್ತ್ರವನ್ನು ಬ್ರಹ್ಮಾಸ್ತ್ರದಿಂದಲೇ ನಿವಾರಿಸಿದನು.

ಪ್ರತಿಹನ್ಯ ತದಸ್ತ್ರಂ ತು ಭಾರದ್ವಾಜಸ್ಯ ಸಂಯುಗೇ ।
ವಿವ್ಯಾಧ ಬ್ರಾಹ್ಮಣಂ ಷಷ್ಟ್ಯಾ ಸ್ವರ್ಣಪುಂಖೈಃ ಶಿಲಾಶಿತೈಃ ॥ ೧೪ ॥

ಅವನು ರಣರಂಗದಲ್ಲಿ ದ್ರೋಣರ ಬ್ರಹ್ಮಾಸ್ತ್ರವನ್ನು ಪ್ರತಿಘಾತಗೊಳಿಸಿ, ಅವರನ್ನು ಸ್ವರ್ಣಪುಂಖಗಳನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಅರವತ್ತು ಬಾಣಗಳಿಂದ ಹೊಡೆದನು.

ತಂ ದ್ರೋಣೋ ದ್ವಿಪದಾಂ ಶ್ರೇಷ್ಠೋ ನಾರಾಚೇನ ಸಮರ್ಪಯತ್ ।
ಸ ತಸ್ಯ ಕವಚಂ ಭಿತ್ತ್ವಾ ಪ್ರಾವಿಶದ್ಧರಣೀತಳಮ್ ॥ ೧೫ ॥

ದ್ವಿಪದರಲ್ಲಿ ಶ್ರೇಷ್ಠರಾದ ದ್ರೋಣರು ಅವನನ್ನು ಒಂದು ನಾರಾಚದಿಂದ ಹೊಡೆದರು. ಅದು ಅವರ ಕವಚವನ್ನು ಭೇದಿಸಿ ಭೂಮಿಯನ್ನು ಪ್ರವೇಶಿಸಿತು.

ಕೃಷ್ಣಸರ್ಪೋ ಯಥಾ ಮುಕ್ತೋ ವಲ್ಮೀಕಂ ನೃಪಸತ್ತಮ ।
ತಥಾಭ್ಯಗಾನ್ಮಹೀಂ ಬಾಣೋ ಭಿತ್ತ್ವಾ ಕೈಕೇಯಮಾಹವೇ ॥ ೧೬ ॥

ಎಲೈ ರಾಜಶ್ರೇಷ್ಠನೇ, ಬಿಡುಗಡೆ ಹೊಂದಿದ ಕೃಷ್ಣಸರ್ಪವು ಹುತ್ತವನ್ನು ಪ್ರವೇಶಿಸುವಂತೆ ಆ ನಾರಾಚವು ರಣರಂಗದಲ್ಲಿ ಕೇಕಯನನ್ನು ಭೇದಿಸಿ ಭೂಮಿಯಲ್ಲಿ ಇಳಿಯಿತು.

ಸೋಽತಿವಿದ್ಧೋ ಮಹಾರಾಜ ದ್ರೋಣೇನಾಸ್ತ್ರವಿದಾ ಭೃಶಮ್ ।
ಕ್ರೋಧೇನ ಮಹತಾವಿಷ್ಟೋ ವ್ಯಾವೃತ್ಯ ನಯನೇ ಶುಭೇ ॥ ೧೭ ॥

ದ್ರೋಣಂ ವಿವ್ಯಾಧ ಸಪ್ತತ್ಯಾ ಸ್ವರ್ಣಪುಂಖೈಃ ಶಿಲಾಶಿತೈಃ ।
ಸಾರಥಿಂ ಚಾಸ್ಯ ಭಲ್ಲೇನ ಬಾಹ್ವೋರುರಸಿ ಚಾರ್ಪಯತ್ ॥ ೧೮ ॥

ಎಲೈ ಮಹಾರಾಜನೇ, ಅಸ್ತ್ರಜ್ಞರಾದ ದ್ರೋಣರಿಂದ ಗಾಢವಾಗಿ ಹೊಡೆಯಲ್ಪಟ್ಟ ಅವನು ಬಹಳ ಕ್ರೋಧದಿಂದ ಕೂಡಿದವನಾಗಿ, ಕಣ್ಣುಗಳನ್ನು ಅರಳಿಸಿ, ಸ್ವರ್ಣಪುಂಖವನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಎಪ್ಪತ್ತು ಬಾಣಗಳಿಂದ ದ್ರೋಣರನ್ನು ಹೊಡೆದನು. ಇನ್ನೊಂದು ಭಲ್ಲವನ್ನು ಪ್ರಯೋಗಿಸಿ ಅವರ ಸಾರಥಿ ಬಾಹುಗಳಿಗೂ ಮತ್ತು ಎದೆಗೂ ಹೊಡೆದನು.

ದ್ರೋಣಸ್ತು ಬಹುಧಾ ವಿದ್ಧೋ ಬೃಹತ್ಕ್ಷತ್ರೇಣ ಮಾರಿಷ ।
ಅಸೃಜದ್ ವಿಶಿಖಾಂಸ್ತಿಕ್ಷ್ಣಾನ್ ಕೇಕಯಸ್ಯ ರಥಂ ಪ್ರತಿ ॥ ೧೯ ॥

ಎಲೈ ಪೂಜ್ಯನೇ, ಬೃಹತ್ಕ್ಷತ್ರನಿಂದ ಬಹಳವಾಗಿ ಹೊಡೆಯಲ್ಪಟ್ಟ ದ್ರೋಣರು ಅವನ ರಥದ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದರು.

ವ್ಯಾಕುಲೀಕೃತ್ಯ ತಂ ದ್ರೋಣೋ ಬೃಹತ್ಕ್ಷತ್ರಂ ಮಹಾರಥಮ್ ।
ವ್ಯಸೃಜತ್ ಸಾಯಕಂ ತೀಕ್ಷ್ಣಂ ಕೇಕಯಂ ಪ್ರತಿ ಭಾರತ ॥ ೨೦ ॥

ಎಲೈ ಭಾರತನೇ, ದ್ರೋಣರು ಮಹಾರಥನಾದ ಬೃಹತ್ಕ್ಷತ್ರನನ್ನು ವ್ಯಾಕುಲಗೊಳಿಸಿ ಅವನ ಮೇಲೆ ಒಂದು ತೀಕ್ಷ್ಣವಾದ ಬಾಣವನ್ನು ಪ್ರಯೋಗಿಸಿದರು.

ಸ ಗಾಢವಿದ್ಧಸ್ತೇನಾಶು ಮಹಾರಾಜ ಸ್ತನಾಂತರೇ ।
ರಥಾತ್ ಪುರುಷಶಾರ್ದೂಲಃ ಸಂಭಿನ್ನಹೃದಯೋಽಪತತ್ ॥ ೨೧ ॥

ಎಲೈ ಮಹಾರಾಜನೇ, ಆ ಬಾಣದಿಂದ ಸ್ತನಗಳ ಮಧ್ಯದಲ್ಲಿ ತೀವ್ರವಾಗಿ ಹೊಡೆಯಲ್ಪಟ್ಟ, ಪುರುಷಶಾರ್ದೂಲನಾದ ಅವನು ಹೃದಯವು ಭೇದಿಸಲ್ಪಟ್ಟು ರಥದಿಂದ ಶೀಘ್ರವಾಗಿ ಕೆಳಗೆ ಬಿದ್ದನು.

ಬೃಹತ್ಕ್ಷತ್ರೇ ಹತೇ ರಾಜನ್ ಕೇಕಯಾನಾಂ ಮಹಾರಥೇ ।
ಶೈಶುಪಾಲಿಃ ಸುಸಂಕ್ರುದ್ಧೋ ಯಂತಾರಮಿದಮಬ್ರವೀತ್ ॥ ೨೨ ॥

ಸಾರಥೇ ಯಾಹಿ ಯತ್ರೈಷ ದ್ರೋಣಸ್ತಿಷ್ಠತಿ ದಂಶಿತಃ ।
ವಿನಿಘ್ನನ್ ಕೇಕಯಾನ್ ಸರ್ವಾನ್ ಪಾಂಚಾಲಾನಾಂ ಚ ವಾಹಿನೀಮ್॥

ಎಲೈ ರಾಜನೇ, ಕೇಕಯರ ಮಹಾರಥನಾದ ಬೃಹತ್ಕ್ಷತ್ರನು ಹತನಾಗುತ್ತಿರಲು ಶಿಶುಪಾಲನ ಪುತ್ರನಾದ ಧೃಷ್ಟಕೇತುವು ಬಹಳ ಕೋಪಗೊಂಡು ತನ್ನ ಸಾರಥಿಯನ್ನು ಕುರಿತು- 'ಎಲೈ ಸಾರಥಿಯೇ, ಈ ದ್ರೋಣರು ಕವಚ ಸನ್ನದ್ಧರಾಗಿ ಕೇಕಯರನ್ನೂ ಮತ್ತು ಪಾಂಚಾಲರ ಸೈನ್ಯವನ್ನೂ ನಾಶಮಾಡುತ್ತಿರುವಲ್ಲಿಗೆ ರಥವನ್ನು ನಡೆಸು' ಎಂದು ಹೇಳಿದನು.

ತಸ್ಯ ತದ್ವಚನಂ ಶ್ರುತ್ವಾ ಸಾರಥೀ ರಥಿನಾಂ ವರಮ್ ।
ದ್ರೋಣಾಯ ಪ್ರಾಪಯಾಮಾಸ ಕಾಂಬೋಜೈರ್ಜವನೈರ್ಹಯೈಃ ॥೨೪ ॥

ಅವನ ಆ ಮಾತುಗಳನ್ನು ಕೇಳಿದ ಸಾರಥಿಯು ರಥಿಶ್ರೇಷ್ಠನಾದ ಅವನನ್ನು ಕಾಂಬೋಜ ದೇಶದ ವೇಗಶಾಲಿಗಳಾದ ಅಶ್ವಗಳಿಂದ ಹೂಡಿದ ರಥದಿಂದ ದ್ರೋಣರ ಬಳಿಗೆ ಕರೆದೊಯ್ದನು.

ಧೃಷ್ಟಕೇತುಶ್ಚ ಚೇದೀನಾಮೃಷಭೋಽತಿಬಲೋದಿತಃ ।
ಸಹಸಾ ಪ್ರಾಪತದ್ ದ್ರೋಣಂ ಪತಂಗ ಇವ ಪಾವಕಮ್ ॥ ೨೫ ॥

ಚೇದಿಗಳ ರಾಜನಾದ, ಅತಿಬಲದಿಂದ ಕೂಡಿದ ಧೃಷ್ಟಕೇತುವಾದರೋ ಪತಂಗವು ಅಗ್ನಿಯ ಮೇಲೆ ಎರಗಿದಂತೆ ತಕ್ಷಣ ದ್ರೋಣರ ಮೇಲೆ ಎರಗಿದನು.

ಸೋಽಭ್ಯವಿದ್ಧ್ಯತ್ತತೋ ದ್ರೋಣಂ ಷಷ್ಟ್ಯಾ ಸಾಶ್ವರಥಧ್ವಜಮ್ ।
ಪುನಶ್ಚಾನ್ಯೈಃ ಶರೈಸ್ತೀಕ್ಷ್ಣೈಃ ಸುಪ್ತಂ ವ್ಯಾಘ್ರಂ ತುದನ್ನಿವ ॥ ೨೬ ॥

ಆಗ ಅವನು ಅಶ್ವ-ರಥ-ಧ್ವಜ ಸಹಿತರಾದ ದ್ರೋಣರನ್ನು ಅರವತ್ತು ಬಾಣಗಳಿಂದ ಹೊಡೆದು, ಪುನಃ ಬೇರೆ ತೀಕ್ಷ್ಣವಾದ ಬಾಣಗಳಿಂದ ಮಲಗಿದ ವ್ಯಾಘ್ರವನ್ನು ಚುಚ್ಚುವಂತೆ ಅವರನ್ನು ಹೊಡೆದನು.

ತಸ್ಯ ದ್ರೋಣೋ ಧನುರ್ಮಧ್ಯೇ ಕ್ಷುರಪ್ರೇಣ ಶಿತೇನ ಹ ।
ಚಿಚ್ಛೇದ ರಾಜ್ಞೋ ಬಲಿನೋ ಯತಮಾನಸ್ಯ ಸಂಯುಗೇ ॥ ೨೭ ॥

ದ್ರೋಣರು ಒಂದು ನಿಶಿತವಾದ ಕ್ಷುರಪ್ರದಿಂದ ಯುದ್ಧವನ್ನು ಮಾಡಲು ಪ್ರಯತ್ನ ಪಡುತ್ತಿದ್ದ ಬಲಿಷ್ಠವಾದ ಅವನ ಧನುಸ್ಸನ್ನು ಮಧ್ಯಭಾಗದಲ್ಲಿ ಕತ್ತರಿಸಿದರು.

ಅಥಾನ್ಯದ್ಧನುರಾದಾಯ ಶೈಶುಪಾಲಿರ್ಮಹಾರಥಃ ।
ವಿವ್ಯಾಧ ಸಾಯಕೈರ್ದ್ರೋಣಂ ಪುನಃ ಸುನಿಶಿತೈರ್ದೃಢೈಃ ॥ ೨೮ ॥

ಆಗ ಶಿಶುಪಾಲಪುತ್ರನಾದ ಆ ಮಹಾರಥನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ನಿಶಿತವೂ, ದೃಢವೂ ಆದ ಬಾಣದಿಂದ ಪುನಃ ದ್ರೋಣರನ್ನು ಹೊಡೆದನು.

ತಸ್ಯ ದ್ರೋಣೋ ಹಯಾನ್ ಹತ್ವಾ ಸಾರಥಿಂ ಚ ಮಹಾಬಲಃ ।
ಸಾರಥೇಶ್ಚ ಶಿರಃ ಕಾಯಾಚ್ಚಕರ್ತ ಪ್ರಹಸನ್ನಿವ ॥
ಅಥೈನಂ ಪಂಚವಿಂಶತ್ಯಾ ಸಾಯಕಾನಾಂ ಸಮಾರ್ಪಯತ್ ॥ ೨೯ ॥

ಮಹಾಬಲರಾದ ದ್ರೋಣರು ಅವನ ಅಶ್ವಗಳನ್ನೂ ಮತ್ತು ಸಾರಥಿಯನ್ನೂ ಬಾಣಗಳಿಂದ ಹೊಡೆದು ನಗುತ್ತಾ ಸಾರಥಿಯ ಶಿರಸ್ಸನ್ನು ಅವನ ದೇಹದಿಂದ ಕತ್ತರಿಸಿದರು. ಅನಂತರ ಧೃಷ್ಟಕೇತುವಿನ ಮೇಲೆ ಇಪ್ಪತ್ತೈದು ಬಾಣಗಳನ್ನು ಪ್ರಯೋಗಿಸಿದರು.

ವಿರಥೋ ವಿಧನುಷ್ಕಶ್ಚ ಚೇದಿರಾಜೋಽಪಿ ಸಂಯುಗೇ ।
ಗದಾಂ ಚಿಕ್ಷೇಪ ಸಂಕ್ರುದ್ಧೋ ಭಾರದ್ವಾಜರಥಂ ಪ್ರತಿ ॥ ೩೦ ॥

ರಥ ಮತ್ತು ಧನುಸ್ಸುಗಳಿಂದ ರಹಿತನಾದ ಚೇದಿರಾಜನೂ ಸಹ ರಣರಂಗದಲ್ಲಿ ಕ್ರುದ್ಧನಾಗಿ ದ್ರೋಣರ ರಥದ ಮೇಲೆ ಗದೆಯನ್ನು ಎಸೆದನು.

ತಾಮಾಪತಂತೀಂ ಸಹಸಾ ಘೋರರೂಪಾಂ ಭಯಾವಹಾಮ್ ।
ಅಶ್ಮಸಾರಮಯೀಂ ಗುರ್ವೀಂ ತಪನೀಯವಿಭೂಷಿತಾಮ್ ॥ ೩೧ ॥
ಶರೈರನೇಕಸಾಹಸ್ರೈರ್ಭಾರದ್ವಾಜೋ ನ್ಯಪಾತಯತ್।
ಭ್ರಾಜತೇ ಸ್ಮ ಮಹೀಂ ಪ್ರಾಪ್ಯ ಮಹೋಲ್ಕಪ್ರತಿಮಾ ಗದಾ ॥ ೩೨ ॥

ಘೋರವೂ, ಭಯಂಕರವೂ, ಅಶ್ಮಸಾರಮಯವಾದುದೂ, ಭಾರವಾದುದೂ, ಸ್ವರ್ಣಭೂಷಿತವಾದುದೂ ಆಗಿ ಶೀಘ್ರವಾಗಿ ತಮ್ಮ ಕಡೆಗೆ ಬರುತ್ತಿದ್ದ ಆ ಗದೆಯನ್ನು ದ್ರೋಣರು ಅನೇಕ ಸಹಸ್ರ ಬಾಣಗಳನ್ನು ಪ್ರಯೋಗಿಸಿ ಕೆಡವಿದರು. ಆ ಗದೆಯು ಭೂಮಿಯ ಮೇಲೆ ಬಿದ್ದು ದೊಡ್ಡ ಉಲ್ಕೆಯಂತೆ ಶೋಭಿಸಿತು.

ಸಾ ಪಪಾತ ಗದಾ ಭೂಮೌ ಭಾರದ್ವಾಜೇನ ಸಾದಿತಾ ।
ರಕ್ತಮಾಲ್ಯಾಂಬರಧರಾ ತಾರೇವ ನಭಸಸ್ತಳಾತ್ ॥ ೩೩ ॥

ರಕ್ತಮಾಲ್ಯ-ವಸ್ತ್ರಗಳನ್ನು ಹೊಂದಿದ್ದ ಆ ಗದೆಯು ದ್ರೋಣರಿಂದ ವಿನಾಶಗೊಳಿಸಲ್ಪಟ್ಟು ಆಕಾಶದಿಂದ ಬಿದ್ದ ನಕ್ಷತ್ರದಂತೆ ಭೂಮಿಯ ಮೇಲೆ ಬಿದ್ದಿತು.

ಗದಾಂ ವಿನಿಹತಾಂ ದೃಷ್ಟ್ವಾ ಧೃಷ್ಟಕೇತುರಮರ್ಷಣಃ ।
ತೋಮರಂ ವ್ಯಸೃಜತ್ತೂರ್ಣಂ ಶಕ್ತಿಂ ಚ ಕನಕೋಜ್ಜ್ವಲಾಮ್ ॥ ೩೪ ॥

ಗದೆಯು ವಿನಾಶಗೊಂಡುದನ್ನು ನೋಡಿ ಕೋಪಗೊಂಡ ಧೃಷ್ಟಕೇತುವು ಶೀಘ್ರವಾಗಿ ತೋಮರವನ್ನೂ ಮತ್ತು ಕನಕಭೂಷಿತವಾದ ಒಂದು ಶಕ್ತಿಯನ್ನೂ ದ್ರೋಣರ ಮೇಲೆ ಪ್ರಯೋಗಿಸಿದನು.

ತೋಮರಂ ತು ತ್ರಿಭಿರ್ಬಾಣೈರ್ದ್ರೋಣಶ್ಚಿತ್ತ್ವಾ ಮಹಾಮೃಧೇ ।
ಶಕ್ತಿಂ ಚಿಚ್ಛೇದ ಸಹಸಾ ಕೃತಹಸ್ತೋ ಮಹಾಬಲಃ ।
ತೌ ಜಗ್ಮತುರ್ಮಹೀಂ ಚ್ಛಿನ್ನೌ ಸರ್ಪಾವಿವ ಗರುತ್ಮತಾ ॥ ೩೫ ॥

ದ್ರೋಣರು ಮೂರು ಬಾಣಗಳಿಂದ ರಣರಂಗದಲ್ಲಿ ತೋಮರವನ್ನು ಕತ್ತರಿಸಿ, ಪಳಗಿದ ಹಸ್ತವುಳ್ಳವರೂ ಮತ್ತು ಮಹಾಬಲರೂ ಆದ ಅವರು ಶಕ್ತಿಯನ್ನೂ ತಕ್ಷಣ ಕತ್ತರಿಸಿದರು. ಅವು ಗರುಡನಿಂದ ಕತ್ತರಿಸಲ್ಪಟ್ಟ ಸರ್ಪಗಳಂತೆ ಭೂಮಿಯ ಮೇಲೆ ಬಿದ್ದವು.

ತತೋಽಸ್ಯ ವಿಶಿಖಂ ತೀಕ್ಷ್ಣಂ ವಧಾರ್ಥಂ ವಧಕಾಂಕ್ಷಿಣಃ ।
ಪ್ರೇಷಯಾಮಾಸ ಸಮರೇ ಭಾರದ್ವಾಜಃ ಪ್ರತಾಪವಾನ್ ॥ ೩೬ ॥

ಅನಂತರ ತಮ್ಮ ವಧೆಯನ್ನು ಬಯಸುತ್ತಿದ್ದ ಅವನ ವಧೆಯನ್ನು ಉದ್ದೇಶಿಸಿ ಪ್ರತಾಪಶಾಲಿಗಳಾದ ದ್ರೋಣರು ರಣರಂಗದಲ್ಲಿ ಅವನ ಮೇಲೆ ಒಂದು ತೀಕ್ಷ್ಣವಾದ ಬಾಣವನ್ನು ಪ್ರಯೋಗಿಸಿದರು.

ಸ ತಸ್ಯ ಕವಚಂ ಭಿತ್ತ್ವಾ ಹೃದಯಂ ಚಾಮಿತೌಜಸಃ ।
ಅಭ್ಯಗಾದ್ಧರಣೀಂ ಬಾಣೋ ಹಂಸಃ ಪದ್ಮಸರೋ ಯಥಾ ॥ ೩೭ ॥

ಆ ಬಾಣವು ಅಮಿತ ಸಾಮರ್ಥ್ಯವುಳ್ಳ ಅವನ ಕವಚವನ್ನೂ, ಹೃದಯವನ್ನೂ ಭೇದಿಸಿ ಹಂಸವು ಪದ್ಮಸರೋವರವನ್ನು ಪ್ರವೇಶಿಸುವಂತೆ ಭೂಮಿಯನ್ನು ಪ್ರವೇಶಿಸಿತು.

ಪತಂಗಾನ್ ಹಿ ಗ್ರಸೇಚ್ಛಾಪೋ ಯಥಾ ರಾಜನ್ ಬುಭುಕ್ಷಿತಃ ।
ತಥಾ ದ್ರೋಣೋಗ್ರಸಚ್ಚೂರೋ ಧೃಷ್ಟಕೇತುಂ ಮಹಾಮೃಧೇ ॥ ೩೮ ॥

ಎಲೈ ರಾಜನೇ, ಹಸಿದ ಚಾಷಪಕ್ಷಿಯು (ಕರಿಹಕ್ಕಿಯು) ಪತಂಗಗಳನ್ನು ನುಂಗಿದಂತೆ ದ್ರೋಣರು ದೊಡ್ಡಯುದ್ಧದಲ್ಲಿ ಧೃಷ್ಟಕೇತುವನ್ನು ನುಂಗಿದರು.

ನಿಹತೇ ಚೇದಿರಾಜೇ ತು ತತ್ಖಂಡಂ ಪಿತ್ರಮಾವಿಶತ್ ।
ಅಮರ್ಷವಶಮಾಪನ್ನಃ ಪುತ್ರೋಸ್ಯ ಪರಮಾಸ್ತ್ರವಿತ್ ॥ ೩೯ ॥

ಚೇದಿರಾಜನಾದ ಧೃಷ್ಟಕೇತುವು ಹತನಾಗುತ್ತಿರಲು ಶೂನ್ಯವಾದ ತನ್ನ ತಂದೆಯ ಆ ಭಾಗವನ್ನು ಕ್ರೋಧವಶನಾದ ಪರಮಾಸ್ತ್ರಜ್ಞಾನಿಯಾದ ಅವನ ಪುತ್ರನು ತುಂಬಿದನು.

ತಮಪಿ ಪ್ರಹಸನ್ ದ್ರೋಣಃ ಶರೈರ್ನಿನ್ಯೇ ಯಮಕ್ಷಯಮ್ ।
ಮಹಾವ್ಯಾಘ್ರೋ ಮಹಾರಣ್ಯೇ ಮೃಗಶಾವಂ ಯಥಾ ಬಲೀ ॥ ೪೦ ॥

ಬಲಿಷ್ಠವಾದ ಮಹಾವ್ಯಾಘ್ರವು ಕಾಡಿನಲ್ಲಿ ಜಿಂಕೆಯನ್ನು ಸಂಹರಿಸುವಂತೆ ದ್ರೋಣರು ನಗುತ್ತಾ ತಮ್ಮ ಬಾಣಗಳಿಂದ ಅವನನ್ನೂ ಯಮಲೋಕಕ್ಕೆ ಕಳುಹಿಸಿದರು.

ತೇಷು ಪ್ರಕ್ಷೀಯಮಾಣೇಷು ಪಾಂಡವೇಯೇಷು ಭಾರತ ।
ಜರಾಸಂಧಸುತೋ ವೀರಃ ಸ್ವಯಂ ದ್ರೋಣಮುಪಾದ್ರವತ್ ॥ ೪೧ ॥

ಎಲೈ ಭಾರತನೇ, ಪಾಂಡವಸೈನ್ಯದ ಯೋಧರು ಹೀಗೆ ನಾಶವನ್ನು ಹೊಂದುತ್ತಿರಲು ಜರಾಸಂಧನ ಪುತ್ರನಾದ, ವೀರನಾದ ಸಹದೇವನು ಸ್ವತಃ ದ್ರೋಣರ ಕಡೆಗೆ ಧಾವಿಸಿದನು.

ಸ ತು ದ್ರೋಣಂ ಮಹಾರಾಜ ಛಾದಯನ್ ಸಾಯಕೈಃ ಶಿತೈಃ ।
ಅದೃಶ್ಯಮಕರೋತ್ತೂರ್ಣಂ ಜಲದೋ ಭಾಸ್ಕರಂ ಯಥಾ ॥ ೪೨ ॥

ಅವನು ನಿಶಿತವಾದ ಬಾಣಗಳನ್ನು ಪ್ರಯೋಗಿಸಿ, ಮೋಡವು ಸೂರ್ಯನನ್ನು ಮುಚ್ಚುವಂತೆ ಶೀಘ್ರವಾಗಿ ದ್ರೋಣರನ್ನು ಅದೃಶ್ಯರನ್ನಾಗಿ ಮಾಡಿದನು.

ತಸ್ಯ ತಲ್ಲಾಘವಂ ದೃಷ್ಟ್ವಾ ದ್ರೋಣಃ ಕ್ಷತ್ರಿಯಮರ್ದನಃ ।
ವ್ಯಸೃಜತ್ ಸಾಯಕಾಂಸ್ತೂರ್ಣಂ ಶತಶೋಽಥ ಸಹಸ್ರಶಃ ॥ ೪೩ ॥

ಕ್ಷತ್ರಿಯ ಸಂಹಾರಕರಾದ ದ್ರೋಣರು ಅವನ ಆ ಕ್ಷಿಪ್ರತೆಯನ್ನು ನೋಡಿ ನೂರಾರು ಸಾವಿರಾರು ಸಂಖ್ಯೆಯಲ್ಲಿ ಶೀಘ್ರವಾಗಿ ಬಾಣಗಳನ್ನು ಪ್ರಯೋಗಿಸಿದರು.

ಛಾದಯಿತ್ವಾ ರಣೇ ದ್ರೋಣೋ ರಥಸ್ಥಂ ರಥಿನಾಂ ವರಮ್ ।
ಜಾರಾಸಂಧಿಮಥೋ ಜಘ್ನೇ ಮಿಷತಾಂ ಸರ್ವಧನ್ವಿನಾಮ್ ॥ ೪೪ ॥

ದ್ರೋಣರು ರಥದಲ್ಲಿದ್ದ ರಥಿಶ್ರೇಷ್ಠನಾದ, ಜರಾಸಂಧಪುತ್ರನಾದ ಸಹದೇವನನ್ನು ತಮ್ಮ ಬಾಣಗಳಿಂದ ಆವರಿಸಿ ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆಯೇ ಅವನನ್ನು ಕೊಂದರು.

ಯೋ ಯಃ ಸ್ಮ ನೀಯತೇ ದ್ರೋಣಂ ದ್ರೋಣೋಽಂತಕೋಪಮಃ ।
ಆದತ್ತ ಸರ್ವಭೂತಾನಿ ಪ್ರಾಪ್ತೇ ಕಾಲೇ ಯಥಾಂತಕಃ ॥ ೪೫ ॥

ಯಾವ ಯಾವ ಯೋಧರು ದ್ರೋಣರ ಬಳಿಗೆ ಹೋಗುತ್ತಾರೆಯೋ ಅವರನ್ನು ಮರಣಕಾಲವು ಪ್ರಾಪ್ತವಾದಾಗ ಬರುವ ಯಮನಂತೆ ಯಮಸದೃಶರಾದ ದ್ರೋಣರು ಅವರೆಲ್ಲರನ್ನೂ ನುಂಗಿಹಾಕಿದರು.

ತತೋ ದ್ರೋಣೋ ಮಹೇಷ್ವಾಸೋ ನಾಮ ವಿಶ್ರಾವ್ಯ ಸಂಯುಗೇ ।
ಶರೈರನೇಕಸಾಹಸ್ರೈಃ ಪಾಂಡವೇಯಾನ್ ವ್ಯಮೋಹಯತ್ ॥ ೪೬ ॥

ಅನಂತರ ಮಹಾಧನುರ್ಧಾರಿಗಳಾದ ದ್ರೋಣರು ರಣರಂಗದಲ್ಲಿ ತಮ್ಮ ಹೆಸರನ್ನು ಗಟ್ಟಿಯಾಗಿ ಘೋಷಿಸುತ್ತಾ, ಅನೇಕ ಸಹಸ್ರ ಬಾಣಗಳಿಂದ ಪಾಂಡವಸೇನೆಯ ಯೋಧರನ್ನು ಮರುಳುಗೊಳಿಸಿದರು.

ತತೋ ದ್ರೋಣಾಂತಕಾ ಬಾಣಾಃ ಸ್ವರ್ಣಪುಂಖಾಃ ಶಿಲಾಶಿತಾಃ ।
ನರಾನ್ ನಾಗಾನ್ ಹಯಾಂಶ್ಚೈವ ನಿಜಘ್ನುಃ ಸರ್ವತೋ ರಣೇ ॥ ೪೭ ॥

ಆಗ ದ್ರೋಣರ ಹೆಸರನ್ನು ಹೊಂದಿದ ಸ್ವರ್ಣಪುಂಖವುಳ್ಳ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳು ಪದಾತಿಗಳನ್ನೂ, ಗಜಗಳನ್ನೂ, ಅಶ್ವಗಳನ್ನೂ ರಣರಂಗದಲ್ಲಿ ಎಲ್ಲ ಕಡೆಗಳಲ್ಲಿಯೂ ಕೊಂದವು.

ತೇ ವಧ್ಯಮಾನಾ ದ್ರೋಣೇನ ಶಕ್ರೇಣೇವ ಮಹಾಸುರಾಃ ।
ಸಮಕಂಪಂತ ಪಾಂಚಾಲಾ ಗಾವಃ ಶೀತಾರ್ದಿತಾ ಇವ ॥ ೪೮ ॥

ಇಂದ್ರನಿಂದ ಮಹಾದೈತ್ಯರು ವಧೆಮಾಡಲ್ಪಟ್ಟಂತೆ ದ್ರೋಣರಿಂದ ವಧಿಸಲ್ಪಡುತ್ತಿದ್ದ ಆ ಪಾಂಚಾಲರು ಶೀತಪೀಡಿತವಾದ ಗೋವುಗಳಂತೆ ನಡುಗಿದರು.

ತತೋ ನಿಷ್ಪಾನಕೋ ಘೋರಃ ಪಾಂಡವಾನಾಮಜಾಯತ ।
ದ್ರೋಣೇನ ವಧ್ಯಮಾನೇಷು ಸೈನ್ಯೇಷು ಭರತರ್ಷಭ ॥ ೪೯ ॥

ಎಲೈ ಭರತಶ್ರೇಷ್ಠನೇ, ತಮ್ಮ ಸೈನ್ಯಗಳು ದ್ರೋಣರಿಂದ ವಧಿಸಲ್ಪಡುತ್ತಿರಲು ಪಾಂಡವ ಸೇನೆಯಲ್ಲಿ ಘೋರವಾದ ದುಃಖದ ನಾದವುಂಟಾಯಿತು.

ಮೋಹಿತಾಃ ಶರವರ್ಷೇಣ ಭಾರದ್ವಾಜಸ್ಯ ಸಂಯುಗೇ ।
ಊರುಗ್ರಾಹಗೃಹೀತಾ ಹಿ ಪಾಂಚಾಲಾನಾಂ ಮಹಾರಥಾಃ ॥ ೫೦ ॥

ರಣರಂಗದಲ್ಲಿ ದ್ರೋಣರ ಬಾಣಗಳ ಮಳೆಯಿಂದ ದಿಗ್ಭ್ರಾಂತರಾದ ಪಾಂಚಾಲ ಮಹಾರಥರ ತೊಡೆಗಳು ಸ್ತಂಬಿತವಾದವು.

ಚೇದಯಶ್ಚ ಮಹಾರಾಜ ಸೃಂಜಯಾಃ ಸೋಮಕಾಸ್ತಥಾ ।
ಅಭ್ಯದ್ರವಂತ ಸಂಹೃಷ್ಟಾ ಭಾರದ್ವಾಜಂ ಯುಯುತ್ಸಯಾ ॥ ೫೧ ॥

ಎಲೈ ಮಹಾರಾಜನೇ, ಸೃಂಜಯರೂ, ಚೇದಿಗಳೂ ಮತ್ತು ಸೋಮಕರೂ ಸಂತೋಷಗೊಂಡು ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಮುಂದೆ ಬಂದರು.

ಹತ ದ್ರೋಣಂ ಹತ ದ್ರೋಣಮಿತಿ ತೇ ದ್ರೋಣಮಭ್ಯಯುಃ ।
ಯತಂತಃ ಪುರುಷವ್ಯಾಘ್ರಾಃ ಸರ್ವಶಕ್ತ್ಯಾ ಮಹಾದ್ಯುತಿಮ್ ॥
ನಿನೀಷಂತೋ ರಣೇ ದ್ರೋಣಂ ಯಮಸ್ಯ ಸದನಂ ಪ್ರತಿ ॥ ೫೨ ॥

ಪುರುಷವ್ಯಾಘ್ರರಾದ ಅವರು ಸರ್ವಶಕ್ತಿಯಿಂದ ಪ್ರಯತ್ನಪಡುತ್ತಾ ದ್ರೋಣರನ್ನು ಕೊಲ್ಲಿ, ದ್ರೋಣರನ್ನು ಕೊಲ್ಲಿ ಎಂದು ಹೇಳುತ್ತಾ ಮಹಾಕಾಂತಿಯುಳ್ಳ ದ್ರೋಣರನ್ನು ಯಮನ ಪಟ್ಟಣಕ್ಕೆ ಕಳುಹಿಸಲು ಬಯಸಿ ದ್ರೋಣರ ಬಳಿಗೆ ಬಂದರು.

ಯತಮಾನಾಂಸ್ತು ತಾನ್ ವೀರಾನ್ ಭಾರದ್ವಾಜಃ ಶಿಲೀಮುಖೈಃ ।
ಯಮಾಯ ಪ್ರೇಷಯಾಮಾಸ ಚೇದಿಮುಖ್ಯಾನ್ ವಿಶೇಷತಃ ॥ ೫೩ ॥

ಯುದ್ಧದಲ್ಲಿ ಪ್ರಯತ್ನಪಡುತ್ತಿದ್ದ ಆ ವೀರರನ್ನು, ಅದರಲ್ಲೂ ವಿಶೇಷವಾಗಿ ಚೇದಿ ಶ್ರೇಷ್ಠರನ್ನು ದ್ರೋಣರು ತಮ್ಮ ಬಾಣಗಳಿಂದ ಯಮನ ಬಳಿಗೆ ಕಳುಹಿಸಿದರು.

ತೇಷು ಪ್ರಕ್ಷೀಯಮಾಣೇಷು ಚೇದಿಮುಖ್ಯೇಷು ಭಾರತ ।
ಪಾಂಚಾಲಾಃ ಸಮಕಂಪಂತ ದ್ರೋಣಸಾಯಕಪೀಡಿತಾಃ ॥ ೫೪ ॥

ಎಲೈ ಭಾರತನೇ, ಚೇದಿಸೇನೆಯ ಶ್ರೇಷ್ಠರು ವಿನಾಶವನ್ನು ಹೊಂದುತ್ತಿರಲು ದ್ರೋಣರ ಬಾಣಗಳಿಂದ ಪೀಡಿತರಾದ ಪಾಂಚಾಲರು ನಡುಗಿದರು.

ಪ್ರಾಕ್ರೋಶನ್ ಭೀಮಸೇನಂ ತೇ ಧೃಷ್ಟದ್ಯುಮ್ನರಥಂ ಪ್ರತಿ ।
ದೃಷ್ಟ್ವಾ ದ್ರೋಣಸ್ಯ ಕರ್ಮಾಣಿ ತಥಾರೂಪಾಣಿ ಮಾರಿಷ ॥ ೫೫ ॥

ಎಲೈ ಪೂಜ್ಯನೇ, ದ್ರೋಣರ ಅಂತಹ ಕರ್ಮಗಳನ್ನು ನೋಡಿ ಧೃಷ್ಟದ್ಯುಮ್ನ ರಥದ ಬಳಿ ಭೀಮಸೇನನಿಗಾಗಿ ಕಿರುಚಿದರು.

ಬ್ರಾಹ್ಮಣೇನ ತಪೋ ನೂನಂ ಚರಿತಂ ದುಶ್ಚರಂ ಮಹತ್ ।
ತಥಾ ಹಿ ಯುಧಿ ವಿಕ್ರಾಂತೋ ದಹತಿ ಕ್ಷತ್ರಿಯರ್ಷಭಾನ್ ॥ ೫೬ ॥

ಈ ಬ್ರಾಹ್ಮಣರು ಖಂಡಿತವಾಗಿ ದುಶ್ಚರವಾದ ದೊಡ್ಡ ತಪಸ್ಸನ್ನು ಮಾಡಿದ್ದಾರೆ. ಏಕೆಂದರೆ ಯುದ್ಧದಲ್ಲಿ ಪರಾಕ್ರಮವನ್ನು ಹೊಂದಿ ಕ್ಷತ್ರಿಯಶ್ರೇಷ್ಠರನ್ನು ದಹಿಸುತ್ತಿದ್ದಾರೆ.

ಧರ್ಮೋ ಯುದ್ಧಂ ಕ್ಷತ್ರಿಯಸ್ಯ ಬ್ರಾಹ್ಮಣಸ್ಯ ಪರಂ ತಪಃ ।
ತಪಸ್ವೀ ಕೃತವಿದ್ಯಶ್ಚ ಪ್ರೇಕ್ಷತೇನಾಪಿ ನಿರ್ದಹೇತ್ ॥ ೫೭ ॥

ಯುದ್ಧವು ಕ್ಷತ್ರಿಯಧರ್ಮ. ತಪಸ್ಸು ಬ್ರಾಹ್ಮಣರ ಶ್ರೇಷ್ಠವಾದ ಧರ್ಮ. ತಪಸ್ವಿಗಳೂ, ವಿದ್ಯಾಸಂಪನ್ನರೂ ಆದ ದ್ರೋಣರು ತಮ್ಮ ದೃಷ್ಟಿಯಿಂದಲೇ ಶತ್ರುಸೈನ್ಯವನ್ನು ಸುಟ್ಟಾರು!

ದ್ರೋಣಾಸ್ತ್ರಮಗ್ನಿಸಂಸ್ಪರ್ಶಂ ಪ್ರವಿಷ್ಟಾಃ ಕ್ಷತ್ರಿಯರ್ಷಭಾಃ ।
ಬಹವೋ ದುಸ್ತರಂ ಘೋರಂ ಯತ್ರಾದಹ್ಯಂತ ಭಾರತ ॥ ೫೮ ॥

ದ್ರೋಣರ ಅಗ್ನಿಸಂಸ್ಪರ್ಶಕ್ಕೆ ಸಮವಾದ ಬಾಣದ ವ್ಯಾಪ್ತಿಗೆ ಸಿಲುಕಿದ ಅನೇಕ ಕ್ಷತ್ರಿಯ ಶ್ರೇಷ್ಠರು ಘೋರವಾದ, ದುಸ್ತರವಾದ ಆ ಪ್ರಹಾರವನ್ನು ನಿವಾರಿಸಿಕೊಳ್ಳಲಾರದೆ ದಹಿಸಲ್ಪಡುತ್ತಿದ್ದಾರೆ.

ಯಥಾಬಲಂ ಯಥೋತ್ಸಾಹಂ ಯಥಾಸತ್ತ್ವಂ ಮಹಾದ್ಯುತಿಃ ।
ಮೋಹಯನ್ ಸರ್ವಭೂತಾನಿ ದ್ರೋಣೋ ಹಂತಿ ಬಲಾನಿ ನಃ ॥೫೯॥

ತಮ್ಮ ಬಲಕ್ಕೆ, ತಮ್ಮ ಉತ್ಸಾಹಕ್ಕೆ ಮತ್ತು ತಮ್ಮ ಧೈರ್ಯಕ್ಕೆ ಅನುಗುಣವಾಗಿ ಮಹಾಕಾಂತಿಯುಕ್ತರಾದ ದ್ರೋಣರು ಸರ್ವಭೂತಗಳನ್ನೂ ಮರುಳುಗೊಳಿಸುತ್ತಾ ನಮ್ಮ ಸೈನ್ಯವನ್ನು ಕೊಲ್ಲುತ್ತಿದ್ದಾರೆ (ಎಂದು ಮಾತನಾಡಿಕೊಂಡರು).

ತೇಷಾಂ ತದ್ವಚನಂ ಶ್ರುತ್ವಾ ಕ್ಷತ್ರಧರ್ಮಾ ವ್ಯವಸ್ಥಿತಃ ।
ಅರ್ಧಚಂದ್ರೇಣ ಚಿಚ್ಛೇದ ದ್ರೋಣಸ್ಯ ಸಶರಂ ಧನುಃ ॥ ೬೦ ॥

ಆವರ ಆ ಮಾತುಗಳನ್ನು ಕೇಳಿ ರಣರಂಗದಲ್ಲಿ ನಿಂತ ಕ್ಷತ್ರಧರ್ಮನು ಅರ್ಧಚಂದ್ರದಿಂದ ದ್ರೋಣರ ಧನುಸ್ಸು ಮತ್ತು ಬಾಣಗಳನ್ನು ಕತ್ತರಿಸಿದನು.

ಸ ಸಂರಬ್ಧತರೋ ಭೂತ್ವಾ ದ್ರೋಣಃ ಕ್ಷತ್ರಿಯಮರ್ದನಃ ।
ಅನ್ಯತ್ಕಾರ್ಮುಕಮಾದಾಯ ಭಾಸ್ವರಂ ವೇಗವತ್ತರಮ್ ॥ ೬೧ ॥

ತತ್ಸಾಧಾಯ ಶರಂ ತೀಕ್ಷ್ಣಂ ಭಾರಕ್ಷಂ ವಿಮಲಂ ದೃಢಮ್ ।
ಆಕರ್ಣಪೂರ್ಣಮಾಚಾರ್ಯೋ ಬಲವಾನಭ್ಯವಾಸೃಜತ್ ॥ ೬೨ ॥

ಕ್ಷತ್ರಿಯ ಮರ್ದನರಾದ ದ್ರೋಣರು ಇನ್ನೂ ಹೆಚ್ಚಿನ ಕೋಪವನ್ನು ತಾಳಿ ಪ್ರಕಾಶಮಾನವಾದ ಇನ್ನೂ ಹೆಚ್ಚು ವೇಗಶಾಲಿಯಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತೀಕ್ಷ್ಣವೂ, ಗುರುಕಾರ್ಯಸಾಧಕವೂ, ವಿಮಲವೂ, ದೃಢವೂ ಆದ ಒಂದು ಬಾಣವನ್ನು ಹೂಡಿ, ಕಿವಿಯವರೆಗೂ ಹೆದೆಯನ್ನು ಎಳೆದು ಬಲಿಷ್ಠರಾದ ಆಚಾರ್ಯರಾದ ಅವರು ಬಾಣವನ್ನು ಪ್ರಯೋಗಿಸಿದರು.

ಸ ಹತ್ವಾ ಕ್ಷತ್ರಧರ್ಮಾಣಂ ಜಗಾಮ ಧರಣೀತಳಮ್ ।
ಸ ಭಿನ್ನಹೃದಯೋ ವಾಹಾದಪತನ್ಮೇದಿನೀತಳೇ ॥ ೬೩ ॥

ಆ ಬಾಣವು ಕ್ಷತ್ರಧರ್ಮನನ್ನು ಕೊಂದು ಭೂಮಿಯನ್ನು ಪ್ರವೇಶಿಸಿತು. ಕ್ಷತ್ರಧರ್ಮನು ಹೃದಯವು ಭೇದಿಸಲ್ಪಟ್ಟು ರಥದಿಂದ ಭೂಮಿಯ ಮೇಲೆ ಬಿದ್ದನು.

ತತಃ ಸೈನ್ಯಾನ್ಯಕಂಪಂತ ಧೃಷ್ಟದ್ಯುಮ್ನಸುತೇ ಹತೇ ।
ಅಥ ದ್ರೋಣಂ ಸಮಾರೋಹಚ್ಚೇಕಿತಾನೋ ಮಹಾರಥಃ ॥ ೬೪ ॥

ಧೃಷ್ಟದ್ಯುಮ್ನನ ಪುತ್ರನಾದ ಕ್ಷತ್ರಧರ್ಮನು ಹತನಾಗುತ್ತಿರಲು ಸೈನ್ಯಗಳು ನಡುಗಿ ಹೋದವು. ಅನಂತರ ಮಹಾರಥನಾದ ಚೇಕಿತಾನನು ದ್ರೋಣರನ್ನು ಎದುರಿಸಿದನು.

ಸ ದ್ರೋಣಂ ದಶಭಿರ್ಬಾಣೈಃ ಪ್ರತ್ಯವಿದ್ಧ್ಯತ್ಸ್ತನಾಂತರೇ ।
ಚತುರ್ಭಿಃ ಸಾರಥಿಂ ಚಾಸ್ಯ ಚತುರ್ಭಿಶ್ಚತುರೋ ಹಯಾನ್ ॥ ೬೫ ॥

ಅವನು ದ್ರೋಣರನ್ನು ಅವರ ಸ್ತನಗಳ ಮಧ್ಯದಲ್ಲಿ ಹತ್ತು ಬಾಣಗಳಿಂದ ಹೊಡೆದು ಅವರ ಸಾರಥಿಯನ್ನು ನಾಲ್ಕು ಬಾಣಗಳಿಂದಲೂ ಮತ್ತು ಅಶ್ವಗಳನ್ನು ನಾಲ್ಕು ಬಾಣಗಳಿಂದಲೂ ಹೊಡೆದನು.

ತಸ್ಯಾಚಾರ್ಯಃ ಪ್ರೋಡಶಭಿರವಿದ್ಧ್ಯದ್ ದಕ್ಷಿಣಂ ಭುಜಮ್ ।
ಧ್ವಜಂ ಪ್ರೋಡಶಭಿರ್ಬಾಣೈರ್ಯಂತಾರಂ ಚಾಸ್ಯ ಸಪ್ತಭಿಃ ॥ ೬೬ ॥

ಆಚಾರ್ಯರು ಹದಿನಾರು ಬಾಣಗಳಿಂದ ಅವನ ದಕ್ಷಿಣ ಭುಜವನ್ನೂ, ಹದಿನಾರು ಬಾಣಗಳಿಂದ ರಥದ ಧ್ವಜವನ್ನೂ ಮತ್ತು ಏಳು ಬಾಣಗಳಿಂದ ಅವನ ಸಾರಥಿಯನ್ನೂ ಹೊಡೆದರು.

ತಸ್ಯ ಸೂತೇ ಹತೇ ತೇऽಶ್ವಾ ರಥಮಾದಾಯ ವಿದ್ರುತಾಃ ।
ಸಮರೇ ಶರಸಂವೀತಾ ಭಾರದ್ವಾಜೇನ ಮಾರಿಷ ॥ ೬೭ ॥

ಎಲೈ ಪೂಜ್ಯನೇ, ಸಾರಥಿಯು ಹತನಾಗುತ್ತಿರಲು ತಮ್ಮ ಶರೀರದಲ್ಲಿ ಬಾಣಗಳು ನಾಟರ ಆ ಅಶ್ವಗಳು ರಥವನ್ನು ಎಳೆದುಕೊಂಡು ಓಡಿಹೋದವು.

ಚೇಕಿತಾನರಥಂ ದೃಷ್ಟ್ವಾ ವಿದ್ರುತಂ ಹತಸಾರಥಿಮ್ ।
ಪಾಂಚಾಲಾನ್ ಪಾಂಡವಾಂಶ್ಚೈವ ಮಹದ್ಭಯಮಥಾವಿಶತ್ ॥ ೬೮ ॥

ಚೇಕಿತಾನನ ರಥವು ಸಾರಥಿಯನ್ನು ಕಳೆದುಕೊಂಡು ಧಾವಿಸುತ್ತಿರುವುದನ್ನು ನೋಡಿದ ಪಾಂಚಾಲರಿಗೆ ಮತ್ತು ಪಾಂಡವ ಸೇನೆಗೆ ದೊಡ್ಡ ಭಯವು ಉಂಟಾಯಿತು.

ತಾನ್ ಸಮೇತಾನ್ ರಣೇ ಶೂರಾಂಶ್ಚೇದಿಪಾಂಚಾಲಸೃಂಜಯಾನ್ ।
ಸಮಂತಾದ್ ದ್ರಾವಯನ್ ದ್ರೋಣೋ ಬಹ್ವಶೋಭತ ಮಾರಿಷ ॥೬೯॥

ಎಲೈ ಪೂಜ್ಯನೇ, ರಣರಂಗದಲ್ಲಿ ಒಂದುಗೂಡಿದ ಶೂರರಾದ ಚೇದಿ-ಪಾಂಚಾಲ-ಸೃಂಜಯರನ್ನು ಎಲ್ಲ ಕಡೆಗಳಲ್ಲಿಯೂ ಓಡಿಸುತ್ತಾ ದ್ರೋಣರು ಬಹಳ ಶೋಭಿಸಿದರು.

ಆಕರ್ಣಪಲಿತಃ ಶ್ಯಾಮೋ ವಯಸಾಶೀತಿಕಾತ್ಪರಃ ।
ರಣೇ ಪರ್ಯಚರದ್ ದ್ರೋಣೋ ವೃದ್ಧಃ ಷೋಡಶವರ್ಷವತ್ ॥೭೦॥

ಕಿವಿಯವರೆಗೂ ನೆರೆಗೂದಲುಗಳು ತುಂಬಿದ, ಶ್ಯಾಮವರ್ಣದ ವಯಸ್ಸಿನಲ್ಲಿ ಎಂಬತ್ತು ದಾಟಿದ (ನಾಲ್ಕು ನೂರು ವರ್ಷ ವಯಸ್ಸಿನ) ವೃದ್ಧರಾದ ದ್ರೋಣರು ಹದಿನಾರು ವರ್ಷದ ಯುವಕನಂತೆ ರಣರಂಗದಲ್ಲಿ ಸಂಚರಿಸಿದರು.

ಅಥ ದ್ರೋಣಂ ಮಹಾರಾಜ ವಿಚರಂತಮಭೀತವತ್ ।
ವಜ್ರಹಸ್ತಮಮನ್ಯಂತ ಶತ್ರವಃ ಶತ್ರುಸೂದನಮ್ ॥ ೭೧ ॥

ಆಗ ಎಲೈ ಮಹಾರಾಜನೇ, ರಣರಂಗದಲ್ಲಿ ನಿರ್ಭಯವಾಗಿ ಸಂಚರಿಸುತ್ತಿದ್ದ ದ್ರೋಣರನ್ನು ಶತ್ರುಗಳು ಕೈಯಲ್ಲಿ ವಜ್ರಾಯುಧವನ್ನು ಹಿಡಿದ ಶತ್ರುಸೂದನನಾದ ಇಂದ್ರನೆಂದು ಭಾವಿಸಿದರು.

ತತೋಽಬ್ರವೀನ್ಮಹಾರಾಜ ದ್ರುಪದೋ ಬುದ್ಧಿಮಾನ್ ನೃಪ ।
ಲುಬ್ಧೋಽಯಂ ಕ್ಷತ್ರಿಯಾನ್ ಹಂತಿ ವ್ಯಾಘ್ರಃ ಕ್ಷುದ್ರಮೃಗಾನಿವ ॥ ೭೨ ॥

ಎಲೈ ಮಹಾರಾಜನೇ, ಆಗ ಮೇಧಾವಿಯಾದ ದ್ರುಪದರಾಜನು ಈ ಬ್ರಾಹ್ಮಣರು ಲೋಭದಿಂದ ವ್ಯಾಘ್ರವು ಕ್ಷುದ್ರಮೃಗಗಳನ್ನು ಕೊಂದಂತೆ ಶತ್ರುಗಳನ್ನು ಕೊಲ್ಲುತ್ತಿದ್ದಾರೆ.

ಕೃಚ್ಛ್ರಾನ್ ದುರ್ಯೋಧನೋ ಲೋಕಾನ್ ಪಾಪಃ ಪ್ರಾಪ್ಸ್ಯತಿ ದುರ್ಮತಿಃ।
ಯಸ್ಯ ಲೋಭಾದ್ ವಿನಿಹತಾಃ ಸಮರೇ ಕ್ಷತ್ರಿಯರ್ಷಭಾಃ ॥ ೭೩ ॥

ಪಾಪಿಯೂ ದುರ್ಮತಿಯೂ ಆದ ದುರ್ಯೋಧನನು ಕಷ್ಟಮಯವಾದ ಲೋಕಗಳನ್ನು ಹೊಂದುವನು. ಅವನ ಲೋಭದ ನಿಮಿತ್ತದಿಂದಾಗಿ ಯುದ್ಧದಲ್ಲಿ ಕ್ಷತ್ರಿಯ ಶ್ರೇಷ್ಠರು ನಾಶವನ್ನು ಹೊಂದುತ್ತಿದ್ದಾರೆ.

ಶತಶಃ ಶೇರತೇ ಭೂಮೌ ನಿಕೃತ್ತಾ ಗೋವೃಷಾ ಇವ ।
ರುಧಿರೇಣ ಪರೀತಾಂಗಾಃ ಶ್ವಸೃಗಾಲಾದನೀಕೃತಾಃ ॥ ೭೪ ॥

ದ್ರೋಣರ ಬಾಣದಿಂದ ಕತ್ತರಿಸಲ್ಪಟ್ಟು ರಕ್ತದಿಂದ ತೊಯ್ದ ಶರೀರವುಳ್ಳವರಾಗಿ ನೂರಾರು ಸಂಖ್ಯೆಗಳಲ್ಲಿ ನಾಯಿ-ನರಿಗಳಿಗೆ ಆಹಾರವಾಗಿ ಗೋವೃಷಗಳಂತಹ ಕ್ಷತ್ರಿಯರು ಭೂಮಿಯ ಮೇಲೆ ಬಿದ್ದಿದ್ದಾರೆ (ಎಂದು ಹೇಳಿದನು).

ಏವಮುಕ್ತ್ವಾ ಮಹಾರಾಜ ದ್ರುಪದೋಽಕ್ಷೋಹಿಣೀಪತಿಃ ।
ಪುರಸ್ಕೃತ್ಯ ರಣೇ ಪಾರ್ಥಾನ್ ದ್ರೋಣಮಭ್ಯದ್ರವದ್ ದ್ರುತಮ್ ॥ ೭೫॥

ಎಲೈ ಮಹಾರಾಜನೇ, ಅಕ್ಷೋಹಿಣೀ ಪತಿಯಾದ ದ್ರುಪದರಾಜನು ಹೀಗೆ ಹೇಳಿ ಪಾಂಡವರನ್ನು ಮುಂದೆ ಮಾಡಿಕೊಂಡು ಶೀಘ್ರವಾಗಿ ದ್ರೋಣರ ಕಡೆಗೆ ಸಾಗಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಾದಶಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಪಂಚತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೆರಡನೆಯ ಅಧ್ಯಾಯ

ಅರ್ಜುನನ ವಾರ್ತೆಯನ್ನು ತಿಳಿಯಲು ಯುಧಿಷ್ಠಿರನಿಂದ ಸಾತ್ಯಕಿಯನ್ನು ಕಳುಹಿಸಿ ಪುನಃ ಭೀಮಸೇನನ ಪ್ರೇಷಣ.

ಸಂಜಯಃ

ವ್ಯೂಹೇಷ್ವಾಲೋಡ್ಯಮಾನೇಷು ಪಾಂಡವಾನಾಂ ತತಸ್ತತಃ ।
ಸುದೂರಮನ್ವಯುಃ ಪಾರ್ಥಾಃ ಪಾಂಚಾಲಾಃ ಸಹ ಸೋಮಕೈಃ ॥ ೧ ॥

ಸಂಜಯ– ದ್ರೋಣರಿಂದ ಪಾಂಡವರ ವ್ಯೂಹವು ಅಲ್ಲಲ್ಲಿ ಕ್ಷೋಭೆಗೊಳ್ಳುತ್ತಿರಲು ಪಾರ್ಥರು ಪಾಂಚಾಲರ ಮತ್ತು ಸೋಮಕರ ಜೊತೆಯಲ್ಲಿ ಬಹಳ ದೂರ ಹೋದರು.

ವರ್ತಮಾನೇ ತಥಾ ರೌದ್ರೇ ಸಂಗ್ರಾಮೇ ಲೋಮಹರ್ಷಣೇ ।
ಪ್ರಕ್ಷಯೇ ಜಗತಸ್ತೀವ್ರೇ ಯುಗಾಂತ ಇವ ಭಾರತ ॥ ೨ ॥

ದ್ರೋಣೇ ಯುಧಿ ಪರಾಕ್ರಾಂತೇ ನರ್ದಮಾನೇ ಮುಹುರ್ಮುಹುಃ ।
ಪಾಂಚಾಲೇಷು ಚ ಕ್ಷೀಣೇಷು ವಧ್ಯಮಾನೇಷು ಪಾಂಡುಷು ॥ ೩ ॥

ನಾಪಶ್ಯಚ್ಚರಣಂ ಕಿಂಚಿದ್ ಧರ್ಮರಾಜೋ ಯುಧಿಷ್ಠಿರಃ ।
ಚಿಂತಯಾಮಾಸ ರಾಜೇಂದ್ರ ಕಥಮೇತದ್ ಭವಿಷ್ಯತಿ ॥ ೪ ॥

ಎಲೈ ಭಾರತನೇ, ಯುಗಾಂತದಲ್ಲಿ ನಡೆಯುವಂತೆ ಜಗತ್ತಿಗೆ ತೀವ್ರವಾದ ಕ್ಷಯವನ್ನುಂಟು ಮಾಡುವಂತಹ, ರೋಮಾಂಚಕಾರಿಯಾದ, ಘೋರವಾದ ಯುದ್ಧವು ನಡೆಯುತ್ತಿರಲು ದ್ರೋಣರು ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿ, ಪುನಃ ಪುನಃ ಭೇದಿಸುತ್ತಿರಲು, ಪಾಂಚಾಲರು ಕ್ಷೀಣಗೊಳ್ಳುತ್ತಿರಲು, ಪಾಂಡವ ಸೇನೆಯು ವಧಿಸಲ್ಪಡುತ್ತಿರಲು, ಧರ್ಮರಾಜನಾದ ಯುಧಿಷ್ಠಿರನು ಯಾವ ರಕ್ಷಣನ್ನೂ ಕಾಣಲಿಲ್ಲ. ಎಲೈ ರಾಜೇಂದ್ರನೇ, ಇದನ್ನು ಹೇಗೆ ನಿರ್ವಾಹ ಮಾಡುವುದು ಎಂದು ಚಿಂತಿಸಿದನು.

ತತ್ರಾವೇಕ್ಷ್ಯ ದಿಶಃ ಸರ್ವಾಃ ಸವ್ಯಸಾಚಿದಿದೃಕ್ಷಯಾ ।
ಯುಧಿಷ್ಠಿರೋ ದದರ್ಶಾಥ ನೈವ ಪಾರ್ಥಂ ನ ಮಾಧವಮ್ ॥ ೫ ॥

ಅರ್ಜುನನನ್ನು ನೋಡುವ ಇಚ್ಛೆಯಿಂದ ಯುಧಿಷ್ಠಿರನು ಎಲ್ಲ ಕಡೆಗಳಲ್ಲಿಯೂ ದೃಷ್ಟಿಯನ್ನು ಹಾಯಿಸಿದರೂ ಅರ್ಜುನನನ್ನಾಗಲೀ ಅಥವಾ ಸಾತ್ಯಕಿಯನ್ನಾಗಲೀ (ಕೃಷ್ಣನನ್ನಾಗಲೀ) ಕಾಣಲಿಲ್ಲ.

ಸೋಽಪಶ್ಯನ್ ನರಶಾರ್ದೂಲಂ ವಾನರರ್ಷಭಲಕ್ಷಣಮ್ ।
ಗಾಂಡೀವಸ್ಯ ಚ ನಿರ್ಘೋಷಮಶೃಣ್ವನ್ ವ್ಯಥಿತೇಂದ್ರಿಯಃ ॥ ೬ ॥

ಅಪಶ್ಯನ್ ಸಾತ್ಯಕಿಂ ಚಾಪಿ ವೃಷ್ಣೀನಾಂ ಪ್ರವರಂ ರಥಮ್ ।
ಚಿಂತಯಾऽಭಪರೀತಾಂಗೋ ಧರ್ಮರಾಜೋ ಯುಧಿಷ್ಠಿರಃ ।
ನಾಧ್ಯಗಚ್ಛತ್ ತದಾ ಶಾಂತಿಂ ತಾವಪಶ್ಯನ್ ನರರ್ಷಭೌ ॥ ೭ ॥

ನರಶಾರ್ದೂಲನಾದ, ಕಪಿಧ್ವಜನಾದ ಅರ್ಜುನನನ್ನು ಕಾಣದೆ, ಗಾಂಡೀವ ಧನುಸ್ಸಿನ ಘೋಷವನ್ನು ಕೇಳದೆ ವ್ಯಥೆಯಿಂದ ಕೂಡಿದವನಾಗಿ, ವೃಷ್ಣಿಗಳ ಶ್ರೇಷ್ಠರಥನಾದ ಸಾತ್ಯಕಿಯನ್ನೂ ಕಾಣದೆ ಚಿಂತೆಯಿಂದ ಕೂಡಿದ ಧರ್ಮರಾಜನಾದ ಯುಧಿಷ್ಠಿರನು ಆ ಇಬ್ಬರು ನರಶ್ರೇಷ್ಠರನ್ನು ಕಾಣದೆ ಸಮಾಧಾನವನ್ನು ಹೊಂದಲಿಲ್ಲ.

ಲೋಕೋಪಕ್ರೋಶಭೀರುತ್ವಾದ್ ಧರ್ಮರಾಜೋ ಮಹಾಯಶಾಃ ।
ಅಚಿಂತಯನ್ಮಹಾಬಾಹುಃ ಶೈನೇಯಸ್ಯ ರಥಂ ಪ್ರತಿ ॥ ೬ ॥

ಲೋಕಾಪವಾದಕ್ಕೆ ಹೆದರಿದ ಮಹಾಕೀರ್ತಿವಂತನಾದ ಮಹಾಬಾಹುವಾದ ಧರ್ಮರಾಜನು ಸಾತ್ಯಕಿಯ ರಥದ ವಿಷಯದಲ್ಲಿ ಚಿಂತಿಸಿದನು.

ಪದವೀಂ ಪ್ರೇಷಿತಶ್ಚೈವ ಫಲ್ಗುನಸ್ಯ ಮಯಾ ರಣೇ ।
ಶೈನೇಯಃ ಸಾತ್ಯಕಿಃ ಸತ್ಯೋ ಮಿತ್ರಾಣಾಮಭಯಂಕರಃ ॥ ೯ ॥

ಸತ್ಯವಂತನೂ ಮತ್ತು ಮಿತ್ರರಿಗೆ ಅಭಯಪ್ರದನೂ ಆದ, ಶೈನೇಯನಾದ ಸಾತ್ಯಕಿಯನ್ನು ನಾನು ರಣರಂಗದಲ್ಲಿ ಅರ್ಜುನನ ಮಾರ್ಗವನ್ನು ಹುಡುಕಲು ಕಳುಹಿಸಿದೆ.

ತದಿದಂ ಹ್ಯೇಕಮೇವಾಸೀದ್ ದ್ವಿಧಾ ಜಾತಂ ಮಮಾದ್ಯ ವೈ ।
ಸಾತ್ಯಕಿಶ್ಚ ಹಿ ಮೇ ಜ್ಞೇಯಃ ಪಾಂಡವಶ್ಚ ಧನಂಜಯಃ ॥ ೧೦ ॥

ಈಗ ನನಗೆ ಹುಡುಕುವ ಒಂದು ಕಾರ್ಯವು ಎರಡಾಯಿತು. ನಾನು ಸಾತ್ಯಕಿಯನ್ನೂ ತಿಳಿಯಬೇಕು ಮತ್ತು ಪಾಂಡವನಾದ ಅರ್ಜುನನನ್ನೂ ತಿಳಿಯಬೇಕು.

ಸಾತ್ಯಕಿಂ ಪ್ರೇಷಯಿತ್ವಾ ತು ಪಾಂಡವಸ್ಯ ಪದಾನುಗಮ್ ।
ಸಾತ್ವತಸ್ಯಾಪಿ ಕಂ ಯುದ್ಧೇ ಪ್ರೇಷಯಿಷ್ಯೇ ಪದಾನುಗಮ್ ॥ ೧೧ ॥

ಅರ್ಜುನನ ಅನುಯಾಯಿಯಾಗಿ ಸಾತ್ಯಕಿಯನ್ನು ಕಳುಹಿಸಿದ ನಾನು ಈಗ ರಣರಂಗದಲ್ಲಿ ಸಾತ್ಯಕಿಯನ್ನು ಹುಡುಕಲು ಯಾರನ್ನು ಕಳುಹಿಸಲಿ?

ಕರಿಷ್ಯಾಮಿ ಪ್ರಯತ್ನೇನ ಭ್ರಾತುರನ್ವೇಷಣಂ ಯದಿ ।
ಯುಯುಧಾನಮನನ್ವಿಷ್ಯ ಲೋಕೋ ಮಾಂ ಗರ್ಹಯಿಷ್ಯತಿ ॥ ೧೨ ॥

ಭ್ರಾತುರನ್ವೇಷಣಂ ಕೃತ್ವಾ ಧರ್ಮರಾಜೋ ಯುಧಿಷ್ಠಿರಃ ।
ಪರಿತ್ಯಜತಿ ವಾರ್ಷ್ಣೇಯಂ ಸಾತ್ಯಕಿಂ ಸತ್ಯವಿಕ್ರಮಮ್ ॥ ೧೩ ॥

ನಾನು ಪ್ರಯತ್ನಪೂರ್ವಕವಾಗಿ ಅರ್ಜುನನ ಅನ್ವೇಷಣವನ್ನು ಮಾಡಿ ಸಾತ್ಯಕಿಯ ಅನ್ವೇಷಣವನ್ನು ಮಾಡದಿದ್ದರೆ ಧರ್ಮರಾಜನಾದ ಯುಧಿಷ್ಠಿರನು ತನ್ನ ತಮ್ಮನ ಅನ್ವೇಷಣೆಯನ್ನು ಮಾಡಿ ವಾರ್ಷ್ಣೇಯನೂ, ಸತ್ಯಪರಾಕ್ರಮನೂ ಆದ ಸಾತ್ಯಕಿಯನ್ನು ಪರಿತ್ಯಾಗ ಮಾಡುತ್ತಿದ್ದಾನೆ ಎಂದು ಲೋಕವು ನನ್ನನ್ನು ನಿಂದಿಸುವುದು.

ಲೋಕಾಪವಾದಭೀರುತ್ವಾತ್ ಸೋಽಹಂ ಪಾರ್ಥಂ ವೃಕೋದರಮ್ ।
ಪದವೀಂ ಪ್ರೇಷಯಿಷ್ಯಾಮಿ ಮಾಧವಸ್ಯ ಮಹಾತ್ಮನಃ ॥ ೧೪ ॥

ಲೋಕಾಪವಾದಕ್ಕೆ ಹೆದರಿದ ಕಾರಣದಿಂದ ಅಂತಹ ನಾನು ಮಹಾತ್ಮನಾದ ಸಾತ್ಯಕಿಯ ಮಾರ್ಗವನ್ನು ಹುಡುಕಲು ಕುಂತೀಪುತ್ರನಾದ ವೃಕೋದರನನ್ನು ಕಳುಹಿಸುವೆನು.

ಯಥೈವ ಚ ಮಮ ಪ್ರೀತಿರರ್ಜುನೇ ಶತ್ರುಸೂದನೇ ।
ತಥೈವ ವೃಷ್ಣಿವೀರೇಽಪಿ ಸಾತ್ವತೇ ಯುದ್ಧದುರ್ಮದೇ ॥ ೧೫ ॥

ನನಗೆ ಶತ್ರುಸಂಹಾರಕನಾದ ಅರ್ಜುನನಲ್ಲಿ ಹೇಗೆ ಪ್ರೀತಿಯಿದೆಯೋ ಯುದ್ಧ ದುರ್ಮದನಾದ, ವೃಷ್ಣಿವೀರನಾದ ಸಾತ್ಯಕಿಯಲ್ಲಿಯೂ ಹಾಗೆಯೇ ಪ್ರೀತಿಯಿದೆ.

ಅತಿಭಾರೇ ನಿಯುಕ್ತಶ್ಚ ಮಯಾ ಶೈನೇಯನಂದನಃ ।
ಸ ತು ಮಿತ್ರೋಪರೋಧೇನ ಗೌರವಾಚ್ಚ ಮಹಾಬಲಃ ।
ಪ್ರವಿಷ್ಟೋ ಭಾರತೀಂ ಸೇನಾಂ ಮಕರಃ ಸಾಗರಂ ಯಥಾ ॥ ೧೬ ॥

ನಾನು ಶೈನೇಯನಂದನನಾದ ಸಾತ್ಯಕಿಗೆ ದೊಡ್ಡ ಭಾರವನ್ನು ವಹಿಸಿದ್ದೇನೆ. ಮಹಾಬಲನಾದ ಅವನು ಸ್ನೇಹಿತರಿಗೆ ಉಪಕಾರ ಮಾಡುವ ದೃಷ್ಟಿಯಿಂದಲೂ ಮತ್ತು ನನ್ನ ಮೇಲಿನ ಗೌರವದಿಂದಲೂ ಮೊಸಳೆಯು ಸಾಗರವನ್ನು ಪ್ರವೇಶಿಸಿದಂತೆ ಕೌರವ ಸೈನ್ಯವನ್ನು ಪ್ರವೇಶಿಸಿದ್ದಾನೆ.

ಅಸೌ ಹಿ ಶ್ರೂಯತೇ ಶಬ್ದಃ ಶೂರಾಣಾಮನಿವರ್ತಿನಾಮ್ ।
ಮಿಥಃ ಸಂಯುದ್ಧ್ಯಮಾನಾನಾಂ ವೃಷ್ಣಿವೀರೇಣ ಧೀಮತಾ ॥ ೧೭ ॥

ಮೇಧಾವಿಯಾದ ವೃಷ್ಣಿವೀರನಾದ ಅವನ ಜೊತೆಯಲ್ಲಿ ಯುದ್ಧದಿಂದ ಹಿಮ್ಮೆಟ್ಟದಿರುವ ಶೂರರು ಮಾಡುವ ಈ ಯುದ್ಧದ ಶಬ್ದವು ಕೇಳಿಬರುತ್ತಿದೆ.

ಪ್ರಾಪ್ತಕಾಲಂ ಸುಬಲವ ನಿಶ್ಚಿತ್ಯ ಬಹುಧಾ ಹಿ ಮೇ ।
ತತ್ಸೈವ ಪಾಂಡವೇಯಸ್ಯ ಭೀಮಸೇನಸ್ಯ ಧನ್ವಿನಃ ।
ಗಮನಂ ರೋಚತೇ ಮಹ್ಯಂ ಯತ್ರ ಯಾತೌ ಮಹಾರಥೌ ॥ ೧೮ ॥

ಈಗ ಮಾಡಬೇಕಾದ ಕಾರ್ಯವನ್ನು ಬಹಳ ರೀತಿಯಿಂದ ಬಹುವಾಗಿ ವಿಚಾರ ಮಾಡಿ ನಾನು ಆ ಮಹಾರಥರು ಇದ್ದಲ್ಲಿಗೆ ಪಾಂಡುಪುತ್ರನೂ, ಧನುರ್ಧಾರಿಯೂ ಆದ ಭೀಮಸೇನನನ್ನು ಕಳುಹಿಸುವುದಕ್ಕೆ ಇಷ್ಟಪಡುತ್ತೇನೆ.

ನ ಚಾಪ್ಯಸಹ್ಯಂ ಭೀಮಸ್ಯ ವಿದ್ಯತೇ ಭುವಿ ಕಿಂಚನ ।
ಶಕ್ತೋ ಹ್ಯೇಷ ರಣೇ ಯತ್ತಾನ್ ಪೃಥಿವ್ಯಾಂ ಸರ್ವಧನ್ವಿನಃ ।
ಸ್ವಬಾಹುಬಲಮಾಸ್ಥಾಯ ಪ್ರತಿವ್ಯೂಹಿತುಮಂಜಸಾ ॥ ೧೯ ॥

ಭೀಮಸೇನನಿಗಾದರೂ ಭೂಮಿಯಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ. ಅವನು ತನ್ನ ಬಾಹುಬಲದಿಂದಲೇ ಭೂಮಿಯಲ್ಲಿರುವ ಪ್ರಯತ್ನಶಾಲಿಗಳಾದ ಎಲ್ಲ ಧನುರ್ಧಾರಿಗಳನ್ನೂ ಪ್ರತಿಘಾತಗೊಳಿಸಲು ಸಮರ್ಥನಾಗಿದ್ದಾನೆ.

ಯಸ್ಯ ಬಾಹುಬಲಂ ಸರ್ವೇ ಸಮಾಶ್ರಿತ್ಯ ಮಹಾತ್ಮನಃ ।
ವನವಾಸಾನ್ನಿವೃತ್ತಾಃ ಸ್ಮ ನ ಚ ಯುದ್ಧೇಷು ನಿರ್ಜಿತಾಃ ॥ ೨೦ ॥

ಮಹಾತ್ಮನಾದ ಅವನ ಬಾಹುಬಲವನ್ನು ಆಶ್ರಯಿಸಿ, ನಾವು ವನವಾಸದಿಂದ ಹಿಂದಿರುಗಿದ್ದೇವೆ ಮತ್ತು ಯುದ್ಧದಲ್ಲಿ ಪರಾಭವವನ್ನು ಹೊಂದಿಲ್ಲ.

ಇತೋ ಗತೇ ಭೀಮಸೇನೇ ಸಾತ್ವತಂ ಪ್ರತಿ ಪಾಂಡವೇ ।
ಸನಾಥೌ ಭವಿತಾರೌ ಹಿ ಯುಧಿ ಸಾತ್ವತಫಲ್ಗುನೌ ॥ ೨೧ ॥

ಪಾಂಡವನಾದ ಭೀಮಸೇನನು ಸಾತ್ಯಕಿಯನ್ನು ಹುಡುಕಲು ಇಲ್ಲಿಂದ ಹೊರಟರೆ ರಣರಂಗದಲ್ಲಿ ಅರ್ಜುನ-ಸಾತ್ಯಕಿಯರು ಸನಾಥರಾಗುವರು.

ಕಾಮಂ ತ್ವಶೋಚನೀಯೌ ತೌ ರಣೇ ಸಾತ್ವತಫಲ್ಗುನೌ ।
ರಕ್ಷಿತೌ ವಾಸುದೇವೇನ ಸ್ವಯಂ ಚಾಸ್ತ್ರವಿಶಾರದೌ ॥ ೨೨ ॥

ವಸ್ತುತಃ ಯುದ್ಧದಲ್ಲಿ ಸಾತ್ಯಕಿ ಮತ್ತು ಅರ್ಜುನರನ್ನು ಕುರಿತು ಶೋಕಪಡಬೇಕಾದ ಕಾರಣವಿಲ್ಲ. ಅವರು ಕೃಷ್ಣರಿಂದ ರಕ್ಷಿತರೂ ಮತ್ತು ಸ್ವತಃ ಅಸ್ತ್ರವಿಶಾರದರೂ ಆಗಿದ್ದಾರೆ.

ಅವಶ್ಯಂ ತು ಮಯಾ ಕಾರ್ಯಮಾತ್ಮನಃ ಶೋಕನಾಶನಮ್ ।
ತಸ್ಮಾದ್ ಭೀಮಂ ನಿಯೋಕ್ಷ್ಯಾಮಿ ಸಾತ್ವತಸ್ಯ ಪದಾನುಗಮ್ ।
ತತಃ ಪ್ರತಿಕೃತಂ ಮನ್ಯೇ ವಿಧಾನಂ ಸಾತ್ಯಕಿಂ ಪ್ರತಿ ॥ ೨೩ ॥

ಆದರೆ ನಾನು ಅವಶ್ಯವಾಗಿ ನನ್ನ ಶೋಕವನ್ನು ಪರಿಹರಿಸುವ ಕಾರ್ಯವನ್ನು ಮಾಡಬೇಕು. ಆದ್ದರಿಂದ ಸಾತ್ಯಕಿಯನ್ನು ಹುಡುಕಲು ಭೀಮಸೇನನಿಗೆ ಆದೇಶಿಸುವೆನು. ಆಗ ಸಾತ್ಯಕಿಯು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಲ್ಪಡುತ್ತದೆ ಎಂದು ಭಾವಿಸುತ್ತೇನೆ (ಎಂದು ಚಿಂತಿಸಿದನು).

ಏವಂ ನಿಶ್ಚಿತ್ಯ ಮನಸಾ ಧರ್ಮಪುತ್ರೋ ಯುಧಿಷ್ಠಿರಃ ।
ಯಂತಾರಮಬ್ರವೀದ್ರಾಜನ್ ಭೀಮಂ ಪ್ರತಿ ನಯಸ್ವ ಮಾಮ್॥ ೨೪ ॥

ಧರ್ಮಪುತ್ರನಾದ ಯುಧಿಷ್ಠಿರನು ಮನಸ್ಸಿನಲ್ಲಿ ಹೀಗೆ ನಿಶ್ಚಯಿಸಿ ಎಲೈ ರಾಜನೇ, ತನ್ನ ಸಾರಥಿಯನ್ನು ಕುರಿತು ಭೀಮನ ಬಳಿಗೆ ನನ್ನನ್ನು ಕರೆದುಕೊಂಡು ಹೋಗು ಎಂದು ಹೇಳಿದನು.

ಧರ್ಮರಾಜವಚಃ ಶ್ರುತ್ವಾ ಸಾರಥಿರ್ಹಯಕೋವಿದಃ ।
ರಥಂ ಹೇಮಪರಿಷ್ಕಾರಂ ಭೀಮಾಂತಿಕಮುಪಾನಯತ್ ॥ ೨೫ ॥

ಧರ್ಮರಾಜನ ಮಾತನ್ನು ಕೇಳಿ ಅಶ್ವಕೋವಿದನಾದ ಸಾರಥಿಯು ಸುವರ್ಣಾಲಂಕೃತವಾದ ರಥವನ್ನು ಭೀಮನ ಬಳಿಗೆ ತೆಗೆದುಕೊಂಡು ಹೋದನು.

ಭೀಮಸೇನಮನುಪ್ರಾಪ್ಯ ಪ್ರಾಪ್ತಕಾಲಮನುಸ್ಮರನ್ ।
ಕಶ್ಮಲಂ ಪ್ರಾವಿಶದ್ ರಾಜಾ ಬಹು ತತ್ರ ಸಮಾದಿಶನ್ ॥ ೨೬ ॥

ಯಃ ಸದೇವಾನ್ ಸಗಂಧರ್ವಾನ್ ದೈತ್ಯಾಂಶ್ಚೈಕರಥೋಽಜಯತ್ ।
ತಸ್ಯ ಲಕ್ಷ್ಮ ನ ಪಶ್ಯಾಮಿ ಭೀಮಸೇನಾನುಜಸ್ಯ ತೇ ॥ ೨೭ ॥

ರಾಜನಾದ ಯುಧಿಷ್ಠಿರನು ಭೀಮಸೇನನನ್ನು ಸಮೀಪಿಸಿ, ಆಗ ಮಾಡಬೇಕಾದ ಕಾರ್ಯವನ್ನು ಚಿಂತಿಸಿ, ವಿಷಾದವನ್ನು ಹೊಂದಿ, ಬಹಳ ರೀತಿಯಲ್ಲಿ ಆದೇಶ ಮಾಡಿದನು. ಎಲೈ ಭೀಮಸೇನನೇ, ಯಾವನು ಒಂದು ರಥದಲ್ಲಿ ನಿಂತು ದೇವತೆಗಳಿಂದಲೂ, ಗಂಧರ್ವರಿಂದಲೂ ಸಹಿತರಾದ ದೈತ್ಯರನ್ನು ಜಯಿಸಿದನೋ ಅಂತಹ ತಮ್ಮನಾದ ಅರ್ಜುನನ ಚಿಹ್ನೆಯನ್ನು ಕಾಣುತ್ತಿಲ್ಲ (ಎಂದು ಹೇಳಿದನು).

ತತೋಽಬ್ರವೀದ್ ಧರ್ಮರಾಜಂ ಭೀಮಸೇನಸ್ತಥಾಗತಮ್ ।
ನೈವಾದ್ಯಾಕ್ಷಂ ನ ಚಾಶ್ರೌಷಂ ತವ ಕಶ್ಮಲಮೀದೃಶಮ್ ॥ ೨೮ ॥

ಪುರಾ ಹಿ ದುಃಖದೀರ್ಣಾನಾಂ ಭವಾನ್ ಗತಿರಭೂದ್ಧಿ ನಃ ।
ಉತ್ತಿಷ್ಠೋತ್ತಿಷ್ಠ ರಾಜೇಂದ್ರ ಶಾಧಿ ಕಿಂ ಕರವಾಣಿ ತೇ ॥ ೨೯ ॥

ನ ಹ್ಯಸಾಧ್ಯಮಕಾರ್ಯಂ ವಾ ವಿದ್ಯತೇ ಮಮ ಮಾನದ ।
ಆಜ್ಞಾಪಯ ಕುರುಶ್ರೇಷ್ಠ ಮಾ ಚ ಶೋಕೇ ಮನಃ ಕೃಥಾಃ ॥ ೩೦ ॥

ಆ ಅವಸ್ಥೆಯಲ್ಲಿದ್ದ ಧರ್ಮರಾಜನನ್ನು ಕುರಿತು ಭೀಮಸೇನನು, ನಿನಗೆ ಉಂಟಾಗಿರುವ ಇಂತಹ ವಿಷಾದವನ್ನು ನಾನು ನೋಡಲೂ ಇಲ್ಲ, ಕೇಳಿಯೂ ಇಲ್ಲ. ಹಿಂದೆ ದುಃಖದಿಂದ ಬಿರಿದು ಹೋಗುವ ನಮಗೆ ನೀನು ಆಶ್ರಯನಾಗಿದ್ದೆ. ರಾಜೇಂದ್ರನೇ ಎದ್ದೇಳು, ಎದ್ದೇಳು. ನಾನು ನಿನಗೆ ಏನು ಮಾಡಬೇಕೆಂದು ಶಾಸನವನ್ನು ಮಾಡು. ಎಲೈ ಮಾನದನೇ, ನನಗೆ ಅಸಾಧ್ಯವಾದುದು ಅಥವಾ ಮಾಡಲಾರದುದು ಯಾವುದೂ ಇಲ್ಲ. ಎಲೈ ಕುರುಶ್ರೇಷ್ಠನೇ, ನನಗೆ ಆಜ್ಞೆಯನ್ನು ಮಾಡು, ಮನಸ್ಸಿನಲ್ಲಿ ಶೋಕಪಡಬೇಡ ಎಂದು ಹೇಳಿದನು.

ತಮಬ್ರವೀದಶ್ರುಪೂರ್ಣಃ ಕೃಷ್ಣಸರ್ಪ ಇವ ಶ್ವಸನ್ ।
ಭೀಮಸೇನಮಿದಂ ವಾಕ್ಯಂ ಪ್ರಮ್ಲಾನವದನೋ ನೃಪಃ ॥ ೩೧ ॥

ಆಗ ಅಶ್ರುಪೂರ್ಣನೂ, ಬಾಡಿದ ಮುಖವುಳ್ಳವನೂ ಆದ ರಾಜನು ಕೃಷ್ಣಸರ್ಪದಂತೆ ನಿಟ್ಟುಸಿರನ್ನು ಬಿಡುತ್ತಾ ಭೀಮಸೇನನನ್ನು ಕುರಿತು ಈ ಮಾತನ್ನು ಆಡಿದನು.

ಯಥಾ ಶಂಖಸ್ಯ ನಿರ್ಘೋಷಃ ಪಾಂಚಜನ್ಯಸ್ಯ ಶ್ರೂಯತೇ ।
ಪ್ರೇರಿತೋ ವಾಸುದೇವೇನ ಸಂರಬ್ಧೇನ ಯಶಸ್ವಿನಾ ।
ನೂನಮದ್ಯ ಹತಃ ಶೇತೇ ತವ ಭ್ರಾತಾ ಧನಂಜಯಃ ॥ ೩೨ ॥

ಕೀರ್ತಿವಂತನೂ, ಕೋಪಗೊಂಡವನೂ ಆದ ಕೃಷ್ಣನಿಂದ ಊದಲ್ಪಡುವ ಪಾಂಚಜನ್ಯದ ಘೋಷವನ್ನು ಕೇಳಿದರೆ ಈ ದಿನ ನಿನ್ನ ತಮ್ಮನಾದ ಅರ್ಜುನನು ಮೃತನಾಗಿ ಮಲಗಿದ್ದಾನೆ ಎನಿಸುತ್ತದೆ.

ತಸ್ಮಿನ್ ವಿನಿಹತೇ ನೂನಂ ಯುದ್ಧ್ಯತೇಽಸೌ ಜನಾರ್ದನಃ ।
ಯಸ್ಯ ಸತ್ತ್ವವತೋ ವೀರ್ಯಮುಪಜೀವಂತಿ ಪಾಂಡವಾಃ ॥ ೩೩ ॥

ಅವನು ಮೃತನಾಗುತ್ತಿರಲು ಯಾರ ಬಲವನ್ನು ಮತ್ತು ಪರಾಕ್ರಮವನ್ನು ಪಾಂಡವರು ಉಪಜೀವಿಸಿಕೊಂಡಿದ್ದಾರೆಯೋ ಅಂತಹ ಈ ಜನಾರ್ದನನೇ ಖಂಡಿತವಾಗಿ ಯುದ್ಧವನ್ನು ಮಾಡುತ್ತಿದ್ದಾನೆ.

ಯಂ ಭಯೇಷ್ವಭಿಗಚ್ಛಂತಿ ಸಹಸ್ರಾಕ್ಷಮಿವಾಮರಾಃ ।
ಸ ಶೂರಃ ಸೈಂಧವಪ್ರೇಪ್ಸುರನ್ವಯಾದ್ ಭಾರತೀಂ ಚಮೂಮ್ ॥ ೩೪ ॥

ಭಯವುಂಟಾದಾಗ ದೇವತೆಗಳು ಇಂದ್ರನನ್ನು ಆಶ್ರಯಿಸುವಂತೆ ಯೋಧರು ಯಾವ ಶೂರನನ್ನು ಆಶ್ರಯಿಸುತ್ತಾರೋ ಅಂತಹ ಅರ್ಜುನನು ಸೈಂಧವನ ವಧೆ ಮಾಡಲು ಕೌರವರ ಸೈನ್ಯವನ್ನು ಪ್ರವೇಶಿಸಿದ್ದಾನೆ.

ತಸ್ಯ ವೈ ಗಮನಂ ವಿದ್ಮೋ ಭೀಮ ನಾವರ್ತನಂ ಪುನಃ ।
ಶ್ಯಾಮೋ ಯುವಾ ಗುಡಾಕೇಶೋ ದರ್ಶನೀಯೋ ಮಹಾಭುಜಃ ॥೩೫॥

ವ್ಯೂಢೋರಸ್ಕೋ ಮಹಾಸ್ಕಂಧೋ ಮತ್ತದ್ವಿರದವಿಕ್ರಮಃ ।
ಚಕೋರನೇತ್ರಸ್ತಾರಾಕ್ಷೋ ದ್ವಿಷತಾಮಪಚರ್ಧನಃ ॥ ೩೬ ॥

ಎಲೈ ಭೀಮನೇ, ಅವನು ಅಲ್ಲಿಗೆ ಹೋದದ್ದನ್ನು ಕೇಳಿದ್ದೇವೆ. ಅವನ ಹಿಂದಿರುಗುವಿಕೆಯು ತಿಳಿದಿಲ್ಲ. ಅವನು ಶ್ಯಾಮವರ್ಣದವನು, ಯುವಕ, ನಿದ್ರೆಯನ್ನು ಗೆದ್ದವನು, ಮಹಾಭುಜ, ತುಂಬದ ಎದೆಯುಳ್ಳವನು, ಮದಗಜದ ವಿಕ್ರಮವುಳ್ಳವನು, ಚಕೋರನೇತ್ರನು, ತಾಮ್ರಾಕ್ಷನು, ಶತ್ರುಗಳಿಗೆ ಹೆಚ್ಚಿನ ಅಪಚಾರವನ್ನು ಮಾಡುವವನು.

ತದಿದಂ ಮಮ ಭದ್ರಂ ತೇ ಶೋಕಸ್ಥಾನಮರಿಂದಮ ।
ಅರ್ಜುನಾರ್ಥಂ ಮಹಾಬಾಹೋ ಸಾತ್ವತಸ್ಯ ಚ ಕಾರಣಾತ್ ॥ ೩೭ ॥

ವರ್ಧತೇ ಹವಿಷೇವಾಗ್ನಿ ರಿದ್ಧ್ಯಮಾನಃ ಪುನಃ ಪುನಃ ।
ತಸ್ಯ ಲಕ್ಷ್ಮ ನ ಪಶ್ಯಾಮಿ ತೇನ ವಿಂದಾಮಿ ಕಶ್ಮಲಮ್ ॥ ೩೮ ॥

ಎಲೈ ಭೀಮನೇ, ನಿನಗೆ ಮಂಗಳವಾಗಲಿ. ಎಲೈ ಮಹಾಬಾಹುವೇ, ಅರ್ಜುನನ ಸಲುವಾಗಿ ಮತ್ತು ಸಾತ್ಯಕಿಯ ಸಲುವಾಗಿ ಈ ನನ್ನ ಶೋಕಸ್ಥಾನವು ಉಂಟಾಗಿದೆ. ಆ ಶೋಕವು ಹವಿಸ್ಸನ್ನು ಹಾಕಿದ ಅಗ್ನಿಯಂತೆ ಪುನಃ ಪುನಃ ಜ್ವಲಿಸುತ್ತಿದೆ. ಅವನ ಚಿಹ್ನೆಯು ಕಾಣುತ್ತಿಲ್ಲ. ಆದ್ದರಿಂದ ವಿಷಾದವನ್ನು ಹೊಂದಿದ್ದೇನೆ.

ತಂ ವಿದ್ಧಿ ಪುರುಷವ್ಯಾಘ್ರಂ ಸಾತ್ವತಂ ಚ ಮಹಾರಥಮ್ ।
ಸ ತಂ ಮಹಾರಥಂ ಪಶ್ಚಾದನುಯಾತಸ್ತವಾನುಜಮ್ ।
ತಮಪಶ್ಯನ್ ಮಹಾಬಾಹುಮಹಂ ವಿಂದಾಮಿ ಕಶ್ಮಲಮ್ ॥ ೩೯ ॥

ಪುರುಷವ್ಯಾಘ್ರನಾದ ಅವನನ್ನು ಮತ್ತು ಮಹಾರಥನಾದ ಸಾತ್ಯಕಿಯನ್ನು ತಿಳಿ. ಸಾತ್ಯಕಿಯು ಮಹಾರಥನಾದ ನಿನ್ನ ತಮ್ಮನನ್ನು ಅನುಸರಿಸಿ ಹೋಗಿದ್ದಾನೆ. ಆ ಮಹಾಬಾಹುವನ್ನು ಕಾಣದೆ ನಾನು ಕಶ್ಮಲವನ್ನು ಹೊಂದಿದ್ದೇನೆ.

ತಸ್ಮಾತ್ ಕೃಷ್ಣೋ ರಣೇ ನೂನಂ ಯುದ್ಧ್ಯತೇ ಯುದ್ಧಕೋವಿದಃ ।
ಯಸ್ಯ ವೀರ್ಯವತೋ ವೀರ್ಯಮುಪಜೀವಂತಿ ಪಾಂಡವಾಃ ॥ ೪೦ ॥

ಆದ್ದರಿಂದ ಪರಾಕ್ರಮಶಾಲಿಯಾದ ಯಾವನ ಪರಾಕ್ರಮವನ್ನು ಪಾಂಡವರು ಉಪಜೀವಿಸುತ್ತಾರೆಯೋ ಅಂತಹ ಪರಾಕ್ರಮಶಾಲಿಯಾದ ಕೃಷ್ಣನು ತಾನೇ ಯುದ್ಧವನ್ನು ಮಾಡುತ್ತಿದ್ದಾನೆ.

ಸ ತತ್ರ ಗಚ್ಛ ಕೌಂತೇಯ ಯತ್ರ ಯಾತೋ ಧನಂಜಯಃ ।
ಸಾತ್ಯಕಿಶ್ಚ ಮಹಾವೀರ್ಯಃ ಕರ್ತವ್ಯಂ ಯದಿ ಮನ್ಯಸೇ ।
ವಚನಂ ಮಮ ಧರ್ಮಜ್ಞ ಜ್ಯೇಷ್ಠೋ ಭ್ರಾತಾ ಭವಾಮಿ ತೇ ॥ ೪೧ ॥

ಎಲೈ ಕೌಂತೇಯನೇ, ನಾನು ನಿನಗೆ ಅಣ್ಣನಾಗಿದ್ದೇನೆ. ಧರ್ಮಜ್ಞನಾದವನೇ, ನನ್ನ ಮಾತಿನಲ್ಲಿ ನಿನಗೆ ಗೌರವವಿದ್ದರೆ ಧನಂಜಯನೂ ಮತ್ತು ಮಹಾವೀರನಾದ ಸಾತ್ಯಕಿಯೂ ಎಲ್ಲಿದ್ದಾರೆಯೋ ಅಲ್ಲಿಗೆ ಹೋಗು.

ನ ತೇऽರ್ಜುನಸ್ತಥಾ ಜ್ಞೇಯೋ ಜ್ಞಾತವ್ಯಃ ಸಾತ್ಯಕಿರ್ಯಥಾ ।
ಚಿಕೀರ್ಷುರ್ಮಾತ್ವಿಯಂ ಪಾರ್ಥ ಪ್ರಯಾತಃ ಸವ್ಯಸಾಚಿನಃ ।
ಪದವೀಂ ದುರ್ಗಮಾಂ ಘೋರಾಮಗಮ್ಯಾಮಕೃತಾತ್ಮಭಿಃ ॥ ೪೨ ॥

ಸಾತ್ಯಕಿಯನ್ನು ತಿಳಿಯಬೇಕಾದ ರೀತಿಯಲ್ಲಿ ಅರ್ಜುನನನ್ನು ತಿಳಿಯಬೇಕಾದ ಅವಶ್ಯಕತೆ ಇಲ್ಲ. ಎಲೈ ಪಾರ್ಥನೇ, ನನಗೆ ಪ್ರಿಯವನ್ನು ಮಾಡಲು ಬಯಸಿ ಸಾತ್ಯಕಿಯು ದುರ್ಗಮವಾದ, ಘೋರವಾದ, ಧೈರ್ಯಶಾಲಿಯೂ ಪ್ರವೇಶ ಮಾಡಲಾರದ ಅರ್ಜುನನ ಪದವಿಯನ್ನು ಅನುಸರಿಸಿ ಹೋಗಿದ್ದಾನೆ.

ಭೀಮಸೇನಃ

ಬ್ರಹ್ಮೇಶಾನೇಂದ್ರವರುಣಾನವಹದ್ ಯಃ ಪುರಾ ರಥಃ ।
ತಮಾಸ್ಥಾಯ ಗತೌ ಕೃಷ್ಣೌ ನ ತಯೋರ್ವಿದ್ಯತೇ ಭಯಮ್ ॥ ೪೩ ॥

ಆಜ್ಞಾಂ ತು ಶಿರಸಾ ಬಿಭ್ರದೇಷ ಗಚ್ಛಾಮಿ ಮಾ ಶುಚಃ ।
ಸಮೇತ್ಯ ತಾನ್ ನರವ್ಯಾಘ್ರಾಂಸ್ತವ ದಾಸ್ಯಾಮಿ ಸಂವಿದಮ್ ॥ ೪೪ ॥

ಭೀಮಸೇನ– ಯಾವ ರಥವು ಹಿಂದೆ ಬ್ರಹ್ಮ-ರುದ್ರ-ಇಂದ್ರ-ವರುಣರನ್ನು ಕರೆದುಕೊಂಡು ಹೋಗಿದೆಯೋ ಅಂತಹ ರಥದಲ್ಲಿರುವ ಕೃಷ್ಣಾರ್ಜುನರಿಗೆ ಯಾವ ಭಯವೂ ಇಲ್ಲ. ಆದರೆ ನಿನ್ನ ಆಜ್ಞೆಯನ್ನು ಶಿರಸಾ ಧರಿಸಿ ನಾನು ಹೋಗುತ್ತಿದ್ದೇನೆ. ದುಃಖಪಡಬೇಡ. ನಾನು ಆ ನರವ್ಯಾಘ್ರರನ್ನು ಸಂಧಿಸಿ ನಿನಗೆ ಸೂಚನೆಯನ್ನು ಕೊಡುವೆನು.

ಸಂಜಯಃ

ಏತಾವದುಕ್ತ್ವಾ ಪ್ರಯಯೌ ಪರಿಧಾಯ ಯುಧಿಷ್ಠಿರಮ್ ।
ಧೃಷ್ಟದ್ಯುಮ್ನಾಯ ಬಲವಾನ್ ಸುಹೃದ್ಭ್ಯಶ್ಚ ಪುನಃ ಪುನಃ ।
ಧೃಷ್ಟದ್ಯುಮ್ನಂ ಚೇದಮಾಹ ಭೀಮಸೇನೋ ಮಹಾಬಲಃ ॥ ೪೫ ॥

ಸಂಜಯ– ಇಷ್ಟನ್ನು ಹೇಳಿ ಬಲಿಷ್ಠನಾದ ಭೀಮಸೇನನು ಯುಧಿಷ್ಠಿರನನ್ನೂ, ಧೃಷ್ಟದ್ಯುಮ್ನನನ್ನೂ ಮತ್ತು ಸುಹೃದರನ್ನು ಬಿಡಿಸಿಕೊಂಡು ಹೊರಟು ಮಹಾಬಲನಾದ ಅವನು ಪುನಃ ಪುನಃ ಧೃಷ್ಟದ್ಯುಮ್ನನನ್ನು ಕುರಿತು ಈ ಮಾತನ್ನು ಆಡಿದನು.

ವಿದಿತಂ ತೇ ಮಹಾಬಾಹೋ ಯಥಾ ದ್ರೋಣೋ ಮಹಾರಥಃ ।
ಗ್ರಹಣೇ ಧರ್ಮರಾಜಸ್ಯ ಸರ್ವೋಪಾಯೇನ ವರ್ತತೇ ॥ ೪೬ ॥

ಎಲೈ ಮಹಾಬಾಹುವೇ, ಮಹಾರಥರಾದ ದ್ರೋಣರು ಹೇಗೆ ಸರ್ವೋಪಾಯದಿಂದ ಧರ್ಮರಾಜನನ್ನು ಹಿಡಿಯಲು ಪ್ರತಿಜ್ಞೆಯನ್ನು ಮಾಡಿದ್ದಾರೆ ಎಂಬುದು ನಿನಗೆ ತಿಳಿದಿದೆ.

ನ ಚ ಮೇ ಗಮನೇ ಕೃತ್ಯಂ ತಾದೃಕ್ ಪಾರ್ಷತ ವಿದ್ಯತೇ ।
ಯಾದೃಶಂ ರಕ್ಷಣೇ ರಾಜ್ಞಃ ಕಾರ್ಯಮಾತ್ಮಯಿಕಂ ಹಿ ನಃ ॥ ೪೭ ॥

ಎಲೈ ದೃಷ್ಟದ್ಯುಮ್ನನೇ, ನನಗೆ ರಾಜನನ್ನು ರಕ್ಷಣೆ ಮಾಡುವುದು ಎಂತಹ ದೊಡ್ಡ ಕಾರ್ಯವಾಗಿದೆಯೋ ಇಲ್ಲಿಂದ ಅರ್ಜುನನನ್ನು ನೋಡಲು ಹೊರಡುವುದು ಅಷ್ಟು ದೊಡ್ಡ ಕಾರ್ಯವಾಗಿ ಕಾಣುವುದಿಲ್ಲ.

ಏವಮುಕ್ತೋಽಸ್ಮಿ ಪಾರ್ಥೇನ ಪ್ರತಿವಕ್ತುಂ ಸ್ಮ ನೋತ್ಸಹೇ ।
ಪ್ರಯಾಸ್ಯೇ ತತ್ರ ಯತ್ರಾಸೌ ಮುಮೂರ್ಷುಃ ಸೈಂಧವಃ ಸ್ಥಿತಃ ॥
ಧರ್ಮರಾಜಸ್ಯ ವಚನೇ ಸ್ಥಾತವ್ಯಮವಿಶಂಕಯಾ ॥ ೪೮ ॥

ಆದರೆ ಯುಧಿಷ್ಠಿರನಿಂದ ಹೀಗೆ ಹೇಳಲ್ಪಟ್ಟಿದ್ದೇನೆ. ನಾನು ಅವನಿಗೆ ಪ್ರತಿಯಾಗಿ ಮಾತನಾಡಲಾರೆ. ಮರಣವು ಸನ್ನಿಹಿತನಾದ ಆ ಸೈಂಧವನು ಎಲ್ಲಿದ್ದಾನೆಯೋ ಅಲ್ಲಿಗೆ ನಾನು ಹೋಗುವೆನು. ಧರ್ಮರಾಜನ ಮಾತನ್ನು ನಾನು ನಿಶ್ಶಂಕೆಯಿಂದ ಪಾಲಿಸಬೇಕಷ್ಟೆ!

ಸೋಽದ್ಯ ಯತ್ತೋ ರಣೇ ಪಾರ್ಥಂ ಪರಿರಕ್ಷ ಯುಧಿಷ್ಠಿರಮ್ ।
ಏತದ್ಧಿ ಸರ್ವಕಾರ್ಯಾಣಾಂ ಪರಮಂ ಕೃತ್ಯಮಾಹವೇ ॥ ೪೯ ॥

ಆದ್ದರಿಂದ ಈ ದಿನ ನೀನು ಎಚ್ಚರಿಕೆಯಿಂದ ರಣರಂಗದಲ್ಲಿ ಯುಧಿಷ್ಠಿರನನ್ನು ರಕ್ಷಿಸು. ರಣರಂಗದಲ್ಲಿ ಎಲ್ಲ ಕಾರ್ಯಗಳಿಗಿಂತಲೂ ಇದು ನೀನು ಅವಶ್ಯವಾಗಿ ಮಾಡಬೇಕಾದ ಶ್ರೇಷ್ಠವಾದ ಕಾರ್ಯ (ಎಂದು ಹೇಳಿದನು).

ತಮಬ್ರವೀನ್ಮಹಾರಾಜ ಧೃಷ್ಟದ್ಯುಮ್ನೋ ವೃಕೋದರಮ್ ।
ಈಪ್ಸಿತೇನ ಮಹಾಬಾಹೋ ಗಚ್ಛ ಪಾರ್ಥಾವಿಚಾರಯನ್ ॥ ೫೦ ॥

ನಾಹತ್ವಾ ಸಮರೇ ದ್ರೋಣೋ ಧೃಷ್ಟದ್ಯುಮ್ನಂ ಕಥಂಚನ ।
ನಿಗ್ರಹಂ ಧರ್ಮರಾಜಸ್ಯ ಪ್ರಕರಿಷ್ಯತಿ ಸಂಯುಗೇ ॥ ೫೧ ॥

ಎಲೈ ಮಹಾರಾಜನೇ, ಆಗ ಧೃಷ್ಟದ್ಯುಮ್ನನು ಭೀಮಸೇನನನ್ನು ಕುರಿತು- 'ಎಲೈ ಮಹಾಬಾಹುವೇ, ಪಾರ್ಥನೇ, ಯಾವ ಸಂಶಯವನ್ನೂ ಹೊಂದದೆ ನಿನ್ನ ಇಷ್ಟಸಿದ್ಧಿಗಾಗಿ ನೀನು ಹೊರಡು. ಧೃಷ್ಟದ್ಯುಮ್ನನಾದ ನನ್ನನ್ನು ರಣರಂಗದಲ್ಲಿ ಕೊಲ್ಲದೆ ದ್ರೋಣರು ಧರ್ಮರಾಜನ ನಿಗ್ರಹವನ್ನು ಮಾಡಲು ಸಾಧ್ಯವಿಲ್ಲ' ಎಂದು ಹೇಳಿದನು.

ತತೋ ನಿಕ್ಷಿಪ್ಯ ರಾಜಾನಂ ಧೃಷ್ಟದ್ಯುಮ್ನಾಯ ಪಾಂಡವಃ ।
ಅಭಿವಾದ್ಯ ಗುರುಂ ಜ್ಯೇಷ್ಠಂ ಪ್ರಯಯೌ ಯತ್ರ ಫಲ್ಗುನಃ ॥ ೫೨ ॥

ಆಗ ಪಾಂಡವನಾದ ಭೀಮಸೇನನು ರಾಜನಾದ ಯುಧಿಷ್ಠಿರನನ್ನು ಧೃಷ್ಟದ್ಯುಮ್ನನ ವಶಕ್ಕೆ ಒಪ್ಪಿಸಿ ತನ್ನ ಗುರುವೂ, ಹಿರಿಯನೂ ಆದ ಯುಧಿಷ್ಠಿರನಿಗೆ ನಮಸ್ಕರಿಸಿ ಅರ್ಜುನನಿದ್ದಲ್ಲಿಗೆ ಹೊರಟನು.

ಪರಿಷ್ವಕ್ತಸ್ತು ಕೌಂತೇಯೋ ಧರ್ಮರಾಜೇನ ಭಾರತ ।
ಆಘ್ರಾತಶ್ಚ ತಥಾ ಮೂರ್ಧ್ನಿ ಶ್ರಾವಿತಶ್ಚಾಶಿಷಃ ಶುಭಾಃ ॥ ೫೩ ॥

ಭೀಮಸೇನೋ ಮಹಾಬಾಹುಃ ಕವಚೀ ಶುಭಕುಂಡಲೀ ।
ಸಾಂಗದಃ ಸತನುತ್ರಾಣಃ ಸಶರೀ ರಥಿನಾಂ ವರಃ ॥ ೫೪ ॥

ಎಲೈ ಭಾರತನೇ, ಕೌಂತೇಯನಾದ ಭೀಮಸೇನನು ಧರ್ಮರಾಜನಿಂದ ಆಲಿಂಗಿಸಲ್ಪಟ್ಟು, ಪುನಃ ಪುನಃ ಶಿರಸ್ಸಿನಲ್ಲಿ ಆಘ್ರಾಣಿಸಲ್ಪಟ್ಟು, ಅವನಿಂದ ಒಳ್ಳೆಯ ಆಶೀರ್ವಾದಗಳನ್ನು ಕೇಳಿ, ಮಹಾಬಾಹುವಾದ ರಥಿಶ್ರೇಷ್ಠನಾದ ಭೀಮಸೇನನು ಕವಚವನ್ನೂ, ಶುಭಕುಂಡಲಗಳನ್ನೂ, ಅಂಗದಗಳನ್ನೂ, ಕವಚವನ್ನೂ ಧರಿಸಿ ಬಾಣವನ್ನು ಹಿಡಿದು (ಹೊರಟನು).

ತಸ್ಯ ಕಾರ್ಷ್ಣಾಯಸಂ ವರ್ಮ ಹೇಮಚಿತ್ರಂ ಮಹದ್ದಿಮತ್ ।
ವಿಬಭೌ ಪರ್ವತಶ್ಲಿಷ್ಟಃ ಸವಿದ್ಯುದಿವ ತೋಯದಃ ॥ ೫೫ ॥

ಅವನ ಬಹಳ ಬೆಲೆಬಾಳುವ ಸುವರ್ಣಖಚಿತವಾದ ಕಬ್ಬಿಣದ ಕವಚವು ಪರ್ವತದಿಂದ ಆಲಿಂಗಿತವಾದ, ಮಿಂಚಿನಿಂದ ಕೂಡಿದ ಮೋಡದಂತೆ ಕಂಗೊಳಿಸಿತು.

ಪೀತರಕ್ತಾಸಿತಸ್ತೈರ್ವಾಸೋಭಿಶ್ಚ ಸುವೇಷ್ಟಿತಃ ।
ಕಂಠತ್ರಾಣೇನ ಚ ಬಭೌ ಸೇಂದ್ರಾಯುಧ ಇವಾಂಬುದಃ ॥ ೫೬ ॥

ಹಳದಿ, ಕೆಂಪು, ಕಪ್ಪು ಮತ್ತು ಬಿಳಿಯ ಬಣ್ಣದ ವಸ್ತ್ರಗಳನ್ನು ಧರಿಸಿದ ಅವನು ಕಂಠತ್ರಾಣವನ್ನು ಧರಿಸಿ ಕಾಮನಬಿಲ್ಲಿನಿಂದ ಶೋಭಿಸುವ ಮೋಡದಂತೆ ಶೋಭಿಸಿದನು.

ಪ್ರಯಾತೇ ಭೀಮಸೇನೇ ತು ತವ ಸೈನ್ಯಂ ಯುಯುತ್ಸಯಾ ।
ಪಾಂಚಜನ್ಯರವೋ ಘೋರಃ ಪುನರಾಸೀದ್ ವಿಶಾಂಪತೇ ॥ ೫೭ ॥

ನಿನ್ನ ಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಭೀಮಸೇನನು ಅಲ್ಲಿಂದ ಹೊರಡುತ್ತಿರಲು ಎಲೈ ರಾಜನೇ, ಪುನಃ ಪಾಂಚಜನ್ಯದ ಘೋರವಾದ ಘೋಷವು ಕೇಳಿಬಂದಿತು.

ತಂ ಶ್ರುತ್ವಾ ನಿನದಂ ಘೋರಂ ತ್ರೈಲೋಕ್ಯತ್ರಾಸನಂ ಮಹತ್ ।
ಪುನರ್ಭೀಮಂ ಮಹಾಬಾಹುರ್ಧರ್ಮಪುತ್ರೋಭ್ಯಭಾಷತ ॥ ೫೮ ॥

ತ್ರೈಲೋಕ್ಯಭೀಷಣವಾದ, ಘೋರವಾದ ಆ ದೊಡ್ಡ ಘೋಷವನ್ನು ಕೇಳಿದ ಮಹಾಬಾಹುವಾದ ಯುಧಿಷ್ಠಿರನು ಭೀಮನನ್ನು ಕುರಿತು ಪುನಃ ಮಾತನಾಡಿದನು.

ಏಷ ವೃಷ್ಣಿಪ್ರವೀರೇಣ ಧ್ಮಾತಃ ಸಲಿಲಜೋ ಭೃಶಮ್ ।
ಪೃಥಿವೀಂ ಚಾಂತರಿಕ್ಷಂ ಚ ವಿನಾದಯತಿ ಶಂಖರಾಟ್ ॥ ೫೯ ॥

ವೃಷ್ಣಿವೀರನಾದ ಕೃಷ್ಣನಿಂದ ಊದಲ್ಪಡುತ್ತಿರುವ ಈಶ್ರೇಷ್ಠ ಜಲಜವಾದ ಶಂಖವು ಭೂಮಿಯನ್ನೂ, ಅಂತರಿಕ್ಷವನ್ನೂ ತನ್ನನಾದದಿಂದ ತುಂಬುತ್ತಿದೆ.

ನೂನಂ ವ್ಯಸನಮಾಪನ್ನೇ ಸುಮಹತ್ ಸವ್ಯಸಾಚಿನಿ ।
ಕುರುಭಿರ್ಯುಧ್ಯತೇ ಸಾರ್ಧಂ ಸರ್ವೈಶ್ಚಕ್ರಗದಾಧರಃ ॥ ೬೦ ॥

ಖಂಡಿತವಾಗಿ ಅರ್ಜುನನು ದೊಡ್ಡ ವ್ಯಸನವನ್ನು ಹೊಂದಿರುವಾಗ ಚಕ್ರಗದಾಧರನಾದ ಕೃಷ್ಣನು ಎಲ್ಲಕುರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆ.

ನೂನಮಾರ್ಯಾ ಮಹತ್ಕುಂತೀ ಪಾಪಮದ್ಯ ನಿದರ್ಶನಮ್ ।
ದ್ರೌಪದೀ ಚ ಸುಭದ್ರಾ ಚ ಪಶ್ಯಂತಿ ಸಹ ಬಂಧುಭಿಃ ॥ ೬೧ ॥

ಖಂಡಿತವಾಗಿ ಈ ದಿನ ಪೂಜ್ಯಳಾದ ಕುಂತಿಯೂ, ದ್ರೌಪದಿಯೂ, ಸುಭದ್ರೆಯೂ, ತಮ್ಮ ಬಂಧುಗಳ ಜೊತೆಯಲ್ಲಿ ದೊಡ್ಡ ಅನರ್ಥವನ್ನು ನೋಡುತ್ತಾರೆ.

ಸ ಭೀಮಸ್ತ್ವರಯಾ ಯುಕ್ತೋ ಯಾಹಿ ಯತ್ರ ಧನಂಜಯಃ ।
ಮುಹ್ಯಂತೀವ ಹಿ ಮೇಽಂಗಾನಿ ಧನಂಜಯದಿದೃಕ್ಷಯಾ ।
ದಿಶಃ ಸಪ್ರದಿಶಃ ಪಾರ್ಥ ಸಾತ್ವತಸ್ಯ ಚ ಕಾರಣಾತ್ ।
ಗಚ್ಛ ಗಚ್ಛೇತಿ ಚ ಪುನರ್ಭೀಮಸೇನಮಭಾಷತ ॥ ೬೨ ॥

ಆದ್ದರಿಂದ ಭೀಮನೇ, ಶೀಘ್ರವಾಗಿ ಅರ್ಜುನನಿರುವಲ್ಲಿಗೆ ಹೋಗು. ಅರ್ಜುನನನ್ನು ನೋಡುವ ಆಸೆಯಿಂದ ನನ್ನ ಅಂಗಗಳು ಶಿಥಿಲವಾಗುತ್ತಿವೆ. ಎಲೈ ಭೀಮಸೇನನೇ, ಸಾತ್ಯಕಿಯ ನಿಮಿತ್ತದಿಂದಾಗಿ ದಿಕ್ಕು-ವಿದಿಕ್ಕುಗಳು ಮಂಕಾಗುತ್ತಿವೆ. ಭೀಮಸೇನನೇ ಹೊರಡು ಹೊರಡು ಎಂದು ಅವನು ಪುನಃ ಭೀಮಸೇನನಿಗೆ ಹೇಳಿದನು.

ಭೃಶಂ ಸ ಪ್ರಹಿತೋ ಭ್ರಾತ್ರಾ ಭ್ರಾತಾ ಭ್ರಾತುಃ ಪ್ರಿಯಂಕರಃ ।
ಆಹತ್ಯ ದುಂದುಭಂ ಭೀಮಃ ಶಂಖಂ ಪ್ರಧ್ಮಾಯ ಚಾಸಕೃತ್ ॥ ೬೩ ॥

ವಿನದ್ಯ ಸಿಂಹನಾದಂ ಚ ಜ್ಯಾಂ ವಿಕರ್ಷನ್ ಪುನಃ ಪುನಃ ।
ದರ್ಶಯನ್ ಘೋರಮಾತ್ಮಾನಮಮಿತ್ರಾನ್ ಸಹಸಾಭ್ಯಯಾತ್ ॥ ೬೪॥

ಹೀಗೆ ಅಣ್ಣನಿಂದ ಕಳುಹಿಸಲ್ಪಟ್ಟ ಭೀಮನು ಅಣ್ಣನಿಗೆ ಪ್ರಿಯವನ್ನು ಮಾಡುವವನಾಗಿ, ದುಂದುಭಿಯನ್ನು ಬಾರಿಸಿ, ಅನೇಕ ಬಾರಿ ಶಂಖವನ್ನು ಊದಿ, ಸಿಂಹನಾದವನ್ನು ಮಾಡಿ, ಧನುಸ್ಸಿನ ಹೆದೆಯನ್ನು ಎಳೆಯುತ್ತಾ, ಶತ್ರುಗಳಿಗೆ ತನ್ನನ್ನು ಘೋರರೂಪನಾಗಿ ತೋರಿಸುತ್ತಾ ತಕ್ಷಣದಲ್ಲಿ ಹೊರಟನು.

ತಮೂಹುರ್ಜವನಾ ದಾಂತಾ ವಿಕುರ್ವಾಣಾ ಹಯೋತ್ತಮಾಃ ।
ವಿಶೋಕೇನಾಭಸಂಯತ್ತಾ ಮನೋಮಾರುತರಂಹಸಃ ॥ ೬೫ ॥

ವಿಶೋಕನಿಂದ ನಿಯಂತ್ರಿಸಲ್ಪಟ್ಟ, ಮನೋಮಾರುತವೇಗವುಳ್ಳ ಪಳಗಿದ ಶ್ರೇಷ್ಠವಾದ ಅಶ್ವಗಳು ವಿವಿಧ ಚೇಷ್ಟೆಗಳನ್ನು ಮಾಡುತ್ತಾ ಅವನನ್ನು ಕರೆದುಕೊಂಡು ಹೋದವು.

ಆರುಜನ್ ವಿರುಜನ್ ಪಾರ್ಥೋ ಜ್ಯಾಂ ವಿಕರ್ಷಂಶ್ಚ ಪಾಣಿನಾ ।
ಸೋಽವಕರ್ಷನ್ ವಿಕರ್ಷಂಶ್ಚ ಸೇನಾಗ್ರಂ ಸಮಲೋಡಯತ್ ॥ ೬೬ ॥

ಪಾರ್ಥನಾದ ಭೀಮಸೇನನು ಶತ್ರುಸೈನ್ಯವನ್ನು ಹಿಂಸಿಸುತ್ತಾ, ತನ್ನ ಹಸ್ತದಿಂದ ಧನುಸ್ಸಿನ ಹೆದೆಯನ್ನು ಎಳೆಯುತ್ತಾ, ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಧನುಸ್ಸನ್ನು ತೂಗಾಡಿಸುತ್ತಾ ಕೌರವರ ಸೇನೆಯ ಮುಂಭಾಗವನ್ನು ಕಲಕಾಡಿದನು.

ತಂ ಪ್ರಯಾಂತಂ ಮಹಾಬಾಹುಂ ಪಾಂಚಾಲಾಃ ಸಹಸೋಮಕಾಃ ।
ಪೃಷ್ಠತೋಽನುಯಯುಃ ಶೂರಾ ಮಘವಂತಮಿವಾಮರಾಃ ॥ ೬೭ ॥

ಹಾಗೆ ಹೊರಟ ಮಹಾಬಾಹುವಾದ ಅವನನ್ನು ದೇವತೆಗಳು ಇಂದ್ರನನ್ನು ಅನುಸರಿಸಿದಂತೆ ಶೂರರಾದ ಪಾಂಚಾಲರು ಮತ್ತು ಸೋಮಕರು ಹಿಂಬಾಲಿಸಿದರು.

ತಂ ಸಸೇನಾ ಮಹಾರಾಜ ಸೋದರ್ಯಾಃ ಪರ್ಯವಾರಯನ್ ।
ದುಃಶಲಶ್ಚಿತ್ರಸೇನಶ್ಚ ಕುಂಡಭೇದೀ ವಿವಿಂಶತಿಃ ॥ ೬೮ ॥

ದುರ್ಮುಖೋ ದುಃಸಹಶ್ಚೈವ ವಿಕರ್ಣಶ್ಚ ಶಲಸ್ತಥಾ ।
ವಿಂದಾನುವಿಂದೌ ಸುಮುಖೋ ದೀರ್ಘಬಾಹುಃ ಸುದರ್ಶನಃ ॥ ೬೯ ॥

ವೃಂದಾರಕಃ ಸುಹಸ್ತಶ್ಚ ಸುಷೇಣೋ ದೀರ್ಘಲೋಚನಃ ।
ಅಭಯೋ ರೌದ್ರಕರ್ಮಾ ಚ ಸುವರ್ಮಾ ದುರ್ವಿಮೋಚನಃ ॥ ೭೦ ॥

ಎಲೈ ಮಹಾರಾಜನೇ, ಅವನನ್ನು ನಿನ್ನ ಪುತ್ರರಾದ ಸಹೋದರರಾದ ದುಶ್ಶಲ, ಚಿತ್ರಸೇನ, ಕುಂಡಭೇದಿ, ವಿವಿಂಶತಿ, ದುರ್ಮುಖಿ, ದುಸ್ಸಹ, ವಿಕರ್ಣ, ಶಲ, ವಿಂದಾನುವಿಂದರು, ಸುಮುಖ, ದೀರ್ಘಬಾಹು, ವೃಂದಾರಕ, ಸುಹಸ್ತ, ಸುಷೇಣ, ದೀರ್ಘಲೋಚನ, ಅಭಯ, ರೌದ್ರಕರ್ಮ, ಸುವರ್ಮ, ದುರ್ವಿಮೋಚನ- ಇವರು ಸುತ್ತುವರಿದರು.

ವಿವಿಧೈ ರಥಿನಾಂ ಶ್ರೇಷ್ಠಾಃ ಸಹ ಸೈನ್ಯೈಃ ಸಹಾನುಗೈಃ ।
ಸಂಯತ್ತಾಃ ಸಮರೇ ಶೂರಾ ಭೀಮಸೇನಮುಪಾದ್ರವನ್ ॥ ೭೧ ॥

ಶೂರರೂ, ರಥಶ್ರೇಷ್ಠರೂ ಆದ ಅವರು ತಮ್ಮ ಸೈನ್ಯ ಮತ್ತು ಪರಿವಾರದಿಂದ ಸಹಿತರಾಗಿ ಪ್ರಯತ್ನಪೂರ್ವಕವಾಗಿ ಭೀಮಸೇನನ ಕಡೆಗೆ ಧಾವಿಸಿದರು (ಅವನನ್ನು ಸುತ್ತುವರಿದರು).

ತಾನ್ ಸಮೀಕ್ಷ್ಯ ತು ಕೌಂತೇಯೋ ಭೀಮಸೇನಃ ಪರಾಕ್ರಮೀ ।
ಅಭ್ಯವರ್ತತ ವೇಗೇನ ಸಿಂಹಃ ಕ್ಷುದ್ರಮೃಗಾನಿವ ॥ ೭೨ ॥

ಪರಾಕ್ರಮಶಾಲಿಯಾದ ಕುಂತೀಪುತ್ರನಾದ ಭೀಮಸೇನನು ಅವರನ್ನು ನೋಡಿ ಸಿಂಹವು ಕ್ಷುದ್ರಮೃಗಗಳ ಕಡೆಗೆ ಧಾವಿಸಿದಂತೆ ವೇಗದಿಂದ ಅವರ ಕಡೆಗೆ ಧಾವಿಸಿದನು.

ತೇ ಮಹಾಸ್ತ್ರಾಣಿ ದಿವ್ಯಾನಿ ತತ್ರ ವೀರಾ ಅದರ್ಶಯನ್ ।
ವಾರಯಂತಃ ಶರೈರ್ಭೀಮಂ ಮೇಘಾಃ ಸೂರ್ಯಮಿವೋದಿತಮ್ ॥

ವೀರರಾದ ಅವರು ದಿವ್ಯಾಸ್ತ್ರಗಳನ್ನು ಪ್ರದರ್ಶಿಸುತ್ತಾ ಮೇಘಗಳು ಉದಯಿಸಿದ ಸೂರ್ಯನನ್ನು ತಡೆಯುವಂತೆ ಬಾಣಗಳಿಂದ ಭೀಮನನ್ನು ನಿವಾರಿಸಿದರು.

ಸ ತಾನತೀತ್ಯ ವೇಗೇನ ದ್ರೋಣಾನೀಕಮುಪಾದ್ರವತ್ ।
ಅಗ್ರತಶ್ಚ ಗಜಾನೀಕಂ ಶರವರ್ಷೈರವಾಕಿರತ್ ॥ ೭೪ ॥

ಭೀಮಸೇನನು ವೇಗದಿಂದ ಅವರನ್ನು ದಾಟಿ ದ್ರೋಣಸೇನೆಯ ಕಡೆಗೆ ಬಂದು ಮುಂಭಾಗದಲ್ಲಿದ್ದ ಗಜಸೇನೆಯನ್ನು ಬಾಣಗಳ ಮಳೆಯಿಂದ ಹೊಡೆದನು.

ಸೋಽಚಿರೇಣೈವ ಕಾಲೇನ ತದ್ಗಜಾನೀಕಮಾಶುಗೈಃ ।
ದಿಶಃ ಸರ್ವಾಃ ಸಮಭ್ಯಸ್ಯ ವ್ಯಧಮತ್ ಪವನಾತ್ಮಜಃ ॥ ೭೫ ॥

ಪವನಾತ್ಮಜನಾದ ಅವನು ಅಲ್ಪಕಾಲದಲ್ಲಿಯೇ ಶೀಘ್ರಗಾಮಿಗಳಾದ ಬಾಣಗಳಿಂದ ಹೊಡೆದು ಆ ಗಜಸೇನೆಯನ್ನು ಎಲ್ಲ ದಿಕ್ಕುಗಳಲ್ಲಿ ಚದುರಿಹೋಗುವಂತೆ ಮಾಡಿದನು.

ತ್ರಾಸಿತಾಃ ಶರಭಸ್ಯೇವ ಗರ್ಜಿತೇನ ವನೇ ಮೃಗಾಃ ।
ಪ್ರಾದ್ರವನ್ ದ್ವಿರದಾಃ ಸರ್ವೇ ನದಂತೋ ಭೈರವಾನ್ ರವಾನ್ ॥ ೭೬॥

ಶರಭದ ಗರ್ಜನೆಯಿಂದ ಓಡುವ ಕಾಡುಮೃಗಗಳಂತೆ ಭೀಮಸೇನನಿಂದ ಹೆದರಿಸಲ್ಪಟ್ಟ ಗಜಗಳೆಲ್ಲವೂ ಭೈರವ ನಾದಗಳನ್ನು ಮಾಡುತ್ತಾ ಓಡಿಹೋದವು.

ಪುನಶ್ಚಾತೀತ್ಯ ವೇಗೇನ ದ್ರೋಣಾನೀಕಮುಪಾದ್ರವತ್ ।
ತಮವಾರಯದಾಚಾರ್ಯೋ ವೇಲೇವೋದ್ಧತಮರ್ಣವಮ್ ॥ ೭೭ ॥

ಪುನಃ ವೇಗದಿಂದ ಸಾಗುತ್ತಾ ಗಜಸೇನೆಯನ್ನು ದಾಟಿ ಭೀಮಸೇನನು ದ್ರೋಣರ ಸೇನೆಯನ್ನು ತಲುಪಿದನು. ದ್ರೋಣಾಚಾರ್ಯರು ತೀರವು ಕ್ಷುಬ್ಧ ಸಮುದ್ರವನ್ನು ತಡೆಯುವಂತೆ ಅವನನ್ನು ತಡೆದರು.

ಲಲಾಟೇಽತಾಡಯಚ್ಚೈನಂ ನಾರಾಚೇನ ಸ್ಮಯನ್ನಿವ ।
ಊರ್ಧ್ವರಶ್ಮಿರಿವಾದಿತ್ಯೋ ವಿಬಭೌ ತತ್ರ ಪಾಂಡವಃ ॥ ೭೮ ॥

ಅವರು ನಗುತ್ತಾ ನಾರಾಚದಿಂದ ಅವನಿಗೆ ಹಣೆಯಲ್ಲಿ ಹೊಡೆದರು. ಭೀಮಸೇನನು ಹಣೆಯಲ್ಲಿ ನಾಟಿದ ಆ ಬಾಣದಿಂದ ಊರ್ಧ್ವಕಿರಣವುಳ್ಳ ಸೂರ್ಯನಂತೆ ಶೋಭಿಸಿದನು.

ಸ ಮನ್ಯಮಾನಸ್ತಾ ಚಾರ್ಯೋ ಮಮಾಯಂ ಫಲ್ಗುನೋ ಯಥಾ ।
ಭೀಮಃ ಕರಿಷ್ಯತೇ ಪೂಜಾಮಿತ್ಯುವಾಚ ವೃಕೋದರಮ್ ॥ ೭೯ ॥

ದ್ರೋಣಾಚಾರ್ಯರು ಅರ್ಜುನನಂತೆ ಭೀಮನು ನನಗೆ ಗೌರವವನ್ನು ಸಲ್ಲಿಸುವನು ಎಂದು ತಿಳಿದು ಅವನನ್ನು ಕುರಿತು ಮಾತನಾಡಿದರು.

ಭೀಮಸೇನ ನ ತೇ ಶಕ್ಯಂ ಪ್ರವೇಷ್ಟುಮರಿವಾಹಿನೀಮ್ ।
ಮಾಮನಿರ್ಜಿತ್ಯ ಸಮರೇ ಶತ್ರುಮಧ್ಯೇ ಮಹಾಬಲ ॥ ೮೦ ॥

ಎಲೈ ಭೀಮಸೇನನೇ, ಮಹಾಬಲನೇ, ಶತ್ರುಗಳ ಮಧ್ಯದಲ್ಲಿ ರಣರಂಗದಲ್ಲಿ ನನ್ನನ್ನು ಸೋಲಿಸದೆ ನೀನು ಶತ್ರುಸೈನ್ಯವನ್ನು ಪ್ರವೇಶಿಸಲು ಸಾಧ್ಯವಿಲ್ಲ.

ಯದಿ ತೇ ಸೋಽನುಜಃ ಕೃಷ್ಣಃ ಪ್ರವಿಷ್ಟೋಽನುಮತೇ ಮಮ ।
ಅನೀಕಂ ನ ತು ಶಕ್ಯಂ ಭೋಃ ಪ್ರವೇಷ್ಟುಮಿಹ ವೈ ತ್ವಯಾ ॥ ೮೧ ॥

ನಿನ್ನ ತಮ್ಮನಾದ ಅರ್ಜುನ ಮತ್ತು ಕೃಷ್ಣರು ನನ್ನ ಅನುಮತಿಯಿಂದ ನನ್ನ ಸೈನ್ಯವನ್ನು ಪ್ರವೇಶಿಸಿದ್ದಾರೆ. ಆದರೆ ನೀನು ನಮ್ಮ ಸೈನ್ಯವನ್ನು ಪ್ರವೇಶಿಸಲು ಸಾಧ್ಯವಿಲ್ಲ (ಎಂದು ಹೇಳಿದರು).

ಅಥ ಭೀಮಸ್ತು ತಚ್ಛ್ರುತ್ವಾ ಗುರೋರ್ವಾಕ್ಯಮಪೇತಭೀಃ ।
ಕ್ರುದ್ಧಃ ಪ್ರೋವಾಚ ವೈ ದ್ರೋಣಂ ರಕ್ತತಾಮ್ರೇಕ್ಷಣಃ ಶ್ವಸನ್ ॥ ೮೨ ॥

ತವಾರ್ಜುನೋ ನಾನುಮತೇ ಬ್ರಹ್ಮಬಂಧೋ ರಣಾಜಿರಮ್ ।
ಪ್ರವಿಷ್ಟಃ ಸ ಹಿ ದುರ್ಧರ್ಷಃ ಶಕ್ರಸ್ಯಾಪಿ ವಿಶೇದ್ ಬಲಮ್ ॥ ೮೩ ॥

ಯೇನ ವೈ ಪರಮಾಂ ಪೂಜಾಂ ಕುರ್ವತಾ ಮಾನಿತೋ ಹ್ಯಸಿ ।
ನಾರ್ಜುನೋಽಹಂ ಘೃಣೀ ದ್ರೋಣ ಭೀಮಸೇನೋಽಸ್ಮಿ ತೇ ರಿಪುಃ ॥

ಆಗ ಭೀಮನು ಗುರುಗಳ ಆ ಮಾತನ್ನು ಕೇಳಿ ಯಾವ ಭಯವೂ ಇಲ್ಲದೆ ಕ್ರುದ್ಧನಾಗಿ, ಕೆಂಪಾದ ಕಣ್ಣುಗಳನ್ನು ಹೊಂದಿ ಶ್ವಾಸವನ್ನು ಬಿಡುತ್ತಾ ದ್ರೋಣರನ್ನು ಕುರಿತು- ಎಲೈ ಬ್ರಹ್ಮಬಂಧುವೇ, ನಿಮ್ಮ ಅನುಮತಿಯಿಂದ ಅರ್ಜುನನು ರಣರಂಗವನ್ನು ಪ್ರವೇಶಿಸಿಲ್ಲ. ದುರ್ಧರ್ಷನಾದ ಅವನು ಇಂದ್ರನ ಸೈನ್ಯವನ್ನೂ ಪ್ರವೇಶಿಸಿಯಾನು. ಅವನು ನಿಮಗೆ ಶ್ರೇಷ್ಠವಾದ ಪೂಜೆಯನ್ನು ಸಲ್ಲಿಸಿ ನಿಮಗೆ ಗೌರವಿಸಿದ್ದಾನೆ. ದ್ರೋಣರೇ ನಾನು ಅರ್ಜುನನಂತೆ ದಯಾಪರನಲ್ಲ. ನಾನು ನಿಮ್ಮ ಶತ್ರುವಾದ ಭೀಮಸೇನ.

ಪಿತಾ ನಸ್ತ್ವಂ ಗುರುರ್ಬಂಧುಸ್ತಥಾ ಪುತ್ರಾ ಹಿ ತೇ ವಯಮ್ ।
ಇತಿ ಮನ್ಯಾಮಹೇ ಸರ್ವೇ ಭವಂತಂ ಪ್ರಣತಾಃ ಸ್ಥಿತಾಃ ॥ ೮೫ ॥

ಅದ್ಯ ತದ್ವಿಪರೀತಂ ತೇ ವದತೋಽಸ್ಮಾನು ದೃಶ್ಯತೇ ।
ಯದಿ ಶತ್ರುಂ ತ್ವಮಾತ್ಮಾನಂ ಮನ್ಯಸೇ ತತ್ ತಥಾಸ್ತ್ವಿಹ ।
ಏಷ ತೇ ಸದೃಶಂ ಶತ್ರೋಃ ಕರ್ಮ ಭೀಮಃ ಕರೋಮ್ಯಹಮ್ ॥ ೮೬ ॥

ನೀವು ನಮಗೆ ತಂದೆ, ಗುರು ಮತ್ತು ಬಂಧುಗಳು. ಹಾಗೆ ನಾವೂ ಸಹ ನಿಮ್ಮ ಪುತ್ರರು ಎಂದು ನಾವೆಲ್ಲರೂ ತಿಳಿದು ನಿಮಗೆ ನಮಸ್ಕರಿಸಿಕೊಂಡಿದ್ದೇವೆ. ಈ ದಿನ ನೀವು ನಮ್ಮನ್ನು ಕುರಿತು ಅದಕ್ಕೆ ವಿರುದ್ಧವಾಗಿ ಮಾತನಾಡುತ್ತಿದ್ದೀರಿ. ನೀವು ನಮ್ಮನ್ನು ನಿಮ್ಮ ಶತ್ರುಗಳೆಂದು ತಿಳಿಯುವುದಾದರೆ ಅದು ಹಾಗೆಯೇ ಆಗಲಿ. ಭೀಮನಾದ ನಿಮ್ಮ ಶತ್ರುವಾದ ಈ ನಾನು ಶತ್ರುವಿಗೆ ಸದೃಶವಾದ ಕಾರ್ಯವನ್ನು ಮಾಡುತ್ತೇನೆ (ಎಂದು ಹೇಳಿದನು).

ಅಥೋದ್ಯಮ್ಯ ಗದಾಂ ಭೀಮಃ ಕಾಲದಂಡಮಿವಾಂತಕಃ ।
ದ್ರೋಣಾಯಾವಾಸೃಜದ್ ರಾಜನ್ ಸ ರಥಾದವಪುಪ್ಲುವೇ ॥ ೮೭ ॥

ಎಲೈ ರಾಜನೇ, ಆಗ ಭೀಮನು ತನ್ನ ಗದೆಯನ್ನು ಯಮನು ಕಾಲದಂಡವನ್ನು ತಿರುಗಿಸಿದಂತೆ ತಿರುಗಿಸಿ ದ್ರೋಣರ ಮೇಲೆ ಎಸೆದನು. ದ್ರೋಣರು ತಮ್ಮ ರಥದಿಂದ ಕೆಳಗೆ ಹಾರಿದರು.

ಸಾಶ್ವಸೂತಧ್ವಜಂ ಯಾನಂ ದ್ರೋಣಸ್ಯಾಪೋಥಯತ್ ತದಾ ।
ಪ್ರಾಮೃದ್ನಾಚ್ಚ ಬಹೂನ್ಯೋಧಾನ್ವಾಯುರ್ವೃಕ್ಷಾನಿವೌಜಸಾ ॥ ೮೮ ॥

ಆ ಗದೆಯು ಅಶ್ವ-ಸೂತ-ಧ್ವಜಗಳಿಂದ ಸಹಿತವಾದ ದ್ರೋಣರ ರಥವನ್ನು ಪುಡಿಮಾಡಿ, ವಾಯುವು ತನ್ನ ಬಲದಿಂದ ವೃಕ್ಷಗಳನ್ನು ಬೀಳಿಸುವಂತೆ ಅನೇಕ ಯೋಧರನ್ನೂ ಮರ್ದಿಸಿತು.

ತಂ ಪುನಃ ಪರಿವವ್ರುಸ್ತೇ ತವ ಪುತ್ರಾ ರಥೋತ್ತಮಮ್ ।
ಅನ್ಯಂ ಚ ರಥಮಾಸ್ಥಾಯ ದ್ರೋಣಃ ಪ್ರಹರತಾಂ ವರಃ ॥ ೮೯ ॥

ಆಗ ನಿನ್ನ ಪುತ್ರರು ರಥಶ್ರೇಷ್ಠರಾದ ಅವರನ್ನು ಸುತ್ತುವರಿದರು. ಪ್ರಹಾರ ಮಾಡುವವರಲ್ಲಿ ಶ್ರೇಷ್ಠರಾದ ದ್ರೋಣರು ಇನ್ನೊಂದು ರಥವನ್ನು ಏರಿದರು.

ತತಃ ಕ್ರುದ್ಧೋ ಮಹಾರಾಜ ಭೀಮಸೇನಃ ಪರಾಕ್ರಮೀ ।
ಅಗ್ರತಃ ಸ್ಯಂದನಾನೀಕಂ ಶರವರ್ಷೈರವಾಕಿರತ್ ॥ ೯೦ ॥

ಎಲೈ ಮಹಾರಾಜನೇ, ಆಗ ಕೋಪಗೊಂಡ ಪರಾಕ್ರಮಶಾಲಿಯಾದ ಭೀಮಸೇನನು ತನ್ನ ಮುಂದಿರುವ ರಥಸೇನೆಯ ಮೇಲೆ ಬಾಣಗಳ ಮಳೆಯನ್ನು ಕರೆದನು.

ತೇ ವಧ್ಯಮಾನಾಃ ಸಮರೇ ತವ ಪುತ್ರಾ ಮಹಾರಥಾಃ ।
ಭೀಮಂ ಭೀಮಬಲಂ ಯುದ್ಧೇಽಯೋಧಯಂಸ್ತು ಜಯೈಷಿಣಃ ॥೯೧॥

ನಿನ್ನ ಪುತ್ರರಾದ ಆ ಮಹಾರಥರು ಯುದ್ಧದಲ್ಲಿ ಭೀಮನಿಂದ ಪೀಡಿಸಲ್ಪಟ್ಟರೂ ಜಯವನ್ನು ಬಯಸಿ ಭೀಮಬಲವುಳ್ಳ ಭೀಮನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತತೋ ದುಃಶಾಸನಃ ಕ್ರುದ್ಧೋ ರಥಶಕ್ತಿಂ ಸಮಾಕ್ಷಿಪತ್ ।
ಸರ್ವಹಾರಶಮೀಂ ತೀಕ್ಷ್ಣಾಂ ಜಿಘಾಂಸುಃ ಪಾಂಡುನಂದನಮ್ ॥ ೯೨ ॥

ಆಗ ದುಶ್ಶಾಸನನು ಕೋಪಗೊಂಡು ಪಾಂಡುನಂದನನಾದ ಭೀಮಸೇನನನ್ನು ಕೊಲ್ಲಲು ಬಯಸಿ ಕಬ್ಬಿಣದ ತೀಕ್ಷ್ಣವಾದ ರಥಶಕ್ತಿಯನ್ನು ಅವನ ಮೇಲೆ ಎಸೆದನು.

ಆಪತಂತೀಂ ಮಹಾಶಕ್ತಿಂ ತವ ಪುತ್ರಪ್ರಚೋದಿತಾಮ್ ।
ದ್ವಿಧಾ ಚಿಚ್ಛೇದ ತಾಂ ಭೀಮಸ್ತದದ್ಭುತಮಿವಾಭವತ್ ॥ ೯೩ ॥

ನಿನ್ನ ಪುತ್ರನು ಎಸೆದ, ತನ್ನ ಕಡೆಗೆ ಬರುತ್ತಿದ್ದ ಆ ಮಹಾಶಕ್ತಿಯನ್ನು ಭೀಮಸೇನನು ಎರಡು ಭಾಗವಾಗಿ ಕತ್ತರಿಸಿದನು. ಅದು ಅದ್ಭುತವಾಗಿದ್ದಿತು.

ಅಥಾನ್ಯೈರ್ನಿಶಿತೈರ್ಬಾಣೈಃ ಸಂಕ್ರುದ್ಧಃ ಕುಂಡಭೇದಿನಮ್ ।
ಸುಷೇಣಂ ದೀರ್ಘನೇತ್ರಂ ಚ ತ್ರಿಭಿಸ್ತ್ರೀನವಧೀದ್ ಬಲೀ ॥ ೯೪ ॥

ಆನಂತರ ಬಲಿಷ್ಠನಾದ ಭೀಮಸೇನನು ಕೋಪಗೊಂಡು ನಿಶಿತವಾದ ಮೂರು ಬಾಣಗಳಿಂದ ನಿನ್ನ ಪುತ್ರರಾದ ಕುಂಡಭೇದಿ, ಸುಷೇಣ ಮತ್ತು ದೀರ್ಘನೇತ್ರರನ್ನು ಕೊಂದನು.

ತತೋ ವೃಂದಾರಕಂ ವೀರಂ ಕುರೂಣಾಂ ಕೀರ್ತಿವರ್ಧನಮ್ ।
ಪುತ್ರಾಣಾಂ ತವ ವೀರಾಣಾಂ ಯುದ್ಧ್ಯತಾಮವಧೀತ್ ಪುನಃ ॥ ೯೫ ॥

ಆನಂತರ ನಿನ್ನ ಪುತ್ರರು ಯುದ್ಧಮಾಡುತ್ತಿರುವಂತೆಯೇ ಕುರುಗಳ ಕೀರ್ತಿವರ್ಧನನಾದ ವೀರನಾದ ವೃಂದಾರಕನನ್ನೂ ಕೊಂದನು.

ಅಭಯಂ ರೌದ್ರಕರ್ಮಾಣಂ ದುರ್ವಿಮೋಚನಮೇವ ಚ ।
ತ್ರಿಭಿಸ್ತ್ರೀನವಧೀದ್ ಭೀಮಃ ಪುನರೇವ ಸುತಾಂಸ್ತವ ॥ ೯೬ ॥

ಭೀಮಸೇನನು ಪುನಃ ಮೂರು ಬಾಣಗಳಿಂದ ನಿನ್ನ ಪುತ್ರನಾದ ಅಭಯ, ರೌದ್ರಕರ್ಮ ಮತ್ತು ದುರ್ವಿಮೋಚನನನ್ನು ಕೊಂದನು.

ವಧ್ಯಮಾನಾ ಮಹಾರಾಜ ಪುತ್ರಾಸ್ತವ ಬಲೀಯಸಾ ।
ಭೀಮಂ ಪ್ರಹರತಾಂ ಶ್ರೇಷ್ಠಂ ಸಮಂತಾತ್ ಪರ್ಯವಾರಯನ್ ॥೯೭॥

ಎಲೈ ಮಹಾರಾಜನೇ, ಬಲಿಷ್ಠ ಭೀಮಸೇನನಿಂದ ಹೊಡೆಯಲ್ಪಡುತ್ತಿದ್ದ ನಿನ್ನ ಉಳಿದ ಪುತ್ರರು ಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಭೀಮಸೇನನನ್ನು ಸುತ್ತುವರಿದರು.

ವಿಂದಾನುವಿಂದೌ ಸಹಿತೌ ಸುವರ್ಮಾಣಂ ಚ ತೇ ಸುತಮ್ ।
ಪ್ರಹಸನ್ನಿವ ಕೌಂತೇಯಃ ಶರೈರ್ನಿನ್ಯೇ ಯಮಕ್ಷಯಮ್ ॥ ೯೮ ॥

ಕುಂತೀಪುತ್ರನಾದ ಭೀಮಸೇನನು ವಿಂದಾನುವಿಂದರನ್ನೂ ಮತ್ತು ನಿನ್ನ ಪುತ್ರನಾದ ಸುವರ್ಣನನ್ನೂ ನಗುತ್ತಲೇ ಬಾಣಗಳಿಂದ ಯಮಲೋಕಕ್ಕೆ ಕಳುಹಿಸಿದನು.

ತತಃ ಸುದರ್ಶನಂ ವೀರಂ ಪುತ್ರಂ ತೇ ಭರತರ್ಷಭ ।
ವಿವ್ಯಾಧ ಸಮರೇ ತೂರ್ಣಂ ಸ ಪಪಾತ ಮಮಾರ ಚ ॥ ೯೯ ॥

ಎಲೈ ಭರತರ್ಷಭನೇ, ಆನಂತರ ನಿನ್ನ ಪುತ್ರನಾದ ವೀರನಾದ ಸುದರ್ಶನನನ್ನು ಯುದ್ಧದಲ್ಲಿ ಹೊಡೆದನು. ಅವನು ಶೀಘ್ರವಾಗಿ ಬಿದ್ದು ಪ್ರಾಣವನ್ನು ಬಿಟ್ಟನು.

ಸೋಽಚಿರೇಣೈವ ಕಾಲೇನ ತದ್ರಥಾನೀಕಮಾಶುಗೈಃ ।
ದಿಶಃ ಸರ್ವಾಃ ಸಮಭ್ಯಸ್ಯ ವ್ಯಧಮತ್ ಪಾಂಡುನಂದನಃ ॥ ೧೦೦ ॥

ಪಾಂಡುನಂದನನಾದ ಆ ಭೀಮಸೇನನು ಸ್ವಲ್ಪ ಕಾಲದಲ್ಲಿಯೇ ಶೀಘ್ರಗಾಮಿಗಳಾದ ಬಾಣಗಳನ್ನು ಎಲ್ಲ ದಿಕ್ಕುಗಳಲ್ಲಿ ಪ್ರಯೋಗಿಸಿ ಆ ರಥಸಮೂಹವನ್ನು ನಾಶ ಮಾಡಿದನು.

ತತೋ ವೈ ರಥಘೋಷೇಣ ಗರ್ಜತೇನ ಮೃಗಾ ಇವ ।
ವಧ್ಯಮಾನಾಶ್ಚ ಸಮರೇ ಪುತ್ರಾಸ್ತವ ವಿಶಾಂಪತೇ ।
ಪ್ರಾದ್ರವನ್ ಸರಥಾಃ ಸರ್ವೇ ಭೀಮಸೇನಭಯಾರ್ದಿತಾಃ ॥ ೧೦೧ ॥

ಸಿಂಹಗರ್ಜನೆಯಿಂದ ಓಡುವ ಮೃಗಗಳಂತೆ ಭೀಮಸೇನನ ರಥಘೋಷದಿಂದ ಹೆದರಿದ, ಯುದ್ಧದಲ್ಲಿ ಅವನಿಂದ ಹೊಡೆಯಲ್ಪಡುವ ನಿನ್ನ ಪುತ್ರರೆಲ್ಲರೂ ಎಲೈ ರಾಜನೇ, ಭೀಮಸೇನನ ಭಯದಿಂದ ಭೀತರಾಗಿ ಎಲ್ಲ ಕಡೆಯಲ್ಲಿಯೂ ಓಡಿಹೋದರು.

ಅನುಯಾಯ ತು ಕೌಂತೇಯಃ ಪುತ್ರಾಣಾಂ ತೇ ಮಹದ್ಬಲಮ್ ।
ವಿವ್ಯಾಧ ಸಮರೇ ರಾಜನ್ ಕೌರವೇಯಾನ್ ಸಮಂತತಃ ॥ ೧೦೨ ॥

ಎಲೈ ರಾಜನೇ, ಕುಂತೀಪುತ್ರನಾದ ಭೀಮಸೇನನು ನಿನ್ನ ಪುತ್ರರ ದೊಡ್ಡ ಸೈನ್ಯವನ್ನು ಹಿಂಬಾಲಿಸಿ ಹೋಗಿ, ಆ ಸೇನೆಯ ಯೋಧರನ್ನು ಯುದ್ಧದಲ್ಲಿ ಎಲ್ಲ ಕಡೆಗಳಲ್ಲಿಯೂ ಹೊಡೆದನು.

ವಧ್ಯಮಾನಾ ಮಹಾರಾಜ ಭೀಮಸೇನೇನ ತಾವಕಾಃ ।
ತ್ಯಕ್ತ್ವಾ ಭೀಮಂ ರಣೇ ಯಾಂತಿ ಚೋದಯಂತೋ ಹಯೋತ್ತಮಾನ್ ॥

ಎಲೈ ಮಹಾರಾಜನೇ, ಭೀಮಸೇನನಿಂದ ಹೊಡೆಯಲ್ಪಡುವ ನಿನ್ನ ಸೈನಿಕರು ರಣರಂಗದಲ್ಲಿ ಭೀಮನನ್ನು ಬಿಟ್ಟು ತಮ್ಮ ಶ್ರೇಷ್ಠವಾದ ಅಶ್ವಗಳನ್ನು ಪ್ರಚೋದಿಸುತ್ತಾ ಹೊರಟರು.

ತಾಂಸ್ತು ನಿರ್ಜಿತ್ಯ ಸಮರೇ ಭೀಮಸೇನೋ ಮಹಾಬಲಃ ।
ಸಿಂಹನಾದರವಂ ಚಕ್ರೇ ಬಾಹುಶಬ್ದಂ ಚ ಪಾಂಡವಃ ॥ ೧೦೪ ॥

ಮಹಾಬಲನಾದ ಭೀಮಸೇನನು ಯುದ್ಧದಲ್ಲಿ ಅವರನ್ನು ಗೆದ್ದು ಸಿಂಹನಾದವನ್ನೂ ಮತ್ತು ಬಾಹುಶಬ್ದವನ್ನೂ ಮಾಡಿದನು.

ತಳಶಬ್ದಂ ಚ ಸುಮಹತ್ಕೃತ್ವಾ ಭೀಮೋ ಮಹಾಬಲಃ ।
ವ್ಯತೀತ್ಯ ರಥಿನಶ್ಚಾಪಿ ದ್ರೋಣಾನೀಕಮುಪಾದ್ರವತ್ ॥ ೧೦೫ ॥

ಮಹಾಬಲನಾದ ಭೀಮನು ದೊಡ್ಡ ಹಸ್ತತಳ ಶಬ್ದವನ್ನು ಮಾಡಿ ಅವನು ರಥಿಕರನ್ನು ದಾಟಿ ದ್ರೋಣರ ಸೇನೆಯ ಸಮೀಪಕ್ಕೆ ಬಂದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಾದಶಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಷಟ್‌ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹನ್ನೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿಮೂರನೆಯ ಅಧ್ಯಾಯ

ಅರ್ಜುನನನ್ನು ನೋಡಿ ಭೀಮನ ಸಿಂಹನಾದ.
ಅದನ್ನು ಕೇಳಿದ ಯುಧಿಷ್ಠಿರನ ಹರ್ಷ.

ಸಂಜಯಃ

ತಮುತ್ತೀರ್ಣಂ ರಥಾನೀಕಾತ್ತಮಸೋ ಭಾಸ್ಕರೋ ಯಥಾ ।
ದಿಧಾರಯಿಷುರಾಚಾರ್ಯಃ ಶರವರ್ಷೈರವಾಕಿರತ್ ॥ ೧ ॥

ಸಂಜಯ– ಕತ್ತಲೆಯಿಂದ ಸೂರ್ಯನು ಹೊರಗೆ ಬಂದಂತೆ ರಥಸಮೂಹವನ್ನು ದಾಟಿ ಬಂದ ಭೀಮನನ್ನು ತಡೆಯಲು ದ್ರೋಣಾಚಾರ್ಯರು ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ಪಿಬನ್ನಿವ ಶರೌಘಾಂಸ್ತಾನ್ ದ್ರೋಣಚಾಪವರಾತಿಗಾನ್ ।
ಸೋಭ್ಯವರ್ತತ ಸೋದರ್ಯಾನ್ ಮಾಯಯಾ ಮೋಹಯನ್ ಬಲಮ್ ॥

ದ್ರೋಣರ ಧನುಸ್ಸಿನಿಂದ ಹೊರಹೊಮ್ಮಿದ ಆ ಬಾಣಗಳ ಸಮೂಹವನ್ನು ನಿವಾರಿಸಿ, ತನ್ನ ಸಾಮರ್ಥ್ಯದಿಂದ ಕೌರವಸೇನೆಯನ್ನು ಮರುಳುಗೊಳಿಸುತ್ತಾ, ಅವನು ತನ್ನ ಸಹೋದರರ ಕಡೆಗೆ ಧಾವಿಸಿದನು.

ತಂ ಮೃಧೇ ವೇಗಮಾಸ್ಥಾಯ ಪರಂ ಪರಮಧನ್ವಿನಃ ।
ಚೋದಿತಾಸ್ತವ ಪುತ್ರೈಶ್ಚ ಸರ್ವತಃ ಪರ್ಯವಾರಯನ್ ॥ ೩ ॥

ನಿನ್ನ ಪುತ್ರನಿಂದ ಪ್ರೇರಿಸಲ್ಪಟ್ಟ ಪರಮಧನುರ್ಧಾರಿಗಳು ಶೀಘ್ರವಾಗಿ ಅವನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ಸ ತಥಾ ಸಂವೃತೋ ಭೀಮಃ ಪ್ರಹಸನ್ನಿವ ಭಾರತ ।
ಉದಯಚ್ಛದ್ ಗದಾಂ ತೇಭ್ಯೋ ಘೋರಾಂ ತಾಂ ಸಿಂಹವನ್ನದನ್ ।
ಅವಾಸೃಜಚ್ಚ ವೇಗೇನ ತೇಷು ತಾಂ ಪ್ರಮಥನ್ ಬಲೀ ॥ ೪ ॥

ಎಲೈ ಭಾರತನೇ, ಆ ರೀತಿಯಲ್ಲಿ ಸುತ್ತುವರಿಯಲ್ಪಟ್ಟ ಭೀಮನು ನಗುತ್ತಾ ಸಿಂಹನಾದವನ್ನು ಮಾಡಿ, ತನ್ನ ಘೋರವಾದ ಗದೆಯನ್ನು ಎತ್ತಿ ಬಲಿಷ್ಠನಾದ ಅವನು ವೇಗದಿಂದ ಆ ಗದೆಯನ್ನು ಅವರ ಮೇಲೆ ಎಸೆದು ಅವರನ್ನು ಮರ್ದಿಸಿದನು.

ಸೇಂದ್ರಾಶನಿರಿವೇಂದ್ರೇಣ ಪ್ರವಿದ್ಧಾ ಸಂಹತಾತ್ಮನಾ ।
ಘೋಷೇಣ ಮಹತಾ ರಾಜನ್ ಪೂರಯಿತ್ವೇವ ಮೇದಿನೀಮ್ ।
ಜ್ವಲಂತೀ ತೇಜಸಾ ಭೀಮಾ ತ್ರಾಸಯಾಮಾಸ ತೇ ಸುತಾನ್ ॥ ೫ ॥

ಇಂದ್ರನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧದಂತೆ ದೃಢ ಶರೀರವುಳ್ಳ ಭೀಮನಿಂದ ಎಸೆಯಲ್ಪಟ್ಟ ಆ ಗದೆಯು ಮಹಾಘೋಷದಿಂದ ಭೂಮಿಯನ್ನು ತುಂಬಿ ಜ್ವಲಿಸುತ್ತಾ ನಿನ್ನ ಪುತ್ರರನ್ನು ಭಯಗೊಳಿಸಿತು.

ತಾಂ ಪತಂತೀಂ ಮಹಾವೇಗಾಂ ದೃಷ್ಟ್ವಾ ತೇಜೋಭಿಸಂವೃತಾಮ್ ।
ಪ್ರಾದ್ರವಂಸ್ತಾವಕಾಃ ಸರ್ವೇ ನದಂತೋ ಭೈರವಾನ್ ರವಾನ್ ॥ ೬ ॥

ತೇಜಸ್ಸಿನಿಂದ ಕೂಡಿ ತಮ್ಮ ಕಡೆಗೆ ಶೀಘ್ರವಾಗಿ ಬರುತ್ತಿದ್ದ ಆ ಗದೆಯನ್ನು ನೋಡಿ ನಿನ್ನವರೆಲ್ಲರೂ ಭೈರವನಾದವನ್ನು ಮಾಡುತ್ತಾ ಓಡಿಹೋದರು.

ತಂ ಚ ಶಬ್ದಮಸಂಸಹ್ಯಂ ತಸ್ಯಾಃ ಸಂಲಕ್ಷ್ಯ ಮಾರಿಷ ।
ಪ್ರಾಪತನ್ ಮನುಜಾಸ್ತತ್ರ ರಥೇಭ್ಯೋ ರಥಿನಸ್ತದಾ ॥ ೭ ॥

ಎಲೈ ಪೂಜ್ಯನೇ, ಸಹಿಸಲು ಅಸಾಧ್ಯವಾದ ಅವನ ಸಿಂಹನಾದವನ್ನು ಕೇಳಿ ಪದಾತಿಗಳು ಬಿದ್ದರು, ರಥಿಕರೂ ರಥದಿಂದ ಬಿದ್ದರು.

ಸ ತಾನ್ ವಿದ್ರಾವ್ಯ ಕೌಂತೇಯಃ ಸಂಖೇಽಮಿತ್ರಾನ್ ದುರಾಸದಃ ।
ಸುಪರ್ಣ ಇವ ವೇಗೇನ ಪಕ್ಷಿರಾಡತ್ಯಗಾಚ್ಚಮೂಮ್ ॥ ೮ ॥

ಕುಂತೀಪುತ್ರನೂ, ದುರಾಸದನೂ ಆದ ಭೀಮನು ರಣರಂಗದಲ್ಲಿ ಆ ಶತ್ರುಗಳನ್ನು ಓಡಿಸಿ, ಪಕ್ಷಿರಾಜನಾದ ಗರುಡನಂತೆ ಶೀಘ್ರವಾಗಿ ಆ ಸೈನ್ಯವನ್ನು ದಾಟಿದನು.

ತಥಾ ತಂ ವಿಪ್ರಕುರ್ವಾಣಂ ರಥಯೂಥಪಯೂಥಪಮ್ ।
ಭಾರದ್ವಾಜೋ ಮಹಾರಾಜ ಭೀಮಸೇನಂ ಸಮಭ್ಯಯಾತ್ ॥ ೯ ॥

ಎಲೈ ಮಹಾರಾಜನೇ, ಆ ರೀತಿಯಲ್ಲಿ ಅಪಕಾರವನ್ನು ಮಾಡುತ್ತಿದ್ದ ರಥಯೂಥಪ ಯೂಥಪನಾದ ಭೀಮಸೇನನನ್ನು ದ್ರೋಣರು ಸಮೀಪಿಸಿದರು.

ದ್ರೋಣಸ್ತು ಸಮರೇ ಭೀಮಂ ವಾರಯಿತ್ವಾ ಶರೋರ್ಮಿಭಿಃ ।
ಅಕರೋತ್ ಸಹಸಾ ನಾದಂ ಪಾಂಡೂನಾಂ ಭಯಮಾದಧತ್ ॥ ೧೦ ॥

ದ್ರೋಣರಾದರೋ ತಮ್ಮ ಬಾಣದ ಅಲೆಗಳಿಂದ ರಣರಂಗದಲ್ಲಿ ಭೀಮಸೇನನನ್ನು ತಡೆದು, ಪಾಂಡಮಸೇನೆಗೆ ಭಯವನ್ನುಂಟು ಮಾಡುತ್ತಾ ಸಿಂಹನಾದವನ್ನು ಮಾಡಿದರು.

ತದ್ಯುದ್ಧಮಾಸೀತ್ ಸುಮಹದ್ ಘೋರಂ ದೇವಾಸುರೋಪಮಮ್ ।
ದ್ರೋಣಸ್ಯ ಚ ಮಹಾರಾಜ ಭೀಮಸ್ಯ ಚ ಮಹಾತ್ಮನಃ ॥ ೧೧ ॥

ಮಹಾರಾಜನೇ, ದ್ರೋಣರಿಗೂ ಮತ್ತು ಮಹಾತ್ಮನಾದ ಭೀಮಸೇನನಿಗೂ ದೇವಾಸುರ ಯುದ್ಧಕ್ಕೆ ಸದೃಶವಾದ ಘೋರವಾದ ಮಹಾಯುದ್ಧವು ನಡೆಯಿತು.

ಯದಾ ತು ವಿಶಿಖೈಸ್ತೀಕ್ಷ್ಣೈರ್ದ್ರೋಣಚಾಪವಿನಿಸೃತೈಃ ।
ವಧ್ಯಂತೇ ಸಮರೇ ವೀರಾಃ ಶತಶೋಽಥ ಸಹಸ್ರಶಃ ॥ ೧೨ ॥

ತತೋ ರಥಾದವಪ್ಲುತ್ಯ ವೇಗಮಾಸ್ಥಾಯ ಪಾಂಡವಃ ।
ನಿಮೀಲ್ಯ ನಯನೇ ರಾಜನ್ ಪದಾತಿರ್ದ್ರೋಣಮಭ್ಯಯಾತ್ ॥ ೧೩॥

ದ್ರೋಣರ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳಿಂದ ಪಾಂಡವಸೇನೆಯ ವೀರರು ನೂರಾರು, ಸಹಸ್ರಾರು ಸಂಖ್ಯೆಯಲ್ಲಿ ವಧಿಸಲ್ಪಡುತ್ತಿದ್ದಾಗ ಭೀಮಸೇನನು ಶೀಘ್ರವಾಗಿ ರಥದಿಂದ ಕೆಳಗೆ ಹಾರಿ, ಕಣ್ಣುಗಳನ್ನು ಮುಚ್ಚಿ ಪದಾತಿಯಾಗಿ ದ್ರೋಣರ ಕಡೆಗೆ ಓಡಿದನು.

ಯಥಾ ಹಿ ಗೋವೃಷೋ ವರ್ಷಂ ಪ್ರತಿಗೃಹ್ಣಾತಿ ಲೀಲಯಾ ।
ತಥಾ ಭೀಮೋ ನರವ್ಯಾಘ್ರಃ ಶರವರ್ಷಂ ಸಮಗ್ರಹೀತ್ ॥ ೧೪ ॥

ಗೋವೃಷಭವು ಮಳೆಯನ್ನು ಸ್ವೀಕರಿಸಿದಂತೆ ನರವ್ಯಾಘ್ರನಾದ ಭೀಮನು ವೇಗದಿಂದ ತಲೆಯನ್ನು ತಗ್ಗಿಸಿ ದ್ರೋಣರ ಬಾಣವೃಷ್ಟಿಯನ್ನು ಸ್ವೀಕರಿಸಿದನು.

ಸ ವಧ್ಯಮಾನಃ ಸಮರೇ ರಥಂ ದ್ರೋಣಸ್ಯ ಮಾರಿಷ ।
ಈಷಾಯಾಂ ಪಾಣಿನಾ ಗೃಹ್ಯ ಪ್ರಚಿಕ್ಷೇಪ ಮಹಾಬಲಃ ॥ ೧೫ ॥

ಎಲೈ ಪೂಜ್ಯನೇ, ಹೀಗೆ ಹೊಡೆಯಲ್ಪಡುತ್ತಿದ್ದ ಅವನು ರಣರಂಗದಲ್ಲಿ ದ್ರೋಣರ ರಥದ ಮೂಕಯನ್ನು ಕೈಯಲ್ಲಿ ಹಿಡಿದು ಮಹಾಬಲನಾದ ಅವನು ರಥವನ್ನು ಮೇಲಕ್ಕೆ ಎಸೆದನು.

ದ್ರೋಣಸ್ತು ಸತ್ವರೋ ರಾಜನ್ ಕ್ಷಪ್ತೋ ಭೀಮೇನ ಸಂಯುಗೇ ।
ರಥಮನ್ಯಂ ಸಮಾಸ್ಥಾಯ ವ್ಯೂಹದ್ವಾರಮುಪಾಯಯೌ ॥ ೧೬ ॥

ರಾಜನೇ, ದ್ರೋಣರಾದರೋ ರಥಸಹಿತವಾಗಿ ಭೀಮನಿಂದ ಎಸೆಯಲ್ಪಟ್ಟು ಶೀಘ್ರವಾಗಿ ಇನ್ನೊಂದು ರಥವನ್ನು ಏರಿ ವ್ಯೂಹದ್ವಾರದಲ್ಲಿ ಬಂದು ನಿಂತರು.

ತಸ್ಮಿನ್ ಕ್ಷಣೇ ತಸ್ಯ ಯಂತಾ ತೂರ್ಣಮಶ್ವಾನ್ಚೋದಯತ್ ।
ಭೀಮಸೇನಸ್ಯ ಕೌರವ್ಯ ತದದ್ಭುತಮಿವಾಭವತ್ ॥ ೧೭ ॥

ಎಲೈ ಕೌರವ್ಯನೇ, ಆ ಸಮಯದಲ್ಲಿ ಭೀಮಸೇನನ ಸಾರಥಿಯು ಶೀಘ್ರವಾಗಿ ಅಶ್ವಗಳನ್ನು ಪ್ರಚೋದಿಸಿದನು. ಅದು ಅದ್ಭುತವಾಗಿದ್ದಿತು.

ತತಃ ಸ್ವರಥಮಾಸ್ಥಾಯ ಭೀಮಸೇನೋ ಮಹಾಬಲಃ ।
ಅಭ್ಯವರ್ತತ ವೇಗೇನ ತವ ಪುತ್ರಸ್ಯ ವಾಹಿನೀಮ್ ॥ ೧೮ ॥

ಅನಂತರ ಮಹಾಬಲನಾದ ಭೀಮಸೇನನು ತನ್ನ ರಥವನ್ನು ಏರಿ ನಿನ್ನ ಪುತ್ರನ ಸೈನ್ಯದ ಕಡೆಗೆ ವೇಗದಿಂದ ಸಾಗಿದನು.

ಸ ಮೃದ್ನನ್ ಕ್ಷತ್ರಿಯಾನಾಜೌ ವಾತೋ ವೃಕ್ಷಾನಿವೋದ್ಧತಃ ।
ಅಗಚ್ಛದ್ ದಾರಯನ್ ಸೇನಾಂ ಸಿಂಧುವೇಗೋ ನಗಾನಿವ ॥ ೧೯ ॥

ಬಿರುಗಾಳಿಯು ವೃಕ್ಷಗಳನ್ನು ಉರುಳಿಸುವಂತೆ ಅವನು ರಣರಂಗದಲ್ಲಿ ಕ್ಷತ್ರಿಯರನ್ನು ಮರ್ದಿಸುತ್ತಾ ಸಿಂಧುನದಿಯ ವೇಗವು ಪರ್ವತಗಳನ್ನು (ವೃಕ್ಷಗಳನ್ನು) ಸೀಳಿದಂತೆ ನಿನ್ನ ಸೈನ್ಯವನ್ನು ಸೀಳುತ್ತಾ ಮುಂದೆ ಸಾಗಿದನು.

ಭೋಜಾನೀಕಂ ಸಮಾಸಾದ್ಯ ಹಾರ್ದಿಕ್ಯೇನಾಭರಕ್ಷಿತಮ್ ।
ಪ್ರಮಥ್ಯ ಬಹುಧಾ ರಾಜನ್ ಭೀಮಸೇನಃ ಸಮಭ್ಯಯಾತ್ ॥ ೨೦ ॥

ಕೃತವರ್ಮನಿಂದ ರಕ್ಷಿತವಾದ ಭೋಜರ ಸೇನೆಯನ್ನು ಸಮೀಪಿಸಿ ಅದನ್ನು ಬಹಳವಾಗಿ ಮರ್ದಿಸಿ ಭೀಮಸೇನನು ಮುಂದೆ ಸಾಗಿದನು.

ಸಂತ್ರಾಸಯನ್ನನೀಕಾನಿ ತಳಶಬ್ದೇನ ಮಾರಿಷ ।
ಅಜಯತ್ ಸರ್ವಸೈನ್ಯಾನಿ ಶಾರ್ದೂಲ ಇವ ಗೋವೃಷಾನ್ ॥ ೨೦ ॥

ಎಲೈ ಪೂಜ್ಯನೇ, ತನ್ನ ಹಸ್ತತಳ ಶಬ್ದದಿಂದ ಸೈನ್ಯಗಳನ್ನು ಭಯಪಡಿಸುತ್ತಾ ವ್ಯಾಘ್ರವು ಗೋವೃಷಭಗಳನ್ನು ಜಯಿಸಿದಂತೆ ಎಲ್ಲ ಸೈನ್ಯವನ್ನೂ ಜಯಿಸಿದನು.

ಭೋಜಾನೀಕಮತಿಕ್ರಮ್ಯ ಕಾಂಬೋಜಾನಾಂ ಚ ವಾಹಿನೀಮ್ ।
ತಥಾ ಮ್ಲೇಚ್ಛಗಣಾಂಶ್ಚಾನ್ಯಾನ್ ಬಹೂನ್ ಯುದ್ಧವಿಶಾರದಾನ್ ॥ ೨೧॥

ಸಾತ್ಯಕಿಂ ಚಾಪಿ ಸಂಪ್ರೇಕ್ಷ್ಯ ಯುದ್ಧ್ಯಮಾನಂ ನರರ್ಷಭಮ್ ।
ರಥೇನ ಯತ್ತಃ ಕೌಂತೇಯೋ ವೇಗೇನ ಪ್ರಯಯೌ ತದಾ ॥ ೨೩ ॥

ಭೋಜರ ಸೇನೆಯನ್ನು ದಾಟಿ, ಕಾಂಬೋಜರ ಸೇನೆಯನ್ನೂ ಮತ್ತು ಮ್ಲೇಚ್ಛ ಗಣಗಳನ್ನೂ ದಾಟಿ ಹಾಗೆಯೇ ಯುದ್ಧವಿಶಾರದರಾದ ಅನೇಕ ವೀರರನ್ನೂ ದಾಟಿ, ಯುದ್ಧಮಾಡುತ್ತಿರುವ ನರಶ್ರೇಷ್ಠನಾದ ಸಾತ್ಯಕಿಯನ್ನೂ ನೋಡಿ ಭೀಮಸೇನನು ತನ್ನ ರಥದಿಂದ ವೇಗದಿಂದ ಸಾಗಿದನು.

ಭೀಮಸೇನೋ ಮಹಾರಾಜ ದ್ರಷ್ಟುಕಾಮೋ ಧನಂಜಯಮ್ ।
ಅತೀತ್ಯ ಸಮರೇ ಯೋಧಾಂಸ್ತಾವಕಾನ್ ಪಾಂಡುನಂದನಃ ॥ ೨೪ ॥

ಸೋಽಪಶ್ಯದರ್ಜುನಂ ತತ್ರ ಯುದ್ಧ್ಯಮಾನಂ ನರರ್ಷಭಮ್ ।
ಸೈಂಧವಸ್ಯ ವಧಾರ್ಥಂ ಹಿ ಪರಾಕ್ರಾಂತಂ ಪರಾಕ್ರಮೀ ॥ ೨೫ ॥

ಮಹಾರಾಜನೇ, ಅರ್ಜುನನು ನೋಡಲು ಬಯಸಿದ ಪಾಂಡುನಂದನನಾದ ಭೀಮಸೇನನು ರಣರಂಗದಲ್ಲಿ ನಿನ್ನ ಯೋಧರನ್ನು ದಾಟಿ ಸೈಂಧವನ ವಧೆಗಾಗಿ ಪರಾಕ್ರಮವನ್ನು ತೋರಿಸುತ್ತಿದ್ದ ಯುದ್ಧವನ್ನು ಮಾಡುತ್ತಿದ್ದ ಪರಾಕ್ರಮಶಾಲಿಯಾದ ನರಶ್ರೇಷ್ಠನಾದ ಅರ್ಜುನನನ್ನು ನೋಡಿದನು.

ಅರ್ಜುನಂ ತತ್ರ ದೃಷ್ಟ್ವಾಥ ಚುಕ್ರೋಶ ಮಹತೋ ರವಾನ್ ।
ತಂ ತು ತಸ್ಯ ಮಹಾನಾದಂ ಪಾರ್ಥಃ ಶುಶ್ರಾವ ನರ್ದತಃ ॥ ೨೬ ॥

ಅಲ್ಲಿ ಅರ್ಜುನನನ್ನು ನೋಡಿ ಆಗ ದೊಡ್ಡ ನಾದಗಳನ್ನು ಮಾಡಿದನು. ಗರ್ಜಿಸುತ್ತಿರುವ ಅವನ ಆ ಮಹಾನಾದಗಳನ್ನು ಯುಧಿಷ್ಠಿರನು ಕೇಳಿದನು.

ತತಃ ಪಾರ್ಥೋ ಮಹಾನಾದಂ ಮುಂಚನ್ ವೈ ಮಾಧವಶ್ಚ ಹ ।
ಅಭ್ಯಯಾತಾಂ ಮಹಾರಾಜ ನರ್ದಂತೌ ಗೋವೃಷಾವಿವ ॥ ೨೭ ॥

ಎಲೈ ಮಹಾರಾಜನೇ, ಆಗ ಅರ್ಜುನನು ಮತ್ತು ಕೃಷ್ಣನು ಮಹಾನಾದವನ್ನು ಮಾಡಿ ಗರ್ಜಿಸುತ್ತಾ ಗೋವೃಷಗಳಂತೆ ಭೀಮಸೇನನ ಕಡೆಗೆ ಬಂದರು.

ವಾಸುದೇವಾರ್ಜುನೌ ಶ್ರುತ್ವಾ ನಿನಾದಂ ತಸ್ಯ ಶುಷ್ಮಿಣಃ ।
ಪುನಃ ಪುನಃ ಪ್ರಣದತಾಂ ದಿದೃಕ್ಷಂತೌ ವೃಕೋದರಮ್ ॥ ೨೮ ॥

ಕೃಷ್ಣಾರ್ಜುನರು ವೀರ್ಯಶಾಲಿಯಾದ ಭೀಮನ ಸಿಂಹನಾದಗಳನ್ನು ಕೇಳಿ ಅವನನ್ನು ನೋಡಲು ಬಯಸಿ ಪುನಃ ಪುನಃ ನಾದವನ್ನು ಮಾಡಿ ಗರ್ಜಿಸಿದರು.

ಭೀಮಸೇನರವಂ ಶ್ರುತ್ವಾ ಫಲ್ಗುನಸ್ಯ ಚ ಧನ್ವಿನಃ ।
ಅಪ್ರೀಯತ ಮಹಾರಾಜ ಧರ್ಮಪುತ್ರೋ ಯುಧಿಷ್ಠಿರಃ ॥ ೨೯ ॥

ಭೀಮಸೇನನ ಮತ್ತು ಧನುರ್ಧಾರಿಯಾದ ಅರ್ಜುನನ ಗರ್ಜನೆಯನ್ನು ಕೇಳಿ ಎಲೈ ಮಹಾರಾಜನೇ, ಧರ್ಮಪುತ್ರನಾದ ಯುಧಿಷ್ಠಿರನು ಹರ್ಷಗೊಂಡನು.

ವಿಶೋಕಶ್ಚಾಭವದ್ ರಾಜಾ ಶ್ರುತ್ವಾ ತಂ ನಿನದಂ ಮಹತ್ ।
ಧನಂಜಯಸ್ಯ ಚ ರಣೇ ಜಯಮಾಶಾಸ್ತವಾನ್ ವಿಭುಃ ॥ ೩೦ ॥

ಧರ್ಮರಾಜನು ಆ ದೊಡ್ಡನಾದವನ್ನು ಕೇಳಿ ಶೋಕರಹಿತನಾದನು. ಪ್ರಭುವಾದ ಅವನು ಅರ್ಜುನನಿಗೆ ಯುದ್ಧದಲ್ಲಿ ಜಯವನ್ನೂ ಹಾರೈಸಿದನು.

ತಥಾ ತು ನರ್ದಮಾನೇ ವೈ ಭೀಮಸೇನೇ ರಣೋತ್ಕಟೇ ।
ಸ್ಮಿತಂ ಕೃತ್ವಾ ಮಹಾಬಾಹುರ್ಧರ್ಮಪುತ್ರೋ ಯುಧಿಷ್ಠಿರಃ ॥ ೩೧ ॥
ಹೃದ್ಗತಂ ಮನಸಾ ಪ್ರಾಹ ಧ್ಯಾತ್ವಾ ಧರ್ಮಭೃತಾಂ ವರಃ ।
ದತ್ತಾ ಭೀಮ ತ್ವಯಾ ಸಂವಿತ್ ಕೃತಂ ಗುರುವಚಸ್ತಥಾ ॥ ೩೨ ॥

ರಣೋತ್ಕಟನಾದ ಭೀಮಸೇನನು ಆ ರೀತಿಯಲ್ಲಿ ಗರ್ಜಿಸುತ್ತಿರಲು ಮಹಾಬಾಹುವಾದ ಧರ್ಮಪುತ್ರನಾದ ಯುಧಿಷ್ಠಿರನು ಮಂದಹಾಸವನ್ನು ಬೀರಿ, ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ಧ್ಯಾನ ಮಾಡಿ, ತನ್ನ ಅಭಿಪ್ರಾಯವನ್ನು ಮನಸ್ಸಿನಲ್ಲಿಯೇ ಭೀಮನೇ ನೀನು ಸೂಚನೆಯನ್ನು ಕೊಟ್ಟಿದ್ದೀಯೆ ಮತ್ತು ಅಣ್ಣನ ಮಾತನ್ನು ಪಾಲಿಸಿದ್ದೀಯೆ ಎಂದು ಹೇಳಿದನು.

ನ ಹಿ ತೇಷಾಂ ಜಯೋ ಯುದ್ಧೇ ಯೇಷಾಂ ದ್ವೇಷ್ಟಾಪಿ ಪಾಂಡವ ।
ದಿಷ್ಟ್ಯಾ ಜೀವತಿ ಸಂಗ್ರಾಮೇ ಸವ್ಯಸಾಚೀ ಧನಂಜಯಃ ॥ ೩೩ ॥

ಎಲೈ ಪಾಂಡವನೇ, ನೀನು ಯಾರನ್ನು ದ್ವೇಷಿಸುತ್ತೀಯೋ ಅವರಿಗೆ ಯುದ್ಧದಲ್ಲಿ ಜಯವಾಗುವುದಿಲ್ಲ. ದೇವರ ದಯದಿಂದ ಸವ್ಯಸಾಚಿಯಾದ ಅರ್ಜುನನು ರಣರಂಗದಲ್ಲಿ ಜೀವಿಸಿದ್ದಾನೆ.

ದಿಷ್ಟ್ಯಾ ಚ ಕುಶಲೀ ವೀರಃ ಸಾತ್ಯಕಿಃ ಸತ್ಯವಿಕ್ರಮಃ ।
ದಿಷ್ಟ್ಯಾ ಶೃಣೋಮಿ ಗರ್ಜಂತೌ ವಾಸುದೇವಧನಂಜಯೌ ॥ ೩೪ ॥

ದೇವರದಯದಿಂದ ಸತ್ಯಪರಾಕ್ರಮಿಯೂ, ವೀರನೂ ಆದ ಸಾತ್ಯಕಿಯೂ ಕ್ಷೇಮದಿಂದಿದ್ದಾನೆ. ದೇವರ ದಯದಿಂದಲೇ ಕೃಷ್ಣಾರ್ಜುನರ ಗರ್ಜನೆಯನ್ನು ಕೇಳುತ್ತಿದ್ದೇನೆ.

ಯೇನ ಶಕ್ರಂ ರಣೇ ಜಿತ್ವಾ ತರ್ಪಿತೋ ಹವ್ಯವಾಹನಃ ।
ಸ ಹಂತಾ ದ್ವಿಷತಾಂ ಸಂಖೇ ದಿಷ್ಟ್ಯಾ ಜೀವತಿ ಫಲ್ಗುನಃ ॥ ೩೫ ॥

ಯಾವ ಅರ್ಜುನನು ಯುದ್ಧದಲ್ಲಿ ಇಂದ್ರನನ್ನು ಗೆದ್ದು ಖಾಂಡವವನದಲ್ಲಿ ಅಗ್ನಿಯನ್ನು ತೃಪ್ತಪಡಿಸಿದನೋ, ಅಂತಹ ಯುದ್ಧದಲ್ಲಿ ಶತ್ರುವನ್ನು ಕೊಲ್ಲುವ ಅರ್ಜುನನು ದೇವರ ದಯದಿಂದ ಜೀವಿಸಿದ್ದಾನೆ.

ಯಸ್ಯ ಬಾಹುಬಲಂ ಸರ್ವೇ ವಯಮಾಶ್ರಿತ್ಯ ಜೀವಿತಾಃ ।
ಸ ಹಂತಾ ರಿಪುಸೈನ್ಯಾನಾಂ ದಿಷ್ಟ್ಯಾ ಜೀವತಿ ಫಲ್ಗುನಃ ॥ ೩೬ ॥

ಯಾರ ಬಾಹುಬಲವನ್ನು ಆಶ್ರಯಿಸಿ ನಾವೆಲ್ಲರೂ ಬದುಕಿದ್ದೇವೆಯೋ ಅಂತಹ ರಿಪುಸೈನ್ಯವನ್ನು ಕೊಲ್ಲುವ ಅರ್ಜುನನು ದೇವರ ದಯದಿಂದ ಜೀವಿಸಿದ್ದಾನೆ.

ನಿವಾತಕವಚಾ ಯೇನ ದೇವೈರಪಿ ಸುದುರ್ಜಯಾಃ ।
ನಿರ್ಜಿತಾ ರಥಿನೈಕೇನ ದಿಷ್ಟ್ಯಾ ಪಾರ್ಥಃ ಸ ಜೀವತಿ ॥ ೩೭ ॥

ದೇವತೆಗಳಿಂದಲೂ ಜಯಿಸಲು ಅಸಾಧ್ಯರಾದ ನಿವಾತಕವಚರನ್ನು ಯಾವ ಅರ್ಜುನನು ಒಂದು ರಥದಿಂದ ಜಯಿಸಿದನೋ ಅಂತಹ ಪಾರ್ಥನು ದೇವರ ದಯದಿಂದ ಜೀವಿಸಿದ್ದಾನೆ.

ಕೌರವಾನ್ ಸಹಿತಾನ್ ಸರ್ವಾನ್ ಗೋಗ್ರಹಾರ್ಥೇ ಸಮಾಗತಾನ್ ।
ಯೋಽಜಯನ್ಮತ್ಸ್ಯನಗರೇ ದಿಷ್ಟ್ಯಾ ಪಾರ್ಥಃ ಸ ಜೀವತಿ ॥ ೩೮ ॥

ವಿರಾಟನಗರದಲ್ಲಿ ಗೋಗ್ರಹಣಾರ್ಥವಾಗಿ ಪ್ರಾಪ್ತರಾದ ಎಲ್ಲ ಕೌರವರನ್ನು ಜಯಿಸಿದನೋ ಅಂತಹ ಅವನು ದೇವರ ದಯದಿಂದ ಜೀವಿಸಿದ್ದಾನೆ.

ಕಾಲಕೇಯಸಹಸ್ರಾಣಿ ಚತುರ್ದಶ ಮಹಾರಣೇ ।
ಯೋಽವಧೀದ್ ಭುಜವೀರ್ಯೇಣ ದಿಷ್ಟ್ಯಾ ಪಾರ್ಥಃ ಸ ಜೀವತಿ ॥

ದೊಡ್ಡ ಯುದ್ಧದಲ್ಲಿ ಹದಿನಾಲ್ಕು ಸಾವಿರ ಕಾಲಕೇಯ ದೈತ್ಯರನ್ನು ತನ್ನ ಭುಜಬಲದಿಂದ ಕೊಂದ ಅರ್ಜುನನು ದೇವರ ದಯದಿಂದ ಜೀವಿಸಿದ್ದಾನೆ.

ಗಂಧರ್ವರಾಜಂ ಬಲಿನಂ ದುರ್ಯೋಧನಕೃತೇನ ವೈ ।
ಜಿತವಾನ್ ಯೋಽಸ್ತ್ರವೀರ್ಯೇಣ ದಿಷ್ಟ್ಯಾ ಪಾರ್ಥಃ ಸ ಜೀವತಿ ॥

ಬಲಿಷ್ಠನಾದ ಗಂಧರ್ವರಾಜನಾದ ಚಿತ್ರರಥನನ್ನು ದುರ್ಯೋಧನನ ನಿಮಿತ್ತದಿಂದ ತನ್ನ ಅಸ್ತ್ರಬಲದಿಂದ ಜಯಿಸಿದ ಅರ್ಜುನನು ದೇವರ ದಯದಿಂದ ಜೀವಿಸಿದ್ದಾನೆ.

ಕಿರೀಟಮಾಲೀ ಬಲವಾನ್ ಶ್ವೇತಾಶ್ವಃ ಕೃಷ್ಣಸಾರಥಿಃ ।
ಮಮ ಪ್ರಿಯಶ್ಚ ಸತತಂ ದಿಷ್ಟ್ಯಾ ಜೀವತಿ ಫಲ್ಗುನಃ ॥ ೪೧ ॥

ಕಿರೀಟಮಾಲಿಯೂ, ಬಲಿಷ್ಠನೂ, ಶ್ವೇತಾಶ್ವನೂ, ಕೃಷ್ಣಸಾರಥಿಯೂ, ನನಗೆ ಯಾವಾಗಲೂ ಪ್ರಿಯನೂ ಆದ ಅರ್ಜುನನು ದೇವರ ದಯದಿಂದ ಜೀವಿಸಿದ್ದಾನೆ.

ಪುತ್ರಶೋಕಾಭಿಸಂತಪ್ತಶ್ಚಿಕೀರ್ಷುಃ ಕರ್ಮ ದುಷ್ಕರಮ್ ।
ಜಯದ್ರಥವಧಾನ್ವೇಷೀ ಪ್ರತಿಜ್ಞಾಂ ಕೃತವಾನ್ ಹಿ ಯಃ ।
ಕಚ್ಚಿತ್ ಸ ಸೈಂಧವಂ ಸಂಖೇ ಹನಿಷ್ಯತಿ ಧನಂಜಯಃ ॥ ೪೨ ॥

ಅಭಿಮನ್ಯುವಿನ ವಧೆಯಿಂದ ಸಂತಪ್ತನಾಗಿ ದುಷ್ಕರವಾದ ಕರ್ಮವನ್ನು ಮಾಡಲು ಬಯಸಿ, ಜಯದ್ರಥನ ವಧೆಯನ್ನು ಮಾಡುವುದಾಗಿ ಪ್ರತಿಜ್ಞೆಯನ್ನು ಮಾಡಿದ ಅರ್ಜುನನು ರಣರಂಗದಲ್ಲಿ ಸೈಂಧವನನ್ನು ಕೊಲ್ಲುವನೆ?

ಕಚ್ಚಿತ್ತೀರ್ಣಪ್ರತಿಜ್ಞಂ ಹಿ ವಾಸುದೇವೇನ ರಕ್ಷಿತಮ್ ।
ಅನಸ್ತಮಿತ ಆದಿತ್ಯೇ ಸಮೇಷ್ಯಾಮ್ಯಹಮರ್ಜುನಮ್ ॥ ೪೩ ॥

ಸೂರ್ಯಾಸ್ತವಾಗುವುದರೊಳಗೆ ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಿ ಕೃಷ್ಣನಿಂದ ರಕ್ಷಿತನಾದ ಅರ್ಜುನನ ಜೊತೆಯಲ್ಲಿ ನಾನು ಸಮಾಗಮವನ್ನು ಹೊಂದುವೆನೆ?

ಕಚ್ಚಿತ್ ಸೈಂಧವಕೋ ರಾಜಾ ದುರ್ಯೋಧನಹಿತೇ ರತಃ ।
ನಂದಯಿಷ್ಯತ್ಯಮಿತ್ರಾಣಿ ಫಲ್ಗುನೇನ ನಿಪಾತಿತಃ ॥ ೪೪ ॥

ದುರ್ಯೋಧನನ ಹಿತದಲ್ಲಿ ನಿರತನಾದ ಆ ಕೆಟ್ಟ ಸೈಂಧವರಾಜನು ಅರ್ಜುನನಿಂದ ವಧೆಯನ್ನು ಹೊಂದಿ ಶತ್ರುಗಳನ್ನು ಸಂತೋಷಪಡಿಸುವನೆ?

ಕಚ್ಚಿದ್ ದುರ್ಯೋಧನೋ ರಾಜಾ ಫಲ್ಗುನೇನ ನಿಪಾತಿತಮ್ ।
ದೃಷ್ಟ್ವಾ ಸೈಂಧವಕಂ ಸಂಖೇ ಶಮಮಸ್ಮಾಸು ಧಾಸ್ಯತಿ ॥ ೪೫ ॥

ಅರ್ಜುನನಿಂದ ಹತನಾದ ಸೈಂಧವನನ್ನು ನೋಡಿ ರಾಜನಾದ ದುರ್ಯೋಧನನು ರಣರಂಗದಲ್ಲಿಯೇ ನಮ್ಮ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವನೆ?

ದೃಷ್ಟ್ವಾ ವಿನಿಹತಾನ್ ಭ್ರಾತ್ಸ್ಯನ್ ಭೀಮಸೇನೇನ ಸಂಯುಗೇ ।
ಕಚ್ಚಿದ್ ದುರ್ಯೋಧನೋ ಮಂದಃ ಶಮಮಸ್ಮಾಸು ಧಾಸ್ಯತಿ ॥ ೪೬ ॥

ರಣರಂಗದಲ್ಲಿ ಭೀಮಸೇನನಿಂದ ಹತರಾದ ತನ್ನ ಸಹೋದರರನ್ನು ನೋಡಿ ಮಂದನಾದ ದುರ್ಯೋಧನನು ನಮ್ಮ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವನೆ?

ದೃಷ್ಟ್ವಾ ಚಾನ್ಯಾನ್ ಬಹೂನ್ ಯೋಧಾನ್ ಪಾತಿತಾನ್ ಧರಣೀತಲೇ ।
ಕಚ್ಚಿದ್ ದುರ್ಯೋಧನೋ ಮಂದಃ ಪಶ್ಚಾತ್ತಾಪಂ ಕರಿಷ್ಯತಿ ॥ ೪೭ ॥

ಭೂಮಿಯ ಮೇಲೆ ಹತರಾಗಿ ಬಿದ್ದ ಉಳಿದ ಅನೇಕ ಯೋಧರನ್ನು ನೋಡಿ ಮಂದನಾದ ದುರ್ಯೋಧನನು ಪಶ್ಚಾತ್ತಾಪವನ್ನು ಪಡುವನೆ?

ಕಚ್ಚಿದ್ ಭೀಷ್ಮೇಣ ನೋ ವೈರಮೇಕೇನೈವ ಪ್ರಶಾಂಮ್ಯತಿ ।
ಶೇಷಸ್ಯ ರಕ್ಷಣಾರ್ಥಂ ಚ ಸಂಧಾಸ್ಯತಿ ಸುಯೋಧನಃ ॥ ೪೮ ॥

ಭೀಷ್ಮರೊಬ್ಬರ ನಿಧನದಿಂದ ದುರ್ಯೋಧನನು ವೈರವನ್ನು ತ್ಯಜಿಸಿ, ನಮ್ಮ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವನೆ? ಉಳಿದವರನ್ನು ರಕ್ಷಿಸುವುದಕ್ಕಾಗಿ ಸುಯೋಧನನು ಸಂಧಿಯನ್ನು ಮಾಡಿಕೊಳ್ಳುವನೆ?

ಏವಂ ಬಹುವಿಧಂ ತಸ್ಯ ಚಿಂತಯಾನಸ್ಯ ಪಾರ್ಥಿವ ।
ಕೃಪಯಾऽಭಿಪರೀತಸ್ಯ ಘೋರಂ ಯುದ್ಧಮವರ್ತತ ॥ ೪೯ ॥

ಹೀಗೆ ಎಲೈ ರಾಜನೇ, ಕೃಪೆಯಿಂದ ಕೂಡಿ ಬಹುವಿಧವಾಗಿ ಯುಧಿಷ್ಠಿರನು ಚಿಂತಿಸುತ್ತಿರಲು ಘೋರವಾದ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಯೋದಶಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಸಪ್ತತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾಲ್ಕನೆಯ ಅಧ್ಯಾಯ

ಭೀಮಸೇನನಿಂದ ಕರ್ಣನ ಪರಾಜಯ

ಧೃತರಾಷ್ಟ್ರಃ

ತಥಾ ತು ನರ್ದಮಾನಂ ತಂ ಭೀಮಸೇನಂ ಮಹಾಬಲಮ್ ।
ಮೇಘಸ್ತನಿತನಿರ್ಘೋಷಂ ಕೇ ವೀರಾಃ ಪರ್ಯವಾರಯನ್ ॥ ೧ ॥

ಧೃತರಾಷ್ಟ್ರ– ಹಾಗೆ ಗರ್ಜಿಸುತ್ತಿದ್ದ ಮೇಘಗರ್ಜನೆಯ ಘೋಷವುಳ್ಳ ಮಹಾಬಲನಾದ ಭೀಮಸೇನನನ್ನು ಯಾವ ವೀರರು ತಡೆದರು?

ನ ಹಿ ಪಶ್ಯಾಮ್ಯಹಂ ತಂ ವೈ ತ್ರಿಷು ಲೋಕೇಷು ಸಂಜಯ ।
ಕ್ರುದ್ಧಸ್ಯ ಭೀಮಸೇನಸ್ಯ ಯಸ್ತಿಷ್ಠೇದಗ್ರತೋ ರಣೇ ॥ ೨ ॥

ಎಲೈ ಸಂಜಯನೇ, ರಣರಂಗದಲ್ಲಿ ಕೋಪಗೊಂಡ ಭೀಮಸೇನನ ಎದುರಿಗ ನಿಲ್ಲುವ ಯೋಧನನ್ನು ನಾನು ಮೂರುಲೋಕಗಳಲ್ಲಿಯೂ ಕಾಣುವುದಿಲ್ಲ.

ಗದಾಮುದ್ಯಚ್ಛಮಾನಸ್ಯ ಕಾಲಸ್ಯೇವ ಮಹಾಮೃಧೇ ।
ನ ಹಿ ಪಶ್ಯಾಮ್ಯಹಂ ತಾತ ಯಸ್ತಿಷ್ಠೇತ ರಣಾಜಿರೇ ॥ ೩ ॥

ಎಲೈ ಪ್ರೀತಿಪಾತ್ರನೇ, ಗದೆಯನ್ನು ಎತ್ತಿ ರಣರಂಗದಲ್ಲಿ ಯಮನಂತೆ ನಿಂತಿರುವ ಅವನ ಎದುರಿನಲ್ಲಿ ರಣರಂಗದಲ್ಲಿ ನಿಲ್ಲಬಹುದಾದ ಯಾವ ಯೋಧನನ್ನೂ ನಾನು ಕಾಣುವುದಿಲ್ಲ.

ರಥಂ ರಥೇನ ಯೋ ಹನ್ಯಾತ್ ಕುಂಜರಂ ಕುಂಜರೇಣ ಚ ।
ಕಸ್ಯ ಸಮರೇ ಸ್ಥಾತಾ ಸಾಕ್ಷಾದಪಿ ಶತಕ್ರತುಃ ॥ ೪ ॥

ಯಾವನು ರಥದಿಂದ ರಥವನ್ನು, ಗಜದಿಂದ ಗಜವನ್ನು ಹೊಡೆಯುತ್ತಾನೆಯೋ ಅವನ ಎದುರಿನಲ್ಲಿ ಸಾಕ್ಷಾತ್ ಇಂದ್ರನಂತಹ ಯಾವನೂ ಸಹ ಹೇಗೆ ನಿಂತಾನು?

ಕ್ರುದ್ಧಸ್ಯ ಭೀಮಸೇನಸ್ಯ ಮಮ ಪುತ್ರಾನ್ ಜಿಘಾಂಸತಃ ।
ದುರ್ಯೋಧನಹಿತೇ ಯುಕ್ತಾಃ ಸಮತಿಷ್ಠಂತ ಕೇಽಗ್ರತಃ ॥ ೫ ॥

ನನ್ನ ಪುತ್ರರನ್ನು ಕೊಲ್ಲಲು ಬಯಸಿ ಕೋಪಗೊಂಡ ಭೀಮಸೇನನ ಎದುರಿಗೆ ದುರ್ಯೋಧನನ ಹಿತದಲ್ಲಿ ರತರಾದ ಯಾರು ನಿಂತರು?

ಭೀಮಸೇನದವಾಗ್ನೇಸ್ತು ಮಮ ಪುತ್ರತೃಣೋಪಲಮ್ ।
ಪ್ರಧಕ್ಷ್ಯತೋ ರಣಮುಖೇ ಕೇ ವೀರಾಃ ಪ್ರಮುಖೇ ಸ್ಥಿತಾಃ ॥ ೬ ॥

ನನ್ನ ಪುತ್ರರೆಂಬ ತೃಣಗಳನ್ನು ದಹಿಸುವ ಭೀಮಸೇನದಾವಾಗ್ನಿಯ ಎದುರಿನಲ್ಲಿ ರಣರಂಗದಲ್ಲಿ ಯಾವ ವೀರರು ನಿಂತರು?

ಕಾಲ್ಯಮಾನಾನ್ ಹಿ ಮೇ ಪುತ್ರಾನ್ ಭೀಮೇನಾವೇಕ್ಷ್ಯ ಸಂಯುಗೇ ।
ಕಾಲೇನೇವ ಪ್ರಜಾಃ ಸರ್ವಾಃ ಕೇ ಭೀಮಂ ಪರ್ಯವಾರಯನ್ ॥ ೭ ॥

ಮೃತ್ಯುವು ಪ್ರಜೆಗಳನ್ನು ವಿನಾಶಗೊಳಿಸಿದಂತೆ ಭೀಮನಿಂದ ರಣರಂಗದಲ್ಲಿ ನನ್ನ ಪುತ್ರರು ವಿನಾಶಗೊಳಿಸಲ್ಪಡುತ್ತಿದ್ದಾಗ ಯಾರು ಭೀಮನನ್ನು ತಡೆದರು?

ಭೀಮವಹ್ನೇಃ ಪ್ರದೀಪ್ತಸ್ಯ ಮಮ ಪುತ್ರಾನ್ ದಿಧಕ್ಷತಃ ।
ಕೇ ಶೂರಾಃ ಪರ್ಯವರ್ತಂತ ತನ್ಮಾಚಕ್ಷ್ವ ಸಂಜಯ ॥ ೮ ॥

ನನ್ನ ಪುತ್ರರನ್ನು ಸುಡಲು ಬಯಸಿದ ಜ್ವಲಿಸುವ ಭೀಮಾಗ್ನಿಯನ್ನು ಯಾವ ಶೂರರು ಸಮೀಪಿಸಿದರು? ಸಂಜಯನೇ, ಅದನ್ನು ನನಗೆ ಹೇಳು.

ಸಂಜಯಃ

ತಥಾ ತು ನರ್ದಮಾನಂ ತಂ ಭೀಮಸೇನಂ ಮಹಾರಥಮ್ ।
ತುಮುಲೇನೈವ ಶಬ್ದೇನ ಕರ್ಣೋಽಪ್ಯಭ್ಯಪತದ್ ಬಲೀ ॥ ೯ ॥

ಸಂಜಯ– ಹಾಗೆ ಗರ್ಜಿಸುತ್ತಿದ್ದ ಮಹಾರಥನಾದ ಭೀಮಸೇನನನ್ನು ಕುರಿತು ತೀವ್ರವಾದ ಗರ್ಜನೆಯನ್ನು ಮಾಡುತ್ತಾ ಬಲಿಷ್ಠನಾದ ಕರ್ಣನು ಧಾವಿಸಿದನು.

ವ್ಯಾಕ್ಷಿಪನ್ ಬಲವಚ್ಚಾಪಮತಿಮಾತ್ರಮಮರ್ಷಣಃ ।
ಕರ್ಣಸ್ತು ಯುದ್ಧಮಾಕಾಂಕ್ಷನ್ ದರ್ಶಯಿಷ್ಯನ್ ಬಲಂ ಬಲೀ॥ ೧೦ ॥

ಕೋಪಗೊಂಡ ಕರ್ಣನು ತನ್ನ ಧನುಸ್ಸಿನ ಹೆದೆಯನ್ನು ಎಳೆಯುತ್ತಾ ಯುದ್ಧವನ್ನು ಬಯಸುತ್ತಾ ತನ್ನ ಬಲವನ್ನು ತೋರಿಸುತ್ತಾ ರಣರಂಗದಲ್ಲಿ ಮುಂದೆ ಸಾಗಿದನು.

ಪ್ರಾವೇಪನ್ನವ ಗಾತ್ರಾಣಿ ಕರ್ಣಭೀಮಸಮಾಗಮೇ ।
ರಥಿನಾಂ ಸಾದಿನಾಂ ಚೈವ ತಯೋಃ ಶ್ರುತ್ವಾ ತಳಸ್ವನಮ್ ॥ ೧೧ ॥

ಕರ್ಣ-ಭೀಮರ ಸಮಾಗಮವುಂಟಾದಾಗ ಅವರ ಹಸ್ತತಳಗಳ ಶಬ್ದಗಳನ್ನು ಕೇಳಿ ರಥಿಕರ ಮತ್ತು ಅಶ್ವಾರೋಹಿಗಳ ಶರೀರಗಳು ನಡುಗಿದವು.

ಭೀಮಸೇನಸ್ಯ ನಿನದಂ ಘೋರಂ ಶ್ರುತ್ವಾ ರಣಾಜಿರೇ ।
ಖಂ ಚ ಭೂಮಿಂ ಚ ಸಂಬದ್ಧಾಂ ಮೇನಿರೇ ಕ್ಷತ್ರಿಯರ್ಷಭಾಃ ॥ ೧೨ ॥

ರಣರಂಗದಲ್ಲಿ ಭೀಮಸೇನನ ಘೋರವಾದ ನಾದವನ್ನು ಕೇಳಿ ಕ್ಷತ್ರಿಯಶ್ರೇಷ್ಠರು ಭೂಮಿ ಮತ್ತು ಆಕಾಶಗಳು ಸೇರಿಕೊಂಡಿವೆ ಎಂದು ತಿಳಿದರು.

ಪುನರ್ಘೋರೇಣ ನಾದೇನ ಪಾಂಡವಸ್ಯ ಮಹಾತ್ಮನಃ ।
ಸಮರೇ ಸರ್ವಯೋಧಾನಾಂ ಧನೂಂಷ್ಯಭ್ಯಪತನ್ ಕ್ಷಿತೌ ॥ ೧೩ ॥

ಮಹಾತ್ಮನಾದ ಪಾಂಡವನ ಘೋರವಾದ ನಾದದಿಂದ ರಣರಂಗದಲ್ಲಿ ಎಲ್ಲ ಯೋಧರ ಧನುಸ್ಸುಗಳೂ ಕೈಯಿಂದ ಜಾರಿ ಭೂಮಿಯ ಮೇಲೆ ಬಿದ್ದವು.

ವಿತ್ರಸ್ತಾನಿ ಚ ಸರ್ವಾಣಿ ಶಕೃನ್ಮೂತ್ರಂ ಪ್ರಸುಸ್ರುವುಃ ।
ವಾಹನಾನಿ ಮಹಾರಾಜ ಬಭೂವುರ್ವಿಮನಾಂಸಿ ಚ ॥ ೧೪ ॥

ಎಲೈ ಮಹಾರಾಜನೇ, ಎಲ್ಲ ವಾಹನಗಳೂ ಇದ್ದಲ್ಲೇ ಮಲ-ಮೂತ್ರಗಳನ್ನು ಸುರಿಸಿದವು ಮತ್ತು ಯುದ್ಧವಿಮುಖವಾದವು.

ಪ್ರಾದುರಾಸನ್ ನಿಮಿತ್ತಾನಿ ಘೋರಾಣಿ ಚ ಬಹೂನಿ ಚ ।
ತಸ್ಮಿಂಸ್ತು ತುಮುಲೇ ರಾಜನ್ ಭೀಮಕರ್ಣಸಮಾಗಮೇ ॥ ೧೫ ॥

ರಾಜನೇ, ತೀವ್ರವಾದ ಭೀಮ-ಕರ್ಣಸಮಾಗಮವುಂಟಾದಾಗ ಘೋರವಾದ ಅನೇಕ ಅಪಶಕುನಗಳು ಉಂಟಾದವು.

ತತಃ ಕರ್ಣಸ್ತು ವಿಂಶತ್ಯಾ ಶರಾಣಾಂ ಭೀಮಮಾರ್ದಯತ್ ।
ವಿವ್ಯಾಧ ಚಾಸ್ಯ ತ್ವರಿತಃ ಸೂತಂ ಪಂಚಭಿರಾಶುಗೈಃ ॥ ೧೬ ॥

ಆಗ ಕರ್ಣನು ಇಪ್ಪತ್ತು ಬಾಣಗಳಿಂದ ಭೀಮನನ್ನು ಪೀಡಿಸಿದನು. ಶೀಘ್ರವಾಗಿ ಅವನ ಸಾರಥಿಯನ್ನು ಶೀಘ್ರಗಾಮಿಗಳಾದ ಐದು ಬಾಣಗಳಿಂದ ಹೊಡೆದನು.

ಪ್ರಹಸ್ಯ ಭೀಮಸೇನಸ್ತು ಕರ್ಣಂ ಪ್ರತ್ಯರ್ಪಯದ್ರಣೇ ।
ಸಾಯಕಾನಾಂ ಚತುಃಷಷ್ಟ್ಯಾ ಕ್ಷಿಪ್ರಕಾರೀ ಮಹಾಬಲಃ ॥ ೧೭ ॥

ಕ್ಷಿಪ್ರಕಾರಿಯೂ, ಮಹಾಬಲನೂ ಆದ ಭೀಮಸೇನನು ನಕ್ಕು ಪ್ರತಿಯಾಗಿ ಕರ್ಣನನ್ನು ಅರವತ್ನಾಲ್ಕು ಬಾಣಗಳಿಂದ ಹೊಡೆದನು.

ತಸ್ಯ ಕರ್ಣೋ ಮಹೇಷ್ವಾಸಃ ಸಾಯಕಾಂಶ್ಚತುರೋऽಕ್ಷಿಪತ್ ।
ಅಸಂಪ್ರಾಪ್ತಾಂಸ್ತು ತಾನ್ ಭೀಮಃ ಸಾಯಕೈರ್ನತಪರ್ವಭಿಃ ।
ಚಿಚ್ಛೇದ ಬಹುಧಾ ರಾಜನ್ ದರ್ಶಯನ್ ಪಾಣಿಲಾಘವಮ್ ॥ ೧೮ ॥

ಮಹಾಧನುರ್ಧಾರಿಯಾದ ಕರ್ಣನು ಭೀಮಸೇನನ ಮೇಲೆ ನಾಲ್ಕು ಬಾಣಗಳನ್ನು ಪ್ರಯೋಗಿಸಿದನು. ರಾಜನೇ, ಭೀಮಸೇನನು ತನ್ನ ಹಸ್ತಲಾಘವವನ್ನು ತೋರಿಸುತ್ತಾ

ಆ ಬಾಣಗಳು ತನ್ನನ್ನು ತಲುಪುವುದಕ್ಕಿಂತ ಮುಂಚೆಯೇ ಬಾಗಿದ ತುದಿಯುಳ್ಳ ಬಾಣಗಳಿಂದ ಅವುಗಳನ್ನು ಅನೇಕ ಭಾಗಗಳಾಗಿ ಕತ್ತರಿಸಿದನು.

ತಂ ಕರ್ಣಶ್ಚಾದಯಾಮಾಸ ಶರವ್ರಾತೈರನೇಕಶಃ ।
ಸಂಛಾದ್ಯಮಾನಃ ಕರ್ಣೇನ ಬಹುಧಾ ಪಾಂಡುನಂದನಃ ॥ ೧೯ ॥

ಚಿಚ್ಛೇದ ಚಾಪಂ ಕರ್ಣಸ್ಯ ಮುಷ್ಟಿದೇಶೇ ಮಹಾರಥಃ ।
ವಿವ್ಯಾಧ ಚೈನಂ ಬಹುಭಿಃ ಸಾಯಕೈರ್ನತಪರ್ವಭಿಃ ॥ ೨೦ ॥

ಕರ್ಣನು ಅನೇಕ ಬಾಣಗಳ ಸಮೂಹಗಳಿಂದ ಅವನನ್ನು ಮುಚ್ಚಿದನು. ಕರ್ಣನಿಂದ ಹೀಗೆ ಮುಚ್ಚಲ್ಪಟ್ಟ ಪಾಂಡುನಂದನನೂ, ಮಹಾರಥನೂ ಆದ ಭೀಮಸೇನನು ಕರ್ಣನ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿ ಅವನ ಮೇಲೆ ಬಾಗಿದ ತುದಿಯುಳ್ಳ ಅನೇಕ ಬಾಣಗಳನ್ನು ಪ್ರಯೋಗಿಸಿದನು.

ಅಥಾನ್ಯದ್ಧನುರಾದಾಯ ಸಜ್ಯಂ ಕೃತ್ವಾ ಚ ಸೂತಜಃ ।
ವಿವ್ಯಾಧ ಸಮರೇ ಭೀಮಂ ಭೀಮಕರ್ಮಾ ಮಹಾರಥಃ ॥ ೨೧ ॥

ಆಗ ಭೀಮಕರ್ಮನೂ, ಮಹಾರಥನೂ ಆದ ಕರ್ಣನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಹೆದೆಯೇರಿಸಿ ಭೀಮನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತಸ್ಯ ಭೀಮೋ ಭೃಶಂ ಕ್ರುದ್ಧಸ್ತ್ರೀನ್ ಶರಾನ್ ನತಪರ್ವಣಃ ।
ನಿಚಖಾನೋರಸಿ ತದಾ ಸೂತಪುತ್ರಸ್ಯ ವೇಗಿತಃ ॥ ೨೨ ॥

ಆಗ ಭೀಮಸೇನನು ಬಹಳ ಕೋಪಗೊಂಡು ಬಾಗಿದ ತುದಿಯುಳ್ಳ ಬಾಣಗಳನ್ನು ಸೂತಪುತ್ರನಾದ ಕರ್ಣನ ಎದೆಯಲ್ಲಿ ನಾಟುವಂತೆ ವೇಗದಿಂದ ಪ್ರಯೋಗಿಸಿದನು.

ತೈಃ ಕರ್ಣೋಽಭ್ರಾಜತ ಶರೈರುರೋಮಧ್ಯಗತೈಸ್ತದಾ ।
ಮಹೀಧರ ಇವೋದಗ್ರಶ್ತ್ರಿಶೃಂಗೋ ಭರತರ್ಷಭ ॥ ೨೩ ॥

ಎಲೈ ಭರತಶ್ರೇಷ್ಠನೇ, ಎದೆಯಲ್ಲಿ ನಾಟಿದ ಆ ಮೂರು ಬಾಣಗಳಿಂದ ಸಹಿತನಾದ ಕರ್ಣನು ಮೂರು ಶಿಖರಗಳುಳ್ಳ ಶ್ರೇಷ್ಠವಾದ ಪರ್ವತದಂತೆ ಶೋಭಿಸಿದನು.

ಸುಸ್ರಾವ ಚಾಸ್ಯ ರುಧಿರಂ ವಿದ್ಧಸ್ಯ ಪರಮೇಷುಭಿಃ ।
ಧಾತುಪ್ರಸ್ಯಂದಿನಃ ಶೈಲಾದ್ಯಥಾ ಗೈರಿಕರಾಜಯಃ ॥ ೨೪ ॥

ಆ ಶ್ರೇಷ್ಠವಾದ ಬಾಣಗಳಿಂದ ಹೊಡೆಯಲ್ಪಟ್ಟ ಅವನ ದೇಹದಿಂದ ಪರ್ವತದಿಂದ ಗೈರಿಕಾದಿ ಧಾತುವಿನ ಧಾರೆಯು ಹರಿದಂತೆ ರಕ್ತವು ಹರಿಯಿತು.

ಕಿಂಚಿದ್ವಿಚಲಿತಃ ಕರ್ಣಃ ಸುಪ್ರಹಾರಾಭಿಪೀಡಿತಃ ।
ಸಸಾಯಕಂ ಧನುಃ ಕೃತ್ವಾ ಭೀಮಂ ವಿವ್ಯಾಧ ಮಾರಿಷ ।
ಚಿಕ್ಷೇಪ ಚ ಪುನರ್ಬಾಣಾನ್ ಶತಶೋಽಥ ಸಹಸ್ರಶಃ ॥ ೨೫ ॥

ಆ ದೊಡ್ಡ ಏಟಿನಿಂದ ಬಹಳವಾಗಿ ಪೀಡಿತನಾದ ಕರ್ಣನು ಸ್ವಲ್ಪ ವಿಚಲಿತನಾಗಿ ಪುನಃ ಧನುಸ್ಸನ್ನು ಹಿಡಿದು ಭೀಮನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಭೀಮನ ಮೇಲೆ ನೂರಾರು, ಸಾವಿರಾರು ಸಂಖ್ಯೆಯಲ್ಲಿ ಬಾಣಗಳನ್ನು ಪ್ರಯೋಗಿಸಿದನು.

ಸ ಧಾರ್ಯಮಾನಃ ಸಹಸಾ ಕರ್ಣೇನ ದೃಢಧನ್ವಿನಾ ।
ಧನುರ್ಮ್ಯಮಚ್ಛಿನತ್ಕರ್ಣಮುತ್ಸ್ಮಯನ್ ಪಾಂಡುನಂದನಃ ॥ ೨೬ ॥

ದೃಢಧನುಸ್ಸನ್ನು ಹೊಂದಿದ ಕರ್ಣನಿಂದ ಆ ರೀತಿಯಲ್ಲಿ ಮುಚ್ಚಲ್ಪಟ್ಟ ಪಾಂಡುನಂದನನಾದ ಭೀಮನು ನಗುತ್ತಾ ಕರ್ಣನ ಧನುಸ್ಸಿನ ಹೆದೆಯನ್ನು ಕತ್ತರಿಸಿದನು.

ಸಾರಥಿಂ ಚಾಸ್ಯ ಭಲ್ಲೇನ ಪ್ರಾಹಿಣೋದ್ಯಮಸಾದನಮ್ ।
ವಾಹಾಂಶ್ಚ ಚತುರಃ ಸಂಖೇ ವ್ಯಸೂಂಶ್ಚಕ್ರೇ ಮಹಾರಥಃ ॥ ೨೭ ॥

ಅವನು ಒಂದು ಭಲ್ಲದಿಂದ ಕರ್ಣನ ಸಾರಥಿಯನ್ನು ಯಮಲೋಕಕ್ಕೆ ಕಳುಹಿಸಿದನು ಮತ್ತು ಮಹಾರಥನಾದ ಅವನು ಅವನ ರಥದ ನಾಲ್ಕು ಅಶ್ವಗಳನ್ನೂ ಕೊಂದನು.

ಹತಾಶ್ವಾತ್ತು ರಥಾತ್ಕರ್ಣಃ ಸಮಾಪ್ಲುತ್ಯ ವಿಶಾಂಪತೇ ।
ಸ್ಯಂದನಂ ವೃಷಸೇನಸ್ಯ ಸಮಾರೋಹನ್ಮಹಾರಥಃ ॥ ೨೮ ॥

ಎಲೈ ರಾಜನೇ, ಮಹಾರಥನಾದ ಕರ್ಣನು ತನ್ನ ಹತವಾದ ಅಶ್ವಗಳ ರಥದಿಂದ ಹಾರಿ ವೃಷಸೇನನ ರಥವನ್ನು ಸೇರಿದನು.

ನಿರ್ಜಿತ್ಯ ತು ರಣೇ ಕರ್ಣಂ ಭೀಮಸೇನಃ ಪ್ರತಾಪವಾನ್ ।
ನನಾದ ಸುಮಹಾನಾದಂ ಪರ್ಜನ್ಯನಿನದೋಪಮಮ್ ॥ ೨೯ ॥

ಪ್ರತಾಪಶಾಲಿಯಾದ ಭೀಮಸೇನನು ಯುದ್ಧದಲ್ಲಿ ಕರ್ಣನನ್ನು ಗೆದ್ದು ಪರ್ಜನ್ಯ ಘೋಷದಂತೆ ಮಹಾನಾದವನ್ನು ಮಾಡಿದನು.

ತಸ್ಯ ತಂ ನಿನದಂ ಶ್ರುತ್ವಾ ಪ್ರಹೃಷ್ಟೋಽಭೂದ್ ಯುಧಿಷ್ಠಿರಃ ।
ಕರ್ಣಂ ಚ ನಿರ್ಜಿತಂ ಮತ್ವಾ ಭೀಮಸೇನೇನ ಭಾರತ ॥ ೩೦ ॥

ಎಲೈ ಭಾರತನೇ, ಭೀಮಸೇನನ ಆ ನಾದವನ್ನು ಕೇಳಿ ಕರ್ಣನು ಪರಾಜಿತನಾಗಿದ್ದಾನೆಂದು ತಿಳಿದು ಯುಧಿಷ್ಠಿರನು ಸಂತೋಷಗೊಂಡನು.

ಸಮಂತಾಚ್ಛಂಖನಿನದಂ ಪಾಂಡುಸೇನಾಽಕರೋತ್ ತದಾ ।
ಶತ್ರುಸೇನಾಧ್ವನಿಂ ಶ್ರುತ್ವಾ ತಾವಕಾ ಹ್ಯಪಿ ನಾನದನ್ ।
ಗಾಂಡೀವಂ ಪ್ರಾಕ್ಷಿಪತ್ಪಾರ್ಥಃ ಕೃಷ್ಣೋಽಪ್ಯಬ್ಜಮವಾದಯತ್ ॥ ೩೧ ॥

ಪಾಂಡವ ಸೇನೆಯು ಆಗ ಎಲ್ಲ ಕಡೆಗಳಲ್ಲಿಯೂ ಶಂಖನಾದವನ್ನು ಮಾಡಿತು. ಶತ್ರುಸೈನ್ಯದ ಧ್ವನಿಯನ್ನು ಕೇಳಿ ನಿನ್ನವರೂ ಶಂಖನಾದವನ್ನು ಮಾಡಿದರು. ಅರ್ಜುನನು ಗಾಂಡೀವ ಧನುಸ್ಸನ್ನು ಎಳೆದು ಘೋಷವನ್ನು ಮಾಡಿದನು. ಕೃಷ್ಣನೂ ಶಂಖವನ್ನು ಊದಿದನು.

ತಮಂತರ್ಧಾಯ ನಿನದಂ ಧ್ವನಿರ್ಭೀಮಸ್ಯ ನರ್ದತಃ ।
ಅಶ್ರೂಯತ ಮಹಾರಾಜ ಸರ್ವಸೈನ್ಯೇಷು ಭಾರತ ॥ ೩೨ ॥

ಎಲೈ ಭಾರತನೇ, ಮಹಾರಾಜನೇ, ಭೀಮಸೇನನ ಗರ್ಜನೆಯ ಧ್ವನಿಯು ಆ ಎಲ್ಲ ಶಬ್ದಗಳನ್ನೂ ಮೀರಿ ಸರ್ವಸೈನ್ಯಗಳಲ್ಲಿ ಕೇಳಿಬರುತ್ತಿದ್ದಿತು.

ತತೋ ವ್ಯಾಯಚ್ಛತಾಮಸ್ತ್ರೈಃ ಪೃಥಕ್ಪಥಗರಿಂದಮೌ ।
ಮೃದುಪೂರ್ವಂ ಚ ರಾಧೇಯೋ ದೃಢಪೂರ್ವಂ ಚ ಪಾಂಡವಃ ॥೩೩॥

ಅನಂತರ ಅರಿಂದಮರಾದ ಅವರು ಮೃದುಪೂರ್ವವಾಗಿ ಕರ್ಣನೂ, ಕ್ರೋಧಪೂರ್ವವಾಗಿ ಅರ್ಜುನನೂ ಬೇರೆ ಬೇರೆಯಾಗಿ ಅಸ್ತ್ರಗಳನ್ನು ಪ್ರಯೋಗಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುರ್ದಶಾಧಿಕಶತತಮೋಧ್ಯಾಯಃ ॥
॥ ಜಯದ್ರಥವಧಪರ್ವಣಿ ಅಷ್ಟತ್ರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೈದನೆಯ ಅಧ್ಯಾಯ

ದ್ರೋಣ-ದುರ್ಯೋಧನರ ಸಂವಾದ. ಯುಧಾಮನ್ಯು-ಉತ್ತಮೌಜರ ಜೊತೆಯಲ್ಲಿ ದುರ್ಯೋಧನನ ಯುದ್ಧ.

ಸಂಜಯಃ

ತಸ್ಮಿನ್ ವಿಲುಳಿತೇ ಸೈನ್ಯೇ ಸೈಂಧವಾಯಾರ್ಜುನೇ ಗತೇ ।
ಸಾತ್ವತೇ ಭೀಮಸೇನೇ ಚ ಪುತ್ರಸ್ತೇ ದ್ರೋಣಮಭ್ಯಯಾತ್ ।
ತ್ವರನ್ನೇಕರಥೇನೈವ ಬಹುಕೃತ್ಯಂ ವಿಚಿಂತಯನ್ ॥ ೧ ॥

ಸಂಜಯ- ಕೌರವ ಸೈನ್ಯವೆಲ್ಲವೂ ಅಸ್ತವ್ಯಸ್ತವಾಗಿ ಸೈಂಧವನನ್ನು ಹುಡುಕಿಕೊಂಡು ಅರ್ಜುನನೂ ಮತ್ತು ಅವನನ್ನು ಹುಡುಕಿಕೊಂಡು ಸಾತ್ಯಕಿ ಮತ್ತು ಭೀಮಸೇನರೂ ಹೋಗುತ್ತಿರಲು ನಿನ್ನ ಪುತ್ರನು ತ್ವರೆ ಮಾಡುತ್ತಾ ಮಾಡಬೇಕಾದ ಬಹುಕಾರ್ಯಗಳನ್ನು ಚಿಂತಿಸುತ್ತಾ ಒಂದು ರಥದಿಂದ ದ್ರೋಣರ ಬಳಿಗೆ ಹೋದನು.

ಸ ರಥಸ್ತವ ಪುತ್ರಸ್ಯ ತ್ವರಯಾ ಪರಯಾ ಯುತಃ ।
ತೂರ್ಣಮಭ್ಯಪತದ್ ದ್ರೋಣಂ ಮನೋಮಾರುತವೇಗವಾನ್ ॥ ೨ ॥

ಮನೋಮಾರುತವೇಗವುಳ್ಳ ನಿನ್ನ ಪುತ್ರನ ಆ ರಥವು ಬಹಳ ತ್ವರೆಯಿಂದ ಕೂಡಿ ಶೀಘ್ರವಾಗಿ ದ್ರೋಣರ ಬಳಿಗೆ ತಲುಪಿತು.

ಉವಾಚ ಚೈನಂ ಪುತ್ರಸ್ತೇ ಸಂರಂಭಾದ್ ರಕ್ತಲೋಚನಃ ।
ಅರ್ಜುನೋ ಭೀಮಸೇನಶ್ಚ ಸಾತ್ಯಕಿಶ್ಚಾಪರಾಜಿತಃ ॥ ೩ ॥

ವಿಜಿತ್ಯ ಸರ್ವಸೈನ್ಯಾನಿ ಸುಮಹಾಂತಿ ಮಹಾರಥಾಃ ।
ಸಂಪ್ರಾಪ್ತಾಃ ಸಿಂಧುರಾಜಸ್ಯ ಸಮೀಪಮರಿಕರ್ಶನಾಃ ।
ವ್ಯಾಯಚ್ಛಂತಿ ಚ ತತ್ರಾಪಿ ಸರ್ವ ಏವಾಪರಾಜಿತಾಃ ॥ ೪ ॥

ನಿನ್ನ ಪುತ್ರನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಅವರನ್ನು ಕುರಿತು ಮಹಾರಥರಾದ ಅರ್ಜುನ, ಭೀಮಸೇನ ಮತ್ತು ಅಪರಾಜಿತನಾದ ಸಾತ್ಯಕಿಯು ನಮ್ಮ ದೊಡ್ಡದಾದ ಸೈನ್ಯವನ್ನೆಲ್ಲಾ ಜಯಿಸಿ, ಸೈಂಧವನ ಸಮೀಪಕ್ಕೆ ಬಂದಿದ್ದಾರೆ.

ಅವರಾಜಿತರೂ, ಶತ್ರುಕರ್ಶನರೂ ಆದ ಅವರೆಲ್ಲರೂ ಅಲ್ಲಿಯೂ ಕೂಡ ಪ್ರಯತ್ನಪಟ್ಟು ಯುದ್ಧವನ್ನು ಮಾಡುತ್ತಿದ್ದಾರೆ.

ಯದಿ ತಾವದ್ರಣೇ ಪಾರ್ಥೋ ವ್ಯತಿಕ್ರಾಂತೋ ಮಹಾರಥಃ ।
ಕಥಂ ಸಾತ್ಯಕಿಭೀಮಾಭ್ಯಾಂ ವ್ಯತಿಕ್ರಾಂತೋಽಸಿ ಮಾನದ ॥ ೫ ॥

ಎಲೈ ಮಾನದರೇ, ಮಹಾರಥನಾದ ಅರ್ಜುನನು ಒಂದು ಪಕ್ಷ ನಿಮ್ಮನ್ನು ದಾಟ ಹೋದರೋ ಸಾತ್ಯಕಿ ಮತ್ತು ಭೀಮಸೇನರು ಹೇಗೆ ನಿಮ್ಮನ್ನು ದಾಟಿದರು?

ಆಶ್ಚರ್ಯಭೂತಂ ಲೋಕೇಽಸ್ಮಿನ್ ಸಮುದ್ರಸ್ಯೇವ ಶೋಷಣಮ್ ।
ನಿರ್ದಯಂ ತವ ವಿಪ್ರಾಗ್ರ್ಯ ಸಾತ್ವತೇನಾರ್ಜುನೇನ ಚ ॥ ೬ ॥

ಎಲೈ ಬ್ರಾಹ್ಮಣಶ್ರೇಷ್ಠರೇ, ಸಾತ್ಯಕಿ ಮತ್ತು ಅರ್ಜುನರಿಂದ ನಿಮ್ಮ ಪರಾಭವವು ಸಮುದ್ರದ ಶೋಷಣೆಯಂತೆ ಲೋಕದಲ್ಲಿ ಆಶ್ಚರ್ಯಕರವಾಗಿದೆ.

ತಥೈವ ಭೀಮಸೇನೇನ ಲೋಕಃ ಸಂವದತೇ ಭೃಶಮ್ ।
ಕಥಂ ದ್ರೋಣೋ ಜಿತಃ ಸಂಖೇ ಧನುರ್ವೇದಸ್ಯ ಪಾರಗಃ ॥ ೭ ॥

ಹಾಗೆಯೇ ಧನುರ್ವೇದ ಪಾರಂಗತನಾದ ನಿಮ್ಮನ್ನು ಭೀಮಸೇನನು ಹೇಗೆ ಜಯಿಸಿದನೆಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ.

ನಾಶ ಏವ ತು ಮೇ ನೂನಂ ಮಂದಭಾಗ್ಯಸ್ಯ ಸಂಯುಗೇ ।
ಯತ್ರ ತ್ವಾಂ ಪುರುಷವ್ಯಾಘ್ರಮತಿಕ್ರಾಂತಾಸ್ತ್ರಯೋ ರಥಾಃ ॥ ೮ ॥

ಪುರುಷವ್ಯಾಘ್ರರಾದ ನಿಮ್ಮನ್ನು ಮೂವರು ರಥರು ದಾಟಿಹೋದಮೇಲೆ ಮಂದಭಾಗ್ಯನಾದ ನನಗೆ ಯುದ್ಧದಲ್ಲಿ ಖಂಡಿತವಾಗಿ ನಾಶವೇ ಉಂಟಾಗುವುದೆಂದು ತೋರುತ್ತದೆ.

ಏವಂ ಗತೇ ತು ಕೃತ್ಯೇಽಸ್ಮಿನ್ ಬ್ರೂಹಿ ಯತ್ತೇ ವಿವಕ್ಷಿತಮ್ ।
ಯದ್ ಗತಂ ಗತಮೇವೇಹ ಶೇಷಂ ಚಿಂತಯ ಮಾನದ ॥ ೯ ॥

ಪರಿಸ್ಥಿತಿಯು ಹೀಗಿರುವಾಗ ಈಗ ಮಾಡಬೇಕಾದ ಕಾರ್ಯದ ವಿಷಯದಲ್ಲಿ ನಿಮ್ಮ ಅಭಿಪ್ರಾಯವು ಏನೆಂದು ಹೇಳಿ ಕಳೆದುದು ಕಳದೇ ಹೋಗಿದೆ. ಮಾನದರೇ, ಉಳಿದುದನ್ನು ವಿಚಾರ ಮಾಡಿ.

ಯತ್ ಕೃತ್ಯಂ ಸಿಂಧುರಾಜಸ್ಯ ಪ್ರಾಪ್ತಕಾಲಮನಂತರಮ್ ।
ತದ್ಬ್ರವೀತು ಭವಾನ್ ಕ್ಷಿಪ್ರಂ ಸಾಧು ತತ್ ಸಂವಿಧೀಯತಾಮ್ ॥೧೦॥

ಸೈಂಧವನ ವಿಷಯದಲ್ಲಿ ತಕ್ಷಣ ಮಾಡಬೇಕಾದ ಕಾರ್ಯವು ಯಾವುದು ಎಂದು ಹೇಳಿ. ನೀವು ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡಿ.

ದ್ರೋಣಃ

ಚಿಂತ್ಯಂ ಬಹು ಮಹಾರಾಜ ಕೃತ್ಯಂ ಯತ್ತತ್ರ ಮೇ ಶೃಣು ।
ತ್ರಯೋ ಹಿ ಸಮತಿಕ್ರಾಂತಾಃ ಪಾಂಡವಾನಾಂ ಮಹಾರಥಾಃ ।
ಯಾವದೇವ ಭಯಂ ಪಶ್ಚಾತ್ ತಾವದೇಷಾಂ ಪುರಃಸರಮ್ ॥ ೧೧ ॥

ದ್ರೋಣರು– ಮಹಾರಾಜನೇ, ಚಿಂತಿಸಬೇಕಾದುದು ಬಹಳವಿದೆ. ಮಾಡಬೇಕಾದ ಕಾರ್ಯದ ಬಗ್ಗೆ ಹೇಳುತ್ತೇನೆ, ಅದನ್ನು ಕೇಳು. ಪಾಂಡವರ ಮೂವರು ಮಹಾರಥರು ನಮ್ಮನ್ನು ದಾಟಿ ಹೋಗಿದ್ದಾರೆ. ಹಿಂದೆ ಸೈಂಧವನಿರುವಲ್ಲಿ ಎಷ್ಟು ಭಯವಿದೆಯೋ ವ್ಯೂಹದ ಮುಂಭಾಗದಲ್ಲಿಯೂ ಅವರಿಂದ ಅಷ್ಟೇ ಭಯವಿದೆ.

ತದ್ ಗರೀಯಸ್ತರಂ ಮನ್ಯೇ ಯತ್ರ ಕೃಷ್ಣಧನಂಜಯೌ ।
ಸಾ ಪುರಸ್ತಾಚ್ಚ ಪಶ್ಚಾಚ್ಚ ಗೃಹೀತಾ ಭಾರತೀ ಚಮೂಃ ॥ ೧೨ ॥

ಎಲ್ಲಿ ಕೃಷ್ಣಾರ್ಜುನರು ಇದ್ದಾರೆಯೋ ಅಲ್ಲಿ ದ್ರೋಣರ ವ್ಯೂಹದ ಮುಂಭಾಗದಲ್ಲಿ ಮತ್ತು ಸೈಂಧವನ ಸಮೀಪದಲ್ಲಿ ಕೌರವ ಸೇನೆಯು ಹಿಡಿಯಲ್ಪಟ್ಟಿರುವುದರಿಂದ ಆ ಕಾರ್ಯವು ಶ್ರೇಷ್ಠವೆಂದು ಭಾವಿಸುತ್ತೇನೆ.

ತತ್ರ ಕೃತ್ಯಮಹಂ ಮನ್ಯೇ ಸೈಂಧವಸ್ಯಾಭರಕ್ಷಣಮ್ ।
ಸ ನೋ ರಕ್ಷ್ಯತಮಸ್ತಾತ ಕ್ರುದ್ಧಾದ್ ಭೀತೋ ಧನಂಜಯಾತ್ ॥ ೧೩ ॥

ಅವೆರಡರಲ್ಲಿ ಸೈಂಧವನ ರಕ್ಷಣೆಯು ತಕ್ಷಣ ಮಾಡಬೇಕಾದ ಕಾರ್ಯವೆಂದು ಭಾವಿಸುತ್ತೇನೆ. ಎಲೈ ಪ್ರೀತಿಪಾತ್ರನೇ, ಕ್ರುದ್ಧನಾದ ಅರ್ಜುನನಿಂದ ಭೀತನಾದ ಅವನನ್ನು ನಾವು ಎಲ್ಲರಿಗಿಂತಲೂ ಹೆಚ್ಚಾಗಿ ರಕ್ಷಿಸಬೇಕು.

ಗತೌ ಹಿ ಸೈಂಧವಂ ವೀರೌ ಯುಯುಧಾನವೃಕೋದರೌ ।
ಸಂಪ್ರಾಪ್ತಂ ತದಿದಂ ದ್ಯೂತಂ ಯತ್ತಚ್ಛಕುನಿಬುದ್ಧಿಜಮ್ ॥ ೧೪ ॥

ವೀರರಾದ ಸಾತ್ಯಕಿ ಮತ್ತು ಭೀಮಸೇನರು ಸೈಂಧವನ ಬಳಿಗೆ ಹೋಗಿದ್ದಾರೆ. ಶಕುನಿಯ ಬುದ್ಧಿಯಿಂದ ಉಂಟಾದ ನಿಜವಾದ ದ್ಯೂತವು ಈಗ ಪ್ರಾರಂಭವಾಗಿದೆ.

ನ ಸಭಾಯಾಂ ಜಯೋ ವೃತ್ತೋ ನಾಪಿ ತತ್ರ ಪರಾಜಯಃ ।
ಇಹ ನೋ ಗ್ಲಹಮಾನಾನಾಮದ್ಯ ತಾತ ಜಯಾಜಯೌ ॥ ೧೫ ॥

ಎಲೈ ಪ್ರೀತಿಪಾತ್ರನೇ, ಹಿಂದೆ ಸಭೆಯಲ್ಲಿ ಜಯವೂ ಉಂಟಾಗಲಿಲ್ಲ, ಪರಾಜಯವೂ ಉಂಟಾಗಲಿಲ್ಲ. ಆದರೆ ಈ ದಿನ ಇಲ್ಲಿ ಪಣವಿಟ್ಟು ಆಡುವ ನಮಗೆ ಜಯ-ಪರಾಜಯಗಳು ಉಂಟಾಗುವುವು.

ಯಾನ್ ಸ್ಮ ತಾನ್ ಗ್ಲಹತೇ ಘೋರಾನ್ ಶಕುನಿಃ ಕುರುಸಂಸದಿ ।
ಅಕ್ಷಾನ್ ಸಮ್ಮನ್ಯಮಾನಃ ಸ ಪ್ರಾಕ್ ಶರಾಸ್ತೇ ದುರಾಸದಾಃ ॥ ೧೬ ॥

ಹಿಂದೆ ಶಕುನಿಯು ಕುರುಸಭೆಯಲ್ಲಿ ಯಾವ ಘೋರವಾದ ದಾಳಗಳನ್ನು ದಾಳವೆಂದು ತಿಳಿದು ದ್ಯೂತವನ್ನು ಆಡಿದನೋ ಅವು ನಿಜವಾಗಿ ಸಮೀಪಿಸಲು ಅಸಾಧ್ಯವಾದ ಬಾಣಗಳು.

ಯತ್ರ ತೇ ಬಹವಸ್ತಾತ ಕುರವಃ ಪರ್ಯವಸ್ಥಿತಾಃ ।
ಸೇನಾಂ ದುರೋದರಂ ವಿದ್ಧಿ ಶರಾನಕ್ಷಾನ್ ವಿಶಾಂಪತೇ ॥ ೧೭ ॥

ಪ್ರೀತಿಪಾತ್ರನೇ, ರಾಜನೇ, ಬಹಳ ಜನ ಕುರುಗಳು ನಿಂತಿರುವ ಈ ಸೇನೆಯನ್ನು ದ್ಯೂತವೆಂದು (ಹಾಸು) ತಿಳಿ. ಇಲ್ಲಿ ಬಾಣಗಳೇ ದಾಳಗಳು.

ಗ್ಲಹಂ ಚ ಸೈಂಧವಂ ರಾಜನ್ತತ್ರ ದ್ಯೂತಸ್ಯ ನಿಶ್ಚಯಃ ।
ಸೈಂಧವೇ ಹಿ ಮಹಾದ್ಯೂತಂ ಸಮಾಸಕ್ತಂ ಪರೈಃ ಸಹ ॥ ೧೮ ॥

ರಾಜನೇ, ಇಲ್ಲಿ ಸೈಂಧವನೇ ಪಣ. ದ್ಯೂತದ ಜಯಪರಾಜಯಗಳು ಇಲ್ಲಿ ನಿರ್ಧರಿಸಲ್ಪಡುತ್ತವೆ. ಸೈಂಧವನನ್ನು ಪಣವಾಗಿ ಭಾವಿಸಿ ನಮಗೆ ಪಾಂಡವರ ಜೊತೆಯಲ್ಲಿದೊಡ್ಡ ದ್ಯೂತವು ಪ್ರಸಕ್ತವಾಗಿದೆ.

ಅತ್ರ ಸರ್ವೇ ಮಹಾರಾಜ ತ್ಯಕ್ತ್ವಾ ಜೀವಿತಮಾತ್ಮನಃ ।
ಸೈಂಧವಸ್ಯ ರಣೇ ರಕ್ಷಾಂ ವಿಧಿವತ್ ಕರ್ತುಮರ್ಹಥ ।
ತತ್ರ ನೋ ಗ್ಲಹಮಾನಾನಾಂ ಧ್ರುವೌ ತಾತ ಜಯಾಜಯೌ ॥ ೧೯ ॥

ಎಲೈ ಮಹಾರಾಜನೇ, ಎಲ್ಲರೂ ತಮ್ಮ ಜೀವಿತದ ಆಸೆಯನ್ನು ತೊರೆದು ರಣರಂಗದಲ್ಲಿ ಶಾಸ್ತ್ರೋಕ್ತ ರೀತಿಯಲ್ಲಿ ಸೈಂಧವನ ರಕ್ಷಣೆ ಮಾಡುವುದು ಸೂಕ್ತವಾದುದು. ದ್ಯೂತವನ್ನಾಡುವ ನಮಗೆ ಅಲ್ಲಿ ಜಯಪರಾಜಯಗಳು ಸಂಸಕ್ತವಾಗಿವೆ.

ಯತ್ರ ತೇ ಪರಮೇಷ್ವಾಸಾ ಯತ್ತಾ ರಕ್ಷಂತಿ ಸೈಂಧವಮ್ ।
ತತ್ರ ಯಾಹಿ ಸ್ವಯಂ ಶೀಘ್ರಂ ತಾಂಶ್ಚ ರಕ್ಷಸ್ವ ರಕ್ಷಿಣಃ ॥ ೨೦ ॥

ಎಲ್ಲಿ ಆ ಮಹಾಧನುರ್ಧಾರಿಗಳು ಪ್ರಯತ್ನಪಟ್ಟು ಸೈಂಧವನನ್ನು ರಕ್ಷಿಸುತ್ತಿದ್ದಾರೆಯೋ ಅಲ್ಲಿ ನೀನು ಸ್ವತಃ ಶೀಘ್ರವಾಗಿ ಹೋಗು. ಅವನ ರಕ್ಷಕರನ್ನೂ ರಕ್ಷಿಸು.

ಇಹೈವ ತ್ವಹಮಾಸಿಷ್ಯೇ ಪ್ರೇಷಯಿಷ್ಯಾಮಿ ಚಾಪರಾನ್ ।
ನಿರೋತ್ಸ್ಯಾಮಿ ಚ ಪಾಂಚಾಲಾನ್ ಸಹಿತಾನ್ ಪಾಂಡುಸೃಂಜಯೈಃ ॥

ನಾನು ಇಲ್ಲಿಯೇ ಇದ್ದು ಉಳಿದವರನ್ನು ಅಲ್ಲಿಗೆ ಕಳುಹಿಸುವೆನು. ಪಾಂಡು-ಸೃಂಜಯರಿಂದ ಸಹಿತರಾದ ಪಾಂಚಾಲರನ್ನು ನಾನು ಇಲ್ಲಿ ತಡೆಯುವೆನು.

ತತೋ ದುರ್ಯೋಧನಃ ಪ್ರಾಯಾತ್ ತೂರ್ಣಮಾಚಾರ್ಯಶಾಸನಾತ್।
ಉದ್ಯಮ್ಯಾತ್ಮಾನಮುಗ್ರಾಯ ಕರ್ಮಣೇ ಸಪದಾನುಗಃ ॥ ೨೨ ॥

ಆಗ ದುರ್ಯೋಧನನು ಆಚಾರ್ಯರ ಅಪ್ಪಣೆಯಂತೆ ತನ್ನನ್ನು ಕಾರ್ಯೋನ್ಮುಖನನ್ನಾಗಿ ಮಾಡಿಕೊಂಡು, ಉಗ್ರವಾದ ಕರ್ಮವನ್ನು ಮಾಡಲು ತನ್ನ ಅನುಯಾಯಿಗಳ ಜೊತೆಯಲ್ಲಿ ಶೀಘ್ರವಾಗಿ ಹೊರಟನು.

ಚಕ್ರರಕ್ಷೌ ತು ಪಾಂಚಾಲ್ಯೌ ಯುಧಾಮನ್ಯೂತ್ತಮೌಜಸೌ ।
ಬಾಹ್ಯೇನ ಸೇನಾಮಭ್ಯೇತ್ಯ ಜಗ್ಮತುಃ ಸವ್ಯಸಾಚಿನಮ್ ॥ ೨೩ ॥

ಚಕ್ರರಕ್ಷಕರಾದ ಪಾಂಚಾಲದೇಶದ ಯುಧಾಮನ್ಯು ಮತ್ತು ಉತ್ತಮೌಜರು ವ್ಯೂಹ ಮುಖದಲ್ಲಿ ಹಿಂದೆ ತಡೆಯಲ್ಪಟ್ಟುದರಿಂದ ಸೇನೆಯ ಹೊರಭಾಗದಿಂದ ಬಂದು ಅರ್ಜುನನನ್ನು ಸಮೀಪಿಸಿದರು.

ತೌ ಹಿ ಪೂರ್ವಂ ಮಹಾರಾಜ ವಾರಿತೌ ಕೃತವರ್ಮಣಾ ।
ಪ್ರವಿಷ್ಟೇ ತ್ವರ್ಜುನೇ ರಾಜಂಸ್ತವ ಸೈನ್ಯಂ ಯುಯುತ್ಸಯಾ ॥ ೨೪ ॥

ಎಲೈ ಮಹಾರಾಜನೇ, ನಿನ್ನ ಸೈನ್ಯದ ಜೊತೆಯಲ್ಲಿ ಯುದ್ಧ ಮಾಡಲು ಬಯಸಿ ಅರ್ಜುನನು ಪ್ರವೇಶಿಸಿದಾಗ ಅವನನ್ನು ಹಿಂಬಾಲಿಸಿದ ಅವರಿಬ್ಬರೂ ಕೃತವರ್ಮನಿಂದ ತಡೆಯಲ್ಪಟ್ಟರು.

ತಾಭ್ಯಾಂ ದುರ್ಯೋಧನಃ ಸಾರ್ಧಮಗಚ್ಛದ್ ಯುದ್ಧಮುತ್ತಮಮ್ ।
ತ್ವರಿತಸ್ತ್ವರಮಾಣಾಭ್ಯಾಂ ಭ್ರಾತೃಭ್ಯಾಂ ಭಾರತೋ ಬಲೀ ॥ ೨೫ ॥

ತ್ವರೆಯಿಂದ ಕೂಡಿದ ಬಲಿಷ್ಠನಾದ ದುರ್ಯೋಧನನು ತ್ವರೆಯಿಂದ ಕೂಡಿದ ಸಹೋದರರಾದ ಅವರಿಬ್ಬರ ಜೊತೆಯಲ್ಲಿ ಶ್ರೇಷ್ಠವಾದ ಯುದ್ಧವನ್ನು ಮಾಡಿದನು.

ತಾವಭಿದ್ರವತಾಮೇನಮುಭಾವುದ್ಯತಕಾರ್ಮುಕೌ ।
ಮಹಾರಥಸಮಾಖ್ಯಾತೌ ಕ್ಷತ್ರಿಯಪ್ರವರೌ ಯುಧಿ ॥ ೨೬ ॥

ಮಹಾರಥರೆಂದು ಪರಿಗಣಿಸಲ್ಪಟ್ಟ, ಕ್ಷತ್ರಿಯಶ್ರೇಷ್ಠರಾದ ಅವರಿಬ್ಬರು ರಣರಂಗದಲ್ಲಿ ತಮ್ಮ ಧನುಸ್ಸುಗಳನ್ನು ಎತ್ತಿ ದುರ್ಯೋಧನನ ಮೇಲೆ ಎರಗಿದರು.

ಯುಧಾಮನ್ಯುಸ್ತು ಸಂಕ್ರುದ್ಧಃ ಶರಾಂಶ್ತ್ರಿಂಶತಮಾಯಸಾನ್ ।
ವ್ಯಸೃಜತ್ ತವ ಪುತ್ರಸ್ಯ ತ್ವರಮಾಣಃ ಸ್ತನಾಂತರೇ ॥ ೨೭ ॥

ಕೋಪಗೊಂಡ ಯುಧಾಮನ್ಯುವಾದರೋ ತ್ವರೆಯಿಂದ ಕೂಡಿದವನಾಗಿ ಮೂವತ್ತು ಕಬ್ಬಿಣದ ಬಾಣಗಳಿಂದ ನಿನ್ನ ಪುತ್ರನನ್ನು ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ದುರ್ಯೋಧನೋಽಪಿ ರಾಜೇಂದ್ರ ಪಾಂಚಾಲ್ಯಸ್ಯೋತ್ತಮೌಜಸಃ ।
ಜಘಾನ ಚತುರಶ್ಚಾಶ್ವಾನುಭೌ ಚ ಪಾರ್ಷ್ಣಿಸಾರಥೀ ॥ ೨೮ ॥

ಎಲೈ ರಾಜೇಂದ್ರನೇ, ದುರ್ಯೋಧನನೂ ಸಹ ಪಾಂಚಾಲ ದೇಶದ ಉತ್ತಮೌಜನ ರಥದ ನಾಲ್ಕು ಆಶ್ವಗಳನ್ನು ಮತ್ತು ಇಬ್ಬರು ರಥಸಾರಥಿಗಳನ್ನು ಕೊಂದನು.

ಉತ್ತಮೌಜಾ ಹತಾಶ್ವಸ್ತು ಹತಸೂತಶ್ಚ ಸಂಯುಗೇ ।
ಆರುರೋಹ ರಥಂ ಭ್ರಾತುರ್ಯುಧಾಮನ್ಯೋರಭ ತ್ವರನ್ ॥ ೨೯ ॥

ತನ್ನ ಅಶ್ವಗಳನ್ನೂ, ಸೂತನನ್ನೂ ಕಳೆದುಕೊಂಡ ಉತ್ತಮೌಜನು ರಣರಂಗದಲ್ಲಿ ತ್ವರೆಯಿಂದ ಯುಧಾಮನ್ಯುವಿನ ರಥವನ್ನು ಏರಿದನು.

ಸ ರಥಂ ಪ್ರಾಪ್ಯ ತಂ ಭ್ರಾತುರ್ದುರ್ಯೋಧನಹಯಾನ್ ಶರೈಃ ।
ಬಹುಭಿಸ್ತಾಡಯಾಮಾಸ ತೇ ಹತಾಃ ಪ್ರಾಪತನ್ ಭುವಿ ॥ ೩೦ ॥

ಅವನು ತನ್ನ ಸಹೋದರನ ರಥವನ್ನು ಸೇರಿ ದುರ್ಯೋಧನನ ರಥದ ಅಶ್ವಗಳನ್ನು ಅನೇಕ ಬಾಣಗಳಿಂದ ಹೊಡೆದನು. ಅವು ಮೃತವಾಗಿ ಭೂಮಿಯ ಮೇಲೆ ಬಿದ್ದವು.

ಹಯೇಷು ಪತಿತೇಷ್ವಸ್ಯ ಚಿಚ್ಛೇದ ಪರಮೇಷುಣಾ ।
ಯುಧಾಮನ್ಯುರ್ಧನುಃ ಶೀಘ್ರಂ ಶರಾವಾಪಂ ಚ ಸಂಯುಗೇ ॥ ೩೧ ॥

ಅಶ್ವಗಳು ಭೂಮಿಯ ಮೇಲೆ ಬೀಳುತ್ತಿರಲು ಯುಧಾಮನ್ಯುವು ಶೀಘ್ರವಾಗಿ ಒಂದು ಶ್ರೇಷ್ಠವಾದ ಬಾಣದಿಂದ ದುರ್ಯೋಧನನ ಧನುಸ್ಸನ್ನು ಮತ್ತು ಬತ್ತಳಿಕೆಯನ್ನು ಕತ್ತರಿಸಿದನು.

ಹತಾಶ್ವಸೂತಾತ್ ಸ ರಥಾದವಪ್ಲುತ್ಯ ಮಹಾರಥಃ ।
ಗದಾಮಾದಾಯ ತೇ ಪುತ್ರಃ ಪಾಂಚಾಲ್ಯಾವಭ್ಯಧಾವತ ॥ ೩೨ ॥

ಅಶ್ವ-ಸೂತರನ್ನು ಕಳೆದುಕೊಂಡ ಮಹಾರಥನಾದ ನಿನ್ನ ಪುತ್ರನು ರಥದಿಂದ ಕೆಳಗೆ ಹಾರಿ ಗದೆಯನ್ನು ಹಿಡಿದು ಪಾಂಚಾಲದೇಶದ ಅವರಿಬ್ಬರ ಮೇಲೆ ಧಾವಿಸಿದನು.

ತಮಾಪತಂತಂ ಸಂಪ್ರೇಕ್ಷ್ಯ ಕ್ರುದ್ಧಂ ಪರಪುರಂಜಯಮ್ ।
ಅವಪ್ಲುತೌ ರಥೋಪಸ್ಥಾದ್ ಯುಧಾಮನ್ಯೂತ್ತಮೌಜಸೌ ॥ ೩೩ ॥

ಪರಪುರಂಜಯನಾದ, ಕ್ರುದ್ಧನಾದ ಅವನು ತಮ್ಮೆಡೆಗೆ ಬರುತ್ತಿರುವುದನ್ನು ನೋಡಿ ಯುಧಾಮನ್ಯು ಮತ್ತು ಉತ್ತಮೌಜರು ತಮ್ಮ ರಥಪೀಠದಿಂದ ಕೆಳಗೆ ಹಾರಿದರು.

ತತಃ ಸ ಹೇಮಚಿತ್ರಂ ತಂ ಸ್ಯಂದನಪ್ರವರಂ ಗದೀ ।
ಗದಯಾ ಪೋಥಯಾಮಾಸ ಸಾಶ್ವಸೂತಧ್ವಜಂ ರಣೇ ॥ ೩೪ ॥

ಆಗ ಗದೆಯನ್ನು ಹಿಡಿದಿದ್ದ ದುರ್ಯೋಧನನು ಸುವರ್ಣಾಲಂಕೃತವಾದ ಅಶ್ವ-ಸೂತ-ಧ್ವಜಗಳಿಂದ ಕೂಡಿದ ಅವರ ಶ್ರೇಷ್ಠವಾದ ರಥವನ್ನು ಗದೆಯಿಂದ ಹೊಡೆದು ಪುಡಿಮಾಡಿದನು.

ಹತ್ವಾ ಚೈನಂ ಸ ಪುತ್ರಸ್ತೇ ಹತಾಶ್ವೋ ಹತಸಾರಥಿಃ ।
ಮದ್ರರಾಜರಥಂ ತೂರ್ಣಮಾರುರೋಹ ಪರಂತಪಃ ॥ ೩೫ ॥

ರಥವನ್ನು ವಿನಾಶ ಮಾಡಿ, ಅಶ್ವಗಳನ್ನೂ ಮತ್ತು ಸಾರಥಿಯನ್ನೂ ಕಳೆದುಕೊಂಡಿದ್ದ ಪರಂತಪನಾದ ನಿನ್ನ ಪುತ್ರನು ಶೀಘ್ರವಾಗಿ ಶಲ್ಯನ ರಥವನ್ನು ಏರಿದನು.

ಪಾಂಚಾಲಾನಾಂ ತು ಮುಖ್ಯೌ ತೌ ರಾಜಪುತ್ರೌ ಮಹಾಬಲೌ ।
ರಥಮನ್ಯಂ ಸಮಾರುಹ್ಯ ಧನಂಜಯಮಭೀಯತುಃ ॥ ೩೬ ॥

ಮಹಾಬಲರೂ, ಪಾಂಚಾಲ ದೇಶದ ರಾಜಕುಮಾರರೂ ಮತ್ತು ಪ್ರಧಾನರೂ ಆದ ಯುಧಾಮನ್ಯು ಮತ್ತು ಉತ್ತಮೌಜರು ಇನ್ನೊಂದು ರಥವನ್ನು ಏರಿ ಅರ್ಜುನನ ಬಳಿಗೆ ಹೋದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚದಶಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಏಕೋನಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾರನೆಯ ಅಧ್ಯಾಯ

ಭೀಮನಿಂದ ಕರ್ಣನ ಪರಾಜಯ.

ಧೃತರಾಷ್ಟ್ರಃ

ಯೌ ತೌ ಕರ್ಣಶ್ಚ ಭೀಮಶ್ಚ ಸಂಪ್ರಯುದ್ಧೌ ಮಹಾಬಲೌ ।
ಅರ್ಜುನಸ್ಯ ರಥೋಪಾಂತೇ ಕೀದೃಶಃ ಸೋಽಭವದ್ ರಣಃ ॥ ೧ ॥

ಧೃತರಾಷ್ಟ್ರ– ಮಹಾಬಲರಾದ ಕರ್ಣ ಮತ್ತು ಭೀಮರು ಅರ್ಜುನನ ರಥ ಸಮೀಪದಲ್ಲಿ ಯುದ್ಧ ಮಾಡಿದರಷ್ಟೆ! ಆ ಯುದ್ಧವು ಹೇಗಿದ್ದಿತು?

ಪೂರ್ವಂ ಹಿ ನಿರ್ಜಿತಃ ಕರ್ಣೋ ಭೀಮಸೇನೇನ ಸಂಯುಗೇ ।
ಕಥಂ ಭೂಯಸ್ತು ರಾಧೇಯೋ ಭೀಮಮಾಗಾನ್ಮಹಾರಥಃ ॥ ೨ ॥

ಹಿಂದೆ ಕರ್ಣನು ಯುದ್ಧದಲ್ಲಿ ಭೀಮಸೇನನಿಂದ ಪರಾಜಿತನಾಗಿದ್ದನು. ಮಹಾರಥನಾದ ರಾಧೇಯನು ಪುನಃ ಹೇಗೆ ಭೀಮನ ಜೊತೆಯಲ್ಲಿ ಯುದ್ಧಕ್ಕೆ ಹೋದನು?

ಭೀಮೋ ವಾ ಸೂತತನಯಂ ಪ್ರತ್ಯುದ್ಯಾತಃ ಕಥಂ ರಣೇ ।
ಮಹಾರಥಸಮಾಖ್ಯಾತಂ ಪೃಥಿವ್ಯಾಂ ಪ್ರವರಂ ರಥಮ್ ॥ ೩ ॥

ಭೀಮನಾದರೋ ಮಹಾರಥನೆಂದು ಪರಿಖ್ಯಾತನಾದ ಪೃಥಿವಿಯಲ್ಲಿ ಶ್ರೇಷ್ಠ ರಥನಾದ ಕರ್ಣನ ಜೊತೆಯಲ್ಲಿ ಹೇಗೆ ಯುದ್ಧಕ್ಕೆ ಹೋದನು?

ಭೀಷ್ಮದ್ರೋಣಾವತಿಕ್ರಮ್ಯ ಧರ್ಮಪುತ್ರೋ ಯುಧಿಷ್ಠಿರಃ ।
ನಾನ್ಯತೋ ಭಯಮಾದತ್ತ ವಿನಾ ಕರ್ಣಂ ಧನುರ್ಧರಮ್ ॥ ೪ ॥

ಧರ್ಮಪುತ್ರನಾದ ಯುಧಿಷ್ಠಿರನು ಭೀಷ್ಮ-ದ್ರೋಣರನ್ನು ಬಿಟ್ಟರೆ ಧನುರ್ಧಾರಿಯಾದ ಕರ್ಣನನ್ನು ಬಿಟ್ಟು ಬೇರೆ ಯಾರಿಂದಲೂ ಭಯವನ್ನು ಪೊಂದಲಿಲ್ಲ.

ಭಯಾನ್ನ ಶೇತೇ ಸತತಂ ಚಿಂತಯನ್ ವೈ ಮಹಾರಥಮ್ ।
ತಂ ಕಥಂ ಸೂತಪುತ್ರಂ ಹಿ ಭೀಮೋಽಯುದ್ಧ್ಯತ ಸಂಯುಗೇ ॥ ೫ ॥

ಅವನು ಮಹಾರಥನಾದ ಕರ್ಣನನ್ನು ಚಿಂತಿಸುತ್ತಾ ಭಯದಿಂದ ರಾತ್ರಿಯಲ್ಲಿ ನಿದ್ರೆಯನ್ನೇ ಮಾಡುವುದಿಲ್ಲ. ಅಂತಹ ಸೂತಪುತ್ರನಾದ ಕರ್ಣನ ಜೊತೆಯಲ್ಲಿ ಭೀಮನು ಹೇಗೆ ಯುದ್ಧವನ್ನು ಮಾಡಿದನು?

ಬ್ರಹ್ಮಣ್ಯಂ ವೀರ್ಯಸಂಪನ್ನಂ ಸಮರೇಷ್ವನಿವರ್ತಿನಮ್ ।
ಕಥಂ ಕರ್ಣಂ ಯುಧಾಂಶ್ರೇಷ್ಠಂ ಭೀಮೋಽಯುದ್ಧ್ಯತ ಸಂಯುಗೇ ॥

ಬ್ರಾಹ್ಮಣರಲ್ಲಿ ವಾತ್ಸಲ್ಯವುಳ್ಳವನೂ, ವೀರ್ಯಸಂಪನ್ನನೂ, ಯುದ್ಧದಲ್ಲಿ ಹಿಮ್ಮೆಟ್ಟದವನೂ, ಯೋಧರಲ್ಲಿ ಶ್ರೇಷ್ಠನಾದವನೂ ಆದ ಕರ್ಣನ ಜೊತೆಯಲ್ಲಿ ಭೀಮಸೇನನು ಹೇಗೆ ಯುದ್ಧವನ್ನು ಮಾಡಿದನು?

ಯೌ ತೌ ಸಮೀಯತುರ್ವೀರಾವರ್ಜುನಸ್ಯ ರಥಂ ಪ್ರತಿ ।
ಕಥಂ ನು ತಾವಯುದ್ಧ್ಯೇತಾಂ ಸೂತಪುತ್ರವೃಕೋದರೌ ॥ ೭ ॥

ವೀರರಾದ ಯಾವ ಭೀಮ ಮತ್ತು ಕರ್ಣರು ಅರ್ಜುನನ ರಥದ ಬಳಿಯಲ್ಲಿ ಸಂಧಿಸಿದರೋ ಅವರು ಹೇಗೆ ಯುದ್ಧವನ್ನು ಮಾಡಿದರು?

ಭ್ರಾತೃತ್ವಂ ದರ್ಶಿತಂ ಪೂರ್ವಂ ಫಲ್ಗುನೇ ಚಾಪಿ ಸ ಸೂತಜಃ ।
ಕಥಂ ಭೀಮೇನ ಯುಯುಧೇ ಕುಂತ್ಯಾ ವಾಕ್ಯಮನುಸ್ಮರನ್ ॥ ೮ ॥

ಕರ್ಣನು ಹಿಂದೆ ಸೋದರಸ್ನೇಹವನ್ನು ಮತ್ತು ದಯೆಯನ್ನು ತೋರಿಸಿದ್ದಾನೆ. ಆಂತಹ ಕರ್ಣನು ಕುಂತಿಯ ವಾಕ್ಯವನ್ನು ಸ್ಮರಿಸಿ, ಭೀಮನ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದನು?

ಭೀಮೋ ವಾ ಸೂತಪುತ್ರೇಣ ಸ್ಮರನ್ ವೈರಂ ಪುರಾ ಕೃತಮ್ ।
ಸೋಽಯುದ್ಧ್ಯತ ಕಥಂ ವೀರಃ ಕರ್ಣೇನ ಸಹ ಸಂಯುಗೇ ॥ ೯ ॥

ವೀರನಾದ ಭೀಮನೂ ಸಹ ಕರ್ಣನ ಜೊತೆಯಲ್ಲಿ ಹಿಂದೆ ಮಾಡಿದ ವೈರವನ್ನು ಸ್ಮರಿಸುತ್ತಾ ಅವನ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದನು?

ಆಶಾಸ್ತೇ ಚ ಸದಾ ಸೂತ ಪುತ್ರೋ ದುರ್ಯೋಧನೋ ಮಮ ।
ಕರ್ಣೋ ಜೇಷ್ಯತಿ ಸಂಗ್ರಾಮೇ ಸಹಿತಾನ್ ಪಾಂಡವಾನಿತಿ ॥ ೧೦ ॥

ಎಲೈ ಸೂತನೇ, ನನ್ನ ಪುತ್ರನಾದ ದುರ್ಯೋಧನನು ಯುದ್ಧದಲ್ಲಿ ಕರ್ಣನು ಎಲ್ಲ ಪಾಂಡವರನ್ನೂ ಜಯಿಸುವನು ಎಂದು ಯಾವಾಗಲೂ ಆಶಿಸುತ್ತಾನೆ.

ಜಯಾಶಾ ಯತ್ರ ಮಂದಸ್ಯ ಪುತ್ರಸ್ಯ ಮಮ ಸಂಯುಗೇ ।
ಸ ಕಥಂ ಭೀಮಕರ್ಮಾಣಂ ಭೀಮಸೇನಮಯುದ್ಧ್ಯತ ॥ ೧೧ ॥

ಯಾವ ಕರ್ಣನಲ್ಲಿ ಮಂದನಾದ ನನ್ನ ಪುತ್ರನ ಜಯದ ಆಸೆಯು ಕೇಂದ್ರೀಕೃತವಾಗಿದೆಯೋ ಅಂತಹ ಕರ್ಣನು ಭಯಂಕರವಾದ ಕರ್ಮವನ್ನುಳ್ಳ ಭೀಮಸೇನನ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದನು?

ಯಂ ಸಮಾಶ್ರಿತ್ಯ ಪುತ್ರೈರ್ಮೇ ಕೃತಂ ವೈರಂ ಮಹಾರಥೈಃ ।
ತಂ ಸೂತತನಯಂ ತಾತ ಕಥಂ ಭೀಮೋ ಹ್ಯಯೋಧಯತ್ ॥ ೧೨ ॥

ಎಲೈ ಪ್ರೀತಿಪಾತ್ರನೇ, ಯಾವ ಕರ್ಣನನ್ನು ಆಶ್ರಯಿಸಿ ಮಹಾರಥರಾದ ನನ್ನ ಪುತ್ರರು ವೈರವನ್ನು ಮಾಡಿದರೋ ಅಂತಹ ಸೂತಪುತ್ರನ ಜೊತೆಯಲ್ಲಿ ಭೀಮನಾದರೂ ಹೇಗೆ ಯುದ್ಧವನ್ನು ಮಾಡಿದನು?

ಅನೇಕಾನ್ ವಿಪ್ರಕಾರಾಂಶ್ಚ ಸೂತಪುತ್ರಸಮುದ್ಭವಾನ್ ।
ಸ್ಮರಮಾಣಃ ಕಥಂ ಭೀಮೋ ಯುಯುಧೇ ಸೂತಸೂನುನಾ ॥ ೧೩ ॥

ಕರ್ಣನು ಮಾಡಿದ ಅನೇಕ ಅವಮಾನಗಳನ್ನು ಸ್ಮರಿಸುತ್ತಾ ಭೀಮನು ಅವನ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದನು?

ಯೋऽಜಯತ್ ಪೃಥಿವೀಂ ಸರ್ವಾಂ ರಥೇನೈಕೇನ ವೀರ್ಯವಾನ್ ।
ತಂ ಸೂತತನಯಂ ಯುದ್ಧೇ ಕಥಂ ಭೀಮೋ ಹ್ಯಯೋಧಯತ್ ॥೧೪॥

ಯಾವ ಪರಾಕ್ರಮಶಾಲಿಯಾದ ಕರ್ಣನು ಒಂದು ರಥದಿಂದ ಎಲ್ಲ ಭೂಮಿಯನ್ನೂ ಗೆದ್ದನೋ ಅಂತಹ ಕರ್ಣನ ಜೊತೆಯಲ್ಲಿ ಭೀಮನ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದನು?

ಯೋ ಜಾತಃ ಕುಂಡಲಾಭ್ಯಾಂ ಚ ಕವಚೇನ ಸಹೈವ ಚ ।
ತಂ ಸೂತಪುತ್ರಂ ಸಮರೇ ಭೀಮಃ ಕಥಮಯೋಧಯತ್ ॥ ೧೫ ॥

ಯಾವ ಕರ್ಣನು ಕವಚ-ಕುಂಡಲಗಳಿಂದ ಸಹಿತವಾಗಿ ಜನಿಸಿದನೋ ಅಂತಹ ಸೂತಪುತ್ರನ ಜೊತೆಯಲ್ಲಿ ಭೀಮನು ಹೇಗೆ ಯುದ್ಧವನ್ನು ಮಾಡಿದನು?

ಯಥಾ ತಯೋರ್ಯುದ್ಧಮಭೂದ್ಯಶ್ಚಾಸೀದ್ ವಿಜಯೀ ತಯೋಃ ।
ತನ್ಮಾಚಕ್ಷ್ವ ತತ್ತ್ವೇನ ಕುಶಲೋ ಹ್ಯಸಿ ಸಂಜಯ ॥ ೧೬ ॥

ಎಲೈ ಸಂಜಯನೇ, ಅವರಿಗೆ ಯುದ್ಧವು ಹೇಗೆ ನಡೆಯಿತು? ಅವರಿಬ್ಬರಲ್ಲಿ ಯಾರು ಜಯವನ್ನು ಪಡೆದರು? ಎಲ್ಲವನ್ನೂ ನನಗೆ ಸರಿಯಾಗಿ ಹೇಳು. ವರ್ಣನೆ ಮಾಡುವುದರಲ್ಲಿ ನೀನು ಕುಶಲನಾಗಿದ್ದೀಯೆ.

ಸಂಜಯಃ

ಭೀಮಸೇನಸ್ತು ರಾಧೇಯಮುತ್ಸೃಜ್ಯ ರಥಿನಾಂ ವರಮ್ ।
ಇಯೇಷ ಗಂತುಂ ಯತ್ರಾಸ್ತಾಂ ವೀರೌ ಕೃಷ್ಣಧನಂಜಯೌ ॥ ೧೭ ॥

ಸಂಜಯ– ಭೀಮಸೇನನಾದರೋ ರಥಿಕರಲ್ಲಿ ಶ್ರೇಷ್ಠನಾದ ಕರ್ಣನನ್ನು ಬಿಟ್ಟು ವೀರರಾದ ಕೃಷ್ಣಾರ್ಜುನರು ಇರುವಲ್ಲಿಗೆ ಹೋಗಲು ಬಯಸಿದನು.

ತಂ ಪ್ರಯಾಂತಮಭಿದ್ರುತ್ಯ ರಾಧೇಯಃ ಕಂಕಪತ್ರಿಭಿಃ ।
ಅಭ್ಯವರ್ಷನ್ಮಹಾರಾಜ ಮೇಘೋ ವೃಷ್ಟ್ಯೇವ ಪರ್ವತಮ್ ॥ ೧೮ ॥

ಹಾಗೆ ಹೊರಟ ಭೀಮಸೇನನನ್ನು ಎದುರಿಸಿ, ಎಲೈ ಮಹಾರಾಜನೇ, ಕಂಕಪತ್ರಗಳನ್ನು ಹೊಂದಿದ ಬಾಣಗಳಿಂದ ಕರ್ಣನು ಮೇಘವು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಬಾಣದ ಮಳೆಯನ್ನು ಸುರಿಸಿದನು.

ಫುಲ್ಲತಾ ಪಂಕಜೇನೇವ ವಕ್ತ್ರೇಣಾಭ್ಯುತ್ಸ್ಮಯನ್ ಬಲೀ ।
ಆಜುಹಾವ ರಣೇ ಯಾಂತಂ ಭೀಮಮಾಧಿರಥಿಸ್ತದಾ ॥ ೧೯ ॥

ಬಲಿಷ್ಠನಾದ ಕರ್ಣನು ಅರಳುವ ಕಮಲದಂತಹ ಮುಖವುಳ್ಳವನಾಗಿ ನಗುತ್ತಾ, ಹೊರಟಿದ್ದ ಭೀಮಸೇನನನ್ನು ಯುದ್ಧಕ್ಕೆ ಆಹ್ವಾನಿಸಿದನು.

ಭೀಮಸೇನಸ್ತದಾಹ್ವಾನಂ ಕರ್ಣಾನ್ನಾಮರ್ಷಯದ್ ಯುಧಿ ।
ಅರ್ಧಮಂಡಲಮಾವೃತ್ಯ ಸೂತಪುತ್ರಮಯೋಧಯತ್ ॥ ೨೦ ॥

ಭೀಮಸೇನನು ಯುದ್ಧದಲ್ಲಿ ಕರ್ಣನ ಆ ಆಹ್ವಾನವನ್ನು ಸಹಿಸಲಿಲ್ಲ. ಅರ್ಧಮಂಡಲದಷ್ಟು ಹಿಂದಿರುಗಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಅವಕ್ರಗಾಮಿಭಿರ್ಬಾಣೈರಭ್ಯವರ್ಷನ್ ಮಹಾಯಶೈಃ ।
ದ್ವೈರಥೇ ದಂಶಿತಂ ಯತ್ತಂ ಸರ್ವಶಸ್ತ್ರಭೃತಾಂ ವರಮ್ ॥ ೨೧ ॥

ನೇರವಾಗಿ ಸಾಗುವ ಕಬ್ಬಿಣದ ಬಾಣಗಳಿಂದ ದ್ವಂದ್ವ ಯುದ್ಧದಲ್ಲಿ ಅವನು ಶಸ್ತ್ರ ಕವಚ ಸನ್ನದ್ಧನಾದ ಪ್ರಯತ್ನಶೀಲನಾದ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಕರ್ಣನನ್ನು ಹೊಡೆದನು.

ವಿಧಿತ್ಸುಃ ಕಲಹಸ್ಯಾಂತಂ ಜಿಘಾಂಸುಃ ಕರ್ಣಮಕ್ಷಿಣೋತ್ ।
ತಂ ಚ ಹತ್ವೇತರಾನ್ ಸರ್ವಾನ್ ಹಂತುಕಾಮೋ ಮಹಾಬಲಃ॥ ೨೨ ॥

ಕಲಹದ ಅಂತವನ್ನು ಮಾಡಲು ಬಯಸಿ, ಕರ್ಣನನ್ನು ಕೊಲ್ಲಲು ಬಯಸಿ, ಮಹಾಬಲನಾದ ಭೀಮನು ಅನಂತರ ಉಳಿದ ಎಲ್ಲರನ್ನೂ ಸಂಹರಿಸಲು ಅವನ ಕಡೆಗೆ ನೋಡಿದನು.

ತಸ್ಯೈ ಪ್ರಾಸೃಜದುಗ್ರಾಣಿ ವಿವಿಧಾನಿ ಪರಂತಪಃ ।
ಅಮರ್ಷೀ ಪಾಂಡವಃ ಕ್ರುದ್ಧಃ ಶರವರ್ಷಾಣಿ ಮಾರಿಷ ॥ ೨೩ ॥

ಎಲೈ ಪೂಜ್ಯನೇ, ಕ್ರುದ್ಧನೂ, ರೋಷವನ್ನು ಹೊಂದಿದವನೂ ಆದ ಪರಂತಪನಾದ ಪಾಂಡುಪುತ್ರನಾದ ಭೀಮನು ಕರ್ಣನ ಮೇಲೆ ಉಗ್ರವಾದ ಬಾಣಗಳ ಮಳೆಯನ್ನು ಕರೆದನು.

ತಸ್ಯ ತಾನೀಷುವರ್ಷಾಣಿ ಮತ್ತದ್ವಿರದಗಾಮಿನಃ ।
ಸೂತಪುತ್ರೋಽಸ್ತ್ರಮಾಯಾಭಿರಗ್ರಸತ್ ಸುಮಹಾಯಶಾಃ ॥ ೨೪ ॥

ಮತ್ತಗಜಗಾಮಿಯಾದ ಭೀಮಸೇನನ ಆ ಬಾಣಗಳ ಮಳೆಯನ್ನು ಮಹಾಕೀರ್ತಿವಂತನಾದ ಸೂತಪುತ್ರನಾದ ಕರ್ಣನು ತನ್ನ ಅಸ್ತ್ರಗಳ ಸಾಮರ್ಥ್ಯದಿಂದ ನುಂಗಿದನು (ವಿನಾಶಮಾಡಿದನು).

ಸ ಯಥಾವನ್ಮಹಾರಾಜ ವಿದ್ಯಯಾ ವೈ ಸುಪೂಜಿತಃ ।
ಆಚಾರ್ಯವನ್ಮಹೇಷ್ವಾಸಃ ಕರ್ಣಃ ಪರ್ಯಚರದ್ ರಣೇ ॥ ೨೫ ॥

ಎಲೈ ಮಹಾರಾಜನೇ, ಮಹಾಧನುರ್ಧಾರಿಯಾದ ಕರ್ಣನು ಒಳ್ಳೆಯ ವಿದ್ಯೆಯನ್ನು ಹೊಂದಿದವನಾಗಿ ದ್ರೋಣಾಚಾರ್ಯರಂತೆ ರಣರಂಗದಲ್ಲಿ ಸಂಚರಿಸಿದನು.

ಸಂರಂಭೇಣ ತು ಯುದ್ಧ್ಯಂತಂ ಭೀಮಸೇನಂ ಸ್ಥಯನ್ನಿವ ।
ಅಭ್ಯಪದ್ಯತ ರಾಧೇಯಸ್ತಮಮರ್ಷೀ ವೃಕೋದರಮ್ ॥ ೨೬ ॥

ಕೋಪದಿಂದ ಯುದ್ಧಮಾಡುತ್ತಿದ್ದ ಭೀಮಸೇನನನ್ನು ಕೋಪಗೊಂಡ ರಾಧೇಯನು ನಗುತ್ತಾ ಸಮೀಪಿಸಿದನು.

ತಸ್ಮಾಮೃಷ್ಯತ ಕೌಂತೇಯಃ ಕರ್ಣಸ್ಯ ಸ್ಥಿತಮಾಹವೇ ।
ಯುದ್ಧ್ಯಮಾನೇಷು ವೀರೇಷು ಪಶ್ಯತ್ಸು ಚ ಸಮಂತತಃ ॥ ೨೭ ॥

ಯುದ್ಧವನ್ನು ಮಾಡುವ ವೀರರು ಎಲ್ಲ ಕಡೆಗಳಿಂದಲೂ ನೋಡುತ್ತಿರುವಾಗ ಕರ್ಣನ ಆ ನಗುವನ್ನು ಕುಂತೀಪುತ್ರನಾದ ಭೀಮಸೇನನು ಸಹಿಸಲಿಲ್ಲ.

ತಂ ಭೀಮಸೇನಃ ಸಂಪ್ರಾಪ್ತಂ ವತ್ಸದಂತೈಃ ಸ್ತನಾಂತರೇ ।
ವಿವ್ಯಾಧ ಬಲವಾನ್ ಕ್ರುದ್ಧಸ್ತೋತ್ತ್ರೈರಿವ ಮಹಾದ್ವಿಪಮ್ ॥ ೨೮ ॥

ಸಮೀಪಕ್ಕೆ ಬಂದ ಕರ್ಣನನ್ನು ಬಲಿಷ್ಠನಾದ ಭೀಮಸೇನನು ಕೋಪಗೊಂಡು ಅಂಕುಶಗಳಿಂದ ಮಹಾಗಜವನ್ನು ಹೊಡೆದಂತೆ ವತ್ಸದಂತಗಳಿಂದ ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ಸೂತಂ ತು ಸೂತಪುತ್ರಸ್ಯ ಸುಪುಂಖೈರ್ನಿಶಿತೈಃ ಶರೈಃ ।
ಸುಮುಕ್ಷಿಶ್ಚಿತ್ರವರ್ಮಾಣಂ ನಿರ್ಬಿಭೇದ ತ್ರಿಸಪ್ತಭಿಃ ॥ ೨೯ ॥

ವಿಚಿತ್ರವಾದ ಕವಚವನ್ನು ಧರಿಸಿದ್ದ ಕರ್ಣನ ಸೂತನನ್ನು ಒಳ್ಳೆಯ ಪುಂಖವುಳ್ಳ ತೀಕ್ಷ್ಣವಾದ ಚೆನ್ನಾಗಿ ಪ್ರಯೋಗಿಸಿದ ಇಪ್ಪತ್ತೊಂದು ಬಾಣಗಳಿಂದ ಭಗ್ನಗೊಳಿಸಿದನು.

ಕರ್ಣೋ ಜಾಂಬೂನದೈರ್ಜಾಲೈಃ ಸಂಛನ್ನಾನ್ ವಾತರಂಹಸಃ ।
ವಿವ್ಯಾಧ ತುರಗಾನ್ ವೀರಃ ಪಂಚಭಿಃ ಪಂಚಭಿಃ ಶರೈಃ ॥ ೩೦ ॥

ಕರ್ಣನು ವಾಯುವೇಗವನ್ನು ಹೊಂದಿದ್ದ ಸುವರ್ಣಮಯವಾದ ಹೊದಿಕೆಗಳಿಂದ ಆವರಿಸಲ್ಪಟ್ಟಿದ್ದ ಭೀಮಸೇನನ ರಥದ ಆಶ್ವಗಳನ್ನು ಐದೈದು ಬಾಣಗಳಿಂದ ಹೊಡೆದನು.

ತತೋ ಬಾಣಮಯಂ ಜಾಲಂ ಭೀಮಸೇನರಥಂ ಪ್ರತಿ ।
ಕರ್ಣೇನ ವಿಹಿತಂ ರಾಜನ್ನಿಮೇಷಾರ್ಧಾದದೃಶ್ಯತ ॥ ೩೧ ॥

ಎಲೈ ರಾಜನೇ, ಆನಂತರ ಅರ್ಧನಿಮಿಷದಲ್ಲಿ ಭೀಮಸೇನನ ರಥದ ಸುತ್ತಲೂ ಕರ್ಣನು ನಿರ್ಮಿಸಿದ ಬಾಣಮಯವಾದ ಜಾಲವು ಕಂಡುಬಂದಿತು.

ಸರಥಃ ಸಧ್ವಜಸ್ತತ್ರ ಸಸೂತಃ ಪಾಂಡವಸ್ತದಾ ।
ಪ್ರಾಚ್ಛಾದ್ಯತ ಮಹಾರಾಜ ಕರ್ಣಚಾಪಚ್ಯುತೈಃ ಶರೈಃ ॥ ೩೨ ॥

ಎಲೈ ಮಹಾರಾಜನೇ, ಆಗ ಪಾಂಡುಪುತ್ರನಾದ ಭೀಮಸೇನನು ತನ್ನ ರಥ-ಗಜ-ಸೂತ ಸಹಿತನಾಗಿ ಕರ್ಣನಿಂದ ಪ್ರಯೋಗಿಸಲ್ಪಟ್ಟ ಬಾಣಗಳಿಂದ ಮುಚ್ಚಿಹೋದನು.

ತಸ್ಯ ಕರ್ಣಶ್ಚತುಃಷಷ್ಟ್ಯಾ ವ್ಯಧಮತ್ ಕವಚಂ ದೃಢಮ್ ।
ಕುದ್ದಶ್ಚಾಪ್ಯಹನತ್ ಪಾರ್ಶ್ವೇ ನಾರಾಚೈರ್ಮರ್ಮಭೇದಿಭಿಃ ॥ ೩೩ ॥

ಕರ್ಣನು ಅರವತ್ನಾಲ್ಕು ಬಾಣಗಳನ್ನು ಪ್ರಯೋಗಿಸಿ ಭೀಮಸೇನನ ದೃಢವಾದ ಕವಚವನ್ನು ಹಾರಿಸಿದನು. ಮತ್ತೂ ಕೋಪಗೊಂಡು ಅವನ ಪಾರ್ಶ್ವದಲ್ಲಿ (ಪಕ್ಕೆಯ ಮೇಲೆ) ಮೂಳೆಯನ್ನು ಭೇದಿಸುವ ಬಾಣಗಳನ್ನು ಪ್ರಯೋಗಿಸಿದನು.

ತತೋಽಂತ್ಯ ಮಹಾವೇಗಾನ್ ಕರ್ಣಕಾರ್ಮುಕನಿಃಸೃತಾನ್ ।
ಸಮಾಶ್ಲಿಷ್ಯದಸಂಭ್ರಾಂತಃ ಸೂತಪುತ್ರಂ ವೃಕೋದರಃ ॥ ೩೪ ॥

ಆಗ ಕರ್ಣನ ಧನುಸ್ಸಿನಿಂದ ಹೊರಟ ಮಹಾವೇಗವುಳ್ಳ ಬಾಣಗಳನ್ನು ಪರಿಗಣಿಸದೆ ಭೀಮಸೇನನು ಯಾವ ಗಾಬರಿಯೂ ಇಲ್ಲದೆ ಬಂದು ಸೂತಪುತ್ರನಾದ ಕರ್ಣನನ್ನು ಆಲಿಂಗಿಸಿದನು.

ಸ ಕರ್ಣಚಾಪಪ್ರಭವಾನಿಷೂನಾಶೀವಿಷೋಪಮಾನ್ ।
ಬಿಭ್ರದ್ ಭೀಮೋ ಮಹಾರಾಜ ನ ಜಗಾಮ ವ್ಯಥಾಂ ರಣೇ ॥ ೩೫ ॥

ಎಲೈ ಮಹಾರಾಜನೇ, ಕರ್ಣನ ಧನುಸ್ಸಿನಿಂದ ಹೊಮ್ಮಿದ ಸರ್ಪದಂತಹ ಬಾಣಗಳು ಶರೀರದಲ್ಲಿ ನಾಟಿದರೂ ಭೀಮಸೇನನು ರಣರಂಗದಲ್ಲಿ ವ್ಯಥೆಯನ್ನು ಹೊಂದಲಿಲ್ಲ.

ತತೋ ದ್ವಾತ್ರಿಂಶತಾ ಭಲ್ಲೈರ್ನಿಶಿತೈಸ್ತಿಗ್ಮತೇಜನೈಃ ।
ವಿವ್ಯಾಧ ಸಮರೇ ಕರ್ಣಂ ಭೀಮಸೇನಃ ಪ್ರತಾಪವಾನ್ ॥ ೩೬ ॥

. ಆನಂತರ ಪ್ರತಾಪಶಾಲಿಯಾದ ಭೀಮಸೇನನು ಕ್ರೂರಸಾಮರ್ಥ್ಯವುಳ್ಳ ನಿಶಿತವಾದ ಮೂವತ್ತೆರಡು ಬಾಣಗಳಿಂದ ರಣರಂಗದಲ್ಲಿ ಕರ್ಣನನ್ನು ಹೊಡೆದನು.

ಆಯತ್ನೇನೈವ ತಂ ಕರ್ಣಃ ಶರೈರುಪಸಮಾಕರತ್ ।
ಭೀಮಸೇನಂ ಮಹಾಬಾಹುಂ ಸೈಂಧವಸ್ಯ ವಧೈಷಿಣಮ್ ॥ ೩೭ ॥

ಕರ್ಣನು ಸೈಂಧವನ ವಧೆಯನ್ನು ಬಯಸಿದ ಮಹಾಬಾಹುವಾದ ಭೀಮಸೇನನ ಮೇಲೆ ಹೆಚ್ಚು ಪ್ರಯತ್ನವನ್ನು ಪಡದೆ ಬಾಣಗಳ ಮಳೆಯನ್ನು ಸುರಿಸಿದನು.

ಮೃದುಪೂರ್ವಂ ಚ ರಾಧೇಯೋ ಭೀಮಮಾಜಾವಯೋಧಯತ್ ।
ಕ್ರೋಧಪೂರ್ವಂ ತಥಾ ಭೀಮಃ ಪೂರ್ವವೈರಮನುಸ್ಮರನ್ ॥ ೩೮ ॥

ರಾಧೇಯನಾದ ಕರ್ಣನು ಮೊದಲು ಮೃದುವಾಗಿಯೇ ಭೀಮಸೇನನ ಜೊತೆಯಲ್ಲಿಯುದ್ಧವನ್ನು ಮಾಡಿದನು. ಭೀಮಸೇನನು ಹಿಂದಿನ ವೈರವನ್ನು ಸ್ಮರಿಸುತ್ತಾ ಕೋಪಪೂರ್ವಕವಾಗಿ ಯುದ್ಧವನ್ನು ಮಾಡಿದನು.

ತಂ ಭೀಮಸೇನೋ ನಾಮೃಷ್ಯದವಮಾನಮಮರ್ಷಣಃ ।
ಸ ತಸ್ಮೈ ವ್ಯಸೃಜತ್ತೂರ್ಣಂ ಶರವರ್ಷಮಮಿತ್ರಜಿತ್ ॥ ೩೯ ॥

ಕರ್ಣನು ಮೃದುವಾಗಿ ಯುದ್ಧವನ್ನು ಮಾಡುತ್ತಿರುವುದನ್ನು ತಿಳಿದ ಭೀಮಸೇನನು ಆದು ತನಗೆ ಮಾಡಿದ ಅವಮಾನವೆಂದು ತಿಳಿದು ಕೋಪಗೊಂಡು ಶತ್ರುಗಳನ್ನು ಜಯಿಸುವ ಅವನು ಶೀಘ್ರವಾಗಿ ಕರ್ಣನ ಮೇಲೆ ಬಾಣಗಳ ಮಳೆಯನ್ನು ಕರೆದನು.

ತೇ ಶರಾಃ ಪ್ರೇಷಿತಾ ರಾಜನ್ ಭೀಮಸೇನೇನ ಸಂಯುಗೇ ।
ನಿಪೇತುಃ ಸರ್ವತೋ ಭೀಮಾಃ ಕೂಜಂತ ಇವ ಪಕ್ಷಿಣಃ ॥ ೪೦ ॥

ಎಲೈ ರಾಜನೇ, ರಣರಂಗದಲ್ಲಿ ಭೀಮಸೇನನಿಂದ ಪ್ರಯೋಗಿಸಲ್ಪಟ್ಟ ಆ ಭಯಂಕರವಾದ ಬಾಣಗಳು ಕಿರುಚುವ ಪಕ್ಷಿಗಳಂತೆ ಎಲ್ಲ ಕಡೆಗಳಲ್ಲಿಯೂ ಬಿದ್ದವು.

ಹೇಮಪುಂಖಾ ಮಹಾರಾಜ ಭೀಮಸೇನಧನುಶ್ಚ್ಯುತಾಃ ।
ಆಭ್ಯದ್ರವಂಸ್ತೇ ರಾಧೇಯಂ ವೃಕಾಃ ಕ್ಷುದ್ರಮೃಗಂ ಯಥಾ ॥ ೪೧ ॥

ಎಲೈ ಮಹಾರಾಜನೇ, ಭೀಮಸೇನನ ಬಾಣಗಳಿಂದ ಹೊರಟ, ಹೇಮ-ಪುಂಖಿಗಳನ್ನು ಹೊಂದಿದ್ದ ಆ ಬಾಣಗಳು ತೋಳಗಳು ಕ್ಷುದ್ರಮೃಗದ ಕಡೆಗೆ ಧಾವಿಸುವಂತೆ ಕರ್ಣನ ಕಡೆಗೆ ಧಾವಿಸಿದವು.

ಕರ್ಣಸ್ತು ರಥಿನಾಂ ಶ್ರೇಷ್ಠಶ್ಚಾದ್ಯಮಾನಃ ಸಮಂತತಃ ।
ರಾಜನ್ ವ್ಯಸೃಜದುಗ್ರಾಣಿ ಶರವರ್ಷಾಣಿ ಸಂಯುಗೇ ॥ ೪೨ ॥

ಎಲೈ ರಾಜನೇ, ರಥಿಕರಲ್ಲಿ ಶ್ರೇಷ್ಠನಾದ ಕರ್ಣನು ಆ ಬಾಣಗಳಿಂದ ಎಲ್ಲ ಕಡೆಗಳಲ್ಲಿಯೂ ಆವರಿಸಲ್ಪಟ್ಟು ರಣರಂಗದಲ್ಲಿ ಉಗ್ರವಾದ ಶರವೃಷ್ಟಿಯನ್ನು ಸೃಷ್ಟಿಸಿದನು.

ತಸ್ಯ ತಾನಶನಿಪ್ರಖ್ಯಾನಿಷೂನ್ ಸಮರಶೋಭಿನಃ ।
ಚಿಚ್ಛೇದ ಬಹುಭಿರ್ಭಲ್ಲೈರಸಂಪ್ರಾಪ್ತಾನ್ ವೃಕೋದರಃ ॥ ೪೩ ॥

ಸಮರಶೋಭಿಯಾದ ಕರ್ಣನ ಸಿಡಿಲಿನಂತಹ ಬಾಣಗಳನ್ನು ತನ್ನ ಬಳಿಗೆ ಬರುವುದಕ್ಕಿಂತ ಮುಂಚೆಯೇ ವೃಕೋದರನು ಅನೇಕ ಭಲ್ಲಗಳಿಂದ ಭಗ್ನಗೊಳಿಸಿದನು.

ಪುನಶ್ಚ ಶರವರ್ಷೇಣ ಛಾದಯಾಮಾಸ ಭಾರತ ।
ಕರ್ಣೋ ವೈಕರ್ತನೋ ಯುದ್ಧೇ ಭೀಮಸೇನಂ ಮಹಾರಥಮ್॥ ೪೪॥

ಎಲೈ ಭಾರತನೇ, ವೈಕರ್ತನನಾದ ಕರ್ಣನು ರಣರಂಗದಲ್ಲಿ ಮಹಾರಥನಾದ ಭೀಮಸೇನನನ್ನು ಪುನಃ ಬಾಣಗಳ ಮಳೆಯಿಂದ ಮುಚ್ಚಿದನು.

ತತ್ರ ಭಾರತ ಭೀಮಂ ತು ದೃಷ್ಟವಂತಃ ಸ್ಮ ಸಾಯಕೈಃ ।
ಸಮಾಚಿತತನುಂ ಸಂಖೇ ಶ್ವಾವಿಧಂ ಶಲಲೈರಿವ ॥ ೪೫ ॥

ಎಲೈ ಭಾರತನೇ, ಆಗ ರಣರಂಗದಲ್ಲಿ ನಾವು ಕರ್ಣನ ಬಾಣಗಳಿಂದ ಕೂಡಿದ ಶರೀರವುಳ್ಳ ಭೀಮಸೇನನನ್ನು ಮುಳ್ಳುಗಳಿಂದ ಕೂಡಿದ ಮುಳ್ಳುಹಂದಿಯಂತೆ ನೋಡಿದವು.

ಹೇಮಪುಂಖಾನ್ ಶಿಲಾಧೌತಾನ್ ಕರ್ಣಚಾಪಚ್ಯುತಾನ್ ಶರಾನ್ ।
ದಧಾರ ಸಮರೇ ವೀರಃ ಸ್ವರಶ್ಮೀನಿವ ಭಾಸ್ಕರಃ ॥ ೪೬ ॥

ಹೇಮಪುಂಖವುಳ್ಳ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಕರ್ಣನ ಧನುಸ್ಸಿನ ಹೊರಹೊಮ್ಮಿದ ಬಾಣಗಳನ್ನು ವೀರನಾದ ಭೀಮಸೇನನು ಸೂರ್ಯನ ಕಿರಣಗಳನ್ನು ಧರಿಸುವಂತೆ ತನ್ನ ಶರೀರದಲ್ಲಿ ಧರಿಸಿದನು.

ರುಧಿರೋಕ್ಷಿತಸರ್ವಾಂಗೋ ಭೀಮಸೇನೋ ವ್ಯರೋಚತ ।
ತಪನೀಯನಿಭೈಃ ಪುಷ್ಪೈಃ ಪಲಾಶ ಇವ ಕಾನನೇ ॥ ೪೭ ॥

ರಕ್ತದಿಂದ ತೊಯ್ದ ಸಕಲಾವಯವಗಳಿಂದ ಭೀಮಸೇನನು ಕಾಡಿನಲ್ಲಿ ಚಿನ್ನದ ಬಣ್ಣದಿಂದ ಕೂಡಿದ ಪಲಾಶ ಕೂಡಿದ (ಮುತ್ತುಗ) ವೃಕ್ಷದಂತೆ ಶೋಭಿಸಿದನು.

ತತ್ತು ಭೀಮೋ ಮಹಾರಾಜ ಕರ್ಣಸ್ಯ ಚರಿತಂ ರಣೇ ।
ನಾಮೃಷ್ಯತ ಮಹೇಷ್ವಾಸಃ ಕ್ರೋಧಾದುದ್ಭೃತ್ಯ ಚಕ್ಷುಷೀ ॥ ೪೮ ॥

ಎಲೈ ಮಹಾರಾಜನೇ, ರಣರಂಗದಲ್ಲಿ ಕರ್ಣನ ಆ ಕಾರ್ಯವನ್ನು ನೋಡಿ ಮಹಾಧನುರ್ಧಾರಿಯಾದ ಭೀಮನು ಅದನ್ನು ಸಹಿಸಲಿಲ್ಲ. ಅವನು ಕೋಪದಿಂದ ತನ್ನ ಕಣ್ಣುಗಳನ್ನು ಅರಳಿಸಿದನು.

ಸ ಕರ್ಣಂ ಪಂಚವಿಂಶತ್ಯಾ ನಾರಾಚಾನಾಂ ಸಮಾರ್ಪಯತ್ ।
ಮಹೀಧರಮಿವ ಶ್ವೇತಂ ಗೂಢಪಾದೈರ್ವಿಷೋಲ್ಬಣೈಃ ॥ ೪೯ ॥

ಶ್ವೇತಪರ್ವತವನ್ನು ವಿಷೋಲ್ಬಣವಾದ ಸರ್ಪಗಳು ಪ್ರವೇಶಿಸಿದಂತೆ ಅವನು ಕರ್ಣನ ಶರೀರದಲ್ಲಿ ಇಪ್ಪತ್ತೈದು ವಿಷಭರಿತ ನಾರಾಚಗಳನ್ನು ನಾಟಿಸಿದನು.

ತಂ ವಿವ್ಯಾಧ ಪುನರ್ಭೀಮಃ ಷಡ್ಭಿರಷ್ಟಾಭಿರೇವ ಚ ।
ಮರ್ಮಸ್ವಮರವಿಕ್ರಾಂತಃ ಸೂತಪುತ್ರಂ ಮಹಾರಣೇ ॥ ೫೦ ॥

ಅಮರಪರಾಕ್ರಮವುಳ್ಳ ಭೀಮಸೇನನು ಆ ದೊಡ್ಡ ಯುದ್ಧದಲ್ಲಿ ಸೂತಪುತ್ರನಾದ ಕರ್ಣನನ್ನು ಆರು ಬಾಣಗಳಿಂದ ಮತ್ತು ಪುನಃ ಎಂಟು ಬಾಣಗಳಿಂದ ಮರ್ಮಸ್ಥಾನಗಳಲ್ಲಿ ಹೊಡೆದನು.

ತತಃ ಕರ್ಣಸ್ಯ ಸಂಕ್ರುದ್ಧೋ ಭೀಮಸೇನಃ ಪ್ರತಾಪವಾನ್ ।
ಚಿಚ್ಛೇದ ಕಾರ್ಮುಕಂ ತೂರ್ಣಂ ಸರ್ವೋಪಕರಣಾನಿ ಚ ॥ ೫೧ ॥

ಅನಂತರ ಕರ್ಣನ ಮೇಲೆ ಕೋಪಗೊಂಡ ಪ್ರತಾಪಶಾಲಿಯಾದ ಭೀಮಸೇನನು ಶೀಘ್ರವಾಗಿ ಅವನ ಧನುಸ್ಸನ್ನೂ ಮತ್ತು ಉಳಿದ ಎಲ್ಲಾ ಯುದ್ಧೋಪಕರಣಗಳನ್ನೂ ಕತ್ತರಿಸಿದನು.

ಜಘಾನ ಚತುರಶ್ಚಾಶ್ವಾನ್ ಸೂತಂ ಚ ತ್ವರಿತಃ ಶರೈಃ ।
ನಾರಾಚೈರರ್ಕರಶ್ಮ್ಯಭೈಃ ಕರ್ಣಂ ವಿವ್ಯಾಧ ಚೋರಸಿ ॥ ೫೨ ॥

ಅವನ ರಥದ ನಾಲ್ಕು ಕುದುರೆಗಳನ್ನು ಮತ್ತು ಸೂತನನ್ನು ಶೀಘ್ರವಾಗಿ ತನ್ನ ಬಾಣದಿಂದ ಕೊಂದನು. ಸೂರ್ಯನ ಕಿರಣವನ್ನು ಹೋಲುವ ನಾರಾಚದಿಂದ ಕರ್ಣನನ್ನು ಅವನ ಎದೆಯಲ್ಲಿ ಹೊಡೆದನು.

ತೇ ಜಗ್ಮುರ್ಧರಣೀಂ ಸರ್ವೇ ಕರ್ಣಂ ನಿರ್ಭಿದ್ಯ ಮಾರಿಷ ।
ಯಥಾ ಹಿ ಜಲದಂ ಭಿತ್ತ್ವಾ ರಾಜನ್ ಸೂರ್ಯಸ್ಯ ರಶ್ಮಯಃ ॥ ೫೩ ॥

ಎಲೈ ಪೂಜ್ಯನೇ, ರಾಜನೇ, ಮೋಡವನ್ನು ಭೇದಿಸಿ ಹೊರಗೆ ಬರುವ ಸೂರ್ಯ ರಶ್ಮಿಗಳಂತೆ ಆ ನಾರಾಚಗಳೆಲ್ಲವೂ ಕರ್ಣನನ್ನು ಭೇದಿಸಿ ಭೂಮಿಯೊಳಗೆ ಇಳಿದವು.

ಸ ವೈಕಲ್ಯಂ ಮಹತ್ ಪ್ರಾಪ್ಯ ಭಿನ್ನಧನ್ವಾ ಶರಾರ್ದಿತಃ ।
ತಥಾ ಪುರುಷಮಾನೀ ಸ ಪ್ರತ್ಯಪಾಯಾದ್ ರಥಾಂತರಮ್ ॥ ೫೪ ॥

ಧನುಸ್ಸು ಕತ್ತರಿಸಲ್ಪಟ್ಟು, ಭೀಮಸೇನನ ಬಾಣಗಳಿಂದ ಪೀಡಿತನಾದ, ಪುರುಷಮಾನ್ಯನಾದ ಕರ್ಣನು ದೊಡ್ಡ ಸಂಕಟಕ್ಕೆ ಸಿಲುಕಿ ಇನ್ನೊಂದು ರಥವನ್ನು ಸೇರಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷೋಡಶಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೇಳನೆಯ ಅಧ್ಯಾಯ

ಭೀಮಸೇನ ಮತ್ತು ಕರ್ಣರ ಯುದ್ಧ.

ಧೃತರಾಷ್ಟ್ರಃ

ಯಸ್ಮಿನ್ ಜಯಾಶಾ ಸತತಂ ಪುತ್ರಾಣಾಂ ಮಮ ಸಂಜಯ ।
ತಂ ದೃಷ್ಟ್ವಾ ವಿಮುಖಂ ಸಂಖೇ ಕಿಂ ನು ದುರ್ಯೋಧನೋಽಬ್ರವೀತ್।
ಕರ್ಣೋ ವಾ ಸಮರೇ ತಾತ ಕಿಮಕಾರ್ಷೀದತಃ ಪರಮ್ ॥ ೧ ॥

ಧೃತರಾಷ್ಟ್ರ ಎಲೈ ಸಂಜಯನೇ, ಯಾವ ಕರ್ಣನಲ್ಲಿ ನನ್ನ ಪುತ್ರರ ಜಯದ ಆಸೆಯು ಸತತವಾಗಿ ಅವಲಂಬಿಸಿಕೊಂಡಿದೆಯೋ ಅಂತಹ ಕರ್ಣನು ಯುದ್ಧದಲ್ಲಿ

ವಿಮುಖನಾದಾಗ ದುರ್ಯೋಧನನು ಏನು ಹೇಳಿದನು? ಪ್ರೀತಿಪಾತ್ರನೇ, ಯುದ್ಧದಲ್ಲಿ ಕರ್ಣನಾದರೂ ಅನಂತರ ಏನು ಮಾಡಿದನು?

ಸಂಜಯಃ

ಭೀಮಸೇನಂ ರಣೇ ದೃಷ್ಟ್ವಾ ಜ್ವಲಂತಮಿವ ಪಾವಕಮ್ ।
ರಥಮನ್ಯಂ ಸಮಾಸ್ಥಾಯ ವಿಧಿವತ್ಕಲ್ಪಿತಂ ಪುನಃ ।
ಅಭ್ಯಯಾತ್ ಪಾಂಡವಂ ಕರ್ಣೋ ವಾತೋದ್ಧೂತ ಇವಾರ್ಣವಃ ॥೨॥

ಸಂಜಯ– ಜ್ವಲಿಸುವ ಅಗ್ನಿಯಂತಿರುವ ಭೀಮಸೇನನನ್ನು ನೋಡಿ ರಣರಂಗದಲ್ಲಿ ಕರ್ಣನು ವಿಧಿವತ್ತಾಗಿ ಸಿದ್ಧಪಡಿಸಿದ ಇನ್ನೊಂದು ರಥವನ್ನು ಏರಿ ಬಿರುಗಾಳಿಯಿಂದ ಕ್ಷೋಭೆಗೊಂಡ ಸಮುದ್ರದಂತೆ ಪಾಂಡವನಾದ ಭೀಮಸೇನನ ಮೇಲೆ ಎರಗಿದನು.

ಕ್ರುದ್ಧಮಾಧಿರಥಿಂ ದೃಷ್ಟ್ವಾ ಪುತ್ರಾಸ್ತವ ವಿಶಾಂಪತೇ ।
ಭೀಮಸೇನಮಮನ್ಯಂತ ವೈವಸ್ವತಮುಖೇ ಹುತಮ್ ॥ ೩ ॥

ಎಲೈ ರಾಜನೇ, ಕೋಪಗೊಂಡ ಕರ್ಣನನ್ನು ನೋಡಿ ನಿನ್ನ ಪುತ್ರರು ಭೀಮಸೇನನು ಯಮನ ಮುಖದಲ್ಲಿ ಹೋಮಮಾಡಲ್ಪಟ್ಟಿದ್ದಾನೆ ಎಂದು ತಿಳಿದರು.

ಚಾಪಶಬ್ದಂ ಮಹತ್ಕೃತ್ವಾ ತಲಶಬ್ದಂ ಚ ಭೈರವಮ್ ।
ಅಭ್ಯವರ್ತತ ರಾಧೇಯೋ ಭೀಮಸೇನರಥಂ ಪ್ರತಿ ॥ ೪ ॥

ಧನುಸ್ಸಿನಿಂದಲೂ ಮತ್ತು ಹಸ್ತತಳದಿಂದಲೂ ಭೀಕರವಾಗಿ ದೊಡ್ಡ ಶಬ್ದವನ್ನು ಮಾಡಿ ರಾಧೇಯನು ಭೀಮಸೇನನ ರಥದ ಕಡೆಗೆ ಸಾಗಿದನು.

ಪುನರೇವ ತತೋ ರಾಜನ್ ಮಹಾನಾಸೀತ್ ಸುದಾರುಣಃ ।
ಏಮರ್ದಃ ಸೂತಪುತ್ರಸ್ಯ ಭೀಮಸ್ಯ ಚ ವಿಶಾಂಪತೇ ॥ ೫ ॥

ಎಲೈ ರಾಜನೇ, ನಂತರ ಭೀಮಸೇನನಿಗೂ ಮತ್ತು ಸೂತಪುತ್ರನಾದ ಕರ್ಣನಿಗೂ ಘೋರವಾದ ದೊಡ್ಡ ಸಂಘರ್ಷವು ಸಂಭವಿಸಿತು.

ಸಂರಬ್ಧೌ ಹಿ ಮಹಾಬಾಹೂ ಪರಸ್ಪರವಧೈಷಿಣೌ ।
ಅನ್ಯೋನ್ಯಮೀಕ್ಷಾಂಚಕ್ರಾತೇ ದಹಂತಾವಿವ ಲೋಚನೈಃ ॥ ೬ ॥

ಕೋಪಗೊಂಡವರೂ, ಮಹಾಬಾಹುಗಳೂ, ಪರಸ್ಪರವಧೆಯನ್ನು ಬಯಸುವವರೂ ಆದ ಅವರು ತಮ್ಮ ದೃಷ್ಟಿಯಿಂದಲೇ ಸುಡುವಂತೆ ಪರಸ್ಪರವಾಗಿ ನೋಡಿದರು.

ಕ್ರೋಧರಕ್ತೇಕ್ಷಣೌ ಕ್ರುದ್ಧೌ ನಿಃಶ್ವಸಂತೌ ಮಹಾರಥೌ ।
ಯುದ್ಧೇಽನ್ಯೋನ್ಯಂ ಸಮಾಸಾದ್ಯ ತತಕ್ಷತುರರಿಂದಮೌ ॥ ೭ ॥

ಕ್ರೋಧದಿಂದ ಕೆಂಪಾದ ಕಣ್ಣುಳ್ಳವರೂ, ದೀರ್ಘವಾದ ನಿಟ್ಟುಸಿರನ್ನು ಬಿಡುವವರೂ, ಅರಿಂದಮರೂ, ಮಹಾರಥರೂ ಆದ ಅವರು ಯುದ್ಧದಲ್ಲಿ ಪರಸ್ಪರವಾಗಿ ಸಮೀಪಿಸಿ ಗಾಯಗೊಳಿಸಿದರು.

ವ್ಯಾಘ್ರಾವಿವ ಸುಸಂರಬ್ಧೌ ಶ್ಯೇನಾವಿವ ಚ ಶೀಘ್ರಗೌ ।
ಶರಭಾವಿವ ಸಂಕ್ರುದ್ಧೌ ಯುಯುಧಾತೇ ಪರಸ್ಪರಮ್ ॥ ೮ ॥

ಕೋಪಗೊಂಡ ಎರಡು ವ್ಯಾಘ್ರಗಳಂತೆ, ಶೀಘ್ರಗಾಮಿಗಳಾದ ಹದ್ದುಗಳಂತೆ, ಕ್ರೋಧಗೊಂಡ ಎರಡು ಶರಭಗಳಂತೆ ಅವರು ಪರಸ್ಪರವಾಗಿ ಯುದ್ಧವನ್ನು ಮಾಡಿದರು.

ತತೋ ಭೀಮಃ ಸ್ಮರನ್ ಕ್ಲೇಶಾನಕ್ಷದ್ಯೂತೇ ವನೇಽಪಿ ಚ ।
ವಿರಾಟನಗರೇ ಚೈವ ಪ್ರಾಪ್ತಂ ದುಃಖಮರಿಂದಮಃ ॥ ೯ ॥

ರಾಷ್ಟ್ರಾಣಾಂ ಸ್ಫೀತರತ್ನಾನಾಂ ಹರಣಂ ಚ ತವಾತ್ಮಜೈಃ ।
ಸತತಂ ಚ ಪರಿಕ್ಲೇಶಾನ್ ಸಪುತ್ರೇಣ ತ್ವಯಾ ಕೃತಾನ್ ॥ ೧೦ ॥

ಆಗ ಭೀಮನು ಅಕ್ಷದ್ಯೂತದಲ್ಲಿಯೂ ಕಾಡಿನಲ್ಲಿಯೂ ಅನುಭವಿಸಿದ ಕ್ಲೇಶಗಳನ್ನು ಸ್ಮರಿಸುತ್ತಾ, ವಿರಾಟನಗರದಲ್ಲಿ ಪ್ರಾಪ್ತವಾದ ದುಃಖವನ್ನೂ ಸ್ಮರಿಸುತ್ತಾ, ನಿನ್ನ ಮಕ್ಕಳಿಂದ ಸಮೃದ್ಧವಾದ ರಾಜ್ಯದ ಹರಣವನ್ನೂ ಮತ್ತು ಪುತ್ರಸಹಿತನಾದ ನೀನು ಸತತವಾಗಿ ಉಂಟು ಮಾಡಿದ ಕ್ಲೇಶಗಳನ್ನೂ ಸ್ಮರಿಸುತ್ತಾ;

ದಗ್ಧುಮೈಚ್ಛತ್ಸ ಯತ್ ಕುಂತೀಂ ಸಪುತ್ರಾಂ ತ್ವಮನಾಗಸೀಮ್ ।
ಕೃಷ್ಣಾಯಾಶ್ಚ ಪರಿಕ್ಲೇಶಂ ಸಭಾಮಧ್ಯೇ ದುರಾತ್ಮಭಿಃ ॥ ೧೧ ॥

ಪತಿಮನ್ಯಂ ಪರೀಪ್ಸಸ್ವ ನ ಸಂತಿ ಪತಯಸ್ತವ ।
ನರಕಂ ಪತಿತಾಃ ಪಾರ್ಥಾಃ ಸರ್ವೇ ಷಂಢತಿಲೋಪಮಾಃ ॥ ೧೨ ॥

ನಿರಪರಾಧಿಯಾದ ಪುತ್ರಸಹಿತಳಾದ ಕುಂತಿಯನ್ನು ನೀನು ದಹಿಸಲು ಬಯಸಿದುದನ್ನೂ, ಸಭೆಯ ಮಧ್ಯದಲ್ಲಿ ದುರಾತ್ಮರಾದ ನಿನ್ನ ಪುತ್ರರು ದ್ರೌಪದಿಗೆ ಕೊಟ್ಟ ಕ್ಲೇಶವನ್ನೂ, ನೀನು ಇನ್ನೊಬ್ಬ ಪತಿಯನ್ನು ಹೊಂದು, ನಿನ್ನ ಪತಿಗಳು ಇಲ್ಲ, ಪಾಂಡವರೆಲ್ಲರೂ ಕೊಳೆತು ಹೋದ ಎಳ್ಳು ಕಾಳುಗಳಂತೆ ನರಕದಲ್ಲಿ ಬಿದ್ದಿದ್ದಾರೆ ಎಂಬ ಮಾತನ್ನೂ ಸ್ಮರಿಸುತ್ತಾ;

ಸಮಕ್ಷಂ ತವ ಕೌರವ್ಯ ಯದೂಚುಃ ಕುರವಸ್ತದಾ ।
ದಾಸೀಭೋಗೇನ ಕೃಷ್ಣಾಂ ಚ ಭೋಕ್ತುಕಾಮಾಃ ಸುತಾಸ್ತವ ॥ ೧೩ ॥

ಯಚ್ಚಾಪಿ ತಾನ್ ಪ್ರವ್ರಜತಃ ಕೃಷ್ಣಾಜಿನನಿವಾಸಿನಃ ।
ಪರುಷಾಣ್ಯುಕ್ತವಾನ್ ಕರ್ಣಃ ಸಭಾಯಾಂ ಸನ್ನಿಧೌ ತವ ॥ ೧೪ ॥

ಎಲೈ ಕೌರವನೇ, ನಿನ್ನ ಎದುರಿನಲ್ಲಿ ಕುರುಗಳು ದ್ರೌಪದಿಯನ್ನು ದಾಸೀಭೋಗದಿಂದ ಭೋಗಿಸುವ ಆಸೆಯನ್ನು ಹೊಂದಿದುದನ್ನೂ, ಕೃಷ್ಣಾಜಿನವನ್ನು ಧರಿಸಿ ಕಾಡಿಗೆ ಹೊರಟ ಅವರನ್ನು ಕುರಿತು ಸಭೆಯಲ್ಲಿ ನಿನ್ನ ಸನ್ನಿಧಿಯಲ್ಲಿ ಕರ್ಣನು ಆಡಿದ ಉಗ್ರವಾದ ಮಾತುಗಳನ್ನು ಸ್ಮರಿಸುತ್ತಾ;

ತೃಣೀಕೃತ್ಯ ಚ ಯತ್ ಪಾರ್ಥಾಂಸ್ತವ ಪುತ್ರೋ ವವಲ್ಗ ಹ ।
ವಿಷಮಸ್ಥಾನ್ ಸಮಸ್ಥೋ ಹಿ ಸಂರಂಭಾದ್ ಗತಚೇತಸಃ ॥ ೧೫ ॥

ಬಾಲ್ಯಾತ್ ಪ್ರಭೃತಿ ಚಾರಿಘ್ನಸ್ತಾನಿ ದುಃಖಾನಿ ಚಿಂತಯನ್ ।
ನಿರವಿದ್ಯತ ಧರ್ಮಾತ್ಮಾ ಜೀವಿತೇನ ವೃಕೋದರಃ ॥ ೧೬ ॥

ವಿಷಮ ಪರಿಸ್ಥಿತಿಯಲ್ಲಿದ್ದ ಪಾರ್ಥರನ್ನು ತುಚ್ಛೀಕರಿಸಿ ಸಮೃದ್ಧ ಪರಿಸ್ಥಿತಿಯಲ್ಲಿದ್ದ ನಿನ್ನ ಪುತ್ರನು ಭೀಮನಾದ ತನ್ನ ಹಿಂದೆ ಆನುಕರಿಸಿದ ಗತಿಯನ್ನು ಸ್ಮರಿಸುತ್ತಾ ಕೋಪದಿಂದ ಪ್ರಜ್ಞಾಶೂನ್ಯರಾದ ಕೌರವರು ಬಾಲ್ಯದಿಂದಲೂ ನೀಡಿದ ದುಃಖಿಗಳನ್ನು ಸ್ಮರಿಸುತ್ತಾ ಶತ್ರುಸೂದನನೂ, ಧರ್ಮಾತ್ಮನೂ ಆದ ವೃಕೋದರನು ಬದುಕಿ ಏನು ಪ್ರಯೋಜನ ಎಂಬ ಭಾವವನ್ನು ತಾಳಿದನು.

ತತೋ ವಿಸ್ಫಾರ್ಯ ಸುಮದ್ದೇಮಪೃಷ್ಠಂ ದುರಾಸದಮ್ ।
ಚಾಪಂ ಭರತಶಾರ್ದೂಲಶ್ಚಕ್ರಾತ್ಮಾ ಕರ್ಣಮಭ್ಯಯಾತ್ ॥ ೧೭ ॥

ಆಗ ಭರತಶಾರ್ದೂಲನಾದ ಭೀಮಸೇನನು ಸುವರ್ಣಪೃಷ್ಠವುಳ್ಳ ಸಮೀಪಿಸಲು ಅಸಾಧ್ಯವಾದ ತನ್ನ ಧನುಸ್ಸನ್ನು ಬಗ್ಗಿಸಿ ಜೀವಿತದ ಮೇಲೆ ಆಸೆಯನ್ನು ತೊರೆದು ಕರ್ಣನ ಮೇಲೆ ಎರಗಿದನು.

ಸ ಸಾಯಕಮಯೈರ್ಜಾಲೈರ್ಭೀಮಃ ಕರ್ಣರಥಂ ಪ್ರತಿ ।
ಭಾನುಮದ್ಭಿಃ ಶಿಲಾಧೌತೈರ್ಭಾನೋಃ ಪ್ರಾಚ್ಛಾದಯತ್ಪ್ರಭಾಮ್ ॥ ೧೮ ॥

ಭೀಮನು ಕರ್ಣನ ರಥದ ಸುತ್ತಲೂ ಪ್ರಕಾಶಮಾನವಾದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳ ಜಾಲದಿಂದ ಸೂರ್ಯನ ಪ್ರಭೆಯನ್ನು ಮುಚ್ಚಿದನು.

ತತಃ ಪ್ರಹಸ್ಯಾಧಿರಥಿಸ್ತೂರ್ಣಮಸ್ಯನ್ ಶಿತಾನ್ ಶರಾನ್ ।
ವ್ಯಧಮದ್ ಭೀಮಸೇನಸ್ಯ ಶರಜಾಲಾನಿ ಪತ್ರಿಭಿಃ ॥ ೧೯ ॥

ಆಗ ಅಧಿರಥನ ಪುತ್ರನಾದ ಕರ್ಣನು ನಕ್ಕು ಭೀಮಸೇನನ ಬಾಣಸಮೂಹಗಳನ್ನು ಪತ್ರಗಳನ್ನು ಹೊಂದಿದ ತನ್ನ ನಿಶಿತವಾದ ಬಾಣಗಳಿಂದ ಶೀಘ್ರವಾಗಿ ವಿನಾಶಗೊಳಿಸಿದನು.

ಮಹಾರಥೋ ಮಹಾಬಾಹುರ್ಮಹಾವೇಗೈರ್ಮಹಾಬಲಃ ।
ವಿವ್ಯಾಧಾಧಿರಥಿರ್ಭೀಮಂ ನವಭಿರ್ನಿಶಿತೈಃ ಶರೈಃ ॥ ೨೦ ॥

ಮಹಾರಥನೂ, ಮಹಾಬಾಹುವೂ, ಮಹಾಬಲನೂ ಆದ ಕರ್ಣನು ಮಹಾವೇಗವುಳ್ಳ ಒಂಬತ್ತು ತೀಕ್ಷ್ಣವಾದ ಬಾಣಗಳಿಂದ ಭೀಮನನ್ನು ಹೊಡೆದನು.

ಸ ತೋತ್ತ್ರೈರಿವ ಮಾತಂಗೋ ವಾರ್ಯಮಾಣಃ ಪತತ್ರಿಭಿಃ ।
ಅಭ್ಯಧಾವದಸಂಭ್ರಾಂತಃ ಸೂತಪುತ್ರಂ ವೃಕೋದರಃ ॥ ೨೧ ॥

ಅಂಕುಶಗಳಿಂದ ಆನೆಯನ್ನು ಹೊಡೆದಂತೆ ಆ ಬಾಣಗಳಿಂದ ತಡೆಯಲ್ಪಡುತ್ತಿದ್ದರೂ ವೃಕೋದರನು ಯಾವ ಚಿಂತೆಯೂ ಇಲ್ಲದೆ ಸೂತಪುತ್ರನಾದ ಕರ್ಣನ ಕಡೆಗೆ ಧಾವಿಸಿದನು.

ತಮಾಪತಂತಂ ವೇಗೇನ ರಭಸಂ ಪಾಂಡವರ್ಷಭಮ್ ।
ಕರ್ಣಃ ಪ್ರತ್ಯುದ್ಯಯೌ ಯೋದ್ಧುಂ ಮತ್ತೋ ಮತ್ತಮಿವ ದ್ವಿಪಮ್ ॥೨೨॥

ವೇಗದಿಂದ ತನ್ನೆಡೆಗೆ ಬರುತ್ತಿದ್ದ ವೀರಶಾಲಿಯಾದ ಪಾಂಡವಶ್ರೇಷ್ಠನಾದ ಭೀಮಸೇನನನ್ನು ನೋಡಿ ಒಂದು ಮದಗಜವು ಇನ್ನೊಂದು ಮದಗಜದ ಜೊತೆಯಲ್ಲಿ ಹೋರಾಡಲು ಬಂದಂತೆ ಕರ್ಣನು ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಅವನ ಎದುರಾಗಿ ಬಂದನು.

ತತಃ ಪ್ರಧ್ಮಾಪ್ಯ ಜಲಜಂ ಭೇರೀಶತನಿನಾದಿತಮ್ ।
ಅಕ್ಷುಭ್ಯತ ಬಲಂ ಹರ್ಷಾದುದ್ಧೂತ ಇವ ಸಾಗರಃ ॥ ೨೩ ॥

ಆಗ ಕೌರವರ ಸೇನೆಯು ಶಂಖಗಳನ್ನು ಊದಿ, ನೂರಾರು ಭೇರಿಗಳನ್ನು ಬಾರಿಸಿ ಉಕ್ಕುವ ಸಮುದ್ರದಂತೆ ಕ್ಷೋಭೆಗೊಂಡಿತು.

ತದುದ್ಧೂತಂ ಬಲಂ ದೃಷ್ಟ್ವಾ ರಥನಾಗಾಶ್ವಪತ್ತಿಮತ್ ।
ಭೀಮಃ ಕರ್ಣಂ ಸಮಾಸಾದ್ಯ ಧಾದಯಾಮಾಸ ಸಾಯಕೈಃ ॥ ೨೪ ॥

ರಥ-ಗಜಾಶ್ವ-ಪದಾತಿಗಳಿಂದ ಕೂಡಿದ ಉಕ್ಕುವ ಸಮುದ್ರದಂತಿದ್ದ ಆ ಸೈನ್ಯವನ್ನು ನೋಡಿ ಭೀಮನು ಕರ್ಣನನ್ನು ಸಮೀಪಿಸಿ ತನ್ನ ಬಾಣಗಳಿಂದ ಅವನನ್ನು ಮುಚ್ಚಿದನು.

ಅಶ್ವಾನ್ಶ್ಯಸವರ್ಣಾಂಸ್ತು ಹಂಸವರ್ಣೈರ್ಹಯೋತ್ತಮೈಃ ।
ವ್ಯಾಮಿಶ್ರಯದ್ರಣೇ ಕರ್ಣಃ ಪಾಂಡವಂ ಧಾದಯನ್ ಶರೈಃ ॥ ೨೫ ॥

ಕರ್ಣನು ಭೀಮಸೇನನ ಜಿಂಕೆಯ ಬಣ್ಣದ ಅಶ್ವಗಳನ್ನು ಹಂಸವರ್ಣದ ತನ್ನ ಶ್ರೇಷ್ಠವಾದ ಅಶ್ವಗಳಿಂದ ಮಿಶ್ರಣ ಮಾಡುತ್ತಾ ಅವನನ್ನು ರಣರಂಗದಲ್ಲಿ ತನ್ನ ಬಾಣಗಳಿಂದ ಆಚ್ಛಾದಿಸಿದನು.

ಋಶ್ಯವರ್ಣಾನ್ ಹಯಾನ್ ಕರ್ಣೇರ್ಮಿಶ್ರಾನ್ ಮಾರುತರಂಹಸಃ ।
ನಿರೀಕ್ಷ್ಯ ತವ ಪುತ್ರಾಣಾಂ ಹಾಹಾಕೃತಮಭೂದ್ ಬಲಮ್ ॥ ೨೬ ॥

ಜಿಂಕೆಯ ಬಣ್ಣದ ವಾಯುವೇಗವುಳ್ಳ ಅಶ್ವಗಳು ಹಂಸವರ್ಣದ ಅಶ್ವಗಳ ಜೊತೆಯಲ್ಲಿ ಮಿಶ್ರಿತವಾಗಿರುವುದನ್ನು ನೋಡಿ ನಿನ್ನ ಪುತ್ರರ ಸೇನೆಯು ಹಾಹಾಕಾರವನ್ನು ಮಾಡಿತು.

ತೇ ಹಯಾ ಬಹ್ವಶೋಭಂತ ಮಿಶ್ರಿತಾ ವಾತರಂಹಸಃ ।
ಸಿತಾಸಿತಾ ಮಹಾರಾಜ ಯಥಾ ವ್ಯೋಮ್ನಿ ಬಲಾಹಕಾಃ ॥ ೨೭ ॥

ಎಲೈ ಮಹಾರಾಜನೇ, ಆಕಾಶದಲ್ಲಿ ಬಿಳಿಯ ಮತ್ತು ಕಪ್ಪು ಮೋಡಗಳು ಸೇರಿದಂತೆ ವಾಯುವೇಗವುಳ್ಳ ಆ ಅಶ್ವಗಳು ಮಿಶ್ರಿತವಾಗಿ ಬಹಳ ಶೋಭಿಸಿದವು.

ಸಂರಬ್ಧೌ ಕ್ರೋಧತಾಮ್ರಾಕ್ಷೌ ಪ್ರೇಕ್ಷ್ಯ ಕರ್ಣವ್ಯಕೋದರೌ ।
ಸಂತ್ರಸ್ತಾಃ ಸಮಕಂಪಂತ ತ್ವದೀಯಾನಾಂ ಮಹಾರಥಾಃ ॥ ೨೮ ॥

ಕೋಪಗೊಂಡವರೂ, ಕೋಪದಿಂದ ಕೆಂಪಾದ ಕಣ್ಣುಳ್ಳವರೂ ಆದ ಕರ್ಣ-ವೃಕೋದರರನ್ನು ನೋಡಿ ನಿನ್ನ ಸೈನ್ಯದ ಮಹಾರಥರು ಹೆದರಿ ನಡುಗಿದರು.

ಯಮರಾಷ್ಟ್ರೋಪಮಂ ಘೋರಮಾಸೀದಾಯೋಧನಂ ತಯೋಃ ।
ದುರ್ದರ್ಶಂ ಭರತಶ್ರೇಷ್ಠ ಪ್ರೇತರಾಜಪುರಂ ಯಥಾ ॥ ೨೯ ॥

ಎಲೈ ಭರತಶ್ರೇಷ್ಠನೇ, ಅವರಿಬ್ಬರಿಗೆ ಕಣ್ಣಿನಿಂದ ನೋಡಲು ಅಸಾಧ್ಯವಾದ ಯಮರಾಷ್ಟ್ರದಂತಿದ್ದ ಪ್ರೇತರಾಜಪಟ್ಟಣದಂತಿದ್ದ ಘೋರವಾದ ಯುದ್ಧವು ನಡೆಯಿತು.

ಸಮಾಜಮಿವ ವಿಚಿತ್ರಂ ಪ್ರೇಕ್ಷಮಾಣಾ ಮಹಾರಥಾಃ ।
ನಾಲಕ್ಷಯನ್ ಜಯಂ ವ್ಯಕ್ತಮೇಕೈಕಸ್ಯ ನಿವಾರಣೇ ॥ ೩೦ ॥

ನಿನ್ನ ಮಹಾರಥರು ಆ ವಿಚಿತ್ರವಾದ ಸಮಾಗಮವನ್ನು ನೋಡುತ್ತಾ ಒಬ್ಬೊಬ್ಬರು ಹಿಂದೆ ಸರಿಯುತ್ತಿರಲು ಯಾರಿಗೂ ಜಯವನ್ನು ಗುರುತಿಸಲಿಲ್ಲ.

ತಯೋಃ ಪ್ರೇಕ್ಷಂತ ಸಮ್ಮರ್ದಂ ಸನ್ನಿಕೃಷ್ಟಮಹಾಸ್ತ್ರಯೋಃ ।
ತವ ದುರ್ಮಂತ್ರಿತೇ ರಾಜನ್ ಸಪುತ್ರಸ್ಯ ವಿಶಾಂಪತೇ ॥ ೩೧ ॥

ಎಲೈ ರಾಜನೇ, ಪುತ್ರಸಹಿತನಾದ ನಿನ್ನ ದುರ್ಮಂತ್ರಣದ ನಿಮಿತ್ತದಿಂದ ಮಹಾಸ್ತ್ರಗಳನ್ನು ಹೊಂದಿದ ಅವರಿಬ್ಬರಿಗೂ ನಡೆದ ಯುದ್ಧವನ್ನು ನಿನ್ನ ಮಹಾರಥರು ನೋಡಿದರು.

ಘಾದಯಂತೌ ಹಿ ಶತ್ರುಘ್ನಾವನ್ಯೋನ್ಯಂ ಸಾಯಕೈಃ ಶಿತೈಃ ।
ಶರಜಾಲಾವೃತಂ ವ್ಯೋಮ ಚಕ್ರಾತೇ ಶರವೃಷ್ಟಿಭಿಃ ॥ ೩೨ ॥

ಶತ್ರುಸಂಹಾರಕರಾದ ಅವರು ನಿಶಿತವಾದ ಬಾಣಗಳಿಂದ ಪರಸ್ಪರವಾಗಿ ಆಚ್ಛಾದಿಸುತ್ತಾ ತಮ್ಮ ಬಾಣಗಳ ಮಳೆಯಿಂದ ಆಕಾಶವನ್ನು ಶರಜಾಲದಿಂದ ಆವೃತವನ್ನಾಗಿ ಮಾಡಿದರು.

ತಾವನ್ಯೋನ್ಯಂ ಜಘಾಂಸಂತೌ ಶರೈಸ್ತೀಕ್ಷ್ಣೈರ್ಮಹಾರಥೌ ।
ಪ್ರೇಕ್ಷಣೀಯತರಾವಾಸ್ತಾಂ ವೃಷ್ಟಿಮಂತಾವಿವಾಂಬುದೌ ॥ ೩೩ ॥

ತೀಕ್ಷ್ಣವಾದ ಬಾಣಗಳಿಂದ ಪರಸ್ಪರವಾಗಿ ಕೊಲ್ಲಲು ಬಯಸಿದ ಆ ಇಬ್ಬರು ಮಹಾರಥರು ಮಳೆಯನ್ನು ಸುರಿಸುವ ಮೋಡಗಳಂತೆ ನೋಡಲು ಬಹಳ ರಮಣೀಯವಾಗಿ ಕಂಡರು.

ಸುವರ್ಣವಿಕೃತಾನ್ ಬಾಣಾನ್ ಪ್ರಮುಂಚಂತಾವರಿಂದಮೌ ।
ಭಾಸ್ವರಂ ವ್ಯೋಮ ಚಕ್ರಾತೇ ವಹ್ನ್ಯುಲ್ಕಾಭಿರಿವ ಪ್ರಭೋ ॥ ೩೪ ॥

ಎಲೈ ಪ್ರಭುವೇ, ಅರಿಂದಮರಾದ ಅವರು ಸುವರ್ಣಾಲಂಕೃತವಾದ ಬಾಣಗಳನ್ನು ಪ್ರಯೋಗಿಸುತ್ತಾ ಆಕಾಶವನ್ನು ವಹ್ನಿಯ ಕಿಡಿಗಳಿಂದಲೋ ಎಂಬಂತೆ ಪ್ರಕಾಶಗೊಳಿಸಿದರು.

ತಾಭ್ಯಾಂ ಮುಕ್ತಾ ವ್ಯಕಾಶಂತ ಕಂಕಬರ್ಹಿಣವಾಸಸಃ ।
ಪಂಕ್ತ್ಯಃ ಶರದಿ ಮತ್ತಾನಾಂ ಸಾರಸಾನಾಮಿವಾಂಬರೇ ॥ ೩೫ ॥

ಅವರಿಬ್ಬರೂ ಪ್ರಯೋಗಿಸಿದ ಕಂಕಪಕ್ಷಿಗಳ ಮತ್ತು ನವಿಲುಗಳ ಪುಂಖವನ್ನು ಹೊಂದಿದ ಬಾಣಗಳ ಪಂಕ್ತಿಯು ಶರತ್ಕಾಲದಲ್ಲಿ ಆಕಾಶದಲ್ಲಿ ಹೋಗುವ ಮದಿಸಿದ ಸಾರಸ ಪಕ್ಷಿಗಳ ಪಂಕ್ತಿಯಂತೆ ಶೋಭಿಸಿತು.

ಸಂಸಕ್ತಂ ಸೂತಪುತ್ರೇಣ ದೃಷ್ಟ್ವಾ ಭೀಮಮರಿಂದಮಮ್ ।
ಅತಿಭಾರಮಮನ್ಯೇತಾಂ ಭೀಮೇ ಕೃಷ್ಣಧನಂಜಯೌ ॥ ೩೬ ॥

ಸೂತಪುತ್ರನಾದ ಕರ್ಣನ ಜೊತೆಯಲ್ಲಿ ಯುದ್ಧದಲ್ಲಿ ಸಂಘಟಿಸಿದ ಅರಿಂದಮನಾದ ಭೀಮನನ್ನು ಕೃಷ್ಣಾರ್ಜುನರು ಭೀಮನ ಮೇಲೆ ದೊಡ್ಡ ಭಾರವು ಇದೆ ಎಂದು ತಿಳಿದರು.

ತತ್ರಾಧಿರಥಿಭೀಮಾಭ್ಯಾಂ ಶರೈರ್ಮುಕ್ತೈರ್ದ್ರಢಾಹತಾಃ ।
ಇಷುಪಾತಮತಿಕ್ರಮ್ಯ ಪೇತುರಶ್ವನರದ್ವಿಪಾಃ ॥ ೩೭ ॥

ಕರ್ಣ-ವೃಕೋದರರಿಂದ ಬಾಣದಿಂದ ಗಾಢವಾಗಿ ಹೊಡೆಯಲ್ಪಟ್ಟ ಅಶ್ವ-ನರ-ಗಜಗಳು ಒಂದು ಬಾಣವು ಸಾಗುವ ದಾರಿಯನ್ನು ಹೊಂದಿ ಭೂಮಿಯ ಮೇಲೆ ಬಿದ್ದವು.

ಪತದ್ಭಿಃ ಪತಿತೈಶ್ಚಾನ್ಯೈರ್ಗತಾಸುಭಿರನೇಕಶಃ ।
ಕೃತೋ ಮಹಾನ್ ಮಹಾರಾಜ ಪುತ್ರಾಣಾಂ ತೇ ಜನಕ್ಷಯಃ ॥ ೩೮ ॥

ಎಲೈ ಮಹಾರಾಜನೇ, ಭೂಮಿಯ ಮೇಲೆ ಬಿದ್ದ ಮತ್ತು ಪ್ರಾಣಗಳನ್ನು ಕಳೆದುಕೊಂಡು ಬೀಳುತ್ತಿದ್ದ ಅನೇಕ ಗಜಾಶ್ವ-ಯೋಧರಿಂದ ನಿನ್ನ ಪುತ್ರರಿಗೆ ದೊಡ್ಡ ಜನಕ್ಷಯವು ಉಂಟಾಯಿತು.

ಮನುಷ್ಯಾಶ್ವಗಜಾನಾಂ ಚ ಶರೀರೈರ್ಗತಜೀವಿತೈಃ ।
ಕ್ಷಣೇನ ಭೂಮಿಃ ಸಂಜಜ್ಞೇ ಸಂವೃತಾ ಭರತರ್ಷಭ ॥ ೩೯ ॥

ಎಲೈ ಭರತಶ್ರೇಷ್ಠನೇ, ಒಂದು ಕ್ಷಣದಲ್ಲಿ ಮೃತರಾದ ಮನುಷ್ಯ-ಅಶ್ವ-ಗಜಗಳ ಶರೀರದಿಂದ ಭೂಮಿಯು ಮುಚ್ಚಿಹೋಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತದಶಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಏಕಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹದಿನೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೆಂಟನೆಯ ಅಧ್ಯಾಯ

ಭೀಮನಿಂದ ಕರ್ಣನ ಸಹಾಯಕ್ಕೆ ಬಂದ ದುರ್ಜಯನ ವಧೆ.

ಧೃತರಾಷ್ಟ್ರಃ

ಅತ್ಯದ್ಭುತಮಹಂ ಮನ್ಯೇ ಭೀಮಸೇನಸ್ಯ ವಿಕ್ರಮಮ್ ।
ಯತ್ ಕರ್ಣಂ ಯೋಧಯಾಮಾಸ ಸಮರೇ ಲಘುವಿಕ್ರಮಮ್ ॥ ೧ ॥

ಧೃತರಾಷ್ಟ್ರ- ಕ್ಷಿಪ್ರಕಾರಿಯೂ, ಪರಾಕ್ರಮಶಾಲಿಯೂ ಆದ ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಿದ ಭೀಮನ ಪರಾಕ್ರಮವು ಬಹಳ ಅದ್ಭುತವಾದುದೆಂದು ನಾನು ತಿಳಿಯುತ್ತೇನೆ.

ತ್ರಿದಶಾನಪಿ ಚೋದ್ಯುಕ್ತಾನ್ ಸರ್ವಶಸ್ತ್ರಧರಾನ್ ಯುಧಿ ।
ವಾರಯೇದ್ ಯೋ ರಣೇ ಕರ್ಣಃ ಸಯಕ್ಷಾಸುರಮಾನವಾನ್ ॥ ೨ ॥

ಸ ಕಥಂ ಪಾಂಡವಂ ಯುದ್ಧೇ ಭ್ರಾಜಮಾನಮಿವ ಶ್ರಿಯಾ ।
ನಾತರತ್ ಸಂಯುಗೇ ತಾತ ತನ್ಮಾಚಕ್ಷ್ವ ಸಂಜಯ ॥ ೩ ॥

ಯಾವ ಕರ್ಣನು ಸರ್ವಶಸ್ತ್ರಗಳನ್ನು ಧರಿಸಿದ ಯಕ್ಷ-ರಾಕ್ಷಸ-ಮನುಷ್ಯರಿಂದ ಸಹಿತರಾದ ದೇವತೆಗಳನ್ನೂ ಯುದ್ಧದಲ್ಲಿ ತಡೆಯಬಲ್ಲನೋ ಅಂತಹ ಕರ್ಣನು ಎಲೈ ಪ್ರೀತಿಪಾತ್ರನಾದ ಸಂಜಯನೇ, ತನ್ನ ಕಾಂತಿಯಿಂದ ಬೆಳಗುತ್ತಿದ್ದ ಪಾಂಡುಪುತ್ರನಾದ ಭೀಮಸೇನನನ್ನು ಯುದ್ಧದಲ್ಲಿ ಹೇಗೆ ದಾಟಲಿಲ್ಲ?

ಕಥಂ ಚ ಯುದ್ಧಂ ಭೂಯೋಽಭೂತ್ ತಯೋಃ ಪ್ರಾಣದುರೋದರೇ ।
ಅತ್ರ ಮನ್ಯೇ ಸಮಾಯತ್ತೋ ಜಯೋ ವಾಽಜಯ ಏವ ವಾ ॥ ೪ ॥

ಪ್ರಾಣವನ್ನು ಪಣವಾಗಿಟ್ಟ ಆ ಯುದ್ಧದ್ಯೂತವು ಪುನಃ ಅವರಿಬ್ಬರಿಗೆ ಹೇಗೆ ನಡೆಯಿತು? ನಮ್ಮ ಜಯ-ಪರಾಜಯಗಳು ಈ ಯುದ್ಧವನ್ನು ಅವಲಂಬಿಸಿದೆ ಎಂದು ತಿಳಿಯುತ್ತೇನೆ.

ಕರ್ಣಂ ಪ್ರಾಪ್ಯ ರಣೇ ಸೂತ ಮಮ ಪುತ್ರಃ ಸುಯೋಧನಃ ।
ಜೇತುಮುತ್ಸಹತೇ ಪಾರ್ಥಾನ್ ಸಗೋವಿಂದಾನ್ ಸಸಾತ್ವತಾನ್ ॥ ೫ ॥

ಎಲೈ ಸೂತನೇ, ನನ್ನ ಪುತ್ರನಾದ ಸುಯೋಧನನು ಕರ್ಣನನ್ನು ನಂಬಿ ಸಾತ್ವತರಿಂದ ಮತ್ತು ಕೃಷ್ಣನಿಂದ ಸಹಿತರಾದ ಪಾಂಡವರನ್ನು ಯುದ್ಧದಲ್ಲಿ ಗೆಲ್ಲುತ್ತೇನೆಂದು ಆಶಿಸುತ್ತಾನೆ.

ಶ್ರುತ್ವಾ ತು ನಿರ್ಜಿತಂ ಕರ್ಣಮಸಕೃದ್ ಭೀಮಕರ್ಮಣಾ ।
ಭೀಮಸೇನೇನ ಸಮರೇ ಮೋಹ ಆವಿಶತೀವ ಮಾಮ್ ॥ ೬ ॥

ಭಯಂಕರ ಕರ್ಮವನ್ನು ಮಾಡುವ ಭೀಮಸೇನನಿಂದ ಕರ್ಣನು ಅನೇಕ ಬಾರಿ ಯುದ್ಧದಲ್ಲಿ ಪರಾಜಿತನಾಗಿದ್ದಾನೆಂದು ಕೇಳಿ ನನಗೆ ಮೂರ್ಛೆ ಉಂಟಾಗುತ್ತಿದೆ.

ವಿನಷ್ಟಾನ್ ಕೌರವಾನ್ ಮನ್ಯೇ ಮಮ ಪುತ್ರಸ್ಯ ದುರ್ನಯೈಃ ।
ನ ಹಿ ಕರ್ಣೋ ಮಹೇಷ್ವಾಸಾನ್ ಪಾರ್ಥಾನ್ ಜೇಷ್ಯತಿ ಸಂಜಯ ॥

ಕೌರವರು ನನ್ನ ಪುತ್ರನ ದುರ್ನೀತಿಗಳಿಂದ ನಾಶವನ್ನು ಹೊಂದಿದ್ದಾರೆ ಎಂದು ಭಾವಿಸುತ್ತೇನೆ. ಎಲೈ ಸಂಜಯನೇ, ಕರ್ಣನು ಮಹಾಧನುರ್ಧಾರಿಗಳಾದ ಪಾಂಡವರನ್ನು ಗೆಲ್ಲುವುದಿಲ್ಲ.

ಕೃತವಾನ್ ಯಾನಿ ಯುದ್ಧಾನಿ ಕರ್ಣಃ ಪಾಂಡುಸುತೈಃ ಸಹ ।
ಸರ್ವತ್ರ ಪಾಂಡವಾಃ ಕರ್ಣಮಜಯಂತ ರಣಾಜಿರೇ ॥ ೮ ॥

ಕರ್ಣನು ಇದುವರೆಗೆ ಪಾಂಡುಪುತ್ರರ ಜೊತೆಯಲ್ಲಿ ಎಷ್ಟು ಯುದ್ಧಗಳನ್ನು ಮಾಡಿದ್ದಾನೆಯೋ ಅವುಗಳಲ್ಲೆಲ್ಲಾ ಪಾಂಡವರು ಕರ್ಣನನ್ನೇ ಜಯಿಸಿದ್ದಾರೆ.

ಅಜಯ್ಯಾಃ ಪಾಂಡವಾಸ್ತಾತ ದೇವೈರಪಿ ಸವಾಸವೈಃ ।
ನ ಚ ತದ್ ಬುಧ್ಯತೇ ಮಂದಃ ಪುತ್ರೋ ದುರ್ಯೋಧನೋ ಮಮ ॥

ಎಲೈ ಪ್ರೀತಿಪಾತ್ರನೇ, ಇಂದ್ರನಿಂದ ಸಹಿತರಾದ ದೇವತೆಗಳೂ ಪಾಂಡವರನ್ನು ಯುದ್ಧದಲ್ಲಿ ಗೆಲ್ಲಲಾರರು. ಮಂದನಾದ ನನ್ನ ಪುತ್ರನಾದ ದುರ್ಯೋಧನನು ಅದನ್ನು ತಿಳಿಯುತ್ತಿಲ್ಲ.

ಧನಂ ಧನೇಶ್ವರಸ್ಯೇವ ಹೃತ್ವಾ ಪಾರ್ಥಸ್ಯ ಮೇ ಸುತಃ ।
ಮಧುಪ್ರೇಪ್ಸುರಿವಾಬುದ್ಧಿಃ ಪ್ರಪಾತಂ ನಾವಬುಧ್ಯತೇ ॥ ೧೦ ॥

ಕುಬೇರನ ಧನವನ್ನು ಅಪಹರಿಸಿದಂತೆ ಮಂದನಾದ ನನ್ನ ಪುತ್ರನು ಪಾಂಡವರ ಸಂಪತ್ತನ್ನು ಅಪಹರಿಸಿ ಜೇನನ್ನು ಪಡೆಯಲು ಬಯಸುತ್ತಿದ್ದಾನೆ. ಮುಂದಿರುವ ಹಳ್ಳವನ್ನು ನೋಡುತ್ತಿಲ್ಲ.

ನಿಕೃತ್ಯಾ ನಿಕೃತಿಪ್ರಜ್ಞೋ ರಾಜ್ಯಂ ಹೃತ್ವಾ ಮಹಾತ್ಮನಾಮ್ ।
ಜಿತಾನಿತ್ಯೇವ ಮನ್ವಾನಃ ಪಾಂಡವಾನವಮನ್ಯತೇ ॥ ೧೧ ॥

ಮೋಸದ ಬುದ್ಧಿಯುಳ್ಳ ಅವನು ಮಹಾತ್ಮರಾದ ಪಾಂಡವರ ರಾಜ್ಯವನ್ನು ಮೋಸದಿಂದಲೇ ಅಪಹರಿಸಿ, ಅವರನ್ನು ಪರಾಜಯಗೊಳಿಸಿದ್ದೇನೆ ಎಂದು ತಿಳಿದು ಅವರಿಗೆ ಅವಮಾನವನ್ನು ಮಾಡುತ್ತಿದ್ದಾನೆ.

ಪುತ್ರಸ್ನೇಹಾಭಿಭೂತೇನ ಮಯಾ ಚಾಪ್ಯಕೃತಾತ್ಮನಾ ।
ಧರ್ಮೇ ಸ್ಥಿತಾ ಮಹಾತ್ಮಾನೋ ನಿಕೃತಾಃ ಪಾಂಡುನಂದನಾಃ ॥ ೧೨ ॥

ಪುತ್ರಸ್ನೇಹಕ್ಕೆ ವಶನಾಗಿ ಒಳ್ಳೆಯ ಬುದ್ಧಿಯಿಲ್ಲದ ನಾನೂ ಸಹ ಧರ್ಮದಲ್ಲಿ ಇರುವ ಮಹಾತ್ಮರಾದ ಪಾಂಡವರಿಗೆ ಅಪಚಾರವನ್ನು ಮಾಡಿದ್ದೇನೆ.

ಶಮಕಾಮಃ ಸದಾ ಪಾರ್ಥೋ ದೀರ್ಘಪ್ರೇಕ್ಷೀ ಯುಧಿಷ್ಠಿರಃ ।
ಅಶಕ್ತ ಇತಿ ಮನ್ವಾನೈಃ ಪುತ್ರೈರ್ಮಮ ನಿರಾಕೃತಃ ॥ ೧೩ ॥

ಕುಂತೀಪುತ್ರನಾದ ಯುಧಿಷ್ಠಿರನು ದೀರ್ಘಪ್ರೇಕ್ಷಿ ಮತ್ತು ಯಾವಾಗಲೂ ಸಂಧಿಯನ್ನು ಬಯಸುವವನು. ಅವನನ್ನು ಅಶಕ್ತನೆಂದು ತಿಳಿದು ನನ್ನ ಪುತ್ರರು ಅವನು ಮಾಡಿದ ಸಂಧಿಯ ಸೂಚನೆಯನ್ನು ನಿರಾಕರಿಸಿದ್ದಾರೆ.

ತಾನಿ ದುಃಖಾನ್ಯನೇಕಾನಿ ವಿಪ್ರಕಾರಾಂಶ್ಚ ಸರ್ವಶಃ ।
ಹೃದಿ ಕೃತ್ವಾ ಮಹಾಬಾಹುರ್ಭೀಮೋಽಯುದ್ಧ್ಯತ ಸೂತಜಮ್ ॥೧೪॥

ಆ ಅನೇಕ ಕ್ಲೇಶಗಳನ್ನು ಮತ್ತು ಎಲ್ಲ ಅವಮಾನಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಹಾಬಾಹುವಾದ ಭೀಮನು ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತಸ್ಮಾನ್ಮೇ ಸಂಜಯ ಬ್ರೂಹಿ ಕರ್ಣಭೀಮೌ ಯಥಾ ರಣೇ ।
ಆಯುದ್ಧೇತಾಂ ಯುಧಿಶ್ರೇಷ್ಠೌ ಪರಸ್ಪರವಧೈಷಿಣೌ ॥ ೧೫ ॥

ಎಲೈ ಸಂಜಯನೇ, ಆದ್ದರಿಂದ ಯೋಧಶ್ರೇಷ್ಠರೂ, ಪರಸ್ಪರ ವಧೆಯನ್ನು ಬಯಸುವವರೂ ಆದ ಕರ್ಣ-ಭೀಮಸೇನರು ರಣರಂಗದಲ್ಲಿ ಹೇಗೆ ಯುದ್ಧವನ್ನು ಮಾಡಿದರು ಎಂಬುದನ್ನು ನನಗೆ ಹೇಳು.

ಸಂಜಯಃ

ಶೃಣು ರಾಜನ್ ಯಥಾ ವೃತ್ತಃ ಸಂಗ್ರಾಮಃ ಕರ್ಣಭೀಮಯೋಃ ।
ಪರಸ್ಪರವಧಪ್ರೇಪ್ಸ್ವೋರ್ವನೇ ಕುಂಜರಯೋರಿವ ॥ ೧೬ ॥

ಸಂಜಯ– ಪರಸ್ಪರ ವಧೆಯನ್ನು ಬಯಸಿದ ಕರ್ಣ-ಭೀಮಸೇನರಿಗೆ ಕಾಡಿನಲ್ಲಿ ಎರಡು ಗಜಗಳಿಗೆ ನಡೆದಂತೆ ಹೇಗೆ ಸಂಗ್ರಾಮವು ನಡೆಯಿತೆಂದು ಕೇಳು.

ರಾಜನ್ ವೈಕರ್ತನೋ ಭೀಮಂ ಕ್ರುದ್ಧಃ ಕ್ರುದ್ಧಮರಿಂದಮಮ್ ।
ಪರಾಕ್ರಾಂತಂ ಪರಾಕ್ರಮ್ಯ ವಿವ್ಯಾಧ ತ್ರಿಂಶತಾ ಶರೈಃ ॥ ೧೭ ॥

ರಾಜನೇ, ಕ್ರುದ್ಧನೂ, ಪರಾಕ್ರಮಶಾಲಿಯೂ ಆದ ಕರ್ಣನು ಕ್ರುದ್ಧನೂ, ಅರಿಂದಮನೂ, ಪರಾಕ್ರಮಶಾಲಿಯೂ ಆದ ಭೀಮಸೇನನ ಮೇಲೆ ಮೂವತ್ತು ಬಾಣಗಳನ್ನು ಪ್ರಯೋಗಿಸಿದನು.

ಮಹಾವೇಗೈಃ ಪ್ರಸನ್ನಾಗ್ರೈಃ ಶಾತಕುಂಭಪರಿಷ್ಕೃತೈಃ ।
ಆಹನದ್ ಭರತಶ್ರೇಷ್ಠ ಭೀಮಂ ವೈಕರ್ತನಃ ಶರೈಃ ॥ ೧೮ ॥

ಮಹಾವೇಗವುಳ್ಳ, ಒಳ್ಳೆಯ ಅಗ್ರಭಾಗವುಳ್ಳ, ಸುವರ್ಣಪರಿಷ್ಕೃತವಾದ ಬಾಣಗಳಿಂದ ಎಲೈ ಭರತಶ್ರೇಷ್ಠನೇ, ಕರ್ಣನು ಭೀಮನನ್ನು ಚೆನ್ನಾಗಿ ಹೊಡೆದನು.

ತಸ್ಯಾಸ್ಯತೋ ಧನುರ್ಭೀಮಶ್ಚಕರ್ತ ನಿಶಿತೈಸ್ತ್ರಿಭಿಃ ।
ರಥನೀಡಾಚ್ಚ ಯಂತಾರಂ ಭಲ್ಲೇನಾಪಾತಯತ್ ಕ್ಷಿತೌ ॥ ೧೯ ॥

ಭೀಮಸೇನನು ಹಾಗೆ ಬಾಣಗಳನ್ನು ಪ್ರಯೋಗಿಸುತ್ತಿದ್ದ ಕರ್ಣನ ಧನುಸ್ಸನ್ನು ತೀಕ್ಷ್ಣವಾದ ಮೂರು ಬಾಣಗಳಿಂದ ಕತ್ತರಿಸಿದನು. ಅವನ ಸಾರಥಿಯನ್ನು ಭಲ್ಲದಿಂದ ಹೊಡೆದು ರಥದ ಮುಂಭಾಗದಿಂದ ಭೂಮಿಯ ಮೇಲೆ ಬೀಳಿಸಿದನು.

ಸ ಕಾಂಕ್ಷನ್ ಭೀಮಸೇನಸ್ಯ ವಧಂ ವೈಕರ್ತನೋ ವೃಷಃ ।
ಶಕ್ತಿಂ ಕನಕವೈಡೂರ್ಯಚಿತ್ರದಂಡಾಂ ಪರಾಮೃಶತ್ ॥ ೨೦ ॥

ಭೀಮಸೇನನನ್ನು ಕೊಲ್ಲಲು ಬಯಸಿದ ಕರ್ಣನು ಕನಕವೈಡೂರ್ಯ ಭೂಷಿತವಾದ ದಂಡವುಳ್ಳ ಶಕ್ತಿಯನ್ನು ಕೈಯಲ್ಲಿ ತೆಗೆದುಕೊಂಡನು.

ಪ್ರಗೃಹ್ಯ ಚ ಮಹಾಶಕ್ತಿಂ ಕಾಲಶಕ್ತಿಮಿವಾಪರಾಮ್ ।
ಸಮುತ್ಕ್ಷಿಪ್ಯ ಚ ರಾಧೇಯಃ ಸಂಧಾಯ ಚ ಮಹಾಬಲಃ ।
ಚಿಕ್ಷೇಪ ಭೀಮಸೇನಾಯ ಜೀವಿತಾಂತಕರೀಮಿವ ॥ ೨೧ ॥

ಯಮನ ಶಕ್ತಿಯಂತಿದ್ದ ಆ ಮಹಾಶಕ್ತಿಯನ್ನು ಹಿಡಿದು, ಮಹಾಬಲನಾದ ಕರ್ಣನು ಅದನ್ನು ಎತ್ತಿ ಧನುಸ್ಸಿನಲ್ಲಿ ಹೂಡಿ, ಜೀವಿತಾಂತಕವಾದ ಅದನ್ನು ಭೀಮಸೇನನ ಮೇಲೆ ಪ್ರಯೋಗಿಸಿದನು.

ಶಕ್ತಂ ವಿಸೃಜ್ಯ ರಾಧೇಯಃ ಪುರಂದರ ಇವಾಶನಿಮ್ ।
ನನಾದ ಸುಮಹಾನಾದಂ ಬಲವಾನ್ ಸೂತನಂದನಃ ।
ತಂ ಚ ನಾದಂ ತತಃ ಶ್ರುತ್ವಾ ಪುತ್ರಾಸ್ತೇ ಹೃಷಿತಾऽಭವನ್ ॥ ೨೨ ॥

ಕರ್ಣನು ಇಂದ್ರನು ವಜ್ರಾಯುಧವನ್ನು ಪ್ರಯೋಗಿಸಿದಂತೆ ಆ ಶಕ್ತಿಯನ್ನು ಪ್ರಯೋಗಿಸಿ, ಬಲಿಷ್ಠನೂ, ಸೂತಪುತ್ರನೂ ಆದ ಅವನು ದೊಡ್ಡ ನಾದವನ್ನು ಮಾಡಿದನು. ಆ ನಾದವನ್ನು ಕೇಳಿ ನಿನ್ನ ಪುತ್ರರು ಸಂತೋಷಗೊಂಡರು.

ತಾಂ ಕರ್ಣಭುಜನಿರ್ಮುಕ್ತಾಮರ್ಕವೈಶ್ವಾನರಪ್ರಭಾಮ್ ।
ಶಕ್ತಿಂ ವಿಯತಿ ಚಿಚ್ಛೇದ ಭೀಮಃ ಸಪ್ತಭಿರಾಶುಗೈಃ ॥ ೨೩ ॥

ಕರ್ಣನಿಂದ ಪ್ರಯೋಗಿಸಲ್ಪಟ್ಟ ಸೂರ್ಯನ ಪ್ರಭೆಯನ್ನು ಹೊಂದಿದ ಆ ಶಕ್ತಿಯನ್ನು ಭೀಮಸೇನನು ಶೀಘ್ರಗಾಮಿಗಳಾದ ಏಳು ಬಾಣಗಳನ್ನು ಪ್ರಯೋಗಿಸಿ ಆಕಾಶದಲ್ಲಿಯೇ ಕತ್ತರಿಸಿದನು.

ಛಿತ್ತ್ವಾ ಶಕ್ತಿಂ ತತೋ ಭೀಮೋ ನಿರ್ಮುಕ್ತೋರಗಸನ್ನಿಭಾಮ್ ।
ಮಾರ್ಗಮಾಣ ಇವ ಪ್ರಾಣಾನ್ ಸೂತಪುತ್ರಸ್ಯ ಮಾರಿಷ ॥ ೨೪ ॥

ಪ್ರಾಹಿಣೋನ್ನವ ಸಂರಬ್ಧಃ ಶರಾನ್ ಬರ್ಹಿಣವಾಸಸಃ ।
ಸ್ವರ್ಣಪುಂಖಾನ್ ಶಿಲಾಧೌತಾನ್ ಯಮದಂಡೋಪಮಾನ್ ಮೃಧೇ ॥

ಪೊರೆಯನ್ನು ಬಿಟ್ಟ ಸರ್ಪದಂತಿದ್ದ ಆ ಶಕ್ತಿಯನ್ನು ಕತ್ತರಿಸಿ ಭೀಮಸೇನನು ಎಲೈ ಪೂಜ್ಯನೇ, ಕರ್ಣನ ಪ್ರಾಣಗಳನ್ನು ಹುಡುಕುವವನಂತೆ ಕೋಪದಿಂದ ಕೂಡಿದವನಾಗಿ ನವಿಲುಗರಿಯನ್ನು ಹೊಂದಿದ್ದ, ಸ್ವರ್ಣಪುಂಖವನ್ನು ಹೊಂದಿದ್ದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಯಮದಂಡದಂತಿದ್ದ ಒಂಬತ್ತು ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ಕರ್ಣೋऽಪ್ಯನ್ಯದ್ ಧನುರ್ಗೃಹ್ಯ ಹೇಮಪೃಷ್ಠಂ ದುರಾಸದಮ್ ।
ವಿಕೃಷ್ಯ ಚ ಮಹಾತೇಜಾ ವ್ಯಸೃಜತ್ ಸಾಯಕಾನ್ನವ ॥ ೨೬ ॥

ಮಹಾತೇಜಸ್ವಿಯಾದ ಕರ್ಣನೂ ಕೂಡ ಹೇಮಪೃಷ್ಠವನ್ನು ಹೊಂದಿದ್ದ, ಬಗ್ಗಿಸಲು ಕಷ್ಟಾಧ್ಯವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಅದನ್ನು ಎಳೆದು ಭೀಮಸೇನನ ಮೇಲೆ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ತಾನ್ ಪಾಂಡುಪುತ್ರಶ್ಚಿಚ್ಛೇದ ನವಭಿರ್ನತಪರ್ವಭಿಃ ।
ವಸುಷೇಣೇನ ನಿರ್ಮುಕ್ತಾನ್ನವ ರಾಜನ್ ಮಹಾಶರಾನ್ ।
ಛಿತ್ತ್ವಾ ಭೀಮೋ ಮಹಾರಾಜ ನಾದಂ ಸಿಂಹ ಇವಾನದತ್ ॥ ೨೭ ॥

ವಸುಷೇಣನಿಂದ (ಕರ್ಣನಿಂದ) ಪ್ರಯೋಗಿಸಲ್ಪಟ್ಟ ಆ ಒಂಬತ್ತು ದೊಡ್ಡ ಬಾಣಗಳನ್ನು ಎಲ್ಲೆ ರಾಜನೇ, ಬಾಗಿದ ತುದಿಯುಳ್ಳ ಒಂಬತ್ತು ಬಾಣಗಳಿಂದ ಪಾಂಡುಪುತ್ರನಾದ ಭೀಮಸೇನನು ಕತ್ತರಿಸಿ ಎಲ್ಲೆ ಮಹಾರಾಜನೇ, ಸಿಂಹದಂತೆ ನಾದವನ್ನುಮಾಡಿದನು.

ತೌ ವೃಷಾವಿವ ನರ್ದಂತೌ ಬಲಿನೌ ವಾಸಿತಾಂತರೇ ।
ಶಾರ್ದೂಲಾವಿವ ಚಾನ್ಯೋನ್ಯಮತ್ಯರ್ಥಂ ಚ ಹ್ಯಗರ್ಜತಾಮ್॥ ೨೮ ॥

ಬಲಿಷ್ಠರಾದ ಅವರಿಬ್ಬರೂ ವಾಸಿತದ (ಆಗತಾನೆ ಮೈನೆರೆದ ಗೋವಿನ) ಸಲುವಾಗಿ ಹೊಡೆದಾಡುವ ವೃಷಭಗಳಂತೆ, ಶಾರ್ದೂಲಗಳಂತೆ ಪರಸ್ಪರವಾಗಿ ಬಹಳವಾಗಿ ಗರ್ಜಿಸಿದರು.

ಅನ್ಯೋನ್ಯಂ ಪ್ರಜಿಹೀರ್ಷಂತಾವನ್ಯೋನ್ಯಸ್ಯಾಂತರೈಷಿಣೌ ।
ಅನ್ಯೋನ್ಯಮಭಿ ವೀಕ್ಷಂತೌ ಗೋಷ್ಠೇಷ್ವಿವ ಮಹರ್ಷಭೌ ॥ ೨೯ ॥

ಒಬ್ಬರನ್ನೊಬ್ಬರು ಸೋಲಿಸಲು ಬಯಸಿ, ಪರಸ್ಪರವಾಗಿ ಛಿದ್ರಗಳನ್ನು ಆನ್ವೇಷಿಸಿ, ಕೊಟ್ಟಗೆಯಲ್ಲಿನ ವೃಷಭಗಳಂತೆ ಪರಸ್ಪರವಾಗಿ ನೋಡಿದರು.

ಮಹಾಗಜಾವಿವಾಸಾದ್ಯ ವಿಷಾಣಾಗ್ರೈಃ ಪರಸ್ಪರಮ್ ।
ಶರೈಃ ಪೂರ್ಣಾಯತೋತ್ಸೃಷ್ಟೈರನ್ಯೋನ್ಯಮಭಜಚ್ಛತುಃ ॥ ೩೦ ॥

ಮಹಾಗಜಗಳು ಪರಸ್ಪರವಾಗಿ ಘಟ್ಟಿಸಿ, ದಂತಾಗ್ರದಿಂದ ತಿವಿದಂತೆ ಪೂರ್ಣವಾಗಿ ಎಳೆದು ಪ್ರಯೋಗಿಸಿದ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ನಿರ್ದಹಂತೌ ಮಹಾರಾಜ ಶರವೃಷ್ಟ್ಯಾ ಪರಸ್ಪರಮ್ ।
ಅನ್ಯೋನ್ಯಮಭಿವೀಕ್ಷಂತೌ ಕೋಪಾದ್ ವಿವೃತಲೋಚನೌ ॥ ೩೧ ॥

ಪ್ರಹಸಂತೌ ತಥಾನ್ಯೋನ್ಯಂ ಭರ್ತ್ಸಯಂತೌ ಮುಹುರ್ಮುಹುಃ ।
ಶಂಖಶಬ್ದಂ ಚ ಕುರ್ವಾಣೌ ಯುಯುಧಾತೇ ಪರಸ್ಪರಮ್ ॥ ೩೨ ॥

ಎಲೈ ಮಹಾರಾಜನೇ, ಬಾಣಗಳ ವೃಷ್ಟಿಯಿಂದ ಪರಸ್ಪರವಾಗಿ ದಹಿಸುತ್ತಾ, ಕೋಪದಿಂದ ಅರಳಿದ ಕಣ್ಣುಗಳಿಂದ ಪರಸ್ಪರವಾಗಿ ವೀಕ್ಷಿಸುತ್ತಾ, ಪರಸ್ಪರವಾಗಿ ನಗುತ್ತಾ ಪುನಃ ಪುನಃ ಹಿಯಾಳಿಸುತ್ತಾ, ಶಂಖಶಬ್ದವನ್ನು ಮಾಡುತ್ತಾ ಅವರು ಪರಸ್ಪರವಾಗಿ ಯುದ್ಧವನ್ನು ಮಾಡಿದರು.

ತಸ್ಯ ಭೀಮಃ ಪುನಶ್ಚಾಪಂ ಮುಷ್ಟೌ ಚಿಚ್ಛೇದ ಮಾರಿಷ ।
ಶಂಖವರ್ಣಾಂಶ್ಚ ತಾನಶ್ವಾನ್ ಬಾಣೈರ್ನಿನ್ಯೇ ಯಮಕ್ಷಯಮ್ ॥೩೩॥

ಎಲೈ ಪೂಜ್ಯನೇ, ಭೀಮಸೇನನು ಪುನಃ ಅವನ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು. ಶಂಖವರ್ಣದ ಕರ್ಣನ ಅಶ್ವಗಳನ್ನು ತನ್ನ ಬಾಣಗಳಿಂದ ಯಮಲೋಕಕ್ಕೆ ಕಳುಹಿಸಿದನು.

ತಥಾ ಕೃಚ್ಛ್ರಗತಂ ದೃಷ್ಟ್ವಾ ಕರ್ಣಂ ದುರ್ಯೋಧನೋ ನೃಪಃ ।
ವೇಪಮಾನ ಇವ ಕ್ರೋಧಾದ್ ವ್ಯಾದಿದೇಶಾಥ ದುರ್ಜಯಮ್ ॥ ೩೪॥

ಗಚ್ಛ ದುರ್ಜಯ ರಾಧೇಯಂ ಪುರಾ ಗ್ರಸತಿ ಪಾಂಡವಃ ।
ಜಹಿ ತೂಬರಕಂ ಕ್ಷಿಪ್ರಂ ಕರ್ಣಸ್ಯ ಬಲಮಾದಧತ್ ॥ ೩೫ ॥

ಆ ರೀತಿಯಲ್ಲಿ ಸಂಕಟಕ್ಕೆ ಸಿಲುಕಿದ ಕರ್ಣನನ್ನು ನೋಡಿ ರಾಜನಾದ ದುರ್ಯೋಧನನು ಕ್ರೋಧದಿಂದ ನಡುಗುತ್ತಾ ತನ್ನ ತಮ್ಮನಾದ ದುರ್ಜಯನನ್ನು ಕುರಿತು, ಎಲೈ ದುರ್ಜಯನೇ, ಪಾಂಡುಪುತ್ರನಾದ ಭೀಮಸೇನನು ಕರ್ಣನನ್ನು ಶೀಘ್ರವಾಗಿ ನುಂಗುತ್ತಿದ್ದಾನೆ. ನೀನು ಹೋಗಿ ಕರ್ಣನಿಗೆ ಬೆಂಬಲವನ್ನು ನೀಡಿದ ತೂಬರಕನಾದ (ಹೋತದಂತೆ ಗಡ್ಡವನ್ನು ಹೊಂದಿದ) ಅವನನ್ನು ಶೀಘ್ರವಾಗಿ ಕೊಲ್ಲು ಎಂದು ಆದೇಶಿಸಿದನು.

ಏವಮುಕ್ತಸ್ತಥೇತ್ಯುಕ್ತ್ವಾ ತವ ಪುತ್ರಸ್ತವಾತ್ಮಜಮ್ ।
ಅಭ್ಯದ್ರವದ್ ಭೀಮಸೇನಂ ವ್ಯಾಸಕ್ತಂ ವಿಕಿರನ್ ಶರಾನ್ ॥ ೩೬ ॥

ಹೀಗೆ ಹೇಳಲ್ಪಟ್ಟ ನಿನ್ನ ಪುತ್ರನು ನಿನ್ನ ಪುತ್ರನಾದ ದುರ್ಯೋಧನನಿಗೆ ಹಾಗೆಯೇ ಆಗಲಿ ಎಂದು ಹೇಳಿ, ಕರ್ಣನ ಜೊತೆಯಲ್ಲಿ ಯುದ್ಧದಲ್ಲಿ ತೊಡಗಿದ್ದ ಭೀಮಸೇನನ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಾ ಅವನ ಕಡೆಗೆ ಧಾವಿಸಿದನು.

ಸ ಭೀಮಂ ನವಭಿರ್ಬಾಣೈರಶ್ವಾನಷ್ಟಭಿರರ್ದಯತ್ ।
ಷಡ್ಭಿಃ ಸೂತಂ ತ್ರಿಭಿಃ ಕೇತುಂ ಪುನಸ್ತಂ ಚಾಪಿ ಸಪ್ತಭಿಃ ॥ ೩೭ ॥

ಅವನು ಭೀಮಸೇನನನ್ನು ಒಂಬತ್ತು ಬಾಣಗಳಿಂದಲೂ, ಅವನ ಅಶ್ವಗಳನ್ನು ಎಂಟು ಬಾಣಗಳಿಂದಲೂ ಪೀಡಿಸಿ, ಸೂತನನ್ನು ಆರು ಬಾಣಗಳಿಂದಲೂ, ಧ್ವಜವನ್ನು ಮೂರು ಬಾಣಗಳಿಂದಲೂ, ಪುನಃ ಭೀಮಸೇನನನ್ನು ಏಳು ಬಾಣಗಳಿಂದಲೂ ಪೀಡಿಸಿದನು.

ಭೀಮಸೇನೋऽಪಿ ಸಂಕ್ರುದ್ಧಃ ಸಾಶ್ವಯಂತಾರಮಾಶುಗೈಃ ।
ದುರ್ಜಯಂ ಭಿನ್ನಮರ್ಮಾಣಮನಯದ್ಯಮಸಾದನಮ್ ॥ ೩೮ ॥

ಭೀಮಸೇನನೂ ಸಹ ಬಹಳ ಕೋಪಗೊಂಡು ಅಶ್ವ-ಸಾರಥಿಗಳಿಂದ ಸಹಿತನಾದ ದುರ್ಜಯನನ್ನು ಶೀಘ್ರಗಾಮಿಗಳಾದ ಬಾಣಗಳಿಂದ ಅವನ ಮರ್ಮಗಳನ್ನು ಭೇದಿಸಿ ಯಮಲೋಕಕ್ಕೆ ಕಳುಹಿಸಿದನು.

ಸ್ವಲಂಕೃತಂ ಕ್ಷಿತೌ ಕ್ಷುಣ್ಣಂ ಚೇಷ್ಟಮಾನಂ ಯಥೋರಗಮ್ ।
ರುದನ್ನಾರ್ತಸ್ತವ ಸುತಂ ಕರ್ಣಶ್ಚಕ್ರೇ ಪ್ರದಕ್ಷಿಣಮ್ ॥ ೩೯ ॥

ಚೆನ್ನಾಗಿ ಅಲಂಕೃತನಾಗಿ ಭೂಮಿಯಲ್ಲಿ ಬಿದ್ದು ಸರ್ಪದಂತೆ ಹೊರಳಾಡುತ್ತಿದ್ದ ನಿನ್ನ ಪುತ್ರನನ್ನು ಕರ್ಣನು ಅಳುತ್ತಾ ಆರ್ತನಾಗಿ ಪ್ರದಕ್ಷಿಣೆಯನ್ನು ಮಾಡಿದನು.

ಸ ತು ತಂ ವಿರಥಂ ಕೃತ್ವಾ ಸ್ಮಯನ್ನತ್ಯಂತವೈರಿಣಮ್ ।
ಸಮಾಚಿನೋದ್ಬಾಣಗಣೈಃ ಶತಘ್ನೀಮಿವ ಶಂಕುಭಿಃ ॥ ೪೦ ॥

ಭೀಮಸೇನನಾದರೋ ಅತ್ಯಂತ ವೈರಿಯಾದ ಕರ್ಣನನ್ನು ನಗುತ್ತಲೇ ರಥಹೀನನ್ನಾಗಿ ಮಾಡಿ ಶತಘ್ನಿ ಎಂಬ ಆಯುಧವನ್ನು ಮೊಳೆಗಳಿಂದ ಹೊಡೆದಂತೆ ಬಾಣಗಳ ಸಮೂಹದಿಂದ ಕರ್ಣನನ್ನು ತುಂಬಿದನು.

ತಥಾಪ್ಯತಿರಥಃ ಕರ್ಣೋ ಭಿದ್ಯಮಾನಃ ಸ ಸಾಯಕೈಃ ।
ನ ಜಹೌ ಸಮರೇ ಭೀಮಂ ಕ್ರುದ್ಧರೂಪಂ ಪರಂತಪಃ ॥ ೪೧ ॥

ಭೀಮಸೇನನ ಬಾಣಗಳಿಂದ ಭೇದಿಸಲ್ಪಡುತ್ತಿದ್ದರೂ, ಅತಿರಥನೂ, ಪರಂತಪನೂ, ಕ್ರುದ್ಧರೂಪನೂ ಆದ ಕರ್ಣನು ರಣರಂಗದಲ್ಲಿ ಭೀಮನನ್ನು ತ್ಯಜಿಸಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಾದಶಾಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ದ್ವಿಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹದಿನೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತೊಂಬತ್ತನೆಯ ಅಧ್ಯಾಯ

ಭೀಮನಿಂದ ಪರಾಜಿತನಾದ ಕರ್ಣನ ಪಲಾಯನ.

ಸಂಜಯಃ

ಸ ತಥಾ ವಿರಥಃ ಕರ್ಣಃ ಪುನರ್ಭೀಮೇನ ನಿರ್ಜಿತಃ ।
ರಥಮನ್ಯಂ ಸಮಾಸ್ಥಾಯ ಸದ್ಯೋ ವಿವ್ಯಾಧ ಪಾಂಡವಮ್ ॥ ೧ ॥

ಸಂಜಯ– ಭೀಮಸೇನನಿಂದ ಪರಾಜಿತನಾಗಿ ರಥಹೀನನಾದ ಕರ್ಣನು ಇನ್ನೊಂದು ರಥವನ್ನು ಏರಿ ತಕ್ಷಣದಲ್ಲಿ ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಮಹಾಗಜಾವಿವಾಸಾದ್ಯ ವಿಷಾಣಾಗ್ರೈಃ ಪರಸ್ಪರಮ್ ।
ಶರೈಃ ಪೂರ್ಣಾಯತೋತ್ಸೃಷ್ಟೈರನ್ಯೋನ್ಯಮಭಿಜಘ್ನತುಃ ॥ ೨ ॥

ಅವರು ಪರಸ್ಪರವಾಗಿ ಸಮೀಪಿಸಿ, ದಂತಗಳಿಂದ ಹೊಡೆದಾಡುವ ಮಹಾಗಜಗಳಂತೆ ಪೂರ್ಣವಾಗಿ ಎಳೆದು ವಿಸರ್ಜಿಸಿದ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ಅಥ ಕರ್ಣಃ ಶರವ್ರಾತೈರ್ಭೀಮಂ ಬಲವದರ್ದಯತ್ ।
ನನಾದ ಬಲವನ್ನಾದಂ ಪುನರ್ವಿವ್ಯಾಧ ಚೋರಸಿ ॥ ೩ ॥

ಆನಂತರ ಕರ್ಣನು ಬಾಣಗಳ ಸಮೂಹದಿಂದ ಭೀಮನನ್ನು ಬಲವಾಗಿ ಹೊಡೆದು ಬಲವಾದ ನಾದವನ್ನು ಮಾಡಿ ಪುನಃ ಅವನ ಎದೆಯಲ್ಲಿ ಹೊಡೆದನು.

ತಂ ಭೀಮೋ ದಶಭಿರ್ಬಾಣೈಃ ಪ್ರತ್ಯವಿಧ್ಯದಜಿಹ್ಮಗೈಃ ।
ಪುನರ್ವಿವ್ಯಾಧ ವಿಂಶತ್ಯಾ ಶರಾಣಾಂ ನತಪರ್ವಣಾಮ್ ॥ ೪ ॥

ಭೀಮಸೇನನು ನೇರವಾಗಿ ಸಾಗುವ ಹತ್ತು ಬಾಣಗಳಿಂದ ಅವನನ್ನು ಹೊಡೆದು ಬಾಗಿದ ತುದಿಯುಳ್ಳ ಇಪ್ಪತ್ತು ಬಾಣಗಳಿಂದ ಪುನಃ ಹೊಡೆದನು.

ಕರ್ಣಸ್ತು ನವಭಿರ್ಭೀಮಂ ವಿದ್ವಾ ರಾಜನ್ ಸ್ತನಾಂತರೇ ।
ಧ್ವಜಮೇಕೇನ ವಿವ್ಯಾಧ ಸಾಯಕೇನ ಶಿತೇನ ಹ ॥ ೫ ॥

ಕರ್ಣನಾದರೋ ಎಲೈ ರಾಜನೇ, ಭೀಮನನ್ನು ಒಂಬತ್ತು ಬಾಣಗಳಿಂದ ಅವನ ಸ್ತನಗಳ ಮಧ್ಯದಲ್ಲಿ ಹೊಡೆದು ಒಂದು ನಿಶಿತವಾದ ಬಾಣದಿಂದ ಅವನ ಧ್ವಜವನ್ನು ಹೊಡೆದನು.

ಸಾಯಕಾನಾಂ ತತಃ ಪಾರ್ಥಸ್ತ್ರಿಷಷ್ಟ್ಯಾ ಪ್ರತ್ಯವಿಧ್ಯತ ।
ತೋತ್ತ್ರೈರಿವ ಮಹಾನಾಗಂ ಕಶಾಭಿರಿವ ವಾಜಿನಮ್ ॥ ೬ ॥

ಆಗ ಭೀಮಸೇನನು ಅಂಕುಶಗಳಿಂದ ಮಹಾಗಜವನ್ನು ಹೊಡೆದಂತೆ, ಚಾವಟಿಯಿಂದ ಅಶ್ವಗಳನ್ನು ಹೊಡೆದಂತೆ, ಅರವತ್ತೂರು ಬಾಣಗಳಿಂದ ಕರ್ಣನನ್ನು ಹೊಡೆದನು.

ಸೋಽತಿವಿದ್ಧೋ ಮಹಾರಾಜ ಪಾಂಡವೇನ ಯಶಸ್ವಿನಾ ।
ಸೃಕ್ಕಿಣೀ ಲೇಲಿಹನ್ ವೀರಃ ಕ್ರೋಧಸಂರಕ್ತಲೋಚನಃ ॥ ೭ ॥

ತತಃ ಶರಂ ಮಹಾರಾಜ ಸರ್ವಕಾಯಾವದಾರಣಮ್ ।
ಪ್ರಾಹಿಣೋದ್ ಭೀಮಸೇನಾಯ ಬಲಾಯೇಂದ್ರ ಇವಾಶನಿಮ್ ॥ ೮ ॥

ಎಲೈ ಮಹಾರಾಜನೇ, ಕೀರ್ತಿಶಾಲಿಯಾದ ಭೀಮಸೇನನಿಂದ ಗಾಢವಾಗಿ ಹೊಡೆಯಲ್ಪಟ್ಟ ವೀರನಾದ ಕರ್ಣನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ಕಟಬಾಯಿಯನ್ನು ನಾಲಿಗೆಯಿಂದ ಸವರಿಕೊಳ್ಳುತ್ತಾ, ಸರ್ವಶರೀರಭೇದಕವಾದ ಬಾಣವನ್ನು ತೆಗೆದುಕೊಂಡು ಇಂದ್ರನು ಬಲಾಸುರನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದಂತೆ ಅದನ್ನು ಭೀಮಸೇನನ ಮೇಲೆ ಪ್ರಯೋಗಿಸಿದನು.

ಸ ನಿರ್ಭಿದ್ಯ ರಣೇ ಪಾರ್ಥಂ ಸೂತಪುತ್ರಧನುಶ್ಚ್ಯುತಃ ।
ಅಗಚ್ಛದ್ ದಾರಯನ್ ಭೂಮಿಂ ಚಿತ್ರಪುಂಖಃ ಶಿಲೀಮುಖಃ ॥ ೯ ॥

ವಿಚಿತ್ರವಾದ ಪುಂಖವನ್ನು ಹೊಂದಿದ್ದ ಕರ್ಣನಿಂದ ಪ್ರಯೋಗಿಸಲ್ಪಟ್ಟ ಆ ಬಾಣವು ರಣರಂಗದಲ್ಲಿ ಭೀಮನನ್ನು ಭೇದಿಸಿ ಭೂಮಿಯನ್ನು ಸೀಳುತ್ತಾ ಭೂಮಿಯೊಳಗೆ ಇಳಿಯಿತು.

ತತಃ ಶೈಕ್ಯಾಂ ಚತುಷ್ಪಟ್ಟಂ ಗುರ್ವೀಂ ರುಗ್ಮಾಂಗದಾಂ ಗದಾಮ್ ।
ಪ್ರಾಹಿಣೋತ್ ಸೂತಪುತ್ರಾಯ ಷಡಸ್ರಾಮವಿಚಾರಯನ್ ॥ ೧೦ ॥

ಆಗ ಭೀಮಸೇನನು ನೆಲುವಿನ ಮೇಲೆ ಇಟ್ಟರುತ್ತಿದ್ದ ಭಾರವಾದ ಸುವರ್ಣ ಪಟ್ಟಿಯಿಂದ ಕೂಡಿದ, ನಾಲ್ಕು ಕಿಷ್ಕುವಿನಷ್ಟು ದೀರ್ಘವಾದ ಆರು ಅಂಚುಗಳನ್ನು ಹೊಂದಿದ ಗದೆಯನ್ನು ತಿರುಗಿಸಿ ಕರ್ಣನ ಮೇಲೆ ಎಸೆದನು.

ತಯಾ ಜಘಾನಾಧಿರಥೇಃ ಸದಶ್ವಾನ್ ಸಾಧುವಾಹಿನಃ ।
ಗದಯಾ ಭಾರತಃ ಕ್ರುದ್ಧೋ ವಜ್ರೇಣೇಂದ್ರ ಇವಾಸುರಾನ್ ॥ ೧೧ ॥

ಎಲೈ ಭಾರತನೇ, ಪಾಂಡವನು ಕ್ರುದ್ಧನಾಗಿ ಆ ಗದೆಯಿಂದ ಇಂದ್ರನು ಅಸುರರನ್ನು ಕೊಂದಂತೆ ಕರ್ಣನ ಸಾಧುವಾಹಿಗಳಾದ ಒಳ್ಳೆಯ ಅಶ್ವಗಳನ್ನು ಕೊಂದನು.

ತತೋ ಭೀಮೋ ಮಹಾಬಾಹುಃ ಕ್ಷುರಾಭ್ಯಾಂ ಭರತರ್ಷಭ ।
ಧ್ವಜಮಾಧಿರಥೇಶ್ಚಿತ್ತ್ವಾ ಸೂತಮಭ್ಯಹನತ್ ತದಾ ॥ ೧೨ ॥

ಎಲೈ ಭರತಶ್ರೇಷ್ಠನೇ, ಆನಂತರ ಮಹಾಬಾಹುವಾದ ಭೀಮನು ಎಳು ಬಾಣಗಳಿಂದ ಕರ್ಣನ ಧ್ವಜವನ್ನು ಕತ್ತರಿಸಿ ಸೂತನನ್ನೂ ಕೊಂದನು.

ಹತಾಶ್ವಸೂತಮುತ್ಸೃಜ್ಯ ರಥಂ ಸ ಪತಿತಧ್ವಜಮ್ ।
ವಿಸ್ಫಾರಯನ್ ಧನುಃ ಕರ್ಣಸ್ತಸ್ಥೌ ಭಾರತ ದುರ್ಮನಾಃ ॥ ೧೩ ॥

ಅಶ್ವ-ಸಾರಥಿಗಳನ್ನು ಕಳೆದುಕೊಂಡ, ಧ್ವಜವನ್ನು ಕತ್ತರಿಸಿದ ರಥವನ್ನು ಪರಿತ್ಯಜಿಸಿ, ಎಲೈ ಭಾರತನೇ, ಕರ್ಣನು ಧನುಸ್ಸನ್ನು ಎಳೆಯುತ್ತಾ ವಿಷಾದದಿಂದ ನಿಂತನು.

ತತ್ರಾದ್ಭುತಮಪಶ್ಯಾಮ ರಾಧೇಯಸ್ಯ ಪರಾಕ್ರಮಮ್ ।
ವಿರಥೋ ರಥಿನಾಂ ಶ್ರೇಷ್ಠೋ ವಾರಯಾಮಾಸ ಯದ್ ರಿಪುಮ್ ॥

ರಥಿಶ್ರೇಷ್ಠನಾದ ಕರ್ಣನು ರಥಹೀನನಾದರೂ ಶತ್ರುವನ್ನು ನಿವಾರಿಸಿದ ಅವನ ಅದ್ಭುತವಾದ ಪರಾಕ್ರಮವನ್ನು ನಾವು ಅಲ್ಲಿ ನೋಡಿದೆವು.

ವಿರಥಂ ತಂ ರಥಶ್ರೇಷ್ಠಂ ದೃಷ್ಟ್ವಾಧಿರಥಿಮಾಹವೇ ।
ದುರ್ಯೋಧನಸ್ತತೋ ರಾಜನ್ನಬ್ರವೀದ್ಭಾಷತ ದುರ್ಮುಖಮ್ ॥ ೧೫ ॥

ಏಷ ದುರ್ಮುಖ ರಾಧೇಯೋ ಭೀಮೇನ ವಿರಥೀಕೃತಃ ।
ತಂ ರಥೇನ ನರಶ್ರೇಷ್ಠಂ ಸಂಪಾದಯ ಮಹಾರಥಮ್ ॥ ೧೬ ॥

ರಣರಂಗದಲ್ಲಿ ರಥಹೀನನಾಗಿ ನಿಂತಿದ್ದ ರಥಶ್ರೇಷ್ಠನಾದ ಕರ್ಣನನ್ನು ನೋಡಿ ಎಲೈ ರಾಜನೇ, ದುರ್ಯೋಧನನು ತನ್ನ ತಮ್ಮನಾದ ದುರ್ಮುಖನನ್ನು ಕುರಿತು- 'ಎಲೈ ದುರ್ಮುಖನೇ, ಕರ್ಣನು ಭೀಮನಿಂದ ರಥಹೀನನಾಗಿ ಮಾಡಲ್ಪಟ್ಟಿದ್ದಾನೆ. ಮಹಾರಥನಾದ ಆ ರಥಶ್ರೇಷ್ಠನಿಗೆ ಒಂದು ರಥವನ್ನು ಒದಗಿಸು' ಎಂದು ಹೇಳಿದನು.

ದುರ್ಯೋಧನವಚಃ ಶ್ರುತ್ವಾ ತತೋ ಭಾರತ ದುರ್ಮುಖಃ ।
ತ್ವರಮಾಣೋಽಭ್ಯಯಾತ್ ಕರ್ಣಂ ಭೀಮಂ ಚಾವಾರಯಚ್ಛರೈಃ ॥೧೭॥

ಎಲೈ ಭಾರತನೇ, ದುರ್ಯೋಧನನ ಮಾತುಗಳನ್ನು ಕೇಳಿದ ದುರ್ಮುಖನು ತ್ವರೆಮಾಡುತ್ತಾ ಕರ್ಣನ ಸಮೀಪಕ್ಕೆ ಹೋಗಿ ಭೀಮನನ್ನು ತನ್ನ ಬಾಣಗಳಿಂದ ತಡೆದನು.

ದುರ್ಮುಖಂ ಪ್ರೇಕ್ಷ್ಯ ಸಂಗ್ರಾಮೇ ಸೂತಪುತ್ರಪದಾನುಗಮ್ ।
ವಾಯುಪುತ್ರಃ ಪ್ರಹೃಷ್ಟೋಽಭೂತ್ ಸೃಕ್ಕಿಣೀ ಪರಿಲೇಲಿಹನ್ ॥ ೧೮ ॥

ಸೂತಪುತ್ರನಾದ ಕರ್ಣನ ರಕ್ಷಣೆಗೆ ಬಂದ ದುರ್ಮುಖನನ್ನು ರಣರಂಗದಲ್ಲಿ ನೋಡಿ ವಾಯುಪುತ್ರನಾದ ಭೀಮಸೇನನು ಕಟಬಾಯಿಯನ್ನು ಸವರಿಕೊಳ್ಳುತ್ತಾ ಸಂತುಷ್ಟನಾದನು.

ತತಃ ಕರ್ಣಂ ಮಹಾರಾಜ ವಾರಯಿತ್ವಾ ಶಿಲೀಮುಖೈಃ ।
ದುರ್ಮುಖಾಯ ರಥಂ ಶೀಘ್ರಂ ಪ್ರೇಷಯಾಮಾಸ ಪಾಂಡವಃ॥ ೧೯ ॥

ತಸ್ಮಿನ್ ಕ್ಷಣೇ ಮಹಾರಾಜ ನವಭಿರ್ನತಪರ್ವಭಿಃ ।
ಸುಪುಂಖೈರ್ದುರ್ಮುಖಂ ಭೀಮಃ ಶರೈರ್ನಿನ್ಯೇ ಯಮಕ್ಷಯಮ್ ॥೨೦॥

ಎಲೈ ಮಹಾರಾಜನೇ, ಆಗ ಭೀಮಸೇನನು ಬಾಣಗಳಿಂದ ಕರ್ಣನನ್ನು ನಿವಾರಿಸಿ ತನ್ನ ರಥವನ್ನು ಶೀಘ್ರವಾಗಿ ದುರ್ಮುಖನ ಕಡೆಗೆ ಸಾಗಿಸಿ, ಬಾಗಿದ ತುದಿಯುಳ್ಳ ಒಳ್ಳೆಯ ಪುಂಖಗಳನ್ನು ಹೊಂದಿದ ಒಂಬತ್ತು ಬಾಣಗಳಿಂದ ಆ ಕ್ಷಣದಲ್ಲಿ ದುರ್ಮುಖನನ್ನು ಯಮಲೋಕಕ್ಕೆ ಕಳುಹಿಸಿದನು.

ತತಸ್ತಮೇವಾಧಿರಥಿಃ ಸ್ಯಂದನಂ ದುರ್ಮುಖೇ ಹತೇ ।
ಆಸ್ಥಿತಃ ಪ್ರಬಭೌ ರಾಜನ್ ದೀಪ್ಯಮಾನ ಇವಾಂಶುಮಾನ್ ॥ ೨೧ ॥

ಎಲೈ ರಾಜನೇ, ದುರ್ಮುಖನು ಹತನಾಗುತ್ತಿರಲು ಕರ್ಣನು ಅದೇ ರಥವನ್ನು ಏರಿ ಸೂರ್ಯನಂತೆ ಬೆಳಗಿದನು.

ಶಯಾನಂ ಭಿನ್ನಮರ್ಮಾಣಂ ದುರ್ಮುಖಂ ಶೋಣಿತೋಕ್ಷಿತಮ್ ।
ದೃಷ್ಟ್ವಾ ಕರ್ಣೋಽಶ್ರುಪೂರ್ಣಾಕ್ಷೋ ಮುಹೂರ್ತಂ ನಾಭ್ಯವರ್ತತ ॥

ಮರ್ಮಗಳು ಭಿನ್ನವಾಗಿ, ರಕ್ತದಿಂದ ತೊಯ್ದು, ಭೂಮಿಯ ಮೇಲೆ ಮಲಗಿದ ದುರ್ಮುಖನನ್ನು ನೋಡಿ ಕರ್ಣನು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಒಂದು ಮುಹೂರ್ತದವರೆಗೆ ಮುಂದೆ ಸಾಗಲಿಲ್ಲ.

ತಂ ಗತಾಸುಮತಿಕ್ರಮ್ಯ ಕೃತ್ವಾ ಕರ್ಣಃ ಪ್ರದಕ್ಷಿಣಮ್ ।
ದೀರ್ಘಮುಷ್ಣಂ ಶ್ವಸನ್ ವೀರೋ ನ ಕಂಚಿತ್ ಪ್ರತ್ಯಪದ್ಯತ ॥ ೨೩ ॥

ಅವನು ಮೃತನಾದ ಮೇಲೆ ವೀರನಾದ ಕರ್ಣನು ಅವನಿಗೆ ಪ್ರದಕ್ಷಿಣೆಯನ್ನು ಮಾಡಿ, ದೀರ್ಘವಾದ ನಿಟ್ಟುಸಿರನ್ನು ಬಿಡುತ್ತಾ ಏನು ಮಾಡಬೇಕೆಂದು ತಿಳಿಯದಾದನು.

ತಸ್ಮಿಂಸ್ತು ವಿವರೇ ರಾಜನ್ನಾರಾಚಾನ್ ಗಾರ್ಧ್ರವಾಸಸಃ ।
ಪ್ರಾಹಿಣೋತ್ ಸೂತಪುತ್ರಾಯ ಭೀಮಸೇನಶ್ಚತುರ್ದಶ ॥ ೨೪ ॥

ಆ ಅವಕಾಶವನ್ನು ಪಡೆದ ಭೀಮಸೇನನು ಎಲೈ ರಾಜನೇ, ಹದ್ದಿನ ಗರಿಗಳನ್ನು ಹೊಂದಿದ್ದ ಹದಿನಾಲ್ಕು ನಾರಾಚಗಳನ್ನು ಕರ್ಣನ ಮೇಲೆ ಪ್ರಯೋಗಿಸಿದನು.

ತೇ ತಸ್ಯ ಕವಚಂ ಭಿತ್ತ್ವಾ ಸ್ವರ್ಣಪುಂಖಾ ಮಹೌಜಸಃ ।
ಹೇಮಚಿತ್ರಾ ಮಹಾರಾಜ ದ್ಯೋತಯಂತೋ ದಿಶೋ ದಶ ॥ ೨೫ ॥

ಅಪಿಬನ್ ಸೂತಪುತ್ರಸ್ಯ ಶೋಣಿತಂ ರಕ್ತಭೋಜನಾಃ ।
ಕ್ರುದ್ಧಾ ಇವ ಮನುಷ್ಯೇಂದ್ರ ಭುಜಗಾಃ ಕಾಲಚೋದಿತಾಃ ॥ ೨೬ ॥

ಎಲೈ ಮಹಾರಾಜನೇ, ಸ್ವರ್ಣಪುಂಖಗಳನ್ನು ಹೊಂದಿದ, ಮಹಾಸಾಮರ್ಥ್ಯವುಳ್ಳ, ಸುವರ್ಣಾಲಂಕೃತವಾದ ಆ ನಾರಾಚಗಳು ಹತ್ತುದಿಕ್ಕುಗಳನ್ನು ಬೆಳಗುತ್ತಾ ಕರ್ಣನ ಕವಚಗಳನ್ನು ಭೇದಿಸಿ ರಕ್ತಭೋಜಿಗಳಾದ ಅವು ಕಾಲಚೋದಿತವಾದ ಕ್ರುದ್ಧವಾದ ಸರ್ಪಗಳಂತೆ ಕರ್ಣನ ರಕ್ತವನ್ನು ಪಾನ ಮಾಡಿದವು.

ಪ್ರಸರ್ಪಮಾಣಾ ಮೇದಿನ್ಯಾಂ ತೇ ವ್ಯರೋಚಂತ ಮಾರ್ಗಣಾಃ ।
ಅರ್ಧಪ್ರವಿಷ್ಟಾಃ ಸಂರಬ್ಧಾ ಬಲಾನೀವ ಮಹೋರಗಾಃ ॥ ೨೭ ॥

ರಣರಂಗದಲ್ಲಿಮುಂದೆ ಸಾಗಿದ ಆ ಬಾಣಗಳು ಅರ್ಧಭಾಗ ಕರ್ಣನ ಶರೀರದಲ್ಲಿ ನಾಟಿ, ಅರ್ಧಶರೀರದಿಂದ ಬಿಲವನ್ನು ಪ್ರವೇಶಮಾಡಿದ ಕೋಪಗೊಂಡ ಮಹಾಸರ್ಪಗಳಂತೆ ಶೊಭಿಸಿದವು.

ತಂ ಪ್ರತ್ಯವಿದ್ಧ್ಯದ್ ರಾಧೇಯೋ ಜಾಂಬೂನದವಿಭೂಷಿತೈಃ ।
ಚತುರ್ದಶಭಿರತ್ಯುಗ್ರೈರ್ನಾರಾಚೈರವಿಚಾರಯನ್ ॥ ೨೮ ॥

ಕರ್ಣನು ಸುವರ್ಣಭೂಷಿತವಾದ ಉದ್ದವಾದ ಹದಿನಾಲ್ಕು ನಾರಾಚಗಳಿಂದ ಏನೂ ತಡಮಾಡದೆ ಭೀಮಸೇನನನ್ನು ಹೊಡೆದನು.

ತೇ ಭೀಮಸೇನಸ್ಯ ಭುಜಂ ಸವ್ಯಂ ನಿರ್ಭಿದ್ಯ ಪತ್ರಿಣಃ ।
ಪ್ರಾವಿಶನ್ ಮೇದಿನೀಂ ಭೀಮಾಃ ಕ್ರೌಂಚಂ ಪತ್ರರಥಾ ಇವ ॥ ೨೯ ॥

ಆ ಬಾಣಗಳು ಭೀಮಸೇನನ ಎಡಭುಜವನ್ನು ಭೇದಿಸಿ, ಪಕ್ಷಿಗಳು ಕ್ರೌಂಚ ಪರ್ವತವನ್ನು ಪ್ರವೇಶ ಮಾಡಿದಂತೆ ಭಯಂಕರವಾದ ಅವು ಭೂಮಿಯನ್ನು ಪ್ರವೇಶಿಸಿದವು.

ತೇ ವ್ಯರೋಚಂತ ನಾರಾಚಾಃ ಪ್ರವಿಶಂತೋ ವಸುಂಧರಾಮ್ ।
ಗಚ್ಛತ್ಕಸ್ತಂ ದಿನಕರೇ ದೀಪ್ಯಮಾನಾ ಇವಾಂಶವಃ ॥ ೩೦ ॥

ಭೂಮಿಯನ್ನು ಪ್ರವೇಶಿಸುತ್ತಿದ್ದ ಆ ನಾರಾಚಗಳು ಸೂರ್ಯನು ಅಸ್ತಂಗತನಾಗುವಾಗ ಪ್ರಕಾಶಿಸುವ ಅವನ ಕಿರಣಗಳಂತೆ ಶೋಭಿಸಿದವು.

ಸ ನಿರ್ಭಿನ್ನೋ ರಣೇ ಭೀಮೋ ನಾರಾಚೈರ್ಮರ್ಮಭೇದಿಭಿಃ ।
ಸುಸ್ರಾವ ರುಧಿರಂ ಭೂರಿ ಪರ್ವತಃ ಸಲಿಲಂ ಯಥಾ ॥ ೩೧ ॥

ಮರ್ಮಭೇದಿಗಳಾದ ನಾರಾಚಗಳಿಂದ ದೃಢವಾಗಿ ಹೊಡೆದು ಭೇದಿಸಲ್ಪಟ್ಟ ಭೀಮಸೇನನು ಪರ್ವತವು ಜಲವನ್ನು ಸುರಿಸಿದಂತೆ ಬಹಳ ರಕ್ತವನ್ನು ಸುರಿಸಿದನು.

ಸ ಭೀಮಸ್ತ್ರಿಭಿರಾಯಸ್ತಃ ಸೂತಪುತ್ರಂ ಪತತ್ರಿಭಿಃ ।
ಸುಪರ್ಣವೇಗೈರ್ವಿವ್ಯಾಧ ಸಾರಥಿಂ ಚಾಸ್ಯ ಸಪ್ತಭಿಃ ॥ ೩೨ ॥

ಆಯಾಸಗೊಂಡ ಭೀಮಸೇನನು ಕರ್ಣನನ್ನು ಗರುಡನ ವೇಗವುಳ್ಳ ಮೂರು ಬಾಣಗಳಿಂದ ಹೊಡೆದು ಅವನ ಸಾರಥಿಯನ್ನು ಏಳು ಬಾಣಗಳಿಂದ ಹೊಡೆದನು.

ಸ ವಿಹ್ವಲೋ ಮಹಾರಾಜ ಕರ್ಣೋ ಭೀಮಬಲಾರ್ದಿತಃ ।
ಪ್ರಾದ್ರವಜ್ಜವನೈರಶ್ವೈ ರಣಂ ಹಿತ್ವಾ ಮಹಾಯಶಾಃ ॥ ೩೩ ॥

ಎಲೈ ಮಹಾರಾಜನೇ, ಮಹಾಕೀರ್ತಿವಂತನಾದ ಆ ಕರ್ಣನು ಭೀಮಸೇನನ ಬಲದಿಂದ ಪೀಡಿತನಾಗಿ ರಣರಂಗವನ್ನು ಬಿಟ್ಟು ಶೀಘ್ರಗಾಮಿಗಳಾದ ಅಶ್ವಗಳಿಂದ ಸಹಿತನಾಗಿ ಓಡಿಹೋದನು.

ಭೀಮಸೇನಸ್ತು ವಿಸ್ಫಾರ್ಯ ಚಾಪಂ ಹೇಮಪರಿಷ್ಕೃತಮ್ ।
ಆಹವೇಽತಿರಥೋಽತಿಷ್ಠದ್ಜ್ವಲನ್ನಿವ ಹುತಾಶನಃ ॥ ೩೪ ॥

ಅತಿರಥನಾದ ಭೀಮಸೇನನಾದರೋ ಸುವರ್ಣಭೂಷಿತವಾದ ತನ್ನ ಧನುಸ್ಸನ್ನು ಎಳೆದು ನಾದವನ್ನು ಮಾಡುತ್ತಾ, ಜ್ವಲಿಸುವ ಅಗ್ನಿಯಂತೆ ರಣರಂಗದಲ್ಲಿ ನಿಂತನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನವಿಂಶತ್ಯಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ತ್ರಿಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತನೆಯ ಅಧ್ಯಾಯ

ಭೀಮಸೇನನಿಂದ ದುರ್ಯೋಧನನ ತಮ್ಮಂದಿರಾದ
ದುರ್ಮರ್ಷಣಾದಿ ಐವರ ವಧೆ.

ಧೃತರಾಷ್ಟ್ರಃ

ದೈವಮೇವ ಪರಂ ಮನ್ಯೇ ಧಿಕ್ಪೌರುಷಮನರ್ಥಕಮ್ ।
ಯತ್ರಾಧಿರಥಿರಾಯಸ್ತೋ ನಾತರತ್ ಪಾಂಡವಂ ರಣೇ ॥ ೧ ॥

ಧೃತರಾಷ್ಟ್ರ- ಅಧಿರಥಿಸುತನಾದ ಕರ್ಣನು ರಣರಂಗದಲ್ಲಿ ಭೀಮನನ್ನು ದಾಟಲು ಸಾಧ್ಯವಾಗದ ಮೇಲೆ ದೈವವೇ ಶ್ರೇಷ್ಠವೆಂದು ತಿಳಿಯುತ್ತೇನೆ. ವ್ಯರ್ಥವಾದ ಪೌರುಷಕ್ಕೆ ಧಿಕ್ಕಾರವಿರಲಿ.

ಕರ್ಣಃ ಪಾರ್ಥಾನ್ ಸಗೋವಿಂದಾನ್ ಜೇತುಮುತ್ಸಹತೇ ರಣೇ ।
ನ ಚ ಕರ್ಣಸಮಂ ಯೋಧಂ ಲೋಕೇ ಪಶ್ಯಾಮಿ ಕಂಚನ ।
ಇತಿ ದುರ್ಯೋಧನಸ್ಯಾಹಮಶ್ರೌಷಂ ಜಲ್ಪತೋ ಮುಹುಃ ॥ ೨ ॥

ಕರ್ಣನು ಕೃಷ್ಣಸಹಿತರಾದ ಪಾಂಡವರನ್ನು ಯುದ್ಧದಲ್ಲಿ ಗೆಲ್ಲುವನು. ಕರ್ಣನಿಗೆ ಸಮಾನನಾದ ಯೋಧನನ್ನು ನಾನು ಲೋಕದಲ್ಲಿ ಕಾಣುವುದಿಲ್ಲ ಎಂದು ದುರ್ಯೋಧನನು ಪುನಃ ಪುನಃ ಹೇಳುವುದನ್ನು ನಾನು ಕೇಳಿದ್ದೇನೆ.

ಕರ್ಣೋ ಹಿ ಬಲವಾನ್ ಶೂರೋ ದೃಢಧನ್ವಾ ಜಿತಕ್ಲಮಃ ।
ಇತಿ ಮಾಮಬ್ರವೀತ್ ಸೂತ ಮಂದೋ ದುರ್ಯೋಧನಃ ಪುರಾ॥ ೩ ॥

ವಸುಷೇಣಸಹಾಯಂ ಮಾಂ ನಾಲಂ ದೇವಾಪಿ ಸಂಯುಗೇ ।
ಕಮು ಪಾಂಡುಸುತಾ ರಾಜನ್ ಗತಸತ್ತ್ವಾ ವಿಚೇತಸಃ ॥ ೪ ॥

ಎಲೈ ಸೂತನೇ, ಮಂದನಾದ ದುರ್ಯೋಧನನು ಹಿಂದೆ- ದೃಢವಾದ ಧನುಸ್ಸುಳ್ಳವನೂ, ಆಯಾಸವನ್ನು ಮೀರಿದವನೂ, ಶೂರನೂ ಆದ ಕರ್ಣನು ಬಲಿಷ್ಠನಾಗಿದ್ದಾನೆ. ಅವನ ಸಹಾಯವುಳ್ಳ ನನ್ನನ್ನು ದೇವತೆಗಳೂ ಯುದ್ಧದಲ್ಲಿ ಗೆಲ್ಲಲಾರರು. ರಾಜನೇ, ಬಲಹೀನರಾದ, ಪ್ರಜ್ಞಾಶೂನ್ಯರಾದ ಪಾಂಡವರು ಹೇಗೆ ಗೆದ್ದಾರು? - ಎಂದು ನನಗೆ ಹೇಳಿದನು.

ತತ್ರ ತಂ ನಿರ್ಜಿತಂ ದೃಷ್ಟ್ವಾ ಭುಜಂಗಮಿವ ನಿರ್ವಿಷಮ್ ।
ಯುದ್ಧಾತ್ಕರ್ಣಮಪಕ್ರಾಂತಂ ಕಿಂ ಸ್ವಿದ್ ದುರ್ಯೋಧನೋಽಬ್ರವೀತ್ ॥

ರಣರಂಗದಲ್ಲಿ ಕರ್ಣನು ನಿರ್ಜಿತನಾಗಿ ವಿಷರಹಿತವಾದ ಸರ್ಪದಂತೆ ಯುದ್ಧದಿಂದ ಹೊರಗೆ ಹೋದುದನ್ನು ನೋಡಿ ದುರ್ಯೋಧನನು ಏನು ಹೇಳಿದನು?

ಅಹೋ ದುರ್ಮುಖಮೇವೈಕಂ ಯುದ್ಧಾನಾಮವಿಶಾರದಮ್ ।
ಪ್ರಾವೇಶಯದ್ಧುವಹಂ ಪತಂಗಮಿವ ಮೋಹಿತಃ ॥ ೬ ॥

ಯುದ್ಧದಲ್ಲಿ ವಿಶಾರದನಲ್ಲದ ಒಬ್ಬ ದುರ್ಮುಖನನ್ನು ಪತಂಗವನ್ನು ಅಗ್ನಿಮುಖದಲ್ಲಿ ಕಳುಹಿಸಿದಂತೆ ಮೋಹಗೊಂಡ ದುರ್ಯೋಧನನು ಕಳುಹಿಸಿದ್ದಾನೆ. ಇದು ಎಂತಹ ವಿಷಾದದ ವಿಷಯ!

ಅಶ್ವತ್ಥಾಮಾ ಮದ್ರರಾಜಃ ಕೃಪಃ ಕರ್ಣಶ್ಚ ಸಂಗತಾಃ ।
ನ ಶಕ್ತಾಃ ಪ್ರಮುಖೇ ಸ್ಥಾತುಂ ನೂನಂ ಭೀಮಸ್ಯ ಸಂಜಯ ॥ ೭ ॥

ಎಲೈ ಸಂಜಯನೇ, ಅಶ್ವತ್ಥಾಮರಾಗಲೀ, ಶಲ್ಯನಾಗಲೀ, ಕೃಪರಾಗಲೀ, ಕರ್ಣನಾಗಲೀ ಅಥವಾ ಎಲ್ಲರೂ ಸೇರಿ ಯುದ್ಧದಲ್ಲಿ ಭೀಮಸೇನನ ಎದುರಿಗೆ ನಿಲ್ಲಲು ಸಾಧ್ಯವಿಲ್ಲ.

ತೇಽಪಿ ಚಾಸ್ಯ ಮಹಾಘೋರಂ ಬಲಂ ನಾಗಾಯುತೋಪಮಮ್ ।
ಜಾನಂತೋ ವ್ಯವಸಾಯಂ ಚ ಕ್ರೂರಂ ಮಾರುತತೇಜಸಃ ॥ ೮ ॥

ಕಮರ್ಥಂ ಕ್ರೂರಕರ್ಮಾಣಂ ಯಮಕಾಲಾಂತಕೋಪಮಮ್ ।
ಬಲಸಂರಂಭವೀರ್ಯಜ್ಞಾಃ ಕೋಪಯಿಷ್ಯಂತಿ ಸಂಯುಗೇ ॥ ೯ ॥

ಅವನ ಹತ್ತು ಸಾವಿರ ಆನೆಗಳ ಬಲಕ್ಕೆ ಸಮವಾದ, ಮಹಾಘೋರವಾದ ಬಲವನ್ನೂ, ಕೋಪವನ್ನೂ, ಅವನ ಕ್ರೂರವಾದ ನಿರ್ಧಾರವನ್ನು ತಿಳಿದ ಅವರಾದರೂ ಸಹ ಕ್ರೂರ ಕರ್ಮವನ್ನು ಮಾಡುವವನೂ, ಯಮನಂತೆ ಮೃತ್ಯುವಂತೆ ಇರುವವನೂ, ವಾಯುವೇಗವನ್ನು ಹೊಂದಿದವನೂ ಆದ ಭೀಮನನ್ನು ಯುದ್ಧದಲ್ಲಿ ಏಕೆ ಕೋಪಗೊಳಿಸುವರು?

ಕರ್ಣಸ್ತ್ವೇಕೋ ಮಹಾಬಾಹುಃ ಸ್ವಬಾಹುಬಲಮಾಶ್ರಿತಃ ।
ಭೀಮಸೇನಮನಾದೃತ್ಯ ರಣೇಽಯುದ್ಧ್ಯತ ಸೂತಜಃ ॥ ೧೦ ॥

ಸೂತಪುತ್ರನಾದ ಮಹಾಬಾಹುವಾದ ಕರ್ಣನೊಬ್ಬನೇ ತನ್ನ ಬಾಹುಬಲವನ್ನು ಆಶ್ರಯಿಸಿ ಭೀಮಸೇನನನ್ನು ಅನಾದರಿಸಿ ಯುದ್ಧವನ್ನು ಮಾಡುತ್ತಾನೆ.

ಯೋಽಜಯತ್ ಸಮರೇ ಕರ್ಣಂ ಪುರಂದರ ಇವಾಸುರಮ್ ।
ನ ಸ ಪಾಂಡುಸುತೋ ಜೇತುಂ ಶಕ್ಯಃ ಕೇನಚಿದಾಹವೇ ॥ ೧೧ ॥

ಇಂದ್ರನು ಅಸುರರನ್ನು ಗೆದ್ದಂತೆ ಯಾವ ಪಾಂಡುಸುತನಾದ ಭೀಮನು ಯುದ್ಧದಲ್ಲಿ ಕರ್ಣನನ್ನು ಗೆದ್ದನೋ ಅವನನ್ನು ಯಾರೂ ಯುದ್ಧದಲ್ಲಿ ಜಯಿಸಲು ಸಾಧ್ಯವಿಲ್ಲ.

ದ್ರೋಣಂ ಯಃ ಸಂಪ್ರಮಥ್ಯೈಕಃ ಪ್ರವಿಷ್ಟೋ ಮಮ ವಾಹಿನೀಮ್ ।
ಭೀಮೋ ಧನಂಜಯಾನ್ವೇಷೀ ಕಸ್ತಮರ್ಚ್ಛೇದ್ಜಿಜೀವಿಷುಃ ॥ ೧೨ ॥

ಅರ್ಜುನನನ್ನು ಹುಡುಕಲು ಹೊರಟ ಭೀಮಸೇನನು ಒಬ್ಬನೇ ದ್ರೋಣರನ್ನು ಮರ್ದಿಸಿ ನನ್ನ ಸೈನ್ಯವನ್ನು ಪ್ರವೇಶಿಸಿದ್ದಾನೆ. ಬದುಕುವ ಆಸೆಯುಳ್ಳ ಯಾವನು ಅವನ ಸಮೀಪಕ್ಕೆ ಹೋದಾನು?

ಕೋ ಹಿ ಸಂಜಯ ಭೀಮಸ್ಯ ಸ್ಥಾತುಮುತ್ಸಹತೇಽಗ್ರತಃ ।
ಉದ್ಯತಾಶನಿವಜ್ರಸ್ಯ ಮಹೇಂದ್ರಸ್ಯೇವ ದಾನವಃ ॥ ೧೩ ॥

ಎಲೈ ಸಂಜಯನೇ, ವಜ್ರಾಯುಧವನ್ನು ಎತ್ತಿಹಿಡಿದ ಮಹೇಂದ್ರನ ಎದುರಿಗೆ ದಾನವನು ಹೋದಂತೆ ಭೀಮನೆದುರಿಗೆ ಹೋಗಲು ಯಾವನು ಉತ್ಸಾಹಪಡುತ್ತಾನೆ?

ಪ್ರೇತರಾಜಪುರಂ ಪ್ರಾಪ್ಯ ನಿವರ್ತೇತಾಪಿ ಮಾನವಃ ।
ನ ಭೀಮಸೇನಂ ಸಂಪ್ರಾಪ್ಯ ನಿವರ್ತೇತ ಕದಾಚನ ॥ ೧೪ ॥

ಮನುಷ್ಯನು ಯಮಪಟ್ಟಣಕ್ಕೆ ಹೋಗಿ ಹಿಂದಿರುಗಬಹುದು. ಆದರೆ ಭೀಮಸೇನನನ್ನು ಸಮೀಪಿಸಿದವನು ಎಂದೂ ಹಿಂದಿರುಗಲಾರ.

ಪತಂಗಾ ಇವ ವಹ್ನಿಂ ತೇ ಪ್ರಾವಿಶನ್ನಲ್ಪಚೇತಸಃ ।
ಯೇ ಭೀಮಸೇನಂ ಸಂಕ್ರುದ್ಧಮಭ್ಯಧಾವನ್ ವಿಮೋಹಿತಾಃ ॥ ೧೫ ॥

ಯಾವ ಮೂಢರು ಕ್ರೋಧದಿಂದ ಭೀಮಸೇನನ ಮೇಲೆ ಎರಗಿದರೋ ಅಂತಹ ಅಲ್ಪಬುದ್ಧಿಯುಳ್ಳವರು ಪತಂಗಗಳು ಅಗ್ನಿಯನ್ನು ಪ್ರವೇಶಿಸುವಂತೆ ಪ್ರವೇಶಿಸುತ್ತಿದ್ದಾರೆ.

ಯತ್ತತ್ ಸಭಾಯಾಂ ಭೀಮೇನ ಮಮ ಪುತ್ರವಧಾಶ್ರಯಮ್ ।
ಶಪ್ತಂ ಸಂರಂಭಿಣೋಗ್ರೇಣ ಕುರೂಣಾಂ ಶೃಣ್ವತಾಂ ತದಾ ॥ ೧೬ ॥

ತನ್ನೂನಮಭಸಂಚಿಂತ್ಯ ದೃಷ್ಟ್ವಾ ಕರ್ಣಂ ಚ ನಿರ್ಜಿತಮ್ ।
ದುಃಶಾಸನಃ ಸಹ ಭ್ರಾತ್ರಾ ಭಯಾದ್ ಭೀಮಾದುಪಾರಮತ್ ॥ ೧೭ ॥

ಉಗ್ರನಾದ ಭೀಮಸೇನನು ಸಭೆಯಲ್ಲಿನನ್ನ ಪುತ್ರರ ವಧೆಯ ವಿಷಯದಲ್ಲಿ ಎಲ್ಲ ಕುರುಗಳು ಕೇಳುವಂತೆ ಕೋಪದಿಂದ ಏನು ಶಪಥವನ್ನು ಮಾಡಿದನೋ ಅದನ್ನು ಚಿಂತಿಸಿ, ಕರ್ಣನು ಪರಾಜಿತನಾದುದನ್ನು ನೋಡಿ ದುಶ್ಶಾಸನನು ತನ್ನ ಸಹೋದರರ ಜೊತೆಯಲ್ಲಿ ಭೀಮನಿಂದ ದೂರ ಹೋಗಿದ್ದಾನೆ.

ಯಶ್ಚ ಸಂಜಯ ದುರ್ಬುದ್ಧಿರ್ದ್ಯೂತ್ಬ್ರವೀತ್ ಸಮಿತೌ ಮುಹುಃ ।
ಕರ್ಣೋ ದುಃಶಾಸನೋಽಹಂ ಚ ಜೇಷ್ಯಾಮೋ ಯುಧಿ ಪಾಂಡವಾನ್ ॥

ಸ ನೂನಂ ವಿರಥಂ ದೃಷ್ಟ್ವಾ ಕರ್ಣಂ ಭೀಮೇನ ನಿರ್ಜಿತಮ್ ।
ಪ್ರತ್ಯಾಖ್ಯಾನಾಚ್ಚ ಕೃಷ್ಣಸ್ಯ ಭೃಶಂ ತಪ್ಯತಿ ಸಂಜಯ ॥ ೧೯ ॥

ಎಲೈ ಸಂಜಯನೇ, ದುರ್ಬುದ್ಧಿಯುಳ್ಳ ಯಾವ ದುಶ್ಶಾಸನನು ಸಭೆಯಲ್ಲಿ ಪುನಃ ಪುನಃ ನಾನು ಮತ್ತು ಕರ್ಣನು ಯುದ್ಧದಲ್ಲಿ ಪಾಂಡವರನ್ನು ಗೆಲ್ಲುವೆವು ಎಂದು ಹೇಳಿದನೋ ಅವನು ಈ ದಿನ ಕರ್ಣನು ಭೀಮನಿಂದ ಪರಾಜಿತನಾಗಿ ರಥಹೀನನಾಗಿರುವುದನ್ನು ನೋಡಿ ಸಂಧಿಗೆ ಬಂದ ಕೃಷ್ಣನನ್ನು ನಿರಾಕರಿಸಿರುವುದನ್ನು ಸ್ಮರಿಸಿ ಬಹಳ ತಾಪಗೊಳ್ಳುತ್ತಾನೆ.

ದೃಷ್ಟ್ವಾ ಭ್ರಾತೄನ್ ಹತಾನ್ ಯುದ್ಧೇ ಭೀಮಸೇನೇನ ದಂಶಿತಾನ್ ।
ಆತ್ಮಾಪರಾಧಾತ್ ಸುಮಹನ್ನೂನಂ ತಪ್ಯತಿ ಪುತ್ರಕಃ ॥ ೨೦ ॥

ಯುದ್ಧಸನ್ನದ್ಧರಾದ ತನ್ನ ಸಹೋದರರು ರಣರಂಗದಲ್ಲಿ ತನ್ನ ಅಪರಾಧದಿಂದ ಭೀಮಸೇನನಿಂದ ಹತರಾದುದನ್ನು ನೋಡಿ ನನ್ನ ಪುತ್ರನಾದ ದುರ್ಯೋಧನನು ಖಂಡಿತವಾಗಿ ಪಶ್ಚಾತ್ತಾಪವನ್ನು ಪಡುತ್ತಾನೆ.

ಕೋ ಹಿ ಜೀವಿತಮನ್ವಿಚ್ಛನ್ ಪ್ರತೀಪಂ ಪಾಂಡವಂ ವ್ರಜೇತ್ ।
ಭೀಮಂ ಭೀಮಾಯುಧಂ ಕ್ರುದ್ಧಂ ಸಾಕ್ಷಾತ್ ಕಾಲಮಿವ ಸ್ಥಿತಮ್ ॥೨೧॥

ಬದುಕಲು ಬಯಸುವ ಯಾವನು ತಾನೇ ಭಯಂಕರವಾದ ಆಯುಧವನ್ನು ಹಿಡಿದಿರುವ, ಕ್ರುದ್ಧನಾದ, ಸಾಕ್ಷಾತ್ ಯಮನಂತಿರುವ ಪಾಂಡುಪುತ್ರನಾದ ಭೀಮನಿಗೆ ವಿರೋಧವನ್ನು ಮಾಡಿ ಮುಂದೆ ಹೋದಾನು?

ವಡವಾಮುಖಮಧ್ಯಸ್ಥೋ ಮುಚ್ಯೇತಾಪಿ ಹಿ ಮಾನವಃ ।
ನ ಭೀಮಮುಖಸಂಪ್ರಾಪ್ತೋ ಮುಚ್ಯೇತೇತಿ ಮತಿರ್ಮಮ ॥ ೨೨ ॥

ವಡವಾಗ್ನಿಯ ಬಾಯಿಯಲ್ಲಿ ಸಿಕ್ಕಿದ ಮನುಷ್ಯನು ಹೊರಗೆ ಬರಬಹುದು ಆದರೆ ಭೀಮನ ಮುಖವನ್ನು ಸಮೀಪಿಸಿದ ಮನುಷ್ಯನು ಹಿಂದೆ ಬರಲಾರ ಎಂದು ನನ್ನ ಅಭಿಪ್ರಾಯ.

ನ ಪಾಂಡವಾ ನ ಪಾಂಚಾಲಾ ನ ಚ ಕೇಶವಸಾತ್ಯಕೀ ।
ಜಾನಂತಿ ಯುಧಿ ಸಂರಬ್ಧಾ ಜೀವಿತಂ ಪರಿರಕ್ಷಿತುಮ್ ।
ಅಹೋ ಮಮ ಸುತಾನಾಂ ಹಿ ವಿಪನ್ನಂ ಸೂತ ಜೀವಿತಮ್ ॥ ೨೩ ॥

ಯುದ್ಧದಲ್ಲಿ ಕೋಪಗೊಂಡ ಪಾಂಡವರಾಗಲೀ, ಪಾಂಚಾಲರಾಗಲೀ, ಕೃಷ್ಣ-ಸಾತ್ಯಕಿಯರಾಗಲೀ ಭೀಮನಿಂದ ಪೀಡಿತನಾದ ಯೋಧನ ಜೀವನನ್ನು ರಕ್ಷಿಸಲು ಸಮರ್ಥರಲ್ಲ. ಎಲೈ ಸೂತನೇ, ಅಯ್ಯೋ! ನನ್ನ ಮಕ್ಕಳ ಜೀವನವು ನಾಶವನ್ನು ಹೊಂದಿತು.

ಸಂಜಯಃ

ಯತ್ ಸಂಶೋಚಸಿ ಕೌರವ್ಯ ವರ್ತಮಾನೇ ಜನಕ್ಷಯೇ ।
ತ್ವಮಸ್ಯ ಜಗತೋ ಮೂಲಂ ವಿನಾಶಸ್ಯ ನ ಸಂಶಯಃ ॥ ೨೪ ॥

ಸಂಜಯ– ಎಲೈ ಕೌರವ್ಯನೇ, ಇಂತಹ ಜನಕ್ಷಯ ಉಂಟಾಗಿರುವಾಗ ನೀನು ಶೋಕಪಡುತ್ತಿರುವಿಯಷ್ಟೆ? ಈ ಜಗತ್ತಿನ ವಿನಾಶಕ್ಕೆ ನೀನೇ ಮೂಲಕಾರಣನಾದವನು. ಇದರಲ್ಲಿ ಸಂಶಯವಿಲ್ಲ.

ಸ್ವಯಂ ವೈರಂ ಮಹತ್ ಕೃತ್ವಾ ಪುತ್ರಾಣಾಂ ವಚನೇ ಸ್ಥಿತಃ ।
ಉಚ್ಯಮಾನೋ ನ ಗೃಹ್ಣೀಷೇ ಮರ್ತ್ಯಃ ಪಥ್ಯಮಿವೌಷಧಮ್ ॥ ೨೫ ॥

ಮಕ್ಕಳ ಮಾತಿನಂತೆ ನಡೆದುಕೊಂಡು ಸ್ವತಃ ದೊಡ್ಡ ವೈರವನ್ನು ಮಾಡಿ, ಎಷ್ಟು ಹೇಳಿದರೂ ಮನುಷ್ಯನು ಪಥ್ಯವಾದ ಔಷಧಿಯನ್ನು ನಿರಾಕರಿಸುವಂತೆ ನೀನು ಆ ಮಾತುಗಳನ್ನು ಸ್ವೀಕರಿಸುತ್ತಿಲ್ಲ.

ಸ್ವಯಂ ಪೀತ್ವಾ ಮಹಾರಾಜ ಕಾಳಕೂಟಂ ಸುದುರ್ಜರಮ್ ।
ತ್ಯೇದಾನೀಂ ಫಲಂ ಕೃತ್ಸ್ನಮವಾಪ್ನುಹಿ ನರೋತ್ತಮ ॥ ೨೬ ॥

ಯತ್ತು ಕುತ್ಸಯಸೇ ಯೋಧಾನ್ ಯುದ್ಧ್ಯಮಾನಾನ್ ಯಥಾಬಲಮ್ ।
ಅತ್ರ ತೇ ವರ್ಣಯಿಷ್ಯಾಮಿ ಯಥಾ ಯುದ್ಧಮವರ್ತತ ॥ ೨೭ ॥

ಎಲೈ ನರಶ್ರೇಷ್ಠನೇ, ಮಹಾರಾಜನೇ, ಕಾಳಕೂಟದಂತಹ, ಜೀರ್ಣಿಸಲು ಅಸಾಧ್ಯವಾದಂತಹ ವಿಷವನ್ನು ಪಾನಮಾಡಿ, ಆದರ ಪೂರ್ಣವಾದ ಫಲವನ್ನು ಈಗ ಹೊಂದುವವನಾಗು. ತಮ್ಮ ಶಕ್ತಿಗೆ ಅನುಗುಣವಾಗಿ ಯುದ್ಧ ಮಾಡುತ್ತಿರುವ ಯೋಧರನ್ನು ನೀನು ನಿಂದಿಸುತ್ತಿರುವಿಯಷ್ಟೆ? ಯುದ್ಧವು ಹೇಗೆ ನಡೆಯಿತೆಂದು ನಿನಗೆ ಹೇಳುವೆನು.

ದೃಷ್ಟ್ವಾ ಕರ್ಣಂ ತು ಪುತ್ರಾಸ್ತೇ ಭೀಮಸೇನಪರಾಜಿತಮ್ ।
ನಾಮೃಷ್ಯಂತ ಮಹೇಷ್ವಾಸಾಃ ಸೋದರ್ಯಾಃ ಪಂಚ ಮಾರಿಷ ॥ ೨೮ ॥

ದುರ್ಮರ್ಷಣೋ ದುಃಸಹಶ್ಚ ದುರ್ಮದೋ ದುರ್ಧರೋ ಜಯಃ ।
ಪಾಂಡವಂ ಚಿತ್ರಸನ್ನಾಹಾಸ್ತಂ ಪ್ರತೀಪಮುಪಾದ್ರವನ್ ॥ ೨೯ ॥

ಭೀಮಸೇನನಿಂದ ಪರಾಜಿತನಾದ ಕರ್ಣನನ್ನು ನೋಡಿ, ಎಲೈ ಪೂಜ್ಯನೇ, ನಿನ್ನ ಪುತ್ರರಾದ, ಮಹಾಧನುರ್ಧಾರಿಗಳಾದ ದುರ್ಮರ್ಷಣ, ದುಸ್ಸಹ, ದುರ್ಮದ, ದುರ್ಧರ, ಜಯ- ಈ ಐವರು ಸಹೋದರರು ಅದನ್ನು ಸಹಿಸಲಿಲ್ಲ. ವಿಚಿತ್ರವಾಗಿ ಸನ್ನದ್ಧರಾಗಿ ಅವರು ಭೀಮನಿಗೆ ವಿರೋಧ ಮಾಡುತ್ತಾ ಅವನ ಕಡೆಗೆ ಧಾವಿಸಿದರು.

ತೇ ಸಮಂತಾನ್ಮಹಾಬಾಹುಂ ಪರಿವಾರ್ಯ ವೃಕೋದರಮ್ ।
ದಿಶಃ ಶರೈಃ ಸಮಾವೃಣ್ವನ್ ಶಲಭಾನಾಮಿವ ವ್ರಜೈಃ ॥ ೩೦ ॥

ಅವರು ಮಹಾಬಾಹುವಾದ ವೃಕೋದರನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದು ಪತಂಗಗಳ ಸಮೂಹದಂತಹ ಬಾಣಗಳಿಂದ ಎಲ್ಲ ದಿಕ್ಕುಗಳನ್ನೂ ತುಂಬಿದರು.

ಆಗಚ್ಛತಸ್ತಾನ್ ಸಹಸಾ ಕುಮಾರಾನ್ ದೇವರೂಪಿಣಃ ।
ಪ್ರತಿಜಗ್ರಾಹ ಸಮರೇ ಭೀಮಸೇನೋ ಹಸನ್ನಿವ ॥ ೩೧ ॥

ದೇವತೆಗಳಂತೆ ಸುಂದರರೂಪವನ್ನು ಹೊಂದಿ ಶೀಘ್ರವಾಗಿ ತನ್ನ ಕಡೆಗೆ ಬರುತ್ತಿದ್ದ ಆ ಕುಮಾರರನ್ನು ನೋಡಿ, ರಣರಂಗದಲ್ಲಿ ಭೀಮಸೇನನು ನಗುತ್ತಾ ಅವರನ್ನು ಸ್ವೀಕರಿಸಿದನು.

ತವ ದೃಷ್ಟ್ವಾ ತು ತನಯಾನ್ ಭೀಮಸೇನಸಮೀಪಗಾನ್ ।
ಅಭ್ಯವರ್ತತ ರಾಧೇಯೋ ಭೀಮಸೇನಂ ಮಹಾಬಲಮ್ ॥ ೩೨ ॥

ನಿನ್ನ ಪುತ್ರರು ಭೀಮಸೇನನ ಸಮೀಪದಲ್ಲಿರುವುದನ್ನು ನೋಡಿ ಕರ್ಣನು ಮಹಾಬಲನಾದ ಭೀಮಸೇನನ ಬಳಿಗೆ ಬಂದನು.

ವಿಸೃಜನ್ ವಿಶಿಖಾನ್ ರಾಜನ್ ಸ್ವರ್ಣಪುಂಖಾನ್ ಶಿಲಾಶಿತಾನ್ ।
ತಂ ತು ಭೀಮೋಽಭ್ಯಯಾತ್ ತೂರ್ಣಂ ವಾರ್ಯಮಾಣಃ ಸುತೈಸ್ತವ ॥

ಎಲೈ ರಾಜನೇ, ಸ್ವರ್ಣಪುಂಖವನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳನ್ನು ಪ್ರಯೋಗಿಸುತ್ತಾ ನಿನ್ನ ಪುತ್ರರಿಂದ ನಿವಾರಿಸಲ್ಪಡುತ್ತಿದ್ದರೂ ಭೀಮಸೇನನು ಕರ್ಣನ ಕಡೆಗೆ ಶೀಘ್ರವಾಗಿ ಬಂದನು.

ಕುರವಸ್ತು ತತಃ ಕರ್ಣಂ ಪರಿವಾರ್ಯ ಸಮಂತತಃ ।
ಆವಾಕಿರನ್ ಭೀಮಸೇನಂ ಶರೈಃ ಸನ್ನತಪರ್ವಭಿಃ ॥ ೩೪ ॥

ಕುರುಗಳಾದರೋ ಕರ್ಣನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದು, ಬಾಗಿದ ತುದಿಯುಳ್ಳ ಬಾಣಗಳನ್ನು ಭೀಮಸೇನನ ಮೇಲೆ ಸುರಿಸಿದರು.

ತಾನ್ ಬಾಣೈಃ ಪಂಚವಿಂಶತ್ಯಾ ಸಾಶ್ವಾನ್ ರಾಜನ್ನರರ್ಷಭಾನ್ ।
ಸಸೂತಾನ್ ಭೀಮಧನುಷೋ ಭೀಮೋ ನಿನ್ಯೇ ಯಮಕ್ಷಯಮ್ ॥

ಎಲೈ ರಾಜನೇ, ಭೀಮನು ಇಪ್ಪತ್ತೈದು ಬಾಣಗಳನ್ನು ಪ್ರಯೋಗಿಸಿ, ಅಶ್ವ-ಸೂತ ಸಹಿತರಾದ, ಭಯಂಕರವಾದ ಧನುಸ್ಸುಳ್ಳ ಆ ನರಶ್ರೇಷ್ಠರನ್ನು ಯಮನ ಪಟ್ಟಣಕ್ಕೆ ಕಳುಹಿಸಿದನು.

ಪ್ರಾಪತನ್ ಸ್ಯಂದನೇಭ್ಯಸ್ತೇ ಸಾರ್ಧಂ ಸೂತೈರ್ಗತಾಸವಃ ।
ಚಿತ್ರಪುಷ್ಪಧರಾ ಭಗ್ನಾ ವಾತೇನೇವ ಮಹಾದ್ರುಮಾಃ ॥ ೩೬ ॥

ವಾಯುವಿನಿಂದ ಭಗ್ನವಾದ ವಿಚಿತ್ರಪುಷ್ಪವನ್ನು ಧರಿಸಿದ ಮಹಾವೃಕ್ಷಗಳಂತೆ ಅವರು ಮೃತರಾಗಿ ತಮ್ಮ ಸಾರಥಿಗಳ ಸಹಿತರಾಗಿ ರಥದಿಂದ ಬಿದ್ದರು.

ತತ್ರಾದ್ಭುತಮಪಶ್ಯಾಮ ಭೀಮಸೇನಸ್ಯ ವಿಕ್ರಮಮ್ ।
ಸಂವಾರ್ಯಾಧಿರಥಿಂ ಬಾಣೈರ್ಯದ್ಧಾನ ತವಾತ್ಮಜಾನ್ ॥ ೩೭ ॥

ಅಲ್ಲಿ ಕರ್ಣನನ್ನು ಬಾಣಗಳಿಂದ ನಿವಾರಿಸಿ, ನಿನ್ನ ಪುತ್ರರನ್ನು ಸಂಹರಿಸಿದ ಭೀಮಸೇನನ ಅದ್ಭುತವಾದ ಪರಾಕ್ರಮವನ್ನು ನಾವು ನೋಡಿದೆವು.

ಸ ವಾರ್ಯಮಾಣೋ ಭೀಮೇನ ಶಿತೈರ್ಬಾಣೈಃ ಸಮಂತತಃ ।
ಸೂತಪುತ್ರೋ ಮಹಾರಾಜ ಭೀಮಸೇನಮವೈಕ್ಷತ ॥ ೩೮ ॥

ಎಲೈ ಮಹಾರಾಜನೇ, ಭೀಮಸೇನನಿಂದ ತೀಕ್ಷ್ಣವಾದ ಬಾಣಗಳಿಂದ ಎಲ್ಲ ಕಡೆಗಳಿಂದಲೂ ನಿವಾರಿಸಲ್ಪಡುತ್ತಿದ್ದ ಸೂತಪುತ್ರನಾದ ಕರ್ಣನು ಭೀಮಸೇನನನ್ನು ನೋಡಿದನು.

ತಂ ಭೀಮಸೇನಃ ಸಂರಂಭಾತ್ ಕ್ರೋಧಸಂರಕ್ತಲೋಚನಃ ।
ವಿಸ್ಫಾರ್ಯ ಸುಮಹಚ್ಚಾಪಂ ಮುಹುಃ ಕರ್ಣಮವೈಕ್ಷತ ॥ ೩೯ ॥

ಭೀಮಸೇನನೂ ಸಹ ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ತನ್ನ ದೊಡ್ಡ ಧನುಸ್ಸನ್ನು ನೀವುತ್ತಾ ಪುನಃ ಕರ್ಣನನ್ನು ನೋಡಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ವಿಂಶತ್ಯಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಚತುಶ್ಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೊಂದನೆಯ ಅಧ್ಯಾಯ

ಭೀಮಸೇನನಿಂದ ಚಿತ್ರೋಪಚಿತ್ರ ಮೊದಲಾದ ದುರ್ಯೋಧನನ
ಏಳು ಸಹೋದರರ ವಧೆ.

ಸಂಜಯಃ

ತವಾತ್ಮಜಾಂಸ್ತು ಪತಿತಾನ್ ದೃಷ್ಟ್ವಾ ಕರ್ಣಃ ಪ್ರತಾಪವಾನ್ ।
ಕ್ರೋಧೇನ ಮಹತಾವಿಷ್ಟೋ ನಿರ್ವಿಣ್ಣೋऽಭೂತ್ ಸ ಜೀವಿತಾತ್ ॥೧॥

ಸಂಜಯ– ಪ್ರತಾಪಶಾಲಿಯಾದ ಕರ್ಣನು ಭೂಮಿಯಲ್ಲಿ ಬಿದ್ದ ನಿನ್ನ ಪುತ್ರರನ್ನು ನೋಡಿ ಬಹಳ ಕ್ರೋಧದಿಂದ ಕೂಡಿದವನಾಗಿ ತನ್ನ ಜೀವಿತದಲ್ಲಿ ವೈರಾಗ್ಯವನ್ನು ಹೊಂದಿದನು.

ಆಗಚ್ಛತಮಿವಾತ್ಮಾನಂ ಮೇನೇ ಚಾಧಿರಥಿಸ್ತದಾ ।
ಭೀಮಸೇನಂ ತತಃ ಕ್ರುದ್ಧಃ ಸಮಾದ್ರವತ ಸಂಭ್ರಮಾತ್ ॥ ೨ ॥

ಅಧಿರಥಪುತ್ರನಾದ ಅವನು ಆಗ ತನ್ನನ್ನೇ ಅಪರಾಧಿ ಎಂದು ತಿಳಿದು ಕೋಪವನ್ನು ಹೊಂದಿ ಭೀಮಸೇನನ ಮೇಲೆ ಶೀಘ್ರವಾಗಿ ಎರಗಿದನು.

ಸ ಭೀಮಂ ಪಂಚಭಿರ್ವಿದ್ಧ್ವಾ ರಾಧೇಯಃ ಪ್ರಹಸನ್ನಿವ ।
ಪುನರ್ವಿವ್ಯಾಧ ಸಪ್ತತ್ಯಾ ಸ್ವರ್ಣಪುಂಖೈಃ ಶಿಲಾಶಿತೈಃ ॥ ೩ ॥

ಕರ್ಣನು ನಗುವವನಂತೆ ಭೀಮಸೇನನನ್ನು ಐದು ಬಾಣಗಳಿಂದ ಹೊಡೆದು, ಪುನಃ ಸ್ವರ್ಣಪುಂಖವನ್ನು ಹೊಂದಿದ್ದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಎಪ್ಪತ್ತು ಬಾಣಗಳಿಂದ ಅವನನ್ನು ಹೊಡೆದನು.

ಅವಹಾಸಂ ತು ತಂ ಪಾರ್ಥೋ ನಾಮೃಷ್ಯತ ವೃಕೋದರಃ ।
ತತೋ ವಿವ್ಯಾಧ ರಾಧೇಯಂ ಶತೇನ ನತಪರ್ವಣಾಮ್ ॥ ೪ ॥

ಕರ್ಣನ ಆ ಅವಹಾಸವನ್ನು ಕುಂತೀಪುತ್ರನಾದ ವೃಕೋದರನು ಸಹಿಸಲಿಲ್ಲ. ಆಗ ಅವನು ಬಾಗಿದ ತುದಿಯುಳ್ಳ ನೂರು ಬಾಣಗಳಿಂದ ಕರ್ಣನನ್ನು ಹೊಡೆದನು.

ಪುನಶ್ಚ ವಿಶಿಖೈಸ್ತೀಕ್ಷ್ಣೈರ್ವಿದ್ಧ್ವಾ ಪಂಚಭಿರಾಶುಗೈಃ ।
ಧನುಶ್ಚಿಚ್ಛೇದ ಭಲ್ಲೇನ ಸೂತಪುತ್ರಸ್ಯ ಮಾರಿಷ ॥ ೫ ॥

ಎಲೈ ಪೂಜ್ಯನೇ, ಪುನಃ ಶೀಘ್ರಗಾಮಿಗಳಾದ, ತೀಕ್ಷ್ಣವಾದ ಐದು ಬಾಣಗಳಿಂದ ಹೊಡೆದು ಭಲ್ಲದಿಂದ ಕರ್ಣನ ಧನುಸ್ಸನ್ನು ಕತ್ತರಿಸಿದನು.

ಅಥಾನ್ಯದ್ ಧನುರಾದಾಯ ಕರ್ಣೋ ಭಾರತ ದುರ್ಮನಾಃ ।
ಇಷುಭಿಶ್ಚಾದಯಾಮಾಸ ಭೀಮಸೇನಂ ಸಮಂತತಃ ॥ ೬ ॥

ಎಲೈ ಭಾರತನೇ, ವಿಷಾದಗೊಂಡ ಕರ್ಣನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಬಾಣಗಳಿಂದ ಭೀಮಸೇನನನ್ನು ಎಲ್ಲ ಕಡೆಗಳಲ್ಲಿಯೂ ಆಚ್ಛಾದಿಸಿದನು.

ತಸ್ಯ ಭೀಮೋ ಹಯಾನ್ ಹತ್ವಾ ವಿನಿಹತ್ಯ ಚ ಸಾರಥಿಮ್ ।
ಪ್ರಜಹಾಸ ಮಹಾಹಾಸಂ ಕೃತೇ ಪ್ರತಿಕೃತಂ ಪುನಃ ॥ ೭ ॥

ಭೀಮನು ಅವನ ಅಶ್ವಗಳನ್ನೂ ಮತ್ತು ಸಾರಥಿಯನ್ನೂ ಕೊಂದು, ಗಟ್ಟಿಯಾಗಿ ನಕ್ಕು ಅವನು ಮಾಡಿದುದಕ್ಕೆ ಪ್ರತಿಯಾಗಿ ಮಾಡಿದನು.

ಇಷುಭಿಃ ಕಾರ್ಮುಕಂ ಚಾಸ್ಯ ಚಕರ್ತ ಪುರುಷರ್ಷಭಃ ।
ತತ್ಪಪಾತ ಮಹಾರಾಜ ಸ್ವರ್ಣಪೃಷ್ಠಂ ಮಹಾಸ್ವನಮ್ ॥ ೮ ॥

ಎಲೈ ಮಹಾರಾಜನೇ, ಪುರುಷರ್ಷಭನಾದ ಭೀಮಸೇನನು ಬಾಣಗಳಿಂದ ಕರ್ಣನ ಧನುಸ್ಸನ್ನು ಕತ್ತರಿಸಿದನು. ಸ್ವರ್ಣಪೃಷ್ಠವನ್ನು ಹೊಂದಿದ ಆ ಧನುಸ್ಸು ಮಹಾನಾದವನ್ನು ಮಾಡುತ್ತಾ ಭೂಮಿಯ ಮೇಲೆ ಬಿದ್ದಿತು.

ಅವಾರೋಹದ್ ರಥಾತ್ತಸ್ಮಾದಥ ಕರ್ಣೋ ಮಹಾರಥಃ ।
ಗದಾಂ ಗೃಹೀತ್ವಾ ಸಮರೇ ಭೀಮಸೇನಾಯ ಚಾಕ್ಷಿಪತ್ ॥ ೯ ॥

ಆಗ ಮಹಾರಥನಾದ ಕರ್ಣನು ಆ ರಥದಿಂದ ಇಳಿದು, ಗದೆಯನ್ನು ತೆಗೆದುಕೊಂಡು ರಣರಂಗದಲ್ಲಿ ಭೀಮಸೇನನ ಮೇಲೆ ಆದನ್ನು ಎಸೆದನು.

ತಾಮಾಪತಂತೀಂ ಸಹಸಾ ಗದಾಂ ದೃಷ್ಟ್ವಾ ವೃಕೋದರಃ ।
ಶರೈರವಾರಯದ್ ರಾಜನ್ ಸರ್ವಸೈನ್ಯಸ್ಯ ಪಶ್ಯತಃ ॥ ೧೦ ॥

ಎಲೈ ರಾಜನೇ, ಶೀಘ್ರವಾಗಿ ತನ್ನ ಕಡೆಗೆ ಬರುತ್ತಿದ್ದ ಆ ಗದೆಯನ್ನು ನೋಡಿ ಭೀಮಸೇನನು ಎಲ್ಲ ಸೈನ್ಯಗಳೂ ನೋಡುತ್ತಿರುವಂತೆ ಬಾಣಗಳಿಂದ ಅವುಗಳನ್ನು ನಿವಾರಿಸಿದನು.

ತತೋ ಬಾಣಸಹಸ್ರಾಣಿ ಪ್ರೇಷಯಾಮಾಸ ಪಾಂಡವಃ ।
ಸೂತಪುತ್ರವಧಾಕಾಂಕ್ಷೀ ತ್ವರಮಾಣಃ ಪರಾಕ್ರಮೀ ॥ ೧೧ ॥

ಅನಂತರ ಪರಾಕ್ರಮಶಾಲಿಯಾದ ಪಾಂಡವನು ಸೂತಪುತ್ರನಾದ ಕರ್ಣನ ವಧೆಯನ್ನು ಬಯಸಿ ತ್ವರೆ ಮಾಡುತ್ತಾ ಒಂದು ಸಹಸ್ರ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ತಾನಿಷೂನಿಷುಭಿಃ ಕರ್ಣೋ ವಾರಯಿತ್ವಾ ಮಹಾಮೃಧೇ ।
ಕವಚಂ ಭೀಮಸೇನಸ್ಯ ಪಾತಯಾಮಾಸ ಸಾಯಕೈಃ ॥ ೧೨ ॥

ಆ ದೊಡ್ಡ ಯುದ್ಧದಲ್ಲಿ ಕರ್ಣನು ಆ ಬಾಣಗಳನ್ನು ತನ್ನ ಬಾಣಗಳಿಂದ ನಿವಾರಿಸಿ ಬಾಣಗಳನ್ನು ಪ್ರಯೋಗಿಸಿ ಭೀಮಸೇನನ ಕವಚವನ್ನು ಕೆಡವಿದನು.

ಆಶ್ವೈನಂ ಪಂಚವಿಂಶತ್ಯಾ ಕ್ಷುದ್ರಕಾಣಾಂ ಸಮಾರ್ಪಯತ್ ।
ಪಶ್ಯತಾಂ ಸರ್ವ ಭೂತಾನಾಂ ತದದ್ಭುತಮಿವಾಭವತ್ ॥ ೧೩ ॥

ಅನಂತರ ಎಲ್ಲ ಭೂತಗಳೂ ನೋಡುತ್ತಿರುವಂತೆಯೇ ಇಪ್ಪತ್ತೈದು ಕ್ಷುದ್ರ ಬಾಣಗಳಿಂದ ಭೀಮಸೇನನನ್ನು ಹೊಡೆದನು, ಅದು ಅದ್ಭುತವಾಗಿದ್ದಿತು.

ತತೋ ಭೀಮೋ ಮಹಾರಾಜ ನವಭಿರ್ನತಪರ್ವಣಾಮ್ ।
ರಣೇऽಪ್ರೇಷಯತ ಕ್ರುದ್ಧಃ ಸೂತಪುತ್ರಸ್ಯ ಮಾರಿಷ ॥ ೧೪ ॥

ಎಲೈ ಪೂಜ್ಯನೇ, ಮಹಾರಾಜನೇ, ಆಗ ಭೀಮಸೇನನು ರಣರಂಗದಲ್ಲಿ ಕ್ರುದ್ಧನಾಗಿ ಸೂತಪುತ್ರನ ಮೇಲೆ ಬಾಗಿದ ತುದಿಯುಳ್ಳ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ತೇ ತಸ್ಯ ಕವಚಂ ಭಿತ್ತ್ವಾ ತಥಾ ಬಾಹುಂ ಚ ದಕ್ಷಿಣಮ್ ।
ಅಭ್ಯಗುರ್ಧರಣೀಂ ತೀಕ್ಷ್ಣಾ ವಲ್ಮೀಕಮಿವ ಪನ್ನಗಾಃ ॥ ೧೫ ॥

ಆ ತೀಕ್ಷ್ಣವಾದ ಬಾಣಗಳು ಕರ್ಣನ ಕವಚವನ್ನೂ, ದಕ್ಷಿಣಬಾಹುವನ್ನೂ ಭೇದಿಸಿ ಸರ್ಪವು ಹುತ್ತವನ್ನು ಪ್ರವೇಶಿಸುವಂತೆ ಭೂಮಿಯನ್ನು ಪ್ರವೇಶಿಸಿದವು.

ರಾಧೇಯಂ ತು ರಣೇ ದೃಷ್ಟ್ವಾ ಪದಾತಿನಮವಸ್ಥಿತಮ್ ।
ಭೀಮಸೇನೇನ ಸಂರಬ್ಧಂ ರಾಜಾ ದುರ್ಯೋಧನೋऽಬ್ರವೀತ್ ।
ತ್ವರದ್ಧ್ವಂ ಸರ್ವತೋ ಯತ್ತಾ ರಾಧೇಯಸ್ಯ ರಥಂ ಪ್ರತಿ ॥ ೧೬ ॥

ಕರ್ಣನು ರಣರಂಗದಲ್ಲಿ ಪದಾತಿಯಾಗಿ ನಿಂತು, ಭೀಮಸೇನನ ಜೊತೆಯಲ್ಲಿ ಸೆಣಸುತ್ತಿರುವುದನ್ನು ನೋಡಿದ ರಾಜನಾದ ದುರ್ಯೋಧನನು, ಎಲ್ಲರೂ ತ್ವರೆ ಮಾಡಿ ಪ್ರಯತ್ನಪೂರ್ವಕವಾಗಿ ಕರ್ಣನ ಬಳಿಗೆ ಹೋಗಿ ಎಂದು ಹೇಳಿದನು.

ತತಸ್ತವ ಸುತಾ ರಾಜನ್ ಶ್ರುತ್ವಾ ಭ್ರಾತುರ್ವಚೋ ದ್ರುತಮ್ ।
ಅಭ್ಯಯುಃ ಪಾಂಡವಂ ಯುದ್ಧೇ ವಿಸೃಜಂತಃ ಶಿತಾನ್ ಶರಾನ್ ॥ ೧೭ ।

ಚಿತ್ರೋಪಚಿತ್ರಶ್ಚಿತ್ರಾಕ್ಷಶ್ಚಾರುಚಿತ್ರಃ ಶರಾಸನಃ ।
ಚಿತ್ರಾಯುಧಶ್ಚಿತ್ರವರ್ಮಾ ಸಮರೇ ಚಿತ್ರಯೋಧಿನಃ ॥ ೧೮ ॥

ಎಲೈ ರಾಜನೇ, ಆಗ ನಿನ್ನ ಪುತ್ರರಾದ ಚಿತ್ರ, ಉಪಚಿತ್ರ, ಚಿತ್ರಾಕ್ಷ, ಚಾರುಚಿತ್ರ, ಶರಾಸನ, ಚಿತ್ರಾಯುಧ ಮತ್ತು ಚಿತ್ರವರ್ಮ- ಚಿತ್ರಯೋಧಿಗಳಾದ ಈ ಏಳು ಸಹೋದರರು ಅಣ್ಣನ ಮಾತನ್ನು ಕೇಳಿ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಶೀಘ್ರವಾಗಿ ಭೀಮನನ್ನು ಸಮೀಪಿಸಿದರು.

ಆಗಚ್ಛತಸ್ತಾನ್ ಸಹಸಾ ಭೀಮೋ ರಾಜನ್ ಮಹಾರಥಃ ।
ಸಾಶ್ವಸೂತಧ್ವಜಾನ್ ಯತ್ತಾನ್ ಪಾತಯಾಮಾಸ ಸಂಯುಗೇ ॥
ತೇ ಹತಾ ನ್ಯಪತನ್ ಭೂಮೌ ವಾತನುನ್ನಾ ಇವ ದ್ರುಮಾಃ ॥ ೧೯ ॥

ಎಲೈ ರಾಜನೇ, ಮಹಾರಥನಾದ ಭೀಮನು ಅವರು ಬರುತ್ತಿರುವಂತೆಯೇ ಶೀಘ್ರವಾಗಿ ಅಶ್ವ-ಸೂತ-ಧ್ವಜಗಳಿಂದ ಸಹಿತರಾದ, ಪ್ರಯತ್ನಶಾಲಿಗಳಾದ ಅವರನ್ನು ರಣರಂಗದಲ್ಲಿ ಕೆಡವಿದನು. ಅವರು ಗಾಳಿಯ ಹೊಡೆತಕ್ಕೆ ಸಿಕ್ಕಿಬಿದ್ದ ಮರಗಳಂತೆ ಹತರಾಗಿ ಭೂಮಿಯಲ್ಲಿ ಬಿದ್ದರು.

ದೃಷ್ಟ್ವಾ ವಿನಿಹತಾನ್ ಪುತ್ರಾಂಸ್ತವ ರಾಜನ್ ಮಹಾರಥಾನ್ ।
ಅಶ್ರುಪೂರ್ಣಮುಖಃ ಕರ್ಣಃ ಕಶ್ಮಲಂ ಸಮಪದ್ಯತ ॥ ೨೦ ॥

ಎಲೈ ರಾಜನೇ, ಮಹಾರಥರಾದ ನಿನ್ನ ಪುತ್ರರು ಹತರಾದುದನ್ನು ನೋಡಿ ಕಣ್ಣುಗಳಲ್ಲಿ ನೀರು ತುಂಬಿದ ಕರ್ಣನು ವಿಷಾದವನ್ನು ಹೊಂದಿದನು.

ರಥಮನ್ಯಂ ಸಮಾಸ್ಥಾಯ ವಿಧಿವತ್ಕಲ್ಪಿತಂ ಪುನಃ ।
ಆಭ್ಯಯಾತ್ ಪಾಂಡವಂ ಯುದ್ಧೇ ತ್ವರಮಾಣಃ ಪರಾಕ್ರಮೀ ॥ ೨೧ ॥

ಪರಾಕ್ರಮಶಾಲಿಯಾದ ಅವನು ವಿಧಿಪೂರ್ವಕವಾಗಿ ಸಜ್ಜುಗೊಳಿಸಿದ ಇನ್ನೊಂದು ರಥವನ್ನು ಏರಿ ತ್ವರೆ ಮಾಡುತ್ತಾ ಭೀಮನ ಮೇಲೆ ಎರಗಿದನು.

ತಾವನ್ಯೋನ್ಯಂ ಶರೈರ್ವಿದ್ಧ್ವಾ ಸ್ವರ್ಣಪುಂಖೈಃ ಶಿಲಾಶಿತೈಃ ।
ವ್ಯಭ್ರಾಜೇತಾಂ ಮಹಾರಾಜ ಪುಷ್ಪಿತಾವಿವ ಕಿಂಶುಕೌ ॥ ೨೨ ॥

ಎಲೈ ಮಹಾರಾಜನೇ, ಅವರಿಬ್ಬರೂ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಸ್ವರ್ಣ ಪುಂಖಗಳನ್ನು ಹೊಂದಿದ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಿ ಹೂವರಳಿದ ಕಿಂಶುಕ ವೃಕ್ಷಗಳಂತೆ ಶೋಭಿಸಿದರು.

ಷಟ್ತ್ರಿಂಶದ್ಭಿಸ್ತತೋ ಭಲ್ಲೈರ್ನಿಶಿತೈಸ್ತಿಗ್ಮತೇಜನೈಃ ।
ವ್ಯಧಮತ್ ಕವಚಂ ಕ್ರುದ್ಧಃ ಸೂತಪುತ್ರಸ್ಯ ಪಾಂಡವಃ ॥ ೨೩ ॥

ಪಾಂಡುಪುತ್ರನಾದ ಭೀಮಸೇನನು ಕೋಪಗೊಂಡು ತೀಕ್ಷ್ಣವಾದ ಮತ್ತು ಬಹಳ ಸಾಮರ್ಥ್ಯವನ್ನು ಹೊಂದಿದ ಮೂವತ್ತಾರು ಭಲ್ಲಗಳಿಂದ ಕರ್ಣನ ಕವಚವನ್ನು ಹಾರಿಸಿದನು.

ರಕ್ತಚಂದನದಿಗ್ಧಾಂಗೌ ಶರೈಃ ಕೃತಮಹಾವ್ರಣೌ ।
ಶೋಣಿತಾಕ್ತೌ ವ್ಯರಾಜೇತಾಂ ಕಾಲಸೂರ್ಯಾವಿವೋದಿತೌ ॥ ೨೪ ॥

ರಕ್ತಚಂದನದಿಂದ ಲೇಪಿತರಾಗಿ, ಬಾಣಗಳಿಂದ ಬಹಳವಾಗಿ ಗಾಯಗೊಂಡು ರಕ್ತದಿಂದ ತೊಯ್ದ ಶರೀರವುಳ್ಳ ಅವರಿಬ್ಬರೂ ಉದಯಿಸಿದ ಕಾಲಸೂರ್ಯನಂತೆ ಶೋಭಿಸಿದರು.

ತೌ ಶೋಣಿತೋತ್ಪೀಡೈರ್ಗಾತ್ರೈಃ ಶರೈಶ್ಚಿನ್ನತನುಚ್ಛದೌ ।
ವಿವರ್ಮಾಣೌ ವ್ಯರಾಜೇತಾಂ ನಿರ್ಮುಕ್ತಾವಿವ ಪನ್ನಗೌ ॥ ೨೫ ॥

ಬಾಣಗಳಿಂದ ಕವಚಗಳು ಕತ್ತರಿಸಲ್ಪಟ್ಟು, ರಕ್ತದಿಂದ ತೊಯ್ದ ಶರೀರವುಳ್ಳವರಾಗಿ, ಪೊರೆಯನ್ನು ಬಿಟ್ಟ ಸರ್ಪಗಳಂತೆ ಶೋಭಿಸಿದರು.

ವ್ಯಾಘ್ರಾವಿವ ನರವ್ಯಾಘ್ರೌ ದಂಷ್ಟ್ರಾಭಿರಿತರೇತರಮ್ ।
ಶರದಂಷ್ಟ್ರೌ ವಿಧುನ್ವಾನೌ ತತಕ್ಷತುರರಿಂದಮೌ ॥ ೨೬ ॥

ಅರಿಂದಮರಾದ ನರವ್ಯಾಘ್ರರಾದ ಶರದಂಷ್ಟ್ರಗಳುಳ್ಳ ಧನುಸ್ಸುಗಳನ್ನು ತೂಗಾಡಿಸುತ್ತಾ ಅವರಿಬ್ಬರೂ ವ್ಯಾಘ್ರಗಳಂತೆ ತಮ್ಮ ದಂಷ್ಟ್ರಗಳಿಂದ ಪರಸ್ಪರವಾಗಿ ಗಾಯಗೊಳಿಸಿದರು.

ವಾರಣಾವಿವ ಸಂಸಕ್ತೌ ರಂಗಮಧ್ಯೇ ವಿರೇಜತುಃ ।
ತುದಂತೌ ವಿಶಿಖೈಸ್ತೀಕ್ಷ್ಣೈರ್ಮತ್ತವಾರಣವಿಕ್ರಮೌ ॥ ೨೭ ॥

ಮದಗಜದ ಪರಾಕ್ರಮವುಳ್ಳ ಅವರಿಬ್ಬರೂ ರಂಗಮಧ್ಯದಲ್ಲಿ ಗಜಗಳಂತೆ ಸಂಸಕ್ತರಾಗಿ ತೀಕ್ಷ್ಣವಾದ ಬಾಣಗಳಿಂದ ಪರಸ್ಪರವಾಗಿ ಪೀಡಿಸುತ್ತಾ ವಿರಾಜಿಸಿದರು.

ಪ್ರಚ್ಛಾದಯಂತೌ ಸಮರೇ ಶರಜಾಲೈಃ ಪರಸ್ಪರಮ್ ।
ರಥಾಭ್ಯಾಂ ನಾದಯಂತೌ ಚ ದಿಶಃ ಸರ್ವಾ ವಿಚೇರತುಃ ॥ ೨೮ ॥

ರಣರಂಗದಲ್ಲಿ ಬಾಣಗಳ ಸಮೂಹದಿಂದ ಪರಸ್ಪರವಾಗಿ ಆಚ್ಛಾದನೆಯನ್ನು ಮಾಡುತ್ತಾ, ರಥಗಳಿಂದ ಶಬ್ದವನ್ನು ಮಾಡುತ್ತಾ ಅವರಿಬ್ಬರೂ ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸಿದರು.

ತೌ ರಥಾಭ್ಯಾಂ ಮಹಾರಾಜ ಮಂಡಲಾವರ್ತನಾದಿಷು ।
ವ್ಯರೋಚೇತಾಂ ಮಹಾತ್ಮಾನೌ ವೃತ್ರವಜ್ರಧರಾವಿವ ॥ ೨೯ ॥

ಎಲೈ ಮಹಾರಾಜನೇ, ಮಹಾತ್ಮರಾದ ಅವರಿಬ್ಬರೂ ವೃತ್ರ ಮತ್ತು ವಜ್ರಧರನಾದ ಇಂದ್ರನಂತೆ ತಮ್ಮ ರಥಗಳಿಂದ ಮಂಡಲಾವರ್ತನಾದಿಗಳನ್ನು ಮಾಡುತ್ತಾ ಶೋಭಿಸಿದರು.

ಸಹಸ್ತಾಭರಣಾಭ್ಯಾಂ ತು ಭುಜಾಭ್ಯಾಂ ವಿಕ್ಷಿಪನ್ ಧನುಃ ।
ವ್ಯರೋಚತ ರಣೇ ಭೀಮಃ ಸವಿದ್ಯುದಿವ ತೋಯದಃ ॥ ೩೦ ॥

ಹಸ್ತಾಭರಣ ಸಹಿತವಾದ ಭುಜಗಳಿಂದ ಧನುಸ್ಸನ್ನು ಎಳೆಯುತ್ತಾ ಭೀಮಸೇನನು ರಣರಂಗದಲ್ಲಿ ವರುಣನಿಂದ ಕೂಡಿದ ಮೋಡದಂತೆ ಶೋಭಿಸಿದನು.

ಸ ಚಾಪಘೋಷಸ್ತನಿತಃ ಶರಧಾರಾಂಬುದೋ ಮಹಾನ್ ।
ಭೀಮಮೇಘೋ ಮಹಾರಾಜ ಕರ್ಣಪರ್ವತಮಭ್ಯಯಾತ್ ॥ ೩೧ ॥

ಎಲೈ ಮಹಾರಾಜನೇ, ಧನುರ್ಘೋಷವೆಂಬ ಗುಡುಗುಗಳನ್ನು ಹೊಂದಿದ, ಶರಧಾರೆಯೆಂಬ ಮಳೆಯನ್ನು ಸುರಿಸುವ ಭೀಮನೆಂಬ ದೊಡ್ಡ ಮೋಡವು ಕರ್ಣ ಪರ್ವತದ ಮೇಲೆ ಧಾವಿಸಿತು.

ತತಃ ಶರಸಹಸ್ರೇಣ ಧನುರ್ಮುಕ್ತೇನ ಭಾರತ ।
ಪಾಂಡವೋ ವ್ಯಕಿರತ್ ಕರ್ಣಂ ಘನೋಽದ್ರಿಮಿವ ವೃಷ್ಟಿಭಿಃ ॥ ೩೨ ॥

ಆಗ ಎಲೈ ಭಾರತನೇ, ಧನುಸ್ಸಿನಿಂದ ಹೊರಹೊಮ್ಮಿದ ಸಹಸ್ರ ಬಾಣಗಳಿಂದ ಮೋಡವು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಭೀಮನು ಕರ್ಣನ ಮೇಲೆ ಬಾಣದ ಮಳೆಯನ್ನು ಸುರಿಸಿದನು.

ತತ್ರಾವೈಕ್ಷಂತ ಪುತ್ರಾಸ್ತೇ ಭೀಮಸೇನಸ್ಯ ವಿಕ್ರಮಮ್ ।
ಸುಪುಂಖೈಃ ಕಂಕವಾಸೋಭಿರ್ಯತ್ ಕರ್ಣಂ ಛಾದಯನ್ ಶರೈಃ ॥೩೩॥

ಸ ನಂದಯನ್ ರಣೇ ಪಾರ್ಥಂ ಕೇಶವಂ ಚ ಯಶಸ್ವಿನಮ್ ।
ಸಾತ್ಯಕಿಂ ಚಕ್ರರಕ್ಷೌ ಚ ಭೀಮಃ ಕರ್ಣಮಯೋಧಯತ್ ॥ ೩೪ ॥

ಕಂಕಪತ್ರವನ್ನು ಹೊಂದಿದ ಒಳ್ಳೆಯ ಪುಂಖಗಳಿಂದ ಶೋಭಿತವಾದ ಬಾಣಗಳಿಂದ ಕರ್ಣನನ್ನು ಆಚ್ಛಾದಿಸುತ್ತಾ, ಯುದ್ಧದಲ್ಲಿ ಅರ್ಜುನನನ್ನೂ ಮತ್ತು ಕೀರ್ತಿವಂತನಾದ ಕೃಷ್ಣನ್ನೂ, ಸಾತ್ಯಕಿಯನ್ನೂ, ಚಕ್ರರಕ್ಷಕರನ್ನೂ ಸಂತೋಷಪಡಿಸುತ್ತಾ ಭೀಮನು ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಭೀಮಸೇನನ ಆ ಮಹಾಪರಾಕ್ರಮವನ್ನು ನಿನ್ನ ಪುತ್ರರು ನೋಡಿದರು.

ವಿಕ್ರಮಂ ಭುಜಯೋರ್ವೀರ್ಯಂ ಧೈರ್ಯಂ ಚ ವಿದಿತಾತ್ಮನಃ ।
ಪುತ್ರಾಸ್ತವ ಮಹಾರಾಜ ದದೃಶುಃ ಪಾಂಡವಸ್ಯ ಹ ॥ ೩೫ ॥

ಎಲೈ ಮಹಾರಾಜನೇ, ಪ್ರಖ್ಯಾತನಾದ ಭೀಮನ ಪರಾಕ್ರಮವನ್ನೂ, ಭುಜವೀರ್ಯವನ್ನೂ ಮತ್ತು ಧೈರ್ಯವನ್ನೂ ನಿನ್ನ ಪುತ್ರರು ನೋಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕವಿಂಶತ್ಯಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೆರಡನೆಯ ಅಧ್ಯಾಯ

ಭೀಮಸೇನನಿಂದ ವಿಕರ್ಣಾದಿ ಸಪ್ತ ದುರ್ಯೋಧನನ ಸಹೋದರರ ವಧೆ.

ಸಂಜಯಃ

ಭೀಮಸೇನಸ್ಯ ರಾಧೇಯಃ ಶ್ರುತ್ವಾ ಜ್ಯಾತಳನಿಸ್ವನಮ್ ।
ನಾಮೃಷ್ಯತ ಯಥಾ ಮತ್ತೋ ಗಜಃ ಪ್ರತಿಗಜಸ್ವನಮ್ ॥ ೧ ॥

ಸಂಜಯ– ಭೀಮಸೇನನ ಹೆದೆಯ ಘೋಷವನ್ನು ಕೇಳಿದ ಕರ್ಣನು ಗಜವು ಪ್ರತಿಗಜದ ಗರ್ಜನೆಯನ್ನು ಸಹಿಸದಂತೆ ಅದನ್ನು ಸಹಿಸಲಿಲ್ಲ.

ಅಪಕ್ರಮ್ಯ ಸ ಭೀಮಸ್ಯ ಮುಹೂರ್ತಂ ಶರಗೋಚರಾತ್ ।
ತವ ಚಾಧಿರಥಿರ್ದ್ಯಷ್ಟ್ವಾ ಸ್ಯಂದನೇಭ್ಯಶ್ಚ್ಯುತಾನ್ ಸುತಾನ್ ॥ ೨ ॥

ಭೀಮಸೇನೇನ ನಿಹತಾನ್ ವಿಮನಾ ದುಃಖಿತೋಽಭವತ್ ।
ನಿಃಶ್ವಸನ್ ದೀರ್ಘಮುಷ್ಣಂ ಚ ಪುನಃ ಪಾಂಡವಮಭ್ಯಯಾತ್ ॥ ೩ ॥

ಕರ್ಣನು ಒಂದು ಮುಹೂರ್ತದ ಕಾಲ ಭೀಮಸೇನನ ಬಾಣಗಳ ವ್ಯಾಪ್ತಿಯಿಂದ ಹೊರಗೆ ಬಂದು ಭೀಮಸೇನನಿಂದ ಹತರಾಗಿ ತಮ್ಮ ರಥಗಳಿಂದ ಕೆಳಗೆ ಉರುಳಿದ ನಿನ್ನ ಪುತ್ರರನ್ನು ನೋಡಿ ಬೇಸರಗೊಂಡು ದುಃಖಿತನಾಗಿ ದೀರ್ಘವಾದ ಬಿಸಿಯಾದ ನಿಟ್ಟುಸಿರನ್ನು ಬಿಡುತ್ತಾ ಪುನಃ ಭೀಮಸೇನನ ಮೇಲೆ ಯುದ್ಧಕ್ಕೆ ನಿಂತನು.

ಸ ತಾಮ್ರನಯನಃ ಕ್ರೋಧಾಚ್ಚ್ವಸನ್ನಿವ ಮಹೋರಗಃ ।
ಬಭೌ ಕರ್ಣಃ ಶರಾನಸ್ಯನ್ ರಶ್ಮೀನಿವ ದಿವಾಕರಃ ॥ ೪ ॥

ಕರ್ಣನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಮಹಾಸರ್ಪದಂತೆ ಉಸಿರಾಡುತ್ತಾ ಸೂರ್ಯನು ಕಿರಣಗಳನ್ನು ಚೆಲ್ಲುವಂತೆ ಬಾಣಗಳನ್ನು ಪ್ರಯೋಗಿಸುತ್ತಾ ಶೋಭಿಸಿದನು.

ರಶ್ಮಿಜಾಲೈರಿವಾರ್ಕಸ್ಯ ವಿತತೈರ್ಭರತರ್ಷಭ ।
ಕರ್ಣಚಾಪಚ್ಯುತೈರ್ಬಾಣೈಃ ಪ್ರಾಚ್ಛಾದ್ಯತ ವೃಕೋದರಃ ॥ ೫ ॥

ಎಲೈ ಭರತಶ್ರೇಷ್ಠನೇ, ಸೂರ್ಯನ ವಿಸ್ತೃತವಾದ ಕಿರಣಗಳ ಸಮೂಹದಿಂದಲೋ ಎಂಬಂತೆ ಕರ್ಣನು ತನ್ನ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳಿಂದ ಭೀಮಸೇನನನ್ನು ಆಚ್ಛಾದಿಸಿದನು.

ಕರ್ಣಚಾಪಚ್ಯುತಾಶ್ಚಿತ್ರಾಃ ಶರಾ ಬರ್ಹಿಣವಾಸಸಃ ।
ವಿವಿಶುಃ ಸರ್ವತಃ ಪಾರ್ಥಂ ವಾಸಾಯೇವಾಂಡಜಾ ದ್ರುಮಮ್ ॥ ೬ ॥

ಕರ್ಣನ ಬಿಲ್ಲಿನಿಂದ ಹೊರಹೊಮ್ಮಿದ ಪಕ್ಷಿಗಳ ಗರಿಗಳನ್ನು ಹೊಂದಿದ ವಿಚಿತ್ರವಾದ ಬಾಣಗಳು ಪಕ್ಷಿಗಳು ತಮ್ಮ ವಾಸವ್ಯಕ್ಷವನ್ನು ಸೇರುವಂತೆ ಎಲ್ಲ ಕಡೆಗಳಿಂದಲೂ ಭೀಮಸೇನನ ದೇಹದಲ್ಲಿನಾಟಿದವು.

ಕರ್ಣಚಾಪಚ್ಯುತಾ ಬಾಣಾಃ ಸಂಪತಂತಸ್ತತಸ್ತತಃ ।
ರುಗ್ಮಪುಂಖಾ ವ್ಯರಾಜಂತ ಹಂಸಾಃ ಶ್ರೇಣೀಕೃತಾ ಇವ ॥ ೭ ॥

ಕರ್ಣನ ಧನುಸ್ಸಿನಿಂದ ಹೊರಟು ಎಲ್ಲ ದಿಕ್ಕುಗಳಲ್ಲಿಯೂ ಹೋಗುತ್ತಿದ್ದ ಸುವರ್ಣ ಪುಂಖವುಳ್ಳ ಬಾಣಗಳು ಹಂಸಗಳ ಕುಂಕ್ತಿಯಂತೆ ಶೋಭಿಸಿದವು.

ಚಾಪದ್ವಜೋಪಸ್ಕರೇಭ್ಯಶ್ಚತ್ರಾದೀಷಾಮುಖಾದ್ಯುಗಾತ್ ।
ಪ್ರಭವಂತೋ ವ್ಯದೃಶ್ಯಂತ ರಾಜನ್ನಾಧಿರಥೇಃ ಶರಾಃ ॥ ೮ ॥

ಕರ್ಣನು ಪ್ರಯೋಗಿಸಿದ ಬಾಣಗಳು ಅವನ ಧನುಸ್ಸಿನಿಂದಲೂ, ಧ್ವಜದಿಂದಲೂ, ರಥದ ಉಪಕರಣಗಳಿಂದಲೂ, ಛತ್ರದಿಂದಲೂ, ಮೂಕಯಿಂದಲೂ,ನೊಗದಿಂದಲೂ ಬರುವಂತೆ ತೋರುತ್ತಿದ್ದವು.

ಖಂ ಪೂರಯನ್ ಮಹಾವೇಗಾನ್ ಖಗಮಾನ್ ಖಗವಾಸಸಃ ।
ಸುವರ್ಣವಿಕೃತಾಂಶ್ಚಿತ್ರಾನ್ ಮುಮೋಚಾಧಿರಥಿಃ ಶರಾನ್ ॥ ೯ ॥

ಕರ್ಣನು ಸುವರ್ಣಾಲಂಕೃತವಾದ ಮಹಾವೇಗವುಳ್ಳ, ಪಕ್ಷಿಗಳ ಗರಿಯನ್ನು ಹೊಂದಿದ್ದ, ಆಕಾಶದಲ್ಲಿ ಸಂಚರಿಸುವ ಬಾಣಗಳಿಂದ ಆಕಾಶವನ್ನು ತುಂಬುತ್ತಾ ಬಾಣಗಳನ್ನು ಪ್ರಯೋಗಿಸಿದನು.

ತಮಂತಕಮಿವಾಯಸ್ತಮಾಪತಂತಂ ವೃಕೋದರಃ ।
ತ್ಯಕ್ತ್ವಾ ಪ್ರಾಣಾನಭಿಕ್ರುದ್ಧ್ಯ ವಿವ್ಯಾಧ ನವಭಿಃ ಶರೈಃ ॥ ೧೦ ॥

ಯಮನಂತೆ ಕೋಪಗೊಂಡು ದನಿದು ತನ್ನ ಮೇಲೆ ಬರುತ್ತಿದ್ದ ಅವನ ಮೇಲೆ ವೃಕೋದರನು ಪ್ರಾಣಗಳ ಹಂಗನ್ನು ತೊರೆದು ಕೋಪಗೊಂಡು ಒಂಬತ್ತು ಬಾಣಗಳನ್ನು ಪ್ರಯೋಗಿಸಿ ಹೊಡೆದನು.

ತಸ್ಯ ವೇಗಮಸಂಸಹ್ಯಂ ದೃಷ್ಟ್ವಾ ಕರ್ಣಸ್ಯ ಪಾಂಡವಃ ।
ಮಹತಶ್ಚ ಶರೌಘಾಂಸ್ತಾನ್ ನೈವಾವ್ಯಥತ ವೀರ್ಯವಾನ್ ॥ ೧೧ ॥

ವೃಕೋದರನು ಕರ್ಣನ ಸಹಿಸಲು ಅಸಾಧ್ಯವಾದ ವೇಗವನ್ನೂ ಮತ್ತು ಬಾಣಗಳ ದೊಡ್ಡ ಸಮೂಹವನ್ನೂ ನೋಡಿದರೂ ಪರಾಕ್ರಮಶಾಲಿಯಾದ ಅವನು ವ್ಯಥೆಪಡಲಿಲ್ಲ.

ತತೋ ವಿಧಮ್ಯಾಧಿರಥೇಃ ಶರಜಾಲಾನಿ ಪಾಂಡವಃ ।
ವಿವ್ಯಾಧ ಕರ್ಣಂ ವಿಂಶತ್ಯಾ ಪುನರನ್ಯೈಃ ಶಿತೈಃ ಶರೈಃ ॥ ೧೨ ॥

ಆಗ ಭೀಮಸೇನನು ಕರ್ಣನ ಬಾಣಸಮೂಹಗಳನ್ನು ಹಾರಿಸಿ ಕರ್ಣನ ಮೇಲೆ ಇಪ್ಪತ್ತು ಬಾಣಗಳನ್ನು ಪ್ರಯೋಗಿಸಿ ಪುನಃ ನಿಶಿತವಾದ ಬೇರೆ ಬಾಣಗಳಿಂದ ಅವನನ್ನು ಹೊಡೆದನು.

ಯಥೈವ ಹಿ ಶರೈಃ ಪಾರ್ಥಃ ಸೂತಪುತ್ರೇಣ ಚ್ಛಾದಿತಃ ।
ತಥೈವ ಕರ್ಣಂ ಸಮರೇ ಛಾದಯಾಮಾಸ ಪಾಂಡವಃ ॥ ೧೩ ॥

ಕರ್ಣನು ಭೀಮಸೇನನನ್ನು ಬಾಣಗಳಿಂದ ಆಚ್ಛಾದಿಸಿದಂತೆಯೇ ಭೀಮನೂ ಸಹ ಕರ್ಣನನ್ನು ಬಾಣಗಳಿಂದ ಆಚ್ಛಾದಿಸಿದನು.

ದೃಷ್ಟ್ವಾ ತು ಭೀಮಸೇನಸ್ಯ ವಿಕ್ರಮಂ ಯುಧಿ ಭಾರತ ।
ಅಭ್ಯನಂದಂಸ್ತ್ವದೀಯಾಶ್ಚ ಸಂಪ್ರಹೃಷ್ಟಾಶ್ಚ ಚಾರಣಾಃ ॥ ೧೪ ॥

ಎಲೈ ಭಾರತನೇ, ಯುದ್ಧದಲ್ಲಿ ಭೀಮಸೇನನ ಪರಾಕ್ರಮವನ್ನು ನೋಡಿ ಪಾಂಡವರ ಯೋಧರು ಮತ್ತು ಚಾರಣರು ಸಂತೋಷಗೊಂಡರು.

ಭೂರಿಶ್ರವಾಃ ಕೃಪೋ ದ್ರೌಣಿರ್ಮದ್ರರಾಜೋ ಜಯದ್ರಥಃ ।
ಉತ್ತಮೌಜಾ ಯುಧಾಮನ್ಯುಃ ಸಾತ್ಯಕಿಃ ಕೇಶವಾರ್ಜುನೌ ॥ ೧೫ ॥

ಕುರುಪಾಂಡವಾನಾಂ ಪ್ರವರಾ ದಶ ರಾಜನ್ ಮಹಾರಥಾಃ ।
ಸಾಧು ಸಾಧ್ವಿತಿ ವೇಗೇನ ಸಿಂಹನಾದಮಥಾನದನ್ ॥ ೧೬ ॥

ಭೂರಿಶ್ರವ, ಕೃಪರು, ಅಶ್ವತ್ಥಾಮರು, ಮದ್ರರಾಜನಾದ ಶಲ್ಯ, ಜಯದ್ರಥ, ಉತ್ತಮೌಜ, ಯುಧಾಮನ್ಯು, ಸಾತ್ಯಕಿ, ಕೃಷ್ಣಾರ್ಜುನರು, ಎಲೈ ರಾಜನೇ, ಕುರು-ಪಾಂಡವ ಸೇನೆಗಳ ಶ್ರೇಷ್ಠರಾದ ಈ ಹತ್ತು ಮಹಾರಥರು ಸಾಧು-ಸಾಧು ಎಂದು ಹೇಳುತ್ತಾ ಸಿಂಹನಾದವನ್ನು ಮಾಡಿದರು.

ತಸ್ಮಿಂಸ್ತು ತುಮುಲೇ ಶಬ್ದೇ ಪ್ರವೃತ್ತೇ ಲೋಮಹರ್ಷಣೇ ।
ಅಭ್ಯಭಾಷತ ಪುತ್ರಾಂಸ್ತೇ ರಾಜನ್ ದುರ್ಯೋಧನಸ್ತ್ವರನ್ ॥ ೧೭ ॥

ರಾಜ್ಞಶ್ಚ ರಾಜಪುತ್ರಾಂಶ್ಚ ಸೋದರ್ಯಾಂಶ್ಚ ವಿಶೇಷತಃ ।
ಕರ್ಣಂ ಗಚ್ಛತ ಭದ್ರಂ ವಃ ಪರೀಪ್ಸಂತೋ ವೃಕೋದರಾತ್ ॥ ೧೮ ॥

ಪುರಾ ನಿಘ್ನಂತಿ ರಾಧೇಯಂ ಭೀಮಚಾಪಚ್ಯುತಾಃ ಶರಾಃ ।
ತೇ ಯತಧ್ವಂ ಮಹೇಷ್ವಾಸಾಃ ಸೂತಪುತ್ರಸ್ಯ ರಕ್ಷಣೇ ॥ ೧೯ ॥

ರೋಮಾಂಚಕಾರಿಯಾದ ಅಂತಹ ತೀವ್ರವಾದ ಶಬ್ದವುಂಟಾಗುತ್ತಿರಲು ದುರ್ಯೋಧನನು ನಿನ್ನ ಪುತ್ರರನ್ನೂ, ರಾಜರನ್ನೂ, ರಾಜಕುಮಾರರನ್ನೂ ಕುರಿತು, ವಿಶೇಷವಾಗಿ ಸಹೋದರರನ್ನು ಕುರಿತು, ಭೀಮನ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳು ಕರ್ಣನನ್ನು ಕೊಲ್ಲುತ್ತಿವೆ. ನಿಮಗೆ ಮಂಗಳವಾಗಲಿ, ಬೇಗ ಹೋಗಿ ಕರ್ಣನನ್ನು ವೃಕೋದರನಿಂದ ರಕ್ಷಿಸಿ. ಮಹಾಧನುರ್ಧಾರಿಗಳಾದ ನೀವು ಕರ್ಣನ ರಕ್ಷಣೆಯಲ್ಲಿ ಪ್ರಯತ್ನಶೀಲರಾಗಿ ಎಂದು ಹೇಳಿದನು.

ದುರ್ಯೋಧನಸಮಾದಿಷ್ಟಾಃ ಸೋದರ್ಯಾಃ ಸಪ್ತ ಮಾರಿಷ ।
ಭೀಮಸೇನಮಭಿದ್ರುತ್ಯ ಸಂರಬ್ಧಾಃ ಪರ್ಯವಾರಯನ್ ॥ ೨೦ ॥

ಎಲೈ ಪೂಜ್ಯನೇ, ದುರ್ಯೋಧನನಿಂದ ಆಜ್ಞಪ್ತರಾದ ಅವನ ಏಳು ಸಹೋದರರು ಕೋಪದಿಂದ ಭೀಮಸೇನನ ಬಳಿಗೆ ಹೋಗಿ ಅವನನ್ನು ತಡೆದರು.

ತೇ ಸಮಾಸಾದ್ಯ ಕೌಂತೇಯಮಾವೃಣ್ವನ್ ಶರವೃಷ್ಟಿಭಿಃ ।
ಪರ್ವತಂ ವಾರಿಧಾರಾಭಿಃ ಪ್ರಾವೃಷೀವ ಬಲಾಹಕಾಃ ॥ ೨೧ ॥

ಅವರು ಭೀಮಸೇನನನ್ನು ಸಮೀಪಿಸಿ, ತಮ್ಮ ಬಾಣಗಳ ಮಳೆಯಿಂದ ಮಳೆಗಾಲದಲ್ಲಿ ಮೋಡಗಳು ಪರ್ವತದ ಮೇಲೆ ಜಲಧಾರೆಯನ್ನು ಸುರಿಸುವಂತೆ ಅವನನ್ನು ಮುಚ್ಚಿಹಾಕಿದರು.

ತೇಽಪೀಡಯನ್ ಭೀಮಸೇನಂ ಕ್ರುದ್ಧಃ ಸಪ್ತ ಮಹಾರಥಾಃ ।
ಪ್ರಜಾಸಂಹರಣೇ ರಾಜನ್ ಸೋಮಂ ಸಪ್ತ ಗ್ರಹಾ ಇವ ॥ ೨೨ ॥

ಎಲೈ ರಾಜನೇ, ಪ್ರಜೆಗಳ ಸಂಹಾರಕಾಲದಲ್ಲಿ ಚಂದ್ರನನ್ನು ಏಳು ಗ್ರಹಗಳು ಪೀಡಿಸಿದಂತೆ ಅವನ ಏಳು ಮಹಾರಥರು ಕೋಪಗೊಂಡು ಭೀಮಸೇನನನ್ನು ಪೀಡಿಸಿದರು.

ತತೋ ವಾಮೇನ ಕೌಂತೇಯಃ ಪೀಡಯಿತ್ವಾ ಶರಾಸನಮ್ ।
ಮುಷ್ಟಿನಾ ಪಾಂಡವೋ ರಾಜನ್ ದೃಢೇನ ಸುಪರಿಷ್ಕೃತಮ್ ॥ ೨೩ ॥

ಮನುಷ್ಯಸಮತಾಂ ಜ್ಞಾತ್ವಾ ಸಪ್ತ ಸಂಧಾಯ ಸಾಯಕಾನ್ ।
ತೇಭ್ಯೋ ವ್ಯಸೃಜದಾಯಸ್ತಃ ಸೂರ್ಯರಶ್ಮಿನಿಭಾನ್ ಪ್ರಭುಃ ॥ ೨೪ ॥

ಆಗ ಕುಂತೀಪುತ್ರನಾದ ಭೀಮಸೇನನು ಎಡಮುಷ್ಟಿಯಿಂದ ದೃಢವಾದ, ಅಲಂಕೃತವಾದ ಧನುಸ್ಸನ್ನು ತೀವ್ರವಾಗಿ ಪೀಡಿಸಿ ಆ ಏಳು ಸಹೋದರರನ್ನು ಸಾಮಾನ್ಯ ಮನುಷ್ಯರೆಂದು ಭಾವಿಸಿ ಕೋಪಗೊಂಡು ಧನುಸ್ಸಿನಲ್ಲಿ ಸೂರ್ಯನ ಕಿರಣದಂತಹ ಏಳು ಬಾಣಗಳನ್ನು ಹೂಡಿ ಅವರ ಮೇಲೆ ಪ್ರಯೋಗಿಸಿದನು.

ನಿರಸ್ಯನ್ನಿವ ದೇಹೇಭ್ಯಸ್ತನಯಾನಾಮಸೂನ್ಸವ ।
ಭೀಮಸೇನೋ ಮಹಾರಾಜ ಪೂರ್ವವೈರಮನುಸ್ಮರನ್ ॥ ೨೫ ॥

ಮಹಾರಾಜನೇ, ಭೀಮಸೇನನು ಹಿಂದಿನ ವೈರವನ್ನು ಸ್ಮರಿಸಿ, ಅವರ ದೇಹಗಳಿಂದ ಪ್ರಾಣಗಳನ್ನು ಹೊರಗೆ ಕಳುಹಿಸುವವನಂತೆ ಬಾಣಗಳನ್ನು ಪ್ರಯೋಗಿಸಿದನು.

ತೇ ಕ್ಷಿಪ್ತಾ ಭೀಮಸೇನೇನ ಶರಾ ಭಾರತ ಭಾರತಾನ್ ।
ವಿದಾರ್ಯ ಖಂ ಸಮುತ್ಪೇತುಃ ಸ್ವರ್ಣಪುಂಖಾಃ ಶಿಲಾಶಿತಾಃ ॥ ೨೬ ॥

ಎಲೈ ಭಾರತನೇ, ಭೀಮಸೇನನಿಂದ ಪ್ರಯೋಗಿಸಲ್ಪಟ್ಟ ಸ್ವರ್ಣಪುಂಖವುಳ್ಳ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಆ ಬಾಣಗಳು ಭಾರತರಾದ ಆ ಏಳು ಸಹೋದರರ ದೇಹಗಳನ್ನು ಭೇದಿಸಿ ಆಕಾಶಕ್ಕೆ ಹಾರಿತು.

ತೇಷಾಂ ವಿದಾರ್ಯ ಚೇತಾಂಸಿ ಶರಾ ಹೇಮವಿಭೂಷಿತಾಃ ।
ವ್ಯರಾಜಂತ ಮಹಾರಾಜ ಸುಪರ್ಣಾ ಇವ ಚೇಚರಾಃ ॥ ೨೭ ॥

ಮಹಾರಾಜನೇ, ಸುವರ್ಣಭೂಷಿತವಾದ ಆ ಬಾಣಗಳು ಅವರ ದೇಹಗಳನ್ನು ಭೇದಿಸಿ ಆಕಾಶದಲ್ಲಿ ಗರುಡಗಳಂತೆ ವಿರಾಜಿಸಿದವು.

ಶೋಣಿತಾದಿಗ್ಧವಾಜಾಗ್ರಾಃ ಸಪ್ತ ಹೇಮಪರಿಷ್ಕೃತಾಃ ।
ಪುತ್ರಾಣಾಂ ತವ ರಾಜೇಂದ್ರ ಪೀತ್ವಾ ಶೋಣಿತಮುದ್ಗತಾಃ ॥ ೨೮ ॥

ಎಲೈ ರಾಜೇಂದ್ರನೇ, ಸುವರ್ಣಾಲಂಕೃತವಾದ ಏಳು ಬಾಣಗಳು ನಿನ್ನ ಪುತ್ರರ ಉದರವನ್ನು ಪ್ರವೇಶಿಸಿ, ಅಲ್ಲಿದ್ದ ಆಹಾರವನ್ನು ರಕ್ತಸಿಕ್ತವನ್ನಾಗಿ ಮಾಡಿ, ತಾವೂ ರಕ್ತಪಾನವನ್ನು ಮಾಡಿ ಹೊರಬಂದವು (ಲಕ್ಷಾಲಂಕಾರ).

ತೇ ಶರೈರ್ಭಿನ್ನಮರ್ಮಾಣೋ ರಥೇಭ್ಯಃ ಪ್ರಾಪತನ್ ಕ್ಷಿತೌ ।
ಗಿರಿಸಾನುರುಹಾ ಭಗ್ನಾ ದ್ವಿಪೇನೇವ ಮಹಾದ್ರುಮಾಃ ॥ ೨೯ ॥

ಅವರು ಬಾಣಗಳಿಂದ ತಮ್ಮ ಮರ್ಮಗಳು ಭೇದಿಸಲ್ಪಟ್ಟು ಪರ್ವತ ಶಿಖರದಲ್ಲಿ ಬೆಳೆದ ಮಹಾವೃಕ್ಷಗಳು ಗಜದಿಂದ ಭಗ್ನ ಹೊಂದಿ ಬೀಳುವಂತೆ ತಮ್ಮ ರಥದಿಂದ ಭೂಮಿಯ ಮೇಲೆ ಬಿದ್ದರು.

ಶತ್ರುಂಜಯಃ ಶತ್ರುಸಹಶ್ಚಿತ್ರಶ್ಚಿತ್ರಾಯುಧೋ ದೃಢಃ ।
ಚಿತ್ರಸೇನೋ ವಿಕರ್ಣಶ್ಚ ಸಪ್ತೈತೇ ವಿನಿಪಾತಿತಾಃ ॥ ೩೦ ॥

ಶತ್ರುಂಜಯ, ಶತ್ರುಸಹ, ಚಿತ್ರ, ಚಿತ್ರಾಯುಧ, ದೃಢ, ಚಿತ್ರಸೇನ, ವಿಕರ್ಣ- ಈ ಏಳು ಸಹೋದರರು ಭೂಮಿಯಲ್ಲಿ ಬಿದ್ದರು.

ತಾನ್ ನಿಹತ್ಯ ಮಹಾಬಾಹೂ ರಾಧೇಯಸ್ಯೈವ ಪಶ್ಯತಃ ।
ಸಿಂಹನಾದರವಂ ಘೋರಮಸೃಜತ್ ಪಾಂಡುನಂದನಃ ॥ ೩೧ ॥

ಮಹಾಬಾಹುವಾದ ಪಾಂಡುನಂದನನು ಕರ್ಣನ ಎದುರಿಗೇ ಅವರನ್ನು ಕೊಂದು ಘೋರವಾದ ಸಿಂಹನಾದವನ್ನು ಮಾಡಿದನು.

ಸ ರವಸ್ತಸ್ಯ ಶೂರಸ್ಯ ಧರ್ಮರಾಜಸ್ಯ ಭಾರತ ।
ಆಚಖ್ಯಾವಿವ ತದ್ಯುದ್ಧಂ ವಿಜಯಂ ಚಾತ್ಮನೋ ಮಹತ್ ॥ ೩೨ ॥

ಎಲೈ ಭಾರತನೇ, ಆ ಶೂರನ ಸಿಂಹನಾದವು ಧರ್ಮರಾಜನಿಗೆ ಆ ಯುದ್ಧವನ್ನು ತಿಳಿಸುವಂತೆ ಮತ್ತು ಆ ಯುದ್ಧದಲ್ಲಿ ತನ್ನ ಜಯವನ್ನು ಹೇಳುವಂತೆ ಇದ್ದಿತು.

ತಂ ಶ್ರುತ್ವಾ ಸುಮಹಾನಾದಂ ಭೀಮಸೇನಸ್ಯ ಧನ್ವಿನಃ ।
ಬಭೂವ ಪರಮಾ ಪ್ರೀತಿರ್ಧರ್ಮರಾಜಸ್ಯ ಸಂಯುಗೇ ॥ ೩೩ ॥

ಧನುರ್ಧಾರಿಯಾದ ಭೀಮಸೇನನ ಆ ಮಹಾನಾದವನ್ನು ಕೇಳಿದ ಧರ್ಮರಾಜನಿಗೆ ರಣರಂಗದಲ್ಲಿ ಬಹಳ ಸಂತೋಷವಾಯಿತು.

ತತೋ ಹೃಷ್ಟೋ ಮಹಾರಾಜ ವಾದಿತ್ರಾಣಾಂ ಮಹಾಸ್ವನೈಃ ।
ಭೀಮಸೇನರವಂ ಪಾರ್ಥಃ ಪ್ರತಿಜಗ್ರಾಹ ಸರ್ವಶಃ ॥ ೩೪ ॥

ಎಲೈ ಮಹಾರಾಜನೇ, ಸಂತೋಷಗೊಂಡ ಧರ್ಮರಾಜನು ರಣವಾದ್ಯಗಳ ಮಹಾನಾದದಿಂದ ಭೀಮಸೇನನ ಸಿಂಹನಾದವನ್ನು ಎಲ್ಲ ಕಡೆಯಲ್ಲಿಯೂ ಸ್ವೀಕರಿಸಿದನು.

ಅಭ್ಯಯಾಚ್ಚೈವ ಸಮರೇ ದ್ರೋಣಮಸ್ತ್ರಭೃತಾಂ ವರಮ್ ।
ಹರ್ಷೇಣ ಮಹತಾ ಯುಕ್ತಃ ಕೃತಸಂಜ್ಞೋ ವೃಕೋದರೇ ॥ ೩೫ ॥

ಭೀಮಸೇನನು ಸೂಚನೆಯನ್ನು ಕೊಡುತ್ತಿರಲು ಬಹಳ ಸಂತೋಷದಿಂದ ಕೂಡಿದವನಾಗಿ ಅಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರ ಮೇಲೆ ಯುದ್ಧಕ್ಕೆ ಹೋದನು.

ಏಕತ್ರಿಂಶನ್ಮಹಾರಾಜ ಪುತ್ರಾಂಸ್ತವ ಮಹಾರಥಾನ್ ।
ಹತಾನ್ ದುರ್ಯೋಧನೋ ದೃಷ್ಟ್ವಾ ಕ್ಷತ್ತುಃ ಸಸ್ಮಾರ ತದ್ವಚಃ ॥ ೩೬ ॥

ಮಹಾರಾಜನೇ, ನಿನ್ನ ಪುತ್ರರಾದ ಮೂವತ್ತೊಂದು ಮಹಾರಥರು ಹತರಾದುದನ್ನು ನೋಡಿದ ದುರ್ಯೋಧನನು ವಿದುರನ ಆ ಮಾತುಗಳನ್ನು ಸ್ಮರಿಸಿದನು.

ತದಿದಂ ಸಮನುಪ್ರಾಪ್ತಂ ಕ್ಷತ್ತುರ್ಹಿತಕರಂ ವಚಃ ।
ಇತಿ ಸಂಚಿಂತ್ಯ ರಾಜಾಸೌ ನೋತ್ತರಂ ಪ್ರತ್ಯಪದ್ಯತ ॥ ೩೭ ॥

ವಿದುರನು ಹೇಳಿದ ಹಿತವಚನಗಳ ಫಲವು ಈಗ ದೊರೆಯುತ್ತಿದೆ ಎಂದು ಚಿಂತಿಸಿದ ಆ ರಾಜನು ಈಗ ಮಾಡಬೇಕಾದ ಪ್ರತಿಕ್ರಿಯೆಯನ್ನು ತಿಳಿಯಲಿಲ್ಲ.

ಯದ್ ದ್ಯೂತಕಾಲೇ ದುರ್ಬುದ್ಧಿರಬ್ರವೀತ್ ತನಯಸ್ತವ ।
ಯಚ್ಚ ಕರ್ಣೋಽಬ್ರವೀತ್ ಕೃಷ್ಣಾಂ ಸಭಾಯಾಂ ಪರುಷಂ ವಚಃ ॥೩೮॥

ಪ್ರಮುಖೇ ಪಾಂಡುಪುತ್ರಾಣಾಂ ತವ ಚೈವ ವಿಶಾಂಪತೇ ।
ಕೌರವಾಣಾಂ ಚ ಸರ್ವೇಷಾಮಾಚಾರ್ಯಸ್ಯ ಚ ಸನ್ನಿಧೌ ॥ ೩೯ ॥

ವಿನಷ್ಟಾಃ ಪಾಂಡವಾಃ ಕೃಷ್ಣೇ ಶಾಶ್ವತಂ ನರಕಂ ಗತಾಃ ।
ಪತಿಮನ್ಯಂ ವೃಣೀಷ್ವೇತಿ ತಸ್ಯೇದಂ ಫಲಮಾಗತಮ್ ॥ ೪೦ ॥

ಎಲೈ ರಾಜನೇ, ದ್ಯೂತಕಾಲದಲ್ಲಿ ದುರ್ಬುದ್ಧಿಯುಳ್ಳ ನಿನ್ನ ಪುತ್ರನು ಏನು ಮಾತನಾಡಿದನೋ, ಕರ್ಣನು ಸಭೆಯಲ್ಲಿ ದ್ರೌಪದಿಯನ್ನು ಕುರಿತು ಯಾವ ಕ್ರೂರವಾದ ಮಾತುಗಳನ್ನು ಆಡಿದನೋ, ನಿನ್ನ ಸಮಕ್ಷದಲ್ಲಿ ಪಾಂಡವರ ಎದುರಿನಲ್ಲಿ ಎಲ್ಲ ಕೌರವರ ಮತ್ತು ಆಚಾರ್ಯರ ಸನ್ನಿಧಿಯಲ್ಲಿ ದ್ರೌಪದಿಯೇ ಪಾಂಡವರು ನಾಶವನ್ನು ಹೊಂದಿದ್ದಾರೆ. ಶಾಶ್ವತವಾಗಿ ನರಕದಲ್ಲಿ ಬಿದ್ದಿದ್ದಾರೆ. ಇನ್ನೊಬ್ಬ ಪತಿಯನ್ನು ಆರಿಸು ಎಂದು ಆಡಿದ ಆ ಮಾತುಗಳ ಫಲವು ಈಗ ಪ್ರಾಪ್ತವಾಗಿದೆ.

ಯತ್ ಸ್ಮ ತಾಂ ಪರುಷಾಣ್ಯಾಹುಃ ಸಭಾಮಾನಾಯ್ಯ ದ್ರೌಪದೀಮ್ ।
ಪಾಂಡವಾನುಗ್ರಧನುಷಃ ಕ್ರೋಧಯಂತಸ್ತವಾತ್ಮಜಾಃ ॥ ೪೧ ॥

ತಂ ಭೀಮಸೇನಃ ಕ್ರೋಧಾಗ್ನಿಂ ತ್ರಯೋದಶ ಸಮಾಃ ಸ್ಥಿತಮ್ ।
ವಿಸೃಜಂಸ್ತವ ಪುತ್ರಾಣಾಮಂತಂ ಗಚ್ಛತಿ ಕೌರವ ॥ ೪೨ ॥

ಎಲೈ ಕೌರವನೇ, ನಿನ್ನ ಪುತ್ರರು ದ್ರೌಪದಿಯನ್ನು ಸಭೆಗೆ ಎಳೆತಂದು ಉಗ್ರಧನುರ್ಧಾರಿಗಳಾದ ಪಾಂಡವರನ್ನು ಕೋಪಗೊಳಿಸುತ್ತಾ ಯಾವ ಕ್ರೂರವಾದ ಮಾತುಗಳನ್ನು ಆಡಿದರೋ ಅದರಿಂದ ಉಂಟಾದ ಕ್ರೋಧಾಗ್ನಿಯನ್ನು ಭೀಮಸೇನನು ಹದಿಮೂರು ವರ್ಷಗಳ ಕಾಲ ತನ್ನಲ್ಲಿ ರಕ್ಷಿಸಿ, ಈಗ ನಿನ್ನ ಪುತ್ರರ ಮೇಲೆ ಅದನ್ನು ಹಾಕುತ್ತಾ ಅವರ ನಾಶವನ್ನು ಮಾಡುತ್ತಿದ್ದಾನೆ.

ವಿಲಪಂಶ್ಚ ಬಹು ಕ್ಷತ್ತಾ ಶಮಂ ನಾಲಭತ ತ್ವಯಿ ।
ಸಪುತ್ರೋ ಭರತಶ್ರೇಷ್ಠ ತಸ್ಯ ಭುಂಕ್ಷ್ವ ಫಲೋದಯಮ್ ।
ಹತೋ ವಿಕರ್ಣೋ ರಾಜೇಂದ್ರ ಚಿತ್ರಸೇನಶ್ಚ ವೀರ್ಯವಾನ್ ॥ ೪೩ ॥

ವಿದುರನು ನಿನ್ನ ಬಳಿ ಎಷ್ಟು ವಿಲಾಪವನ್ನು ಮಾಡಿದರೂ ನೀನು ಶಾಂತಿಯನ್ನು ಹೊಂದಲಿಲ್ಲ. ಎಲೈ ಭರತಶ್ರೇಷ್ಠನೇ, ನಿನ್ನ ಪುತ್ರರ ಜೊತೆಯಲ್ಲಿ ನೀನು ಅದರ ಫಲವನ್ನು

ಅನುಭವಿಸು. ರಾಜೇಂದ್ರನೇ, ಪರಾಕ್ರಮಶಾಲಿಗಳಾದ ವಿಕರ್ಣನು, ಚಿತ್ರಸೇನನು ಹತರಾಗಿದ್ದಾರೆ.

ಪ್ರವರಾನಾತ್ಮಜಾನಾಂ ತೇ ಸುತಾಂಶ್ಚಾನ್ಯಾನ್ಮಹಾರಥಾನ್ ।
ಯಾನ್ ಯಾಂಶ್ಚ ದದೃಶೇ ಭೀಮಶ್ಚಕ್ಷುರ್ವಿಷಯಮಾಗತಾನ್ ।
ಪುತ್ರಾಂಸ್ತವ ಮಹಾಬಾಹೋ ತ್ವರಯಾ ತಾನ್ ಜಘಾನ ಹ ॥ ೪೪ ॥

ನಿನ್ನ ಪುತ್ರರಲ್ಲಿ ಶ್ರೇಷ್ಠರಾದ ಮಹಾರಥರಾದ ಯಾರು ಯಾರು ಭೀಮನ ದೃಷ್ಟಿಯಲ್ಲಿ ಸಿಲುಕಿದರೋ ಎಲೈ ಮಹಾಬಾಹುವೇ ಭೀಮಸೇನನು ಅವರನ್ನು ಶೀಘ್ರವಾಗಿ ಕೊಂದನು.

ತತ್ತತೇ ಹ್ಯಹಮದ್ರಾಕ್ಷಂ ದಹ್ಯಮಾನಾಂ ವರೂಥಿನೀಮ್ ।
ಸಹಸ್ರಶಃ ಶರೈರ್ಮುಕ್ತೈಃ ಪಾಂಡವೇನ ವೃಷೇಣ ಚ ॥ ೪೫ ॥

ನಿನ್ನ ನಿಮಿತ್ತದಿಂದಾಗಿ ನಾನು ಭೀಮಸೇನನಿಂದ ಮತ್ತು ಕರ್ಣನಿಂದ ಪ್ರಯೋಗಿಸಲ್ಪಟ್ಟ ಸಹಸ್ರಾರು ಬಾಣಗಳಿಂದ ಕುರು-ಪಾಂಡವಸೇನೆಗಳು ದಹಿಸುವುದನ್ನು ನೋಡಿದೆನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಾವಿಂಶತ್ಯಧಿಕಶತತಮೋಧ್ಯಾಯಃ ॥

॥ಶ್ರೀ ಜಯದ್ರಥವಧಪರ್ವಣಿ ಷಟ್ತ್ರಾವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ಮೂರನೆಯ ಅಧ್ಯಾಯ

ಭೀಮ ಮತ್ತು ಕರ್ಣರ ಯುದ್ಧ.

ಧೃತರಾಷ್ಟ್ರಃ

ಮಹಾನಪನಯಃ ಸೂತ ಮಮೈವಾತ್ರ ವಿಶೇಷತಃ ।
ಸ ಇದಾನೀಮನುಪ್ರಾಪ್ತೋ ಮನ್ಯೇ ಸಂಜಯ ಶೋಚತಃ ॥ ೧ ॥

ಧೃತರಾಷ್ಟ್ರ- ಎಲೈ ಸಂಜಯನೇ, ಇಲ್ಲಿನನ್ನ ದೊಡ್ಡ ಅಪಚಾರವೇ ಈ ಅನರ್ಥಕ್ಕೆ ಕಾರಣವಾಗಿದೆ. ಎಲೈ ಸೂತನೇ, ನಾನು ಶೋಕಪಡುತ್ತಿರುವಾಗ ಅದರ ಫಲವು ಈಗ ಪ್ರಾಪ್ತವಾಗಿದೆ ಎಂದು ತಿಳಿಯುತ್ತೇನೆ.

ಯದ್ಗತಂ ತದ್ಗತಮಿತಿ ಮಮಾಸೀನ್ಮನಸಿ ಸ್ಥಿತಮ್ ।
ಇದಾನೀಮತ್ರ ಕಿಂ ಕಾರ್ಯಂ ಪ್ರಕರಿಷ್ಯಾಮಿ ಸಂಜಯ ॥ ೨ ॥

ಕಳೆದುದು ಕಳೆದು ಹೋಯಿತು ಎಂದು ನನ್ನ ಮನಸ್ಸಿನ ಅಭಿಪ್ರಾಯವಾಗಿದ್ದಿತು. ಎಲೈ ಸಂಜಯನೇ, ಈಗ ಏನು ಮಾಡಬೇಕೆಂದು ಹೇಳು, ಅದನ್ನು ಮಾಡುವೆನು.

ಯಥಾ ತ್ವೇಷ ಕ್ಷಯೋ ವೃತ್ತೋ ಮಮಾಪನಯಸಂಭವಃ ।
ವೀರಾಣಾಂ ತನ್ಮಮಾಚಕ್ಷ್ವ ಸ್ಥಿರೀಭೂತೋಽಸ್ಮಿ ಸಂಜಯ ॥ ೩ ॥

ಸಂಜಯನೇ, ನನ್ನ ಅಪಚಾರದಿಂದ ವೀರರ ಯಾವ ಈ ಘೋರವಾದ ವಿನಾಶವು ಸಂಭವಿಸಿತೋ ಅದನ್ನು ನನಗೆ ಹೇಳು. ನಾನು ದೃಢವಾಗಿದ್ದೇನೆ.

ಸಂಜಯಃ

ಕರ್ಣಭೀಮೌ ಮಹಾರಾಜ ಪರಾಕ್ರಾಂತೌ ಮಹಾಹವೇ ।
ಬಾಣವರ್ಷಾಣ್ಯವರ್ಷೇತಾಂ ವೃಷ್ಟಿಮಂತಾವಿವಾಂಬುದೌ ॥ ೪ ॥

ಸಂಜಯ- ಮಹಾರಾಜನೇ, ಯುದ್ಧದಲ್ಲಿ ಉದ್ಯುಕ್ತರಾದ ಕರ್ಣ-ಭೀಮರು ಮಳೆಯ ನೀರನ್ನು ಹೊಂದಿದ ಮೋಡಗಳಂತೆ ಪರಸ್ಪರವಾಗಿ ಬಾಣದ ಮಳೆಗಳನ್ನು ಸುರಿಸಿದರು.

ಭೀಮನಾಮಾಂಕಿತಾ ಬಾಣಾಃ ಸ್ವರ್ಣಪುಂಖಾಃ ಶಿಲಾಶಿತಾಃ ।
ವಿವಿಶುಃ ಕರ್ಣಮಾಸಾದ್ಯ ಭಿಂದಂತ ಇವ ಜೀವಿತಮ್ ॥ ೫ ॥

ಭೀಮನ ಹೆಸರನ್ನು ಹೊಂದಿದ ಸ್ವರ್ಣಪುಂಖವುಳ್ಳ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳು ಕರ್ಣನನ್ನು ಸಮೀಪಿಸಿ, ಅವನ ಪ್ರಾಣವನ್ನು ಭೇದಿಸುವಂತೆ ಅವನ ಶರೀರದಲ್ಲಿ ಇಳಿದವು.

ತಥೈವ ಕರ್ಣನಿರ್ಮುಕ್ತೈಃ ಸವಿಷೈರಿವ ಪನ್ನಗೈಃ ।
ಆಕೀರ್ಯತ ರಣೇ ಭೀಮಃ ಶತಶೋಽಥ ಸಹಸ್ರಶಃ ॥ ೬ ॥

ಹಾಗೆಯೇ ಕರ್ಣನು ಪ್ರಯೋಗಿಸಿದ ವಿಷ ಸರ್ಪಗಳಂತಿದ್ದ ನೂರಾರು ಸಾವಿರಾರು ಬಾಣಗಳಿಂದ ರಣರಂಗದಲ್ಲಿ ಭೀಮನ ಶರೀರವೂ ತುಂಬಿಹೋಯಿತು.

ತಯೋಃ ಶರೈರ್ಮಹಾರಾಜ ಸಂಪತದ್ಭಿಃ ಸಮಂತತಃ ।
ಬಭೂವ ತವ ಸೈನ್ಯಾನಾಂ ಸಂಕ್ಷೋಭಃ ಸಾಗರೋಪಮಃ ॥ ೭ ॥

ಎಲೈ ಮಹಾರಾಜನೇ, ಅವರು ಪ್ರಯೋಗಿಸಿದ ಬಾಣಗಳು ಎಲ್ಲಕಡೆಗಳಲ್ಲಿಯೂ ಹಾರುತ್ತಿರಲು ನಿನ್ನ ಸೈನ್ಯಕ್ಕೆ ಸಮುದ್ರದಂತಹ ಕ್ಷೋಭೆ ಉಂಟಾಯಿತು.

ಭೀಮಚಾಪಚ್ಯುತೈರ್ಬಾಣೈಸ್ತವ ಸೈನ್ಯಮರಿಂದಮ ।
ಅವಧ್ಯತ ಚಮೂಮಧ್ಯೇ ಘೋರೈರಾಶೀವಿಷೋಪಮೈಃ ॥ ೮ ॥

ಎಲೈ ಅರಿಂದಮನೇ, ಭೀಮನ ಧನುಸ್ಸಿನಿಂದ ಹೊರಹೊಮ್ಮಿದ ವಿಷ ಸರ್ಪವನ್ನು ಹೋಲುವ ಬಾಣಗಳಿಂದ ರಣರಂಗದಲ್ಲಿ ನಿನ್ನ ಸೈನ್ಯವು ವಧಿಸಲ್ಪಟ್ಟಿತು.

ವಾರಣೈಃ ಪತಿತೈ ರಾಜನ್ ವಾಜಿಭಿಶ್ಚ ನರೈಃ ಸಹ ।
ಅದೃಶ್ಯತ ಮಹೀ ಕೀರ್ಣಾ ವಾತನುನ್ನೈರ್ದ್ರುಮೈರಿವ ॥ ೯ ॥

ರಾಜನೇ, ಭೂಮಿಯ ಮೇಲೆ ಬಿದ್ದ ಗಜಗಳಿಂದಲೂ, ಅಶ್ವಗಳಿಂದಲೂ ಮತ್ತು ಯೋಧರಿಂದಲೂ ತುಂಬಿ ಹೋದ ಭೂಮಿಯು ವಾಯುವಿನ ಹೊಡೆತಕ್ಕೆ ಸಿಕ್ಕಿ ಭಗ್ನವಾದ ಮರಗಳಿಂದ ಕೂಡಿರುವಂತೆ ತೋರುತ್ತಿದ್ದಿತು.

ತೇ ವಧ್ಯಮಾನಾಃ ಸಮರೇ ಭೀಮಚಾಪಚ್ಯುತೈಃ ಶರೈಃ ।
ಪ್ರಾದ್ರವಂಸ್ತಾವಕಾ ಯೋಧಾಃ ಕಿಮೇತದಿತಿ ಚಾಬ್ರುವನ್ ॥ ೧೦ ॥

ಭೀಮನ ಧನುಸ್ಸಿನಿಂದ ಹೊರಟ ಬಾಣಗಳಿಂದ ಯುದ್ಧದಲ್ಲಿ ಪೀಡಿತರಾದ ನಿನ್ನ ಯೋಧರು ಇದೇನು ಎಂದು ಹೇಳುತ್ತಾ ಓಡಿಹೋದರು.

ತತೋ ವ್ಯದಸ್ತಂ ತತ್ ಸೈನ್ಯಂ ಸಿಂಧುಸೌವೀರಕೌರವಮ್ ।
ಪ್ರೋತ್ಸಾರಿತಂ ಮಹಾವೇಗೈಃ ಕರ್ಣಪಾಂಡವಯೋಃ ಶರೈಃ ॥ ೧೧ ॥

ಆಗ ಕರ್ಣ-ಪಾಂಡವರು ಪ್ರಯೋಗಿಸಿದ ಮಹಾವೇಗವುಳ್ಳ ಬಾಣಗಳಿಂದ ಸಿಂಧು-ಸೌವೀರ-ಕೌರವ ಸೈನ್ಯಗಳು ರಣರಂಗದಿಂದ ಹೊರದೂಡಲ್ಪಟ್ಟವು.

ತೇ ಶರಾತುರಭೂಯಿಷ್ಠಾ ಹತಾಶ್ವನರವಾಹನಾಃ ।
ಉತ್ಸೃಜ್ಯ ಕರ್ಣಂ ಭೀಮಂ ಚ ಪ್ರಾದ್ರವನ್ ಸರ್ವತೋದಿಶಮ್ ॥೧೨॥

ಬಾಣದ ಪ್ರಹಾರಕ್ಕೆ ಸಿಲುಕಿದ ಅಶ್ವ-ನರ-ವಾಹನಗಳು ಕರ್ಣನನ್ನೂ, ಭೀಮನನ್ನೂ ತ್ಯಜಿಸಿ ಎಲ್ಲ ದಿಕ್ಕುಗಳಲ್ಲಿಯೂ ಓಡಿಹೋದವು.

ನೂನಂ ಪಾರ್ಥಾರ್ಥಮೇವಾಸ್ಮಾನ್ ಮೋಹಯಂತಿ ದಿವೌಕಸಃ ।
ಯತ್ ಕರ್ಣಭೀಮಪ್ರಭವೈರ್ವಧ್ಯತೇ ನೋ ಬಲಂ ಶರೈಃ ॥ ೧೩ ॥

ಏವಂ ಬ್ರುವಂತೋ ಯೋಧಾಸ್ತೇ ತಾವಕಾ ಭಯಪೀಡಿತಾಃ ।
ಶರಪಾತಂ ಸಮುತ್ಸೃಜ್ಯ ಸ್ಥಿತಾ ಯುದ್ಧದಿದೃಕ್ಷವಃ ॥ ೧೪ ॥

ಖಂಡಿತವಾಗಿ ಅರ್ಜುನನ ಸಲುವಾಗಿ ದೇವತೆಗಳು ನಮ್ಮನ್ನು ಮರಳುಗೊಳಿಸುತ್ತಿದ್ದಾರೆ. ಆದ್ದರಿಂದ ನಮ್ಮ ಸೈನ್ಯಗಳು ಕರ್ಣ-ಭೀಮರು ಪ್ರಯೋಗಿಸಿದ ಬಾಣಗಳಿಂದ ವಧಿಸಲ್ಪಡುತ್ತಿವೆ ಎಂದು ಹೇಳುತ್ತಾ ಭಯ ಪೀಡಿತರಾದ ನಿನ್ನ ಯೋಧರು ಬಾಣದ ಹೊಡೆತವನ್ನು ತಪ್ಪಿಸಿಕೊಂಡು ಯುದ್ಧವನ್ನು ನೋಡಲು ಬಯಸಿ ನಿಂತರು.

ತತಃ ಪ್ರಾವರ್ತತ ನದೀ ಘೋರರೂಪಾ ಮಹಾಹವೇ ।
ಬಭೂವ ಚ ವಿಶೇಷೇಣ ಭೀರೂಣಾಂ ಭಯವರ್ಧಿನೀ ॥ ೧೫ ॥

ಆನಂತರ ಆ ದೊಡ್ಡ ರಣರಂಗದಲ್ಲಿ ಭೀರುಗಳಿಗೆ ಭಯವನ್ನು ಹೆಚ್ಚಿಸುವ ಘೋರರೂಪವಾದ ನದಿಯು ವಿಶೇಷವಾಗಿ ಹರಿಯಿತು.

ವಾರಣಾಶ್ವಮನುಷ್ಯಾಣಾಂ ರುಧಿರೌಘಸಮುದ್ಭವಾ ।
ಸಂವೃತಾ ಗತಸತ್ತ್ವೈಶ್ಚ ಮನುಷ್ಯಗಜವಾಜಿಭಃ ॥ ೧೬ ॥

ಸಾನುಕರ್ಷಪತಾಕೈಶ್ಚ ದ್ವಿಪಾಶ್ವರಥಭೂಷಣೈಃ ।
ಸ್ಯಂದನೈರಪವಿದ್ಧೈಶ್ಚ ಭಗ್ನಚಕ್ರಾಕ್ಷಕೂಬರೈಃ ॥ ೧೭ ॥

ಜಾತರೂಪಪರಿಷ್ಕಾರೈರ್ಧನುರ್ಭಿಃ ಸುಮಹಾಧನೈಃ ।
ಸುವರ್ಣಪುಂಖೈರಿಷುಭಿರ್ನಾರಾಚೈಶ್ಚ ಸಹಸ್ರಶಃ ॥ ೧೮ ॥

ಕರ್ಣಪಾಂಡವನಿರ್ಮುಕ್ತೈರ್ನಿರ್ಮುಕ್ತೈರಿವ ಪನ್ನಗೈಃ ।
ಪ್ರಾಸತೋಮರಸಂಘಾತೈಃ ಖಡ್ಗೈಶ್ಚ ಸಪರಶ್ವಧೈಃ ॥ ೧೯ ॥

ಸುವರ್ಣವಿಕೃತೈಶ್ಚಾಪಿ ಗದಾಮುಸಲಪಟ್ಟಿಶೈಃ ।
ವಜ್ರೈಶ್ಚ ವಿವಿಧಾಕಾರೈಃ ಶಕ್ತಿಭಿಃ ಪರಿಘೈರಪಿ ।
ಶತಘ್ನೀಭಿಶ್ಚ ಚಿತ್ರಾಭಿರ್ಬಭೌ ಭಾರತ ಮೇದಿನೀ ॥ ೨೦ ॥

ಗಜಾಶ್ವ-ಮನುಷ್ಯರ ರಕ್ತಸಮೂಹದಿಂದ ಉಂಟಾದ, ಮೃತರಾದ ಮನುಷ್ಯ-ಗಜ, ವಾಜಿಗಳಿಂದ ತುಂಬಿದ, ಅನುಕರ್ಷ ಪತಾಕೆಗಳಿಂದಲೂ, ಗಜಾಶ್ವ- ರಥ ಭೂಷಣಗಳಿಂದಲೂ ತುಂಬಿದ ಚಕ್ರ-ಅಕ್ಷ-ಕೂಬರಗಳು ಭಗ್ನವಾಗಿ ಪರಿತ್ಯಜಿಸಿದ ರಥಗಳನ್ನು ಹೊಂದಿದ, ಸುವರ್ಣಾಲಂಕೃತವಾದ ಬೆಲೆಬಾಳುವ ಧನುಸ್ಸುಗಳಿಂದ ಕೂಡಿದ, ಸುವರ್ಣ ಪುಂಖಗಳನ್ನು ಹೊಂದಿದ ಸಹಸ್ರಾರು ಬಾಣಗಳಿಂದಲೂ ಮತ್ತು ನಾರಾಚಗಳಿಂದಲೂ ತುಂಬಿದ, ಕರ್ಣ-ಭೀಮರು ಪ್ರಯೋಗಿಸಿದ ಸರ್ಪಗಳಂತಿರುವ ಪ್ರಾಸ-ತೋಮರ ಸಮೂಹಗಳಿಂದಲೂ ಪರಶ್ವಧ ಸಹಿತವಾದ ಖಡ್ಗಗಳಿಂದಲೂ ತುಂಬಿದ, ಸುವರ್ಣಾಲಂಕೃತವಾದ ಗದಾ-ಮುಸಲ-ಪಟ್ಟಿಶಗಳಿಂದಲೂ, ವಿವಿಧಾಕಾರದ ವಜ್ರಗಳಿಂದಲೂ, ಶಕ್ತಿಗಳಿಂದಲೂ ಪರಿಘಗಳಿಂದಲೂ ವಿಚಿತ್ರವಾದ ಶತಘ್ನಿಗಳಿಂದಲೂ ತುಂಬಿದ, ಆ ಭೂಮಿಯು ಎಲೈ ಭಾರತನೇ, ಶೋಭಿಸಿತು.

ಕನಕಾಂಗದಕೇಯೂರೈಃ ಕುಂಡಲೈರ್ಮಣಿಭಿಃ ಶುಭೈಃ ।
ತನುತ್ರೈಃ ಸತಳತ್ರೈಶ್ಚ ಹಾರೈರ್ನಿಷ್ಕೈಶ್ಚ ಭಾರತ ॥ ೨೧ ॥

ವಸ್ತ್ರೈಶ್ಚತ್ರೈಶ್ಚ ವಿಧ್ವಸ್ತೈಶ್ಚಾಮರವ್ಯಜನೈರಪಿ ।
ಗಜಾಶ್ವಮನುಜೈರ್ಭನ್ನೈಃ ಶಸ್ತ್ರೈಃ ಸ್ಯಂದನಭೂಷಣೈಃ ॥ ೨೨ ॥

ತೈಸ್ತೈಶ್ಚ ವಿವಿಧೈರ್ಭಾವೈಸ್ತತ್ರ ತತ್ರ ವಸುಂಧರಾ ।
ಪತಿತೈರಪವಿದ್ಧೈಶ್ಚ ಸಂಬಭೌ ದ್ಯೌರಿವ ಗ್ರಹೈಃ ॥ ೨೩ ॥

ಕೆಳಗೆ ಬಿದ್ದ ಮತ್ತು ಎಸೆದ ಸುವರ್ಣಾಂಗದ ಕೇಯೂರಗಳಿಂದಲೂ, ಕುಂಡಲಗಳಿಂದಲೂ, ಶುಭವಾದ ಮಣಿಗಳಿಂದಲೂ, ಶರೀರ ಕವಚ ಮತ್ತು ಹಸ್ತ ಕವಚಗಳಿಂದಲೂ, ಹಾರ-ನಿಷ್ಕಗಳಿಂದಲೂ, ವಸ್ತ್ರಗಳಿಂದಲೂ, ಛತ್ರಗಳಿಂದಲೂ, ಭಗ್ನವಾಗಿ ಎಸೆದ ಚಾಮರಗಳಿಂದಲೂ, ಭಗ್ನಗೊಂಡ ಗಜಾಶ್ವ-ಮನುಷ್ಯರಿಂದಲೂ,

ಶಸ್ತ್ರಗಳಿಂದಲೂ, ರಥದ ಆಭರಣಗಳಿಂದಲೂ, ಆಲ್ಲಲ್ಲಿ ಹರಡಲ್ಪಟ್ಟ ಭೂಮಿಯು ಎಲೈ ಭಾರತನೇ, ಗ್ರಹಗಳಿಂದ ಕೂಡಿದ ಆಕಾಶದಂತೆ ಶೋಭಿಸಿತು.

ಅಚಿಂತ್ಯಮದ್ಭುತಂ ಚೈವ ತಯೋಃ ಕರ್ಮಾತಿಮಾನುಷಮ್ ।
ದೃಷ್ಟ್ವಾ ಚಾರಣಸಿದ್ಧಾನಾಂ ವಿಸ್ಮಯಃ ಸಮಪದ್ಯತ ॥ ೨೪ ॥

ಅಚಿಂತ್ಯವೂ ಮತ್ತು ಅದ್ಭುತವೂ ಆದ ಅವರಿಬ್ಬರ ಅತಿಮಾನುಷ ಕರ್ಮವನ್ನು ನೋಡಿ ಚಾರಣರಿಗೆ ಮತ್ತು ಸಿದ್ಧರಿಗೆ ವಿಸ್ಮಯವುಂಟಾಯಿತು.

ಆಗ್ನೇರ್ವಾಯುಸಹಾಯಸ್ಯ ಗತಿಃ ಕಕ್ಷ ಇವಾಹವೇ ।
ಆಸೀದ್ ಭೀಮಸಹಾಯಸ್ಯ ರೌದ್ರಮಾಧಿರಥೇರ್ಗತಮ್ ॥ ೨೫ ॥

ವಾಯುಸಹಾಯವುಳ್ಳ ಅಗ್ನಿಗೆ ಹುಲ್ಲುಗಾವಲಿನಲ್ಲಿ ಇರುವ ಗತಿಯಂತೆ ಯುದ್ಧದಲ್ಲಿ ಭೀಮನ ಸಹಾಯವುಳ್ಳ ಕರ್ಣನಿಗೆ ಘೋರವಾದ ಗತಿ ಇದ್ದಿತು.

ನಿಪಾತಿತಧ್ವಜರಥಂ ಹತವಾಜಿ ನರದ್ವಿಪಮ್ ।
ಗದಾಭ್ಯಾಂ ಸಂಪ್ರಯುಕ್ತಾಭ್ಯಾಮಾಸೀನ್ನಡವನಂ ಯಥಾ ॥ ೨೬ ॥

ಭೂಮಿಯ ಮೇಲೆ ಬಿದ್ದ ಧ್ವಜ-ರಥಗಳಿಂದಲೂ, ಮೃತವಾದ ಗಜ-ಅಶ್ವ ಯೋಧರಿಂದಲೂ, ಭೂಮಿಯು ಎರಡು ಗಜಗಳಿಂದ ಕಲಕಲ್ಪಟ್ಟ ಕಮಲ ಸರೋವರದಂತೆ ಇದ್ದಿತು.

ತಥಾಭೂತಂ ಮಹತ್ ಸೈನ್ಯಮಾಸೀದ್ ಭಾರತ ಸಂಯುಗೇ ।
ವಿಮರ್ದಃ ಕರ್ಣಭೀಮಾಭ್ಯಾಮಾಸೀಚ್ಚ ಪರಮೋ ರಣೇ ॥ ೨೭ ॥

ಎಲೈ ಭಾರತನೇ, ಆ ದೊಡ್ಡ ಸೈನ್ಯವು ಯುದ್ಧದಲ್ಲಿ ಆ ರೀತಿಯಲ್ಲಿ ಇದ್ದಿತು. ಪುನಃ ಕರ್ಣ ಮತ್ತು ಭೀಮರಿಗೆ ರಣರಂಗದಲ್ಲಿ ಘೋರವಾದ ಸಂಘರ್ಷವು ಉಂಟಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಯೋವಿಂಶತ್ಯಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಸಪ್ತಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ನಾಲ್ಕನೆಯ ಅಧ್ಯಾಯ

ಭೀಮ-ಕರ್ಣರ ಯುದ್ಧ.

ಸಂಜಯಃ

ತತಃ ಕರ್ಣೋ ಮಹಾರಾಜ ಭೀಮಂ ವಿದ್ವಾ ತ್ರಿಭಿಃ ಶರೈಃ ।
ಮುಮೋಚ ಶರವರ್ಷಾಣಿ ಚಿತ್ರಾಣಿ ಚ ಬಹೂನಿ ಚ ॥ ೧ ॥

ಸಂಜಯ– ಎಲೈ ಮಹಾರಾಜನೇ, ಅನಂತರ ಕರ್ಣನು ಮೂರು ಬಾಣಗಳಿಂದ ಭೀಮನನ್ನು ಹೊಡೆದು, ಅವನ ಮೇಲೆ ವಿಚಿತ್ರವಾದ ಬಾಣಗಳ ಮಳೆಯನ್ನು ಸುರಿಸಿದನು.

ವಧ್ಯಮಾನೋ ಮಹಾರಾಜ ಸೂತಪುತ್ರೇಣ ಪಾಂಡವಃ ।
ನ ವಿವ್ಯಥೇ ಭೀಮಸೇನೋ ಭದ್ಯಮಾನ ಇವಾಚಲಃ ॥ ೨ ॥

ಎಲೈ ಮಹಾರಾಜನೇ, ಸೂತಪುತ್ರನಾದ ಕರ್ಣನಿಂದ ಹೊಡೆಯಲ್ಪಡುತ್ತಿದ್ದ ಪಾಂಡುಪುತ್ರನಾದ ಭೀಮಸೇನನು ಪರ್ವತದಂತೆ ಅಚಲನಾಗಿ ವ್ಯಥೆಯನ್ನು ಹೊಂದಲಿಲ್ಲ.

ಸ ಕರ್ಣಂ ಕರ್ಣಿನಾ ಕರ್ಣೇ ಪೀತೇನ ನಿಶಿತೇನ ಚ ।
ವಿವ್ಯಾಧ ಯುಧಿ ರಾಜೇಂದ್ರ ಭೀಮಸೇನಃ ಪತತ್ರಿಣಾ ॥ ೩ ॥

ಎಲೈ ರಾಜೇಂದ್ರನೇ, ಭೀಮಸೇನನು ನೀರು ಕುಡಿಸಿ ಹದಮಾಡಿದ ಬಾಣಗಳಿಂದ ಕರ್ಣನನ್ನು ಯುದ್ಧದಲ್ಲಿ ಅವನ ಕಿವಿಯಲ್ಲಿ ಹೊಡೆದನು.

ಸ ಕುಂಡಲಂ ಮಹತ್ಕರ್ಣಾತ್ಕರ್ಣಸ್ಯಾಪಾತಯದ್ ಭುವಿ ।
ತಪನೀಯಂ ಮಹಾರಾಜ ದೀಪ್ತಂ ಜ್ಯೋತಿರಿವಾಂಬರಾತ್ ॥ ೪ ॥

ಎಲೈ ಮಹಾರಾಜನೇ, ಆ ಬಾಣವು ಕರ್ಣನ ಕಿವಿಯಲ್ಲಿದ್ದ ಶ್ರೇಷ್ಠವಾದ ಸುವರ್ಣಮಯವಾದ ಕುಂಡಲವನ್ನು ಆಕಾಶದಿಂದ ಭೂಮಿಗೆ ಬೀಳುವ ಜ್ಯೋತಿಯಂತೆ ಕೆಡವಿತು.

ಅಥಾಪರೇಣ ಭಲ್ಲೇನ ಸೂತಪುತ್ರಂ ಸ್ತನಾಂತರೇ ।
ಆಜಘಾನ ಭೃಶಂ ಭೀಮಃ ಸ್ಮಯನ್ನಿವ ಮಹಾಬಲಃ ॥ ೫ ॥

ಆನಂತರ ಮಹಾಬಲನಾದ ಭೀಮನು ನಗುತ್ತಾ ಸೂತಪುತ್ರನನ್ನು ಭಲ್ಲದಿಂದ ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ಪುನರಸ್ಯ ತ್ವರನ್ ಭೀಮೋ ನಾರಾಚಾನ್ ದಶ ಭಾರತ ।
ರಣೇ ಪ್ರೈಷೀನ್ಮಹಾವೇಗಾನ್ ಯಮದಂಡೋಪಮಾಂಸ್ತಥಾ ॥ ೬ ॥

ಎಲೈ ಭಾರತನೇ, ಪುನಃ ಭೀಮನು ತ್ವರೆ ಮಾಡುತ್ತಾ, ಯಮದಂಡದಂತಿದ್ದ ಮಹಾವೇಗವುಳ್ಳ ಹತ್ತು ನಾರಾಚಗಳನ್ನು ಅವನ ಮೇಲೆ ಪ್ರಯೋಗಿಸಿದನು.

ತೇ ಲಲಾಟಂ ಸಮಾಸಾದ್ಯ ಸೂತಪುತ್ರಸ್ಯ ಮಾರಿಷ ।
ವಿವಿಶುಶ್ಚೋದಿತಾಸ್ತೇನ ವಲ್ಮೀಕಮಿವ ಪನ್ನಗಾಃ ॥ ೭ ॥

ಎಲೈ ಪೂಜ್ಯನೇ, ಭೀಮಸೇನನಿಂದ ಪ್ರಯೋಗಿಸಲ್ಪಟ್ಟ ಆ ನಾರಾಚಗಳು ಕರ್ಣನ ಲಲಾಟವನ್ನು ಸಮೀಪಿಸಿ ಸರ್ಪಗಳು ಹುತ್ತದ ಒಳಗೆ ಇಳಿದಂತೆ ಒಳಗೆ ಇಳಿದವು.

ಲಲಾಟಸ್ಥೈಸ್ತು ತೈರ್ಬಾಣೈಃ ಸೂತಪುತ್ರೋ ವ್ಯರೋಚತ ।
ನೀಲೋತ್ಪಲಮಯೀಂ ಮಾಲಾಂ ಧಾರಯನ್ ಸ ಪುರಾ ಯಥಾ ॥೮॥

ಲಲಾಟದಲ್ಲಿ ನೆಟ್ಟ ಆ ನಾರಾಚಗಳ ಪಂಕ್ತಿಯಿಂದ ಸೂತಪುತ್ರನಾದ ಕರ್ಣನು ಶಿರಸ್ಸಿನಲ್ಲಿ ನೀಲೋತ್ಪಲಪುಷ್ಪದ ಮಾಲೆಯನ್ನು ಹಿಂದಿನಂತೆ ಧರಿಸಿದವನಂತೆ ಕಂಡುಬಂದನು.

ತತಃ ಕ್ರುದ್ಧೋ ರಣೇ ಕರ್ಣಃ ಪೀಡಿತೋ ದೃಢಧನ್ವನಾ ।
ವೇಗಂ ಚಕ್ರೇ ಮಹಾವೇಗೋ ಭೀಮಸೇನವಧಂ ಪ್ರತಿ ॥ ೯ ॥

ದೃಢವಾದ ಧನುಸ್ಸುಳ್ಳ ಭೀಮಸೇನನಿಂದ ಹೀಗೆ ಪೀಡಿತನಾದ ಮತ್ತು ಅದರಿಂದ ಕ್ರುದ್ಧನಾದ, ಸ್ವತಃ ಮಹಾವೇಗಶಾಲಿಯಾದ ಕರ್ಣನು ಭೀಮಸೇನನ ವಧೆಯನ್ನು ಕುರಿತು ಇನ್ನೂ ಹೆಚ್ಚಿನ ವೇಗವನ್ನು ಆಶ್ರಯಿಸಿದನು.

ತಸ್ಮೈ ಕರ್ಣಃ ಶತಂ ರಾಜನ್ನಿಷೂಣಾಂ ಗಾರ್ಧ್ರವಾಸಸಾಮ್ ।
ಅಮರ್ಷೀ ಬಲವಾನ್ ಕ್ರುದ್ಧಃ ಪ್ರೇಷಯಾಮಾಸ ಭಾರತ ॥ ೧೦ ॥

ಎಲೈ ಭಾರತನೇ, ಕೋಪಗೊಂಡವನೂ, ಬಲಿಷ್ಠನೂ ಆದ ಕರ್ಣನು ಗೃಧ್ರಪಕ್ಷಿಯ ಗರಿಯನ್ನು ಹೊಂದಿದ್ದ ನೂರು ಬಾಣಗಳನ್ನು ಭೀಮನ ಮೇಲೆ ಪ್ರಯೋಗಿಸಿದನು.

ತತಃ ಪ್ರಾಸೃಜದುಗ್ರಾಣಿ ಶರವರ್ಷಾಣಿ ಪಾಂಡವಃ ।
ಸಮರೇ ತಮನಾದೃತ್ಯ ನಾಸ್ಯ ವೀರ್ಯಮಚಿಂತಯತ್ ॥ ೧೧ ॥

ಭೀಮನು ಕರ್ಣನನ್ನು ಗಣನೆಗೆ ತಂದುಕೊಳ್ಳದೆ, ಅವನ ಪರಾಕ್ರಮವನ್ನೂ ಚಿಂತಿಸದೆ ಅವನ ಮೇಲೆ ಬಾಣಗಳ ಘೋರವಾದ ಮಳೆಯನ್ನು ಸುರಿಸಿದನು.

ತತಃ ಕರ್ಣೋ ಮಹಾರಾಜ ಪಾಂಡವಂ ನಿಶಿತೈಃ ಶರೈಃ ।
ಆಜಘಾನೋರಸಿ ಕ್ರುದ್ಧಃ ಕ್ರುದ್ಧರೂಪಂ ಪರಂತಪಃ ॥ ೧೨ ॥

ಎಲೈ ಮಹಾರಾಜನೇ, ಆಗ ಪರಂತಪನೂ, ಕ್ರೋಧಗೊಂಡವನೂ ಆದ ಕರ್ಣನು ಹಾಗೆ ಕ್ರೋಧಗೊಂಡ ಪಾಂಡವನಾದ ಭೀಮಸೇನನನ್ನು ವಕ್ಷಸ್ಥಲದಲ್ಲಿ ನಿಶಿತವಾದ ಬಾಣಗಳಿಂದ ಹೊಡೆದನು.

ಜೀಮೂತಾವಿವ ಚಾನ್ಯೋನ್ಯಂ ತೌ ವವರ್ಷತುರಾಹವೇ ।
ತಳಶಬ್ದರವೈಶ್ಚೈವ ತ್ರಾಸಯಂತೌ ಪರಸ್ಪರಮ್ ॥ ೧೩ ॥

ತಳಶಬ್ದಗಳಿಂದ ಅವರು ಪರಸ್ಪರವಾಗಿ ಹೆದರಿಸುತ್ತಾ ಎರಡು ಮೋಡಗಳಂತೆ ರಣರಂಗದಲ್ಲಿ ಅವರು ಪರಸ್ಪರವಾಗಿ ಬಾಣಗಳ ಮಳೆಯನ್ನು ಕರೆದರು.

ಶರಜಾಲೈಶ್ಚ ವಿವಿಧೈಶ್ಚಾದಯಾಮಾಸತುರ್ಮೃಧೇ ।
ಅನ್ಯೋನ್ಯಂ ಸಮರೇ ಕ್ರುದ್ಧೌ ಕೃತಪ್ರತಿಕೃತೈಷಿಣೌ ॥ ೧೪ ॥

ಕ್ರುದ್ಧರಾದ ಮತ್ತು ಮಾಡಿದುದಕ್ಕೆ ಪ್ರತಿಕಾರ ಮಾಡುವ ಅವರಿಬ್ಬರೂ ರಣರಂಗದಲ್ಲಿ ವಿವಿಧವಾದ ಬಾಣಸಮೂಹಗಳಿಂದ ಒಬ್ಬರನ್ನೊಬ್ಬರು ಮುಚ್ಚಿದರು.

ತತೋ ಭೀಮೋ ಮಹಾಬಾಹೂ ರಾಧೇಯಸ್ಯ ಮಹಾತ್ಮನಃ ।
ಕ್ಷುರಪ್ರೇಣ ಧನುಶ್ಛಿತ್ತ್ವಾ ಕರ್ಣಂ ವಿವ್ಯಾಧ ಪತ್ರಿಣಾ ॥ ೧೫ ॥

ಆಗ ಮಹಾಬಾಹುವಾದ ಭೀಮನು ಕ್ಷುರಪ್ರದಿಂದ ಮಹಾತ್ಮನಾದ ಕರ್ಣನ ಧನುಸ್ಸನ್ನು ಕತ್ತರಿಸಿ ಬಾಣದಿಂದ ಕರ್ಣನನ್ನು ಹೊಡೆದನು.

ತದಪಾಸ್ಯ ಧನುಶ್ಚಿನ್ನಂ ಸೂತಪುತ್ರೋ ಮಹಾಮನಾಃ ।
ಅನ್ಯತ್ ಕಾರ್ಮುಕಮಾದತ್ತ ವೇಗಘ್ನಂ ಭಾರಸಾಧನಮ್ ॥ ೧೬ ॥

ಧೈರ್ಯಶಾಲಿಯಾದ ಸೂತಪುತ್ರನು ಕತ್ತರಿಸಲ್ಪಟ್ಟ ಆ ಧನುಸ್ಸನ್ನು ಬಿಟ್ಟು, ವೇಗಶಾಲಿಯೂ, ಶತ್ರುಗಳ ಸಮೂಹವನ್ನು ನಾಶಮಾಡುವಂತಹದೂ ಆದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡನು.

ದೃಷ್ಟ್ವಾ ಚ ಕುರುಸೌವೀರಸೈಂಧವಾನಾಂ ಬಲಕ್ಷಯಮ್ ।
ಸವರ್ಮಧ್ವಜಶಸ್ತ್ರೌಘ ಪತಿತೈಃ ಸಂವೃತಾಂ ಮಹೀಮ್ ॥ ೧೭ ॥

ಹೃಷ್ಟಶರನರದೇಹಾಂಶ್ಚ ಗತಾಸೂನ್ ಪ್ರೇಕ್ಷ್ಯ ಸರ್ವತಃ ।
ಸೂತಪುತ್ರಸ್ಯ ಸಂರಂಭಾದ್ ದೀಪ್ತಂ ವಪುರಜಾಯತ ॥ ೧೮ ॥

ಕೌರವ-ಸೌವೀರ-ಸೈಂಧವರ ಸೈನ್ಯಕ್ಷಯವನ್ನು ನೋಡಿ, ಕವಚ-ಧ್ವಜ-ಶಸ್ತ್ರಗಳಿಂದ ಸಹಿತರಾದ ಯೋಧರು ಬಿದ್ದು ಭೂಮಿಯನ್ನು ಮುಚ್ಚಿರುವುದನ್ನು ನೋಡಿ, ಎಲ್ಲ ಕಡೆಗಳಲ್ಲಿಯೂ ಬಿದ್ದಿರುವ ಮೃತರಾದ ಗಜಾಶ್ವ-ಪದಾತಿಗಳ ದೇಹಗಳನ್ನು ನೋಡಿ, ಸೂತಪುತ್ರನ ದೇಹವು ಕೋಪದಿಂದ ಉರಿಯಿತು.

ಸ ವಿಸ್ಫಾರ್ಯ ಮಹಚ್ಚಾಪಂ ಕಾರ್ತಸ್ವರವಿಭೂಷಿತಮ್ ।
ಭೀಮಂ ಪ್ರೇಕ್ಷತ ರಾಧೇಯೋ ರಾಜನ್ ಘೋರೇಣ ಚಕ್ಷುಷಾ ॥ ೧೯ ॥

ಎಲೈ ರಾಜನೇ, ರಾಧೇಯನಾದ ಕರ್ಣನು ಸುವರ್ಣಭೂಷಿತವಾದ ತನ್ನ ದೊಡ್ಡ ಧನುಸ್ಸನ್ನು ಎಳೆದು ಘೋರವಾದ ದೃಷ್ಟಿಯಿಂದ ಭೀಮನನ್ನು ನೋಡಿದನು.

ತತಃ ಕ್ರುದ್ಧಃ ಶರಾನಸ್ಯನ್ ಸೂತಪುತ್ರೋ ವ್ಯರೋಚತ ।
ಮಧ್ಯಂದಿನಗತೋಽರ್ಚಿಷ್ಮಾನ್ ಶರದೀವ ದಿವಾಕರಃ ॥ ೨೦ ॥

ಆಗ ಕೋಪಗೊಂಡು ಬಾಣಗಳನ್ನು ಪ್ರಯೋಗಿಸುತ್ತಿದ್ದ ಸೂತಪುತ್ರನಾದ ಕರ್ಣನು ಶರತ್ಕಾಲದಲ್ಲಿ ಮಧ್ಯಂದಿನ (ಮಧ್ಯಾಹ್ನ) ಕಾಲದಲ್ಲಿನ ಕಿರಣಗಳಿಂದ ಕೂಡಿದ ಸೂರ್ಯನಂತೆ ಶೋಭಿಸಿದನು.

ಮರೀಚಿವಿಕಚಸ್ಯೇವ ರಾಜನ್ ಭಾನುಮತೋ ವಪುಃ ।
ಆಸೀದಾಧಿರಥೇಃಘೋರಂ ವಪುಃ ಶರಶತಾರ್ಚಿಷಃ ॥ ೨೦ ॥

ಎಲೈ ರಾಜನೇ, ಕಿರಣಗಳಿಂದ ತುಂಬಿದ ಸೂರ್ಯನ ದೇಹದಂತೆ ಅಧಿರಥನ ಪುತ್ರನಾದ ಕರ್ಣನ ದೇಹವು ನೂರಾರು ಬಾಣಗಳ ತೇಜಸ್ಸಿನಿಂದ ಕೂಡಿದುದಾಗಿ ಘೋರವಾಗಿದ್ದಿತು.

ಕರಾಭ್ಯಾಮಾದದಾನಸ್ಯ ಸಂದಧಾನಸ್ಯ ಚಾಶುಗಾನ್ ।
ವಿಕರ್ಷತೋ ಮುಂಚತೋ ವಾ ನಾಂತರಂ ದದೃಶೂ ರಣೇ ॥ ೨೨ ॥

ಹಸ್ತದಿಂದ ಬಾಣಗಳನ್ನು ತೆಗೆದುಕೊಳ್ಳುವ, ವೇಗಶಾಲಿಗಳಾದ ಬಾಣಗಳನ್ನು ಹೂಡುವ, ಹೆದೆಯನ್ನು ಎಳೆದು ಬಾಣಗಳನ್ನು ಪ್ರಯೋಗಿಸುವ ಮಧ್ಯದಲ್ಲಿ ಜನರು ಯಾವ ಅಂತರವನ್ನೂ ಕಾಣಲಿಲ್ಲ.

ಅಗ್ನಿಚಕ್ರೋಪಮಂ ಘೋರಂ ಮಂಡಲೀಕೃತಮಾಯುಧಮ್ ।
ಕರ್ಣಸ್ಯಾಸೀನ್ಮಹಾರಾಜ ಸವ್ಯದಕ್ಷಿಣಮಸ್ಯತಃ ॥ ೨೩ ॥

ಎಲೈ ಮಹಾರಾಜನೇ, ಎಡಭಾಗದಿಂದಲೂ ಮತ್ತು ಬಲಭಾಗದಿಂದಲೂ ಬಾಣಗಳನ್ನು ಪ್ರಯೋಗಿಸುವ ಕರ್ಣನ ಮಂಡಲಾಕಾರವಾದ ಧನುಸ್ಸು ಅಗ್ನಿಚಕ್ರದಂತೆ ಘೋರವಾಗಿದ್ದಿತು.

ಸ್ವರ್ಣಪುಂಖಾಃ ಸುನಿಶಿತಾಃ ಕರ್ಣಚಾಪಚ್ಯುತಾಃ ಶರಾಃ ।
ಪ್ರಾಚ್ಛಾದಯನ್ ಮಹಾರಾಜ ದಿಶಃ ಸೂರ್ಯಸ್ಯ ಚ ಪ್ರಭಾಮ್ ॥೨೪॥

ಎಲೈ ಮಹಾರಾಜನೇ, ಕರ್ಣನ ಧನುಸ್ಸಿನಿಂದ ಹೊರಹೊಮ್ಮಿದ, ಸ್ವರ್ಣ ಪುಂಖಗಳನ್ನು ಹೊಂದಿದ ಬಹಳ ತೀಕ್ಷ್ಣವಾದ ಬಾಣಗಳು ದಿಕ್ಕುಗಳನ್ನೂ ಮತ್ತು ಸೂರ್ಯನ ಪ್ರಭೆಯನ್ನೂ ಮುಚ್ಚಿದವು.

ತತಃ ಕನಕಪುಂಖಾನಾಂ ಶರಾಣಾಂ ನತಪರ್ವಣಾಮ್ ।
ಧನುಶ್ಚ್ಯುತಾನಾಂ ವಿಯತಿ ದದೃಶೇ ಬಹುಧಾ ವ್ರಜಃ ॥ ೨೫ ॥

ಆಗ ಬಾಗಿದ ತುದಿಯುಳ್ಳ, ಕನಕಪುಂಖಗಳನ್ನು ಹೊಂದಿದ, ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳ ಸಮೂಹಗಳು ಆಕಾಶದಲ್ಲಿ ಅನೇಕ ರೀತಿಯಲ್ಲಿ ಕಂಡುಬಂದವು.

ಶರಾಸನಾದಾಧಿರಥೇಃ ಪ್ರಭವಂತಃ ಸ್ಮ ಸಾಯಕಾಃ ।
ಶ್ರೇಣೀಕೃತಾ ವ್ಯರಾಜಂತ ರಾಜನ್ ಕ್ರೌಂಚಾ ಇವಾಂಬರೇ ॥ ೨೬ ॥

ಎಲೈ ರಾಜನೇ, ಕರ್ಣನ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳು ಪಂಕ್ತಿ ಪಂಕ್ತಿಗಳಲ್ಲಿ ಆಕಾಶದಲ್ಲಿ ಚಲಿಸುವ ಕ್ರೌಂಚಪಕ್ಷಿಗಳ ಸಮೂಹದಂತೆ ವಿರಾಜಿಸಿದವು.

ಗಾರ್ಧ್ರಪತ್ರಾನ್ ಶಿಲಾಧೌತಾನ್ ಕಾರ್ತಸ್ವರವಿಭೂಷಿತಾನ್ ।
ಮಹಾವೇಗಾನ್ ಪ್ರದೀಪ್ತಾಗ್ರಾನ್ ಮುಮೋಚಾಧಿರಥಿಃ ಶರಾನ್ ॥೨೭॥

ಕರ್ಣನು ಗೃಧ್ರಪತ್ರವನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಸುವರ್ಣ ಭೂಷಿತವಾದ, ಮಹಾವೇಗವುಳ್ಳ, ಜ್ವಲಿಸುವ ತುದಿಯುಳ್ಳ, ಬಾಣಗಳನ್ನು ಪ್ರಯೋಗಿಸಿದನು.

ತೇ ತು ಚಾಪಬಲೋದ್ಧೂತಾಃ ಶಾತಕುಂಭವಿಭೂಷಿತಾಃ ।
ಅಜಸ್ರಮನ್ವರ್ತೀರ್ಯಂತ ಶರಾಃ ಪಾರ್ಥರಥಂ ಪ್ರತಿ ॥ ೨೮ ॥

ಧನುಸ್ಸಿನ ಬಲದಿಂದ ಮುಂದೆ ಸಾಗುವ, ಸ್ವರ್ಣವಿಭೂಷಿತವಾದ ಆ ಬಾಣಗಳು ಸತತವಾಗಿ ಭೀಮನ ರಥದ ಕಡೆಗೆ ಹೋಗುತ್ತಿದ್ದವು.

ತೇ ವ್ಯೋಮ್ನಿ ರತ್ನವಿಕೃತಾ ವ್ಯಕಾಶಂತ ಸಹಸ್ರಶಃ ।
ಶಲಭಾನಾಮಿವ ವ್ರಾತಾಃ ಶರಾಃ ಕರ್ಣಸಮೀರಿತಾಃ ॥ ೨೯ ॥

ಕರ್ಣನಿಂದ ಪ್ರಯೋಗಿಸಲ್ಪಟ್ಟ ರತ್ನಭೂಷಿತವಾದ ಸಹಸ್ರಾರು ಸಂಖ್ಯೆಯ ಬಾಣಗಳು ಆಕಾಶದಲ್ಲಿ ಪತಂಗಗಳ ಸಮೂಹದಂತೆ ವಿರಾಜಿಸಿದವು.

ಚಾಪಾದಾಧಿರಥೇರ್ಮುಕ್ತಾಃ ಪ್ರಪತಂತಃ ಸ್ಮ ಸಾಯಕಾಃ ।
ಏಕೋ ದೀರ್ಘ ಇವ ಪ್ರಾಂಶುಃ ಪ್ರಭವನ್ ದೃಶ್ಯತೇ ಶರಃ ॥ ೩೦ ॥

ಕರ್ಣನ ಧನುಸ್ಸಿನಿಂದ ಹೊರಟು ಒಂದರ ಹಿಂದೆ ಒಂದರಂತೆ ಹೋಗುವ ಬಾಣಗಳು ಒಂದೇ ದೀರ್ಘವಾದ ಬಾಣದಂತೆ ತೋರುತ್ತಿದ್ದವು.

ಪರ್ವತಂ ವಾರಿಧಾರಾಭಿಶ್ಚಾದಯನ್ನಿವ ತೋಯದಃ ।
ಕರ್ಣಃ ಪ್ರಾಚ್ಛಾದಯತ್ ಕ್ರುದ್ಧೋ ಭೀಮಂ ಸಾಯಕವೃಷ್ಟಿಭಿಃ ॥ ೩೧ ॥

ಮೋಡವು ಪರ್ವತವನ್ನು ನೀರಿನ ಧಾರೆಯಿಂದ ಮುಚ್ಚುವಂತೆ ಕೋಪಗೊಂಡ ಕರ್ಣನು ಭೀಮನನ್ನು ಬಾಣದ ಮಳೆಯಿಂದ ಮುಚ್ಚಿದನು.

ತತ್ರ ಭಾರತ ಭೀಮಸ್ಯ ಬಲವೀರ್ಯಪರಾಕ್ರಮಮ್ ।
ವ್ಯವಸಾಯಂ ಚ ಪುತ್ರಾಸ್ತೇ ಪ್ರೈಕ್ಷಂತ ಕುರುಭಿಃ ಸಹ ॥ ೩೨ ॥

ಎಲೈ ಭಾರತನೇ, ರಣರಂಗದಲ್ಲಿ ನಿನ್ನ ಪುತ್ರರು ಉಳಿದ ಕೌರವರ ಜೊತೆಯಲ್ಲಿ ಭೀಮನ ಬಲ-ಸಾಮರ್ಥ್ಯ ಆಗ ಪರಾಕ್ರಮಗಳನ್ನೂ, ಅವನ ದೃಢವಾದ ನಿರ್ಧಾರವನ್ನೂ ನೋಡಿದರು.

ತಾಂ ಸಮುದ್ರಮಿವೋದ್ಧೂತಾಂ ಶರವೃಷ್ಟಿಂ ಸಮುತ್ಥಿತಾಮ್ ।
ಆಚಿಂತಯಿತ್ವಾ ಭೀಮಸ್ತು ಕ್ರುದ್ಧಃ ಕರ್ಣಮುಪಾದ್ರವತ್ ॥ ೩೩ ॥

ಕ್ಷೋಭೆಗೊಂಡ ಸಮುದ್ರದಂತೆ ಕರ್ಣನ ಬಾಣಗಳಿಂದ ಉಂಟಾದ ಆ ಬಾಣದ ಮಳೆಯನ್ನು ಗಣನೆಗೇ ತೆಗೆದುಕೊಳ್ಳದೆ ಭೀಮನು ಕ್ರುದ್ಧನಾಗಿ ಕರ್ಣನ ಕಡೆಗೆ ಧಾವಿಸಿದನು.

ರುಗ್ಮಪೃಷ್ಠಂ ಮಹಚ್ಚಾಪಂ ಭೀಮಸ್ಯಾಸೀದ್ ವಿಶಾಂಪತೇ ।
ಆಕರ್ಷಾನ್ತಂಡಲೀಭೂತಂ ಶಕ್ರಚಾಪಮಿವಾಪರಮ್ ।
ತಸ್ಮಾಚ್ಚರಾಃ ಪ್ರಾದುರಾಸನ್ ಪೂರಯಂತ ಇವಾಂಬರಮ್ ॥ ೩೪ ॥

ಎಲೈ ರಾಜನೇ, ಭೀಮನ ದೊಡ್ಡ ಧನುಸ್ಸು ಸುವರ್ಣಪೃಷ್ಠವನ್ನು ಹೊಂದಿದ್ದಿತು. ಅದನ್ನು ಎಳೆದಾಗ ಮಂಡಲಾಕಾರವಾದ ಆದು ಇನ್ನೊಂದು ಇಂದ್ರನ ಚಾಪದಂತೆ ತೋರುತ್ತಿದ್ದಿತು. ಆ ಧನುಸ್ಸಿನಿಂದ ಹೊರಟ ಬಾಣಗಳು ಆಕಾಶವನ್ನು ತುಂಬುವಂತೆ ತೋರುತ್ತಿದ್ದವು.

ಸುವರ್ಣಪುಂಖೈರ್ಭೀಮೇನ ಸಾಯಕೈರ್ನತಪರ್ವಭಿಃ ।
ಗಗನೇ ರಚಿತಾ ಮಾಲಾ ಕಾಂಚನೀವ ವ್ಯರಾಜತ ॥ ೩೫ ॥

ಭೀಮನು ಪ್ರಯೋಗಿಸಿದ ಸುವರ್ಣಪುಂಖಿವಳ್ಳಿ, ಬಾಗಿದ ತುದಿಯುಳ್ಳ ಬಾಣಗಳು ಆಕಾಶದಲ್ಲಿ ಸುವರ್ಣಮಾಲೆಯಂತೆ ವಿರಾಜಿಸಿದವು.

ತತೋ ವ್ಯೋಮ್ನಿ ವಿಷಕ್ತಾನಿ ಶರಜಾಲಾನಿ ಭಾಗಶಃ ।
ಆಹತಾನಿ ವ್ಯಶೀರ್ಯಂತ ಭೀಮಸೇನಸ್ಯ ಪತ್ರಿಭಃ ॥ ೩೬ ॥

ಆಗ ಕರ್ಣನಿಂದ ಪ್ರಯೋಗಿಸಲ್ಪಟ್ಟು ಆಕಾಶದಲ್ಲಿದ್ದ ಬಾಣಗಳ ಸಮೂಹಗಳು ಭೀಮಸೇನನ ಬಾಣಗಳಿಂದ ಹೊಡೆಯಲ್ಪಟ್ಟು ಭಾಗಶಃ ನಾಶವನ್ನು ಹೊಂದಿದವು.

ಕರ್ಣಸ್ಯ ಶರಜಾಲೌಘೈರ್ಭೀಮಸೇನಸ್ಯ ಚೋಭಯೋಃ ।
ಅಗ್ನಿಸ್ಫುಲಿಂಗಸಂಸ್ಪರ್ಶೈರಂಜೋಗತಿಭಿರಾಹವೇ ।
ತೈಸ್ತೈಃ ಕನಕಪುಂಖಾನಾಂ ದ್ಯೌರಾಸೀತ್ ಸಂವೃತಾ ವ್ರಜೈಃ ॥ ೩೭ ॥

ನೇರವಾಗಿ ಸಾಗುವ ಅಗ್ನಿಕಣಗಳಂತಹ ಉಗ್ರವಾದ ಸ್ಪರ್ಶವನ್ನು ಹೊಂದಿದ, ಕನಕಪುಂಖಿವುಳ್ಳ ಭೀಮಸೇನ ಮತ್ತು ಕರ್ಣನು ಪ್ರಯೋಗಿಸಿದ ಬಾಣಗಳ ಸಮೂಹದಿಂದ ಆಕಾಶವು ತುಂಬಹೋಯಿತು.

ಸ ಭೀಮಂ ಛಾದಯನ್ ಬಾಣೈಃ ಸೂತಪುತ್ರಃ ಪೃಥಗ್ವಿಧೈಃ ।
ಉಪಾರೋಹದನಾದೃತ್ಯ ತಸ್ಯ ವೀರ್ಯಂ ಮಹಾತ್ಮನಃ ॥ ೩೮ ॥

ಸೂತಪುತ್ರನಾದ ಕರ್ಣನು ವಿವಿಧವಾದ ಬಾಣಗಳನ್ನು ಭೀಮನ ಮೇಲೆ ಪ್ರಯೋಗಿಸುತ್ತಾ, ಮಹಾತ್ಮನಾದ ಅವನ ಪರಾಕ್ರಮವನ್ನು ಗಣನೆಗೇ ತಂದುಕೊಳ್ಳದೆ ಅವನ ಸಮೀಪಕ್ಕೆ ಬಂದನು.

ತಯೋರ್ವಿಸೃಜತೋಸ್ತತ್ರ ಶರಜಾಲಾನಿ ಮಾರಿಷ ।
ವಾಯುಭೂತಾನ್ಯದೃಶ್ಯಂತ ಸಂಸಕ್ತಾನೀತರೇತರಮ್ ॥ ೩೯ ॥

ಎಲೈ ಪೂಜ್ಯನೇ, ಅವರು ಪ್ರಯೋಗಿಸಿದ ಬಾಣಗಳು ಪರಸ್ಪರವಾಗಿ ಘಟ್ಟಿಸಿ ವಾಯುವಿನಿಂದ ಪ್ರೇರಿಸಲ್ಪಟ್ಟು ಅತಿವೇಗವುಳ್ಳವುಗಳಾಗಿ ಕಂಡುಬಂದವು.

ತಸ್ಮೈ ಕರ್ಣಃ ಶಿತಾನ್ ಬಾಣಾನ್ ಕರ್ಮಾರಪರಿಮಾರ್ಜಿತಾನ್ ।
ಸುವರ್ಣವಿಕೃತಾನ್ ಕ್ರುದ್ಧಃ ಪ್ರಾಹಿಣೋದ್ ವಧಕಾಂಕ್ಷಯಾ ॥ ೪೦ ॥

ಭೀಮಸೇನನ ಮೇಲೆ ಕರ್ಣನು ನಿಶಿತವಾದ, ಕರ್ಮಾರರಿಂದ ತೊಳಸಲ್ಪಟ್ಟ, ಸುವರ್ಣಭೂಷಿತವಾದ ಬಾಣಗಳನ್ನು ಅವನ ವಧೆಯನ್ನು ಉದ್ದೇಶಿಸಿ ಕ್ರುದ್ಧನಾಗಿ ಪ್ರಯೋಗಿಸಿದನು.

ತಾನಂತರಿಕ್ಷೇ ವಿಶಿಖೈಸ್ತ್ರಿಧೈಕೈಕಮಶಾತಯತ್ ।
ವಿಶೇಷಯನ್ ಸೂತಪುತ್ರಂ ಭೀಮಸ್ತಿಷ್ಠೇತಿ ಚಾಬ್ರವೀತ್ ॥ ೪೧ ॥

ಭೀಮಸೇನನು ಕರ್ಣನಿಗಿಂತಲೂ ಅತಿಶಯವನ್ನು ತೋರಿಸುತ್ತಾ ಅಂತರಿಕ್ಷದಲ್ಲಿ ತನ್ನ ಬಾಣಗಳಿಂದ ಅವುಗಳನ್ನು ಒಂದೊಂದನ್ನೂ ಮೂರುಭಾಗವಾಗಿ ಕತ್ತರಿಸಿ ನಿಲ್ಲು ಎಂದು ಹೇಳಿದನು.

ಪುನಶ್ಚಾಪ್ಯಜದುಗ್ರಾಣಿ ಶರವರ್ಷಾಣಿ ಪಾಂಡವಃ ।
ಅಮರ್ಷೀ ಬಲವಾನ್ ಕ್ರುದ್ಧೋ ದಿಧಕ್ಷನ್ನಿವ ಪಾವಕಃ ॥ ೪೨ ॥

ರೋಷಶೀಲನೂ, ಬಲಿಷ್ಠನೂ ಆದ ಪಾಂಡುಪುತ್ರನಾದ ಭೀಮಸೇನನು ದಹಿಸಲು ಬಯಸಿದ ಅಗ್ನಿಯಂತೆ ಪುನಃ ಘೋರವಾದ ಬಾಣಗಳ ಮಳೆಯನ್ನು ಸೃಷ್ಟಿಸಿದನು.

ತಕಶ್ಚಟಚಟಾಶಬ್ದೋ ಗೋಧಾಘಾತಾದಭೂತ್ ತಯೋಃ ।
ತಲಶಬ್ದಶ್ಚ ಸುಮಹಾನ್ ಸಿಂಹನಾದಶ್ಚ ಭೈರವಃ ।
ರಥನೇಮಿ ನಿನಾದಶ್ಚ ಜ್ಯಾಶಬ್ದಶ್ಚೈವ ದಾರುಣಃ ॥ ೪೩ ॥

ಆಗ ಅವರಿಬ್ಬರೂ ಧರಿಸಿದ ಗೋಧ (ಉದ) ಚರ್ಮದ ಹಸ್ತರಕ್ಷೆಗಳಿಂದ (ಹೆದೆಯ ಹಿಂದೇಟನ್ನು ತಪ್ಪಿಸಲು ಹಸ್ತಕ್ಕೆ ಹಾಕಿಕೊಳ್ಳುವ ರಕ್ಷೆಗಳು- Glouse) ಚಟಚಟ ಶಬ್ದವುಂಟಾಯಿತು. ದೊಡ್ಡ ಹಸ್ತತಳ ಶಬ್ದವೂ, ಭೀಕರವಾದ ಹಿಂಸ್ರನಾದವೂ, ರಥಚಕ್ರಗಳ ಶಬ್ದವೂ ಮತ್ತು ಹೆದೆಯ ಶಬ್ದವೂ ಉಂಟಾದವು.

ಯೋಧಾ ವ್ಯೂಹಾರಮನ್ ಯುದ್ಧಾದ್ ದಿದೃಕ್ಷಂತಃ ಪರಾಕ್ರಮಮ್ ।
ಕರ್ಣಪಾಂಡವಯೋ ರಾಜನ್ ಪರಸ್ಪರವಧೈಷಿಣೋಃ ॥ ೪೪ ॥

ಎಲೈ ರಾಜನೇ, ಪರಸ್ಪರ ವಧೆಯನ್ನು ಬಯಸುವ ಕರ್ಣ-ಪಾಂಡವರ ಪರಾಕ್ರಮವನ್ನು ನೋಡಲು ಬಯಸಿ ಉಳಿದ ಯೋಧರು ಯುದ್ಧವನ್ನು ನಿಲ್ಲಿಸಿದರು.

ದೇವರ್ಷಿಸಿದ್ಧಗಂಧರ್ವಾಃ ಸಾಧಾಸಾಧ್ವಿತ್ಯಪೂಜಯನ್ ।
ಮುಮುಚುಃ ಪುಷ್ಪವರ್ಷಂ ಚ ವಿದ್ಯಾಧರಗಣಾಸ್ತಥಾ ॥ ೪೫ ॥

ದೇವರ್ಷಿ-ಸಿದ್ಧ-ಗಂಧರ್ವರು ಸಾಧು-ಸಾಧು ಎಂದು ಪೂಜಿಸಿದರು. ವಿದ್ಯಾಧರ ಗಣಗಳು ಪುಷ್ಪವೃಷ್ಟಿಯನ್ನು ಮಾಡಿದವು.

ತತೋ ಭೀಮೋ ಮಹಾಬಾಹುಃ ಸಂರಂಭೀ ದೃಢವಿಕ್ರಮಃ ।
ಅಸ್ತ್ರೈರಸ್ತ್ರಾಣಿ ಸಂವಾರ್ಯ ಶರೈರ್ವಿವ್ಯಾಧ ಸೂತಜಮ್ ॥ ೪೬ ॥

ಆಗ ಕ್ರುದ್ಧನೂ, ಮಹಾಬಾಹುವೂ, ದೃಢವಿಕ್ರಮವನ್ನು ಹೊಂದಿದವನೂ ಆದ ಭೀಮನು ತನ್ನ ಅಸ್ತ್ರಗಳಿಂದ ಕರ್ಣನ ಅಸ್ತ್ರಗಳನ್ನು ನಿವಾರಿಸಿ ಬಾಣಗಳಿಂದ ಅವನನ್ನು ಹೊಡೆದನು.

ಕರ್ಣೋಽಪಿ ಭೀಮಸೇನಸ್ಯ ನಿವಾರ್ಯೇಷೂನ್ ಮಹಾಬಲಃ ।
ಪ್ರಾಹಿಣೋನ್ನವ ನಾರಾಚಾನಾಶೀವಿಷಸಮಾನ್ ರಣೇ ॥ ೪೭ ॥

ಮಹಾಬಲನಾದ ಕರ್ಣನೂ ಸಹ ಭೀಮಸೇನನ ಬಾಣಗಳನ್ನು ನಿವಾರಿಸಿ ಸರ್ಪ ಸದೃಶವಾದ ಒಂಬತ್ತು ನಾರಾಚಗಳನ್ನು ರಣರಂಗದಲ್ಲಿ ಭೀಮನ ಮೇಲೆ ಪ್ರಯೋಗಿಸಿದನು.

ತಾವದ್ಭಿರಥ ತಾನ್ ಭೀಮೋ ವ್ಯೋಮ್ನಿ ಚಿಚ್ಛೇದ ಪತ್ರಿಭಿಃ ।
ನಾರಾಚಾನ್ ಸೂತಪುತ್ರಸ್ಯ ತಿಷ್ಠತಿಷ್ಠೇತಿ ಚಾಬ್ರವೀತ್ ॥ ೪೮ ॥

ಭೀಮನು ಅಷ್ಟೇ ಬಾಣಗಳಿಂದ ಕರ್ಣನ ನಾರಾಚಗಳನ್ನು ಆಕಾಶದಲ್ಲಿ ಕತ್ತರಿಸಿ ಅವನನ್ನು ಕುರಿತು ನಿಲ್ಲು, ನಿಲ್ಲು ಎಂದು ಹೇಳಿದನು.

ತತೋ ಭೀಮೋ ಮಹಾಬಾಹುಃ ಶರಂ ಕ್ರುದ್ಧಾಂತಕೋಪಮಮ್ ।
ಮುಮೋಚಾಧಿರಥೇವೀರ್ಯೋ ಯಮದಂಡಮಿವಾಪರಮ್ ॥ ೪೯ ॥

ಅನಂತರ ಮಹಾಬಾಹುವಾದ ಕೋಪಗೊಂಡ ಭೀಮನು ಯಮದಂಡದಂತಿದ್ದ ಘೋರವಾದ ಒಂದು ಬಾಣವನ್ನು ಕರ್ಣನ ಮೇಲೆ ಪ್ರಯೋಗಿಸಿದನು.

ತಮಾಪತಂತಂ ಚಿಚ್ಛೇದ ರಾಧೇಯಃ ಪ್ರಹಸನ್ನಿವ ।
ತ್ರಿಭಿಃ ಶರೈಃ ಶರಂ ರಾಜನ್ ಪಾಂಡವಸ್ಯ ಪ್ರತಾಪವಾನ್ ॥ ೫೦ ॥

ಎಲೈ ರಾಜನೇ, ಪ್ರತಾಪಶಾಲಿಯಾದ ಕರ್ಣನು ನಗುತ್ತಾ ತನ್ನ ಬಳಿಗೆ ಬರುತ್ತಿದ್ದ ಭೀಮಸೇನನ ಬಾಣವನ್ನು ಮೂರು ಬಾಣಗಳಿಂದ ಕತ್ತರಿಸಿದನು.

ಪುನಶ್ಚಾಸ್ಯಜದುಗ್ರಾಣಿ ಶರವರ್ಷಾಣಿ ಪಾಂಡವಃ ।
ತಸ್ಯ ತಾನ್ಯಾದದೇ ಕರ್ಣಃ ಸರ್ವಾಣ್ಯಸ್ತ್ರಾಣ್ಯಭೀತವತ್ ॥ ೫೧ ॥

ಅನಂತರ ಭೀಮಸೇನನು ಉಗ್ರವಾದ ಬಾಣದ ಮಳೆಯನ್ನು ಸೃಷ್ಟಿಸಿದನು. ಕರ್ಣನು ಯಾವ ಭಯವೂ ಇಲ್ಲದೆ ಅವೆಲ್ಲವನ್ನೂ ಸ್ವೀಕರಿಸಿದನು.

ಯುದ್ಧ್ಯತಃ ಪಾಂಡುಪುತ್ರಸ್ಯ ಸೂತಪುತ್ರೋಽಸ್ತ್ರಮಾಯಯಾ ।
ತಸ್ಯೇಷುಧೀ ಧನುರ್ಜ್ಯಾಂ ಚ ಬಾಣೈಃ ಸನ್ನತಪರ್ವಭಿಃ ।
ರಶ್ಮೀನ್ ಯೋಕ್ತ್ರಾಣಿ ಚಾಶ್ವಾನಾಂ ಕರ್ಣೋ ವೈಕರ್ತನೋಽಚ್ಛಿನತ್ ॥

ಪಾಂಡುಪುತ್ರನಾದ ಭೀಮಸೇನನು ಯುದ್ಧವನ್ನು ಮಾಡುತ್ತಿರುವಂತೆಯೇ ಸೂತಪುತ್ರನಾದ ಕರ್ಣನು ತನ್ನ ಅಸ್ತ್ರದ ಸಾಮರ್ಥ್ಯದಿಂದ ಬಾಗಿದ ತುದಿಯುಳ್ಳ ಬಾಣಗಳಿಂದ ಅವನ ಬತ್ತಳಿಕೆಗಳನ್ನೂ, ಧನುಸ್ಸನ್ನೂ, ಹೆದೆಯನ್ನೂ, ಅಶ್ವದ ಕಡಿವಾಣವನ್ನೂ ಮತ್ತು ಕಡಗೂಟಗಳನ್ನೂ ಕತ್ತರಿಸಿದನು.

ತಸ್ಯಾಶ್ವಾಂಶ್ಚ ಪುನರ್ಹತ್ವಾ ಸೂತಂ ವಿವ್ಯಾಧ ಪಂಚಭಿಃ ।
ಸೋಽವಪ್ಲುತ್ಯ ದ್ರುತಂ ಸೂತೋ ಯುಯುಧಾನರಥಂ ಯಯೌ ॥೫೩॥

ಪುನಃ ಭೀಮಸೇನನ ರಥದ ಅಶ್ವಗಳನ್ನು ಕೊಂದು ಅವನ ಸಾರಥಿಯನ್ನು ಐದು ಬಾಣಗಳಿಂದ ಹೊಡೆದನು. ಭೀಮಸೇನನ ಸಾರಥಿಯಾದ ವಿಶೋಕನು ತನ್ನ ರಥದಿಂದ ಶೀಘ್ರವಾಗಿ ಕೆಳಗೆ ಹಾರಿ ಸಾತ್ಯಕಿಯ ರಥಕ್ಕೆ ಹೋದನು.

ಉತ್ಸ್ಮಯನ್ನಿವ ಭೀಮಸ್ಯ ಕ್ರುದ್ಧಃ ಕಾಲಾನಲಪ್ರಭಃ ।
ಧ್ವಜಂ ಚಿಚ್ಛೇದ ರಾಧೇಯಃ ಪತಾಕಾಶ್ಚ ನ್ಯಪಾತಯತ್ ॥ ೫೪ ॥

ಕರ್ಣನು ಕ್ರುದ್ಧನಾಗಿ ಯುಗಾಂತಕಾಲದ ಅಗ್ನಿಯ ಕಾಂತಿಯನ್ನು ಹೊಂದಿ ನಗುತ್ತಲೇ ಭೀಮನ ಧ್ವಜವನ್ನು ಕತ್ತರಿಸಿ ಪತಾಕೆಗಳನ್ನು ಕೆಡವಿದನು.

ಸ ವಿಧನ್ವಾ ಮಹಾರಾಜ ರಥಶಕ್ತಿಂ ಪರಾಮೃಶತ್ ।
ತಾಮವಾಸೃಜದಾವಿದ್ಧ್ಯ ಕ್ರುದ್ಧಃ ಕರ್ಣರಥಂ ಪ್ರತಿ ॥ ೫೫ ॥

ಮಹಾರಾಜನೇ, ತನ್ನ ಧನುಸ್ಸನ್ನು ಕಳೆದುಕೊಂಡ ಭೀಮಸೇನನು ಶತ್ರುರಥವನ್ನು ಭೇದಿಸುವ ಶಕ್ತಿ ಎಂಬ ಆಯುಧ ವಿಶೇಷವನ್ನು ತೆಗೆದುಕೊಂಡು ಅದನ್ನು ತಿರುಗಿಸಿ ಕ್ರುದ್ಧನಾಗಿ ಕರ್ಣನ ರಥದ ಮೇಲೆ ಎಸೆದನು.

ತಾಮಾಧಿರಥಿರಾಯಸ್ತಃ ಶಕ್ತಿಂ ಹೇಮಪರಿಷ್ಕೃತಾಮ್ ।
ಆಪತಂತೀಂ ಮಹೋಲ್ಕಾಭಾಂ ಚಚ್ಛೇದ ದಶಭಿಃ ಶರೈಃ ॥ ೫೬ ॥

ಕೋಪಗೊಂಡ ಕರ್ಣನು ಮಹೋಲ್ಕೆಯಂತೆ ತನ್ನ ಕಡೆಗೆ ಬರುತ್ತಿದ್ದ ಸುವರ್ಣಭೂಷಿತವಾದ ಆ ಶಕ್ತಿಯನ್ನು ಹತ್ತು ಬಾಣಗಳಿಂದ ಕತ್ತರಿಸಿದನು.

ಸಾಪತದ್ ದಶಧಾ ರಾಜನ್ ನಿಕೃತ್ತಾ ಕರ್ಣಸಾಯಕೈಃ ।
ಅಸ್ಯತಃ ಸೂತಪುತ್ರಸ್ಯ ಮಿತ್ರಾರ್ಥೇ ಚಿತ್ರಯೋಧಿನಃ ॥ ೫೭ ॥

ತನ್ನ ಮಿತ್ರನ ಸಲುವಾಗಿ ವಿಚಿತ್ರ ಯುದ್ಧವನ್ನು ಮಾಡುವ ಕರ್ಣನ ಬಾಣಗಳಿಂದ ಕತ್ತರಿಸಲ್ಪಟ್ಟು ಎಲೈ ರಾಜನೇ, ಆ ಶಕ್ತಿಯು ಹತ್ತುಭಾಗವಾಗಿ ಬಿದ್ದಿತು.

ಸ ಚರ್ಮಾದತ್ತ ಕೌಂತೇಯೋ ಜಾತರೂಪಪರಿಷ್ಕೃತಮ್ ।
ಖಡ್ಗಂ ಚಾನ್ಯತರಪ್ರೇಪ್ಸುರ್ಮೃತ್ಯೋರಗ್ರೇ ಜಯಸ್ಯ ವಾ ।
ತದಸ್ಯ ಸಹಸಾ ಕರ್ಣೋ ವೃಥಮತ್ ಪ್ರಹಸನ್ನಿವ ॥ ೫೮ ॥

ಕುಂತೀಪುತ್ರನಾದ ಭೀಮಸೇನನು ಮೃತ್ಯು ಅಥವಾ ಜಯಗಳಲ್ಲಿ ಯಾವುದನ್ನಾದರೂ ಬಯಸಿ ಸುವರ್ಣಭೂಷಿತವಾದ ಗುರಾಣಿ ಮತ್ತು ಖಡ್ಗವನ್ನು ತೆಗೆದುಕೊಂಡನು. ಕರ್ಣನು ನಗುತ್ತಾ ತಕ್ಷಣದಲ್ಲಿಯೇ ಆ ಗುರಾಣಿಯನ್ನು ಅವನ ಕೈಯಿಂದ ಹಾರಿಸಿದನು.

ಸ ವಿಚರ್ಮಾ ಮಹಾರಾಜ ವಿರಥಃ ಕ್ರೋಧಮೂರ್ಚ್ಛಿತಃ ।
ಅಸಿಂ ಪ್ರಾಸೃಜದಾವಿದ್ಧ್ಯ ತ್ವರನ್ ಕರ್ಣರಥಂ ಪ್ರತಿ ॥ ೫೯ ॥

ಎಲೈ ಮಹಾರಾಜನೇ, ಗುರಾಣಿಯನ್ನೂ ಮತ್ತು ರಥವನ್ನೂ ಕಳೆದುಕೊಂಡ ಭೀಮನು ಕ್ರೋಧಮೂರ್ಛಿತನಾಗಿ ಕೈಯಲ್ಲಿದ್ದ ಖಡ್ಗವನ್ನು ತಿರುಗಿಸಿ ಶೀಘ್ರವಾಗಿ ಕರ್ಣನ ರಥದ ಮೇಲೆ ಎಸೆದನು.

ಸ ಧನುಃ ಸೂತಪುತ್ರಸ್ಯ ಛಿತ್ತ್ವಾ ಜ್ಯಾಂ ಚ ಸುಸಂಶಿತಃ ।
ಅಪತದ್ ಭುವಿ ನಿಸ್ತ್ರಿಂಶಶ್ಚ್ಯುತಃ ಸರ್ಪ ಇವಾಂಬರಾತ್ ॥ ೬೦ ॥

ಅತ್ಯಂತ ನಿಶಿತವಾದ ಆ ಖಡ್ಗವು ಕರ್ಣನ ಧನುಸ್ಸನ್ನೂ ಮತ್ತು ಹೆದೆಯನ್ನೂ ಕತ್ತರಿಸಿ ಆಕಾಶದಿಂದ ಬಿದ್ದ ಸರ್ಪದಂತೆ ಭೂಮಿಯ ಮೇಲೆ ಬಿದ್ದಿತು.

ತತಃ ಪ್ರಹಸ್ಯಾಧಿರಥಿರನ್ಯದಾದತ್ತ ಕಾರ್ಮುಕಮ್ ।
ಶತ್ರುಘ್ನಂ ಸಮರೇ ಕ್ರುದ್ಧೋ ದೃಢಜ್ಯಂ ವೇಗವತ್ತರಮ್ ॥ ೬೧ ॥

ಆಗ ಕರ್ಣನು ನಕ್ಕು ಶತ್ರುವಿನಾಶಕವಾದ ದೃಢವಾದ ಹೆದೆಯುಳ್ಳ ಮೊದಲಿನ ಧನುಸ್ಸಿಗಿಂತಲೂ ವೇಗವತ್ತಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡನು.

ಸ ಭೀಮಸೇನಃ ಕುಪಿತೋ ಬಲವಾನ್ ಸತ್ಯವಿಕ್ರಮಃ ।
ವಿಹಾಯಸಂ ಪ್ರಾಕ್ರಮದ್ವೈ ಕರ್ಣಸ್ಯ ರಥಮಾವಿಶತ್ ॥ ೬೨ ॥

ಕೋಪಗೊಂಡವನೂ, ಬಲಿಷ್ಠನೂ, ಸತ್ಯವಾದ ಪರಾಕ್ರಮವುಳ್ಳ ಭೀಮಸೇನನು ಆಕಾಶದಲ್ಲಿ ಹಾರಿ ಕರ್ಣನ ರಥವನ್ನು ಬಂದು ಸೇರಿದನು.

ತಸ್ಯ ತಚ್ಚರಿತಂ ದೃಷ್ಟ್ವಾ ಸಂಗ್ರಾಮೇ ವಿಜಯೈಷಿಣಃ ।
ಧ್ವಜಾಲಯಸ್ಥೋ ರಾಧೇಯೋ ಭೀಮಸೇನಮವಂಚಯತ್ ॥ ೬೩ ॥

ಯುದ್ಧದಲ್ಲಿ ವಿಜಯವನ್ನು ಬಯಸುವ ಅವನ ಆ ಚರ್ಯೆಯನ್ನು ನೋಡಿ ಕರ್ಣನು ಹೆದರಿ ರಥದ ಧ್ವಜದ ಮೂಲೆಯಲ್ಲಿ ಅಡಗಿಕೊಂಡು ಭೀಮಸೇನನನ್ನು ವಂಚಿಸಿದನು.

ತಮದೃಷ್ಟ್ವಾ ರಥೋಪಸ್ಥೇ ನಿಲೀನಂ ವ್ಯಥಿತೇಂದ್ರಿಯಮ್ ।
ಧ್ವಜಮಸ್ಯ ಸಮಾಸಾದ್ಯ ತಸ್ಥೌ ಸ ಧರಣೀತಳೇ ॥ ೬೪ ॥

ಭೀಮಸೇನನು ತನ್ನ ಬಾಣಗಳಿಂದ ಪೀಡಿತನಾಗಿ ಅವಿತುಕೊಂಡಿದ್ದ ಅವನನ್ನು ರಥಪೀಠದಲ್ಲಿ ಕಾಣದೆ ಅವನ ರಥದ ಧ್ವಜದ ಹತ್ತಿರ ರಣರಂಗದಲ್ಲಿ ಬಂದು ನಿಂತನು.

ತದಸ್ಯ ಕುರವಃ ಸರ್ವೇ ಚಾರಣಾಶ್ಚಾಭ್ಯಪೂಜಯನ್ ।
ಯದಿಯೇಷ ರಥಾತ್ ಕರ್ಣಂ ಹಂತುಂ ತಾರ್ಕ್ಷ್ಯ ಇವೋರಗಮ್ ॥

ಕರ್ಣನ ರಥವನ್ನು ಏರಿ ಗರುಡನು ಸರ್ಪವನ್ನು ಕೊಲ್ಲಲು ಬಯಸಿದಂತೆ ಅವನನ್ನು ಕೊಲ್ಲಲು ಬಯಸಿದ ಅವನ ಆ ಪರಾಕ್ರಮವನ್ನು ಎಲ್ಲ ಕುರುಗಳು ಮತ್ತು ಚಾರಣರು ಪೂಜಿಸಿದರು.

ಸ ಛಿನ್ನಧನ್ವಾ ವಿರಥಃ ಸ್ವಧರ್ಮಮನುಪಾಲಯನ್ ।
ಸ್ವರಥಂ ಪೃಷ್ಠತಃ ಕೃತ್ವಾ ಯುದ್ಧಾಯೈವ ವ್ಯವಸ್ಥಿತಃ ॥ ೬೬ ॥

ತನ್ನ ಧನುಸ್ಸು ಕತ್ತರಿಸಲ್ಪಟ್ಟು ರಥವನ್ನೂ ಕಳೆದುಕೊಂಡಿದ್ದರೂ ಕ್ಷತ್ರಿಯಧರ್ಮವನ್ನು ಪಾಲಿಸುತ್ತಾ ಭೀಮಸೇನನು ತನ್ನ ರಥವನ್ನೂ ಧಿಕ್ಕರಿಸಿ ಯುದ್ಧಕ್ಕಾಗಿಯೇ ನಿಂತನು.

ತದ್ವಿಹತ್ಯಾಸ್ಯ ರಾಧೇಯಸ್ತತ ಏನಂ ಸಮಭ್ಯಯಾತ್ ।
ಸಂರಬ್ಧಃ ಪಾಂಡವಂ ಸಂಖೇ ಯುದ್ಧಾಯ ಸಮುಪಸ್ಥಿತಮ್ ॥ ೬೭ ॥

ಕರ್ಣನು ತನ್ನ ರಥಕ್ಕೆ ತನ್ನನ್ನು ಹಿಡಿಯಲು ಬಂದ ಭೀಮನಿಂದ ತಪ್ಪಿಸಿಕೊಂಡು ಯುದ್ಧಕ್ಕೆ ಸನ್ನದ್ಧನಾಗಿ ನಿಂತ ಭೀಮಸೇನನ ಮೇಲೆ ಕ್ರುದ್ಧನಾಗಿ ಎರಗಿದನು (ಲಕ್ಷಾಲಂಕಾರ).

ತೌ ಸಮೇತೌ ಮಹಾರಂಗೇ ಸ್ಪರ್ಧಮಾನೌ ಮಹಾಬಲೌ ।
ಜೀಮೂತಾವಿವ ಘರ್ಮಾಂತೇ ಗರ್ಜಮಾನೌ ನಭಸ್ತಳೇ ॥ ೬೮ ॥

ಮಹಾರಂಗದಲ್ಲಿ ಪರಸ್ಪರವಾಗಿ ಸ್ಪರ್ಧಿಸುವ ಮಹಾಬಲರಾದ ಅವರಿಬ್ಬರೂ ಬೇಸಿಗೆಯು ಕಳೆದ ಮೇಲೆ ಆಕಾಶದಲ್ಲಿ ಗರ್ಜಿಸುವ ಮೋಡಗಳಂತೆ ಪರಸ್ಪರವಾಗಿ ಸಂಧಿಸಿದರು.

ತಯೋರಾಸೀತ್ ಸಂಪ್ರಹಾರಃ ಕ್ರುದ್ಧಯೋರ್ನರಸಿಂಹಯೋಃ ।
ಅಮೃಷ್ಯಮಾಣಯೋಃ ಸಂಖೇ ದೇವದಾನವಯೋರಿವ ॥ ೬೯ ॥

ಒಬ್ಬರನೊಬ್ಬರು ಸಹಿಸದ, ನರಶ್ರೇಷ್ಠರಾದ ಅವರು ಕೋಪಗೊಂಡು ಮಾಡಿದ ಸಂಪ್ರಹಾರವು ಯುದ್ಧದಲ್ಲಿ ದೇವ-ದಾನವರ ಸಂಪ್ರಹಾರದಂತೆ ಇದ್ದಿತು.

ಕ್ಷೀಣಶಸ್ತ್ರಸ್ತು ಕೌಂತೇಯಃ ಕರ್ಣೇನ ಸಮಭಿದ್ರುತಃ ।
ದೃಷ್ಟ್ವಾರ್ಜುನಹತಾನ್ ನಾಗಾನ್ ಪತಿತಾನ್ ಪರ್ವತೋಪಮಾನ್ ।
ರಥಮಾರ್ಗವಿಘಾತಾರ್ಥಂ ವ್ಯಾಯುಧಃ ಪ್ರವಿವೇಶ ಹ ॥ ೭೦ ॥

ಶಸ್ತ್ರಹೀನನಾದ ಭೀಮನು ಕರ್ಣನಿಂದ ತಾನು ಹಿಂಬಾಲಿಸಲ್ಪಡುವುದನ್ನು ನೋಡಿ ಅವನ ರಥವನ್ನು ತಡೆಯಲು ಅರ್ಜುನನಿಂದ ಹತವಾದ, ರಣಭೂಮಿಯಲ್ಲಿ ಬಿದ್ದಿದ್ದ, ಪರ್ವತಸದೃಶವಾದ ಗಜಗಳ ಸಮೂಹವನ್ನು ಪ್ರವೇಶಿಸಿದನು.

ಹಸ್ತಿನಾಂ ವ್ರಜಮಾಸಾದ್ಯ ರಥದುರ್ಗಂ ಪ್ರವಿಶ್ಯ ಚ ।
ಪಾಂಡವೋ ಜೀವಿತಾಕಾಂಕ್ಷೀ ರಾಧೇಯಂ ನಾಭ್ಯಹಾರಯತ್ ॥ ೭೧ ॥

ಗಜಗಳ ಸಮೂಹವನ್ನು, ಹಾಗೆಯೇ ಮುರಿದ ರಥಗಳ ಸಮೂಹವನ್ನು ಪ್ರವೇಶಿಸಿದ ಜೀವಿತಾಕಾಂಕ್ಷಿಯಾದ ಪಾಂಡವನು ಕರ್ಣನನ್ನು ಹೊಡೆಯಲಿಲ್ಲ.

ವ್ಯವಸ್ಥಾನಮಥಾಕಾಂಕ್ಷನ್ ಧನಂಜಯಶರೈರ್ಹತಮ್ ।
ಉದ್ಯಮ್ಯ ಕುಂಜರಂ ಪಾರ್ಥಸ್ತ್ವೈ ಪರಪುರಂಜಯಃ ॥ ೭೨ ॥

ರಣರಂಗದಲ್ಲಿ ನಿಲ್ಲಲು ಬಯಸಿ ಧನಂಜಯನಿಂದ ಹತವಾದ ಗಜವನ್ನು ಎತ್ತಿ ಹಿಡಿದು ಪರಪುರಂಜಯನಾದ ಭೀಮನು ರಣರಂಗದಲ್ಲಿ ನಿಂತನು.

ತಮಸ್ಯ ವಿಶಿಖೈಃ ಕರ್ಣೋ ವ್ಯಧಮತ್ ಕುಂಜರಂ ಪುನಃ ।
ಹರ್ಷಂಗಾನ್ಯಥ ಕರ್ಣಾಯ ಪ್ರಾಹಿಣೋತ್ ಪಾಂಡವೋ ನದನ್ ॥೭೩॥

ಕರ್ಣನು ತನ್ನ ನಿಶಿತವಾದ ಬಾಣಗಳಿಂದ ಅವನ ಕೈಯಲ್ಲಿದ್ದ ಮೃತ ಕುಂಜರವನ್ನು ಪುಡಿ ಮಾಡಿದನು. ಆಗ ಭೀಮಸೇನನು ಗರ್ಜನೆಯನ್ನು ಮಾಡುತ್ತಾ ಅಶ್ವಗಳ ಅಂಗಗಳನ್ನು ಕರ್ಣನ ರಥದ ಮೇಲೆ ಎಸೆದನು.

ಚಕ್ರಾಣ್ಯಶ್ವಾಂಸ್ತಥಾ ವಾಹಾನ್ ಯದ್ಯತ್ ಪಶ್ಯತಿ ಭೂತಳೇ ।
ತತ್ತದಾದಾಯ ಚಿಕ್ಷೇಪ ಕ್ರುದ್ಧಃ ಕರ್ಣಾಯ ಪಾಂಡವಃ ॥ ೭೪ ॥

ಭೀಮಸೇನನು ಕ್ರುದ್ಧನಾಗಿ ರಥದ ಚಕ್ರಗಳನ್ನೂ, ಮೃತವಾದ ಅಶ್ವಗಳನ್ನೂ, ಭೂತಳದಲ್ಲಿ ಏನೇನು ಕಾಣುತ್ತವೆಯೋ ಅವೆಲ್ಲವನ್ನೂ ತೆಗೆದುಕೊಂಡು ಕರ್ಣನ ಮೇಲೆ ಎಸೆದನು.

ತದಸ್ಯ ಸರ್ವಂ ಚಿಚ್ಛೇದ ಕ್ಷಿಪ್ತಂ ಕ್ಷಿಪ್ತಂ ಶಿತೈಃ ಶರೈಃ ।
ವ್ಯಾಯುಧಂ ನಾವಧೀಚ್ಚೈನಂ ಕರ್ಣಃ ಕುಂತ್ಯಾ ವಚಃ ಸ್ಮರನ್ ॥ ೭೫ ॥

ಭೀಮಸೇನನು ಎಸೆದಂತೆ ಎಸೆದಂತೆ ಎಲ್ಲವನ್ನೂ ಕರ್ಣನು ತನ್ನ ನಿಶಿತವಾದ ಬಾಣಗಳಿಂದ ಕತ್ತರಿಸಿದನು. ಕುಂತಿಯ ಮಾತನ್ನು ಸ್ಮರಿಸಿದ ಕರ್ಣನು ಭೀಮಸೇನನು ಆಯುಧ ರಹಿತನಾಗಿದ್ದರೂ ಅವನನ್ನು ಕೊಲ್ಲಲಿಲ್ಲ (ಕೊಲ್ಲಲು ಬಯಸಲಿಲ್ಲ).

ಧನುಷೋಽಗ್ರೇಣ ತಂ ಕರ್ಣಸ್ತ್ವ ಭಿದ್ರುತ್ಯ ಪರಾಮೃಶತ್ ।
ಉತ್ಸ್ಮಯನ್ನಿವ ರಾಧೇಯೋ ಭೀಮಸೇನಮುವಾಚ ಹ ॥ ೭೬ ॥

ಆಗ ಕರ್ಣನು ಭೀಮಸೇನನ ಬಳಿಗೆ ಬಂದು ಧನುಸ್ಸಿನ ಒಂದು ಕೋಟಿ (ತುದಿ)ಯನ್ನು ಅವನ ಕೊರಳಿಗೆ ಹಾಕಿ ನಗುತ್ತಾ ಭೀಮಸೇನನನ್ನು ಕುರಿತು ಹೇಳಿದನು.

ಪುನಃ ಪುನಸ್ತೂಬರಕ ಮೂಢ ಔದರಿಕೇತಿ ಚ ।
ಅಕೃತಾಸ್ತ್ರ ಮಾ ಯೋತ್ಸೀರ್ಬಾಲ ಸಂಗ್ರಾಮಕಾತರ ॥ ೭೭ ॥

ತೂಬರಕ (ಗಲ್ಲದಲ್ಲಿ ಮಾತ್ರ ಗಡ್ಡವಿದ್ದವನು), ಮೂಢ, ಹೊಟ್ಟೆಬಾಕ, ಅಸ್ತ್ರಜ್ಞಾನ ಶೂನ್ಯನಾದವನೇ, ಯುದ್ಧಕ್ಕೆ ಹೆದರುವವನೇ, ಬಾಲನೇ ಯುದ್ಧವನ್ನು ಮಾಡಬೇಡ ಎಂದು ಪುನಃ ಪುನಃ ಹೇಳಿದನು.

ಯತ್ರ ಭೋಜ್ಯಂ ಬಹುವಿಧಂ ಭಕ್ಷ್ಯಂ ಪೇಯಂ ಚ ಪಾಂಡವ ।
ತತ್ರ ತ್ವಂ ದುರ್ಮತೇ ಯೋಗ್ಯೋ ನ ಯುದ್ಧೇಷು ಕಥಂಚನ ॥ ೭೮ ॥

ಎಲೈ ಪಾಂಡವನೇ, ಎಲ್ಲಿ ಬಹುವಿಧವಾದ ಭಕ್ಷ್ಯ-ಭೋಜ್ಯಗಳು ಮತ್ತು ಪೇಯವು ಇರುತ್ತವೆಯೋ, ಎಲೈ ದುರ್ಮತಿಯೇ ನೀನು ಅಲ್ಲಿ ಯೋಗ್ಯನಾಗಿರುತ್ತೀಯೆ. ಯುದ್ಧಗಳಲ್ಲಿ ನಿನಗೆ ಯೋಗ್ಯತೆ ಇಲ್ಲ.

ಮುನಿರ್ಭೂತ್ವಾಥ ವಾ ಭೀಮ ಫಲಾನ್ಯಾದತ್ಸ್ವ ದುರ್ಮತೇ ।
ವನಾಯ ವ್ರಜ ಕೌಂತೇಯ ನ ತ್ವಂ ಯುದ್ಧವಿಶಾರದಃ ॥ ೭೯ ॥

ಎಲೈ ದುರ್ಮತಿಯಾದ ಭೀಮನೇ, ಅಥವಾ ರುಚಿಯಾಗಿ ಫಲಗಳನ್ನು ತಿನ್ನು. ಕೌಂತೇಯನೇ, ಕಾಡಿಗೆ ಹೋಗು. ನೀನು ಯುದ್ಧವಿಶಾರದನಲ್ಲ.

ಫಲಮೂಲಾಶನೇ ಯುಕ್ತಸ್ತ್ವಂ ತಥಾಽತಿಥಿಭೋಜನೇ ।
ನ ತ್ವಾಂ ಶಸ್ತ್ರಮುದ್ಯೋಗೇ ಯೋಗ್ಯಂ ಮನ್ಯೇ ವೃಕೋದರ ॥ ೮೦ ॥

ಎಲೈ ವೃಕೋದರನೇ, ನೀನು ಫಲ-ಮೂಲಗಳನ್ನು ತಿನ್ನಲು ಯೋಗ್ಯನಾದವನು. ಹಾಗೆಯೇ ಅತಿಥಿಯಾಗಿ ಭೋಜನವನ್ನು ಮಾಡಲು ಯೋಗ್ಯನಾದವನು. ಎಲೈ ವೃಕೋದರನೇ, ಶಸ್ತ್ರಸಮುದ್ಯೋಗದಲ್ಲಿ ನಿನಗೆ ಯೋಗ್ಯತೆ ಇಲ್ಲವೆಂದು ನಾನು ಭಾವಿಸುತ್ತೇನೆ.

ಪುಷ್ಪಮೂಲಫಲಾಹಾರೋ ವ್ರತೇಷು ನಿಯಮೇಷು ಚ ।
ಉಚಿತಸ್ತ್ವಂ ವನೇ ಭೀಮ ನ ತ್ವಂ ಯುದ್ಧವಿಶಾರದಃ ॥ ೮೧ ॥

ಎಲೈ ಭೀಮನೇ, ನೀನು ಗೆಡ್ಡೆ-ಗೆಣಸುಗಳನ್ನೂ, ಪುಷ್ಪಗಳನ್ನೂ ತಿಂದು ಕಾಡಿನಲ್ಲಿ ವ್ರತನಿಯಮವನ್ನು ಮಾಡಲು ಯೋಗ್ಯನಾಗಿದ್ದೀಯೆ. ನೀನು ಯುದ್ಧವಿಶಾರದನಲ್ಲ.

ಕ್ವ ಯುದ್ಧಂ ಕ್ವ ಮುನಿತ್ವಂ ಚ ವನಂ ಗಚ್ಛ ವೃಕೋದರ ।
ನ ತ್ವಂ ಯುದ್ಧೋಚಿತಸ್ತಾತ ವನವಾಸರತಿರ್ಭವ ॥ ೮೨ ॥

ಎಲೈ ವೃಕೋದರನೇ, ಎಲ್ಲಿಯ ಯುದ್ಧ? ಮುನಿಯಾದ ನೀನು ಎಲ್ಲಿ? ನೀನು ಕಾಡಿಗೆ ಹೋಗು. ಎಲೈ ಪ್ರೀತಿಪಾತ್ರನೇ, ನೀನು ಯುದ್ಧಕ್ಕೆ ಅರ್ಹನಲ್ಲ. ವನವಾಸವನ್ನು ಮಾಡುವವನಾಗು.

ಸೂದಾನ್ ಭೃತ್ಯಜನಾನ್ ದಾಸಾಂಸ್ತ್ವಂ ಗೃಹೇ ತ್ವರಯನ್ ಭೃಶಮ್ ।
ಯೋಗ್ಯಸ್ತಾಡಯಿತುಂ ಕ್ರೋಧಾದ್ ಭೋಜನಾರ್ಥಂ ವೃಕೋದರ ॥೮೩॥

ಎಲೈ ವೃಕೋದರನೇ, ನೀನು ಮನೆಯಲ್ಲಿ ಅಡುಗೆಮಾಡುವವರನ್ನೂ, ಸೇವಕರನ್ನೂ, ದಾಸರನ್ನೂ ತ್ವರೆ ಮಾಡುತ್ತಾ ಕೋಪದಿಂದ ಅವರಿಗೆ ಹೊಡೆಯಲು ಯೋಗ್ಯನಾಗಿದ್ದೀಯೆ (ಎಂದು ಹೇಳಿದನು).

ಸಂಜಯಃ

ಕೌಮಾರೇ ಯಾನಿ ಚಾಪ್ಯಾಸನ್ನಪ್ರಿಯಾಣಿ ವಿಶಾಂಪತೇ ।
ಪೂರ್ವವೃತ್ತಾನಿ ಚಾಪ್ಯೇನಂ ರೂಕ್ಷಾಣ್ಯಶ್ರಾವಯದ್ ಭೃಶಮ್ ॥ ೮೪ ॥

ಸಂಜಯ– ಎಲೈ ರಾಜನೇ, ಬಾಲ್ಯದಲ್ಲಿ ನಡೆದ ಅಪ್ರಿಯ ಘಟನೆಗಳನ್ನು ಮತ್ತು ಉಗ್ರವಾದ ಮಾತುಗಳನ್ನು ಅವನಿಗೆ ಕರ್ಣನು ಜ್ಞಾಪಿಸಿದನು.

ಆಥೈನಂ ತತ್ರ ಸಂಲೀನಮಸ್ಯ ಶದ್ ಧನುಷಾ ಪುನಃ ।
ಪ್ರಹಸಂಶ್ಚ ಪುನರ್ವಾಕ್ಯಂ ಭೀಮಮಾಹ ವೃಷಧ್ವಜಾ ॥ ೮೫ ॥

ಆನಂತರ ಅಲ್ಲಿಯೇ ಹಾಗೆ ನಿಂತಿದ್ದ ಭೀಮನನ್ನು ಧನುಸ್ಸಿನ ತುದಿಯನ್ನು ಮುಟ್ಟುತ್ತಾ ನಗುತ್ತಾ ಪುನಃ ಭೀಮನನ್ನು ಕುರಿತು ಮಾತನಾಡಿದನು.

ಯೋದ್ಧವ್ಯಮಾವಿಶಾನ್ಯತ್ರ ನ ಯೋದ್ಧವ್ಯಂ ತು ಮಾದೃಶೈಃ ।
ಮಾದೃಶೈರ್ಯುಧ್ಯಮಾನಾನಾಮೇತಚ್ಚಾನ್ಯಚ್ಚ ವಿದ್ಯತೇ ॥ ೮೬ ॥

ಯುದ್ಧವನ್ನು ಮಾಡಬೇಕಾದರೆ ಬೇರೆ ಕಡೆಗೆ ಹೋಗು. ನನ್ನಂತಹವರ ಜೊತೆಯಲ್ಲಿ ಯುದ್ಧವನ್ನು ಮಾಡಬಾರದು. ನನ್ನಂತಹವರ ಜೊತೆಯಲ್ಲಿ ಯುದ್ಧವನ್ನು ಮಾಡಿದರೆ ನಿನ್ನ ಕಂಠದಲ್ಲಿ ಧನುಸ್ಸನ್ನು ಹಾಕುವುದು ಮತ್ತು ವಧೆಯನ್ನು ಮಾಡುವುದೂ ಸಹ ಉಂಟಾಗುತ್ತದೆ.

ಗಚ್ಛ ವಾ ಯತ್ರ ತೌ ಕೃಷ್ಣೌ ತೌ ತ್ವಾ ರಕ್ಷಿಷ್ಯತೋ ರಣೇ ।
ಗೃಹಂ ವಾ ಗಚ್ಛ ಕೌಂತೇಯ ಕಿಂ ತೇ ಯುದ್ಧೇನ ಬಾಲಕ ॥ ೮೭ ॥

ಅಥವಾ ಎಲ್ಲಿ ಕೃಷ್ಣಾರ್ಜುನರಿದ್ದಾರೆಯೋ ಅಲ್ಲಿಗೆ ಹೋಗು. ಅವರು ನಿನ್ನನ್ನು ಯುದ್ಧದಲ್ಲಿ ರಕ್ಷಿಸುವರು. ಎಲೈ ಕುಂತೀಪುತ್ರನೇ, ಅಥವಾ ಮನೆಗಾದರೂ ಹೋಗು. ಬಾಲಕನೇ, ನಿನಗೆ ಯುದ್ಧದಿಂದ ಏನಾಗಬೇಕು?

ಸಂಜಯಃ

ಏವಂ ತಂ ವಿರಥಂ ಕೃತ್ವಾ ಕರ್ಣೋ ರಾಜನ್ ವ್ಯಕತ್ಥತ ।
ಪ್ರಮುಖೇ ವೃಷ್ಣಿಸಿಂಹಸ್ಯ ಪಾರ್ಥಸ್ಯ ಚ ಮಹಾತ್ಮನಃ ॥ ೮೮ ॥

ಸಂಜಯ– ಹೀಗೆ ಕರ್ಣನು ಭೀಮಸೇನನನ್ನು ವಿರಥನನ್ನಾಗಿ ಮಾಡಿ ಮಹಾತ್ಮಾದ ವೃಷ್ಣಿಸಿಂಹನಾದ ಕೃಷ್ಣನ ಮತ್ತು ಅರ್ಜುನನ ಎದುರಿನಲ್ಲಿ ತನ್ನ ಪ್ರತಾಪವನ್ನೇ ತಾನು ಹೊಗಳಿಕೊಂಡನು.

ತತೋ ರಾಜನ್ ಶಿಲಾಧೌತಾನ್ ಶರಾನ್ ಶಾಖಾಮೃಗಧ್ವಜಃ ।
ಪ್ರಾಹಿಣೋತ್ ಸೂತಪುತ್ರಾಯ ಕೇಶವೇನ ಪ್ರಚೋದಿತಃ ॥ ೮೯ ॥

ಆಗ ಕೃಷ್ಣನಿಂದ ಪ್ರೇರಿಸಲ್ಪಟ್ಟ ಕಪಿಧ್ವಜನಾದ ಅರ್ಜುನನು ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳನ್ನು ಕರ್ಣನ ಮೇಲೆ ಪ್ರಯೋಗಿಸಿದನು.

ತತಃ ಪಾರ್ಥಭುಜೋತ್ಸೃಷ್ಟಾಃ ಶರಾಃ ಕಾಂಚನಭೂಷಣಾಃ ।
ಗಾಂಡೀವಪ್ರಭವಾಃ ಕರ್ಣಂ ಹಂಸಾಃ ಕ್ರೌಂಚಮಿವಾವಿಶನ್ ॥ ೯೦ ॥

ಆಗ ಪಾರ್ಥನ ಭುಜದಿಂದ ಎಳೆದು ಬಿಡಲ್ಪಟ್ಟ ಗಾಂಡೀವದಿಂದ ಹೊರಹೊಮ್ಮಿದ ಸ್ವರ್ಣಭೂಷಿತವಾದ ಬಾಣಗಳು ಹಂಸಗಳು ಕ್ರೌಂಚ ಪರ್ವತವನ್ನು ಪ್ರವೇಶಿಸಿದಂತೆ ಕರ್ಣನನ್ನು ಪ್ರವೇಶಿಸಿದವು.

ಸ ಭುಜಂಗೈರಿವಾಯಸ್ಮೈರ್ಗಾಂಡೀವಪ್ರೇಷಿತೈಃ ಶರೈಃ ।
ಭೀಮಸೇನಾದಪಾಸೇಧತ್ ಸೂತಪುತ್ರಂ ಧನಂಜಯಃ ॥ ೯೧ ॥

ಅರ್ಜುನನು ಕೋಪಗೊಂಡ ಸರ್ಪಗಳಂತಿದ್ದ ತಾನು ಪ್ರಯೋಗಿಸಿದ ಬಾಣಗಳಿಂದ ಕರ್ಣನನ್ನು ಭೀಮಸೇನನನ್ನು ಬಿಟ್ಟು ಬೇರೆ ಕಡೆಗೆ ತಿರುಗಿಸಿ ಅವನು ಪಲಾಯನ ಮಾಡುವಂತೆ ಮಾಡಿದನು.

ಸ ಭಿನ್ನಧನ್ವಾ ಭೀಮೇನ ಧನಂಜಯಶರಾಹತಃ ।
ಕರ್ಣೋ ಭೀಮಾದಪಾಯಾಸೀದ್ ರಥೇನ ಮಹತಾ ದ್ರುತಮ್ ॥೯೨॥

ಭೀಮನಿಂದ ತನ್ನ ಧನುಸ್ಸು ಕತ್ತರಿಸಲ್ಪಟ್ಟು, ಅರ್ಜುನನ ಬಾಣಗಳಿಂದ ಪೀಡಿತನಾದ ಕರ್ಣನು ತನ್ನ ದೊಡ್ಡ ರಥದಿಂದ ಶೀಘ್ರವಾಗಿ ಭೀಮನನ್ನು ಬಿಟ್ಟು ಬೇರೆ ಕಡೆಗೆ ಹೋದನು.

ಭೀಮೋಽಪಿ ಸಾತ್ಯಕೇರ್ವಾಹಂ ಸಮಾರುಹ್ಯ ನರರ್ಷಭಃ ।
ಅನ್ವಯಾದ್ ಭ್ರಾತರಂ ಸಂಖೇ ಪಾಂಡವಂ ಸವ್ಯಸಾಚಿನಮ್ ॥ ೯೩ ॥

ನರಶ್ರೇಷ್ಠನಾದ ಭೀಮನೂ ಸಹ ಸಾತ್ಯಕಿಯ ರಥವನ್ನು ಏರಿ ತನ್ನ ತಮ್ಮನಾದ ಪಾಂಡುಪುತ್ರನಾದ ಅರ್ಜುನನನ್ನು ರಣರಂಗದಲ್ಲಿ ಹಿಂಬಾಲಿಸಿದನು.

ತತಃ ಕರ್ಣಂ ಸಮುದ್ದಿಶ್ಯ ತ್ವರಮಾಣೋ ಧನಂಜಯಃ ।
ನಾರಾಚಂ ಕ್ರೋಧತಾಮ್ರಾಕ್ಷಃ ಪ್ರೈಷೀನ್ಮೃತ್ಯುಮಿವಾಂತಕಃ ॥ ೯೪ ॥

ಆಗ ಕ್ರೋಧದಿಂದ ಕೆಂಪಾದ ಕಣ್ಣುಳ್ಳ ಅರ್ಜುನನು ತ್ವರೆ ಮಾಡುತ್ತಾ ಮೃತ್ಯುವಿನಂತೆ ಪ್ರಾಣಾಪಹಾರಿಯಾದ ನಾರಾಚವನ್ನು ಕರ್ಣನ ಮೇಲೆ ಪ್ರಯೋಗಿಸಿದನು.

ಸ ಗರುತ್ಮಾನಿವಾಕಾಶೇ ಪ್ರಾರ್ಥಯನ್ ಭುಜಗೋತ್ತಮಮ್ ।
ನಾರಾಚೋಽಭ್ಯಪತತ್ ಕರ್ಣಂ ತೂರ್ಣಂ ಗಾಂಡೀವಚೋದಿತಃ ॥೯೫॥

ಗಾಂಡೀವ ಧನುಸ್ಸಿನಿಂದ ಹೊರಹೊಮ್ಮಿದ ಆ ನಾರಾಚವು ಸರ್ಪವನ್ನು ಬಯಸುವ ಆಕಾಶದಲ್ಲಿರುವ ಗರುಡನಂತೆ ಶೀಘ್ರವಾಗಿ ಕರ್ಣನ ಮೇಲೆ ಬಿದ್ದಿತು.

ತಮಂತರಿಕ್ಷೇ ನಾರಾಚಂ ದ್ರೌಣಿಶ್ಚಿಚ್ಛೇದ ಪತ್ರಿಣಾ ।
ಧನಂಜಯಭಯಾತ್ ಕರ್ಣಮುಜ್ಜಿಹೀರ್ಷುರ್ಮಹಾರಥಃ ॥ ೯೬ ॥

ಆಗ ಮಹಾರಥರಾದ ಅಶ್ವತ್ಥಾಮರು ಧನಂಜಯನ ಭಯದಿಂದ ಕರ್ಣನನ್ನು ಉದ್ಧಾರ ಮಾಡಲು ಬಯಸಿ ಒಂದು ಬಾಣದಿಂದ ಆ ನಾರಾಚವನ್ನು ಕತ್ತರಿಸಿದರು.

ತತೋ ದ್ರೌಣಿಂ ಚತುಃಷಷ್ಟ್ಯಾ ವಿವ್ಯಾಧ ಕುಪಿತೋಽರ್ಜುನಃ ।
ಶಿರೀಮುಖೈರ್ಮಹಾರಾಜ ಮಾ ಗಾಸ್ತಿಷ್ಠೇತಿ ಚಾಬ್ರವೀತ್ ॥ ೯೭ ॥

ಎಲೈ ಮಹಾರಾಜನೇ, ಆಗ ಕೋಪಗೊಂಡ ಅರ್ಜುನನು ಅಶ್ವತ್ಥಾಮರನ್ನು ಅರವತ್ನಾಲ್ಕು ಬಾಣಗಳಿಂದ ಹೊಡೆದು ಹೋಗಬೇಡಿ, ನಿಲ್ಲಿ ಎಂದು ಹೇಳಿದನು.

ಸ ತು ಮತ್ತಗಜಾಕೀರ್ಣಮನೀಕಂ ರಥಸಂಕುಲಮ್ ।
ತೂರ್ಣಮಭ್ಯಾಏಶದ್ ದ್ರೌಣಿರ್ಧನಂಜಯಶರಾರ್ದಿತಃ ॥ ೯೮ ॥

ಅರ್ಜುನನ ಬಾಣಗಳಿಂದ ಪೀಡಿತರಾದ ಅಶ್ವತ್ಥಾಮರು ಮದಿಸಿದ ಗಜಗಳಿಂದಲೂ, ರಥಸಮೂಹದಿಂದಲೂ ಕೂಡಿದ ಕೌರವಸೇನೆಯನ್ನು ಶೀಘ್ರವಾಗಿ ಪ್ರವೇಶಿಸಿದರು.

ತತಃ ಸುವರ್ಣಪೃಷ್ಠಾನಾಂ ಧನುಷಾಂ ಕೂಜತಾಂ ರಣೇ ।
ಶಬ್ದಂ ಗಾಂಡೀವಘೋಷೇಣ ಕೌಂತೇಯೋಽಭ್ಯಭವದ್ ಬಲೀ ॥ ೯೯ ॥

ಆಗ ಯುದ್ಧದಲ್ಲಿ ಕೇಳಿ ಬರುತ್ತಿದ್ದ ಸುವರ್ಣಪೃಷ್ಠವುಳ್ಳ ಧನುಸ್ಸುಗಳ ನಾದಗಳನ್ನು ಕುಂತೀಪುತ್ರನಾದ ಬಲಿಷ್ಠನಾದ ಅರ್ಜುನನು ಗಾಂಡೀವ ಘೋಷದಿಂದ ಸೋಲಿಸಿದನು (ಮುಚ್ಚಹಾಕಿದನು).

ಧನಂಜಯಸ್ತಥಾ ಯಾಂತಂ ಪೃಷ್ಠತೋ ದ್ರೌಣಿಮಭ್ಯಯಾತ್ ।
ನಾತಿದೀರ್ಘಮಿವಾಧ್ವಾನಂ ಶರೈಃ ಸಂತ್ರಾಸಯನ್ ಬಲಮ್ ॥ ೧೦೦ ॥

ಅಶ್ವತ್ಥಾಮರು ಹಾಗೆ ಹೋಗುತ್ತಿರಲು ಅರ್ಜುನನು ತನ್ನ ಬಾಣಗಳಿಂದ ಕೌರವ ಸೇನೆಯನ್ನು ಭಯಗೊಳಿಸುತ್ತಾ ಸ್ವಲ್ಪ ದೂರ ಅವರನ್ನು ಹಿಂಬಾಲಿಸಿದನು.

ವಿದಾರ್ಯ ದೇಹಾನ್ ನಾರಾಚೈರ್ನರವಾರಣವಾಜಿನಾಮ್ ।
ಕಂಕಬರ್ಹಿಣವಾಸೋಭಿರ್ಬಲಂ ವ್ಯಧಮದರ್ಜುನಃ ॥ ೧೦೧ ॥

ಗಜ-ಅಶ್ವ-ಯೋಧರ ದೇಹಗಳನ್ನು ಕಂಕಪಕ್ಷಿಯ ಗರಿಗಳನ್ನು ಹೊಂದಿದ ನಾರಾಚಗಳಿಂದ ಸೀಳಿ ಅರ್ಜುನನು ಕೌರವಸೇನೆಯನ್ನು ನಾಶಗೊಳಿಸಿದನು.

ತದ್ಬಲಂ ಭರತಶ್ರೇಷ್ಠ ಸವಾಜಿದ್ವಿಪಮಾನವಮ್ ।
ಪಾಕಶಾಸನಿರಾಯಸ್ತಃ ಪಾರ್ಥಃ ಸನ್ನಿಜಘಾನ ಹ ॥ ೧೦೨ ॥

ಎಲೈ ಭರತಶ್ರೇಷ್ಠನೇ, ಕೋಪಗೊಂಡ ಇಂದ್ರಪುತ್ರನಾದ ಅರ್ಜುನನು ಅಶ್ವ-ಗಜ-ಮಾನವರಿಂದ ಕೂಡಿದ ಆ ಸೈನ್ಯವನ್ನು ಚೆನ್ನಾಗಿ ಮರ್ದಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುರ್ವಿಂಶತ್ಯಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಅಷ್ಟಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೈದನೆಯ ಅಧ್ಯಾಯ

ಸಾತ್ಯಕಿಯಿಂದ ಅಲಂಬುಸನ ವಧೆ.

ಧೃತರಾಷ್ಟ್ರ:

ದಾತವ್ಯಮದ್ಯಮಂಯೇಽಹಂ ಪಾಂಡವಾನಾಂ ಸ್ವಕಂ ಪುನಃ ।
ನ ವಿಗ್ರಹೋ ಹಿ ಬಲಿನಾ ಶ್ರೇಯಸೇ ಸ್ಯಾದ್ ಯಥಾತಥಾ ॥ ೧ ॥

ಧೃತರಾಷ್ಟ್ರ- ಈ ದಿನ ಪಾಂಡವರಿಗೆ ಅವರ ದ್ರವ್ಯವನ್ನು ಹಿಂದಿರುಗಿಸಬೇಕೆಂದು ಭಾವಿಸುತ್ತೇನೆ. ಬಲಿಷ್ಠರ ಜೊತೆಯಲ್ಲಿ ವಿರೋಧವು ಎಂದೂ ಶ್ರೇಯಸ್ಸನ್ನು ಉಂಟು ಮಾಡುವುದಿಲ್ಲ.

ಪಾದಯೋಃ ಪ್ರಣತೇನಾಪಿ ಭುಕ್ತಾ ಪ್ಯುಚ್ಚಿಷ್ಟಮಪ್ಯರೇಃ ।
ಆತೋಽನ್ಯದ್ಯಾಪಿ ಕೃತ್ಸ್ನೈವ ಜೇಯ್ಯಂ ಲೋಕೇ ನರೇಣ ಚ ॥ ೨ ॥

ಮನುಷ್ಯನಾದವನು ಶತ್ರುಗಳ ಪಾದಗಳಿಗೆ ನಮಸ್ಕಾರ ಮಾಡಿಯಾಗಲೀ, ಅವನ ಉಚ್ಛಿಷ್ಟವನ್ನು ಭುಂಜಿಸಿಯೇ ಆಗಲಿ ಅಥವಾ ಬೇರೆ ಏನನ್ನಾದರೂ ಮಾಡಿಯಾಗಲೀ ಲೋಕದಲ್ಲಿ ಜಯಿಸಬೇಕು.

ಜೇವತೈನ ಪರೋ ಲೋಕಃ ಸಾಧ್ಯತೇ ಚೈವ ಸರ್ವಥಾ ।
ಅಜೇವತ ಸ್ತಥೈವಾಸೀನ್ನ ಸುಖಂ ನ ಪರಾಗತಿಃ ॥ ೩ ॥

ಬದುಕಿರುವ ಮನುಷ್ಯನು ಮಾತ್ರ ಸರ್ವಥಾ ಪರಲೋಕಸಾಧನೆಯನ್ನು ಮಾಡಬಹುದು. ಬದುಕದಿದ್ದರೆ ನರಕ ಸಾಧನೆಯೂ ಇಲ್ಲ, ಸ್ವರ್ಗಸಾಧನೆಯೂ ಇಲ್ಲ.

ವಿನಾಶೇ ಸರ್ವಧೋತ್ಪನ್ನೇ ನ ಬಾಲೋ ಬುಧ್ಯತೇ ಕ್ರಿಯಾಂ ।
ಮಿಥ್ಯಾಭಿಮಾನದಗ್ಧೋ ಹಿ ನ ಬುದ್ಧ್ಯೇತ ಕೃತಾಕೃತೇ ॥ ೪ ॥

ಎಲೈ ಪ್ರೀತಿಪಾತ್ರನೇ, ಸರ್ವವಿನಾಶವು ಪ್ರಾಪ್ತವಾದಾಗ ಮಿಥ್ಯಾಹಂಕಾರದಿಂದ ಕೂಡಿದ ಬಾಲಕನು ಅದಕ್ಕೆ ಮಾಡಬೇಕಾದ ಪ್ರತಿಕ್ರಿಯೆಯನ್ನು ತಿಳಿಯುವುದಿಲ್ಲ. ವಿವೇಕಿಯಾದವನು ಮಾತ್ರ ಅಂತಹ ಪ್ರಸಂಗಗಳು ಬಂದಂತೆ ಬರದಂತೆ ಮಾಡಬೇಕಾದ ಪ್ರತಿಕ್ರಿಯೆಯನ್ನು ತಿಳಿಯುತ್ತಾನೆ.

ಅಹನ್ಯಹನಿ ಮೇ ದೀಪ್ತಂ ಯಶಃ ಹತತಿ ಸಂಜಯ ।
ಹತಾ ಮೇ ಬಹವೋ ಯೋಧಾ ಮನ್ಯೇ ಕಾಲಸ್ಯ ಪರ್ಯಯಮ್ ॥೫॥

ಎಲೈ ಸಂಜಯನೇ, ಪ್ರತಿದಿವಸವೂ ಬೆಳಗುತ್ತಿದ್ದ ನನ್ನ ಕೀರ್ತಿಯು ನಾಶ ಹೊಂದುತ್ತಿದೆ. ನನ್ನ ಅನೇಕ ಯೋಧರು ಹತರಾಗಿದ್ದಾರೆ. ಇದನ್ನು ಕಾಲ ಗತಿ ಎಂದು ಭಾವಿಸುತ್ತೇನೆ.

ಧನಂಜಯಸ್ತು ಸಂಕ್ರುದ್ಧಃ ಪ್ರವಿಷ್ಟೋ ಮಾಮಕಂ ಬಲಮ್ ।
ರಕ್ಷಿತಂ ದ್ರೋಣಕರ್ಣಾಭ್ಯಾಮಪ್ರವೇಶ್ಯಂ ಸುರೈರಪಿ ॥ ೬ ॥

ದ್ರೋಣ-ಕರ್ಣರಿಂದ ರಕ್ಷಿತವಾದ, ದೇವತೆಗಳಿಂದಲೂ ಪ್ರವೇಶ ಮಾಡಲು ಸಾಧ್ಯವಿಲ್ಲದ, ನನ್ನ ಸೈನ್ಯವನ್ನು ಕೋಪಗೊಂಡ ಅರ್ಜುನನು ಪ್ರವೇಶಿಸಿದ್ದಾನೆ.

ತಾಭ್ಯಾಮೂರ್ಜಿತವೀರ್ಯಾಭ್ಯಾಮಾಪ್ಯಾಯಿತಪರಾಕ್ರಮಃ ।
ಸಹಿತಃ ಕೃಷ್ಣಭೀಮಾಭ್ಯಾಂ ಶಿನೀನಾಮೃಷಭೇಣ ಚ ॥ ೭ ॥

ಉನ್ನತ ಸಾಮರ್ಥ್ಯವುಳ್ಳ ಕೃಷ್ಣ-ಭೀಮರಿಂದಲೂ ಮತ್ತು ಶಿನಿಪ್ರವೀರನಾದ ಸಾತ್ಯಕಿಯಿಂದಲೂ ಅಭಿವೃದ್ಧಿ ಹೊಂದಿದ ಪರಾಕ್ರಮವುಳ್ಳವನಾಗಿದ್ದಾನೆ.

ತದಾ ಪ್ರಭೃತಿ ಮಾ ಶೋಕೋ ದಹತ್ಯಗ್ನಿರಿವಾಶಯಮ್ ।
ಗ್ರಸ್ತಾನ್ ಹಿ ಪ್ರತಿಪಶ್ಯಾಮಿ ಭೂಮಿಪಾಲಾನ್ ಸಸೈಂಧವಾನ್ ॥ ೮ ॥

ಆಗಿನಿಂದಲೂ ನನ್ನ ಶೋಕವು ಅಗ್ನಿಯು ಆಶಯವನ್ನು ಸುಡುವಂತೆ ನನ್ನನ್ನು ದಹಿಸುತ್ತಿದೆ. ಸೈಂಧವನಿಂದ ಸಹಿತರಾದ ಎಲ್ಲ ರಾಜರೂ ಅರ್ಜುನನಿಂದ ವಿನಾಶಗೊಂಡಿದ್ದಾರೆ ಎಂದು ಕಾಣುತ್ತಿದ್ದೇನೆ.

ಅಪ್ರಿಯಂ ಸುಮಹತ್ ಕೃತ್ವಾ ಸಿಂಧುರಾಜಃ ಕಿರೀಟಿನಃ ।
ಚಕ್ಷುರ್ವಿಷಯಮಾಪನ್ನಃ ಕಥಂ ಮುಚ್ಯೇತ ಜೀವಿತಃ ॥ ೯ ॥

ಅರ್ಜುನನಿಗೆ ಅಪ್ಪುದೊಡ್ಡ ಅಪ್ರಿಯವನ್ನು ಮಾಡಿದ ಸೈಂಧವನು ಅರ್ಜುನನಿಗೆ ದೃಷ್ಟಿಗೋಚರನಾಗಿ ಹೇಗೆ ಜೀವಸಹಿತನಾಗಿ ಬಿಡುಗಡೆಯನ್ನು ಹೊಂದಿಯಾನು?

ಅನುಮಾನಾಚ್ಚ ಪಶ್ಯಾಮಿ ನಾಸ್ತಿ ಸಂಜಯ ಸೈಂಧವಃ ।
ಯುದ್ಧಂ ತು ತದ್ಯಥಾ ವೃತ್ತಂ ತನ್ಮಾಚಕ್ಷ್ವ ಪೃಚ್ಛತಃ ॥ ೧೦ ॥

ಅಶ್ವತ್ಥಾಮ-ಕರ್ಣನಂತಹವರೇ ಅರ್ಜುನನ ಭಯದಿಂದ ಓಡಿಹೋದಮೇಲೆ ನಾನು ಸೈಂಧವನು ಇಲ್ಲವೆಂದು ಅನುಮಾನದಿಂದ ತಿಳಿಯುತ್ತಿದ್ದೇನೆ. ಎಲೈ ಸಂಜಯನೇ, ನನ್ನ ಪ್ರಶ್ನೆಗೆ ಉತ್ತರವಾಗಿ ಯುದ್ಧವು ಹೇಗೆ ನಡೆಯಿತೆಂದು ನನಗೆ ಹೇಳು.

ಯಚ್ಚ ವಿಕ್ಷೋಭ್ಯ ಮಹತೀಂ ಸೇನಾಂ ಸಂಲೋಡ್ಯ ಚಾಸಕೃತ್ ।
ಏಕಃ ಪ್ರವಿಷ್ಟಃ ಸಂಕ್ರುದ್ಧೋ ನಳಿನೀಮಿವ ಕುಂಜರಃ ॥ ೧೧ ॥

ತಸ್ಯ ವೃಷ್ಣಿಪ್ರವೀರಸ್ಯ ಬ್ರೂಹಿ ಯುದ್ಧಂ ಯಥಾತಥಮ್ ।
ಧನಂಜಯಾರ್ಥೇ ಯತ್ತಸ್ಯ ಕುಶಲೋ ಹ್ಯಸಿ ಸಂಜಯ ॥ ೧೨ ॥

ಯಾವ ಒಬ್ಬನು ಕೋಪಗೊಂಡು ನಮ್ಮ ದೊಡ್ಡ ಸೈನ್ಯವನ್ನು ಪ್ರವೇಶಿಸಿ ಆನೆಯು ಪದ್ಮಸರೋವರವನ್ನು ಕ್ಷೋಭೆಗೊಳಿಸಿದಂತೆ ಪುನಃ ಪುನಃ ಕ್ಷೋಭೆಗೊಳಿಸಿದನೋ ಅಂತಹ ಅರ್ಜುನನಿಗೆ ಸಹಾಯ ಮಾಡಲು ದೃಢವಾಗಿ ಪ್ರಯತ್ನ ಮಾಡುವ, ವೃಷ್ಣಿವೀರನಾದ ಸಾತ್ಯಕಿಯ ಯುದ್ಧವನ್ನು ಸರಿಯಾಗಿ ಹೇಳು. ಎಲೈ ಸಂಜಯನೇ, ನೀನು ಕುಶಲನಾಗಿದ್ದೀಯೆ.

ಸಂಜಯಃ

ತಥಾ ತು ವೈಕರ್ತನಪೀಡಿತಂ ತಂ
ಭೀಮಂ ಪ್ರಯಾಂತಂ ಪುರುಷಪ್ರವೀರಮ್ ।
ಸಮೀಕ್ಷ್ಯ ರಾಜನ್ ನರವೀರಮಧ್ಯೇ
ಶಿನಿಪ್ರವೀರೋಽನುಯಯೌ ರಥೇನ ॥ ೧೩ ॥

ಸಂಜಯ– ರಾಜನೇ, ಕರ್ಣನಿಂದ ಪೀಡಿತನಾಗಿ ಹಾಗೆ ಹೋಗುತ್ತಿದ್ದ ಪುರುಷಶ್ರೇಷ್ಠನಾದ ಭೀಮಸೇನನನ್ನು ನೋಡಿ ಸಾತ್ಯಕಿಯು ಆ ನರವೀರರ ಮಧ್ಯದಲ್ಲಿ ತನ್ನ ರಥದಿಂದ ಅವನನ್ನು ಹಿಂಬಾಲಿಸಿದನು.

ನದನ್ ಯಥಾ ವಜ್ರಧರಸ್ತಪಾಂತೇ
ಜ್ವಲನ್ ಯಥಾ ಜಲದಾಂತೇ ಚ ಸೂರ್ಯಃ ।
ನಿಘ್ನನ್ನಮಿತ್ರಾನ್ ಧನುಷಾ ದೃಢೇನ
ಸಂಕಂಪಯಂಸ್ತವ ಪುತ್ರಸ್ಯ ಸೇನಾಮ್ ॥ ೧೪ ॥

ತಂ ಯಾಂತಮಶ್ವೈ ರಜತಪ್ರಕಾಶೈ-
ರಾಯೋಧನೇ ನರವೀರಂ ಚರಂತಮ್ ।
ನಾಶಕ್ನುವನ್ ವಾರಯಿತುಂ ತ್ವದೀಯಾಃ
ಸರ್ವೇ ರಥಾ ಭಾರತ ಮಾಧವಾಗ್ರ್ಯಮ್ ॥ ೧೫ ॥

ಬೇಸಿಗೆಯ ಅನಂತರದ ಮಳೆಗಾಲದಲ್ಲಿ ವಜ್ರಧರನಾದ ಇಂದ್ರನು ಮೇಘಗಳಿಂದ ಗರ್ಜಿಸುವಂತೆ, ಮಳೆಗಾಲದ ಅನಂತರದ ಶರತ್ಕಾಲದಲ್ಲಿ ಸೂರ್ಯನು ಜ್ವಲಿಸುವಂತೆ ತನ್ನ ದೃಢವಾದ ಧನುಸ್ಸಿನಿಂದ ಶತ್ರುಗಳನ್ನು ಕೊಲ್ಲುತ್ತಾ, ನಿನ್ನ ಪುತ್ರನ ಸೇನೆಯನ್ನು ನಡುಗಿಸುತ್ತಾ, ರಣರಂಗದಲ್ಲಿ ರಜತವರ್ಣದ ಅಶ್ವಗಳನ್ನು ಹೂಡಿದ ರಥದಲ್ಲಿ ಸಾಗುವ ಆ ನರಶ್ರೇಷ್ಠನಾದ ಮಧುಕುಲದಲ್ಲಿ ಜನಿಸಿದ ಸಾತ್ಯಕಿಯನ್ನು ಎಲೈ ಭಾರತನೇ, ನಿನ್ನ ಮಹಾರಥರೆಲ್ಲರೂ ಸೇರಿದರೂ ತಡೆಯಲು ಸಾಧ್ಯವಾಗಲಿಲ್ಲ.

ಅಮರ್ಷಪೂರ್ಣಸ್ತ್ವ ನಿವೃತ್ತಯೋಧೀ
ಶರಾಸನೀ ಕಾಂಚನವರ್ಮಧಾರೀ ।
ಅಲಂಬುಸಃ ಸಾತ್ಯಕಿಂ ಮಾಧವಾಗ್ರ್ಯ-
ಮವಾರಯದ್ ರಾಜವರೋಽಭಿಪತ್ಯ ॥ ೧೬ ॥

ಆಗ ರೋಷಯುಕ್ತನಾದವನೂ, ಯುದ್ಧದಿಂದ ಹಿಮ್ಮೆಟ್ಟದವನೂ, ಸುವರ್ಣ ಕವಚವನ್ನು ಧರಿಸಿ ಕೈಯಲ್ಲಿ ಧನುಸ್ಸನ್ನು ಹಿಡಿದ ರಾಜಶ್ರೇಷ್ಠನೂ ಆದ ಅಲಂಬುಸನು ಮಾಧವ ಶ್ರೇಷ್ಠನಾದ ಸಾತ್ಯಕಿಯ ಎದುರಿಗೆ ಬಂದು ಅವನನ್ನು ತಡೆದನು.

ತಯೋರಭೂದ್ ಭಾರತ ಸಂಪ್ರಹಾರ-
ಸ್ತಥಾಗತೋ ನೈವ ಬಭೂವ ಕಶ್ಚಿತ್ ।
ಪ್ರೈಕ್ಷಂತ ಏವಾಹವಶೋಭಿನೌ ತೌ
ಯೋಧಾಸ್ತ್ವದೀಯಾಶ್ಚ ಪರೇ ಚ ಸರ್ವೇ ॥ ೧೭ ॥

ಎಲೈ ಭಾರತನೇ, ಅವರಿಗೆ ದೊಡ್ಡ ಯುದ್ಧವು ನಡೆಯಿತು. ಅಂತಹ ಯುದ್ಧವು ಹಿಂದೆ ಎಂದೂ ನಡೆದಿರಲಿಲ್ಲ. ನಿನ್ನ ಮತ್ತು ಪಾಂಡವರ ಎಲ್ಲ ಯೋಧರೂ ಯುದ್ಧದಲ್ಲಿ ಶೋಭಿಸುವ ಅವರನ್ನು ನೋಡುತ್ತಾ ನಿಂತರು.

ಅವಿದ್ಧ್ಯದೇನಂ ದಶಭಿಃ ಪೃಷತ್ಕೈ-
ರಲಂಬುಸೋ ರಾಜವರಃ ಪ್ರಸಹ್ಯ ।
ಅನಾಗತಾನೇವ ತು ತಾನ್ ಪೃಷತ್ಕಾನ್
ಚಿಚ್ಛೇದ ಬಾಣೈಃ ಶಿನಿಪುಂಗವೋಽಪಿ ॥ ೧೮ ॥

ರಾಜಶ್ರೇಷ್ಠನಾದ ಅಲಂಬುಸನು ಹತ್ತು ಬಾಣಗಳಿಂದ ಸಾತ್ಯಕಿಯನ್ನು ಬಲವಾಗಿ ಹೊಡೆದನು. ಶಿನಿಪುಂಗವನಾದರೂ ಆ ಬಾಣಗಳು ತನ್ನನ್ನು ತಲುಪುವುದಕ್ಕಿಂತ ಮೊದಲೇ ಅವುಗಳನ್ನು ತನ್ನ ಬಾಣಗಳಿಂದ ಕತ್ತರಿಸಿದನು.

ಪುನಃ ಸ ಬಾಣೈಸ್ತ್ರಿಭಿರಗ್ನಿಕಲ್ಪೈ-
ರಾಕರ್ಣಪೂರ್ಣೈರ್ನಿಶಿತೈಃ ಸುಪುಂಖೈಃ ।
ವಿವ್ಯಾಧ ದೇಹಾವರಣಂ ವಿದಾರ್ಯ
ತೇ ಸಾತ್ಯಕೇರಾವಿವಿಶುಃ ಶರೀರಮ್ ॥ ೧೯ ॥

ಪುನಃ ಅಲಂಬುಸನು ಒಳ್ಳೆಯ ಪುಂಖಗಳನ್ನು ಹೊಂದಿದ್ದ ಅಗ್ನಿಸದೃಶವಾದ ಮೂರು ನಿಶಿತವಾದ ಬಾಣಗಳನ್ನು ಹೆದೆಯನ್ನು ಕಿವಿಯವರೆಗೂ ಎಳೆದು ಪ್ರಯೋಗಿಸಿದನು. ಅವು ಸಾತ್ಯಕಿಯ ಕವಚವನ್ನು ಭೇದಿಸಿ ಅವನ ಶರೀರವನ್ನು ಪ್ರವೇಶಿಸಿದವು.

ತೈಃ ಕಾಯಮಸ್ಯಾಗ್ನ್ಯನಿಲಪ್ರಭಾವೈ-
ರ್ವಿದಾರ್ಯ ಬಾಣೈರಪರೈರ್ಜ್ವಲಬ್ಧಿಃ ।
ಆಜಘ್ನಿವಾಂಸ್ತಾನ್ ರಜತಪ್ರಕಾಶಾ-
ನಶ್ವಾಂಶ್ಚತುರ್ಭಿಶ್ಚತುರಃ ಪ್ರಸಹ್ಯ ॥ ೨೦ ॥

ಅವುಗಳಿಂದಲೂ ಮತ್ತು ಜ್ವಲಿಸುವ ಬೇರೆ ಸೂರ್ಯಾಗ್ನಿ ಸದೃಶವಾದ ದೀಪ್ತವಾದ ಬಾಣಗಳಿಂದಲೂ ಅವನ ಶರೀರವನ್ನು ಭೇದಿಸಿ ಅಲಂಬುಸನು ನಾಲ್ಕು ಬಾಣಗಳಿಂದ ರಜತವರ್ಣದ ಅವನ ನಾಲ್ಕು ಅಶ್ವಗಳನ್ನು ಬಲವಾಗಿ ಹೊಡೆದನು.

ತಥಾ ತು ತೇನಾಭಿಹತಸ್ತರಸ್ವೀ
ನಪ್ತಾ ಶಿನೇಶ್ಚಕ್ರಧರಪ್ರಭಾವಃ ।
ಅಲಂಬುಸಸ್ಯೋತ್ತಮವೇಗವದ್ಭಿ-
ರ್ಹಯಾಂಶ್ಚತುರ್ಭಿರ್ನಿಜಘಾನ ಬಾಣೈಃ ॥ ೨೧ ॥

ಆ ರೀತಿಯಲ್ಲಿ ಅವನಿಂದ ಹೊಡೆಯಲ್ಪಟ್ಟ ವೇಗಶಾಲಿಯೂ, ಕೃಷ್ಣನಿಗೆ ಸದೃಶವಾದ ಪ್ರಭಾವವನ್ನು ಹೊಂದಿದವನೂ ಆದ ಸಾತ್ಯಕಿಯು ಉತ್ತಮ ವೇಗವನ್ನು ಹೊಂದಿದ ನಾಲ್ಕು ಬಾಣಗಳಿಂದ ಅಲಂಬುಸನ ರಥದ ಅಶ್ವಗಳನ್ನು ಕೊಂದನು.

ಅಥಾಸ್ಯ ಸೂತಸ್ಯ ಶಿರೋ ನಿಕೃತ್ಯ
ಭಲ್ಲೇನ ಕಾಲಾನಲಸನ್ನಿಭೇನ ।
ಸಕುಂಡಲಂ ಪೂರ್ಣಶಶಿಪ್ರಕಾಶಂ
ಭ್ರಾಜಿಷ್ಣು ವಕ್ತ್ರಂ ನಿಚಕರ್ತ ದೇಹಾತ್ ॥ ೨೨ ॥

ಅನಂತರ ಕಾಲಾಗ್ನಿಯನ್ನು ಹೋಲುವ ಭಲ್ಲದಿಂದ ಅವನ ಸಾರಥಿಯ ಶಿರಸ್ಸನ್ನು ಕತ್ತರಿಸಿ, ಕುಂಡಲಸಹಿತವಾದ ಪೂರ್ಣಚಂದ್ರ ಪ್ರಕಾಶವನ್ನು ಹೊಂದಿದ ಅವನ ಶಿರಸ್ಸನ್ನೂ ಸಹ ದೇಹದಿಂದ ಕತ್ತರಿಸಿದನು.

ನಿಹತ್ಯ ತಂ ಪಾರ್ಥಿವಪುತ್ರಪೌತ್ರಂ
ಸಂಖೇ ಮಧೂನಾಮೃಷಭಃ ಪ್ರಮಾಥೀ ।
ತತೋಽನ್ವಯಾದರ್ಜುನಮೇವ ವೀರಃ
ಸೈನ್ಯಾನಿ ರಾಜಂಸ್ತವ ಸನ್ನಿವಾರ್ಯ ॥ ೨೩ ॥

ರಾಜನ ಮರಿಮಗನಾದ ಅಲಂಬುಸನನ್ನು ರಣರಂಗದಲ್ಲಿ ಕೊಂದು, ಶತ್ರುಗಳನ್ನು ಮರ್ದಿಸುವವನಾದ, ಮನುಜಶ್ರೇಷ್ಠನಾದ, ವೀರನಾದ ಸಾತ್ಯಕಿಯು ನಿನ್ನ ಸೈನ್ಯಗಳನ್ನು ನಿವಾರಿಸುತ್ತಾ ಅರ್ಜುನನನ್ನೇ ಹಿಂಬಾಲಿಸಿದನು.

ಆನ್ವಾಗತಂ ವೃಷ್ಣಿವರಂ ಸಮೀಕ್ಷ್ಯ
ತಥಾರಿಮಧ್ಯೇ ಪರಿವರ್ತಮಾನಮ್ ।
ಘ್ನಂತಂ ಕುರೂಣಾಮಿಷುಭಿರ್ಬಲಾನಿ
ಪುನಃ ಪುನರ್ವಾಯುರಿವಾಭ್ರಪೂಗಾನ್ ॥ ೨೪ ॥

ಶತ್ರುಗಳ ಮಧ್ಯದಲ್ಲಿ ಸಂಚರಿಸುತ್ತಾ ವಾಯುವು ಮೋಡಗಳ ರಾಶಿಯನ್ನು ಪುನಃ ಪುನಃ ಚದುರಿಸಿದಂತೆ ತನ್ನ ಬಾಣಗಳಿಂದ ಶತ್ರುಸೈನ್ಯವನ್ನು ವಿನಾಶಗೊಳಿಸುತ್ತಿದ್ದ ವೃಷ್ಣಿವೀರನಾದ ಸಾತ್ಯಕಿಯನ್ನು ಯೋಧರು ನೋಡಿದರು.

ತತೋऽವಹನ್ ಸೈಂಧವಾಃ ಸಾಧು ದಾಂತಾ
ಗೋಕ್ಷೀರಕುಂದೇಂದುಹಿಮಪ್ರಕಾಶಾಃ ।
ಸುವರ್ಣಜಾಲಾವತತಾಃ ಸದಶ್ವಾ
ಯತೋ ಯತಃ ಕಾಮಯತೇ ನೃಸಿಂಹಃ ॥ ೨೫ ॥

ಆಗ ಗೋಕ್ಷೀರ-ಕುಂದಪುಷ್ಪ-ಚಂದ್ರ ಹಿಮಗಳಿಗೆ ಸಮಾನವಾದ ಶ್ವೇತವರ್ಣವನ್ನು ಹೊಂದಿದ, ಸಿಂಧುದೇಶದಲ್ಲಿ ಜನಿಸಿದ, ಪಳಗಿದ, ಅವನ ಸುವರ್ಣಜಾಲಗಳಿಂದ ಅಲಂಕೃತವಾದ ಶ್ರೇಷ್ಠವಾದ ಆಶ್ವಗಳು ಆ ನರಸಿಂಹನು ಬಯಸಿದ ಕಡೆಗೆ ರಥವನ್ನು ಚೆನ್ನಾಗಿ ಎಳೆದುಕೊಂಡು ಹೋದವು.

ಆಥಾತ್ಮಜಾಸ್ತೇ ಸಹಿತಾಭಿಪೇತು-
ರನ್ಯೇ ಚ ಯೋಧಾಸ್ತ್ವರಿತಾಸ್ತ್ವದೀಯಾಃ ।
ಕೃತ್ವಾ ಮುಖಂ ಭಾರತ ಯೋಧಮುಖ್ಯಂ
ದುಃಶಾಸನಂ ತ್ವತ್ಸುತಮಾಜಮೀಢ ॥ ೨೬ ॥

ಎಲೈ ಭಾರತನೇ, ಆಗ ನಿನ್ನ ಪುತ್ರರು ಮತ್ತು ಉಳಿದ ನಿನ್ನ ಯೋಧರು ತ್ವರೆಯನ್ನು ಮಾಡುತ್ತಾ ಎಲೈ ಆಜಮೀಢನೇ, ನಿನ್ನ ಪುತ್ರನಾದ ಶ್ರೇಷ್ಠಯೋಧನಾದ ದುಶ್ಶಾಸನನನ್ನು ಮುಂದೆ ಮಾಡಿಕೊಂಡು ಸಾತ್ಯಕಿಯ ಮೇಲೆ ಎರಗಿದರು.

ತೇ ಸರ್ವತಃ ಸಂಪರಿವಾರ್ಯ ಸಂಖೇ
ಶೈನೇಯಮಾಜಘ್ನುರನೀಕಸಾಹಾಃ ।
ಸ ಚಾಪಿ ತಾನ್ ಪ್ರವರಃ ಸಾತ್ವತಾನಾಂ
ನ್ಯವಾರಯದ್ ಬಾಣಜಾಲೇನ ವೀರಃ ॥ ೨೭ ॥

ಯುದ್ಧ ಸಹಿಷ್ಣುಗಳಾದ ಅವರು ರಣರಂಗದಲ್ಲಿ ಸಾತ್ಯಕಿಯನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದು ಬಾಣಗಳಿಂದ ಹೊಡೆದರು. ಸಾತ್ವತ ಪ್ರವರನೂ, ವೀರನೂ ಆದ ಸಾತ್ಯಕಿಯು ತನ್ನ ಬಾಣಗಳ ಸಮೂಹದಿಂದ ಅವರನ್ನು ತಡೆದನು.

ನಿವಾರ್ಯ ತಾಂಸ್ತೂರ್ಣಮಮಿತ್ರಘಾತೀ
ನಪ್ತಾ ಶಿನೇಃ ಪತ್ರಿಭಿರಗ್ನಿಕಲ್ಪೈಃ ।
ದುಃಶಾಸನಸ್ಯಾಪಿ ಜಘಾನ ವಾಹಾ-
ನುದ್ಯಮ್ಯ ಬಾಣಾಸನಮಾಜಮೀಢ ॥ ೨೮ ॥

ಎಲೈ ಅಜಮೀಢನೇ, ಶತ್ರುಘಾತಿಯಾದ ಸಾತ್ಯಕಿಯು ಅಗ್ನಿಸದೃಶವಾದ ಬಾಣಗಳಿಂದ ಅವರನ್ನು ನಿವಾರಿಸಿ ತನ್ನ ಧನುಸ್ಸನ್ನು ಎತ್ತಿ ದುಶ್ಶಾಸನನ ರಥದ ನಾಲ್ಕು ಕುದುರೆಗಳನ್ನು ಕೊಂದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚವಿಂಶತ್ಯಧಿಕಶತತಮೋಧ್ಯಾಯಃ ॥
॥ ಜಯದ್ರಥವಧಪರ್ವಣಿ ಏಕೋನಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತಾರನೆಯ ಅಧ್ಯಾಯ

ಸಾತ್ಯಕಿಯಿಂದ ಅರ್ಜುನನ ದರ್ಶನ.

ಸಂಜಯಃ

ತಮುದ್ಯತಂ ಮಹಾಬಾಹುಂ ದುಃಶಾಸನರಥಂ ಪ್ರತಿ ।
ತ್ವರಿತಂ ತ್ವರಣೀಯೇಷು ಧನಂಜಯಹಿತೈಷಿಣಮ್ ॥ ೧ ॥

ತ್ರಿಗರ್ತಾನಾಂ ಮಹೇಷ್ವಾಸಾಃ ಸುವರ್ಣವಿಕೃತಧ್ವಜಾಃ ।
ಸೇನಾಸಮುದ್ರಮಾವಿಷ್ಟಮಾನರ್ತಂ ಪರ್ಯವಾರಯನ್ ॥ ೨ ॥

ಸಂಜಯ– ಮಹಾಬಾಹುವೂ, ದುಶ್ಶಾಸನನ ರಥದ ಕಡೆಗೆ ಬರುತ್ತಿದ್ದವನೂ, ಧನಂಜಯನ ಹಿತೈಷಿಯೂ, ತ್ವರೆಯಿಂದ ಕೂಡಿದವರಲ್ಲಿ ಇನ್ನೂ ತ್ವರೆಯಿಂದ ಕೂಡಿದವನೂ, ಕೌರವಸೈನ್ಯವನ್ನು ಪ್ರವೇಶಿಸಿದವನೂ ಆದ ಸಾತ್ಯಕಿಯನ್ನು ಸುವರ್ಣಾಲಂಕೃತ ಧ್ವಜವನ್ನು ಹೊಂದಿದ ತ್ರಿಗರ್ತರ ಮಹಾಧನುರ್ಧಾರಿಗಳು ಸುತ್ತುವರಿದರು.

ಅಥೈನಂ ರಥವಂಶೇನ ಸರ್ವತಃ ಸನ್ನಿವಾರ್ಯ ತೇ ।
ಅವಾಕಿರನ್ ಶರವ್ರಾತೈಃ ಕ್ರುದ್ಧಾಃ ಪರಮಧನ್ವಿನಃ ॥ ೩ ॥

ಆನಂತರ ರಥಸಮೂಹಗಳಿಂದ ಅವನನ್ನು ಎಲ್ಲ ಕಡೆಗಳಿಂದಲೂ ತಡೆದರು. ಶ್ರೇಷ್ಠ ಧನುರ್ಧಾರಿಗಳಾದ ಅವರು ಕ್ರುದ್ಧರಾಗಿ ಅವನ ಮೇಲೆ ಬಾಣಗಳ ಸಮೂಹಗಳನ್ನು ಸುರಿಸಿದರು.

ಆಜಯದ್ ರಾಜಪುತ್ರಾಂಸ್ತಾನ್ ಯತಮಾನಾನ್ ಮಹಾರಣೇ ।
ಏಕಃ ಪಂಚಾಶತಂ ಶತ್ರೂನ್ ಸಾತ್ಯಕಿಃ ಸತ್ಯವಿಕ್ರಮಃ ॥ ೪ ॥

ಸಂಪ್ರಾಪ್ಯ ಭಾರತೀಮಧ್ಯಂ ತಳಘೋಷಸಮಾಕುಲಮ್ ।
ಅಸಿಶಕ್ತಿಗದಾಪೂರ್ಣಮಪ್ಲವಂ ಸಲಿಲಂ ಯಥಾ ॥ ೫ ॥

ಸತ್ಯಪರಾಕ್ರಮನಾದ ಸಾತ್ಯಕಿಯು ಹಸ್ತತಳ ಘೋಷದಿಂದ ಕೂಡಿದ, ಖಡ್ಗ-ಶಕ್ತಿ-ಗದೆಗಳಿಂದ ಪೂರ್ಣವಾದ, ನೌಕೆಯಿಲ್ಲದ ಸಮುದ್ರದಂತಿದ್ದ ಕೌರವಸೈನ್ಯದ ಮಧ್ಯಭಾಗವನ್ನು ಪ್ರವೇಶಿಸಿ, ಮಹಾಯುದ್ಧದಲ್ಲಿ ಪ್ರಯತ್ನಶೀಲರಾಗಿದ್ದ ಶೂರರಾದ ತ್ರಿಗರ್ತರ ಏವತ್ತು ರಾಜಕುಮಾರನನ್ನು ಒಬ್ಬನೇ ಜಯಿಸಿದನು.

ಅಥೈನಮನುವೃತ್ತಾಸ್ತು ತ್ರಿಗರ್ತಾ ಸಹಿತಾ ಪುನಃ ।
ತೀವ್ರೇಣ ರಥವಂಶೇನ ಮಹತಾ ಪರ್ಯವಾರಯನ್ ।
ಏಕರ್ಷಂತೋಽತಿಮಾತ್ರಾಣಿ ಚಾಪಾನಿ ಭರತರ್ಷಭ ॥ ೬ ॥

ಎಲೈ ಭರತಶ್ರೇಷ್ಠನೇ, ಆಗ ತ್ರಿಗರ್ತರು ಒಟ್ಟಾಗಿ ಅವನನ್ನು ಪುನಃ ಹಿಂಬಾಲಿಸಿ ತಮ್ಮ ಧನುಸ್ಸುಗಳನ್ನು ಎಳೆದು ಬಾಣಗಳನ್ನು ಪ್ರಯೋಗಿಸುತ್ತಾ ಘೋರವಾದ ತಮ್ಮ ದೊಡ್ಡ ರಥಸಮೂಹದಿಂದ ಅವನನ್ನು ತಡೆದರು.

ತತ್ಸಾದ್ಭುತಮಪಶ್ಯಾಮ ಶೈನೇಯಚರಿತಂ ರಣೇ ।
ಪ್ರತೀಚ್ಯಾಂ ದಿಶಿ ತಂ ದೃಷ್ಟ್ವಾ ಪ್ರಾಚ್ಯಾಂ ಪಶ್ಯಾಮ ಲಾಘವಾತ್ ॥ ೭ ॥

ಉದೀಚೀಂ ದಕ್ಷಿಣಾಂ ಪ್ರಾಚೀಂ ಪ್ರತೀಚೀಂ ಪ್ರಸೃತಸ್ತಥಾ ।
ನೃತ್ಯನ್ನಿವಾಚರಚ್ಛೂರೋ ಯಥಾ ರಥಶತಂ ತಥಾ ॥ ೮ ॥

ಸಾತ್ಯಕಿಯನ್ನು ನಾವು ಪಶ್ಚಿಮ ದಿಕ್ಕಿನಲ್ಲಿ ನೋಡಿ ಪುನಃ ಶೀಘ್ರವಾಗಿ ಪೂರ್ವ ದಿಕ್ಕಿನಲ್ಲಿ ನೋಡಿದೆವು. ಶೂರನಾದ ಅವನು ನೂರು ಮಹಾರಥರಂತೆ, ನೃತ್ಯವನ್ನು ಮಾಡುವವನಂತೆ, ಉತ್ತರ-ದಕ್ಷಿಣ-ಪೂರ್ವ-ಪಶ್ಚಿಮ ದಿಕ್ಕುಗಳಲ್ಲಿ ಚಲಿಸಿದನು. ಯುದ್ಧದುರ್ಮದನೂ, ವೀರನೂ ಆದ ಅವನು ಪುನಃ ಮಧ್ಯಭಾಗದಲ್ಲಿ ಕಾಣುತ್ತಿದ್ದನು. ನಾವು ಸಾತ್ಯಕಿಯ ಆ ಅದ್ಭುತ ಚರ್ಯೆಯನ್ನು ನೋಡಿದೆವು.

ತದ್ ದೃಷ್ಟ್ವಾ ಚರಿತಂ ತಸ್ಯ ಸಿಂಹವಿಕ್ರಾಂತಗಾಮಿನಃ ।
ಪುನರ್ಮಧ್ಯಗತೋ ವೀರ ಆಹವೇ ಯುದ್ಧದುರ್ಮದಃ ॥ ೮ ॥

ಏಕಃ ಪರ್ಯಚರದ್ ರಂಗೇ ಬಹುಧಾ ಸ ಮಹಾರಥಃ ।
ತ್ರಿಗರ್ತಾಃ ಸನ್ನ್ಯವರ್ತಂತ ಸಂತಪ್ತಾಃ ಸ್ವಜನಂ ಪ್ರತಿ ॥ ೯ ॥

ಮಹಾರಥನಾದ ಅವನೊಬ್ಬನೇ ಅನೇಕ ಮಹಾರಥರಂತೆ ರಣರಂಗದಲ್ಲಿ ಸಂಚರಿಸಿದನು. ಸಿಂಹಪರಾಕ್ರಮವನ್ನು ಹೊಂದಿ ಚಲಿಸುವ ಆ ಯುದ್ಧದುರ್ಮದನಾದ ವೀರನ ಚರಿತೆಯನ್ನು ನೋಡಿ ಸಂತಪ್ತರಾದ ತ್ರಿಗರ್ತರು ಹಿಂದೆ ಬಂದು ತಮ್ಮ ಯೋಧರ ಜೊತೆಯಲ್ಲಿ ಸೇರಿದರು.

ತಮನ್ಯೇ ಶೂರಸೇನಾನಾಂ ಶೂರಾಃ ಸಂಖೇ ನ್ಯವಾರಯನ್ ।
ನಿಯಚ್ಛಂತಃ ಶರವ್ರಾತೈರ್ಮತ್ತಂ ದ್ವಿಪಮಿವಾಂಕುಶೈಃ ॥ ೧೦ ॥

ಆಗ ಶೂರಸೇನರ ಬೇರೆ ಶೂರರು ಅಂಕುಶಗಳಿಂದ ಮದಗಜವನ್ನು ನಿಯಂತ್ರಿಸುವಂತೆ ತಮ್ಮ ಬಾಣಸಮೂಹಗಳಿಂದ ಸಾತ್ಯಕಿಯನ್ನು ನಿವಾರಿಸುತ್ತಾ ರಣರಂಗದಲ್ಲಿ ಅವನನ್ನು ತಡೆದರು.

ತಾನ್ ವ್ಯವಾಹರದಾಯಸ್ತಾನ್ ಮುಹೂರ್ತಮಿವ ಸಾತ್ಯಕಿಃ ।
ತತಃ ಕಳಿಂಗೈರ್ಯುಯುಧೇ ಸೋಽಚಿಂತ್ಯಬಲವಿಕ್ರಮಃ ॥ ೧೧ ॥

ಶ್ರೇಷ್ಠವಾದ ನಡತೆಯುಳ್ಳ ಸಾತ್ಯಕಿಯು ಅವರಲ್ಲಿ ಸೇರಿ, ಒಂದು ಮುಹೂರ್ತದವರೆಗೆ ಯುದ್ಧವಿನೋದವನ್ನು ಮಾಡಿ, ಅಚಿಂತ್ಯಬಲ, ಪರಾಕ್ರಮವುಳ್ಳ ಅವನು ಅನಂತರ ಕಳಿಂಗರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತೈರ್ವಾರಿತೋ ಮಹಾರಾಜ ಸಾತ್ಯಕಿಃ ಪರ್ಯವಾರಯತ್ ।
ನಿಜಘಾನ ಬಹೂನ್ ಯೋಧಾನ್ ಶತಶೋಽಥ ಸಹಸ್ರಶಃ ॥ ೧೨ ॥

ಎಲೈ ಮಹಾರಾಜನೇ, ಅವರಿಂದ ತಡೆಯಲ್ಪಟ್ಟ ಸಾತ್ಯಕಿಯು ಅವರನ್ನು ತಡೆದು ಅವರ ಅನೇಕ ಯೋಧರನ್ನು ನೂರಾರು-ಸಾವಿರಾರು ಸಂಖ್ಯೆಯಲ್ಲಿ ಕೊಂದನು.

ತೇ ಹತಾ ನಿಪತಂತಿ ಸ್ಮ ಪ್ರಮೃಷ್ಟಾ ದೀರ್ಘಬಾಹುನಾ ।
ತತಃ ಪ್ರಾಯಾದಸಂಭ್ರಾಂತೋ ದದರ್ಶ ಚ ಧನಂಜಯಮ್ ॥ ೧೩ ॥

ದೀರ್ಘಬಾಹುವಾದ ಸಾತ್ಯಕಿಯಿಂದ ತಾಡಿತರಾಗಿ ಅವರು ವಿನಾಶವನ್ನು ಹೊಂದಿ ಭೂಮಿಯ ಮೇಲೆ ಬಿದ್ದರು. ಅನಂತರ ಸಾತ್ಯಕಿಯು ಯಾವ ಗಾಬರಿಯೂ ಇಲ್ಲದೆ ಮುಂದೆ ಹೋಗಿ ಅರ್ಜುನನನ್ನು ನೋಡಿದನು.

ತಾಂ ಚ ಸೇನಾಮತಿಕ್ರಮ್ಯ ಕಳಿಂಗಾನಾಂ ದುರತ್ಯಯಾಮ್ ।
ಅಥ ಪಾರ್ಥಂ ಮಹಾಬಾಹುರ್ಧನಂಜಯಮುಪಾಸದತ್ ॥ ೧೪ ॥

ಸಾತ್ಯಕಿಯು ದಾಟಲು ಅಸಾಧ್ಯವಾದ ಕಳಿಂಗರ ಸೇನೆಯನ್ನು ದಾಟಿ, ಮಹಾಬಾಹುವಾದ ಅವನು ಅರ್ಜುನನನ್ನು ಸಮೀಪಿಸಿದನು.

ತರನ್ನಿವ ಜಲೇ ಶ್ರಾಂತೋ ಯಥಾ ಸ್ಥಲಮುಪೇಯಿವಾನ್ ।
ತಂ ದೃಷ್ಟ್ವಾ ಪುರುಷವ್ಯಾಘ್ರಂ ಯುಯುಧಾನಃ ಸಮಾಶ್ವಸತ್ ॥ ೧೫ ॥

ನೀರಿನಲ್ಲಿ ಈಜುವವನು ದಣಿದು ತೀರವನ್ನು ಸೇರುವಂತೆ ಪುರುಷಶ್ರೇಷ್ಠನಾದ ಅರ್ಜುನನನ್ನು ನೋಡಿ ಸಾತ್ಯಕಿಯು ಸಮಾಧಾನವನ್ನು ಹೊಂದಿದನು.

ತಮಾಯಾಂತಮಭಿಪ್ರೇಕ್ಷ್ಯ ಕೇಶವೋಽರ್ಜುನಮಬ್ರವೀತ್ ।
ಅಸಾವಾಯಾತಿ ಶೈನೇಯಸ್ತವ ಪಾರ್ಥ ಪದಾನುಗಃ ॥ ೧೬ ॥

ಅವನು ಬರುತ್ತಿರುವುದನ್ನು ನೋಡಿದ ಕೃಷ್ಣನು ಅರ್ಜುನನನ್ನು ಕುರಿತು ಹೇಳಿದನು- ಎಲೈ ಅರ್ಜುನನೇ, ನಿನ್ನನ್ನು ಹುಡುಕಿಕೊಂಡು ಈ ಸಾತ್ಯಕಿಯು ಬರುತ್ತಿದ್ದಾನೆ.

ಏಷ ಶಿಷ್ಯಃ ಸಖಾ ಚೈವ ತವ ಸತ್ಯಪರಾಕ್ರಮಃ ।
ಸರ್ವಾನ್ ಯೋಧಾಂಸ್ತೃಣೀಕೃತ್ಯ ವಿಜಿಗ್ಯೇ ಪುರುಷರ್ಷಭಃ ॥ ೧೭ ॥

ಸತ್ಯಪರಾಕ್ರಮನೂ, ನಿನ್ನ ಶಿಷ್ಯನೂ, ಸ್ನೇಹಿತನೂ, ಪುರುಷಶ್ರೇಷ್ಠನೂ ಆದ ಇವನು ಎಲ್ಲಯೋಧರನ್ನೂ ತೃಣೀಕರಿಸಿ ಜಯಿಸಿದ್ದಾನೆ.

ಏಷ ಕೌರವಯೋಧಾನಾಂ ಕೃತ್ವಾ ಘೋರಮುಪದ್ರವಮ್ ।
ತವ ಪ್ರಾಣೈಃ ಪ್ರಿಯತರಃ ಕಿರೀಟಿನ್ ಏತಿ ಸಾತ್ಯಕಿಃ ॥ ೧೮ ॥

ಎಲೈ ಅರ್ಜುನನೇ, ನಿನ್ನ ಪ್ರಾಣಕ್ಕಿಂತಲೂ ಪ್ರಿಯನಾದ ಈ ಸಾತ್ಯಕಿಯು ಕೌರವ ಸೈನಿಕರಿಗೆ ಘೋರವಾದ ಉಪದ್ರವವನ್ನು ಮಾಡಿ ಬರುತ್ತಿದ್ದಾನೆ.

ಏಷ ದ್ರೋಣಂ ತಥಾ ಭೋಜಂ ಕೃತವರ್ಮಾಣಮೇವ ಚ ।
ಕದರ್ಥೀಕೃತ್ಯ ಏಶಿಷ್ಯೈ ಫಲ್ಗುನಾಭ್ಯೇತಿ ಸಾತ್ಯಕಿಃ ॥ ೧೯ ॥

ಎಲೈ ಫಲ್ಗುನನೇ, ಈ ಸಾತ್ಯಕಿಯು ದ್ರೋಣರನ್ನು ಮತ್ತು ಭೋಜಕುಲದ ಕೃತವರ್ಮನನ್ನು ತೃಣೀಕರಿಸಿ ನಿನ್ನ ಬಳಿಗೆ ಬರುತ್ತಿದ್ದಾನೆ.

ಧರ್ಮರಾಜಪ್ರಿಯಾನ್ವೇಷೀ ಹತ್ವಾ ಯೋಧಾನ್ ವರಾನ್ ವರಾನ್ ।
ಶೂರಶ್ಚೈವ ಕೃತಾಸ್ತ್ರಶ್ಚ ಫಲ್ಗುನಾಭ್ಯೇತಿ ಸಾತ್ಯಕಿಃ ॥ ೨೦ ॥

ಎಲೈ ಫಲ್ಗುನನೇ, ಧರ್ಮರಾಜನಿಗೆ ಪ್ರಿಯವನ್ನು ಮಾಡಲು ಬಯಸಿದ ಶೂರನೂ ಮತ್ತು ಅಸ್ತ್ರಜ್ಞನೂ ಆದ ಸಾತ್ಯಕಿಯು ಶತ್ರುಸೈನ್ಯದಲ್ಲಿ ಶ್ರೇಷ್ಠರಾದ ಶ್ರೇಷ್ಠರಾದ ಯೋಧರನ್ನು ಕೊಂದು ನಿನ್ನ ಬಳಿಗೆ ಬರುತ್ತಿದ್ದಾನೆ.

ಕೃತ್ವಾ ಸುದುಷ್ಕರಂ ಕರ್ಮ ಸೈನ್ಯಮಧ್ಯೇ ಮಹಾಬಲಃ ।
ತವ ದರ್ಶನಮನ್ವಿಚ್ಛನ್ ಪಾಂಡವಾಭ್ಯೇತಿ ಸಾತ್ಯಕಿಃ ॥ ೨೧ ॥

ಎಲೈ ಪಾಂಡವನೇ, ಮಹಾಬಲನಾದ ಸಾತ್ಯಕಿಯು ಸೈನ್ಯಮಧ್ಯದಲ್ಲಿ ದುಷ್ಕರವಾದ ಕರ್ಮವನ್ನು ಮಾಡಿ ನಿನ್ನ ದರ್ಶನವನ್ನು ಬಯಸಿ ಬರುತ್ತಿದ್ದಾನೆ.

ಬಹೂನೇಕರಥೇನಾಜೌ ಯೋಧಯಿತ್ವಾ ಮಹಾರಥಾನ್ ।
ಆಚಾರ್ಯಪ್ರಮುಖಾನ್ ಪಾರ್ಥ ಆಯಾತ್ಯೇಷ ಹಿ ಸಾತ್ಯಕಿಃ ॥ ೨೨ ॥

ಎಲೈ ಪಾರ್ಥನೇ, ದ್ರೋಣಾಚಾರ್ಯರೇ ಮೊದಲಾದ ಅನೇಕ ಮಹಾರಥರನ್ನು ಏಕರಥನಾಗಿ ಯುದ್ಧ ಮಾಡಿ (ಸೋಲಿಸಿ) ಈ ಸಾತ್ಯಕಿಯು ಬರುತ್ತಿದ್ದಾನೆ.

ಸ್ವಬಾಹುಬಲಮಾಶ್ರಿತ್ಯ ವಿದಾರ್ಯ ಚ ವರೂಥಿನೀಮ್ ।
ಪ್ರೇಷಿತೋ ಧರ್ಮಪುತ್ರೇಣ ಪಾರ್ಥೈಷೋಽಭ್ಯೇತಿ ಸಾತ್ಯಕಿಃ ॥ ೨೩ ॥

ಎಲೈ ಪಾರ್ಥನೇ, ಧರ್ಮರಾಜನಿಂದ ಕಳುಹಿಸಲ್ಪಟ್ಟು ತನ್ನ ಬಾಹುಬಲದಿಂದ ಕೌರವ ಸೇನೆಯನ್ನು ಭಗ್ನಗೊಳಿಸಿ ಈ ಸಾತ್ಯಕಿಯು ಬರುತ್ತಿದ್ದಾನೆ.

ಯಸ್ಯ ನಾಸ್ತಿ ಸಮೋ ಯೋಧಃ ಕೌರವೇಷು ಕಥಂಚನ ।
ಸೋಽಯಮಾಯಾತಿ ಕೌಂತೇಯ ಸಾತ್ಯಕಿಃ ಸತ್ಯವಿಕ್ರಮಃ ॥ ೨೪ ॥

ಎಲೈ ಕೌಂತೇಯನೇ, ಕೌರವ ಸೈನ್ಯದಲ್ಲಿ ಯಾವನಿಗೆ ಸಮನಾದ ಯೋಧನಿಲ್ಲವೋ ಅಂತಹ ಈ ಸತ್ಯಪರಾಕ್ರಮನಾದ ಸಾತ್ಯಕಿಯು ಬರುತ್ತಿದ್ದಾನೆ.

ಪ್ರಿಯಶಿಷ್ಯಶ್ಚ ತೇ ಪಾರ್ಥ ತ್ವಯಾ ತುಲ್ಯಪರಾಕ್ರಮಃ ।
ವಿದಾರ್ಯ ಕೌರವೀಂ ಸೇನಾಮೇಷ ಆಯಾತಿ ಸತ್ಯಕಃ ॥ ೨೫ ॥

ಎಲೈ ಪಾರ್ಥನೇ, ನಿನ್ನ ಪ್ರಿಯಶಿಷ್ಯನೂ, ನಿನಗೆ ಸಮಾನವಾದ ಪರಾಕ್ರಮ ಉಳ್ಳವನೂ ಆದ ಸಾತ್ಯಕಿಯು ಕೌರವ ಸೇನೆಯನ್ನು ಭಗ್ನಗೊಳಿಸಿ ಬರುತ್ತಿದ್ದಾನೆ.

ಕುರುಸೈನ್ಯಾದ್ ವಿಮುಕ್ತೋ ವೈ ಸಿಂಹೋ ಮಧ್ಯಾದ್ ಗವಾಮಿವ ।
ನಿಹತ್ಯ ಬಹುಲಾಃ ಸೇನಾಃ ಪಾರ್ಥೈಷೋಽಭ್ಯೇತಿ ಸಾತ್ಯಕಿಃ ॥ ೨೬ ॥

ಎಲೈ ಪಾರ್ಥನೇ, ಗೋವುಗಳ ಮಧ್ಯದಿಂದ ಸಿಂಹವು ಹೊರಗೆ ಬಂದಂತೆ ಕೌರವರ ಬಹಳ ಸೈನ್ಯವನ್ನು ಕೊಂದು ಆ ಸೈನ್ಯದ ಮಧ್ಯದಿಂದ ಹೊರಗೆ ಬಂದ ಈ ಸಾತ್ಯಕಿಯು ನಿನ್ನ ಕಡೆಗೆ ಬರುತ್ತಿದ್ದಾನೆ.

ಏಷ ರಾಜಸಹಸ್ರಾಣಾಂ ವಕ್ತ್ರೈಃ ಪಂಕಜಸನ್ನಿಭೈಃ ।
ಆಸ್ತೀರ್ಯ ವಸುಧಾಂ ಪಾರ್ಥ ಕ್ಷಿಪ್ರಮಾಯಾತಿ ಸಾತ್ಯಕಿಃ ॥ ೨೭ ॥

ಎಲೈ ಪಾರ್ಥನೇ, ಈ ಸಾತ್ಯಕಿಯು ಸಹಸ್ರರಾಜರ ಪದ್ಮಸದೃಶವಾದ ಮುಖಗಳಿಂದ ಭೂಮಿಯನ್ನು ಹರಡಿ ಶೀಘ್ರವಾಗಿ ಬರುತ್ತಿದ್ದಾನೆ.

ಏಷ ದುರ್ಯೋಧನಂ ಜಿತ್ವಾ ಭ್ರಾತೃಭಃ ಸಹಿತಂ ರಣೇ ।
ನಿಹತ್ಯ ಜಲಸಂಧಂ ಚ ಕ್ಷಿಪ್ರಮಾಯಾತಿ ಸಾತ್ಯಕಿಃ ॥ ೨೮ ॥

ಈ ಸಾತ್ಯಕಿಯು ಸಹೋದರರಿಂದ ಸಹಿತನಾದ ದುರ್ಯೋಧನನನ್ನು ರಣರಂಗದಲ್ಲಿ ಜಯಿಸಿ, ಜಲಸಂಧನನ್ನು ಕೊಂದು ಶೀಘ್ರವಾಗಿ ಬರುತ್ತಿದ್ದಾನೆ.

ರುಧಿರೌಘವತೀಂ ಕೃತ್ವಾ ನದೀಂ ಶೋಣಿತಕರ್ದಮಾಮ್ ।
ತೃಣವನ್ನಸ್ಯ ಕೌರವ್ಯಾನೇಷ ಆಯಾತಿ ಸಾತ್ಯಕಿಃ ॥ ೨೯ ॥

ರಕ್ತಪ್ರವಾಹವುಳ್ಳ ಮತ್ತು ರಕ್ತದ ಕೆಸರುಳ್ಳ ನದಿಯನ್ನು ಸೃಷ್ಟಿಸಿ ಕೌರವರನ್ನು ತೃಣದಂತೆ ಪಕ್ಕಕ್ಕೆ ಸರಿಸಿ ಈ ಸಾತ್ಯಕಿಯು ಬರುತ್ತಿದ್ದಾನೆ (ಎಂದು ಹೇಳಿದನು).

ಸಂಜಯಃ

ತತೋಽಪ್ರಹೃಷ್ಟಃ ಕೌಂತೇಯಃ ಕೇಶವಂ ವಾಕ್ಯಮಬ್ರವೀತ್ ।
ನ ಮೇ ಪ್ರಿಯಂ ಮಹಾಬಾಹೋ ಯನ್ನಾಮಭ್ಯೇತಿ ಸಾತ್ಯಕಿಃ ॥ ೩೦ ॥

ಆಗ ವಿಷಾದಗೊಂಡ ಅರ್ಜುನನು ಕೇಶವನನ್ನು ಕುರಿತು- 'ಎಲೈ ಮಹಾಬಾಹುವೇ, ಸಾತ್ಯಕಿಯು ನನ್ನ ಬಳಿಗೆ ಬರುತ್ತಿರುವುದು ನನಗೆ ಪ್ರಿಯವಾದುದಲ್ಲ' ಎಂದು ಹೇಳಿದನು.

ನ ಹಿ ಜಾನಾಮಿ ವೃತ್ತಾಂತಂ ಧರ್ಮರಾಜಸ್ಯ ಕೇಶವ ।
ಸಾತ್ವತೇನ ವಿಹೀನಃ ಸ ಯದಿ ಜೀವತಿ ವಾ ನ ವಾ ॥ ೩೧ ॥

ಎಲೈ ಕೇಶವನೇ, ಸಾತ್ಯಕಿಯಿಂದ ರಹಿತನಾದ ಧರ್ಮರಾಜನು ಜೀವಿಸಿದ್ದಾನೆಯೇ ಇಲ್ಲವೇ ಎಂದು ಅವನ ವಾರ್ತೆಯನ್ನು ನಾನು ತಿಳಿಯುತ್ತಿಲ್ಲ.

ಏತೇನ ಹಿ ಮಹಾಬಾಹೋ ರಕ್ಷಿತವ್ಯಃ ಸ ಪಾರ್ಥಿವಃ ।
ತಮೇಷ ಕಥಮುತ್ಸೃಜ್ಯ ಮಮ ಕೃಷ್ಣ ಪದಾನುಗಃ ॥ ೩೨ ॥

ಎಲೈ ಕೃಷ್ಣನೇ, ಮಹಾಬಾಹುವೇ, ಇವನು ಧರ್ಮರಾಜನನ್ನು ರಕ್ಷಿಸಬೇಕಾಗಿದ್ದಿತು. ಅವನನ್ನು ಬಿಟ್ಟು ನನ್ನನ್ನು ಹುಡುಕಿಕೊಂಡು ಇವನು ಏಕೆ ಬಂದಿದ್ದಾನೆ?

ರಾಜಾ ದ್ರೋಣಾಯ ಚೋತ್ಸೃಷ್ಟಃ ಸೈಂಧವಶ್ಚಾನಿಪಾತಿತಃ ।
ಪ್ರತ್ಯುದ್ಯಾತಶ್ಚ ಶೈನೇಯಮೇಷ ಭೂರಿಶ್ರವಾ ರಣೇ ॥ ೩೩ ॥

ಧರ್ಮರಾಜನು ದ್ರೋಣರ ಕೈಗೆ ಸಿಲುಕಿದ್ದಾನೆ. ಸೈಂಧವನನ್ನು ಇನ್ನೂ ಸಂಹಾರ ಮಾಡಿಲ್ಲ. ಭೂರಿಶ್ರವನು ರಣರಂಗದಲ್ಲಿ ಸಾತ್ಯಕಿಯ ಮೇಲೆ ಎರಗುತ್ತಿದ್ದಾನೆ.

ಸೋಽಯಂ ಗುರುತರೋ ಭಾರಃ ಸೈಂಧವಾನ್ಮೇ ಸಮಾಹಿತಃ ।
ಜ್ಞಾತವ್ಯಶ್ಚ ಹಿ ಮೇ ರಾಜಾ ರಕ್ಷಿತವ್ಯಶ್ಚ ಸಾತ್ಯಕಿಃ ॥ ೩೪ ॥

ಜಯದ್ರಥಶ್ಚ ಹಂತವ್ಯೋ ಲಂಬತೇ ಚ ದಿವಾಕರಃ ।
ಶ್ರಾಂತಶ್ಚೈಷ ಮಹಾಬಾಹುರಲ್ಪಪ್ರಾಣಶ್ಚ ಸಾಂಪ್ರತಮ್ ॥ ೩೫ ॥

ಆದ್ದರಿಂದ ಈಗ ಸೈಂಧವನ ವಧೆಗಿಂತಲೂ ದೊಡ್ಡ ಭಾರವು ನನ್ನ ಮೇಲೆ ಬಿದ್ದಿದೆ. ನಾನು ರಾಜನ ವಾರ್ತೆಯನ್ನು ತಿಳಿದುಕೊಳ್ಳಬೇಕು. ಸಾತ್ಯಕಿಯನ್ನು ರಕ್ಷಿಸಬೇಕು. ಜಯದ್ರಥನನ್ನೂ ಕೊಲ್ಲಬೇಕು. ಸೂರ್ಯನು ಇಳಿಮುಖನಾಗುತ್ತಿದ್ದಾನೆ. ಮಹಾಬಾಹುವಾದ ಸಾತ್ಯಕಿಯು ದಣಿದು ಈಗ ಅಲ್ಪಶಕ್ತಿಯುಳ್ಳವನಾಗಿದ್ದಾನೆ.

ಪರಿಶ್ರಾಂತಾ ಹಯಾಶ್ಚಾಸ್ಯ ಹಯಯಂತಾ ಚ ಮಾಧವ ।
ನ ಚ ಭೂರಿಶ್ರವಾಃ ಶ್ರಾಂತಃ ಸಸಹಾಯಶ್ಚ ಕೇಶವ ॥ ೩೬ ॥

ಎಲೈ ಮಾಧವನೇ, ಅವನ ಕುದುರೆಗಳು ದಣಿದಿವೆ, ಸಾರಥಿಯೂ ದಣಿದಿದ್ದಾನೆ. ಎಲೈ ಕೇಶವನೇ, ಭೂರಿಶ್ರವನು ದಣಿದಿಲ್ಲ ಮತ್ತು ಸಹಾಯದಿಂದ ಯುಕ್ತನಾಗಿದ್ದಾನೆ.

ಅಪೀದಾನೀಂ ಭವೇದಸ್ಯ ಕ್ಷೇಮಮಸ್ಮಿನ್ ಸಮಾಗಮೇ ।
ಕಚ್ಚಿನ್ನ ಸಾಗರಂ ತೀರ್ತ್ವಾ ಸಾತ್ಯಕಿಃ ಸತ್ಯವಿಕ್ರಮಃ ।
ಗೋಷ್ಪದಂ ಪ್ರಾಪ್ಯ ಸೀದೇತ ಮಹೌಜಾಃ ಶಿನಿಪುಂಗವಃ ॥ ೩೭ ॥

ಈ ಸಮಾಗಮದಲ್ಲಿ ಈಗ ಸಾತ್ಯಕಿಗೆ ಕ್ಷೇಮವಾದೀತೆ? ಸತ್ಯಪರಾಕ್ರಮನಾದ, ಮಹಾಸಾಮರ್ಥ್ಯವನ್ನು ಹೊಂದಿದ ಶಿನಿಪುಂಗವನಾದ ಸಾತ್ಯಕಿಯು ಸಾಗರವನ್ನು ದಾಟಿ ಗೋಷ್ಪದ ಪರಿಮಿತವಾದ ನೀರಿನಲ್ಲಿ ನಾಶವನ್ನು ಹೊಂದುವುದಿಲ್ಲವಷ್ಟೆ?

ಅಪಿ ಕೌರವಮುಖ್ಯೇನ ಕೃತಾಸ್ತ್ರೇಣ ಮಹಾತ್ಮನಾ ।
ಸಮೇತ್ಯ ಭೂರಿಶ್ರವಸಾ ಸ್ಪರ್ಧಿಮಾನ್ ಸಾತ್ಯಕಿರ್ಭವೇತ್ ॥ ೩೮ ॥

ಕೌರವಶ್ರೇಷ್ಠನೂ, ಅಸ್ತ್ರಜ್ಞನೂ, ಮಹಾತ್ಮನೂ ಆದ ಭೂರಿಶ್ರವನ ಸಮಾಗಮವನ್ನು ಹೊಂದಿ ಸಾತ್ಯಕಿಯು ಕ್ಷೇಮದಿಂದ ಇರುತ್ತಾನೆಯೇ?

ವ್ಯತಿಕ್ರಮಮಿಮಂ ಮನ್ಯೇ ಧರ್ಮರಾಜಸ್ಯ ಕೇಶವ ।
ಆಚಾರ್ಯಾದ್ ಭಯಮುತ್ಸೃಜ್ಯ ಯಃ ಪ್ರೇಷಯತಿ ಸಾತ್ಯಕಿಮ್ ॥೩೯॥

ಎಲೈ ಕೇಶವನೇ, ದ್ರೋಣಾಚಾರ್ಯರ ಭಯವನ್ನು ಬಿಟ್ಟು ಸಾತ್ಯಕಿಯನ್ನು ಕಳುಹಿಸಿದ ಧರ್ಮರಾಜನು ತಪ್ಪನ್ನು ಮಾಡಿದ್ದಾನೆ ಎಂದು ಭಾವಿಸುತ್ತೇನೆ.

ಗೃಹಣಂ ಧರ್ಮರಾಜಸ್ಯ ಖಗಃ ಶ್ಯೇನ ಇವಾಮಿಷಮ್ ।
ನಿತ್ಯಮಾಶಂಸತೇ ದ್ರೋಣಃ ಕಚ್ಚಿತ್ ಸ್ಯಾತ್ ಕುಶಲೀ ನೃಪಃ ॥ ೪೦॥

ಶ್ಯೇನ ಆಕಾಶದಲ್ಲಿರುವ ಪಕ್ಷಿಯು ಆಮಿಷವನ್ನು ಬಯಸಿದಂತೆ ದ್ರೋಣರು ಧರ್ಮರಾಜನ ಪ್ರಾಣವನ್ನು ಬಯಸುತ್ತಿದ್ದಾರೆ. ಈ ದಿನ ರಾಜನು ಕ್ಷೇಮದಿಂದ ಇರುವನೆ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಟ್‌ವಿಂಶತ್ಯಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೇಳನೆಯ ಅಧ್ಯಾಯ

ಸಾತ್ಯಕಿ ಮತ್ತು ಭೂರಿಶ್ರವಸರ ಯುದ್ಧ. ಅರ್ಜುನನಿಂದ
ಭೂರಿಶ್ರವಸನ ದಕ್ಷಿಣ ಬಾಹುವಿನ ಛೇದ.

ಸಂಜಯಃ

ತಮಾಪತಂತಂ ಸಂಪ್ರೇಕ್ಷ್ಯ ಸಾತ್ವತಂ ಯುದ್ಧದುರ್ಮದಮ್ ।
ಕ್ರೋಧಾದ್ ಭೂರಿಶ್ರವಾ ರಾಜನ್ ಸಹಸಾ ಸಮುಪಾದ್ರವತ್ ॥ ೧ ॥

ಸಂಜಯ– ಎಲೈ ರಾಜನೇ, ಯುದ್ಧದುರ್ಮದನಾದ ಸಾತ್ಯಕಿಯು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಭೂರಿಶ್ರವನು ಕೋಪದಿಂದ ತಕ್ಷಣ ಅವನ ಕಡೆಗೆ ಧಾವಿಸಿದನು.

ತಮಬ್ರವೀನ್ಮಹಾಬಾಹುಃ ಕೌರವ್ಯಃ ಶಿನಿಪುಂಗವಮ್ ।
ಅದ್ಯ ಪ್ರಾಪ್ತೋಽಸಿ ದಿಷ್ಟ್ಯಾ ಮೇ ಚಕ್ಷುರ್ವಿಷಯಮಿತ್ಯುತ ॥ ೨ ॥

ಮಹಾಬಾಹುವಾದ, ಕುರುಕುಲೋತ್ಪನ್ನನಾದ ಭೂರಿಶ್ರವನು ಸಾತ್ಯಕಿಯನ್ನು ಕುರಿತು 'ದೇವರ ದಯದಿಂದ ಇವತ್ತು ನನ್ನ ದೃಷ್ಟಿಗೆ ಗೋಚರನಾಗಿದ್ದೀಯೆ' ಎಂದು ಹೇಳಿದನು.

ಚಿರಾಭಿಲಷಿತಂ ಕಾಮಮದ್ಯ ಪ್ರಾಪ್ಸ್ಯಾಮಿ ಸಂಯುಗೇ ।
ನ ಹಿ ಮೇ ಮೋಕ್ಷ್ಯಸೇ ಜೀವನ್ ಯದಿ ನೋತ್ಸೃಜಸೇ ರಣಮ್ ॥೩॥

ಬಹಳ ಕಾಲದಿಂದ ಬಯಸಿದ ನನ್ನ ಅಭೀಷ್ಟವನ್ನು ಈ ದಿನ ಯುದ್ಧದಲ್ಲಿ ಹೊಂದುವೆನು. ನೀನು ರಣರಂಗವನ್ನು ತ್ಯಜಿಸದಿದ್ದರೆ ಜೀವಸಹಿತವಾಗಿ ರಣರಂಗದಿಂದ ಹೊರಗೆ ಹೋಗುವುದಿಲ್ಲ.

ಅದ್ಯ ತ್ವಾಂ ಸಮರೇ ಹತ್ವಾ ನಿತ್ಯಂ ಶೂರಾಭಿಮಾನಿನಮ್ ।
ನಂದಯಿಷ್ಯಾಮಿ ದಾಶಾರ್ಹ ಕುರುರಾಜಂ ಸುಯೋಧನಮ್ ॥ ೪ ॥

ಎಲೈ ದಾಶಾರ್ಹನೇ, ಯಾವಾಗಲೂ ಶೂರನೆಂದು ತಿಳಿದುಕೊಳ್ಳುತ್ತಿರುವ ನಿನ್ನನ್ನು ಈ ದಿನ ರಣರಂಗದಲ್ಲಿ ಕೊಂದು, ಕುರುರಾಜನಾದ ಸುಯೋಧನನನ್ನು ಸಂತೋಷ ಪಡಿಸುವೆನು.

ಅದ್ಯ ಮದ್ಬಾಣನಿರ್ದಗ್ಧಂ ಪತಿತಂ ಧರಣೀತಳೇ ।
ದ್ರಕ್ಷ್ಯತಸ್ತ್ವಾಂ ರಣೇ ವೀರೌ ಸಹಿತೌ ಕೇಶವಾರ್ಜುನೌ ॥ ೫ ॥

ಈ ದಿನ ನನ್ನ ಬಾಣಗಳಿಂದ ದಹಿಸಲ್ಪಟ್ಟು ಭೂಮಿಯ ಮೇಲೆ ಬಿದ್ದ ನಿನ್ನನ್ನು ವೀರರಾದ ಕೃಷ್ಣಾರ್ಜುನರು ಜೊತೆಯಾಗಿ ನೋಡುವರು.

ಅದ್ಯ ಧರ್ಮಸುತೋ ರಾಜಾ ಶ್ರುತ್ವಾ ತ್ವಾಂ ನಿಹತಂ ಮಯಾ ।
ಸವ್ರೀಡೋ ಭವಿತಾ ಸದ್ಯೋ ಯೇನಾಸೀಹ ಪ್ರವೇಶಿತಃ ॥ ೬ ॥

ಯಾವ ಯುಧಿಷ್ಠಿರನು ನಿನ್ನನ್ನು ಇಲ್ಲಿಗೆ ಕಳುಹಿಸಿದನೋ ಅವನು ಈ ದಿನ ನಿನ್ನನ್ನು ನಾನು ಕೊಂದನೆಂದು ಕೇಳಿ ನಾಚಿಕೊಳ್ಳುವನು.

ಅದ್ಯ ಮೇ ವಿಕ್ರಮಂ ಪಾರ್ಥೋ ವಿಜ್ಞಾಸ್ಯತಿ ಧನಂಜಯಃ ।
ತ್ವಯಿ ಭೂಮೌ ವಿನಿಹತೇ ಶಯಾನೇ ರುಧಿರೋಕ್ಷಿತೇ ॥ ೭ ॥

ನೀನು ಬಾಣಗಳಿಂದ ಹೊಡೆಯಲ್ಪಟ್ಟು ರಕ್ತಸಿಕ್ತನಾಗಿ ಭೂಮಿಯ ಮೇಲೆ ಮಲಗಿದಾಗ ಈ ದಿನ ಅರ್ಜುನನು ನನ್ನ ಪರಾಕ್ರಮವನ್ನು ತಿಳಿಯುವನು.

ಚಿರಾಭಿಲಷಿತೋ ಹ್ಯದ್ಯ ತ್ವಯಾ ಸಹ ಸಮಾಗಮಃ ।
ಪುರಾ ದೇವಾಸುರೇ ಯುದ್ಧೇ ಶಕ್ರಸ್ಯ ಬಲಿನಾ ಯಥಾ ॥ ೮ ॥

ದೇವಾಸುರ ಯುದ್ಧದಲ್ಲಿ ಶಕ್ರ-ಬಲಿಗಳ ಸಮಾಗಮದಂತಿರುವ, ಬಹಳ ಕಾಲದಿಂದ ಬಯಸಿದ ಈ ನಿನ್ನ ಸಮಾಗಮವು ಈ ದಿನ ಲಬ್ಧವಾಗಿದೆ.

ಅದ್ಯ ಯುದ್ಧಂ ಮಹಾಘೋರಂ ತವ ದಾಸ್ಯಾಮಿ ಸಾತ್ವತ ।
ತತೋ ಜ್ಞಾಸ್ಯಸಿ ತತ್ತ್ವೇನ ಮದ್ವೀರ್ಯಬಲಪೌರುಷಮ್ ॥ ೯ ॥

ಎಲೈ ಸಾತ್ವತನೇ, ಈ ದಿನ ನಿನ್ನ ಜೊತೆಯಲ್ಲಿ ಘೋರವಾದ ಯುದ್ಧವನ್ನು ಮಾಡುವೆನು. ಆಗ ನನ್ನ ನಿಜವಾದ ಪರಾಕ್ರಮ, ಬಲ ಮತ್ತು ಪೌರುಷಗಳನ್ನು ನೀನು ತಿಳಿಯುವಿ.

ಅದ್ಯ ಸಂಯಮನೀಂ ಯಾತಾ ಮಯಾ ತ್ವಂ ನಿಹತೋ ರಣೇ ।
ಯಥಾ ರಾಮಾನುಜೇನಾಜೌ ರಾವಣಿರ್ಲಕ್ಷ್ಮಣೇನ ವೈ ॥ ೧೦ ॥

ರಾಮನ ತಮ್ಮನಾದ ಲಕ್ಷ್ಮಣನಿಂದ ರಾವಣಪುತ್ರನಾದ ಇಂದ್ರಜಿತು ಯುದ್ಧದಲ್ಲಿ ಹತನಾದಂತೆ, ನೀನು ನನ್ನಿಂದ ಹತನಾಗಿ ಯಮಪಟ್ಟಣವಾದ ಸಂಯಮನಿಗೆ ಹೋಗುವಿ.

ಅದ್ಯ ಕೃಷ್ಣಶ್ಚ ಪಾರ್ಥಶ್ಚ ಧರ್ಮರಾಜಶ್ಚ ಮಾಧವ ।
ಹತೇ ತ್ವಯಿ ನಿರುತ್ಸಾಹಾ ರಣಂ ತ್ಯಕ್ಷ್ಯಂತ್ಯಸಂಶಯಮ್ ॥ ೧೧ ॥

ಎಲೈ ಮಾಧವನೇ, ನೀನು ಯುದ್ಧದಲ್ಲಿ ಹತನಾಗುತ್ತಿರಲು ಕೃಷ್ಣ-ಅರ್ಜುನ ಮತ್ತು ಧರ್ಮರಾಜರೆಲ್ಲರೂ ನಿರುತ್ಸಾಹಗೊಂಡು ನಿಸ್ಸಂಶಯವಾಗಿ ಯುದ್ಧವನ್ನು ತ್ಯಜಿಸುವರು.

ಅದ್ಯ ತೇऽಪಚಿತಿಂ ಕೃತ್ವಾ ಶಿತೈರ್ಮಾಧವ ಸಾಯಕೈಃ ।
ತತ್ಸ್ತ್ರಿಯೋ ನಂದಯಿಷ್ಯಾಮಿ ಯೇ ತ್ವಯಾ ನಿಹತಾ ರಣೇ ॥ ೧೨ ॥

ಎಲೈ ಮಾಧವನೇ, ಈ ದಿನ ನನ್ನ ನಿಶಿತವಾದ ಬಾಣಗಳಿಂದ ನಿನ್ನನ್ನು ಕೊಂದು ನಿನ್ನಿಂದ ಹತರಾದ ಯೋಧರ ಪತ್ನಿಯರಿಗೆ ಸಂತೋಷವನ್ನುಂಟು ಮಾಡುವೆನು.

ಚಕ್ಷುರ್ವಿಷಯಸಂಪ್ರಾಪ್ತೋ ನ ತ್ವಂ ಮಾಧವ ಮೋಕ್ಷ್ಯಸೇ ।
ಸಿಂಹಸ್ಯ ವಿಷಯಂ ಪ್ರಾಪ್ತೋ ಯಥಾ ಕ್ಷುದ್ರಮೃಗಸ್ತಥಾ ॥ ೧೩ ॥

ಎಲೈ ಮಾಧವನೇ, ಸಿಂಹದ ದೃಷ್ಟಿಗೆ ಗೋಚರವಾದ ಕ್ಷುದ್ರಮೃಗದಂತೆ ನನ್ನ ದೃಷ್ಟಿಗೆ ಗೋಚರನಾದ ನೀನು ತಪ್ಪಿಸಿಕೊಳ್ಳಲಾರೆ (ಎಂದ ಹೇಳಿದನು)

ಸಂಜಯಃ

ಯುಯುಧಾನಸ್ತು ತಂ ರಾಜನ್ ಪ್ರತ್ಯುವಾಚ ಹಸನ್ನಿವ ।
ಕೌರವೇಯ ನ ಸಂತ್ರಾಸೋ ವಿದ್ಯತೇ ಮಮ ಸಂಯುಗೇ ॥ ೧೪ ॥

ಸಂಜಯ– ಎಲೈ ರಾಜನೇ, ಯುಯುಧಾನನು ಆ ಮಾತುಗಳನ್ನು ಕೇಳಿ ನಗುತ್ತಾ ಅವನನ್ನು ಕುರಿತು ಮಾತನಾಡಿದನು- ಎಲೈ ಕೌರವನೇ, ಯುದ್ಧದಲ್ಲಿ ನನಗೆ ಯಾವ ಭಯವೂ ಇಲ್ಲ.

ನ ಮಾಂ ನಿಹನ್ಯಾತ್ ಸಂಗ್ರಾಮೇ ಯೋ ಮಾಂ ಕುರ್ಯಾನ್ನಿರಾಯುಧಮ್।
ಸಮಾಸ್ತು ಶಾಶ್ವತೀರ್ಹನ್ಯಾದ್ ಯೋ ಮಾಂ ಹನ್ಯಾದ್ಧಿ ಸಂಯುಗೇ ॥ ೧೫ ॥

ಯಾವನು ನನ್ನನ್ನು ಯುದ್ಧದಲ್ಲಿ ನಿರಾಯುಧನನ್ನಾಗಿ ಮಾಡುವನೋ ಅವನು ನನ್ನನ್ನು ಕೊಂದಾನು. ಯುದ್ಧದಲ್ಲಿ ನನ್ನನ್ನು ಕೊಲ್ಲುವವರು ಬಹಳ ವರ್ಷದವರೆಗೆ ಯುದ್ಧವನ್ನು ಮಾಡಬೇಕಾದೀತು.

ಕಿಂ ಮೃಷೋಕ್ತೇನ ಬಹುನಾ ಕರ್ಮಣಾ ತು ಸಮಾಚರ ।
ಶಾರದಸ್ಯೇವ ಮೇಘಸ್ಯ ಗರ್ಜಿತಂ ನಿಷ್ಫಲಂ ಹಿ ತೇ ॥ ೧೬ ॥

ಬಹಳ ಸುಳ್ಳು ಮಾತುಗಳನ್ನು ಆಡಿ ಏನು ಪ್ರಯೋಜನ? ಕಾರ್ಯವನ್ನು ಮಾಡಿ ನಿನ್ನ ಪರಾಕ್ರಮವನ್ನು ತೋರಿಸು. ಶರತ್ಕಾಲದ ಮೇಘಗರ್ಜನೆಯಂತೆ ನಿನ್ನ ಗರ್ಜನೆ ನಿಷ್ಫಲವಾದುದು.

ಶ್ರುತ್ವೈತದ್ಗರ್ಜಿತಂ ವೀರ ಹಾಸ್ಯಂ ಹಿ ಮಮ ಜಾಯತೇ ।
ಚಿರಕಾಲೇಪ್ಸಿತಂ ಲೋಕೇ ಯುದ್ಧಮದ್ಯಾಸ್ತು ಕೌರವ ॥ ೧೭ ॥

ಎಲೈ ವೀರನೇ, ನಿನ್ನ ಈ ಗರ್ಜನೆಯನ್ನು ಕೇಳಿ ನನಗೆ ಹಾಸ್ಯ ಉಂಟಾಗುತ್ತಿದೆ. ಎಲೈ ಕೌರವನೇ, ಬಹಳ ಕಾಲದಿಂದ ಬಯಸಿದ ಈ ಯುದ್ಧವು ಇಂದು ನಡೆಯಲಿ.

ತ್ವರತೇ ಮೇ ಮತಿಸ್ತಾತ ತ್ವಯಿ ಯುದ್ಧಾಭಿಕಾಂಕ್ಷಿಣೆ ।
ನಾಹತ್ವಾ ಸಂನಿವರ್ತಿಷ್ಯೇ ತ್ವಾಮದ್ಯ ಪುರುಷಾಧಮ ॥ ೧೮ ॥

ನೀನು ಯುದ್ಧವನ್ನು ಬಯಸುತ್ತಿರಲು ಎಲೈ ಪ್ರೀತಿಪಾತ್ರನೇ, ನನ್ನ ಮನಸ್ಸೂ ಯುದ್ಧೇ ಹಾತೊರೆಯುತ್ತಿದೆ. ಎಲೈ ಪುರುಷಾಧಮನೇ, ನಿನ್ನನ್ನು ಕೊಲ್ಲದೆ ನಾನು ಈ ದಿನ ಯುದ್ಧಭೂಮಿಯಿಂದ ಹಿಂದಿರುಗುವುದಿಲ್ಲ (ಎಂದು ಹೇಳಿದನು).

ಸಂಜಯಃ

ಅನ್ಯೋನ್ಯಂ ತೌ ತದಾ ವಾಗ್ಭಿಸ್ತರ್ಜಂತೌ ನರಪುಂಗವೌ ।
ಜಘ್ನಾಂಸೂ ಪರಮಕ್ರುದ್ಧಾವಭಿಜಘ್ನತುರಾಹವೇ ॥ ೧೯ ॥

ಸಂಜಯ– ಹೀಗೆ ಆ ಇಬ್ಬರು ನರಶ್ರೇಷ್ಠರು ಮಾತುಗಳಿಂದ ಒಬ್ಬರನ್ನೊಬ್ಬರು ಗಾಯಗೊಳಿಸುತ್ತಾ, ಬಹಳ ಕೋಪಗೊಂಡು ಪರಸ್ಪರವಾಗಿ ಕೊಲ್ಲಲು ಬಯಸಿ ರಣರಂಗದಲ್ಲಿ ಒಬ್ಬರನ್ನೊಬ್ಬರು ಹೊಡೆದರು.

ಸಮೇತೌ ತೌ ನರವ್ಯಾಘ್ರೌ ಶುಷ್ಮಿಣೌ ಸ್ಪರ್ಧಿನೌ ರಣೇ ।
ದ್ವಿರದಾವಿವ ಸಂಕ್ರುದ್ಧೌ ವಾಸಿತಾರ್ಥೇ ಮದೋತ್ಕಟೌ ॥ ೨೦ ॥

ಭೂರಿಶ್ರವಾಃ ಸಾತ್ಯಕಿಶ್ಚ ವವರ್ಷತುರರಿಂದಮೌ ।
ಶರವರ್ಷಾಣಿ ಭೀಮಾನಿ ಮೇಘಾವಿವ ಪರಸ್ಪರಮ್ ॥ ೨೧ ॥

ಸಮಾಗಮವನ್ನು ಹೊಂದಿದ ಪರಾಕ್ರಮಶಾಲಿಗಳೂ, ಸ್ಪರ್ಧಾಳುಗಳೂ, ಅರಿಂದಮರೂ ಆದ ಭೂರಿಶ್ರವ ಮತ್ತು ಸಾತ್ಯಕಿಯರು ಚಿಕ್ಕ ಹೆಣ್ಣಾನೆಯ ಸಲುವಾಗಿ ಮದೋತ್ಕಟವಾದ ಎರಡು ಗಂಡಾನೆಗಳಂತೆ ಕೋಪಗೊಂಡು ಮೇಘಗಳಂತೆ ಪರಸ್ಪರವಾಗಿ ಭಯಂಕರವಾದ ಬಾಣಗಳ ಮಳೆಯನ್ನು ಸುರಿಸಿದರು.

ಸೌಮದತ್ತಿಸ್ತು ಶೈನೇಯಂ ಪ್ರಚ್ಛಾದ್ಯೇಷುಭಿರಾಶುಗೈಃ ।
ಜಘಾಂಸುರ್ಭರತಶ್ರೇಷ್ಠ ವಿವ್ಯಾಧ ನಿಶಿತೈಃ ಶರೈಃ ॥ ೨೨ ॥

ಎಲೈ ಭರತಶ್ರೇಷ್ಠನೇ, ಭೂರಿಶ್ರವನು ಶೀಘ್ರಗಾಮಿಗಳಾದ ಬಾಣಗಳಿಂದ ಸಾತ್ಯಕಿಯನ್ನು ಮುಚ್ಚಿ ಅವನನ್ನು ಕೊಲ್ಲಲು ಬಯಸಿ, ತೀಕ್ಷ್ಣವಾದ ಬಾಣಗಳಿಂದ ಅವನನ್ನು ಹೊಡೆದನು.

ದಶಭಿಃ ಸಾತ್ಯಕಿಂ ವಿದ್ಧ್ವಾ ಸೌಮದತ್ತಿರಥಾಪರಾನ್ ।
ಮುಮೋಚ ನಿಶಿತಾನ್ ಬಾಣಾನ್ಜಘಾಂಸುಃ ಶಿನಿಪುಂಗವಮ್ ॥೨೩॥

ಆನಂತರ ಭೂರಿಶ್ರವನು ಸಾತ್ಯಕಿಯನ್ನು ಕೊಲ್ಲಲು ಬಯಸಿ ಹತ್ತು ಬಾಣಗಳಿಂದ ಅವನನ್ನು ಹೊಡೆದು, ಬೇರೆ ತೀಕ್ಷ್ಣವಾದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ತಾನಸ್ಯ ವಿಶಿಖಾಂಸ್ತೀಕ್ಷ್ಣಾನಂತರಿಕ್ಷೇ ವಿಶಾಂಪತೇ ।
ಅಪ್ರಾಪ್ತಾನಸ್ತ್ರಮಾಯಾಭಿರಗ್ರಸತ್ ಸಾತ್ಯಕಿಃ ಪ್ರಭೋ ॥ ೨೪ ॥

ಎಲೈ ರಾಜನೇ, ಭೂರಿಶ್ರವನು ಪ್ರಯೋಗಿಸಿದ ತೀಕ್ಷ್ಣವಾದ ಬಾಣಗಳು ತನ್ನ ಬಳಿಗೆ ಬರುವುದಕ್ಕಿಂತ ಮೊದಲೇ ಸಾತ್ಯಕಿಯು ಅಂತರಿಕ್ಷದಲ್ಲಿಯೇ ಅವುಗಳನ್ನು ತನ್ನ ಅಸ್ತ್ರಗಳ ಸಾಮರ್ಥ್ಯದಿಂದ ನುಂಗಿ ಹಾಕಿದನು.

ತೌ ಪೃಥಕ್ ಶರವರ್ಷಾಭ್ಯಾಮವರ್ಷೇತಾಂ ಪರಸ್ಪರಮ್ ।
ಉತ್ತಮಾಭಿಜನೌ ವೀರೌ ಕುರುವೃಷ್ಣಿಯಶಸ್ಕರೌ ॥ ೨೫ ॥

ಕುರುವಂಶ ಮತ್ತು ವೃಷ್ಣಿವಂಶಗಳಿಗೆ ಕೀರ್ತಿಯನ್ನು ತರುವ, ಉತ್ತಮ ಕುಲ ಪ್ರಸೂತರಾದ ಆ ವೀರರಿಬ್ಬರು ಪರಸ್ಪರವಾಗಿ ಬಾಣಗಳ ಮಳೆಯನ್ನು ಸುರಿಸಿದರು.

ತೌ ನಖೈರಿವ ಶಾರ್ದೂಲೌ ದಂತೈರಿವ ಮಹಾದ್ವಿಪೌ ।
ರಥಶಕ್ತಿಭಿರನ್ಯೋನ್ಯಂ ವಿಶಿಖೈಶ್ಚಾಪ್ಯಕೃಂತತಾಮ್ ॥ ೨೬ ॥

ವ್ಯಾಘ್ರಗಳು ನಖಗಳಿಂದ ಹೋರಾಡಿದಂತೆ, ಎರಡು ಮಹಾಗಜಗಳು ದಂತಗಳಿಂದ ಹೋರಾಡಿದಂತೆ ಅವರಿಬ್ಬರೂ ರಥಶಕ್ತಿಗಳಿಂದಲೂ ಮತ್ತು ಬಾಣಗಳಿಂದಲೂ ಪರಸ್ಪರವಾಗಿ ಗಾಯಗೊಳಿಸಿದರು.

ನಿಭಿಂದಂತೌ ಹಿ ಗಾತ್ರಾಣಿ ವಿಕ್ಷರಂತೌ ಚ ಶೋಣಿತಮ್ ।
ವೃಷ್ಣ್ಯಂಭಯೀತಾಮನ್ಯೋನ್ಯಂ ಪ್ರಾಣದ್ಯೂತಾಭಿದೇವಿನೌ ॥ ೨೭ ॥

ಪರಸ್ಪರವಾಗಿ ದೇಹಗಳನ್ನು ಗಾಯಗೊಳಿಸುತ್ತಾ ತಮ್ಮ ಶರೀರದಿಂದ ರಕ್ತವನ್ನು ಸುರಿಸುತ್ತಾ, ಪ್ರಾಣದ್ಯೂತವನ್ನು ಆಡುವ ಆ ಇಬ್ಬರು ವೀರರು ಒಬ್ಬರನ್ನೊಬ್ಬರು ಪರಸ್ಪರವಾಗಿ ತಡೆದರು.

ಏವಮುತ್ತಮಕರ್ಮಾಣೌ ಕುರುವೃಷ್ಣಿಯಶಸ್ಕರೌ ।
ಪರಸ್ಪರಮಯುದ್ಧ್ಯೇತಾಂ ವಾರಣಾವಿವ ಯೂಥಪೌ ॥ ೨೮ ॥

ಹೀಗೆ ಉತ್ತಮಕರ್ಮವನ್ನು ಮಾಡುವ ಕುರು-ವೃಷ್ಣಿವಂಶಯಶಸ್ಕರರಾದ ಅವರಿಬ್ಬರೂ ಎರಡು ಸಲಗಗಳಂತೆ ಪರಸ್ಪರವಾಗಿ ಯುದ್ಧವನ್ನು ಮಾಡಿದನು.

ತಾವದೀರ್ಘೇಣ ಕಾಲೇನ ಬ್ರಹ್ಮಲೋಕಪುರಸ್ಕೃತೌ ।
ಜಿಗೀಷಂತೌ ಪರಂ ಸ್ಥಾನಮನ್ಯೋನ್ಯಮಭಿಜಘ್ನತುಃ ॥ ೨೯ ॥

ಬ್ರಾಹ್ಮಣ ಸಮೂಹದಿಂದ ಸತ್ಕೃತರಾದ ಅವರಿಬ್ಬರೂ ಅಲ್ಪಕಾಲದಲ್ಲಿ ಶ್ರೇಷ್ಠವಾದ ಸ್ಥಾನವನ್ನು ಸಂಪಾದಿಸಲು ಬಯಸಿ ಪರಸ್ಪರವಾಗಿ ಹೊಡೆದಾಡಿದರು- ಲಕ್ಷಾಲಂಕಾರ.

ಸಾತ್ಯಕಿಃ ಸೌಮದತ್ತಿಶ್ಚ ಶರವೃಷ್ಟ್ಯಾ ಪರಸ್ಪರಮ್ ।
ಹೃಷ್ಟವದ್ ಧಾರ್ತರಾಷ್ಟ್ರಾಣಾಂ ಪಶ್ಯತಾಮಭ್ಯವರ್ಷತಾಮ್ ॥ ೩೦ ॥

ಸಾತ್ಯಕಿ ಮತ್ತು ಭೂರಿಶ್ರವರು ಧೃತರಾಷ್ಟ್ರಪುತ್ರರು ನೋಡುತ್ತಿರುವಂತೆಯೇ ಸಂತೋಷದಿಂದ ಪರಸ್ಪರವಾಗಿ ಬಾಣಗಳ ಮಳೆಯನ್ನು ಸುರಿಸಿದರು.

ಸಂಪ್ರೈಕ್ಷಂತ ಜನಾಸ್ತತ್ರ ಯುದ್ಧ್ಯಮಾನೌ ಯುಧಾಂಪತೀ ।
ಯೂಥಪೌ ವಾಸಿತಾಹೇತೋಃ ಪ್ರಯುದ್ಧಾವಿವ ಕುಂಜರೌ ॥ ೩೧ ॥

ಯುದ್ಧಸ್ವಾಮಿಗಳಾದ ಅವರು ಹೆಣ್ಣಾನೆಯ ಸಲುವಾಗಿ ಎರಡು ಸಲಗಗಳು ಹೊಡೆದಾಡುವಂತೆ ಯುದ್ಧಮಾಡುವುದನ್ನು ಅಲ್ಲಿ ಜನರು ನೋಡಿದರು.

ಅನ್ಯೋನ್ಯಸ್ಯ ಹಯಾನ್ ಹತ್ವಾ ಧನುಷೀ ವಿನಿಕೃತ್ಯ ಚ ।
ವಿರಥಾವಸಿಯುದ್ಧಾಯ ಸಮೇಯಾತಾಂ ಮಹಾರಣೇ ॥ ೩೨ ॥

ಪರಸ್ಪರವಾಗಿ ಅಶ್ವಗಳನ್ನು ಕೊಂದು, ಧನುಸ್ಸುಗಳನ್ನು ಕತ್ತರಿಸಿ, ರಥವನ್ನು ಕಳೆದುಕೊಂಡು ರಣರಂಗದಲ್ಲಿ ಖಡ್ಗಯುದ್ಧಕ್ಕಾಗಿ ಸಿದ್ಧರಾದರು.

ಆರ್ಷಭೇ ಚರ್ಮಣೀ ಚಿತ್ರೇ ಪ್ರಗೃಹ್ಯ ವಿಪುಲೇ ಶುಭೇ ।
ವಿಕೋಶೌ ಚಾಪ್ಯಥೀ ಕೃತ್ವಾ ಸಮರೇ ತೌ ವಿಚೇರತುಃ ॥ ೩೩ ॥

ವೃಷಭ ಚರ್ಮದಿಂದ ಮಾಡಿದ, ವಿಸ್ತಾರವಾದ, ಶುಭವಾದ ಮತ್ತು ವಿಚಿತ್ರವಾದ ಗುರಾಣಿಗಳನ್ನು ಮತ್ತು ಒರೆಯಿಂದ ಹಿರಿದ ಖಡ್ಗಗಳನ್ನು ಹಿಡಿದು ಅವರು ರಣರಂಗದಲ್ಲಿ ಸಂಚರಿಸಿದರು.

ಚರಂತೌ ವಿವಿಧಾನ್ ಮಾರ್ಗಾನ್ ಮಂಡಲಾನಿ ಚ ಭಾಗಶಃ ।
ಮುಹುರಾಜಘ್ನತುಃ ಕ್ರುದ್ಧಾವನ್ಯೋನ್ಯಮರಿಮರ್ದನೌ ॥ ೩೪ ॥

ಶತ್ರುಸೂದನರಾದ ಅವರು ವಿವಿಧ ಮಾರ್ಗಗಳನ್ನು ಮತ್ತು ಭಾಗಶಃ ಖಡ್ಗಯುದ್ಧದ ಮಂಡಲಗಳನ್ನು ಸಂಚರಿಸುತ್ತಾ ಪರಸ್ಪರವಾಗಿ ಕೋಪಗೊಂಡು ಪುನಃ ಪುನಃ ಹೊಡೆದಾಡಿದರು.

ಸಖಡ್ಗೌ ಚಿತ್ರವರ್ಮಾಣೌ ಸನಿಷ್ಕಾಂಗದಭೂಷಣೌ ।
ರಣೇ ರಣೋತ್ಕಟೌ ರಾಜನ್ನನ್ಯೋನ್ಯಂ ಹರ್ಯಕರ್ಷತಾಮ್ ॥ ೩೫ ॥

ಎಲೈ ರಾಜನೇ, ಖಡ್ಗಗಳನ್ನು ಹಿಡಿದ, ವಿಚಿತ್ರವಾದ ಕವಚಗಳನ್ನು ಧರಿಸಿದ, ಸುವರ್ಣಮಯವಾದ ಭುಜಕೀರ್ತಿಗಳಿಂದ ಭೂಷಿತರಾದ, ರಣೋತ್ಕಟರಾದ ಅವರು ಪರಸ್ಪರವಾಗಿ ಎಳೆದಾಡಿದರು.

ಮುಹೂರ್ತಮಿವ ರಾಜೇಂದ್ರ ಪರಿಕೃಷ್ಯ ಪರಸ್ಪರಮ್ ।
ಪಶ್ಯತಾಂ ಸರ್ವಸೈನ್ಯಾನಾಂ ವೀರಾವಾಶ್ವಸತಾಂ ಪುನಃ ॥ ೩೬ ॥

ಎಲೈ ರಾಜೇಂದ್ರನೇ, ಎಲ್ಲ ಸೈನ್ಯಗಳು ನೋಡುತ್ತಿರುವಂತೆಯೇ ಒಂದು ಮುಹೂರ್ತದ ಕಾಲ ಪರಸ್ಪರವಾಗಿ ಎಳೆದಾಡಿ ಆ ವೀರರು ಸ್ವಲ್ಪ ವಿಶ್ರಾಂತಿಯನ್ನು ಪಡೆದರು.

ಅಸಿಭ್ಯಾಂ ಚರ್ಮಣೀ ಶುಭ್ರೇ ವಿಪುಲೇ ಚ ಶರಾವರೇ ।
ನಿಕೃತ್ಯ ಪುರುಷವ್ಯಾಘ್ರೌ ಬಾಹುಯುದ್ಧಂ ಪ್ರಚಕ್ರತುಃ ॥ ೩೭ ॥

ಪುನಃ ತಮ್ಮ ಖಡ್ಗಗಳಿಂದ ವಿಸ್ತಾರವಾದ ಮತ್ತು ಶುಭ್ರವಾದ ಗುರಾಣಿಗಳನ್ನು ಮತ್ತು ಬತ್ತಳಿಕೆಗಳನ್ನು ಕತ್ತರಿಸಿ, ಪುರುಷವ್ಯಾಘ್ರರಾದ ಅವರು ಬಾಹುಯುದ್ಧವನ್ನು ಮಾಡಿದರು.

ವ್ಯೂಢೋರಸ್ಕೌ ದೀರ್ಘಭುಜೌ ನಿಯುದ್ಧಕುಶಲಾವುಭೌ ।
ಬಾಹುಭಿಃ ಸಮಸಜ್ಜೇತಾಮಾಯಸ್ಯೈಃ ಪರಿಘೈರಿವ ॥ ೩೮ ॥

ವಿಸ್ತಾರವಾದ ಎದೆಯುಳ್ಳವರೂ, ದೀರ್ಘಭುಜವುಳ್ಳವರೂ, ಬಾಹು ಯುದ್ಧದಲ್ಲಿ ವಿಶಾರದರೂ ಆದ ಅವರಿಬ್ಬರೂ ಕಬ್ಬಿಣದ ಒನಕೆಗಳಂತಿದ್ದ ತಮ್ಮ ಬಾಹುಗಳಿಂದ ಪರಸ್ಪರವಾಗಿ ಯುದ್ಧವನ್ನು ಮಾಡಿದರು.

ತಯೋರಾಸನ್ ಭುಜಾಘಾತಾ ನಿಗ್ರಹಪ್ರಗ್ರಹೌ ತಥಾ ।
ಶಿಷ್ಟಾಬಲಸಮುದ್ಭೂತಾಃ ಸರ್ವಯೋಧಪ್ರಹರ್ಷಣಾಃ ॥ ೩೯ ॥

ಅವರು ಬಾಹುಯುದ್ಧವನ್ನು ಮಾಡುವಾಗ ತಮ್ಮ ಅಭ್ಯಾಸದಿಂದಲೂ, ಬಲದಿಂದಲೂ ಮಾಡಿದ ಪರಸ್ಪರ ಗ್ರಹಣ ಮತ್ತು ಮೋಚನಗಳಿಂದ ಎಲ್ಲಯೋಧರೂ ಸಂತುಷ್ಟರಾದರು.

ವ್ಯಾಖ್ಯಾನ ವಿಶೇಷ- ಭುಜ ಬಂಧಗಳಿಂದಲೂ, ಕೆಳಗಿನ ಬಂಧನಗಳಿಂದಲೂ, ಶಿರೋಬಂಧಗಳಿಂದಲೂ ಪಾದಗಳ ಆಕರ್ಷಣ ಮತ್ತು ಸಂಧಾನಗಳಿಂದಲೂ, ತೋಮರಾಂಕುಶ ಸದೃಶವಾದ ಕ್ರಿಯೆಗಳಿಂದಲೂ, ಪಾದ-ಉದರಬಂಧಗಳಿಂದಲೂ, ಭೂಮಿಯಲ್ಲಿ ತಿರುಗಿಸುವುದರಿಂದಲೂ, ಮುಂದೆ ಹೋಗಿ ಹಿಂದೆ ಬಂದು ಮೇಲೆ ಎಸೆಯುವುದರಿಂದಲೂ, ಕೆಳಗೆ ಬೀಳಿಸಿ ಮೇಲೆತ್ತಿ ಹಾರಿಸುವುದರಿಂದಲೂ, ಎಲೈ ಭಾರತನೇ, ಇಂತಹ ಬಾಹುಯುದ್ಧದ ಮೂವತ್ತೆರಡು ಪ್ರಕಾರಗಳೇನಿವೆಯೋ ಅವುಗಳಿಂದ ಮಹಾಬಲರಾದ ಅವರು ಯುದ್ಧವನ್ನು ಮಾಡುತ್ತಾ, ತಮ್ಮ ಸಾಮರ್ಥ್ಯವನ್ನು ತೋರಿಸಿದರು - ಲಕ್ಷಾಲಂಕಾರ.

ತಯೋರ್ನ್ನವರಯೋ ರಾಜನ್ ಸಮರೇ ಯುದ್ಧ್ಯಮಾನಯೋಃ ।
ಭೀಮೋಽಭವನ್ಮಹಾಶಬ್ದೋ ವಜ್ರಪರ್ವತಯೋರಿವ ॥ ೪೦ ॥

ದ್ವಿಪಾವಿವ ವಿಷಾಣಾಗ್ರೈಃ ಶೃಂಗೈರಿವ ಮಹರ್ಷಭೌ ।
ಯುಯುಧಾತೇ ಮಹಾತ್ಮಾನೌ ಕುರುಸಾತ್ವತಪುಂಗವೌ ॥ ೪೧ ॥

ಎಲೈ ರಾಜನೇ, ರಣರಂಗದಲ್ಲಿ ಯುದ್ಧಮಾಡುವ ಆ ನರಶ್ರೇಷ್ಠರಿಂದ ಉಂಟಾದ ಭಯಂಕರವಾದ ಮಹಾಶಬ್ದವು ವಜ್ರ ಮತ್ತು ಪರ್ವತಗಳ ಆಘಾತದ ಶಬ್ದದಂತಿದ್ದಿತು. ದಂತದ ತುದಿಗಳಿಂದ ಗಜಗಳು ಹೊಡೆದಾಡಿದಂತೆ, ಶೃಂಗಗಳಿಂದ ದೊಡ್ಡ ವೃಷಭಗಳು ಹೊಡೆದಾಡಿದಂತೆ ಮಹಾತ್ಮರಾದ ಆ ಕುರು-ಸಾತ್ವತಪುಂಗವರು ಯುದ್ಧವನ್ನು ಮಾಡಿದರು.

ಕ್ಷೀಣಾಯುಧೇ ಸಾತ್ವತೇ ಯುದ್ಧ್ಯಮಾನೇ
ತತೋಽಬ್ರವೀದರ್ಜುನಂ ವಾಸುದೇವಃ ।
ಪಶ್ಯೈನಂ ವಿರಥಂ ಯುದ್ಧ್ಯಮಾನಂ
ರಣೇ ಕೇತುಂ ಸರ್ವಧನುರ್ಧರಾಣಾಮ್ ॥ ೪೨ ॥

ಯುದ್ಧವನ್ನು ಮಾಡುತ್ತಿದ್ದ ಸಾತ್ಯಕಿಯು ತನ್ನ ಆಯುಧವನ್ನು ಕಳೆದುಕೊಳ್ಳುತ್ತಿರಲು ಆಗ ಕೃಷ್ಣನು ಅರ್ಜುನನನ್ನು ಕುರಿತು- 'ಸರ್ವಧನುರ್ಧಾರಿಗಳಿಗೆ ಧ್ವಜಪ್ರಾಯನಾಗಿರುವ ರಣರಂಗದಲ್ಲಿ ಯುದ್ಧವನ್ನು ಮಾಡಿ ರಥಹೀನನಾಗಿರುವ ಇವನನ್ನು ನೋಡು' ಎಂದು ಹೇಳಿದನು.

ಪ್ರವಿಶ್ಯೋ ಭಾರತೀಂ ಸೇನಾಂ ತವ ಪಾಂಡವ ಪೃಷ್ಠತಃ ।
ಯೋಧಿತಶ್ಚ ಮಹಾವೀರ್ಯೈಃ ಸರ್ವೈರ್ಭಾರತ ಭಾರತೈಃ ॥ ೪೩ ॥

ಪರಿಶ್ರಾಂತೋ ಯುಧಾಂಶ್ರೇಷ್ಠಃ ಸಂಪ್ರಾಪ್ತೋ ಭೂರಿದಕ್ಷಿಣಮ್ ।
ಯುದ್ಧಕಾಂಕ್ಷಿಣಮಾಯಾಂತಂ ನೈತತ್ ಸಮಮಿವಾರ್ಜುನ ॥ ೪೪ ॥

ಎಲೈ ಪಾಂಡವನೇ, ನಿನ್ನ ಹಿಂಭಾಗದಲ್ಲಿಯೇ ಕೌರವ ಸೇನೆಯನ್ನು ಪ್ರವೇಶಿಸಿ ಎಲೈ ಭಾರತನೇ, ಮಹಾವೀರ್ಯನಾದ ಇವನು ಕೌರವ ಸೇನೆಯ ಯೋಧರ ಜೊತೆಯಲ್ಲಿ ಯುದ್ಧವನ್ನು ಮಾಡಿದ್ದಾನೆ. ದಣಿದಿರುವ ಈ ಯೋಧಶ್ರೇಷ್ಠನು ಯುದ್ಧವನ್ನು ಬಯಸುತ್ತಿರುವ ಭೂರಿದಕ್ಷಿಣೆಯನ್ನು ಕೊಟ್ಟು ಯಾಗವನ್ನು ಮಾಡಿದ ಭೂರಿಶ್ರವನನ್ನು ಎದುರಿಸುತ್ತಿದ್ದಾನೆ. ಅರ್ಜುನನೇ, ಇದು ಸಮವಾದ ಯುದ್ಧವಲ್ಲ.

ಸಂಜಯಃ

ತತೋ ಭೂರಿಶ್ರವಾಃ ಕ್ರುದ್ಧಃ ಸಾತ್ಯಕಿಂ ಯುದ್ಧದುರ್ಮದಮ್ ।
ಉದ್ಯಮ್ಯ ನ್ಯಹನದ್ ರಾಜನ್ ಮತ್ತೋ ಮತ್ತಮಿವ ದ್ವಿಪಮ್ ॥ ೪೫ ॥

ರಥಸ್ಥಯೋರ್ದ್ವಯೋರ್ಯುದ್ಧೇ ಕ್ರುದ್ಧಯೋರ್ಯೋಧಮುಖ್ಯಯೋಃ ।
ಕೇಶವಾರ್ಜುನಯೋ ರಾಜನ್ ಸಮರೇ ಪ್ರೇಕ್ಷಮಾಣಯೋಃ ॥ ೪೬ ॥

ಸಂಜಯ– ಎಲೈ ರಾಜನೇ, ಆಗ ಭೂರಿಶ್ರವನು ಕ್ರುದ್ಧನಾಗಿ ಯುದ್ಧ-ದುರ್ಮದನಾದ ಸಾತ್ಯಕಿಯನ್ನು ಮದಗಜವು ಮದಗಜವನ್ನು ಘಟ್ಟಿಸುವಂತೆ ರಣರಂಗದಲ್ಲಿ ಯೋಧಮುಖ್ಯರಾದ ಕ್ರುದ್ಧರಾದ ಕೇಶವಾರ್ಜುನರು ರಥದಲ್ಲಿ ಕುಳಿತು ನೋಡುತ್ತಿರುವಂತೆಯೇ (ಧನುಸ್ಸನ್ನು ಎತ್ತಿ) ಹೊಡೆದನು.

ಅಥ ಕೃಷ್ಣೋ ಮಹಾಬಾಹುರರ್ಜುನಂ ಪ್ರತ್ಯಭಾಷತ ।
ಪಶ್ಯ ವೃಷ್ಣ್ಯಂಧಕವ್ಯಾಘ್ರಂ ಸೌಮದತ್ತಿವಶಂ ಗತಮ್ ॥ ೪೭ ॥

ಪರಿಶ್ರಾಂತಂ ಗತಂ ಭೂಮೌ ಕೃತ್ವಾ ಕರ್ಮ ಸುದುಷ್ಕರಮ್ ।
ತವಾಂತೇವಾಸಿನಂ ಶೂರಂ ಪಾಲಯಾರ್ಜುನ ಸಾತ್ಯಕಿಮ್ ॥ ೪೮ ॥

ನ ವಶಂ ಯಜ್ಞಶೀಲಸ್ಯ ಗಚ್ಛೇದೇಷ ವರಾರಿಹನ್ ।
ತ್ವತ್ಕೃತೇ ಪುರುಷವ್ಯಾಘ್ರ ತದಾಶು ಕ್ರಿಯತಾಂ ವಿಭೋ ॥ ೪೯ ॥

ಆಗ ಮಹಾಬಾಹುವಾದ ಕೃಷ್ಣನು ಅರ್ಜುನನನ್ನು ಕುರಿತು- ವೃಷ್ಣ್ಯಂಧಕ ಶೂರನಾದ ಸಾತ್ಯಕಿಯು ಭೂರಿಶ್ರವನ ವಶನಾಗಿರುವುದನ್ನು ನೋಡು. ಎಲೈ ಅರ್ಜುನನೇ, ಅತ್ಯಂತ ದುಷ್ಕರವಾದ ಕರ್ಮವನ್ನು ಮಾಡಿ, ದಣಿದು ಭೂಮಿಯಲ್ಲಿ ನಿಂತಿರುವ ನಿನ್ನ ಶಿಷ್ಯನಾದ ಶೂರನಾದ ಈ ಸಾತ್ಯಕಿಯನ್ನು ರಕ್ಷಿಸು. ಎಲೈ ಶತ್ರುಸಂಹಾರಕನೇ, ಪುರುಷವ್ಯಾಘ್ರನೆ, ನಿನ್ನ ಸಲುವಾಗಿ ಹೋರಾಡುತ್ತಿರುವ ಇವನು ಯಜ್ಞಶೀಲನಾದ ಭೂರಿಶ್ರವನ ವಶನಾಗಬಾರದು. ಆದ್ದರಿಂದ ವಿಭುವೇ, ಹಾಗೆ ನಿರ್ವಾಹವನ್ನು ಮಾಡು' ಎಂದು ಹೇಳಿದನು.

ಸಂಜಯಃ

ಅಥಾಬ್ರವೀದ್ ಹೃಷ್ಟಮನಾ ವಾಸುದೇವಂ ಧನಂಜಯಃ ।
ಪಶ್ಯ ವೃಷ್ಣಿಪ್ರವೀರೇಣ ಕ್ರೀಡಂತಂ ಕುರುಪುಂಗವಮ್ ।
ಮಹಾದ್ವಿಪೇನೇವ ವನೇ ಮತ್ತೇನ ಹರಿಯೂಥಪಮ್ ॥ ೫೦ ॥

ಆಗ ಸಂತೋಷಗೊಂಡ ಅರ್ಜುನನು ಕೃಷ್ಣನನ್ನು ಕುರಿತು- 'ಮದಿಸಿದ ಮಹಾಗಜದ ಜೊತೆಯಲ್ಲಿ ಸೆಣಸುವ ಸಿಂಹದಂತೆ ಸಾತ್ಯಕಿಯ ಜೊತೆಯಲ್ಲಿ ಆಟವಾಡುತ್ತಿರುವ ಈ ಕುರುಪುಂಗವನಾದ ಭೂರಿಶ್ರವನನ್ನು ನೋಡು' ಎಂದು ಹೇಳಿದನು.

ಹಾಹಾಕಾರೋ ಮಹಾನಾಸೀತ್ ಸೈನ್ಯಾನಾಂ ಭರತರ್ಷಭ ।
ಯದುದ್ಯಮ್ಯ ಮಹಾಬಾಹುಃ ಸಾತ್ಯಕಿಂ ನ್ಯಪತದ್ ಭುವಿ ॥ ೫೧ ॥

ಎಲೈ ಭರತರ್ಷಭನೇ, ಮಹಾಬಾಹುವಾದ ಭೂರಿಶ್ರವನು ಸಾತ್ಯಕಿಯನ್ನು ಎತ್ತಿ ನೆಲದ ಮೇಲೆ ಕೆಡವಿದಾಗ ಪಾಂಡವ ಸೈನ್ಯಗಳಲ್ಲಿ ದೊಡ್ಡ ಹಾಹಾಕಾರ ಉಂಟಾಯಿತು.

ಮಾಮೇವ ಚ ಮಹಾಬಾಹೋ ಪರಿಯಾಂತಿ ಮಹಾರಥಾಃ ।
ಯಥಾಶಕ್ತಿ ಯತಂತೇ ಮಾಂ ಯೋಧಯಾಂತೋ ಜನಾರ್ದನಃ ॥೫೨॥

ಸಾತ್ಯಕಿಯು ಕೆಳಗೆ ಬೀಳುತ್ತಿರಲು ಆಗ ಅರ್ಜುನನು ಕೃಷ್ಣನನ್ನು ಕುರಿತು- 'ಎಲೈ ಮಹಾಬಾಹುವೇ, ಮಹಾರಥರು ನನ್ನನ್ನೇ ಸುತ್ತುವರಿಯುತ್ತಿದ್ದಾರೆ. ಎಲೈ ಜನಾರ್ದನನೇ, ನನ್ನ ಜೊತೆಯಲ್ಲಿ ಅವರ ಶಕ್ತಿಗೆ ಅನುಗುಣವಾಗಿ ಯುದ್ಧವನ್ನು ಮಾಡಲು ಪ್ರಯತ್ನ ಪಡುತ್ತಿದ್ದಾರೆ.

ಧ್ರುವಂ ಚ ಯೋಧಯಾಂಯೇತಾಚ್ಚಿದ್ರಾನ್ವೇಷಣತತ್ಪರಾನ್ ।
ರಕ್ಷಾಮಿ ಸಾತ್ಯಕಿಂ ಚೈವ ಚೋದಮತ್ತಿವಶಂ ಗತಮ್ ॥ ೫೩ ॥

ಆಪ್ತಾಪ್ತೋಽಯಂ ಮಯಾ ಕೃಷ್ಣ ಹಂತುಂ ಭೂರಿಶ್ರವಾ ರಣೇ ।
ಅನ್ಯೇನ ತು ಸಮಾಸಕ್ತಂ ಮಮ ನೋತ್ಸಹತೇ ಮನಃ ॥ ೫೪ ॥

ನನ್ನಲ್ಲಿ ಯಾವುದಾದರೂ ಅಲ್ಪ ಅವಕಾಶವನ್ನು ಹುಡುಕುತ್ತಿರುವ ಇವರ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುತ್ತೇನೆ. ಭೂರಿಶ್ರವನ ವಶನಾದ ಸಾತ್ಯಕಿಯನ್ನೂ ರಕ್ಷಿಸುತ್ತೇನೆ. ಎಲೈ ಕೃಷ್ಣನೇ, ರಣರಂಗದಲ್ಲಿ ಭೂರಿಶ್ರವನು ನನ್ನ ಜೊತೆಯಲ್ಲಿ ಯುದ್ಧಕ್ಕೆ ಬಂದಿಲ್ಲ. ಇನ್ನೊಬ್ಬನ ಜೊತೆಯಲ್ಲಿ ಯುದ್ಧ ಮಾಡುತ್ತಿರುವ ಅವನನ್ನು ಕೊಲ್ಲಲು ನನ್ನ ಮನಸ್ಸಿಗೆ ಉತ್ಸಾಹವಿಲ್ಲ.

ಅವಶ್ಯಂ ಚ ಮಯಾ ಕೃಷ್ಣ ವೃಷ್ಣಿವೀರಸ್ಯ ರಕ್ಷಣಮ್ ।
ಮದರ್ಥೇ ಯುಧ್ಯಮಾನಸ್ಯ ಕಾರ್ಯ ಪ್ರಾಣೈರಪಿ ಪ್ರಭೋ ॥ ೫೫ ॥

ಅಧರ್ಮೋ ವಾऽಸ್ತು ಧರ್ಮೋ ವಾ ಮಮ ಮಾಧವ ಮಾಧವಃ ।
ಪರೇಣ ನಿಹತೋ ಮಾ ಸ್ಮ ಪ್ರಾಣಾಂಹಾಸೀನ್ಮಹಾರಥಃ ॥ ೫೬ ॥

ಎಲೈ ಕೃಷ್ಣನೇ, ನನ್ನ ಸಲುವಾಗಿ ಯುದ್ಧವನ್ನು ಮಾಡುತ್ತಿರುವ ವೃಷ್ಣಿವೀರನಾದ ಸಾತ್ಯಕಿಯ ರಕ್ಷಣೆಯನ್ನು ನಾನು ಪ್ರಾಣವನ್ನು ಕೊಟ್ಟಾದರೂ ಅವಶ್ಯವಾಗಿ ಮಾಡಲೇಬೇಕು. ಎಲೈ ಮಾಧವನೇ, ಪ್ರಭುವೇ, ಅದು ಧರ್ಮವಾಗಲಿ ಅಥವಾ ಅಧರ್ಮವಾಗಲಿ ಮಧುಕುಲೋತ್ಪನ್ನನಾದ ಮಹಾರಥನಾದ ಸಾತ್ಯಕಿಯು ಶತ್ರುವಿನಿಂದ ಹತನಾಗಿ ಪ್ರಾಣವನ್ನು ತೊರೆಯಬಾರದು, ಎಂದು ಹೇಳಿದನು.

ಸಂಜಯಃ

ಏವಮುಕ್ತ್ವಾರ್ಜುನಃ ಕೃಷ್ಣಂ ಪರಾನಾಶು ಶಿತೈಃ ಶರೈಃ ।
ಛಾದಯಾಮಾಸ ಸಂಕ್ರುದ್ಧಃ ಪರೇ ಚಾಪಿ ಧನಂಜಯಮ್ ॥ ೫೭ ॥

ಸಂಜಯ– ಕೃಷ್ಣನನ್ನು ಕುರಿತು ಹೀಗೆ ಹೇಳಿ ಅರ್ಜುನನು ಕೋಪಗೊಂಡು ತನ್ನ ಶತ್ರುಗಳನ್ನು ಶೀಘ್ರವಾಗಿ ತೀಕ್ಷ್ಣವಾದ ಬಾಣಗಳಿಂದ ಮುಚ್ಚಿದನು ಮತ್ತು ಶತ್ರುಗಳೂ ಕೂಡ ಅರ್ಜುನನನ್ನು ಹಾಗೆಯೇ ಮುಚ್ಚಿದರು.

ಏವಂ ಸ್ಮ ಯುಧ್ಯತೇ ವೀರಃ ಸಾತ್ಯಕಿಂ ಚ ಮುಹುರ್ಮುಹುಃ ।
ಪ್ರೇಕ್ಷತೇ ಸ್ಮ ನರವ್ಯಾಘ್ರೋ ಭೂರಿಶ್ರವಸಮೇವ ಚ ॥ ೫೮ ॥

ಹೀಗೆ ವೀರನೂ, ನರವ್ಯಾಘ್ರನೂ ಆದ ಅರ್ಜುನನು ಒಂದು ಕಡೆ ಯುದ್ಧವನ್ನು ಮಾಡಿ, ಇನ್ನೊಂದು ಕಡೆ ಪುನಃ ಪುನಃ ಸಾತ್ಯಕಿಯನ್ನು ಮತ್ತು ಭೂರಿಶ್ರವನನ್ನು ನೋಡಿದನು.

ಸ ಸಿಂಹ ಇವ ಮಾತಂಗಂ ವಿಕರ್ಷನ್ ಭೂರಿದಕ್ಷಿಣಃ ।
ವ್ಯರೋಚತ ಕುರುಶ್ರೇಷ್ಠಃ ಸಾತ್ವತಪ್ರವರಂ ಯುಧಿ ॥ ೫೯ ॥

ಭೂರಿದಕ್ಷಿಣನಾದ, ಕುರುಶ್ರೇಷ್ಠನಾದ ಭೂರಿಶ್ರವನು ಸಿಂಹವು ಆನೆಯನ್ನು ಹಿಡಿಯುವಂತೆ ಯುದ್ಧದಲ್ಲಿ ಸಾತ್ವತಪ್ರವರನಾದ ಸಾತ್ಯಕಿಯನ್ನು ಹಿಡಿದು ಶೋಭಿಸಿದನು.

ಅಥ ಕೋಶಾದ್ ವಿನಿಷ್ಕೃಷ್ಯ ಖಡ್ಗಂ ಭೂರಿಶ್ರವಾ ರಣೇ ।
ಮೂರ್ಧಜೇಷು ನಿಜಗ್ರಾಹ ಪದಾ ಚೋರಸ್ಯತಾಡಯತ್ ॥ ೬೦ ॥

ಆನಂತರ ಭೂರಿಶ್ರವನು ರಣರಂಗದಲ್ಲಿ ಖಡ್ಗವನ್ನು ಒರೆಯಿಂದ ಹಿರಿದು, ಸಾತ್ಯಕಿಯನ್ನು ಕೇಶದಲ್ಲಿ ಹಿಡಿದು ತನ್ನ ಕಾಲಿನಿಂದ ಅವನ ಎದೆಗೆ ಒದ್ದನು.

ತಥಾ ತು ಪರಿಕೃಷ್ಯಮಾಣಂ ದೃಷ್ಟ್ವಾ ಸಾತ್ವತಮಾಹವೇ ।
ವಾಸುದೇವಸ್ತತೋ ರಾಜನ್ ಭೂಯೋಽರ್ಜುನಮಭಾಷತ ॥ ೬೧ ॥

ಎಲೈ ರಾಜನೇ, ರಣರಂಗದಲ್ಲಿ ಆ ರೀತಿಯಲ್ಲಿ ಎಳೆದಾಡಲ್ಪಡುತ್ತಿದ್ದ ಸಾತ್ಯಕಿಯನ್ನು ನೋಡಿ ಕೃಷ್ಣನು ಅರ್ಜುನನನ್ನು ಕುರಿತು ಪುನಃ ಮಾತನಾಡಿದನು.

ಪಶ್ಯ ವೃಷ್ಣ್ಯಂಧಕವ್ಯಾಘ್ರಂ ಸೌಮದತ್ತಿವಶಂ ಗತಮ್ ।
ತವ ಶಿಷ್ಯಂ ಮಹಾಬಾಹೋ ಧನುಷ್ಯನವರಂ ತ್ವಯಾ ॥ ೬೨ ॥

ಎಲೈ ಮಹಾಬಾಹುವೇ, ನಿನ್ನ ಶಿಷ್ಯನೂ, ಧನುರ್ವಿದ್ಯೆಯಲ್ಲಿ ನಿನಗಿಂತ ಕಡಿಮೆಯಲ್ಲದವನೂ ಆದ, ವೃಷ್ಣ್ಯಂಧಕವೀರನಾದ ಸಾತ್ಯಕಿಯು ಭೂರಿಶ್ರವನ ವಶನಾಗಿರುವುದನ್ನು ನೋಡು.

ಅಸತ್ಯೋ ವಿಕ್ರಮಃ ಪಾರ್ಥ ಯತ್ರ ಭೂರಿಶ್ರವಾ ರಣೇ ।
ವಿಶೇಷಯತಿ ವಾರ್ಷ್ಣೇಯಂ ಸಾತ್ಯಕಂ ಸತ್ಯವಿಕ್ರಮಮ್ ॥ ೬೩ ॥

ಎಲೈ ಪಾರ್ಥನೇ, ಎಲ್ಲಿ ರಣರಂಗದಲ್ಲಿ ಭೂರಿಶ್ರವನು ಸತ್ಯಪರಾಕ್ರಮವುಳ್ಳ ವೃಷ್ಣಿಕುಲೋತ್ಪನ್ನನಾದ ಸಾತ್ಯಕಿಗಿಂತಲೂ ಅತಿಶಯವನ್ನು ತೋರುತ್ತಾನೆಯೋ ಅಂತಹ ಅವನ ಪರಾಕ್ರಮವು ಅಸತ್ಯವಾದುದು ಎಂದು ಹೇಳಿದನು.

ಏವಮುಕ್ತೋ ಮಹಾಬಾಹುರ್ವಾಸುದೇವೇನ ಪಾಂಡವಃ ।
ಮನಸಾ ಪೂಜಯಾಮಾಸ ಭೂರಿಶ್ರವಸಮಾಹವೇ ॥ ೬೪ ॥

ಕೃಷ್ಣನಿಂದ ಹೀಗೆ ಹೇಳಲ್ಪಟ್ಟ ಮಹಾಬಾಹುವಾದ ಅರ್ಜುನನು ರಣರಂಗದಲ್ಲಿ ಭೂರಿಶ್ರವನನ್ನು ಮನಸ್ಸಿನಲ್ಲಿಯೇ ಪೂಜಿಸಿದನು.

ವಿಕರ್ಷನ್ ಸಾತ್ವತಶ್ರೇಷ್ಠಂ ಕ್ರೀಡಮಾನ ಇವಾಹವೇ ।
ಸಂಹರ್ಷಯತಿ ಮಾಂ ಭೂಯಃ ಕುರೂಣಾಂ ಕೀರ್ತಿವರ್ಧನಃ ॥ ೬೫॥

ಪ್ರವರಂ ವೃಷ್ಣಿವೀರಾಣಾಂ ಯನ್ನ ಹನ್ಯಾದ್ದಿ ಸಾತ್ಯಕಿಮ್ ।
ಮಹಾದ್ವಿಪಮಿವಾರಣ್ಯೇ ಮೃಗೇಂದ್ರ ಇವ ಕರ್ಷತಿ ॥ ೬೬ ॥

ಕುರುಗಳ ಕೀರ್ತಿವರ್ಧನನಾದ ಭೂರಿಶ್ರವನು ಸಾತ್ವತಶ್ರೇಷ್ಠನಾದ ಸಾತ್ಯಕಿಯನ್ನು ರಣರಂಗದಲ್ಲಿ ಎಳೆದಾಡುತ್ತಾ ನನ್ನನ್ನು ಇನ್ನೂ ಸಂತೋಷಗೊಳಿಸುತ್ತಿದ್ದಾನೆ. ವೃಷ್ಣಿವೀರರಲ್ಲಿ ಶ್ರೇಷ್ಠನಾದ ಸಾತ್ಯಕಿಯನ್ನು ಅವನು (ಕೊಲ್ಲದೇ) ಅರಣ್ಯದಲ್ಲಿ ಸಿಂಹವು ಮಹಾಗಜವನ್ನು ಎಳೆದಾಡಿದಂತೆ ಎಳೆದಾಡುತ್ತಿದ್ದಾನೆ.

ಏವಂ ತು ಮನಸಾ ರಾಜನ್ ಪಾರ್ಥಃ ಸಂಪೂಜ್ಯ ಕೌರವಮ್ ।
ವಾಸುದೇವಂ ಮಹಾಬಾಹುರರ್ಜುನಃ ಪ್ರತ್ಯಭಾಷತ ॥ ೬೭ ॥

ಸೈಂಧವಾಸಕ್ತದೃಷ್ಟಿತ್ವಾನ್ನೈನಂ ಪಶ್ಯಾಮಿ ಮಾಧವ ।
ಏಷ ತ್ವಸುಕರಂ ಕರ್ಮ ಯಾದವಾರ್ಥೇ ಕರೋಮ್ಯಹಮ್ ॥ ೬೮ ॥

ಎಲೈ ರಾಜನೇ, ಅರ್ಜುನನು ಹೀಗೆ ಮನಸ್ಸಿನಲ್ಲಿ ಯೋಚಿಸಿ, ಕೌರವನಾದ ಭೂರಿಶ್ರವನನ್ನು ಪೂಜಿಸಿ, ಮಹಾಬಾಹುವಾದ ಅವನು ಕೃಷ್ಣನನ್ನು ಕುರಿತು- ಮಾಧವನೇ, ಸೈಂಧವನಲ್ಲಿಯೇ ನೆಟ್ಟ ದೃಷ್ಟಿಯುಳ್ಳ ಕಾರಣದಿಂದ ನಾನು ಸಾತ್ಯಕಿಯನ್ನು ನೋಡಲಿಲ್ಲ. ಈಗ ನಾನು ಮಧುಕುಲೋತ್ಪನ್ನನಾದ ಸಾತ್ಯಕಿಯ ಸಲುವಾಗಿ ದುಷ್ಕರವಾದ ಕಾರ್ಯವನ್ನು ಮಾಡುವೆನು' ಎಂದು ಹೇಳಿದನು.

ಇತ್ಯುಕ್ತ್ವಾ ವಚನಂ ಕುರ್ವನ್ ವಾಸುದೇವಸ್ಯ ಪಾಂಡವಃ ।
ಸಖಡ್ಗಂ ಯಜ್ಞಶೀಲಸ್ಯ ಪತ್ರಿಣಾ ಬಾಹುಮಚ್ಛಿನತ್ ॥ ೬೯ ॥

ಕೃಷ್ಣನನ್ನು ಕುರಿತು ಹೀಗೆ ಹೇಳಿ, ತನ್ನ ಮಾತನ್ನು ನಡೆಸುವವನಾಗಿ ಅರ್ಜುನನು ಯಜ್ಞಶೀಲನಾದ ಭೂರಿಶ್ರವನ ಖಡ್ಗ ಸಹಿತವಾದ ದಕ್ಷಿಣ ಬಾಹುವನ್ನು ಬಾಣದಿಂದ ಕತ್ತರಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಏಕಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೆಂಟನೆಯ ಅಧ್ಯಾಯ

ಭೂರಿಶ್ರವನ ಪ್ರಾಯೋಪ್ರವೇಶ. ಸಾತ್ಯಕಿಯಿಂದ ಭೂರಿಶ್ರವನ ಶಿರಚ್ಛೇದ.

ಸಂಜಯಃ

ಸ ಬಾಹುರಪತದ್ ಭೂಮೌ ಸಖಡ್ಗಃ ಸಶುಭಾಂಗದಃ ।
ಯಂತ್ರಮುಕ್ತೋ ಮಹೇಂದ್ರಸ್ಯ ಧ್ವಜೋ ವೃತ್ರೋತ್ಸವೋ ಯಥಾ ।
ಆದಧಜ್ಜೀವಲೋಕಸ್ಯ ದುಃಖಮುತ್ತಮಮುತ್ತಮಃ ॥ ೧ ॥

ಸಂಜಯ– ಖಡ್ಗ ಮತ್ತು ಶುಭಾಂಗದ ಸಹಿತವಾದ ಆ ಬಾಹುವು ಉತ್ಸವವು ಮುಗಿದ ಮೇಲೆ ಯಂತ್ರದಿಂದ ಮುಕ್ತವಾದ ಇಂದ್ರಧ್ವಜದಂತೆ ಜೀವಲೋಕಕ್ಕೆ ದುಃಖವನ್ನುಂಟು ಮಾಡುತ್ತಾ ಭೂಮಿಯ ಮೇಲೆ ಬಿದ್ದಿತು.

ಪ್ರಹರಿಷ್ಯನ್ ಹೃತೋ ಬಾಹುರದೃಶ್ಯೇನ ಕಿರೀಟಿನಾ ।
ವೇಗೇನಾಭ್ಯಪತದ್ ಭೂಮೌ ಪಂಚಾಸ್ಯ ಇವ ಪನ್ನಗಃ ॥ ೨ ॥

ಇನ್ನೇನು ಹೊಡೆಯುವುದರಲ್ಲಿದ್ದ ಭೂರಿಶ್ರವನ ಬಾಹುವು ಮರೆಯಾದ ಅರ್ಜುನನಿಂದ ಹೊಡೆಯಲ್ಪಟ್ಟು ಐದು ತಲೆಯುಳ್ಳ ಸರ್ಪದಂತೆ ಶೀಘ್ರವಾಗಿ ಭೂಮಿಯ ಮೇಲೆ ಬಿದ್ದಿತು.

ಸ ಮೋಘಂ ಕೃತಮಾತ್ಮಾನಂ ದೃಷ್ಟ್ವಾ ಪಾರ್ಥೇನ ಕೌರವಃ ।
ಉತ್ಸೃಜ್ಯ ಸಾತ್ಯಕಿಂ ಕ್ರೋಧಾದ್ ಗರ್ಹಯಾಮಾಸ ಪಾಂಡವಮ್ ॥೩॥

ತನ್ನ ಪ್ರಯತ್ನವು ಅರ್ಜುನನಿಂದ ವ್ಯರ್ಥಗೊಳಿಸಲ್ಪಟ್ಟುದನ್ನು ನೋಡಿ ಕೌರವನಾದ ಭೂರಿಶ್ರವನು ಸಾತ್ಯಕಿಯನ್ನು ಬಿಟ್ಟು ಕ್ರೋಧದಿಂದ ಅರ್ಜುನನನ್ನು ನಿಂದಿಸಿದನು.

ಸ ವಿಬಾಹುರ್ಮಹಾರಾಜ ವಿಕಪಕ್ಷ ಇವಾಂಡಜಃ ।
ವಿಕಚಕ್ರೋ ರಥೋ ಯದ್ವದ್ ಧರಣೀಮಾಸ್ಥಿತೋ ನೃಪಃ ।
ಉವಾಚ ಪಾಂಡವಂ ಚೈವ ಸರ್ವಕ್ಷತ್ರಸ್ಯ ಪಶ್ಯತಃ ॥ ೪ ॥

ಎಲೈ ಮಹಾರಾಜನೇ, ದಕ್ಷಿಣಬಾಹುವಿಲ್ಲದ ಅವನು ಒಂದು ರೆಕ್ಕೆಯನ್ನು ಹೊಂದಿದ ಪಕ್ಷಿಯಂತೆ, ಒಂದು ಚಕ್ರವನ್ನು ಹೊಂದಿದ ರಥದಂತೆ ಭೂಮಿಯ ಮೇಲೆ ನಿಂತು ಎಲ್ಲ ಕ್ಷತ್ರಿಯರೂ ನೋಡುತ್ತಿರುವಂತೆ ಅರ್ಜುನನನ್ನು ಕುರಿತು ಹೇಳಿದನು.

ನೃಶಂಸಂ ಬತ ಕೌಂತೇಯ ಕರ್ಮೇದಂ ಕೃತವಾನಸಿ ।
ಅಪಶ್ಯತೋ ವಿಷಕ್ತಸ್ಯ ಯನ್ಮೇ ಬಾಹುಮಚಿಚ್ಛಿದಃ ॥ ೫ ॥

ಎಲೈ ಕೌಂತೇಯನೇ, ನಿನ್ನನ್ನು ನೋಡದಿರುವ, ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡದಿರುವ ನನ್ನ ಬಾಹುವನ್ನು ಕತ್ತರಿಸಿ ನೀನು ಬಹಳ ಕ್ರೂರವಾದ ಈ ಕರ್ಮವನ್ನು ಮಾಡಿದ್ದೀಯೆ.

ಕಂ ನು ವಕ್ಷ್ಯಸಿ ರಾಜಾನಂ ಧರ್ಮಪುತ್ರಂ ಯುಧಿಷ್ಠಿರಮ್ ।
ಕಿಂ ಕುರ್ವಾಣೋ ಮಯಾ ಸಂಖ್ಯೇ ಹತೋ ಭೂರಿಶ್ರವಾ ಇತಿ ॥ ೬ ॥

ಧರ್ಮಪುತ್ರನಾದ ಯುಧಿಷ್ಠಿರನನ್ನು ಕುರಿತು, ಏನು ಮಾಡುತ್ತಿದ್ದ ಭೂರಿಶ್ರವನನ್ನು ನಾನು ಯುದ್ಧದಲ್ಲಿ ಕೊಂದನು ಎಂದು ಹೇಳುತ್ತೀಯೆ?

ಇದಮಿಂದ್ರೇಣ ತೇ ಸಾಕ್ಷಾದುಪದಿಷ್ಟಂ ಮಹಾತ್ಮನಾ ।
ಅಸ್ತ್ರಂ ರುದ್ರೇಣ ವಾ ಪಾರ್ಥ ದ್ರೋಣೇನಾಥ ಕೃಪೇಣ ವಾ ॥ ೭ ॥

ಎಲೈ ಪಾರ್ಥನೇ, ಈ ಅಸ್ತ್ರವು ನಿನಗೆ ಮಹಾತ್ಮನಾದ ಇಂದ್ರನಿಂದ ಉಪದೇಶಿಸಲ್ಪಟ್ಟಿತ್ತೆ? ಅಥವಾ ರುದ್ರನಿಂದ, ದ್ರೋಣರಿಂದ ಅಥವಾ ಕೃಪರಿಂದ ಉಪದೇಶಿಸಲ್ಪಟ್ಟಿತ್ತೆ?

ನನು ನಾಮ ಸ್ವಧರ್ಮಜ್ಞಸ್ತ್ವಂ ಲೋಕೇಽಭ್ಯಧಿಕಃ ಪರೈಃ ।
ಅಯುದ್ಧ್ಯಮಾನಸ್ಯ ಕಥಂ ರಣೇ ಪ್ರಹೃತವಾನಸಿ ॥ ೮ ॥

ನೀನು ಲೋಕದಲ್ಲಿ ನಿನ್ನ ಧರ್ಮವಾದ ಕ್ಷತ್ರಿಯಧರ್ಮವನ್ನು ತಿಳಿದವರಲ್ಲಿ ಎಲ್ಲರಿಗಿಂತಲೂ ಶ್ರೇಷ್ಠನಾದವನಷ್ಟೆ? ರಣರಂಗದಲ್ಲಿ ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡದಿರುವ ನನ್ನನ್ನು ಹೇಗೆ ಹೊಡೆದೆ?

ನ ಪ್ರಮತ್ತಾಯ ಭೀತಾಯ ವಿರಥಾಯ ಪ್ರಯಾಚತೇ ।
ವ್ಯಸನೇ ವರ್ತಮಾನಾಯ ಪ್ರಹರಂತಿ ಮನಸ್ವಿನಃ ॥ ೯ ॥

ಪ್ರಮತ್ತನಾದವನಿಗೆ, ಭೀತನಾದವನಿಗೆ, ರಥಹೀನನಾದವನಿಗೆ, ಬೇಡುವವನಿಗೆ, ಕಷ್ಟದಲ್ಲಿ ಸಿಲುಕಿದವನಿಗೆ ಧೈರ್ಯಶಾಲಿಗಳಾದ ಕ್ಷತ್ರಿಯರು ಹೊಡೆಯುವುದಿಲ್ಲ.

ಇದಂ ತು ನೀಚಾಚರಿತಮಸತ್ಪುರುಷಸೇವಿತಮ್ ।
ಕಥಮಾಚರಿತಂ ಪಾರ್ಥ ತ್ವಯಾ ಕರ್ಮ ಸುದುಷ್ಕರಮ್ ॥ ೧೦ ॥

ನೀನು ಮಾಡಿದ ಈ ಕರ್ಮವಾದರೂ ಅಸಜ್ಜನರಿಂದ ಸೇವಿಸಲ್ಪಡುವುದೂ ಮತ್ತು ನೀಚರಿಂದ ಆಚರಿಸಲ್ಪಡುವುದೂ ಆಗಿದೆ. ಎಲೈ ಅರ್ಜುನನೇ, ಅತ್ಯಂತ ದುಷ್ಕರವಾದ ಕರ್ಮವನ್ನು ನೀನು ಹೇಗೆ ಮಾಡಿದೆ?

ಆರ್ಯೇಣ ಸುಕರಂ ಹ್ಯಾಹುರಾರ್ಯಕರ್ಮ ಧನಂಜಯ ।
ಅನಾರ್ಯಕರ್ಮ ತ್ವಾರ್ಯೇಣ ಸುದುಷ್ಕರತರಂ ಭುವಿ ॥ ೧೧ ॥

ಎಲೈ ಧನಂಜಯನೇ, ಆರ್ಯನಾದವನು ಆರ್ಯಕರ್ಮವನ್ನು ಮಾಡುವುದು ಸುಲಭ ಎಂದು ಜ್ಞಾನಿಗಳು ಹೇಳುತ್ತಾರೆ. ಆರ್ಯನಾದವನು ಭೂಮಿಯಲ್ಲಿ ಅನಾರ್ಯ ಕರ್ಮವನ್ನು ಮಾಡುವುದು ಅತ್ಯಂತ ದುಷ್ಕರವಾದುದು.

ಯೇಷು ಯೇಷು ನರಃ ಪಾರ್ಥ ಯತ್ರ ಯತ್ರ ಚ ವರ್ತತೇ ।
ಆಶು ತಚ್ಚೀಲತಾಮೇತಿ ತದಿದಂ ತ್ವಯಿ ದೃಶ್ಯತೇ ॥ ೧೨ ॥

ಎಲೈ ಪಾರ್ಥನೇ, ಮನುಷ್ಯನು ಯಾರ ಯಾರ ಜೊತೆಯಲ್ಲಿ ಎಲ್ಲೆಲ್ಲಿ ಇರುತ್ತಾನೋ ಅವರ ಸ್ವಭಾವವನ್ನು ಶೀಘ್ರವಾಗಿ ಹೊಂದುತ್ತಾನೆ. ಇದು ನಿನ್ನಲ್ಲಿ ಕಂಡುಬರುತ್ತಿದೆ.

ಕಥಂ ಹಿ ರಾಜವಂಶ್ಯಸ್ತ್ವಂ ಕೌರವೇಯೋ ವಿಶೇಷತಃ ।
ಕ್ಷತ್ರಧರ್ಮಾದಪಕ್ರಾಂತಃ ಸುವೃತ್ತಶ್ಚರಿತವ್ರತಃ ॥ ೧೩ ॥

ರಾಜವಂಶದಲ್ಲಿ ಅದರಲ್ಲಿಯೂ ವಿಶೇಷವಾಗಿ ಕೌರವವಂಶದಲ್ಲಿ ಜನಿಸಿ, ಒಳ್ಳೆಯ ನಡತೆಯನ್ನು ಮತ್ತು ಚರಿತೆಯನ್ನು ಹೊಂದಿದ ನೀನು ಕ್ಷತ್ರಿಯ ಧರ್ಮದಿಂದ ಹೇಗೆ ದೂರ ಸರಿದೆ?

ಇದಂ ತು ಯದತಿಕ್ಷುದ್ರಂ ವಾರ್ಷ್ಣೇಯಾರ್ಥೇ ಕೃತಂ ತ್ವಯಾ ।
ವಾಸುದೇವಮತಂ ನೂನಂ ನೈತತ್ ತ್ವಯ್ಯುಪಪದ್ಯತೇ ॥ ೧೪ ॥

ಸಾತ್ಯಕಿಯ ಸಲುವಾಗಿ ನೀನು ಮಾಡಿದ ಅತ್ಯಂತ ಕ್ಷುದ್ರವಾದ ಈ ಕರ್ಮವು ಖಂಡಿತವಾಗಿ ಕೃಷ್ಣನಿಗೆ ಅಭಿಮತವಾದುದು. ಇದು ನಿನಗೆ ಯುಕ್ತವಾಗುವುದಿಲ್ಲ

ಕೋ ಹಿ ನಾಮ ಪ್ರಮತ್ತಾಯ ಪರೇಣ ಸಹ ಯುದ್ಧ್ಯತೇ ।
ಈದೃಶಂ ವ್ಯಸನಂ ದದ್ಯಾದ್ ಯೋ ನ ಕೃಷ್ಣಸಖೋ ಭವೇತ್ ॥ ೧೫ ॥

ಕೃಷ್ಣನ ಸ್ನೇಹಿತನಲ್ಲದ ಯಾವನು ಪ್ರಮತ್ತನಾದ, ಬೇರೆಯವನ ಜೊತೆಯಲ್ಲಿ ಯುದ್ಧ ಮಾಡುತ್ತಿರುವ ಯೋಧನಿಗೆ ಇಂತಹ ವ್ಯಸನವನ್ನು ಕೊಟ್ಟಾನು?

ವಾತ್ಯಾಃ ಸಂಶ್ಲಿಷ್ಟಕರ್ಮಾಣಃ ಪ್ರಕೃತ್ಯೈವ ವಿಗರ್ಹಿತಾಃ ।
ವೃಷ್ಣ್ಯಂಧಕಾಃ ಕಥಂ ಪಾರ್ಥ ಪ್ರಮಾಣಂ ಭವತಾ ಕೃತಾಃ ॥ ೧೬ ॥

ವೃತಭೃಷ್ಟರೂ, ಸ್ವಾಭಾವಿಕವಾಗಿ ನಿಂದಿತರಾದವರೂ, ಜೊತೆಯಲ್ಲಿ ಸೇರಿ ಕಾರ್ಯವನ್ನು ಮಾಡುವವರೂ ಆದ ವೃಷ್ಣ್ಯಂಧಕರನ್ನು ಎಲೈ ಪಾರ್ಥನೇ, ನೀನು ಹೇಗೆ ಪ್ರಮಾಣವೆಂದು ಅಂಗೀಕರಿಸಿದೆ?

ಸಂಜಯಃ

ಏವಮುಕ್ತೋ ರಣೇ ಪಾರ್ಥೋ ಭೂರಿಶ್ರವಸಮಬ್ರವೀತ್ ।
ವ್ಯಕ್ತಂ ಹಿ ಜೀರ್ಯಮಾಣೋಽಪಿ ಬುದ್ಧಿಂ ಜರಯತೇ ಜನಃ ॥ ೧೭ ॥

ಸಂಜಯ– ಹೀಗೆ ರಣರಂಗದಲ್ಲಿ ಹೇಳಲ್ಪಟ್ಟ ಅರ್ಜುನನು ಭೂರಿಶ್ರವನನ್ನು ಕುರಿತು ಮಾತನಾಡಿದನು- ಮುಪ್ಪನ್ನು ಹೊಂದುವವನು ತನ್ನ ಬುದ್ಧಿಗೂ ಮುಪ್ಪನ್ನು ತಂದುಕೊಳ್ಳುತ್ತಾನೆ ಎಂಬುದು ಸ್ಪಷ್ಟವಾಗಿದೆ.

ಅನರ್ಥಕಮಿದಂ ಸರ್ವಂ ಯತ್ ತ್ವಯಾ ವ್ಯಾಹೃತಂ ಪ್ರಭೋ ।
ಜಾನನ್ನೇವ ಹೃಷೀಕೇಶಂ ಗರ್ಹಸೇ ಮಾಂ ಚ ಪಾಂಡವಮ್ ॥ ೧೯ ॥

ಸಂಗ್ರಾಮಾಣಾಂ ಹಿ ಧರ್ಮಜ್ಞಃ ಸರ್ವಶಾಸ್ತ್ರಾರ್ಥಪಾರಗಃ ।
ನ ಚಾಧರ್ಮಮಹಂ ಕುರ್ಯಾಂ ಜಾನಂಶ್ಚೈವ ಹಿ ಮುಹ್ಯಸೇ ॥ ೨೦ ॥

ಎಲೈ ಪ್ರಭುವೇ, ನೀನು ಆಡಿದ ಮಾತುಗಳೆಲ್ಲವೂ ಅನರ್ಥಕವಾದುವು. ಯುದ್ಧ ಧರ್ಮವನ್ನು ತಿಳಿದವನೂ, ಸರ್ವಶಾಸ್ತ್ರ ಪಾರಂಗತನೂ ಆದ ನೀನು ಎಲ್ಲವನ್ನೂ ತಿಳಿದೇ ಹೃಷೀಕೇಶನಾದ ಕೃಷ್ಣನನ್ನೂ ಮತ್ತು ಪಾಂಡವನಾದ ನನ್ನನ್ನೂ ನಿಂದಿಸುತ್ತಿದ್ದೀಯೆ. ನಾನು ಅಧರ್ಮವನ್ನು ಮಾಡಲಾರೆ. ನೀನು ಎಲ್ಲವನ್ನೂ ತಿಳಿದವನಾದರೂ ಭ್ರಾಂತಿಗೆ ಒಳಗಾಗುತ್ತಿದ್ದೀಯೆ.

ಯುದ್ಧ್ಯಂತೇ ಕ್ಷತ್ರಿಯಾಃ ಶತ್ರೂನ್ ಸ್ವೈಃಸ್ವೈಃ ಪರಿವೃತಾ ನರಾಃ ।
ಭ್ರಾತೃಭಿಃ ಪಿತೃಭಿಃ ಪುತ್ರೈಸ್ತಥಾ ಸಂಬಂಧಿಬಾಂಧವೈಃ ॥ ೨೧ ॥

ಕ್ಷತ್ರಿಯರಾದ ಮನುಷ್ಯರು ತಮ್ಮ ತಮ್ಮ ಸಹೋದರರಿಂದ, ತಂದೆಯಿಂದ, ಪುತ್ರರಿಂದ, ಹಾಗೆ ಸಂಬಂಧ-ಬಾಂಧವರಿಂದ ಸಹಿತರಾಗಿ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾರೆ.

ಸ ಕಥಂ ಸಾತ್ಯಕಿಂ ಶಿಷ್ಯಂ ಸುಹೃತ್ಸಂಬಂಧಿಮೇವ ಚ ।
ಅಸ್ಮದರ್ಥೇ ಚ ಯುದ್ಧ್ಯಂತಂ ತ್ಯಕ್ತ್ವಾ ಪ್ರಾಣಾನ್ ಸುದುಸ್ತ್ಯಜಾನ್ ॥

ಅಂತಹ ಕ್ಷತ್ರಿಯನಾದ ನಾನು ನನ್ನ ಶಿಷ್ಯನೂ, ಸ್ನೇಹಿತನೂ, ಸಂಬಂಧಿಯೂ, ದುಸ್ತ್ಯಜವಾದ ಪ್ರಾಣವನ್ನು ಬಿಟ್ಟು ನಮ್ಮ ಸಲುವಾಗಿ ಯುದ್ಧವನ್ನು ಮಾಡುತ್ತಿರುವ ಸಾತ್ಯಕಿಯನ್ನು ಉಪೇಕ್ಷೆಮಾಡಲು ಹೇಗೆ ಸಾಧ್ಯ?

ಮಮ ಬಾಹುಂ ರಣೇ ರಾಜನ್ ದಕ್ಷಿಣಂ ಯುದ್ಧದುರ್ಮದಮ್ ।
ತ್ವಯಾ ನಿಷೃಷ್ಯಮಾಣಂ ಚ ದೃಷ್ಟವಾನಸ್ಮಿ ನಿಷ್ಠಿಯಮ್ ॥ ೨೩ ॥

ಎಲೈ ರಾಜನೇ, ನನ್ನ ದಕ್ಷಿಣ ಬಾಹುವಿನಂತಿರುವ ಯುದ್ಧದುರ್ಮದನಾದ ಸಾತ್ಯಕಿಯು ರಣರಂಗದಲ್ಲಿ ನಿಷ್ಠಿಯನಾಗಿ ನಿನ್ನಿಂದ ಎಳೆದಾಡಲ್ಪಡುವುದನ್ನು ನಾನು ನೋಡಿದೆನು.

ಯಾ ಯಸ್ಯ ಯುದ್ಧ್ಯತೇऽರ್ಥಾಯ ಸ ಸಂರಕ್ಷ್ಯೋ ನರಾಧಿಪ ।
ತೈ ರಕ್ಷ್ಯಮಾಣೈಃ ಸ ನೃಪೋ ರಕ್ಷಿತವ್ಯೋ ಮಹಾಮೃಧೇ ॥ ೨೪ ॥

ಎಲೈ ರಾಜನೇ, ಯಾವನು ಯಾರ ಸಲುವಾಗಿ ಯುದ್ಧವನ್ನು ಮಾಡುತ್ತಾನೆಯೋ ಅವನು ರಕ್ಷಿಸಲ್ಪಡಬೇಕಾದವನು. ರಾಜನಿಂದ ರಕ್ಷಿತರಾದ ಅಂತಹವರಿಂದ ದೊಡ್ಡ ಯುದ್ಧದಲ್ಲಿ ರಾಜನು ರಕ್ಷಿಸಲ್ಪಡುತ್ತಾನೆ.

ಯದ್ಯಹಂ ಸಾತ್ಯಕಿಂ ದೃಷ್ಟ್ವಾ ತೂಷ್ಣೀಮಾಸಿಷ್ಯ ಆಹವೇ ।
ತತಸ್ತೇನ ವಿಯೋಗಶ್ಚ ಪ್ರಾಪ್ಯಂ ನರಕಮೇವ ಚ ॥ ೨೫ ॥

ನಾನು ಸಾತ್ಯಕಿಯನ್ನು ನೋಡಿ ರಣರಂಗದಲ್ಲಿ ಸುಮ್ಮನಿದ್ದರೆ ಅದರಿಂದ ಅವನಿಂದ ವಿಯೋಗವೂ ಮತ್ತು ಮುಂದೆ ನರಕವು ನನಗೆ ಉಂಟಾಗುತ್ತಿದ್ದಿತು.

ರಕ್ಷಿತವ್ಯೋ ಮಯಾ ಯಸ್ಮಾತ್ ತಸ್ಮಾಲ್ಲಬ್ಧೋ ಮಯಾ ಸ ಚ ।
ಯಶಶ್ಚೈವ ಸ್ವಪಕ್ಷೇಭ್ಯಃ ಫಲಂ ಮಿತ್ರಸ್ಯ ರಕ್ಷಣಾತ್ ॥ ೨೬ ॥

ಅವನು ನನ್ನಿಂದ ರಕ್ಷಿಸಲ್ಪಡಬೇಕಾದ ಕಾರಣದಿಂದ ನಾನು ಅವನನ್ನು ನನ್ನ ಪಕ್ಷದವರಿಂದ ಕೀರ್ತಿಯನ್ನೂ, ಮಿತ್ರನನ್ನು ರಕ್ಷಣೆ ಮಾಡಿದ ಕಾರಣದಿಂದ ಶ್ರೇಷ್ಠವಾದ ಫಲವನ್ನೂ ಹೊಂದಿದೆನು.

ಯಶ್ಚ ಮಾಂ ಗರ್ಹಸೇ ರಾಜನ್ ಕೃಷ್ಣೇನ ಸಹ ಸಂಗತಮ್ ।
ಕಸ್ತೇನ ಸಂಗಮಂ ನೇಚ್ಛೇತ್ ತತ್ರ ತೇ ಬುದ್ಧಿವಿಭ್ರಮಃ ॥ ೨೭ ॥

ಎಲೈ ರಾಜನೇ, ಕೃಷ್ಣನ ಜೊತೆಯಲ್ಲಿ ಸೇರಿದ ನನ್ನನ್ನು ನೀನು ನಿಂದಿಸುತ್ತಿರುವಿಯಷ್ಟೆ. ಅವನ ಜೊತೆಯಲ್ಲಿ ಯಾರು ಸಂಗಮವನ್ನು ಬಯಸಲಾರರು? ಈ ವಿಷಯದಲ್ಲಿ ನಿನ್ನ ಬುದ್ಧಿಯು ಭ್ರಾಂತಿಗೆ ಒಳಗಾಗಿದೆ.

ಆಬದ್ಧಕವಚಸ್ಯೇಹ ರಥಮಾರುಹ್ಯ ತಿಷ್ಠತಃ ।
ಸರ್ವಾಯುಧೈರುಪೇತಸ್ಯ ಪ್ರತಿಯೋಧಪ್ರತೀಕ್ಷಿಣಃ ॥ ೨೮ ॥

ಅಸ್ಮಿನ್ ರಥಗಜಾನೀಕೇ ಹಯಪತ್ತಿಸಮಾಕುಲೇ ।
ಸಿಂಹನಾದೋದ್ಧತರವೇ ಗಂಭೀರೇ ಸೈನ್ಯಸಾಗರೇ ॥ ೨೯ ॥

ಸ್ಪೈಶ್ಚಾಪಿ ಸಮುಪೇತಸ್ಯ ವಿಕ್ರಾಂತಸ್ಯ ತಥಾ ರಣೇ ।
ಸಾತ್ಯಕೇನ ಕಥಂ ಯೋಗ್ಯಃ ಸಂಗ್ರಾಮಸ್ತೇ ಭವಿಷ್ಯತಿ ॥ ೩೦ ॥

ಕವಚವನ್ನು ಧರಿಸಿ, ನಿನ್ನ ರಥದಲ್ಲಿ ಕ್ಷೇಮದಿಂದ ಇದ್ದು, ಸರ್ವಾಯುಧಗಳನ್ನು ಹೊಂದಿದವನಾಗಿ, ಪ್ರತಿಯೋಧನನ್ನು ನಿರೀಕ್ಷೆ ಮಾಡುತ್ತಾ, ರಥ-ಗಜಸೇನೆಗಳನ್ನು ಹೊಂದಿದ, ಹಯ-ಪದಾತಿಗಳಿಂದ ನಿಬಿಡವಾದ, ಸಿಂಹನಾದದಂತಹ ಉದ್ಧತ ಘೋಷದಿಂದ ಕೂಡಿದ ಗಂಭೀರವಾದ ಈ ಸೈನ್ಯಸಾಗರದಲ್ಲಿ ನಿನ್ನವರಿಂದಲೂ ಪರಿವಾರಿತನಾದ ಪರಾಕ್ರಮಶಾಲಿಯಾದ ನಿನಗೆ ಸಾತ್ಯಕಿಯ ಜೊತೆಯಲ್ಲಿ ನಿನಗೆ ಹೇಗೆ ಯುದ್ಧವು ಯೋಗ್ಯವಾಗುವುದು?

ಬಹುಭಿಃ ಸಹ ಸಂಗತ್ಯ ನಿರ್ಜಿತ್ಯ ಚ ಮಹಾರಥಾನ್ ।
ಶ್ರಾಂತಶ್ಚ ಶ್ರಾಂತವಾಹಶ್ಚ ಕ್ಷೀಣಸರ್ವಾಯುಧಸ್ತ್ವಯಾ ॥ ೩೧ ॥

ಸಮೇತಃ ಸಾತ್ಯಕಿಃ ಸಂಖೇ ನಿರ್ಜಿತಶ್ಚ ಮಹಾರಥಃ ।
ಈದೃಶಂ ಸಾತ್ಯಕಿಂ ಸಂಖೇ ನಿರ್ಜಿತ್ಯ ಚ ಮಹಾರಥಮ್ ॥ ೩೨ ॥

ಆಧಿಕತ್ವಂ ವಿಜಾನೀಷೇ ಸ್ವವೀರ್ಯವಶಮಾಗತಮ್ ॥ ೩೩ ॥

ಅನೇಕ ಮಹಾರಥರ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ಅವರನ್ನು ಜಯಿಸಿ, ದಣಿದು, ಅವನ ಕುದುರೆಗಳೂ ದಣಿದಿರಲು, ಎಲ್ಲ ಆಯುಧಗಳನ್ನು ಕಳೆದುಕೊಂಡ ಅವನ ಸಮಾಗಮವನ್ನು ಹೊಂದಿ ನೀನು ಮಹಾರಥನಾದ ಅವನನ್ನು ರಣರಂಗದಲ್ಲಿ ಪರಾಭವಗೊಳಿಸಿದ್ದೀಯೆ. ಈ ಅವಸ್ಥೆಯಲ್ಲಿದ್ದ ಮಹಾರಥನಾದ ಸಾತ್ಯಕಿಯನ್ನು ಯುದ್ಧದಲ್ಲಿ ಸೋಲಿಸಿ, ಅವನು ನನ್ನ ಪರಾಕ್ರಮಕ್ಕೆ ವಶನಾದನೆಂದು ತಿಳಿದು ನೀನು ನಿನ್ನನ್ನು ಶ್ರೇಷ್ಠನಾದವನೆಂದು ತಿಳಿದಿದ್ದೀಯೆ.

ಇಚ್ಛಸಿ ತ್ವಂ ಶಿರಸ್ತಸ್ಯ ಅಸಿನಾ ಹರ್ತುಮಾಹವೇ ।
ತಥಾ ಕೃಚ್ಛ್ರಗತಂ ದೃಷ್ಟ್ವಾ ಸಾತ್ಯಕಿಂ ಕಃ ಕ್ಷಮಿಷ್ಯತಿ ॥ ೩೪ ॥

ತ್ವಂ ತು ಗರ್ಹಯ ಚಾತ್ಮಾನಂ ಸ್ವಧರ್ಮಂ ಯೋ ನ ರಕ್ಷಸಿ ॥ ೩೫ ॥

ಮತ್ತು ರಣರಂಗದಲ್ಲಿ ಖಡ್ಗದಿಂದ ಅವನ ಶಿರಸ್ಸನ್ನು ಕತ್ತರಿಸಲು ಬಯಸುತ್ತಿದ್ದೀಯೆ. ಅಂತಹ ಕಷ್ಟದಲ್ಲಿರುವ ಸಾತ್ಯಕಿಯನ್ನು ನೋಡಿ ಯಾರು ಸಹಿಸುವರು? ನಿನ್ನ ಧರ್ಮವನ್ನು ರಕ್ಷಿಸದ ನಿನ್ನನ್ನೇ ನೀನು ನಿಂದಿಸು.

ಏಕಸ್ಯೈಕೇನ ಹಿ ಕಥಂ ಸಂಗ್ರಾಮಃ ಸಂಭವಿಷ್ಯತಿ ।
ಕಥಂ ರಕ್ಷಿಷ್ಯಸೇ ವೀರ ಯೇ ವೈ ತ್ವಾಂ ಸಂಶ್ರಿತಾ ಜನಾಃ ॥ ೩೬ ॥

ಒಬ್ಬನಿಗೆ ಒಬ್ಬನ ಜೊತೆಯಲ್ಲಿಯೇ ಯುದ್ಧವು ಹೇಗೆ ನಡೆಯುವುದು? ಎಲೈ ವೀರನೇ, ನಿನ್ನನ್ನು ಆಶ್ರಯಿಸಿದ ಅನೇಕ ಜನರನ್ನು ನೀನು ಹೇಗೆ ರಕ್ಷಿಸುವಿ?

ಆತತಶಸ್ತ್ರಸ್ಯ ತು ರಣೇ ವೃಷ್ಣಿಪುತ್ರಂ ಜಿಘಾಂಸತಃ ।
ಛಿನ್ನವಾನ್ ಯದ್ಯಹಂ ಬಾಹುಂ ನೈತಲ್ಲೋಕವಿಗರ್ಹಿತಮ್ ॥ ೩೭ ॥

ಕೈಯಲ್ಲಿ ಶಸ್ತ್ರವನ್ನು ಹಿಡಿದು ರಣರಂಗದಲ್ಲಿ ವೃಷ್ಣಿಪುತ್ರನಾದ ಸಾತ್ಯಕಿಯನ್ನು ಕೊಲ್ಲಲು ಬಯಸಿದ ನಿನ್ನ ಬಾಹುವನ್ನು ಕತ್ತರಿಸಿದರೆ ಇದು ಲೋಕನಿಂದಿತವಾಗುವುದಿಲ್ಲ.

ನ್ಯಸ್ತಶಸ್ತ್ರಸ್ಯ ಹಿ ಪುನರ್ವಿಕಲಸ್ಯ ವಿವರ್ಮಣಃ ।
ಅಭಿಮನ್ಯೋರ್ವಧಂ ತಾತ ಧಾರ್ಮಿಕಃ ಕೋ ನು ಪೂಜಯೇತ್ ॥

ಎಲೈ ಪ್ರೀತಿಪಾತ್ರನೇ, ಶಸ್ತ್ರರಹಿತನಾಗಿ, ಅಪ್ರಾಪ್ತ ಯೌವನನಾಗಿ, ಕವಚಶೂನ್ಯನಾಗಿದ್ದ ಅಭಿಮನ್ಯುವಿನ ವಧೆಯನ್ನು ಧಾರ್ಮಿಕನಾದ ಯಾವನು ತಾನೆ ಗೌರವಿಸುವನು? (ಎಂದು ಹೇಳಿದನು).

ಸಂಜಯಃ

ಏವಮುಕ್ತ್ವಾ ಮಹಾಬಾಹುರ್ಯೂಪಕೇತುರ್ಮಹಾಯಶಾಃ ।
ಯುಯುಧಾನಂ ಪರಿತ್ಯಜ್ಯ ರಣೇ ಪ್ರಾಯಮುಪಾವಿಶತ್ ॥ ೩೯ ॥

ಸಂಜಯ– ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಮಹಾಬಾಹುವೂ, ಮಹಾಕೀರ್ತಿವಂತನೂ, ಯೂಪಧ್ವಜನೂ ಆದ ಭೂರಿಶ್ರವನು ಸಾತ್ಯಕಿಯನ್ನು ಬಿಟ್ಟು ರಣರಂಗದಲ್ಲಿ ಪ್ರಾಯೋಪ್ರವೇಶಕ್ಕೆ ಕುಳಿತುಕೊಂಡನು.

ಶರಾನಾಸ್ತೀರ್ಯ ಸರ್ವೇಣ ಪಾಣಿನಾ ಪುಣ್ಯಲಕ್ಷಣಃ ।
ಯಿಯಾಸುಬ್ರಹ್ಮಲೋಕಾಯ ಪ್ರಾಣಾನ್ ಪ್ರಾಣೇಷ್ವಥಾಜುಹೋತ್ ॥

ಪುಣ್ಯಲಕ್ಷಣಗಳನ್ನು ಹೊಂದಿದ್ದ ಅವನು ಎಡಗೈಯಿಂದ ದರ್ಭೆಗಳನ್ನು ಹರಡಿ ಬ್ರಹ್ಮಲೋಕಕ್ಕೆ ಹೋಗುವವನಾಗಿ ಇಂದ್ರಿಯಗಳಿಂದ ವ್ಯುತ್ಕ್ರಮದಿಂದ ಹೋಮವನ್ನು ಮಾಡಿದನು.

ಸೂರ್ಯೇ ಚಕ್ಷುಃ ಸಮಾಧಾಯ ಪ್ರಸನ್ನಂ ಸಲಿಲೇ ಮನಃ ।
ಧ್ಯಾಯನ್ ಮಹೋಪನಿಷದಂ ಯೋಗಯುಕ್ತೋಽಭವನ್ಮುನಿಃ ॥ ೪೧ ॥

ಸೂರ್ಯನಲ್ಲಿ ಚಕ್ಷುಸ್ಸನ್ನು, ಪ್ರಸನ್ನವಾದ ಮನಸ್ಸನ್ನು ಜಲದಲ್ಲಿಯೂ ನಿಲ್ಲಿಸಿ, ವೇದಪ್ರತಿಪಾದ್ಯನಾದ ಪರಬ್ರಹ್ಮನನ್ನು ಧ್ಯಾನಮಾಡುತ್ತಾ ಯೋಗಯುಕ್ತನಾದ ಮುನಿಯಾದನು.

ತತಃ ಸ ಸರ್ವಸೇನಾಯಾಂ ಜನಃ ಕೃಷ್ಣಧನಂಜಯೌ ।
ಗರ್ಹಯಾಮಾಸ ತಂ ಚಾಪಿ ಶಶಂಸ ಪುರುಷರ್ಷಭಮ್ ॥ ೪೨ ॥

ಆಗ ಆ ಸೇನೆಯ ಎಲ್ಲ ಜನರೂ ಕೃಷ್ಣಾರ್ಜುನರನ್ನು ನಿಂದಿಸಿ ಪುರುಷಶ್ರೇಷ್ಠನಾದ ಭೂರಿಶ್ರವನನ್ನು ಪ್ರಶಂಸಿಸಿದರು.

ನಿಂದ್ಯಮಾನೌ ತಥಾ ಕೃಷ್ಣೌ ನೋಚತುಃ ಕಿಂಚಿದಪ್ರಿಯಮ್ ।
ಪ್ರಶಸ್ಯಮಾನಶ್ಚ ತಥಾ ನಾಹೃಷ್ಯದ್ ಯೂಪಕೇತನಃ ॥ ೪೩ ॥

ಕೃಷ್ಣಾರ್ಜುನರು ನಿಂದಿಸಲ್ಪಡುತ್ತಿದ್ದರೂ ಅವರು ಯಾವ ಅಹಿತವಚನವನ್ನೂ ಆಡಲಿಲ್ಲ. ಹಾಗೆ ಹೊಗಳಲ್ಪಡುತ್ತಿದ್ದರೂ ಯೂಪಕೇತುವಾದ ಭೂರಿಶ್ರವನು ಅದರಿಂದ ಸಂತೋಷಪಡಲಿಲ್ಲ.

ತಾಂಸ್ತಥಾ ವಾದಿನೋ ರಾಜನ್ ಪುತ್ರಾಂಸ್ತವ ಧನಂಜಯಃ ।
ಅಮೃಷ್ಯಮಾಣೋ ಮನಸಾ ತೇಷಾಂ ತಸ್ಯ ಚ ಭಾಷಿತಮ್ ॥ ೪೪ ॥

ಅಸಂಕ್ರುದ್ಧಮನಾ ವಾಚಾ ಸ್ಮಾರಯನ್ನಿವ ಭಾರತ ।
ಸಂಕ್ಷುಬ್ಧಮನಸೋ ಭೂತ್ವಾ ಕೃಪಯಾ ಚ ಪರಿಪ್ಲುತಃ ।
ಉವಾಚ ಪಾಂಡುತನಯಃ ಸಾಕ್ಷೇಪಮಿವ ಫಲ್ಗುನಃ ॥ ೪೫ ॥

ಎಲೈ ರಾಜನೇ, ಭಾರತನೇ, ಹಾಗೆ ಮಾತನಾಡುತ್ತಿದ್ದ ಆ ಜನರನ್ನು ಮತ್ತು ನಿನ್ನ ಪುತ್ರರ ಮಾತುಗಳನ್ನು ಮನಸ್ಸಿನಲ್ಲಿ ಸಹಿಸದೆ, ಆದರೂ ಕೋಪಗೊಳ್ಳದೆ, ಮನಸ್ಸಿನಲ್ಲಿಯೇ ಕ್ಷೋಭೆಗೊಂಡು, ಕೃಪೆಯಿಂದ ಕೂಡಿದವನಾಗಿ ಪಾಂಡುಪುತ್ರನಾದ ಅರ್ಜುನನು ಆಕ್ಷೇಪಪೂರ್ವಕವಾಗಿ ಹಿಂದಿನ ಘಟನೆಯನ್ನು ಅವರಿಗೆ ಸ್ಮರಣೆಗೆ ತಂದುಕೊಡುತ್ತಾ ಮಾತನಾಡಿದನು.

ಮಮ ಸರ್ವೇऽಪಿ ರಾಜಾನೋ ಜಾನಂತ್ಯೇತನ್ಮಹಾವ್ರತಮ್ ।
ನ ಶಕ್ಯೋ ಮಾಮಕೋ ಹಂತುಂ ಯೋ ಮೇ ಸ್ಯಾದ್ಬಾಣಗೋಚರೇ ॥

ನನ್ನ ಮಹಾವ್ರತವನ್ನು ಎಲ್ಲ ರಾಜರೂ ತಿಳಿದಿದ್ದಾರೆ. ನನ್ನ ಬಾಣದ ವ್ಯಾಪ್ತಿಯಲ್ಲಿ ಬರುವ ಯಾವ ನನ್ನ ಯೋಧರನ್ನೂ ಶತ್ರುಗಳು ಕೊಲ್ಲಲು ಸಾಧ್ಯವಿಲ್ಲ (ಎಂಬುದು ನನ್ನ ಮಹಾವ್ರತ).

ಯೂಪಕೇತೋ ಸಮೀಕ್ಷ್ಯ ತ್ವಂ ನ ಮಾಂ ಗರ್ಹಿತುಮರ್ಹಸಿ ।
ನ ಹಿ ಧರ್ಮಮವಿಜ್ಞಾಯ ಯುಕ್ತಂ ಗರ್ಹಯಿತುಂ ಪರಮ್ ॥ ೪೭ ॥

ಎಲೈ ಯೂಪಕೇತುವೇ, ಇದನ್ನು ತಿಳಿದು ನೀನು ನನ್ನನ್ನು ನಿಂದಿಸುವುದು ಯೋಗ್ಯವಲ್ಲ. ಧರ್ಮವನ್ನು ತಿಳಿಯದೆ ಇನ್ನೊಬ್ಬನನ್ನು ನಿಂದಿಸುವುದು ಯೋಗ್ಯವಲ್ಲ.

ಆತ್ತಶಸ್ತ್ರಸ್ಯ ಹಿ ರಣೇ ವೃಷ್ಣಿವೀರಂ ಜಿಘಾಂಸತಃ ।
ಯದಹಂ ಬಾಹುಮಚ್ಛೈತ್ಸಂ ನ ಸ ಧರ್ಮೋ ವಿಗರ್ಹಿತಃ ॥ ೪೮ ॥

ಕೈಯಲ್ಲಿ ಶಸ್ತ್ರವನ್ನು ಹಿಡಿದು ರಣರಂಗದಲ್ಲಿ ವೃಷ್ಣಿವೀರನಾದ ಸಾತ್ಯಕಿಯನ್ನು ಕೊಲ್ಲಲು ಬಯಸಿದ ನಿನ್ನ ಬಾಹುವನ್ನು ನಾನು ಏನು ಕತ್ತರಿಸಿದೆನೋ ಅದು ನಿಂದನೀಯವಾದ ಧರ್ಮವಲ್ಲ.

ನ್ಯಸ್ತಶಸ್ತ್ರಸ್ಯ ಬಾಲಸ್ಯ ವಿರಥಸ್ಯ ವಿವರ್ಮಣಃ ।
ಅಭಿಮನ್ಯೋರ್ವಧಂ ತಾತ ಧಾರ್ಮಿಕಃ ಕೋ ನು ಪೂಜಯೇತ್ ।
ನಾಭಿಮನ್ಯೋರ್ವಧಂ ಯೂಯಂ ಗರ್ಹಯಧ್ವಂ ಕುತಸ್ತದಾ ॥ ೪೯ ॥

ಶಸ್ತ್ರಹೀನನಾದ, ಬಾಲಕನಾದ, ರಥಹೀನನಾದ, ಕವಚಹೀನನಾದ ಅಭಿಮನ್ಯುವಿನ ವಧೆಯನ್ನು ಎಲೈ ಪ್ರೀತಿಪಾತ್ರನೇ, ಧಾರ್ಮಿಕನಾದ ಯಾವನು ಗೌರವಿಸಿಯಾನು? ಆಗ ನೀನು ಅಭಿಮನ್ಯುವಿನ ವಧೆಯನ್ನು ಏಕೆ ನಿಂದಿಸಲಿಲ್ಲ?

ವಿವಮುಕ್ತಸ್ತು ಪಾರ್ಥೇನ ಶಿರಸಾ ಭೂಮಿಮಸ್ಪೃಶತ್ ।
ಪಾಣಿನಾ ಚೈವ ಸವ್ಯೇನ ಪ್ರಾಹಿಣೋದಸ್ಯ ದಕ್ಷಿಣಮ್ ॥ ೫೦ ॥

ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಭೂರಿಶ್ರವನು ತಲೆಯನ್ನು ಬಾಗಿಸಿ ಭೂಮಿಗೆ ಮುಟ್ಟಿಸಿ ಎಡಗೈಯಿಂದ ಅರ್ಜುನನಿಗೆ ಅಭಯಹಸ್ತವನ್ನು ತೋರಿಸಿದನು.

ಏತತ್ಪಾರ್ಥಸ್ಯ ತು ವಚಸ್ತತಃ ಶ್ರುತ್ವಾ ಮಹಾದ್ಯುತಿಃ ।
ಯೂಪಕೇತುರ್ಮಹಾರಾಜ ತೂಷ್ಣೀಮಾಸೀದವಾಙ್ಮುಖಃ ॥ ೫೧ ॥

ಎಲೈ ಮಹಾರಾಜನೇ, ಅರ್ಜುನನ ಈ ಮಾತುಗಳನ್ನು ಕೇಳಿ ಮಹಾಕಾಂತಿಯುಕ್ತನೂ, ಯೂಪಕೇತುವೂ ಆದ ಭೂರಿಶ್ರವನು ಮೌನವಾಗಿ ಮುಖವನ್ನು ತಗ್ಗಿಸಿದನು.

ಅರ್ಜುನಃ

ಯಾ ಪ್ರೀತಿರ್ಧರ್ಮರಾಜೇ ಮೇ ಭೀಮೇ ಚ ವದತಾಂವರೇ ।
ನಕುಲೇ ಸಹದೇವೇ ಚ ಸಾ ಮೇ ತ್ವಯಿ ಶಲಾಗ್ರಜ ॥ ೫೨ ॥

ಮಯಾ ತು ಸಮನುಜ್ಞಾತಃ ಕೃಷ್ಣೇನ ಚ ಮಹಾತ್ಮನಾ ।
ಗಚ್ಛ ಪುಣ್ಯಕೃತಾಂಲ್ಲೋಕಾನ್ ಶಿಬಿರೌಶೀನರೋ ಯಥಾ ॥ ೫೩ ॥

ಅರ್ಜುನ– ಎಲೈ ಶಲನ ಅಣ್ಣನೇ, ನನಗೆ ಧರ್ಮರಾಜನಲ್ಲಿ ಎಂತಹ ಪ್ರೀತಿ ಇದೆಯೋ, ಮಾತನಾಡುವವರಲ್ಲಿ ಶ್ರೇಷ್ಠನಾದ ಭೀಮಸೇನನಲ್ಲಿ ಎಂತಹ ಪ್ರೀತಿ ಇದೆಯೋ, ನಕುಲ-ಸಹದೇವರಲ್ಲಿ ಎಂತಹ ಪ್ರೀತಿ ಇದೆಯೋ ಅಂತಹ ಪ್ರೀತಿಯು ನಿನ್ನಲ್ಲಿ ಇದೆ. ನನ್ನಿಂದ ಅನುಮತಿಯನ್ನು ಪಡೆದು, ಮಹಾತ್ಮನಾದ ಕೃಷ್ಣನಿಂದಲೂ ಅನುಮತಿಯನ್ನು ಪಡೆದು, ಔಶೀನರ ಶಿಬಿಯಂತೆ ನಿನ್ನ ಪುಣ್ಯದಿಂದ ಸಂಪಾದಿಸಿದ ಲೋಕಗಳಿಗೆ ಹೋಗುವವನಾಗು.

ವಾಸುದೇವಃ

ಯೇ ಲೋಕಾ ಮಮ ವಿಮಲಾಃ ಸಕೃದ್ ವಿಭಾತಾ
ಬ್ರಹ್ಮಾದ್ಯೈಃ ಸುರವೃಷಭೈರಪೀಷ್ಟಮಾಕಾ ।
ತಾನ್ ಕ್ಷಿಪ್ರಂ ವ್ರಜ ಸತತಾಗ್ನಿಹೋತ್ರಯಾಜಿನ್
ಮತ್ತುಲ್ಯೋ ಭವ ಗರುಡೋತ್ತಮಾಂಗಯಾನಃ ॥ ೫೪ ॥

ವಾಸುದೇವ– ಎಲೈ ಸತತ ಅಗ್ನಿಹೋತ್ರಯಾಜಿಯೇ, ಬ್ರಹ್ಮಾದಿ ದೇವ ಶ್ರೇಷ್ಠರಿಂದಲೂ ಪ್ರಾರ್ಥಿತವಾದ ಶುದ್ಧವಾದ ಪ್ರಕಾಶಿಸುವ ನನ್ನ ಲೋಕಗಳಿಗೆ ನೀನು ಶೀಘ್ರವಾಗಿ ಹೋಗುವವನಾಗು. ಗರುಡ ವಾಹನನಾಗಿ ನನಗೆ ಸದೃಶನಾಗು.

ಸಂಜಯಃ

ಧನಂಜಯೇ ಬ್ರುವತ್ಯೇವಂ ಘೃಣಯಾ ಚ ಪರಿಪ್ಲುತೇ ।
ಅವಾಙ್ಮುಖಾ ಬಭೂವುಶ್ಚ ಸೈನಿಕಾಃ ಸರ್ವ ಏವ ತೇ ।
ಉತ್ಥಿತಃ ಸ ತು ಶೈನೇಯೋ ವಿಮುಕ್ತಃ ಸೌಮದತ್ತಿನಾ ॥ ೫೫ ॥

ಸಂಜಯ– ಕರುಣೆಯಿಂದ ತುಂಬಿದ ಧನಂಜಯನು ಹೀಗೆ ಹೇಳುತ್ತಿರಲು ಎಲ್ಲ ಸೈನಿಕರೂ ತಲೆಯನ್ನು ತಗ್ಗಿಸಿದರು. ಸಾತ್ಯಕಿಯು ಭೂರಿಶ್ರವನಿಂದ ವಿಮುಕ್ತನಾಗಿ ಎದ್ದನು.

ಮುಹೂರ್ತಾದಿವ ವಿಶ್ರಮ್ಯ ಸಾತ್ಯಕಿಃ ಕ್ರೋಧಮೂರ್ಚ್ಛಿತಃ ।
ಅಮರ್ಷವಶಮಾಪನ್ನಃ ಸೌಮದತ್ತಿನಿರಾಕೃತಃ ।
ಖಡ್ಗಮಾದಾಯ ಚಿಚ್ಛೇದ ಶಿರಸ್ತಸ್ಯ ಮಹಾತ್ಮನಃ ॥ ೫೬ ॥

ನಿಹತಂ ಪಾಂಡುಪುತ್ರೇಣ ಪ್ರಮತ್ತಂ ಭೂರಿದಕ್ಷಿಣಮ್ ।
ಇಯೇಷ ಸಾತ್ಯಕಿರ್ಹಂತುಂ ಶಲಾಗ್ರಜಮಕಲ್ಮಷಮ್ ॥ ೫೭ ॥

ಕ್ರೋಧಮೂರ್ಛಿತನಾದ ಸಾತ್ಯಕಿಯು ಒಂದುಮುಹೂರ್ತದಷ್ಟು ವಿಶ್ರಾಂತಿಯನ್ನು ಪಡೆದು, ಭೂರಿಶ್ರವನಿಂದ ಅವಮಾನಗೊಳಿಸಲ್ಪಟ್ಟ ಕಾರಣದಿಂದ ಕ್ರೋಧವಶನಾಗಿ ಖಡ್ಗವನ್ನು ತೆಗೆದುಕೊಂಡು, ಮಹಾತ್ಮನಾದ ಪಾಂಡುಪುತ್ರನಾದ ಅರ್ಜುನನಿಂದ ಭುಜವು ಕತ್ತರಿಸಲ್ಪಟ್ಟ ಯುದ್ಧವಿಮುಖನಾದ ಭೂರಿದಕ್ಷಿಣೆಯನ್ನು ಕೊಟ್ಟುಯಾಗವನ್ನು ಮಾಡಿದ, ನಿಷ್ಕಲ್ಮಷನಾದ, ಶಲನ ಅಣ್ಣನಾದ ಮಹಾತ್ಮನಾದ ಅವನ ಶಿರಸ್ಸನ್ನು ಕತ್ತರಿಸಲು ಬಯಸಿದನು.

ನಿಕೃತ್ತಭುಜಮಾಸೀನಂ ಛಿನ್ನಹಸ್ತಮಿವ ದ್ವಿಪಮ್ ।
ಕ್ರೋಶತಾಂ ಸರ್ವಸೈನ್ಯಾನಾಂ ನಿಂದ್ಯಮಾನಃ ಸುದುರ್ಮನಾಃ ॥ ೫೮ ॥

ವಾರ್ಯಮಾಣಃ ಸ ಕೃಷ್ಣೇನ ಪಾರ್ಥೇನ ಚ ಮಹಾತ್ಮನಾ ।
ಭೀಮೇನ ಚಕ್ರರಕ್ಷಾಭ್ಯಾಮಶಕ್ತಾಮ್ನಾ ಕೃಪೇಣ ಚ ॥ ೫೯ ॥

ಕರ್ಣೇನ ವೃಷಸೇನೇನ ಸೈಂಧವೇನ ತಥೈವ ಚ ।
ವಿಕ್ರೋಶತಾಂ ಚ ಸೈನ್ಯಾನಾಮವಧೀತ್ ತಂ ಯತವ್ರತಮ್ ॥ ೬೦ ॥

ಸೊಂಡಿಲು ಕತ್ತರಿಸಿದ ಆನೆಯಂತೆ ಭುಜವು ಕತ್ತರಿಸಲ್ಪಟ್ಟು ರಣರಂಗದಲ್ಲಿ ಕುಳಿತಿದ್ದ ಅವನನ್ನು ಸರ್ವಸೈನ್ಯದಿಂದ ನಿಂದಿಸಲ್ಪಡುತ್ತಿದ್ದರೂ ಕೃಷ್ಣನಿಂದ ಮತ್ತು ಮಹಾತ್ಮನಾದ ಅರ್ಜುನನಿಂದ ನಿಷೇಧಿಸಲ್ಪಡುತ್ತಿದ್ದರೂ, ಭೀಮನಿಂದ ಚಕ್ರರಕ್ಷಕರಿಂದ, ಅಶ್ವತ್ಥಾಮರಿಂದ ಕೃಪರಿಂದ ಕರ್ಣನಿಂದ ವೃಷಸೇನನಿಂದ ಮತ್ತು ಸೈಂಧವನಿಂದ ನಿಷೇಧಿಸಲ್ಪಡುತ್ತಿದ್ದರೂ, ಸೈನ್ಯಗಳು ಕಿರುಚುತ್ತಿದ್ದರೂ ಆ ವ್ರತನಿಷ್ಠನಾದ ಭೂರಿಶ್ರವನ ಶಿರಸ್ಸನ್ನು ಬಹಳ ಸಮಾಧಾನದಿಂದ ಕೂಡಿದವನಾಗಿ ಕತ್ತರಿಸಿದನು.

ಪ್ರಾಯೋಪವಿಷ್ಟಸ್ಯ ರಣೇ ಪಾರ್ಥೇನ ಛಿನ್ನಬಾಹವೇ ।
ಸಾತ್ಯಕಿಃ ಕೌರವೇಂದ್ರಸ್ಯ ಖಡ್ಗೇನಾಪಾಹರಚ್ಛಿರಃ ॥ ೬೧ ॥

ಯುದ್ಧಭೂಮಿಯಲ್ಲಿ ಪ್ರಾಯೋಪ್ರವೇಶಕ್ಕೆ ಕುಳಿತಿದ್ದ, ಅರ್ಜುನನಿಂದ ಬಾಹುವೂ ಕತ್ತರಿಸಲ್ಪಟ್ಟ ಆ ಕೌರವೇಂದ್ರನ ಶಿರಸ್ಸನ್ನು ಸಾತ್ಯಕಿಯು ತನ್ನ ಖಡ್ಗದಿಂದ ಕತ್ತರಿಸಿದನು.

ನಾಭ್ಯನಂದಂತ ತಂ ಸೈನ್ಯಾಃ ಸಾತ್ಯಕಿಂ ತೇನ ಕರ್ಮಣಾ ।
ಆರ್ಜುನೇನ ಹತಂ ಪೂರ್ವಂ ಯದ್ಭಜ್ಞಾನ ಕುರೂದ್ವಹಮ್ ॥ ೬೨ ॥

ಅರ್ಜುನನಿಂದ ಮೊದಲೇ ಹತನಾಗಿದ್ದ ಕುರುವೃದ್ಧನಾದ ಭೂರಿಶ್ರವನನ್ನು ಸಾತ್ಯಕಿಯು ಕೊಂದುದನ್ನು ನೋಡಿ ಸೈನ್ಯದವರು ಯಾರೂ ಸಾತ್ಯಕಿಯ ಆ ಕರ್ಮವನ್ನು ಅಭಿನಂದಿಸಲಿಲ್ಲ.

ಸಹಸ್ರಾಕ್ಷಸಮಂ ತತ್ರ ಸಿದ್ಧಚಾರಣಮಾನವಾಃ ।
ಭೂರಿಶ್ರವಸಮಾಲೋಕ್ಯ ಯುದ್ಧೇ ಪ್ರಾಯಗತಂ ಹತಮ್ ॥ ೬೩ ॥

ಅಪೂಜಯಂತ ತಂ ದೇವಾ ವಿಸ್ಮಿತಾಸ್ತಸ್ಯ ಕರ್ಮಭಿಃ ।
ಪಕ್ಷವಾದಾಂಶ್ಚ ಬಹುಶಃ ಪ್ರಾವದಂಸ್ತಸ್ಯ ಸೈನಿಕಾಃ ॥ ೬೪ ॥

ಯುದ್ಧಭೂಮಿಯಲ್ಲಿ ಪ್ರಾಯೋಪ್ರವೇಶಕ್ಕೆ ಕುಳಿತ ಇಂದ್ರನಿಗೆ ಸಮನಾದ ಭೂರಿಶ್ರವನು ಹತನಾದುದನ್ನು ನೋಡಿ ಸಿದ್ಧ-ಚಾರಣ-ಮಾನವರೂ, ದೇವತೆಗಳೂ

ಅವನ ಕರ್ಮದಿಂದ ವಿಸ್ಮಿತರಾಗಿ ಅವನನ್ನು ಪೂಜಿಸಿದರು. ಸೈನಿಕರು ಅವರವರ ಪಕ್ಷಗಳನ್ನು ಸಮರ್ಥಿಸುವ ಮಾತುಗಳನ್ನು ಆಡಿದರು.

ನ ವಾಷ್ಣೇಯಸ್ಯಾಪರಾಧೋ ಭವಿತವ್ಯಂ ಹಿ ತತ್ತಥಾ ।
ತಸ್ಮಾನ್ಮನ್ಯುರ್ನ ವಃ ಕಾರ್ಯಃ ಕ್ರೋಧೋ ದುಃಖಕರೋ ನೃಣಾಮ್ ॥

ಇದರಲ್ಲಿ ಸಾತ್ಯಕಿಯ ಯಾವ ಅಪರಾಧವೂ ಇಲ್ಲ. ಇದು ಹೀಗೆಯೇ ನಡೆಯಬೇಕಾಗಿದ್ದಿತು. ಆದ್ದರಿಂದ ನೀವು ಕೋಪವನ್ನು ಮಾಡಬೇಡಿ. ಕೋಪವು ಮನುಷ್ಯರಿಗೆ ದುಃಖವನ್ನುಂಟು ಮಾಡುತ್ತದೆ.

ಮರ್ತವ್ಯಮೇವ ಸರ್ವೇಣ ಚರಮಂ ಪೂರ್ವಮೇವ ವಾ ।
ಮನ್ಯಧ್ವಂ ಮೃತ ಇತ್ಯೇವ ಮಾ ಭೂದ್ವೋ ಬುದ್ಧಿಲಾಘವಮ್ ॥ ೬೬ ॥

ಮನುಷ್ಯನು ಮೊದಲಲ್ಲಾಗಲೀ ಅಥವಾ ಕೊನೆಯಲ್ಲಾಗಲೀ ಮರಣವನ್ನು ಹೊಂದಲೇಬೇಕು. ಭೂರಿಶ್ರವನು ಮೃತನಾಗಿದ್ದಾನೆಂದೇ ತಿಳಿಯಿರಿ. ನಿಮ್ಮ ಬುದ್ಧಿಯು ಅನ್ಯಥಾ ಭಾವಿಸುವುದು ಬೇಡ (ಎಂದು ಮಾತನಾಡಿದರು).

ತಸ್ಮಿನ್ ಹತೇ ಮಹಾಬಾಹೌ ಯೂಪಕೇತೌ ಮಹಾತ್ಮನಿ ।
ಧಿಗೇನಮಿತಿ ಚಾಕ್ರಂದನ್ ಕ್ಷತ್ರಿಯಾ ಕ್ರೋಧಮೂರ್ಚ್ಛಿತಾಃ ॥ ೬೭ ॥

ಮಹಾಬಾಹುವೂ, ಮಹಾತ್ಮನೂ ಆದ ಯೂಪಕೇತುವು ಹತನಾಗುತ್ತಿರಲು ಕ್ರೋಧಮೂರ್ಛಿತರಾದ ಕ್ಷತ್ರಿಯರು ಸಾತ್ಯಕಿಗೆ ಧಿಕ್ಕಾರವಿರಲಿ ಎಂದು ಕಿರುಚಿದರು.

ಅನ್ಯೇನ ಯುಕ್ತಮಿತ್ಯೇವ ಭವಿತವ್ಯಂ ತಥೇತಿ ಚ ।
ಕೇಚಿದಾಸನ್ ವಿಮನಸಃ ಕೇಚಿದ್ ದುಃಖಸಮನ್ವಿತಾಃ ॥ ೬೮ ॥

ಭೂರಿಶ್ರವನು ಇನ್ನೊಬ್ಬನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದನು ಎಂದೂ, ಇದು ಹಾಗೆಯೇ ನಡೆಯಬೇಕಾಗಿದ್ದಿತು ಎಂದೂ ಕೆಲವರು ಬೇಸರಗೊಂಡರು, ಇನ್ನು ಕೆಲವರು ದುಃಖವನ್ನು ಹೊಂದಿದರು.

ಹಂತವ್ಯಶ್ಚೈಷ ವೀರೇಣ ನಾತ್ರ ಕಾರ್ಯಾ ವಿಚಾರಣಾ ।
ವಿಹಿತೋ ಹ್ಯಸ್ಯ ಧಾತ್ರೈವ ಮೃತ್ಯುಃ ಸಾತ್ಯಕಿರಾಹವೇ ॥ ೬೯ ॥

ಭೂರಿಶ್ರವನು ವೀರನಿಂದ ಕೊಲ್ಲಲ್ಪಡಬೇಕಾಗಿದ್ದಿತು. ಇದರಲ್ಲಿ ವಿಚಾರ ಮಾಡುವ ಅಗತ್ಯವಿಲ್ಲ. ಸಾತ್ಯಕಿಯನ್ನೇ ಭೂರಿಶ್ರವನ ಮೃತ್ಯುವೆಂದು ಬ್ರಹ್ಮನು ಸಂಕಲ್ಪಮಾಡಿದ್ದಾನೆ (ಎಂದೂ ಮಾತನಾಡಿದರು).

ಸಾತ್ಯಕಿಃ

ನ ಹಂತವ್ಯೋ ನ ಹಂತವ್ಯ ಇತಿ ಯನ್ಮಾಂ ಪ್ರಭಾಷಥ ।
ಧರ್ಮವಾದೈರಧರ್ಮಿಷ್ಠಾ ಧರ್ಮಕಂಚುಕಮಾಸ್ಥಿತಾಃ ॥ ೭೦ ॥

ಯದಾ ಬಾಲಃ ಸುಭದ್ರಾಯಾಃ ಸುತಃ ಶಸ್ತ್ರವಿನಾಕೃತಃ ।
ಯುಷ್ಮಾಭಿರ್ನಿಹತೋ ಯುದ್ಧೇ ತದಾ ಧರ್ಮಃ ಕ್ವ ವೋ ಗತಃ ॥ ೭೧ ॥

ಸಾತ್ಯಕಿ– ಎಲೈ ಅಧರ್ಮಿಷ್ಠರೇ, ಧರ್ಮದ ಸೋಗನ್ನು ಹಾಕಿಕೊಂಡ ನೀವು 'ಕೊಲ್ಲಬಾರದಾಗಿದ್ದಿತು, ಕೊಲ್ಲಬಾರದಾಗಿದ್ದಿತು' ಎಂದು ನನ್ನನ್ನು ಕುರಿತು ಧರ್ಮವಾದವನ್ನು ಹೇಳುತ್ತಿರುವಿರಷ್ಟೆ? ಸುಭದ್ರೆಯ ಪುತ್ರನಾದ ಬಾಲಕನಾದ, ಶಸ್ತ್ರರಹಿತನಾದ ಅಭಿಮನ್ಯುವು ರಣರಂಗದಲ್ಲಿ ನಿಮ್ಮೆಲ್ಲರಿಂದ ಹತನಾದಾಗ ನಿಮ್ಮ ಧರ್ಮವು ಎಲ್ಲಿಗೆ ಹೋಗಿದ್ದಿತು?

ಮಯಾ ತ್ವೇತತ್ ಪ್ರತಿಜ್ಞಾತಂ ಕ್ಷೇಪೇ ಕಸ್ಮಿಂಶ್ಚಿದೇವ ಹಿ ।
ಶ್ರುತ್ವಾ ತತ್ ಸರ್ವಭಾವೇನ ಗರ್ಹಯಧ್ವಂ ನಚಾರ್ಜುನಮ್ ॥ ೭೨ ॥

ಯೋ ಮಾಂ ನಿಷ್ಪಿಷ್ಯ ಸಂಗ್ರಾಮೇ ಜೀವನ್ ಹನ್ಯಾತ್ತದಾ ರುಷಾ ।
ಸ ಮೇ ವಧ್ಯೋ ಭವೇಚ್ಚತ್ರುರ್ಯದ್ಯಪಿ ಸ್ಯಾನ್ಮುನಿವ್ರತಃ ॥ ೭೩ ॥

ನಾನು ಹಿಂದೆ ನನಗೊಮ್ಮೆ ಅವಮಾನವಾದಾಗ ಯಾರು ನನ್ನನ್ನು ಯುದ್ಧದಲ್ಲಿ ಮರ್ದಿಸಿ ಕೋಪದಿಂದ ಕಾಲಿನಿಂದ ಒದೆಯುತ್ತಾರೆಯೋ ಅವನು ಮುನಿವ್ರತವನ್ನು ಧರಿಸಿದ್ದರೋ ಶತ್ರುವಾದ ಅವನನ್ನು ಕೊಲ್ಲಬೇಕು ಎಂದು ಪ್ರತಿಜ್ಞೆಯನ್ನು ಮಾಡಿದ್ದೇನೆ. ಇದನ್ನು ಪೂರ್ಣವಾಗಿ ತಿಳಿದು ಅರ್ಜುನನನ್ನು ನಿಂದಿಸಬೇಡಿ.

ಚೇಷ್ಟಮಾನಂ ಪ್ರತೀಘಾತೇ ಸುಭುಜಂ ಮಾಂ ಸಚಕ್ಷುಷಃ ।
ಮನ್ಯಧ್ವಂ ಮೃತಮಿತ್ಯೇವಮೇತದ್ವೋ ಬುದ್ಧಿಲಾಘವಮ್ ।
ಯುಕ್ತೋ ಹ್ಯಸ್ಯ ಪ್ರತೀಘಾತಃ ಕೃತೋ ಮೇ ಕುರುಪುಂಗವಾಃ ॥ ೭೪ ॥

ತನ್ನ ಭುಜದಿಂದ ಯುಕ್ತನಾಗಿ ನನ್ನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದ ಭೂರಿಶ್ರವನನ್ನು ಕಣ್ಣುಗ್ಗಳನ್ನು ಹೊಂದಿದ ನೀವು ಮೃತನಾಗಿದ್ದಾನೆ ಎಂದೇ ತಿಳಿಯಿರಿ. (ಸಾಯುಧನಾದ ಅವನು ನಿರಾಯುಧನಾದ ನನ್ನನ್ನು ಕೊಲ್ಲಲು ಬಯಸಿದುದು ಸರಿಯಲ್ಲ). ನೀವು ಅನ್ಯಥಾ ಭಾವಿಸಿದರೆ ಅದು ನಿಮ್ಮ ಬುದ್ಧಿದೋಷ. ಅವನಿಗೆ ಪ್ರತಿಕಾರ ಮಾಡುವುದು ನನಗೆ ಉಚಿತವಾಗಿದ್ದಿತು. ಎಲೈ ಕುರುಪುಂಗವರೇ, ನಾನು ಪ್ರತೀಕಾರವನ್ನು ಮಾಡಿದ್ದೇನೆ.

ಯತ್ತು ಪಾರ್ಥೇನ ಮತ್ಸ್ನೇಹಾತ್ ಸ್ವಾಂ ಪ್ರತಿಜ್ಞಾಂ ಚ ರಕ್ಷತಾ ।
ಸಖಿಡ್ಗೋಽಸ್ಯ ಹೃತೋ ಬಾಹುರೇತೇನೈವಾಸ್ಮಿ ವಂಚಿತಃ ॥ ೭೫ ॥

ನನ್ನ ಮೇಲಿನ ಸ್ನೇಹದಿಂದ ತನ್ನ ಪ್ರತಿಜ್ಞೆಯನ್ನು ರಕ್ಷಿಸುವ ಅರ್ಜುನನಿಂದ ಖಡ್ಗ ಸಹಿತವಾದ ಅವನ ಬಾಹುವು ಕತ್ತರಿಸಲ್ಪಟ್ಟುದುದರಿಂದ ನಾನು ವಂಚಿತನಾಗಿದ್ದೇನೆ. (ಇಲ್ಲದಿದ್ದರೆ ನಾನೇ ಅವನನ್ನು ಕೊಲ್ಲಬೇಕಾಗಿದ್ದಿತು).

ಭವಿತವ್ಯಂ ಚ ಯದ್ಭಾವಿ ದೈವಂ ಚೇಷ್ಟಯತೀವ ಚ ।
ಸೋಽಯಂ ಹತೋ ವಿಮರ್ದೇಽಸ್ಮಿನ್ ಕಿಮತ್ರಾಧರ್ಮಚೇಷ್ಟಿತಮ್ ॥

ಯಾವುದು ನಡೆಯಬೇಕೋ ಅದು ನಡೆಯುತ್ತದೆ. ವಿಧಿಯು ನಮ್ಮನ್ನು ನಡೆಯುತ್ತದೆ. ಈ ಯುದ್ಧದಲ್ಲಿ ಭೂರಿಶ್ರವನು ಹತನಾಗಿದ್ದಾನೆ. ಇದರಲ್ಲಿ ಅಧರ್ಮದ ಕಾರ್ಯವು ಯಾವುದು?

ಅಪಿ ಚಾಯಂ ಪುರಾ ಗೀತಃ ಶ್ಲೋಕೋ ವಾಲ್ಮೀಕಿನಾ ಭುವಿ ।
ನ ಹಂತವ್ಯಃ ಸ್ತ್ರಿಯ ಇತಿ ಯದ್ ಬ್ರವೀಷಿ ಪ್ಲವಂಗಮ ॥ ೭೭ ॥

ಪೀಡಾಕರಮಮಿತ್ರಾಣಾಂ ಯತ್ ಸ್ಯಾತ್ ಕರ್ತವ್ಯಮೇವ ತತ್ ।
ಅನುಷ್ಠಿತಂ ಮಯಾ ತಚ್ಚ ಮೂಢವತ್ತು ಯಥಾತಥಮ್ ॥ ೭೮ ॥

ಹಿಂದೆ ಭೂಮಿಯಲ್ಲಿ ವಾಲ್ಮೀಕಿ ಋಷಿಗಳು 'ಎಲೈ ಕಪಿಯೇ, ಸ್ತ್ರೀಯರನ್ನು ಕೊಲ್ಲಬಾರದು ಎಂದು ಏನು ಹೇಳುತ್ತಿದ್ದೀಯೋ ಅದು ಸರಿಯಲ್ಲ. ಅವರ ಪ್ರತಿಪಕ್ಷದವರಾದ ಸಜ್ಜನರಿಗೆ ಪೀಡೆಯನ್ನು ಉಂಟುಮಾಡುವುದಾದರೆ ಅವರನ್ನು ಕೊಲ್ಲಲೇಬೇಕು' ಎಂಬ ಗೀತೆಯನ್ನು ಏನು ಹಾಡಿದ್ದಾರೆಯೋ ಅದನ್ನು ನಾನು ಮೂಢನಂತೆ (ಸಂಶಯ ಪಡದೆ) ಸರಿಯಾಗಿ ಆಚರಿಸಿದ್ದೇನೆ (ಎಂದು ಹೇಳಿದನು).

ಸಂಜಯಃ

ಏವಮುಕ್ತೇ ಮಹಾರಾಜ ಸರ್ವೇ ಕೌರವಪಾಂಡವಾಃ ।
ನ ಸ್ಮ ಕಿಂಚಿದಭಾಷಂತ ಮನಸಾ ಸಮಪೂಜಯನ್ ॥ ೬೯ ॥

ಸಂಜಯ– ಎಲೈ ಮಹಾರಾಜನೇ, ಅವನು ಹೀಗೆ ಮಾತನಾಡುತ್ತಿರಲು ಕೌರವರಾಗಲೀ, ಪಾಂಡವರಾಗಲೀ ಏನೂ ಮಾತನಾಡಲಿಲ್ಲ. ಎಲ್ಲರೂ ಭೂರಿಶ್ರವನನ್ನು ಮನಸ್ಸಿನಿಂದಲೇ ಪೂಜಿಸಿದರು.

ಮಂತ್ರೈರ್ಹಿ ಪೂತಸ್ಯ ಮಹಾಧ್ವರೇಷು
ಯಶಸ್ವಿನೋ ಭೂರಿಸಹಸ್ರದಸ್ಯ ।
ಮುನೇರಿವಾರಣ್ಯಗತಸ್ಯ ತಸ್ಯ
ನ ತತ್ರ ಕಶ್ಚಿದ್ ವಧಮಭ್ಯನಂದತ್ ॥ ೭೦ ॥

ಮಹಾಯಜ್ಞಗಳಲ್ಲಿ ಮಂತ್ರಗಳಿಂದ ಪವಿತ್ರನಾದ, ಕೀರ್ತಿವಂತನಾದ, ಸಹಸ್ರಾರು ದಕ್ಷಿಣೆಗಳನ್ನು ನೀಡಿದ, ಋಷಿಯಂತೆ ಅರಣ್ಯವಾಸವನ್ನು ಮಾಡಿದ ಅವನ ವಧೆಯನ್ನು ಯಾರೂ ಅಭಿನಂದಿಸಲಿಲ್ಲ.

ಸುನೀಲಕೇಶಂ ವರದಸ್ಯ ತಸ್ಯ
ಶೂರಸ್ಯ ಪಾರಾವತಲೋಹಿತಾಕ್ಷಮ್ ।
ಅಶ್ವಸ್ಯ ಮೇಧ್ಯಸ್ಯ ಶಿರೋ ನಿಕೃತ್ತಂ
ನ್ಯಸ್ತಂ ಹವಿರ್ಧಾನಮಿವೋತ್ತರೇಣ ॥ ೭೧ ॥

ಕಪ್ಪಾದ ಕೂದಲುಗಳಿಂದ ಕೂಡಿದ, ಬೇಡಿದವರಿಗೆ ವರವನ್ನು ಕೊಡುವವನೂ, ಶೂರನೂ, ಪಾರಿವಾಳ ಬಣ್ಣದಂತೆ ಲೋಹಿತ ಕಣ್ಣುಳ್ಳವನೂ ಆದ ಅವನ ಶಿರಸ್ಸು ವೇದಿಕೆಯ ಉತ್ತರದಲ್ಲಿ ಇಡಲ್ಪಟ್ಟ ಮೇಧ್ಯಾಶ್ವದ ಶಿರಸ್ಸಿನಂತೆ ಕತ್ತರಿಸಿ ಇಡಲ್ಪಟ್ಟಿತು.

ನ ತೇಜಸಾ ಶಸ್ತ್ರಹತೇನ ಪೂತೋ
ಮಹಾಹವೇ ದೇಹವರಂ ವಿಸೃಜ್ಯ ।
ಆಕ್ರಾಮದೂರ್ಧ್ವಂ ವರದೋ ವರಾರ್ಹೋ
ವ್ಯಾವೃತ್ಯ ಧರ್ಮೇಣ ಪರೇಣ ರೋದಸೀ ॥ ೭೨ ॥

ಶಸ್ತ್ರಾತದಿಂದ ಪವಿತ್ರವಾದ ತೇಜಸ್ಸನ್ನು ಹೊಂದಿದ ಅವನು ದೊಡ್ಡ ಯುದ್ಧದಲ್ಲಿ ತನ್ನ ಶ್ರೇಷ್ಠವಾದ ದೇಹವನ್ನು ತ್ಯಜಿಸಿ ಎಲ್ಲರಿಗೂ ವರವನ್ನು ಕೊಡುವ, ದೇವತೆಗಳಿಂದ ವರಗಳನ್ನು ಸ್ವೀಕರಿಸಲು ಯೋಗ್ಯನಾದ ಅವನು ಶ್ರೇಷ್ಠವಾದ ಧರ್ಮದಿಂದ ಭೂಮಿ-ಅಂತರಿಕ್ಷಗಳನ್ನು ದಾಟಿ ಊರ್ಧ್ವಮುಖನಾಗಿ ಹೊರಟನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಅಷ್ಟಾವಿಂಶತ್ಯಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ದ್ವಿಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ

ಸಂಜಯನಿಂದ ಧೃತರಾಷ್ಟ್ರನನ್ನು ಕುರಿತು ಭೂರಿಶ್ರವನಿಂದ ಸಾತ್ಯಕಿಯ ಪರಾಭವಕ್ಕೆ ಕಾರಣ ಕಥನ ಮತ್ತು ಯಾದವರ ಪ್ರಶಂಸೆ.

ಧೃತರಾಷ್ಟ್ರಃ

ಶೈನೇಯಸ್ಯ ಚ ಯೋತ್ಪತ್ತಿರ್ಭೂರಿಶ್ರವಸ ಏವ ಚ ।
ವಿಸ್ತರೇಣ ಮಮಾಚಕ್ಷ್ವ ಸರ್ವಮೇವ ತು ಸಂಜಯ ॥ ೧ ॥

ಧೃತರಾಷ್ಟ್ರ ಎಲೈ ಸಂಜಯನೇ, ಸಾತ್ಯಕಿಯ ಮತ್ತು ಭೂರಿಶ್ರವನ ಉತ್ಪತ್ತಿ ಎಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು.

ಅಜತೋ ದ್ರೋಣಭೀಷ್ಮಾಭ್ಯಾಂ ಕರ್ಣೇನ ಚ ಕೃಪೇಣ ಚ ।
ಅಜತೋ ದ್ರೋಣರಾಧೇಯವಿಕರ್ಣಕೃತವರ್ಮಭಿಃ ॥ ೨ ॥

ಯಶ್ಚೈವೋತ್ಸಹತೇ ಜೇತುಂ ಸಮಸ್ತಂ ಮಾಮಕಂ ಬಲಮ್ ।
ತೀರ್ಣಃ ಸೈನ್ಯಾರ್ಣವಂ ವೀರಃ ಪ್ರತಿಶ್ರುತ್ಯ ಯುಧಿಷ್ಠಿರೇ ॥ ೩ ॥

ಸ ಕಥಂ ಕೌರವೇಯೇಣ ಸಮರೇಷ್ವನಿವಾರಿತಃ ।
ನಿಗೃಹ್ಯ ಭೂರಿಶ್ರವಸಾ ಬಲಾದ್ ಭುವಿ ನಿಪಾತಿತಃ ॥ ೪ ॥

ಯಾವನು ದ್ರೋಣರಿಂದ, ಭೀಷ್ಮರಿಂದ, ಕರ್ಣನಿಂದ ಮತ್ತು ಕೃಪರಿಂದ, ವಿಕರ್ಣ, ಕೃತವರ್ಮನಿಂದ ಪರಾಜಿತನಾಗಲಿಲ್ಲವೋ, ಯಾವನು ಯುಧಿಷ್ಠಿರನ ಮುಂದೆ ಪ್ರತಿಜ್ಞೆಯನ್ನು ಮಾಡಿ, ನನ್ನ ಸಮಸ್ತ ಸೈನ್ಯವನ್ನು ದಾಟಿ ಅದನ್ನು ಗೆಲ್ಲಲು ಉತ್ಸುಕನಾಗಿದ್ದಾನೆಯೋ ಅಂತಹ ಯುದ್ಧದಲ್ಲಿ ಹಿಮ್ಮೆಟ್ಟದಿರುವ ಸಾತ್ಯಕಿಯು ಕೌರವನಾದ ಭೂರಿಶ್ರವನಿಂದ ಹೇಗೆ ಹಿಡಿದು ಭೂಮಿಯಲ್ಲಿ ಕೆಡವಲ್ಪಟ್ಟನು?

ಸಂಜಯಃ

ಶೃಣು ರಾಜನ್ನಿಹೋತ್ಪತ್ತಿಂ ಶೈನೇಯಸ್ಯ ಯಥಾ ಪುರಾ ।
ಯಥಾ ಚ ಭೂರಿಶ್ರವಸೋ ಯತ್ರ ತೇ ಸಂಶಯೋ ನೃಪ ॥ ೫ ॥

ಸಂಜಯ– ಎಲೈ ರಾಜನೇ, ನಿನಗೆ ಯಾವ ವಿಷಯದಲ್ಲಿ ಸಂಶಯವಿದೆಯೋ ಅಂತಹ ಸಾತ್ಯಕಿಯ ಮತ್ತು ಭೂರಿಶ್ರವನ ಉತ್ಪತ್ತಿಯು ಹಿಂದೆ ಹೇಗಾಯಿತು ಎಂದು ಕೇಳು.

ಅತ್ರೇಃ ಪುತ್ರೋಽಭವತ್ ಸೋಮಃ ಸೋಮಸ್ಯ ತು ಬುಧಃ ಸ್ಮೃತಃ ।
ಬುಧಸ್ಯಾಪೀನ್ಮಹೇಂದ್ರಾಭಃ ಪುತ್ರ ಏಕಃ ಪುರೂರವಾಃ ॥ ೬ ॥

ಅತ್ರಿಋಷಿಗೆ ಚಂದ್ರನು ಪುತ್ರನಾಗಿ ಜನಿಸಿದನು. ಚಂದ್ರನ ಪುತ್ರ ಬುಧ. ಬುಧನಿಗೆ ಇಂದ್ರನಿಗೆ ಸಮಾನನಾದ ಕಾಂತಿಯುಳ್ಳ ಪುರೂರವನೆಂಬ ಒಬ್ಬ ಪುತ್ರನು ಜನಿಸಿದನು.

ಪುರೂರವಸ ಆಯುಸ್ತು ಆಯುಷೋ ನಹುಷಃ ಸ್ಮೃತಃ ।
ನಹುಷಸ್ಯ ಯಯಾತಿಸ್ತು ರಾಜರ್ಷಿರ್ದೇವಸಮ್ಮಿತಃ ॥ ೭ ॥

ಪುರೂರವನಿಂದ ಆಯು, ಆಯುವಿನಿಂದ ನಹುಷನು ಹುಟ್ಟಿದನು. ನಹುಷನಿಗೆ ದೇವತೆಗಳಿಗೆ ಸಮಾನನಾದ ರಾಜರ್ಷಿಯಾದ ಯಯಾತಿಯು ಜನಿಸಿದನು.

ಯಯಾತೇರ್ದೇವಯಾನ್ಯಾಂ ತು ಯದುರ್ಜ್ಯೇಷ್ಠೋಽಭವತ್ ಸುತಃ ।
ಯದೋರಭೂದನ್ವವಾಯೇ ದೇವಮೀಢ ಇತಿ ಶ್ರುತಃ ॥ ೮ ॥

ಯಯಾತಿಗೆ ದೇವಯಾನಿಯಲ್ಲಿ ಯದುವು ಜ್ಯೇಷ್ಠಪುತ್ರನಾಗಿ ಜನಿಸಿದನು. ಯದುವಿನ ವಂಶದಲ್ಲಿ ದೇವಮೀಢನೆಂಬ ರಾಜನು ಬಂದನು.

ಯಾದವಸ್ತಸ್ಯ ಚ ಸುತಃ ಶೂರಸ್ತ್ರೈಲೋಕ್ಯಸಂಮತಃ ।
ಶೂರಸ್ಯ ಶೌರಿರ್ನ್ಯವರೋ ವಸುದೇವೋ ಮಹಾಯಶಾಃ ॥ ೯ ॥

ದೇವಮೀಢನಿಗೆ ತ್ರೈಲೋಕಸ್ಯಸಮ್ಮತನಾದ ಯಾದವನಾದ ಶೂರನೆಂಬ ಸುತನು ಜನಿಸಿದನು. ಶೂರನಿಗೆ ಮಹಾಕೀರ್ತಿವಂತನಾದ ನರಶ್ರೇಷ್ಠನಾದ ವಸುದೇವನು ಜನಿಸಿದನು.

ಧನುಷ್ಮನವರಃ ಶೂರಃ ಕಾರ್ತವೀರ್ಯಸಮೋ ಯುಧಿ ।
ತದ್ವೀರ್ಯಶ್ಚಾಪಿ ತತ್ರೈವ ಕುಲೇ ಶಿನಿರಭೂನ್ನೃಪಃ ॥ ೧೦ ॥

ಧನುರ್ವಿದ್ಯೆಯಲ್ಲಿ ಶ್ರೇಷ್ಠನಾದ, ಶೂರನಾದ, ಯುದ್ಧದಲ್ಲಿ ಕಾರ್ತವೀರ್ಯನಿಗೆ ಸಮನಾದ, ಕಾರ್ತವೀರ್ಯನ ಪರಾಕ್ರಮವನ್ನು ಹೊಂದಿದ ಶಿನಿ ಎಂಬ ರಾಜನು ಅದೇ ಕುಲದಲ್ಲಿ ಜನಿಸಿದನು.

ಏತಸ್ಮಿನ್ನೇವ ಕಾಲೇ ತು ದೇವಕಸ್ಯ ಮಹಾತ್ಮನಃ ।
ದುಹಿತುಃ ಸ್ವಯಂವರೇ ರಾಜನ್ ಸರ್ವಕ್ಷತ್ರಸಮಾಗಮೇ ॥ ೧೧ ॥

ತತ್ರ ವೈ ದೇವಕೀಂ ದೇವೀಂ ವಸುದೇವಾರ್ಥಮಾಪ್ತವಾನ್ ।
ನಿರ್ಜಿತ್ಯ ಪಾರ್ಥಿವಾನ್ಸರ್ವಾನ್ ರಥಮಾರೋಪಯಚ್ಛಿನಿಃ ॥ ೧೨ ॥

ಎಲೈ ರಾಜನೇ, ಮಹಾತ್ಮನಾದ ದೇವಕನ ಮಗಳಾದ ದೇವಕಿಯ ಸ್ವಯಂವರದಲ್ಲಿ ಸರ್ವಕ್ಷತ್ರಿಯರೂ ಬಂದು ಸೇರಿರುವಾಗ ಶಿನಿಯು ವಸುದೇವನ ಸಲುವಾಗಿ ಎಲ್ಲ ರಾಜರನ್ನೂ ಗೆದ್ದು ದೇವಕಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡನು.

ತಾಂ ದೃಷ್ಟ್ವಾ ದೇವಕೀ ಶೌರೇ ರಥಸ್ಥಾಂ ಪುರುಷರ್ಷಭಃ ।
ತಾಂ ದೃಷ್ಟ್ವಾ ನೀಯಮಾನಾಂ ತು ವಸುದೇವಾಯ ದೇವಕಮ್ ।
ನಾಮೃಷ್ಯತ ಮಹಾತೇಜಾಃ ಸೋಮದತ್ತಃ ಶಿನೇರ್ನೃಪ ॥ ೧೩ ॥

ವಸುದೇವನ ಸಲುವಾಗಿ - ದೇವಕಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟ ಶಿನಿಯನ್ನು ನೋಡಿ, ಪುರುಷಶ್ರೇಷ್ಠನೂ, ಮಹಾತೇಜಸ್ವಿಯೂ ಆದ ಸೋಮದತ್ತನು ಸಹಿಸಲಿಲ್ಲ.

ತಯೋರ್ಯುದ್ಧಮಭೂದ್ ರಾಜನ್ ದಿನಾರ್ಧಂ ಚಿತ್ರಮದ್ಭುತಮ್ ।
ಬಾಹುಯುದ್ಧಂ ಸುಬಲಿನೋಃ ಶಕ್ರಪ್ರಹ್ಲಾದಯೋರಿವ ॥ ೧೪ ॥

ಎಲೈ ರಾಜನೇ, ಬಲಿಷ್ಠರಾದ ಅವರಿಬ್ಬರಿಗೆ ಇಂದ್ರ-ಪ್ರಹ್ಲಾದರಿಗೆ ನಡೆದಂತೆ ಅರ್ಧದಿನದ ಕಾಲ ವಿಚಿತ್ರವೂ ಮತ್ತು ಅದ್ಭುತವೂ ಆದ ಯುದ್ಧವು ನಡೆಯಿತು.

ಶಿನಿನಾ ಸೋಮದತ್ತಸ್ತು ಪ್ರಸಹ್ಯ ಭುವಿ ಪಾತಿತಃ ।
ಅಸಿಮುದ್ಯಮ್ಯ ಕೇಶೇಷು ಪ್ರಗೃಹ್ಯ ಚ ಪದಾ ಹತಃ ॥ ೧೫ ॥

ಶಿನಿಯು ಸೋಮದತ್ತನನ್ನು ಬಲಾತ್ಕಾರದಿಂದ ಭೂಮಿಯ ಮೇಲೆ ಕೆಡವಿ ಅವನನ್ನು ತಲೆಕೂದಲಿನಲ್ಲಿ ಹಿಡಿದು ಖಡ್ಗವನ್ನು ಎತ್ತಿ ಕಾಲಿನಿಂದ ಒದ್ದನು.

ಮಧ್ಯೇ ರಾಜಸಹಸ್ರಾಣಾಂ ಪ್ರೇಕ್ಷಕಾಣಾಂ ಸಮಂತತಃ ।
ಕೃಪಯಾ ಚ ಪುನಸ್ತೇನ ಜೀವೇತಿ ಸ ವಿಸರ್ಜಿತಃ ॥ ೧೬ ॥

ಸಹಸ್ರರಾಜರು ಎಲ್ಲ ಕಡೆಗಳಲ್ಲಿಯೂ ನೋಡುತ್ತಿರುವಾಗ ಹೀಗೆ ಮಾಡಿ, ಪುನಃ ಅವನು ಕೃಪೆಯಿಂದ ಕೂಡಿ, ಬದುಕು ಎಂದು ಹೇಳಿ ಸೋಮದತ್ತನನ್ನು ಬಿಟ್ಟನು.

ತದವಸ್ಥಃ ಕೃತಸ್ತೇನ ಸೋಮದತ್ತೋಽಥ ಮಾರಿಷ ।
ಪ್ರಾಸಾದಯನ್ಮಹಾದೇವಮಮರ್ಷವಶಮಾಸ್ಥಿತಃ ॥ ೧೭ ॥

ಎಲೈ ಪೂಜ್ಯನೇ, ಅಂತಹ ಸ್ಥಿತಿಯನ್ನು ತಲುಪಿದ ಸೋಮದತ್ತನು ಬಹಳ ಕೋಪದಿಂದ ಕೂಡಿದವನಾಗಿ ರುದ್ರದೇವರನ್ನು ತಪಸ್ಸಿನಿಂದ ಪ್ರಸನ್ನೀಕರಿಸಿಕೊಂಡನು.

ತಸ್ಯ ತುಷ್ಟೋ ಮಹಾದೇವೋ ವರಾಣಾಂ ವರದಃ ಪ್ರಭುಃ ।
ವರೇಣ ಛಂದಯಾಮಾಸ ಸ ತು ವವ್ರೇ ವರಂ ನೃಪಃ ॥ ೧೮ ॥

ಶ್ರೇಷ್ಠವಾದ ವರಗಳನ್ನು ಕೊಡುವ ಪ್ರಭುವಾದ ಮಹಾದೇವನು ಸಂತುಷ್ಟನಾಗಿ ವರವನ್ನು ನೀಡುತ್ತಿರಲು ರಾಜನು ವರವನ್ನು ಬೇಡಿದನು.

ಪುತ್ರಮಿಚ್ಛಾಮಿ ಭಗವನ್ ಯೋ ನಿಹನ್ಯಾಚ್ಚಿನೇಃ ಸುತಮ್ ।
ಮಧ್ಯೇ ರಾಜಸಹಸ್ರಾಣಾಂ ಪದಾ ಹನ್ಯಾಚ್ಚ ಸಂಯುಗೇ ॥ ೧೯ ॥

ಭಗವಂತನೇ, ರಾಜಸಹಸ್ರರ ಮಧ್ಯದಲ್ಲಿ ಶಿನಿಯ ಪುತ್ರನನ್ನು ಯುದ್ಧದಲ್ಲಿ ಕಾಲಿನಿಂದ ಒದೆಯುವ ಪುತ್ರನನ್ನು ಬಯಸುತ್ತೇನೆ (ಎಂದು ವರವನ್ನು ಬೇಡಿದನು).

ತಸ್ಯ ತದ್ವಚನಂ ಶ್ರುತ್ವಾ ಸೋಮದತ್ತಸ್ಯ ಪಾರ್ಥಿವ ।
ಏವಮಸ್ತ್ವಿತಿ ತತ್ರೋಕ್ತ್ವಾ ಸ ದೇವೋಽಂತರಧೀಯತ ॥ ೨೦ ॥

ಎಲೈ ರಾಜನೇ, ಸೋಮದತ್ತನ ಆ ಮಾತನ್ನು ಕೇಳಿ ಮಹಾದೇವನು ಹಾಗೆಯೇ ಆಗಲಿ ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು.

ಸ ತೇನ ವರದಾನೇನ ಲಬ್ಧವಾನ್ ಭೂರಿದಕ್ಷಿಣಮ್ ।
ನ್ಯಪಾತಯಚ್ಚ ಸಮರೇ ಸೌಮದತ್ತಿಃ ಶಿನೇಃ ಸುತಮ್ ॥ ೨೧ ॥

ಸೋಮದತ್ತನು ಆ ವರದಿಂದ ಭೂರಿದಕ್ಷಿಣನಾದ ಭೂರಿಶ್ರವನನ್ನು ಮಗನಾಗಿ ಪಡೆದನು. ಭೂರಿಶ್ರವನೂ ಸಹ ಶಿನಿಯ ಪುತ್ರನಾದ ಸಾತ್ಯಕಿಯನ್ನು ಯುದ್ಧದಲ್ಲಿ ಕೆಡವಿದನು.

ಏತತ್ತೇ ಕಥಿತಂ ರಾಜನ್ ಯನ್ಮಾಂ ತ್ವಂ ಪರಿಪೃಚ್ಛಸಿ ।
ನ ಹಿ ಶಕ್ಯಾ ರಣೇ ಜೇತುಂ ಸಾತ್ವತಾ ಮನುಜರ್ಷಭ ॥ ೨೨ ॥

ಎಲೈ ರಾಜನೇ, ನಿನ್ನ ಪ್ರಶ್ನೆಗೆ ಉತ್ತರವಾಗಿ ಇದನ್ನು ಹೇಳಿದ್ದೇನೆ. ಮನುಜಶ್ರೇಷ್ಠನೇ, ಇಲ್ಲದಿದ್ದರೆ ಸಾತ್ವತನನ್ನು ಯುದ್ಧದಲ್ಲಿ ಗೆಲ್ಲುವುದು ಸಾಧ್ಯವಿಲ್ಲ.

ಲಬ್ಧಲಕ್ಷ್ಯಾಶ್ಚ ಸಂಗ್ರಾಮೇ ಬಹವಶ್ಚಿತ್ರಯೋಧಿನಃ ।
ದೇವದಾನವಗಂಧರ್ವಾನ್ ವಿಜೇತಾರೋ ಹ್ಯವಿಸ್ಮಿತಾಃ ।
ಸ್ವವೀರ್ಯವಿಜಯೇ ಯುಕ್ತಾ ನೈತೇ ಪರಪರಿಗ್ರಹಾಃ ॥ ೨೩ ॥

ಆ ಕುಲದಲ್ಲಿ ಗುರಿಯನ್ನು ತಪ್ಪದ, ಯುದ್ಧದಲ್ಲಿ ವಿಚಿತ್ರವಾಗಿ ಯುದ್ಧವನ್ನು ಮಾಡುವ, ದೇವ-ದಾನವ-ಗಂಧರ್ವರನ್ನು ಗೆದ್ದ, ಅವಿಸ್ಮಯರಾದ ಅನೇಕರು ಇದ್ದಾರೆ. ಇವರು ತಮ್ಮ ಪರಾಕ್ರಮ ಮತ್ತು ವಿಜಯದಲ್ಲಿ ನಿರತರಾಗಿದ್ದಾರೆ. ಇವರಿಗೆ ಇನ್ನೊಬ್ಬರ ಅಪೇಕ್ಷೆಯಿಲ್ಲ.

ನ ತುಲ್ಯಂ ವೃಷ್ಣಿಭಿರಿಹ ದೃಶ್ಯತೇ ಕಿಂಚನ ಪ್ರಭೋ ।
ಭೂತಂ ಭವ್ಯಂ ಭವಿಷ್ಯಚ್ಚ ಬಲೇನ ಭರತರ್ಷಭ ॥ ೨೪ ॥

ಎಲೈ ಭರತಶ್ರೇಷ್ಠನೇ, ಪ್ರಭುವೇ, ವೃಷ್ಣಿಗಳ ಬಲಕ್ಕೆ ಸಮಾನರಾದವರು ಭೂತ-ವರ್ತಮಾನ-ಭವಿಷ್ಯತ್ ಕಾಲದಲ್ಲಿ ಯಾರೂ ಕಾಣುವುದಿಲ್ಲ.

ನ ಜ್ಞಾತಿಮವಮನ್ಯಂತೇ ವೃದ್ಧಾನಾಂ ಶಾಸನೇ ರತಾಃ ।
ನ ದೇವಾಸುರಗಂಧರ್ವಾ ನ ಯಕ್ಷೋರಗರಾಕ್ಷಸಾಃ ।
ಜೇತಾರೋ ವೃಷ್ಣಿವೀರಾಣಾಂ ನ ಪುನರ್ಮಾನುಷಾ ರಣೇ ॥ ೨೫ ॥

ಅವರು ಬಂಧುಗಳಿಗೆ ಅವಮಾನ ಮಾಡುವುದಿಲ್ಲ. ಹಿರಿಯರ ಶಾಸನದಂತೆ ನಡೆದುಕೊಳ್ಳುತ್ತಾರೆ. ದೇವಾಸುರ-ಗಂಧರ್ವರಾಗಲೀ, ಯಕ್ಷ-ಸರ್ಪ-ರಾಕ್ಷಸರಾಗಲೀ ವೃಷ್ಣಿವೀರರನ್ನು ಗೆಲ್ಲಲಾರರು. ಮನುಷ್ಯರಂತೂ ಯುದ್ಧದಲ್ಲಿ ಎಂದೂ ಗೆಲ್ಲಲಾರರು.

ಬ್ರಹ್ಮದ್ರವ್ಯೇ ಗುರುದ್ರವ್ಯೇ ಜ್ಞಾತಿದ್ರವ್ಯೇಽಪ್ಯಹಿಂಸಕಾಃ ।
ಏತೇಷಾಂ ರಕ್ಷತಾರಶ್ಚ ಯೇ ಸ್ಯುಃ ಕಸ್ಯಾಂಚಿದಾಪದಿ ॥ ೨೬ ॥

ಅವರು ಬ್ರಹ್ಮದ್ರವ್ಯವನ್ನಾಗಲೀ, ಗುರುದ್ರವ್ಯವನ್ನಾಗಲೀ, ಬಂಧುದ್ರವ್ಯವನ್ನಾಗಲೀ ನಾಶ ಮಾಡುವವರಲ್ಲ. ಅವರಿಗೆ ಏನಾದರೂ ಸಂಕಟ ಒದಗಿದರೆ ಅವರನ್ನು ರಕ್ಷಿಸುತ್ತಾರೆ.

ಅರ್ಥವಂತೋ ನ ಚೋತ್ಸಿಕ್ತಾ ಬ್ರಹ್ಮಣ್ಯಾಃ ಸತ್ಯವಾದಿನಃ ।
ಸಮರ್ಥಾನ್ ನಾವಮನ್ಯಂತೇ ದೀನಾನಭ್ಯುದ್ಧರಂತಿ ಚ ॥ ೨೭ ॥

ಅವರು ಸಂಪದ್ಯುಕ್ತರಾದವರು, ಅಹಂಕಾರಿಗಳಲ್ಲ, ಬ್ರಾಹ್ಮಣರಿಗೆ ವತ್ಸಲರಾದವರು, ಸತ್ಯವಾದಿಗಳು, ಸಮರ್ಥರಾದವರನ್ನು ಅವಮಾನಗೊಳಿಸುವುದಿಲ್ಲ. ದೀನರನ್ನು ಉದ್ಧಾರ ಮಾಡುತ್ತಾರೆ.

ನಿತ್ಯಂ ದೇವಪರಾ ದಾಂತಾ ದಾತಾರಶ್ಚಾವಿಕತ್ಥನಾಃ ।
ತೇನ ವೃಷ್ಣಿಪ್ರವೀರಾಣಾಂ ಚಕ್ರಂ ನ ಪ್ರತಿಹನ್ಯತೇ ॥ ೨೮ ॥

ನಿತ್ಯವೂ ದೇವಾರ್ಚನೆಯಲ್ಲಿ ನಿರತರಾದವರು, ಇಂದ್ರಿಯನಿಗ್ರಹವುಳ್ಳವರು, ದಾನವನ್ನು ಮಾಡುವವರು ಮತ್ತು ತಮ್ಮನ್ನು ಹೊಗಳಿಕೊಳ್ಳದವರು. ಆದ್ದರಿಂದ ವೃಷ್ಣಿವೀರರ ಸೈನ್ಯವು ಪ್ರತಿಘಾತಕ್ಕೆ ಒಳಗಾಗುವುದಿಲ್ಲ.

ಅಪಿ ಮೇರುಂ ವಹೇತ್ ಕಶ್ಚಿತ್ ತರೇದ್ವಾ ಮಕರಾಲಯಮ್ ।
ನ ತು ವೃಷ್ಣಿಪ್ರವೀರಾಣಾಂ ಸಮಿತ್ಯಂತಂ ವ್ರಜೇನ್ನೃಪ ॥ ೨೯ ॥

ಯಾವನಾದರೂ ಮೇರುವನ್ನು ಎತ್ತಬಹುದು ಅಥವಾ ಸಮುದ್ರವನ್ನು (ಬಾಹುಗಳಿಂದಲೇ ದಾಟಬಹುದು). ಆದರೆ ಎಲೈ ರಾಜನೇ, ಯಾವನೂ ವೃಷ್ಣಿವೀರರ ಸೈನ್ಯವನ್ನು ದಾಟಿಹೋಗಲಾರ.

ಏತತ್ತೇ ಸರ್ವಮಾಖ್ಯಾತಂ ಯತ್ರ ತೇ ಸಂಶಯೋ ವಿಭೋ ।
ಕುರುರಾಜ ನರಶ್ರೇಷ್ಠ ತವ ಹ್ಯಪನಯೋ ಮಹಾನ್ ॥ ೩೦ ॥

ಎಲೈ ವಿಭುವೇ, ನಿನಗೆ ಸಂಶಯವಿರುವ ಈ ಎಲ್ಲ ವಿಷಯವನ್ನೂ ಹೇಳಿದ್ದೇನೆ. ಎಲೈ ಕುರುರಾಜನೇ, ನರಶ್ರೇಷ್ಠನೇ, ಈ ಒಂದು ವಿನಾಶಕ್ಕೆ ನಿನ್ನ ಅಪಚಾರವೇ ಮೂಲಕಾರಣವಾಗಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನತ್ರಿಂಶದಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ತ್ರಿಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತನೆಯ ಅಧ್ಯಾಯ

ಕೃಷ್ಣಾರ್ಜುನರ ಸಂವಾದ. ಕರ್ಣ-ಸಾತ್ಯಕಿ ಮೊದಲಾದವರ ಯುದ್ಧ.

ಧೃತರಾಷ್ಟ್ರಃ

ತದವಸ್ಥೇ ಹತೇ ತಸ್ಮಿನ್ ಭೂರಿಶ್ರವಸಿ ಕೌರವೇ ।
ಯಥಾ ಭೂಯೋಽಭವದ್ ಯುದ್ಧಂ ತನ್ಮಾಚಕ್ಷ್ವ ಸಂಜಯ ॥ ೧ ॥

ಧೃತರಾಷ್ಟ್ರ- ಎಲೈ ಸಂಜಯನೇ, ಕೌರವನಾದ ಭೂರಿಶ್ರವನು ಅಂತಹ ಅವಸ್ಥೆಯಲ್ಲಿ ಹತನಾಗುತ್ತಿರಲು ಪುನಃ ಹೇಗೆ ಯುದ್ಧವು ನಡೆಯಿತೆಂದು ನನಗೆ ಹೇಳು.

ಸಂಜಯಃ

ಭೂರಿಶ್ರವಸಿ ಸಂಕ್ರಾಂತೇ ಪರಲೋಕಾಯ ಭಾರತ ।
ವಾಸುದೇವಂ ಮಹಾಬಾಹುರರ್ಜುನಃ ಸಮಚೂಚುದತ್ ॥ ೨ ॥

ಸಂಜಯ- ಎಲೈ ಭಾರತನೇ, ಭೂರಿಶ್ರವನು ಪರಲೋಕಕ್ಕೆ ಪ್ರಯಾಣ ಮಾಡುತ್ತಿರಲು ಮಹಾಬಾಹುವಾದ ಅರ್ಜುನನು ಕೃಷ್ಣನನ್ನು ಪ್ರಚೋದಿಸಿದನು.

ಚೋದಯಾಶ್ವಾನ್ ಭೃಶಂ ಕೃಷ್ಣ ಯತೋ ರಾಜಾ ಜಯದ್ರಥಃ ।
ಅಸ್ತಮೇತಿ ಮಹಾಬಾಹೋ ತ್ವರಮಾಣೋ ದಿವಾಕರಃ ॥ ೩ ॥

ಎಲೈ ಮಹಾಬಾಹುವೇ, ಸೂರ್ಯನು ಶೀಘ್ರವಾಗಿ ಅಸ್ತದ ಕಡೆಗೆ ಹೋಗುತ್ತಿದ್ದಾನೆ. ಕೃಷ್ಣನೇ, ಜಯದ್ರಥನಿರುವಲ್ಲಿಗೆ ನನ್ನ ರಥದ ಅಶ್ವಗಳನ್ನು ಪ್ರಚೋದಿಸು.

ಏತದ್ಧಿ ಪುರುಷವ್ಯಾಘ್ರ ಮಹದಭ್ಯುದ್ಯತಂ ಮಯಾ ।
ಕಾರ್ಯಂ ಸಂರಕ್ಷ್ಯತೇ ಚೈಷ ಕುರುಸೇನಾಮಹಾರಥೈಃ ॥ ೪ ॥

ಎಲೈ ಪುರುಷವ್ಯಾಘ್ರನೇ, ಇದು ನಾನು ಮಾಡಬೇಕಾದ ದೊಡ್ಡ ಕಾರ್ಯ. ಕುರುಸೇನೆಯ ಮಹಾರಥರು ಜಯದ್ರಥನನ್ನು ರಕ್ಷಿಸುತ್ತಿದ್ದಾರೆ.

ನಾಸ್ತಮೇತಿ ಯಥಾ ಸೂರ್ಯೋ ಯಥಾ ಸತ್ಯಂ ಭವೇದ್ವಚಃ ।
ಚೋದಯಾಶ್ವಾಂಸ್ತಥಾ ಕೃಷ್ಣ ಯಥಾ ಹನ್ಯಾಂ ಜಯದ್ರಥಮ್ ॥ ೫ ॥

ಎಲೈ ಕೃಷ್ಣನೇ, ಸೂರ್ಯನು ಅಸ್ತಂಗತನಾಗುವುದಕ್ಕಿಂತ ಮೊದಲು ನಾನು ಜಯದ್ರಥನನ್ನು ಕೊಲ್ಲುವಂತೆ, ನನ್ನ ಮಾತು ಸತ್ಯವಾಗುವಂತೆ ನನ್ನ ಅಶ್ವಗಳನ್ನು ಪ್ರಚೋದಿಸು (ಎಂದು ಒತ್ತಾಯಪಡಿಸಿದನು).

ತತಃ ಕೃಷ್ಣೋ ಮಹಾಬಾಹೂ ರಜತಪ್ರತಿಮಾನ್ ಹಯಾನ್ ।
ಹಯಜ್ಞಶ್ಚೋದಯಾಮಾಸ ಜಯದ್ರಥರಥಂ ಪ್ರತಿ ॥ ೬ ॥

ಆಗ ಅಶ್ವಕೋವಿದನಾದ ಮಹಾಬಾಹುವಾದ ಕೃಷ್ಣನು ರಜತವರ್ಣದ ಅರ್ಜುನನ ಕುದುರೆಗಳನ್ನು ಜಯದ್ರಥದ ರಥನ ಕಡೆಗೆ ಪ್ರೇರಿಸಿದನು.

ತಂ ಪ್ರಯಾಂತಮಮೋಘೇಷುಮುತ್ಪತದ್ಭಿರಿವಾಶುಗೈಃ ।
ತ್ವರಮಾಣಾ ಮಹಾರಾಜ ಸೇನಾಮುಖ್ಯಾಃ ಸಮಾವ್ರಜನ್ ॥ ೭ ॥

ಎಲೈ ಮಹಾರಾಜನೇ, ಶೀಘ್ರಗಾಮಿಗಳಾಗಿ ಆಕಾಶದಲ್ಲಿ ಹಾರುವಂತೆ ಹೋಗುತ್ತಿದ್ದ ಅಮೋಘ ಬಾಣಪ್ರಯೋಗವುಳ್ಳ ಅರ್ಜುನನನ್ನು ನಿನ್ನ ಸೇನೆಯ ಪ್ರಧಾನರು ತ್ವರೆಯಿಂದ ಮುತ್ತಿದರು.

ದುರ್ಯೋಧನಶ್ಚ ಕರ್ಣಶ್ಚ ವೃಷಸೇನೋಽಥ ಮದ್ರರಾಟ್।
ಅಶ್ವತ್ಥಾಮಾ ಕೃಪಶ್ಚೈವ ಸ್ವಯಮೇವ ಚ ಸೈಂಧವಃ ॥ ೮ ॥

ದುರ್ಯೋಧನ, ಕರ್ಣ, ವೃಷಸೇನ, ಮುದ್ರರಾಜನಾದ ಶಲ್ಯ, ಅಶ್ವತ್ಥಾಮ, ಕೃಪರು ಮತ್ತು ಸ್ವತಃ ಸೈಂಧವ- ಇವರು (ಅರ್ಜುನನ ಮೇಲೆ ಎರಗಿದರು).

ಸಮಾಸಾದ್ಯ ತು ಬೀಭತ್ಸುಃ ಸೈಂಧವಂ ಪ್ರಮುಖೇ ಸ್ಥಿತಮ್ ।
ನೇತ್ರಾಭ್ಯಾಂ ಕ್ರೋಧದೀಪ್ತಾಭ್ಯಾಂ ಸಂಪ್ರೈಕ್ಷನ್ ನಿರ್ದಹನ್ನಿವ ॥ ೯ ॥

ಅರ್ಜುನನು ಸೈಂಧವನ ಸಮೀಪಕ್ಕೆ ಬಂದು ತನ್ನ ಎದುರಿಗಿದ್ದ ಅವನನ್ನು ಕ್ರೋಧದೀಪ್ತವಾದ ತನ್ನ ಕಣ್ಣುಗಳಿಂದ ಸುಟ್ಟುಬಿಡುವಂತೆ ನೋಡಿದನು.

ತತೋ ದುರ್ಯೋಧನೋ ರಾಜಾ ರಾಧೇಯಂ ತ್ವರಿತೋಽಬ್ರವೀತ್ ।
ಅರ್ಜುನಂ ವೀಕ್ಷ್ಯ ಸಂಯಾಂತಂ ಜಯದ್ರಥರಥಂ ಪ್ರತಿ ॥ ೧೦ ॥

ಆಗ ರಾಜನಾದ ದುರ್ಯೋಧನನು ಜಯದ್ರಥನ ರಥದ ಕಡೆಗೆ ಹೋಗುತ್ತಿದ್ದ ಅರ್ಜುನನನ್ನು ನೋಡಿ ಶೀಘ್ರವಾಗಿ ಕರ್ಣನನ್ನು ಕುರಿತು ಹೇಳಿದನು.

ಅಯಂ ಸ ವೈಕರ್ತನ ಯುದ್ಧಕಾಲೋ
ವಿದರ್ಶಯ ಸ್ವಾತ್ಮಬಲಂ ಮಹಾತ್ಮನ್ ।
ಯಥಾ ನ ವಧ್ಯೇತ ರಣೇಽರ್ಜುನೇನ
ಜಯದ್ರಥಃ ಕರ್ಣ ತಥಾ ಕುರುಷ್ವ ॥ ೧೧ ॥

ಎಲೈ ವೈಕರ್ತನನೇ, ಇದು ನೀನು ನಿರೀಕ್ಷಿಸಿದ ಯುದ್ಧದ ಕಾಲ. ಮಹಾತ್ಮನೇ, ನಿನ್ನ ಸಾಮರ್ಥ್ಯವನ್ನು ಈಗ ತೋರಿಸು. ಎಲೈ ಕರ್ಣನೇ, ಯುದ್ಧದಲ್ಲಿ ಜಯದ್ರಥನು ಅರ್ಜುನನಿಂದ ಕೊಲ್ಲಲ್ಪಡದಂತೆ ಮಾಡು.

ಅಲ್ಪಾವಶಿಷ್ಟಂ ದಿವಸಂ ನೃವೀರ
ವಿಘಾತಯಸ್ವಾದ್ಯ ರಿಪುಂ ಶರೌಘೈಃ ।
ದಿನಕ್ಷಯಂ ಪ್ರಾಪ್ಯ ನರಪ್ರವೀರ
ಧ್ರುವಂ ಹಿ ನಃ ಕರ್ಣ ಜಯೋ ಭವಿಷ್ಯತಿ ॥ ೧೨ ॥

ಎಲೈ ನರಶ್ರೇಷ್ಠನೇ, ದಿವಸದಲ್ಲಿ ಅಲ್ಪಭಾಗವು ಮಾತ್ರ ಉಳಿದಿದೆ. ಶತ್ರುವಾದ ಅರ್ಜುನನನ್ನು ನಿನ್ನ ಬಾಣಗಳ ಸಮೂಹದಿಂದ ಈ ದಿನ ವಿಫಲಗೊಳಿಸು. ಎಲೈ ನರಪ್ರವೀರನಾದ ಕರ್ಣನೇ, ಈ ದಿನವು ಕಳೆದು ಹೋದರೆ ನಮಗೆ ಖಂಡಿತವಾಗಿ ಜಯವುಂಟಾಗುವುದು.

ಸೈಂಧವೇ ರಕ್ಷ್ಯಮಾಣೇ ತು ಸೂರ್ಯಾಸ್ತಮಯಂ ಪ್ರತಿ ।
ಮಿಥ್ಯಾಪ್ರತಿಜ್ಞಃ ಕೌಂತೇಯಃ ಪ್ರವೇಕ್ಷ್ಯತಿ ಹುತಾಶನಮ್ ॥ ೧೩ ॥

ಸೂರ್ಯಾಸ್ತದವರೆಗೂ ಸೈಂಧವನನ್ನು ರಕ್ಷಿಸಿದರೆ ಅರ್ಜುನನು ಮಿಥ್ಯಾ ಪ್ರತಿಜ್ಞೆ ಉಳ್ಳವನಾಗಿ ಅಗ್ನಿಯನ್ನು ಪ್ರವೇಶಿಸುವನು.

ಅನರ್ಜುನಾಯಾಂ ಚ ಭುವಿ ಮುಹೂರ್ತಮಪಿ ಮಾನದ ।
ಜೀವಿತುಂ ನೋತ್ಸಹೇರನ್ ವೈ ಭ್ರಾತರೋಽಸ್ಯ ಸಹಾನುಗಾಃ ॥ ೧೪ ॥

ಎಲೈ ಮಾನದನೇ, ಅರ್ಜುನ ರಹಿತವಾದ ಭೂಮಿಯಲ್ಲಿ ಅವನ ಸಹೋದರರು ಮತ್ತು ಅನುಯಾಯಿಗಳು ಒಂದು ಮುಹೂರ್ತದ ಕಾಲವೂ ಜೀವಿಸಲಾರರು.

ವಿನಶ್ಯೈಃ ಪಾಂಡವೇಯೈಶ್ಚ ಸಶೈಲವನಕಾನನಾಮ್ ।
ವಸುಂಧರಾಮಿಮಾಂ ಕರ್ಣ ಭೋಕ್ಷ್ಯಾಮೋ ಹತಕಂಟಕಾಮ್ ॥ ೧೫ ॥

ಎಲೈ ಕರ್ಣನೇ, ಪಾಂಡವರು ವಿನಾಶವನ್ನು ಹೊಂದಿದರೆ, ಶೈಲ-ವನ-ಕಾನನಗಳಿಂದ ಸಹಿತವಾದ ಈ ಭೂಮಿಯನ್ನು ನಿಷ್ಕಂಟಕವಾಗಿ ನಾವು ಅನುಭವಿಸುವೆವು.

ದೈವೇನೋಪಹತಃ ಪಾರ್ಥೋ ವಿಪರೀತಶ್ಚ ಮಾನದ ।
ಕಾರ್ಯಾಕಾರ್ಯಮಜಾನನ್ ವೈ ಪ್ರತಿಜ್ಞಾಂ ಕೃತವಾನ್ ರಣೇ ॥ ೧೬ ॥

ಎಲೈ ಮಾನದನೇ, ಅರ್ಜುನನು ವಿಧಿಯಿಂದ ಉಪದ್ರುತನಾಗಿ ವಿಪರೀತ ಬುದ್ಧಿಯನ್ನು ಹೊಂದಿದ್ದಾನೆ. ಕಾರ್ಯಾಕಾರ್ಯಗಳನ್ನು ತಿಳಿಯದೆ ಯುದ್ಧದಲ್ಲಿ ಪ್ರತಿಜ್ಞೆಯನ್ನು ಮಾಡಿದ್ದಾನೆ.

ನೂನಮಾತ್ಮವಿನಾಶಾಯ ಪಾಂಡವೇನ ಕಿರೀಟಿನಾ ।
ಪ್ರತಿಜ್ಞೇಯಂ ಕೃತಾ ಕರ್ಣ ಜಯದ್ರಥವಧಂ ಪ್ರತಿ ॥ ೧೭ ॥

ಎಲೈ ಕರ್ಣನೇ, ಖಂಡಿತವಾಗಿ ಅರ್ಜುನನು ಜಯದ್ರಥನ ವಧೆಯ ವಿಷಯದಲ್ಲಿ ತನ್ನ ವಿನಾಶಕ್ಕಾಗಿ ಈ ಪ್ರತಿಜ್ಞೆಯನ್ನು ಮಾಡಿದ್ದಾನೆ.

ಕಥಂ ಜೀವತಿ ದುರ್ಧರ್ಷೇ ತ್ವಯಿ ರಾಧೇಯ ಫಲ್ಗುನಃ ।
ಅನಸ್ತಂಗತ ಆದಿತ್ಯೇ ಹನ್ಯಾತ್ ಸೈಂಧವಕಂ ನೃಪಮ್ ॥ ೧೮ ॥

ಎಲೈ ರಾಧೇಯನೇ, ಸೋಲಿಸಲು ಅಸಾಧ್ಯನಾದ ನೀನು ಬದುಕಿರುವಾಗ ಸೂರ್ಯನು ಅಸ್ತಂಗತನಾಗುವುದರೊಳಗೆ ಅರ್ಜುನನು ಸೈಂಧವನನ್ನು ಹೇಗೆ ಕೊಂದಾನು?

ರಕ್ಷಿತಂ ಮದ್ರರಾಜೇನ ಕೃಪೇಣ ಚ ಮಹಾತ್ಮನಾ ।
ಜಯದ್ರಥಂ ರಣಮುಖೇ ಕಥಂ ಹನ್ಯಾದ್ ಧನಂಜಯಃ ॥ ೧೯ ॥

ಮದ್ರರಾಜನಾದ ಶಲ್ಯನಿಂದಲೂ, ಮಹಾತ್ಮರಾದ ಕೃಪರಿಂದಲೂ ಯುದ್ಧದಲ್ಲಿ ರಕ್ಷಿಸಲ್ಪಡುವ ಜಯದ್ರಥನನ್ನು ಅರ್ಜುನನು ಹೇಗೆ ಕೊಂದಾನು?

ದ್ರೋಣೇನ ರಕ್ಷ್ಯಮಾಣಂ ಚ ಮಯಾ ದುಃಶಾಸನೇನ ಚ ।
ಕಥಂ ಪ್ರಾಪ್ಸ್ಯತಿ ಬೀಭತ್ಸುಃ ಸೈಂಧವಂ ಕಾಲಚೋದಿತಃ ॥ ೨೦ ॥

ಕಾಲಚೋದಿತನಾದ ಅರ್ಜುನನು ಅಶ್ವತ್ಥಾಮರಿಂದಲೂ, ನನ್ನಿಂದಲೂ ಮತ್ತು ದುಶ್ಶಾಸನನಿಂದಲೂ ರಕ್ಷಿಸಲ್ಪಡುವ ಸೈಂಧವನ ಬಳಿಗೆ ಹೇಗೆ ಬರುತ್ತಾನೆ?

ಯುದ್ಧ್ಯಂತೇ ಬಹವಃ ಶೂರಾ ಲಂಬತೇ ಚ ದಿವಾಕರಃ ।
ಶಂಕೇ ಜಯದ್ರಥಂ ಪಾರ್ಥೋ ನೈವ ಪ್ರಾಪ್ಸ್ಯತಿ ಮಾನದ ॥ ೨೧ ॥

ನಮ್ಮ ಅನೇಕ ಶೂರರು ಯುದ್ಧವನ್ನು ಮಾಡುತ್ತಿದ್ದಾರೆ. ಸೂರ್ಯನು ಇಳಿಯುತ್ತಿದ್ದಾನೆ. ಎಲೈ ಮಾನದನೇ, ಅರ್ಜುನನು ಜಯದ್ರಥನ ಬಳಿಗೆ ಬರಲಾರನೆಂದು ನಾನು ಶಂಕಿಸುತ್ತೇನೆ.

ಸ ತ್ವಂ ಕರ್ಣ ಮಯಾ ಸಾರ್ಧಂ ಶೂರೈಶ್ಚಾನ್ಯೈರ್ಮಹಾರಥೈಃ ।
ದ್ರೋಣೇನಾ ತ್ವಂ ಹಿ ಸಹಿತೋ ಮದ್ರೇಶೇನ ಕೃಪೇಣ ಚ ।
ಯುದ್ಧ್ಯಸ್ವ ಯತ್ನಮಾಸ್ಥಾಯ ಪರಂ ಪಾರ್ಥೇನ ಸಂಯುಗೇ ॥ ೨೨ ॥

ಕರ್ಣನೇ, ಅಂತಹ ನೀನು ನನ್ನ ಜೊತೆಯಲ್ಲಿ ಶೂರರಾದ ಉಳಿದ ಮಹಾರಥರ ಜೊತೆಯಲ್ಲಿ ಅಶ್ವತ್ಥಾಮರ, ಶಲ್ಯನ ಮತ್ತು ಕೃಪರ ಜೊತೆಯಲ್ಲಿ ಪ್ರಯತ್ನಪಟ್ಟು ಅರ್ಜುನನ ಜೊತೆ ಯುದ್ಧವನ್ನು ಮಾಡು (ಎಂದು ಹೇಳಿದನು).

ಏವಮುಕ್ತಸ್ತು ರಾಧೇಯಸ್ತವ ಪುತ್ರೇಣ ಮಾರಿಷ ।
ದುರ್ಯೋಧನಮಿದಂ ವಾಕ್ಯಂ ಪ್ರತ್ಯುವಾಚ ಕುರೂತ್ತಮಮ್ ॥ ೨೩ ॥

ಎಲೈ ಪೂಜ್ಯನೇ, ನಿನ್ನ ಪುತ್ರನಾದ ದುರ್ಯೋಧನನಿಂದ ಹೀಗೆ ಹೇಳಲ್ಪಟ್ಟ ರಾಧೇಯನಾದ ಕರ್ಣನು ಕುರುಶ್ರೇಷ್ಠನಾದ ದುರ್ಯೋಧನನನ್ನು ಕುರಿತು ಮಾತನಾಡಿದನು.

ದೃಢಲಕ್ಷ್ಯೇಣ ಶೂರೇಣ ಭೀಮಸೇನೇನ ಧನ್ವಿನಾ ।
ಭೃಶಮುದ್ವೇಜಿತಃ ಸಂಖೇ ಶರಜಾಲೈರನೇಕಶಃ ॥ ೨೪ ॥

ಲಕ್ಷ್ಯವನ್ನು ತಪ್ಪದಿರುವ ಶೂರನಾದ ಧನುರ್ಧಾರಿಯಾದ ಭೀಮಸೇನನಿಂದ ಅನೇಕ ಬಾಣಸಮೂಹಗಳಿಂದ ನಾನು ಯುದ್ಧದಲ್ಲಿ ಬಹಳ ಉದ್ವೇಗಗೊಂಡಿದ್ದೇನೆ.

ಸ್ಥಾತವ್ಯಮಿತಿ ತಿಷ್ಠಾಮಿ ರಣೇ ಸಂಪ್ರತಿ ಮಾನದ ।
ನೈವಾಂಗಮಿಂಗತಿ ಕಿಂಚಿನ್ಮೇ ಸಂತಪ್ತಸ್ಯ ರಣೇಷುಭಿಃ ॥ ೨೫ ॥

ಎಲೈ ಮಾನದನೇ, ರಣರಂಗದಲ್ಲಿ ನಿಲ್ಲಬೇಕೆಂಬ ಹಠದಿಂದ ಈಗ ನಾನು ನಿಂತಿದ್ದೇನೆ. ಭೀಮನ ಬಾಣಗಳಿಂದ ಸಂತಪ್ತನಾದ ನನ್ನ ಶರೀರದ ಯಾವ ಅವಯವಗಳೂ ಅಲ್ಲಾಡುವುದಿಲ್ಲ.

ಯೋತ್ಸ್ಯಾಮಿ ತು ತಥಾ ರಾಜನ್ ಶಕ್ಯಾಹಂ ಪರಯಾ ರಣೇ ।
ತದ್ ಯಥಾ ಪ್ರಯತಿಷ್ಯೇಽಹಂ ಪರಂ ಶಕ್ತ್ಯಾ ಸುಯೋಧನ ।
ಯಥಾ ಪಾಂಡವಮುಖ್ಯೋಽಸೌ ನ ಹನಿಷ್ಯತಿ ಸೈಂಧವಮ್ ॥ ೨೬ ॥

ಎಲೈ ರಾಜನೇ, ಸುಯೋಧನನೇ, ಪಾಂಡವಶ್ರೇಷ್ಠನಾದ ಅರ್ಜುನನು ಸೈಂಧವನನ್ನು ಕೊಲ್ಲದಂತೆ ನಾನು ನನ್ನ ಪರಮಶಕ್ತಿಯಿಂದ ಪ್ರಯತ್ನಪೂರ್ವಕವಾಗಿ ಯುದ್ಧವನ್ನು ಮಾಡುವೆನು.

ನ ಹಿ ಮೇ ಯುದ್ಧ್ಯಮಾನಸ್ಯ ಸಾಯಕಾಂಶ್ಚಾಸ್ಯತಃ ಶಿತಾನ್ ।
ಸೈಂಧವಂ ಪ್ರಾಪ್ಸ್ಯತೇ ವೀರಃ ಸವ್ಯಸಾಚೀ ಧನಂಜಯಃ ॥ ೨೭ ॥

ನಾನು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಯುದ್ಧವನ್ನು ಮಾಡುವಾಗ ವೀರನೂ, ಸವ್ಯಸಾಚಿಯೂ ಆದ ಧನಂಜಯನು ಸೈಂಧವನ ಬಳಿಗೆ ಬರುವುದಿಲ್ಲ.

ಯತ್ ತು ಶಕ್ತಿಮತಾ ಕಾರ್ಯಂ ಸತತಂ ಹಿತಕಾರಿಣಾ ।
ತತ್ ಕರಿಷ್ಯಾಮಿ ಕೌರವ್ಯ ಜಯೋ ದೈವೇ ಪ್ರತಿಷ್ಠಿತಃ ॥ ೨೮ ॥

ಎಲೈ ಕೌರವ್ಯನೇ, ಸತತವಾಗಿ ಹಿತವನ್ನು ಮಾಡುವ ಶಕ್ತಿವಂತನು ಯಾವ ಕಾರ್ಯವನ್ನು ಮಾಡಬಹುದೋ ಅಂತಹ ಕಾರ್ಯವನ್ನು ಮಾಡುವೆನು. ಎಲೈ ಕೌರವ್ಯನೇ, ಜಯವು ದೈವವನ್ನು ಅವಲಂಬಿಸಿದೆ.

ಸೈಂಧವಾರ್ಥೇ ಪರಂ ಯತ್ನಂ ಕರಿಷ್ಯಾಮ್ಯದ್ಯ ಸಂಯುಗೇ ।
ತ್ವತ್ಪ್ರಿಯಾರ್ಥಂ ಮಹಾರಾಜ ಜಯೋ ದೈವೇ ಪ್ರತಿಷ್ಠಿತಃ ॥ ೨೯ ॥

ಎಲೈ ಮಹಾರಾಜನೇ, ನಿನ್ನ ಪ್ರೀತಿಯ ಸಲುವಾಗಿ ನಾನು ಈ ದಿನ ಯುದ್ಧದಲ್ಲಿ ಸೈಂಧವನನ್ನು ರಕ್ಷಿಸುವ ಸಲುವಾಗಿ ಬಹಳ ಪ್ರಯತ್ನವನ್ನು ಮಾಡುವೆನು. ಜಯವು ದೈವವನ್ನು ಅವಲಂಬಿಸಿದೆ.

ಅದ್ಯ ಯೋತ್ಸ್ಯೇऽರ್ಜುನಮಹಂ ಪೌರುಷಂ ಸ್ವಂ ವ್ಯಪಾಶ್ರಿತಃ ।
ತದರ್ಥಂ ಪುರುಷವ್ಯಾಘ್ರ ಜಯೋ ದೈವೇ ಪ್ರತಿಷ್ಠಿತಃ ॥ ೩೦ ॥

ಎಲೈ ಪುರುಷವ್ಯಾಘ್ರನೇ, ಈ ದಿನ ನಾನು ನನ್ನ ಪೌರುಷವನ್ನು ಆಶ್ರಯಿಸಿ ನಿನ್ನ ಸಲುವಾಗಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ಜಯವು ದೈವವನ್ನು ಅವಲಂಬಿಸಿದೆ.

ಅದ್ಯ ಯುದ್ಧಂ ಕುರುಶ್ರೇಷ್ಠ ಮಮ ಪಾರ್ಥಸ್ಯ ಚೋಭಯೋಃ ।
ಪಶ್ಯಂತು ಸರ್ವಭೂತಾನಿ ದಾರುಣಂ ರೋಮಹರ್ಷಣಮ್ ॥ ೩೧ ॥

ಎಲೈ ಕುರುಶ್ರೇಷ್ಠನೇ, ಈ ದಿನ ನನಗೂ ಮತ್ತು ಅರ್ಜುನನಿಗೂ ನಡೆಯುವ ದಾರುಣವೂ, ರೋಮಾಂಚಕಾರಿಯೂ ಆದ ಯುದ್ಧವನ್ನು ಎಲ್ಲ ಪ್ರಾಣಿಗಳೂ ನೋಡಲಿ.

ಸಂಜಯಃ

ಕರ್ಣಕೌರವಯೋರೇವಂ ರಣೇ ಸಂಭಾಷಮಾಣಯೋಃ ।
ಅರ್ಜುನೋ ನಿಶಿತೈರ್ಬಾಣೈರ್ದಧಾನ ತವ ವಾಹಿನೀಮ್ ॥ ೩೨ ॥

ಸಂಜಯ–ಕರ್ಣ-ದುರ್ಯೋಧನರು ರಣರಂಗದಲ್ಲಿ ಹಾಗೆ ಮಾತನಾಡುತ್ತಿರಲು ಅರ್ಜುನನು ತೀಕ್ಷ್ಣವಾದ ಬಾಣಗಳಿಂದ ನಿನ್ನ ಸೈನ್ಯವನ್ನು ಹೊಡೆದನು.

ಚಿಚ್ಛೇದ ತೀಕ್ಷ್ಣಾಗ್ರಮುಖೈಃ ಶೂರಾಣಾಮನಿವರ್ತಿನಾಮ್ ।
ಭುಜಾನ್ ಪರಿಘಸಂಕಾಶಾನ್ ಹಸ್ತಿಹಸ್ತೋಪಮಾನ್ ರಣೇ ॥ ೩೩ ॥

ತೀಕ್ಷ್ಣವಾದ ಅಗ್ರಭಾಗವುಳ್ಳ ಬಾಣಗಳಿಂದ ಅರ್ಜುನನು ರಣರಂಗದಲ್ಲಿ ಯುದ್ಧದಿಂದ ಹಿಮ್ಮೆಟ್ಟದಿರುವ ಶೂರರ ಕಬ್ಬಿಣದ ಒನಕೆಗೆ ಸದೃಶವಾದ, ಆನೆಯ ಸೊಂಡಿಲುಗಳಿಗೆ ಸದೃಶವಾದ ಭುಜಗಳನ್ನು ಕತ್ತರಿಸಿದನು.

ಶಿರಾಂಸಿ ಚ ಮಹಾಬಾಹುಶ್ಚಿಚ್ಛೇದ ನಿಶಿತೈಃ ಶರೈಃ ।
ಹಸ್ತಿಹಸ್ತಾನ್ ಹಯಗ್ರೀವಾ ರಥಾಕ್ಷಾಂಶ್ಚ ಸಮಂತತಃ ॥ ೩೪ ॥

ಮಹಾಬಾಹುವಾದ ಅರ್ಜುನನು ತೀಕ್ಷ್ಣವಾದ ಬಾಣಗಳಿಂದ ಯೋಧರ ಶಿರಸ್ಸುಗಳನ್ನೂ, ಆನೆಗಳ ಸೊಂಡಿಲುಗಳನ್ನೂ, ಅಶ್ವಗಳ ಕತ್ತುಗಳನ್ನೂ, ರಥಗಳ ತೂಬುಗಳನ್ನೂ ಎಲ್ಲ ಕಡೆಗಳಲ್ಲಿಯೂ ಕತ್ತರಿಸಿದನು.

ಶೋಣಿತಾಕ್ತಾನ್ ಹಯಾರೋಹಾನ್ ಗೃಹೀತಪ್ರಾಸತೋಮರಾನ್ ।
ಕ್ಷುರೈಶ್ಚಿಚ್ಛೇದ ಬೀಭತ್ಸುರ್ದ್ವಿಧೈಕೈಕಂ ತ್ರಿಧೈವ ಚ ॥ ೩೫ ॥

ಅರ್ಜುನನು ಕೈಗಳಲ್ಲಿ ಪ್ರಾಸ-ತೋಮರಗಳನ್ನು ಹಿಡಿದ, ರಕ್ತಲೇಪಿತವಾದ ಅಶ್ವಾರೋಹಿಗಳಲ್ಲಿ ಒಬ್ಬೊಬ್ಬರನ್ನೂ ಕ್ಷುರಗಳಿಂದ ಎರಡು ಭಾಗವಾಗಿ ಅಥವಾ ಮೂರು ಭಾಗಗಳಾಗಿ ಕತ್ತರಿಸಿದನು.

ಹಯವಾರಣಮುಖ್ಯಾಶ್ಚ ಪ್ರಾಪತಂತ ಸಹಸ್ರಶಃ ।
ಧ್ವಜಾಶ್ಚತ್ರಾಣಿ ಚಾಪಾನಿ ಚಾಮರಾಣಿ ಶಿರಾಂಸಿ ಚ ॥ ೩೬ ॥

ಶ್ರೇಷ್ಠವಾದ ಅಶ್ವಗಳು ಮತ್ತು ಗಜಗಳು ಸಹಸ್ರ ಸಂಖ್ಯೆಯಲ್ಲಿ ಬಿದ್ದವು. ಧ್ವಜಗಳೂ, ಛತ್ರಗಳೂ, ಧನುಸ್ಸುಗಳೂ, ಚಾಮರಗಳೂ ಮತ್ತು ಶಿರಸ್ಸುಗಳೂ ಬಿದ್ದವು.

ಕಕ್ಷಮಗ್ನಿಮಿವೋದ್ಧೂತಃ ಪ್ರದಹಂಸ್ತವ ವಾಹಿನೀಮ್ ।
ಅಚಿರೇಣ ಮಹೀಂ ಪಾರ್ಥಶ್ಚಕಾರ ರುಧಿರೋತ್ತರಾಮ್ ॥ ೩೭ ॥

ಪರಿವ್ಯದ್ಧವಾದ ಅಗ್ನಿಯು ಹುಲ್ಲುಗಾವಲನ್ನು ಸುಡುವಂತೆ ಅರ್ಜುನನು ಅಲ್ಪಕಾಲದಲ್ಲಿಯೇ ರಣಭೂಮಿಯನ್ನು ರಕ್ತಸಿಕ್ತವನ್ನಾಗಿ ಮಾಡಿದನು.

ಹತಭೂಯಿಷ್ಠಯೋಧಂ ತತ್ ಕೃತ್ವಾ ತವ ಬಲಂ ಬಲೀ ।
ಆಸಸಾದ ದುರಾಧರ್ಷಃ ಸೈಂಧವಂ ಸತ್ಯವಿಕ್ರಮಃ ॥ ೩೮ ॥

ಬಲಿಷ್ಠನಾದ ಅರ್ಜುನನು ಕೌರವ ಸೈನ್ಯದಲ್ಲಿ ಯೋಧರನ್ನು ಬಹಳವಾಗಿ ಕೊಂದು, ಸತ್ಯಪರಾಕ್ರಮನೂ ಮತ್ತು ದುರಾಧರ್ಷನೂ ಆದ ಅವನು ಸೈಂಧವನನ್ನು ಸಮೀಪಿಸಿದನು.

ಬೀಭತ್ಸುರ್ಭೀಮಸೇನೇನ ಸಾತ್ವತೇನ ಚ ರಕ್ಷಿತಃ ।
ಸ ಬಭೌ ಭರತಶ್ರೇಷ್ಠ ಜ್ವಲನ್ನಿವ ಹುತಾಶನಃ ॥ ೩೯ ॥

ಭೀಮಸೇನನಿಂದಲೂ ಮತ್ತು ಸಾತ್ಯಕಿಯಿಂದಲೂ ರಕ್ಷಿಸಲ್ಪಟ್ಟ ಅರ್ಜುನನು ಎಲೈ ಭರತಶ್ರೇಷ್ಠನೇ, ಜ್ವಲಿಸುವ ಅಗ್ನಿಯಂತೆ ಶೋಭಿಸಿದನು.

ತಂ ತಥಾವಸ್ಥಿತಂ ದೃಷ್ಟ್ವಾ ತ್ವದೀಯಾ ವೀರ್ಯಸಮ್ಮತಾಃ ।
ನಾಮೃಷ್ಯಂತ ಮಹೇಷ್ವಾಸಾಃ ಫಲ್ಗುನಂ ಪುರುಷರ್ಷಭಾಃ ॥ ೪೦ ॥

ಅರ್ಜುನನು ಆ ರೀತಿ ಇರುವುದನ್ನು ನೋಡಿ ಧನುರ್ಧಾರಿಗಳೂ ತಮ್ಮ ಪರಾಕ್ರಮದಿಂದ ಪ್ರಖ್ಯಾತರೂ ಆದ ನಿನ್ನ ಪುರುಷಶ್ರೇಷ್ಠರು ಸಹಿಸಲಿಲ್ಲ.

ದುರ್ಯೋಧನಶ್ಚ ಕರ್ಣಶ್ಚ ವೃಷಸೇನೋಽಥ ಮದ್ರರಾಟ್ ।
ಅಶ್ವತ್ಥಾಮಾ ಕೃಪಶ್ಚೈವ ಸ್ವಯಮೇವ ಚ ಸೈಂಧವಃ ॥ ೪೧ ॥

ಸಂರಬ್ಧಾ ಸೈಂಧವಸ್ಯಾರ್ಥೇ ಸಮಾವೃಣ್ವನ್ ಕಿರೀಟಿನಮ್ ।
ನೃತ್ಯಂತಂ ರಥಮಾರ್ಗೇಷು ಧನುರ್ಜ್ಯಾತಳನಿಸ್ವನೈಃ ॥ ೪೨ ॥

ದುರ್ಯೋಧನ, ಕರ್ಣ, ವೃಷಸೇನ, ಮದ್ರರಾಜನಾದ ಶಲ್ಯ, ಅಶ್ವತ್ಥಾಮರು, ಕೃಪರು ಮತ್ತು ಸ್ವತಃ ಸೈಂಧವ ಇವರು ಕೋಪಗೊಂಡು ಸೈಂಧವನ ಸಲುವಾಗಿ ರಥ ಮಾರ್ಗಗಳಲ್ಲಿ ಧನುಸ್ಸಿನ ಘೋಷಗಳಿಂದಲೂ, ಹೆದೆಯ ಘೋಷಗಳಿಂದಲೂ ನರ್ತನವನ್ನು ಮಾಡುವಂತಿದ್ದ ಅರ್ಜುನನನ್ನು ಸುತ್ತುವರಿದರು.

ಸಂಗ್ರಾಮಕೋವಿದಂ ಪಾರ್ಥಂ ಸರ್ವೇ ಯುದ್ಧವಿಶಾರದಾಃ ।
ಅಭೀತಾಃ ಪರ್ಯವರ್ತಂತ ವ್ಯಾದಿತಾಸ್ಯಮಿವಾಂತಕಮ್ ॥ ೪೩ ॥

ಯುದ್ಧವಿಶಾರದರಾದ ಆ ನಿನ್ನವರೆಲ್ಲರೂ ಬಾಯ್ತೆರೆದ ಮೃತ್ಯುವಿನಂತಿದ್ದ ರಣಕೋವಿದನಾದ ಅರ್ಜುನನನ್ನು ನಿರ್ಭಯವಾಗಿ ಸುತ್ತುವರಿದರು.

ಸೈಂಧವಂ ಪೃಷ್ಠತಃ ಕೃತ್ವಾ ಜಘಾಂಸಂತೋಽರ್ಜುನಾಚ್ಯುತೌ ।
ಸೂರ್ಯಾಸ್ತಮಯಮಿಚ್ಛಂತೋ ಲೋಹಿತಾಯತಿ ಭಾಸ್ಕರೇ ॥ ೪೪ ॥

ತೇ ಭುಜ್ಯೇರ್ಭೋಗಿಭೋಗಾಭೈರ್ಧನೂಂಷ್ಯಾಯಮ್ಯ ಸಾಯಕಾನ್ ।
ಮುಮುಚುಃ ಸೂರ್ಯರಶ್ಮ್ಯಾಭಾನ್ ಶತಶಃ ಫಲ್ಗುನಂ ಪ್ರತಿ ॥ ೪೫ ॥

ಸೈಂಧವನನ್ನು ಹಿಂದಿಟ್ಟುಕೊಂಡು ಕೃಷ್ಣಾರ್ಜುನರನ್ನು ಕೊಲ್ಲಲು ಬಯಸಿ ಸೂರ್ಯನು ಕೆಂಪು ಬಣ್ಣಕ್ಕೆ ತಿರುಗುತ್ತಿರಲು ಸೂರ್ಯಾಸ್ತವನ್ನು ಬಯಸುತ್ತಾ ಸರ್ಪ ಶರೀರಗಳಂತಿದ್ದ ತಮ್ಮ ಭುಜಗಳಿಂದ ಧನುಸ್ಸುಗಳನ್ನು ಎಳೆದು ಸೂರ್ಯಕಿರಣಗಳಂತಿದ್ದ ಬಾಣಗಳನ್ನು ಅರ್ಜುನನ ಮೇಲೆ ನೂರಾರು ಸಂಖ್ಯೆಯಲ್ಲಿ ಪ್ರಯೋಗಿಸಿದರು.

ತಾನಸ್ತಾನಸ್ಯಮಾನಾಂಶ್ಚ ಕಿರೀಟೀ ಯುದ್ಧದುರ್ಮದಃ ।
ದ್ವಿಧಾ ತ್ರಿಧಾಷ್ಟಧೈಕೈಕಂ ಛಿತ್ತ್ವಾ ವಿವ್ಯಾಧ ತಾನ್ ರಣೇ ॥ ೪೬ ॥

ಯುದ್ಧದುರ್ಮದನಾದ ಅರ್ಜುನನು ಅವರು ಪ್ರಯೋಗಿಸಿದ ಮತ್ತು ಪ್ರಯೋಗಿಸುತ್ತಿದ್ದ ಆ ಬಾಣಗಳನ್ನು ರಣರಂಗದಲ್ಲಿ ಒಂದೊಂದನ್ನೂ ಎರಡು ಭಾಗವಾಗಿ, ಮೂರು ಭಾಗವಾಗಿ, ಎಂಟು ಭಾಗವಾಗಿ ಕತ್ತರಿಸಿ ಅವರ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

ಸಿಂಹಲಾಂಗೂಲಕೇತುಸ್ತು ದರ್ಶಯನ್ ಶಕ್ತಿಮಾತ್ಮನಃ ।
ಶಾರದ್ವತೀಸುತೋ ರಾಜನ್ನರ್ಜುನಂ ಪ್ರತ್ಯವಾರಯತ್ ॥ ೪೭ ॥

ಎಲೈ ರಾಜನೇ, ಶಾರದ್ವತೀ ಸುತರಾದ, ಸಿಂಹಲಾಂಗೂಲ (ಬಾಲ) ಧ್ವಜವುಳ್ಳ ಕೃಪಾಚಾರ್ಯರು ತಮ್ಮ ಶಕ್ತಿಯನ್ನು ತೋರಿಸುತ್ತಾ ಅರ್ಜುನನನ್ನು ತಡೆದರು.

ಸ ವಿದ್ಧ್ವಾ ದಶಭಿಃ ಪಾರ್ಥಂ ವಾಸುದೇವಂ ಚ ಸಪ್ತಭಿಃ ।
ಅತಿಷ್ಠದ್ ರಥಮಾರ್ಗೇಷು ಸೈಂಧವಂ ಪರಿಪಾಲಯನ್ ॥ ೪೮ ॥

ಅವರು ಅರ್ಜುನನನ್ನು ಹತ್ತು ಬಾಣಗಳಿಂದಲೂ, ಕೃಷ್ಣನನ್ನು ಏಳು ಬಾಣಗಳಿಂದಲೂ ಹೊಡೆದು, ಸೈಂಧವನನ್ನು ರಕ್ಷಿಸುತ್ತಾ ಅರ್ಜುನನ ರಥಮಾರ್ಗದಲ್ಲಿ ಅಡ್ಡವಾಗಿ ನಿಂತರು.

ಅಥೈನಂ ಕೌರವಶ್ರೇಷ್ಠಾಃ ಸರ್ವ ಏವ ಮಹಾರಥಾಃ ।
ಮಹತಾ ರಥವಂಶೇನ ಸರ್ವತಃ ಪರ್ಯವಾರಯನ್ ॥ ೪೯ ॥

ಆಗ ಮಹಾರಥರಾದ ಎಲ್ಲ ಕೌರವಶ್ರೇಷ್ಠರೂ ದೊಡ್ಡ ರಥಸಮೂಹದಿಂದ ಎಲ್ಲ ಕಡೆಗಳಿಂದಲೂ ಅವನನ್ನು ಸುತ್ತುವರಿದರು.

ವಿಸ್ಫಾರಯಂತಶ್ಚಾಪಾನಿ ವಿಸೃಜಂತಶ್ಚ ಸಾಯಕಾನ್ ।
ಸೈಂಧವಂ ಪರ್ಯರಕ್ಷಂತ ಶಾಸನಾತ್ ತನಯಸ್ಯ ತೇ ॥ ೫೦ ॥

ಅವರು ನಿನ್ನ ಪುತ್ರನ ಶಾಸನದಂತೆ ತಮ್ಮ ಧನುಸ್ಸನ್ನು ಎಳೆಯುತ್ತಾ, ಬಾಣಗಳನ್ನು ಪ್ರಯೋಗಿಸುತ್ತಾ ಸೈಂಧವನನ್ನು ರಕ್ಷಿಸಿದರು.

ತತ್ರ ಪಾರ್ಥಸ್ಯ ಶೂರಸ್ಯ ಬಾಹ್ವೋರ್ಬಲಮದೃಶ್ಯತ ।
ಇಷೂಣಾಮಕ್ಷಯತ್ವಂ ಚ ಧನುಷೋ ಗಾಂಡೀವಸ್ಯ ಚ ॥ ೫೧ ॥

ಆಗ ರಣರಂಗದಲ್ಲಿ ಶೂರನಾದ ಅರ್ಜುನನ ಬಾಹುಬಲವೂ, ಗಾಂಡೀವ ಧನುಸ್ಸಿನ ಬಲವೂ ಮತ್ತು ಬಾಣಗಳ ಅಕ್ಷಯತ್ವವೂ ಕಂಡುಬಂದಿತು.

ಅಸ್ತ್ರೈರಸ್ತ್ರಾಣಿ ಸಂವಾರ್ಯ ದ್ರೌಣೇಃ ಶಾರದ್ವತಸ್ಯ ಚ ।
ಏಕೈಕಂ ನವಭಿರ್ಬಾಣೈಃ ಸರ್ವಾನೇವ ಸಮರ್ಪಯತ್ ॥ ೫೨ ॥

ಅರ್ಜುನನು ಅಶ್ವತ್ಥಾಮರ ಮತ್ತು ಕೃಪರ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ನಿವಾರಿಸಿ ಅವರಲ್ಲಿ ಒಬ್ಬೊಬ್ಬರನ್ನೂ ಒಂಬತ್ತು ಬಾಣಗಳಿಂದ ಹೊಡೆದನು.

ತಂ ದ್ರೌಣಿಃ ಪಂಚವಿಂಶತ್ಯಾ ವೃಷಸೇನಶ್ಚ ಸಪ್ತಭಿಃ ।
ದುರ್ಯೋಧನಶ್ಚ ವಿಂಶತ್ಯಾ ಕರ್ಣಶಲ್ಯೌ ತ್ರಿಭಿಸ್ತ್ರಿಭಿಃ ॥ ೫೩ ॥

ತ ಏನಮಭಿಗರ್ಜಂತೋ ವಿದ್ಧ್ಯಂತಶ್ಚ ಪುನಃ ಪುನಃ ।
ವಿಧುನ್ವಂತಶ್ಚ ಚಾಪಾನಿ ಸರ್ವತಃ ಪರ್ಯವಾರಯನ್ ॥ ೫೪ ॥

ಅವನನ್ನು ಅಶ್ವತ್ಥಾಮರು ಇಪ್ಪತ್ತೈದು ಬಾಣಗಳಿಂದಲೂ, ವೃಷಸೇನನು ಏಳು ಬಾಣಗಳಿಂದಲೂ, ದುರ್ಯೋಧನನು ಇಪ್ಪತ್ತು ಬಾಣಗಳಿಂದಲೂ, ಕರ್ಣ-ಶಲ್ಯರು ಮೂರು-ಮೂರು ಬಾಣಗಳಿಂದಲೂ ಹೊಡೆದರು. ಅವರು ಪುನಃ ಪುನಃ ಬಾಣಗಳನ್ನು ಪ್ರಯೋಗಿಸುತ್ತಾ, ಅರ್ಜುನನ ಮೇಲೆ ಗರ್ಜನೆಯನ್ನು ಮಾಡುತ್ತಾ, ತಮ್ಮ ಧನುಸ್ಸುಗಳನ್ನು [illegible]ಸುತ್ತಾ ಎಲ್ಲಕಡೆಗಳಿಂದಲೂ ಅರ್ಜುನನನ್ನು ಸುತ್ತುವರಿದರು.

[illegible]
[illegible]ಮಯಮಿಚ್ಛಂತಸ್ತ್ವರಮಾಣಾ ಮಹಾರಥಾಃ ॥ ೫೫ ॥

ಸೂರ್ಯಾಸ್ತಮಯವನ್ನು ಬಯಸಿದ ಆ ಮಹಾರಥರು ತ್ವರೆಯಿಂದ ಅರ್ಜುನನ ರಥದ ಸುತ್ತಲೂ ತಮ್ಮ ರಥಸಮೂಹವು ದೃಢವಾಗಿ ನಿಲ್ಲುವಂತೆ ಮಾಡಿದರು.

ತ ಏನಮಭಿನರ್ದಂತೋ ವಿಧುನ್ವಾನಾ ಧನೂಂಷಿ ಚ ।
ಸಿಷಿಚುರ್ಮಾರ್ಗಣೈಘೋರೈರ್ಗಿರಿಂ ಮೇಘಾ ಇವಾಂಬುಭಿಃ ॥ ೫೬ ॥

ಅವರು ಅರ್ಜುನನನ್ನು ನೋಡಿ ಗರ್ಜಿಸುತ್ತಾ, ತಮ್ಮ ಧನುಸ್ಸುಗಳನ್ನು ಎಳೆಯುತ್ತಾ ಮೋಡವು ನೀರಿನಿಂದ ಪರ್ವತವನ್ನು ಅಭಿಷೇಕ ಮಾಡಿದಂತೆ ಘೋರವಾದ ಬಾಣಗಳಿಂದ ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತೇ ಮಹಾಸ್ತ್ರೈ ದಿವ್ಯಾನಿ ತತ್ರ ರಾಜನ್ ವ್ಯದರ್ಶಯನ್ ।
ಧನಂಜಯಸ್ಯ ಗಾತ್ರೇಷು ಶೂರಾಃ ಪರಿಘಬಾಹವಃ ॥ ೫೭ ॥

ಎಲೈ ರಾಜನೇ, ಶೂರರೂ, ಒನಕೆಯಂತಹ ಬಾಹುಗಳನ್ನುಳ್ಳವರೂ ಆದ ಅವರು ಅರ್ಜುನನ ಶರೀರದ ಮೇಲೆ ತಮ್ಮ ಮಹಾಸ್ತ್ರಗಳನ್ನು ಪ್ರದರ್ಶಿಸಿದರು.

ಹತಭೂಯಿಷ್ಠಯೋಧಂ ತತ್ ಕೃತ್ವಾ ತವ ಬಲಂ ಬಲೀ ।
ಆಸಸಾದ ದುರಾಧರ್ಷಃ ಸೈಂಧವಂ ಸತ್ಯವಿಕ್ರಮಃ ॥ ೫೮ ॥

ಬಲಿಷ್ಠನಾದ ಅರ್ಜುನನು ಆ ನಿನ್ನ ಸೈನ್ಯದಲ್ಲಿ ಬಹಳ ಯೋಧರನ್ನು ಕೊಂದು ದುರಾಧರ್ಷನೂ, ಸತ್ಯವಿಕ್ರಮನೂ ಆದ ಅವನು ಸೈಂಧವನನ್ನು ಸಮೀಪಿಸಿದನು.

ತಂ ಕರ್ಣಃ ಸಂಯುಗೇ ರಾಜನ್ ಪ್ರತ್ಯವಾರಯದಾಶುಗೈಃ ।
ಮಿಷತೋ ಭೀಮಸೇನಸ್ಯ ಸಾತ್ವತಸ್ಯ ಚ ಭಾರತ ॥ ೫೯ ॥

ಎಲೈ ಭಾರತನೇ, ಕರ್ಣನು ಭೀಮಸೇನನೂ ಮತ್ತು ಸಾತ್ಯಕಿಯೂ ನೋಡುತ್ತಿರುವಂತೆಯೇ ರಣರಂಗದಲ್ಲಿ ಶೀಘ್ರಗಾಮಿಗಳಾದ ಬಾಣಗಳಿಂದ ಅವನನ್ನು ತಡೆದನು.

ತಂ ಪಾರ್ಥೋ ದಶಭಿರ್ಬಾಣೈಃ ಪ್ರತ್ಯವಿಧ್ಯದ್ ರಣಾಜಿರೇ ।
ಸೂತಪುತ್ರಂ ಮಹಾಬಾಹುಃ ಸರ್ವಸೈನ್ಯಸ್ಯ ಪಶ್ಯತಃ ॥ ೬೦ ॥

ಮಹಾಬಾಹುವಾದ ಅರ್ಜುನನು ಎಲ್ಲಸೈನ್ಯಗಳು ನೋಡುತ್ತಿರುವಂತೆಯೇ ಹತ್ತು ಬಾಣಗಳಿಂದ ಸೂತಪುತ್ರನಾದ ಕರ್ಣನನ್ನು ರಣರಂಗದಲ್ಲಿ ಹೊಡೆದನು.

ಸಾತ್ವತಶ್ಚ ತ್ರಿಭಿರ್ಬಾಣೈಃ ಕರ್ಣಂ ವಿವ್ಯಾಧ ಮಾರಿಷ ।
ಭೀಮಸೇನಸ್ತ್ರಿಭಿಶ್ಚೈವ ಪುನಃ ಪಾರ್ಥಶ್ಚ ಸಪ್ತಭಿಃ ॥ ೬೧ ॥

ಎಲೈ ಪೂಜ್ಯನೇ, ಸಾತ್ಯಕಿಯು ಕರ್ಣನನ್ನು ಮೂರು ಬಾಣಗಳಿಂದ ಹೊಡೆದನು. ಭೀಮಸೇನನು ಮೂರು ಬಾಣಗಳಿಂದಲೂ ಮತ್ತು ಅರ್ಜುನನು ಪುನಃ ಏಳು ಬಾಣಗಳಿಂದಲೂ ಹೊಡೆದರು.

ತಾನ್ ಕರ್ಣಃ ಪ್ರತಿವಿವ್ಯಾಧ ಷಷ್ಟ್ಯಾ ಷಷ್ಟ್ಯಾ ಮಹಾರಥಃ ।
ತದ್ ಯುದ್ಧಮಭವದ್ ರಾಜನ್ ಕರ್ಣಸ್ಯ ಬಹುಭಿಃ ಸಹ ॥ ೬೨ ॥

ಮಹಾರಥನಾದ ಕರ್ಣನು ಅವರನ್ನು ಅರವತ್ತು ಬಾಣಗಳಿಂದ ಪ್ರತಿಯಾಗಿ ಹೊಡೆದನು. ರಾಜನೇ, ಕರ್ಣನಿಗೆ ಅನೇಕರ ಜೊತೆಯಲ್ಲಿ ಯುದ್ಧವು ನಡೆಯಿತು.

ತತ್ರಾದ್ಭುತಮಪಶ್ಯಾಮ ಸೂತಪುತ್ರಸ್ಯ ಮಾರಿಷ ।
ಯದೇಕಃ ಸಮರೇ ಕ್ರುದ್ಧಸ್ತ್ರೀನ್ ರಥಾನ್ಪರ್ಯವಾರಯತ್ ॥ ೬೩ ॥

ಎಲೈ ಪೂಜ್ಯನೇ, ಕ್ರುದ್ಧನಾದ ಕರ್ಣನೊಬ್ಬನೇ ರಣರಂಗದಲ್ಲಿ ಮೂರು ಮಹಾರಥರನ್ನು ಎದುರಿಸಿದ ಅದ್ಭುತವನ್ನು ನಾವು ಅಲ್ಲಿನೋಡಿದೆವು.

ಫಲ್ಗುನಸ್ತು ಮಹಾಬಾಹುಃ ಕರ್ಣಂ ವೈಕರ್ತನಂ ರಣೇ ।
ಸಾಯಕಾನಾಂ ಶತೇನೈವ ಸರ್ವಮರ್ಮಸ್ವತಾಡಯತ್ ॥ ೬೪ ॥

ಮಹಾಬಾಹುವಾದ ಅರ್ಜುನನಾದರೋ ರಣರಂಗದಲ್ಲಿ ವೈಕರ್ತನನಾದ ಕರ್ಣನನ್ನು ನೂರು ಬಾಣಗಳಿಂದ ಎಲ್ಲಮರ್ಮಗಳಲ್ಲಿಯೂ ಹೊಡೆದನು.

ರುಧಿರೋಕ್ಷಿತಸರ್ವಾಂಗಃ ಸೂತಪುತ್ರಃ ಪ್ರತಾಪವಾನ್ ।
ಶರೈಃ ಪಂಚಾಶತಾ ವೀರಃ ಫಲ್ಗುನಂ ಪ್ರತ್ಯವಿಧ್ಯತ ।
ತಸ್ಯ ತಲ್ಲಾಘವಂ ದೃಷ್ಟ್ವಾ ನಾಮೃಷ್ಯತ ರಣೇऽರ್ಜುನಃ ॥ ೬೫ ॥

ಸರ್ವಾಂಗಗಳಿಂದ ರಕ್ತವು ಸೋರುತ್ತಿದ್ದ ಪ್ರತಾಪಶಾಲಿಯೂ ಮತ್ತು ವೀರನೂ ಆದ ಕರ್ಣನು ಐವತ್ತು ಬಾಣಗಳಿಂದ ಅರ್ಜುನನನ್ನು ಹೊಡೆದನು. ಕರ್ಣನ ಕ್ಷಿಪ್ರತೆಯನ್ನು ನೋಡಿ ಅರ್ಜುನನು ಸಹಿಸಲಿಲ್ಲ.

ತತಃ ಪಾರ್ಥೋ ಧನುಶ್ಛಿತ್ತ್ವಾ ವಿವ್ಯಾಧೈನಂ ಸ್ತನಾಂತರೇ ।
ಸಾಯಕೈರ್ನವಭಿರ್ವೀರಸ್ತ್ವರಮಾಣೋ ಧನಂಜಯಃ ॥ ೬೬ ॥

ಆಗ ವೀರನೂ, ತ್ವರೆಯಿಂದ ಕೂಡಿದವನೂ ಆದ ಅರ್ಜುನನು ಕರ್ಣನ ಧನುಸ್ಸನ್ನು ಕತ್ತರಿಸಿ, ಒಂಬತ್ತು ಬಾಣಗಳಿಂದ ಅವನನ್ನು ಹೊಡೆದನು.

ವಧಾರ್ಥಂ ಚಾಸ್ಯ ಸಮರೇ ಸಾಯಕಂ ಸೂರ್ಯವರ್ಚಸಮ್ ।
ಚಿಕ್ಷೇಪ ತ್ವರಯಾ ಯುಕ್ತಸ್ತ್ವರಾಕಾಲೇ ಧನಂಜಯಃ ॥ ೬೭ ॥

ಧನಂಜಯನು ತ್ವರೆಯನ್ನು ಮಾಡಬೇಕಾದ ಕಾಲದಲ್ಲಿ ತ್ವರೆಯಿಂದ ಕೂಡಿದವನಾಗಿ ಸೂರ್ಯನಂತೆ ಪ್ರಕಾಶಮಾನವಾದ ಒಂದು ಬಾಣವನ್ನು ಕರ್ಣನ ವಧೆಯನ್ನು ಉದ್ದೇಶಿಸಿ ಅವನ ಮೇಲೆ ಪ್ರಯೋಗಿಸಿದನು.

ತಮಾಪತಂತಂ ವೇಗೇನ ದ್ರೌಣಿಶ್ಚಿಚ್ಛೇದ ಸಾಯಕಮ್ ।
ಅರ್ಧಚಂದ್ರೇಣ ತೀಕ್ಷ್ಣೇನ ಸ ಛಿನ್ನಃ ಪ್ರಾಪತದ್ ಭುವಿ ॥ ೬೮ ॥

ಕರ್ಣನ ಕಡೆಗೆ ವೇಗವಾಗಿ ಹೋಗುತ್ತಿದ್ದ ಆ ಬಾಣವನ್ನು ಅಶ್ವತ್ಥಾಮರು ತೀಕ್ಷ್ಣವಾದ ಅರ್ಧಚಂದ್ರದಿಂದ ಕತ್ತರಿಸಿದರು. ಆ ಬಾಣವು ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದಿತು.

ಅಥಾನ್ಯದ್ ಧನುರಾದಾಯ ಸೂತಪುತ್ರಃ ಪ್ರತಾಪವಾನ್ ।
ಸಾಯಕೈರ್ಬಹುಸಾಹಸ್ರೈಶ್ಚಾದಯಾಮಾಸ ಪಾಂಡವಮ್ ॥ ೭೦ ॥

ಆಗ ಪ್ರತಾಪಶಾಲಿಯಾದ ಸೂತಪುತ್ರನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಅನೇಕ ಸಹಸ್ರ ಬಾಣಗಳನ್ನು ಪ್ರಯೋಗಿಸಿ ಅರ್ಜುನನನ್ನು ಮುಚ್ಚಿದನು.

ತಾಂ ಶಸ್ತ್ರವೃಷ್ಟಿಮತುಲಾಂ ಕರ್ಣಚಾಪಸಮುತ್ಥಿತಾಮ್ ।
ವ್ಯಧಮತ್ ಸಾಯಕೈಃ ಪಾರ್ಥಃ ಶಲಭಾನಿವ ಮಾರುತಃ ॥ ೭೧ ॥

ಕರ್ಣನ ಧನುಸ್ಸಿನಿಂದ ಹೊರಹೊಮ್ಮಿದ ಅಸದೃಶವಾದ ಬಾಣದ ಮಳೆಯನ್ನು ಅರ್ಜುನನು ವಾಯುವು ಪತಂಗಗಳನ್ನು ಹಾರಿಸುವಂತೆ ತನ್ನ ಬಾಣಗಳಿಂದ ನಾಶಗೊಳಿಸಿದನು.

ಧಾದಯಾಮಾಸ ಚ ತದಾ ಸಾಯಕೈರರ್ಜುನೋ ರಣೇ ।
ಪಶ್ಯತಾಂ ಸರ್ವಯೋಧಾನಾಂ ದರ್ಶಯನ್ ಪಾಣಿಲಾಘವಮ್ ॥೭೩॥

ಆಗ ಅರ್ಜುನನು ತನ್ನ ಹಸ್ತಲಾಘವವನ್ನು ತೋರಿಸುತ್ತಾ, ಸರ್ವಯೋಧರು ನೋಡುತ್ತಿರುವಂತೆಯೇ ಕರ್ಣನನ್ನು ತನ್ನ ಬಾಣಗಳಿಂದ ಮುಚ್ಚಿದನು.

ಕರ್ಣೋ೯ಪಿ ದ್ವಿಷತಾಂ ಹಂತಾ ಧಾದಯಾಮಾಸ ಫಲ್ಗುನಮ್ ।
ಸಾಯಕೈರ್ಬಹುಸಾಹಸ್ರೈಃ ಕೃತಪ್ರತಿಕೃತೇಪ್ಸಯಾ ॥ ೭೪ ॥

ಶತ್ರುಸಂಹಾರಕನಾದ ಕರ್ಣನೂ ಸಹ ಅರ್ಜುನನು ಮಾಡಿದುದಕ್ಕೆ ಪ್ರತಿಯಾಗಿ ಮಾಡಲು ಬಯಸಿ ಅನೇಕ ಸಹಸ್ರಬಾಣಗಳಿಂದ ಅರ್ಜುನನನ್ನು ಮುಚ್ಚಿಹಾಕಿದನು.

ತೌ ವೃಷಾವಿವ ನರ್ದಂತೌ ನರಸಿಂಹೌ ಮಹಾರಥೌ ।
ಸಾಯಕೌಘಪ್ರತಿಚ್ಛನ್ನಂ ಚಕ್ರತುಃ ಖಮಜಿಹ್ಮಗೈಃ ।
ಅದೃಶ್ಯೌ ಚ ಶರೌಘೈಸ್ತೌ ನಿಘ್ನತಾಮಿತರೇತರಮ್ ॥ ೭೫ ॥

ವೃಷಭಗಳಂತೆ ಗರ್ಜಿಸುತ್ತಾ ಮಹಾರಥರೂ, ನರಸಿಂಹರೂ ಆದ ಅವರು ಆಂತರಿಕ್ಷವನ್ನು ನೇರವಾಗಿ ಸಾಗುವ ಬಾಣಗಳ ಸಮೂಹದಿಂದ ಮುಚ್ಚಿಹಾಕಿದರು ಮತ್ತು ಪರಸ್ಪರವಾಗಿ ಬಾಣಗಳನ್ನು ಪ್ರಯೋಗಿಸಿ ಅದೃಶ್ಯರನ್ನಾಗಿ ಮಾಡಿದರು.

ಪಾರ್ಥೋ೯ಹಮಸ್ಮಿ ತಿಷ್ಠ ತ್ವಂ ಕರ್ಣೋ೯ಹಂ ತಿಷ್ಠ ಫಲ್ಗುನ ।
ಇತ್ಯೇವಂ ತರ್ಜಯಂತೌ ತೌ ವಾಕ್ಶಲ್ಯೈಸ್ತುದತಾಂ ತಥಾ ॥ ೭೬ ॥

ನಾನು ಅರ್ಜುನ ನಿಲ್ಲು, ನಿಲ್ಲು. ನಾನು ಕರ್ಣ ಅರ್ಜುನನೇ ನಿಲ್ಲು, ನಿಲ್ಲು ಎಂದು ಹೆದರಿಸುತ್ತಾ ವಾಗ್ಬಾಣಗಳಿಂದ ಪರಸ್ಪರವಾಗಿ ಹಿಂಸಿಸಿದರು.

ಯುದ್ಧ್ಯೇತಾಂ ಸಮರೇ ವೀರೌ ಚಿತ್ರಂ ಲಘು ಚ ಸುಷ್ಠು ಚ ।
ಪ್ರೇಕ್ಷಣೀಯೌ ಚಾಭವತಾಂ ಸರ್ವಯೋಧಸಮಾಗಮೇ ॥ ೭೭ ॥

ವೀರರಾದ ಅವರಿಬ್ಬರೂ ರಣರಂಗದಲ್ಲಿ ವಿಚಿತ್ರವಾದ, ಕ್ಷಿಪ್ರವಾದ ಮತ್ತು ಚೆನ್ನಾದ ಯುದ್ಧವನ್ನು ಮಾಡಿ ಸರ್ವಯೋಧರ ಸಮೂಹದಲ್ಲಿ ಸುಂದರವಾಗಿ ಕಂಡರು.

ಪ್ರಶಸ್ಯಮಾನೌ ಸಮರೇ ಸಿದ್ಧಚಾರಣವಾತಿಕೈಃ ।
ಅಯುದ್ಧ್ಯೇತಾಂ ಮಹಾರಾಜ ಪರಸ್ಪರವಧೈಷಿಣೌ ॥ ೭೮ ॥

ಎಲೈ ಮಹಾರಾಜನೇ, ರಣರಂಗದಲ್ಲಿ ಪರಸ್ಪರ ವಧೆಯನ್ನು ಬಯಸಿರ ಅವರಿಬ್ಬರೂ ಆಕಾಶಗಾಮಿಗಳಾದ ಸಿದ್ಧ-ಚಾರಣರಿಂದ ಮತ್ತು ವಾಯುಗಾಮಿಗಳಿಂದ ಪ್ರಶಂಸಿಸಲ್ಪಟ್ಟು ಯುದ್ಧವನ್ನು ಮಾಡಿದರು.

ತತೋ ದುರ್ಯೋಧನೋ ರಾಜಂಸ್ತಾವಕಾನಭ್ಯಭಾಷತ ।
ಯತ್ತಾ ರಕ್ಷತ ರಾಧೇಯಂ ನಾಹತ್ವಾ ಸಮರೇऽರ್ಜುನಮ್ ।
ನಿವರ್ತಿಷ್ಯತಿ ರಾಧೇಯ ಇತಿ ಮಾಮುಕ್ತವಾನ್ ವೃಷಃ ॥ ೭೯ ॥

ಎಲೈ ರಾಜನೇ, ಆಗ ದುರ್ಯೋಧನನು ನಿನ್ನವರನ್ನು ಕುರಿತು ಕರ್ಣನನ್ನು ಎಚ್ಚರಿಕೆಯಿಂದ ರಕ್ಷಿಸಿ. ರಣರಂಗದಲ್ಲಿ ಅರ್ಜುನನನ್ನು ಕೊಲ್ಲದೆ ನಾನು ಹಿಂದಿರುಗುವುದಿಲ್ಲ ಎಂದು ಕರ್ಣನು ನನಗೆ ಹೇಳಿದ್ದಾನೆ ಎಂದು ಹೇಳಿದನು.

ಏತಸ್ಮಿನ್ನಂತರೇ ರಾಜನ್ ದೃಷ್ಟ್ವಾ ಕರ್ಣಸ್ಯ ವಿಕ್ರಮಮ್ ।
ಆಕರ್ಣಮುಕ್ಷೈರಿಷುಭಿಃ ಕರ್ಣಸ್ಯ ಚತುರೋ ಹಯಾನ್ ।
ಆನಯನ್ಮೃತ್ಯುಲೋಕಾಯ ಚತುರ್ಭಿಃ ಸಾಯಕೋತ್ತಮೈಃ ॥ ೮೦ ॥

ಎಲೈ ರಾಜನೇ, ಈ ಮಧ್ಯದಲ್ಲಿ ಕರ್ಣನ ಪರಾಕ್ರಮವನ್ನು ನೋಡಿ ಅರ್ಜುನನು ಹೆದೆಯನ್ನು ಕಿವಿಯವರೆಗೂ ಎಳೆದು ಪ್ರಯೋಗಿಸಿದ ನಾಲ್ಕು ಶ್ರೇಷ್ಠವಾದ ಬಾಣಗಳಿಂದ ಕರ್ಣನ ರಥದ ನಾಲ್ಕು ಅಶ್ವಗಳನ್ನು ಮೃತ್ಯುಲೋಕಕ್ಕೆ ಕಳುಹಿಸಿದನು.

ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾಹರತ್ ।
ಛಾದಯಾಮಾಸ ಚ ಶರೈಸ್ತವ ಪುತ್ರಸ್ಯ ಪಶ್ಯತಃ ॥ ೮೧ ॥

ಕರ್ಣನ ರಥದ ಸಾರಥಿಯನ್ನು ಒಂದು ಭಲ್ಲದಿಂದ ರಥನೀಡದಿಂದ ಕೆಡವಿ ನಿನ್ನ ಪುತ್ರನು ನೋಡುತ್ತಿರುವಂತೆಯೇ ಕರ್ಣನನ್ನು ಬಾಣಗಳಿಂದ ಮುಚ್ಚಿಹಾಕಿದನು.

ಸ ಧ್ಮಾಯಮಾನಃ ಸಮರೇ ಹತಾಶ್ವೋ ಹತಸಾರಥಿಃ ।
ಮೋಹಿತಃ ಶರಜಾಲೇನ ಕರ್ತವ್ಯಂ ನಾಭ್ಯಪದ್ಯತ ॥ ೮೨ ॥

ತನ್ನ ಅಶ್ವಗಳನ್ನೂ ಮತ್ತು ಸಾರಥಿಯನ್ನು ಕಳೆದುಕೊಂಡು ಬಾಣಗಳ ಸಮೂಹದಿಂದ ಮುಚ್ಚಲ್ಪಟ್ಟ ಕರ್ಣನು ಮೌಢ್ಯವನ್ನು ಹೊಂದಿ ರಣರಂಗದಲ್ಲಿ ಏನು ಮಾಡಬೇಕೆಂದು ತಿಳಿಯಲಿಲ್ಲ.

ತಂ ತಥಾ ವಿರಥಂ ದೃಷ್ಟ್ವಾ ರಥಮಾರೋಪ್ಯ ಸ್ವಂ ತದಾ ।
ಅಶ್ವತ್ಥಾಮಾ ಮಹಾರಾಜ ಭೂಯೋಽರ್ಜುನಮಯೋಧಯತ್ ॥೮೩॥

ಕರ್ಣನು ಹಾಗೆ ರಥಹೀನನಾಗಿರುವುದನ್ನು ನೋಡಿ ಎಲೈ ಮಹಾರಾಜನೇ, ಅಶ್ವತ್ಥಾಮರು ಅವನನ್ನು ತಮ್ಮ ರಥದಲ್ಲಿ ಏರಿಸಿಕೊಂಡು ಪುನಃ ಅರ್ಜುನನೊಡನೆ ಯುದ್ಧವನ್ನು ಮಾಡಿದರು.

ಮದ್ರರಾಜಸ್ತು ಕೌಂತೇಯಮವಿಧ್ಯತ್ ತ್ರಿಂಶತಾ ಶರೈಃ ।
ಶಾರದ್ವತಸ್ತು ವಿಂಶತ್ಯಾ ವಾಸುದೇವಂ ಸಮಾರ್ಪಯತ್ ।
ಧನಂಜಯಂ ದ್ವಾದಶಭಿರಾಜಘಾನ ಶಿಲೀಮುಖೈಃ ॥ ೮೪ ॥

ಮದ್ರರಾಜನಾದ ಶಲ್ಯನು ಅರ್ಜುನನನ್ನು ಮೂವತ್ತು ಬಾಣಗಳಿಂದ ಹೊಡೆದನು. ಕೃಪರು ಕೃಷ್ಣನನ್ನು ಇಪ್ಪತ್ತು ಬಾಣಗಳಿಂದ ಹೊಡೆದು ಅರ್ಜುನನನ್ನು ತೀಕ್ಷ್ಣವಾದ ಹನ್ನೆರಡು ಬಾಣಗಳಿಂದ ಹೊಡೆದರು.

ಚತುರ್ಭಿಃ ಸಿಂಧುರಾಜಶ್ಚ ವೃಷಸೇನಶ್ಚ ಸಪ್ತಭಿಃ ।
ಪೃಥಕ್ಪೃಥಕ್ ಮಹಾರಾಜ ಕೃಷ್ಣಾರ್ಜುನವಿಧ್ಯತಾಮ್ ॥ ೮೫ ॥

ಎಲೈ ಮಹಾರಾಜನೇ, ಸೈಂಧವನು ನಾಲ್ಕು ಬಾಣಗಳಿಂದಲೂ, ವೃಷಸೇನನು ಏಳು ಬಾಣಗಳಿಂದಲೂ ಕೃಷ್ಣಾರ್ಜುನರನ್ನು ಬೇರೆ ಬೇರೆಯಾಗಿ ಹೊಡೆದರು.

ತಥೈವ ತಾನ್ ಪ್ರತ್ಯವಿಧ್ಯತ್ ಕುಂತೀಪುತ್ರೋ ಧನಂಜಯಃ ।
ದ್ರೋಣಪುತ್ರಂ ಚತುಃಷಷ್ಟ್ಯಾ ಮದ್ರರಾಜಂ ಶತೇನ ಚ ॥ ೮೬ ॥

ಸೈಂಧವಂ ದಶಭಿರ್ಭಲ್ಲೈರ್ವೃಷಸೇನಂ ತ್ರಿಭಿಃ ಶರೈಃ ।
ಶಾರದ್ವತಂ ಚ ವಿಂಶತ್ಯಾ ವಿದ್ಧ್ವಾ ಪಾರ್ಥಃ ಸಮುನ್ನದತ್ ॥ ೮೭ ॥

ಕುಂತೀಪುತ್ರನಾದ ಅರ್ಜುನನೂ ಸಹ ಅವರನ್ನು ಹಾಗೆಯೇ ಹೊಡೆದನು. ದ್ರೋಣಪುತ್ರರಾದ ಅಶ್ವತ್ಥಾಮರನ್ನು ಅರವತ್ತಾಲ್ಕು ಬಾಣಗಳಿಂದಲೂ, ಮದ್ರರಾಜನಾದ ಶಲ್ಯನನ್ನು ನೂರು ಬಾಣಗಳಿಂದಲೂ, ಸೈಂಧವನನ್ನು ಹತ್ತು ಭಲ್ಲಗಳಿಂದಲೂ, ವೃಷಸೇನನನ್ನು ಮೂರು ಬಾಣಗಳಿಂದಲೂ, ಕೃಪರನ್ನು ಇಪ್ಪತ್ತು ಬಾಣಗಳಿಂದಲೂ ಹೊಡೆದು ಅರ್ಜುನನು ಸಿಂಹನಾದವನ್ನು ಮಾಡಿದನು.

ತೇ ಪ್ರತಿಜ್ಞಾಪ್ರತೀಘಾತಮಿಚ್ಛಂತಃ ಸವ್ಯಸಾಚಿನಃ ।
ಸಹಿತಾಸ್ತಾವಕಾಸ್ತೂರ್ಣಮಭಿಪೇತುರ್ಧನಂಜಯಮ್ ॥ ೮೮ ॥

ನಿನ್ನವರಾದ ಅವರು ಅರ್ಜುನನ ಪ್ರತಿಜ್ಞೆಯ ಭಂಗವನ್ನು ಆಶಿಸುತ್ತಾ ಎಲ್ಲರೂ ಒಟ್ಟಾಗಿ, ಶೀಘ್ರವಾಗಿ ಅರ್ಜುನನ ಮೇಲೆ ಎರಗಿದರು.

ಅಥಾರ್ಜುನಃ ಸರ್ವತೋ ವಾರುಣಾಸ್ತ್ರ
ಪ್ರಾದುಶ್ಚಕ್ರೇ ತ್ರಾಸಯನ್ ಧಾರ್ತರಾಷ್ಟ್ರಾನ್ ।
ತಂ ಪ್ರತ್ಯುದೀಯುಃ ಕುರವಃ ಪಾಂಡುಸೂನುಂ
ರಥೈರ್ಮಹಾರ್ಹೈಃ ಶರವರ್ಷಾಣ್ಯವರ್ಷನ್ ॥ ೮೯ ॥

ಆಗ ಅರ್ಜುನನು ಧೃತರಾಷ್ಟ್ರಪುತ್ರರನ್ನು ಹೆದರಿಸುವವನಾಗಿ ಎಲ್ಲಕಡೆಯಲ್ಲಿಯೂ ವಾರುಣಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದನು. ಕೌರವರು ಶ್ರೇಷ್ಠವಾದ ರಥಗಳಿಂದ ಅವನ ಕಡೆಗೆ ಸಾಗಿ ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತತಸ್ತು ತಸ್ಮಿಂಸ್ತುಮುಲೇ ಸಮುತ್ಥಿತೇ
ಸುದಾರುಣೇ ಭಾರತ ಮೋಹನೀಯೇ ।
ನಾಮುಹ್ಯತ ಪ್ರಾಪ್ಯ ಸ ರಾಜಪುತ್ರಃ
ಕಿರೀಟಮಾಲೀ ವಿಸೃಜನ್ ಪೃಷತ್ಕಾನ್ ॥ ೯೦ ॥

ಎಲೈ ಭಾರತನೇ, ಆಗ ಮೌಢ್ಯವನ್ನು ಉಂಟುಮಾಡುವ ಘೋರವೂ, ತೀವ್ರವೂ ಆದ ಯುದ್ಧವು ನಡೆಯುತ್ತಿರಲು ರಾಜಪುತ್ರನೂ, ಕಿರೀಟಮಾಲಿಯೂ ಆದ ಅರ್ಜುನನು ಬಾಣಗಳನ್ನು ಪ್ರಯೋಗಿಸುತ್ತಾ ಮೌಢ್ಯಕ್ಕೆ ಒಳಗಾಗಲಿಲ್ಲ.

ರಾಜ್ಯಪ್ರೇಪ್ಸುಃ ಸವ್ಯಸಾಚೀ ಕುರೂಣಾಂ
ಸ್ಮರನ್ ಕ್ಲೇಶಾನ್ ದ್ವಾದಶವರ್ಷವೃತ್ತಾನ್ ।
ಗಾಂಡೀವಮುಕ್ಷೈರಿಷುಭಿರ್ಮಹಾತ್ಮಾ
ಸರ್ವಾ ದಿಶೋ ವ್ಯಾವೃಣೋದಪ್ರಮೇಯೈಃ ॥ ೯೧ ॥

ಕುರುಗಳ ರಾಜ್ಯವನ್ನು ಪಡೆಯಲು ಇಚ್ಛಿಸಿದ ಮಹಾತ್ಮನಾದ ಸವ್ಯಸಾಚಿಯಾದ ಅರ್ಜುನನು ಹನ್ನೆರಡು ವರ್ಷಗಳ ಕಾಲ ಅನುಭವಿಸಿದ ಕ್ಲೇಶಗಳನ್ನು ಸ್ಮರಿಸುತ್ತಾ, ಗಾಂಡೀವ ಧನುಸ್ಸಿನಿಂದ ಹೊರಹೊಮ್ಮಿದ ಅಸಂಖ್ಯಾತ ಬಾಣಗಳಿಂದ ಎಲ್ಲ ದಿಕ್ಕುಗಳನ್ನೂ ಮುಚ್ಚಿದನು.

ಪ್ರದೀಪ್ತೋಲ್ಕಮಭವಚ್ಚಾಂತರಿಕ್ಷಂ
ದೇಹೇಷು ಭೂರೀಣ್ಯಪತನ್ ವಯಾಂಸಿ ।
ಯತ್ ಪಿಂಗಲಜ್ಯೇನ ಕಿರೀಟಮಾಲೀ
ಕ್ರುದ್ಧೋ ರಿಪೂನಾಜಗವೇನ ಹಂತಿ ॥ ೯೨ ॥

ಪಿಂಗಲವರ್ಣದ ಹೆದೆಯನ್ನು ಹೊಂದಿದ ತನ್ನ ಗಾಂಡೀವ ಧನುಸ್ಸಿನಿಂದ ಅರ್ಜುನನು ಕ್ರುದ್ಧನಾಗಿ ಶತ್ರುವನ್ನು ಹೊಡೆಯುವಾಗ ಆಕಾಶವು ಜ್ವಲಿಸುವ ಉಲ್ಕೆಗಳಿಂದ ತುಂಬಿದಂತೆ ಕಂಡುಬಂದಿತು. ಮೃತಶರೀರಗಳಲ್ಲಿ ಅನೇಕ ಮಾಂಸಾಹಾರಿ ಪಕ್ಷಿಗಳು ಎರಗಿದವು.

ಕಿರೀಟಮಾಲೀ ಮಹತಾ ಮಹಾಯಶಾಃ
ಶರಾಸನೇನಾಸ್ಯ ಶರಾನನೀಕಜಿತ್ ।
ಹಯಪ್ರವೇಕೋತ್ತಮನಾಗಧೂರ್ಗತಾನ್-
ಕುರುಪ್ರವೀರಾನಿಷುಭಿರ್ನ್ಯಪಾತಯತ್ ॥ ೯೩ ॥

ಮಹಾಕೀರ್ತಿವಂತನೂ, ಶತ್ರುಸೈನ್ಯವನ್ನು ಜಯಿಸುವವನೂ ಆದ ಕಿರೀಟ-ಮಾಲಿಯು ತನ್ನ ಶ್ರೇಷ್ಠವಾದ ಧನುಸ್ಸಿನಿಂದ ಬಾಣಗಳನ್ನು ಪ್ರಯೋಗಿಸಿ ರಣರಂಗದಲ್ಲಿ ನೆರೆದ ಶ್ರೇಷ್ಠವಾದ ಅಶ್ವಗಳನ್ನೂ, ಉತ್ತಮವಾದ ಗಜಗಳನ್ನೂ ಮತ್ತು ಕುರುವೀರರನ್ನೂ ಉರುಳಿಸಿದನು.

ಗದಾಶ್ಚ ಗುರ್ವೀಃ ಪರಿಘಾನಯಸ್ಮಯಾ-
ನಸೀಂಶ್ಚ ಶಕ್ತಿಶ್ಚ ರಣೇ ನರಾಧಿಪಾಃ ।
ಮಹಾಂತಿ ಶಸ್ತ್ರಾಣಿ ಚ ಭೀಮದರ್ಶನಾಃ
ಪ್ರಗೃಹ್ಯ ಪಾರ್ಥಂ ಸಹಸಾಭಿದುದ್ರುವುಃ ॥ ೯೪ ॥

ಭಯಂಕರ ಆಕಾರವುಳ್ಳ ರಾಜರು ದೊಡ್ಡ ಗದೆಗಳನ್ನೂ, ಕಬ್ಬಿಣದ ಒನಕೆಗಳನ್ನೂ, ಖಡ್ಗಗಳನ್ನೂ, ಶಕ್ತಿಗಳನ್ನೂ ಉತ್ತಮವಾದ ಶಸ್ತ್ರಗಳನ್ನೂ ಹಿಡಿದು ಅರ್ಜುನನ ಮೇಲೆ ಶೀಘ್ರವಾಗಿ ಎರಗಿದರು.

ಸ ತಾನುದೀರ್ಣಾನ್ ಸರಥಾಶ್ವವಾರಣಾನ್
ಪದಾತಿಸಂಘಾಂಶ್ಚ ಮಹಾಧನುರ್ಧರಃ ।
ವಿಪನ್ನಸರ್ವಾಯುಧಜೀವಿತಾನ್ ರಣೇ
ಚಕಾರ ವೀರೋ ಯಮರಾಷ್ಟ್ರವರ್ಧನಾನ್ ॥ ೯೫ ॥

ಮಹಾಧನುರ್ಧಾರಿಯಾದ ಆ ಅರ್ಜುನನು ರಥಾಶ್ವ-ಗಜಗಳ ಜೊತೆಯಲ್ಲಿತ್ತಮ್ಮ ಮೇಲೆ ಬರುತ್ತಿದ್ದ ಪದಾತಿ ಸಮೂಹಗಳನ್ನು ಸರ್ವಾಯುಧರಹಿತರನ್ನಾಗಿಯೂ, ಜೀವಿತ ರಹಿತರನ್ನಾಗಿಯೂ ಮಾಡಿ ಯಮರಾಷ್ಟ್ರವು ತುಂಬುವಂತೆ ಮಾಡಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಿಂಶದಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಚತುಃಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರಮೂವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೨೬ನೇ ಅಧ್ಯಾಯ

ದುರ್ಯೋಧನೋ ದ್ರೋಣಮಾಹ ಸೈಂಧವಸ್ತ್ವದುಪೇಕ್ಷಯಾ ।
ಪಾರ್ಥೇನ ನಿಹತೋ ಭೀಮಸಾತ್ಯಕಿಭ್ಯಾಂ ಚ ಮೇ ಬಲಮ್ ॥

ದುರ್ಯೋಧನ ದ್ರೋಣರಿಗೆ ಹೇಳಿದ 'ನಿಮ್ಮ ಉಪೇಕ್ಷೆಯಿಂದಾಗ ಜಯದ್ರಥ ಅರ್ಜುನನಿಂದ ಹತನಾದ. ಭೀಮ ಮತ್ತು ಸಾತ್ಯಕಿಯರಿಂದ ನನ್ನ ಸೈನ್ಯವು ಪುಡಿಯಾಯಿತು.

ಪ್ರತಿಜ್ಞಾ ಚ ಪರಿತ್ಯಕ್ತಾ ಪಾಂಡವಸ್ನೇಹತಸ್ತ್ವಯಾ ।
ಇತ್ಯುಕ್ತಃ ಕುಪಿತೋ ದ್ರೋಣಃ ಪ್ರತಿಜ್ಞಾಮಕರೋತ್ ತತಃ ॥

'ಪಾಂಡವರ ಮೇಲಿನ ಪ್ರೀತಿಯಿಂದ ನೀವು ನಿಮ್ಮ ಪ್ರತಿಜ್ಞೆಯನ್ನು ಕೈಬಿಟ್ಟಿರುವಿರಿ' ಹೀಗೆ ದುರ್ಯೋಧನನು ಹೇಳಿದಾಗ ದ್ರೋಣರು ಕುಪಿತರಾಗಿ ಪುನಃ ಪ್ರತಿಜ್ಞೆ ಮಾಡಿದರು.

ಇತಃ ಪರಂ ನೈವ ರಣಾದ್ ರಾತ್ರಾವಹನಿ ವಾ ಕ್ವಚಿತ್ ।
ಗಚ್ಛೇಯಂ ನ ಚ ಮೋಕ್ಷ್ಯಾಮಿ ವರ್ಮ ಬದ್ಧಂ ಕಥಂಚನ ॥

ಇನ್ನು ಮುಂದೆ ನಾನು ರಾತ್ರಿಯಲ್ಲಗಲಿ, ಹಗಲಲ್ಲಿಯಾಗಲಿ ಯುದ್ಧವನ್ನು ಬಿಟ್ಟು ಶಿಬಿರಕ್ಕೆ ಹಿಂತಿರುಗಲಾರೆ. ತೊಟ್ಟ ಕವಚವನ್ನು ಯಾವ ಕಾರಣಕ್ಕಾಗಿಯಾಗಲಿ ಬಿಚ್ಚಿಕೊಳ್ಳಲಾರೆ.

ಮತ್ಪುತ್ರಶ್ಚ ತ್ವಯಾ ವಾಚ್ಯಃ ಪಾಂಚಾಲಾನ್ ನೈವ ಶೇಷಯೇಃ ।
ಸದೌಹಿತ್ರಾನಿತೀತ್ಯುಕ್ತ್ವಾ ವಿಜಗಾಹೇ ನಿಶಾಗಮೇ ॥

ಚಮೂಂ ಪರೇಷಾಮಭ್ಯಾಗಾದ್ ಧೃಷ್ಟದ್ಯುಮ್ನಸ್ತಮಾಶು ಚ ।
ದ್ರೌಣಿದುರ್ಯೋಧನೌ ತತ್ರ ವಿರಥೀಕೃತ್ಯ ಮಾರುತಿಃ ।
ದ್ರಾವಯಾಮಾಸ ತತ್ ಸೈನ್ಯಂ ಪಶ್ಯತಾಂ ಸರ್ವಭೂಭೃತಾಮ್ ॥

ನನ್ನ ಮಗನಿಗೂ ನೀನು ಹೇಳು. ಪಾಂಚಾಲರನ್ನೂ ದ್ರೌಪದಿಯ ಮಕ್ಕಳನ್ನೂ ಯಾರನ್ನೂ ಉಳಿಸಬೇಡ ಎಂದು. ಹೀಗೆ ಹೇಳಿದ ರೋಣರು ರಾತ್ರಿಯಾದಾಗಲೂ

ಪಾಂಡವರ ಸೈನ್ಯವನ್ನು ಹೊಕ್ಕರು. ಅವರನ್ನು ಬೇಗನೆ ಧೃಷ್ಟದ್ಯುಮ್ನ ಎದುರಿಸಿದನು. ಅಶ್ವತ್ಥಾಮ-ದುರ್ಯೋಧನರನ್ನು ಭೀಮನು ವಿರಥರನ್ನಾಗಿ ಮಾಡಿ ಅವರ ಸೈನ್ಯವನ್ನು ಎಲ್ಲರಾಜರು ನೋಡುತ್ತಿದ್ದಂತೆಯೇ ಓಡಿಸಿದನು.

ಅಕ್ಷೋಹಿಣ್ಯಸ್ತು ಸಪ್ತೈವ ಸೇನಯೋರುಭಯೋರಪಿ ।
ಹತಾಸ್ತಾಸಾಂ ಚ ಭೀಮೇನ ತಿಸ್ರೋ ದ್ವೇ ಫಲ್ಗುನೇನ ಚ ॥

ಎರಡೂ ಸೈನ್ಯಗಳಲ್ಲಿ ಒಟ್ಟು ಏಳು ಅಕ್ಷೋಹಿಣಿ ಸೈನ್ಯಗಳು ಹತವಾದುವು. ಅವುಗಳಲ್ಲಿ ಭೀಮನಿಂದ ಮೂರು, ಅರ್ಜುನನಿಂದ ಎರಡು ಹತವಾದುವು.

ಸೌಭದ್ರಸಾತ್ಯಕಿಮುಖೈಸ್ತನ್ಧ್ಯೇ ಷೋಡಶಾಂಶಕಃ ।
ಹೈಡಿಂಬಪಾರ್ಷತಮುಖೈಸ್ತ್ವಯಾಚ್ಚ ದಶಮಾಂಶಕಃ ॥

ಅವುಗಳಲ್ಲಿ ಅರ್ಜುನನಿಂದ ಹತವಾದ ಸೈನ್ಯದಲ್ಲಿ ಹದಿನಾರನೆ ಒಂದಂಶದಷ್ಟು ಅಭಿಮನ್ಯು ಸಾತ್ಯಕಿ ಮುಂತಾದವರಿಂದ ಹತವಾಯಿತು. ಭೀಮನಿಂದ ಹತವಾದ ಮೂರು ಅಕ್ಷೋಹಿಣಿಯಲ್ಲಿ ಹತ್ತನೆ ಒಂದಂಶ ಘಟೋತ್ಕಚ ಧೃಷ್ಟದ್ಯುಮ್ನರಿಂದ ಹತವಾದವು.

ಭೀಷ್ಮದ್ರೋಣದ್ರೌಣಿಭಶ್ಚ ದ್ವೇ ಸಮಂ ನಿಹತೇ ತದಾ ।
ತದನ್ಯೈರ್ಮಿಲಿತೈಃ ಸರ್ವೈಸ್ತಚ್ಚತುರ್ಥಾಂಶ ಏವ ಚ ॥

ಭೀಷ್ಮ-ದ್ರೋಣ-ಅಶ್ವತ್ಥಾಮರಿಂದ ಒಟ್ಟು ಎರಡು ಅಕ್ಷೋಹಿಣಿ ಸೈನ್ಯಗಳು ಹತವಾದವು. ಅವರು ಪರಸ್ಪರ ಸಮಾನವಾಗಿಯೇ ಸೈನ್ಯಗಳನ್ನು ನಾಶಮಾಡಿದರು. ಉಳಿದವರೆಲ್ಲರೂ ಸೇರಿ ಅದರ ನಾಲ್ಕನೇ ಒಂದಂಶವನ್ನು ನಾಶಮಾಡಿದರು.

ತತೋ ರಾತ್ರೌ ಪಂಚಭಶ್ಚ ಪಾರ್ಥಾಃ ಷಡ್ಭಿಶ್ಚ ಕೌರವಾಃ ।
ಅಕ್ಷೋಹಿಣೀಭಿಃ ಸಂವ್ಯೂಹ್ಯ ಯುದ್ಧಂ ಚಕ್ರುಃ ಸುದಾರುಣಮ್ ॥

ಬಳಿಕ ರಾತ್ರಿಯಲ್ಲಿ ಪಾಂಡವರು ಐದು ಅಕ್ಷೋಹಿಣಿ ಸೈನ್ಯದಿಂದಲೂ ಕೌರವರು ಆರು ಅಕ್ಷೋಹಿಣಿ ಸೈನ್ಯದಿಂದಲೂ ವ್ಯೂಹರಚನೆ ಮಾಡಿ ಬಲು ಭಯಂಕರವಾದ ಯುದ್ಧವನ್ನು ನಡೆಸಿದರು.

ಭೀಮಂ ಸೇನಾಂ ದ್ರಾವಯಂತಂ ಪುನಃ ಕರ್ಣಃ ಸಮಾಸದತ್ ।
ಸ ಕರ್ಣಪುತ್ರೋ ಭೀಮೋ ದುಷ್ಕರ್ಣಂ ಕರ್ಣಮೇವ ಚ ॥

ದುರ್ಯೋಧನಸ್ಯಾವರಜೌ ನಿಷ್ಪಿಪೇಷ ಪದಾ ಕ್ಷಣಾತ್ ।
ರಥಾಶ್ವಧ್ವಜಸೂತೈಶ್ಚ ಸಹಿತೌ ನ ವ್ಯದೃಶ್ಯತಾಮ್ ॥

ಭೀಮನು ಸೈನ್ಯವನ್ನು ಓಡಿಸುತ್ತಿದ್ದಾಗ ಪುನಃ ಕರ್ಣನು ಬಂದನು. ಭೀಮನು ಕರ್ಣನ ಮುಂದೆಯೇ ದುರ್ಯೋಧನನ ತಮ್ಮಂದಿರಾದ ದುಷ್ಕರ್ಣ ಕರ್ಣರನ್ನು ಕಾಲಿಂದ ತುಳಿದು ಕ್ಷಣದಲ್ಲಿ ಪುಡಿಮಾದಿದನು. ಅವರಿಬ್ಬರೂ ರಥ, ಕುದುರೆ, ಧ್ವಜ ಸಾರಥಿಗಳಿಂದ ಸಮೇತರಾಗಿ ನಾಶಹೊಂದಿದರು.

ನಿರಾಯುಧೋಽಹಮಿತಿ ಮಾಂ ತ್ವಮಾತ್ಥ ಪರುಷಂ ವಚಃ ।
ನಿರಾಯುಧಃ ಪದೈವಾಹಂ ತ್ವಾಂ ಹಂತುಮಶಕಂ ತದಾ ॥

'ಕರ್ಣ! ನಿರಾಯುಧನೆಂದು ತಿಳಿದು ನನಗೆ ಅಂದು ನೀನು ನಿಷ್ಠುರವಾದ ಮಾತನ್ನಾಡಿರುವಿ. ಆದರೆ ನಿರಾಯುಧನಾದರೂ ನಾನು ನಿನ್ನನ್ನು ಆಗ ಕಾಲಿಂದ ತುಳಿದೇ ಕೊಲ್ಲಲು ಶಕ್ತನಾಗಿದ್ದೆ'.

ಇತಿ ಕರ್ಣಸ್ಯ ತೌ ಭೀಮಃ ಸಂಜ್ಞಯಾ ಜ್ಞಾಪಯನ್ ಭುವಿ ।
ಪದಾ ಪಿಪೇಷ ಕಾಳಿಂಗಂ ಮುಷ್ಣನ್ನೇವ ಜಘಾನ ಹ ॥

ಹೀಗೆ ಕರ್ಣನಿಗೆ ಸೂಚನೆ ನೀಡುವುದಕ್ಕಾಗಿ ಭೀಮ ದುಷ್ಕರ್ಣ ಕರ್ಣರನ್ನು ನೆಲದ ಮೇಲೆ ಕಾಲಿಂದ ತುಳಿದು ಪುಡಿಗೈದ. ಕಾಲಿಂಗನನ್ನು ಮುಷ್ಟಿಯಿಂದಲೇ ಹೊಡೆದು ಕೊಂದ.

ಮುಷ್ಟಿನಾ ತ್ವದ್ವಧಾಯಾಹಂ ಸಮರ್ಥ ಇತಿ ಕಿಂ ವದೇ ।
ತಸ್ಮಾನ್ನಯಾ ರಕ್ಷಿತಸ್ತ್ವಮಿತಿ ಜ್ಞಾಪಯಿತುಂ ಪ್ರಭುಃ ।
ಸಾಶ್ವಸೂತಧ್ವಜರಥಃ ಕಾಳಿಂಗೋ ಮುಷ್ಟಿಚೂರ್ಣಿತಃ ॥

'ಮುಷ್ಟಿಯಿಂದಲೂ ನಿನ್ನ ವಧೆ ಮಾಡಲು ನಾನು ಸಮರ್ಥನೆಂದು ಬೇರೇನು ಹೇಳಬೇಕು? ಆದರಿಂದ ಅಂದು ನಾನು ನಿನ್ನನ್ನು ಕೊಲ್ಲದೆ ಬಿಟ್ಟೆನಷ್ಟೆ' ಎಂದು ತಿಳಿಸಲು

ಸರ್ವಶಕ್ತನಾದ ಭೀಮ ಕುದುರೆ, ಸಾರಥಿ, ಧ್ವಜ, ರಥಗಳಿಂದ ಸಮೇತನಾದ ಕಾಲಿಂಗನನ್ನು ಮುಷ್ಟಿಯಿಂದ ಪುಡಿಮಾಡಿದನು.

ಕೇತುಮಾಂಶ್ಚ ಪಿತಾ ತಸ್ಯ ಶಕ್ರದೇವಃ ಶ್ರುತಾಯುಧಃ ।
ಅಕ್ಷೋಹಿಣ್ಯಾ ಸೇನಯಾ ಚ ಸಹ ಭೀಮೇನ ಪಾತಿತಾಃ ॥

ಖಡ್ಗಯುದ್ಧೇ ಪುರಾ ಭೀಷ್ಮೇ ಸೇನಾಪತ್ಯಂ ಪ್ರಕುರ್ವತಿ ।
ಕರ್ಣಾನುಜಾನ್ ಧ್ರುವಾದ್ಯಾಂಶ್ಚ ಬಹೂನ್ ಜಘ್ನೇ ಸ ವೈ ನಿಶಿ ।

ಹಿಂದೆ ಭೀಷ್ಮರು ಸೇನಾಪತ್ಯ ಮಾಡುತ್ತಿದ್ದಾಗ ಖಡ್ಗಯುದ್ಧದಲ್ಲಿ ಕಾಲಿಂಗನ ತಂದೆಯಾದ ಕೇತುಮಾನ್ ಶಕ್ರದೇವ ಶ್ರುತಾಯುಧ ಇವರನ್ನು ಅಕ್ಷೋಹಿಣೀ ಸೈನ್ಯದೊಂದಿಗೆ ಭೀಮನೇ ಸಂಹರಿಸಿದ್ದನು. ಈಗ ರಾತ್ರಿ ಯುದ್ಧದಲ್ಲಿ ಕಾಲಿಂಗನನ್ನೂ ಕೊಂದನು. ಬಳಿಕ ಕರ್ಣನ ತಮ್ಮಂದಿರಾದ ಧ್ರುವ ಮುಂತಾದ ಅನೇಕ ವೀರರನ್ನೂ ಸಂಹರಿಸಿದನು.

ಸಂಜ್ಞಾಂ ಭೀಮಕೃತಾಂ ಜ್ಞಾತ್ವಾ ಶಕ್ತಿಂ ಚಿಕ್ಷೇಪ ಚಾಪರಾಮ್ ।
ಕರ್ಣಃ ಶಕ್ತಿರ್ಮಯಾ ದಿವ್ಯಾ ನ ಮುಕ್ತಾ ತೇನ ಜೀವಸಿ ॥

ಇತಿ ಜ್ಞಾಪಯಿತುಂ ತಾಂ ತು ಜ್ಞಾತ್ವಾ ಭೀಮಃ ಕ್ಷಣಾತ್ ತದಾ ।
ಖಮುತ್ಪತ್ಯ ಗೃಹೀತ್ವಾ ಚ ಕರ್ಣೇ ಚಿಕ್ಷೇಪ ಸತ್ವರಃ ॥

ಭೀಮನು ನೀಡಿದ ಸೂಚನೆಯನ್ನು ಗ್ರಹಿಸಿ ಕರ್ಣ ಬೇರೆ ಸಾಮಾನ್ಯವಾದ ಒಂದು ಶಕ್ತ್ಯಾಯುಧವನ್ನು ಭೀಮನ ಮೇಲೆ ಎಸೆದ. 'ನಾನು ನಿನ್ನ ಮೇಲೆ ಇಂದ್ರನ ದಿವ್ಯ ಶಕ್ತ್ಯಾಯುಧವನ್ನು ಪ್ರಯೋಗಿಸಲಿಲ್ಲ. ಅದರಿಂದ ನೀನು ಬದುಕಿರುವಿ' ಎಂದು ಸೂಚಿಸುವ ಅಭಿಪ್ರಾಯ ಕರ್ಣನಿಗಿದ್ದಿತು. ಅದನ್ನು ತಿಳಿದು ಭೀಮ ಕ್ಷಣದಲ್ಲಿ ಆಕಾಶಕ್ಕೆ ನೆಗೆದು ಶಕ್ತ್ಯಾಯುಧವನ್ನು ಹಿಡಿದು ಕರ್ಣನ ಮೇಲೆಯೇ ಬೀಳಿಸಿದ.

ಯದಿ ತ್ವಯಾ ತದಾ ಮುಕ್ತಾ ಶಕ್ತಿಸ್ತ್ವಾಂ ಸಾ ಹನಿಷ್ಯತಿ ।
ಇತಿ ಜ್ಞಾಪಯಿತುಂ ಸಾ ಚ ಕರ್ಣರಕ್ಷಣಕಾಂಕ್ಷಿಣಾ ॥

ಮುಕ್ತಾ ದಕ್ಷಭುಜೇ ಸಾऽಥ ವಿದಾರ್ಯ ಧರಣೀಂ ತಥಾ ।
ಭಿತ್ತ್ವಾ ವಿವೇಶ ಕರ್ಣಸ್ಯ ದರ್ಶಯಂತೀ ನಿದರ್ಶನಮ್ ॥

'ನೀನು ಆಗ ದಿವ್ಯಶಕ್ತ್ಯಾಯುಧವನ್ನು ಪ್ರಯೋಗಿಸಿದ್ದರೂ ಅದು ನಿನ್ನನ್ನೇ ಕೊಲ್ಲುತ್ತಿತ್ತು' ಎಂದು ಸೂಚಿಸಲು ಭೀಮನು ಹಾಗೆ ಮಾಡಿದ. ಆಗ ಆ ಶಕ್ತ್ಯಾಯುಧವನ್ನು ಕರ್ಣನ ರಕ್ಷಣೆಯನ್ನು ಬಯಸಿದ್ದ ಭೀಮನು ಅವನ ಬಲಭುಜಕ್ಕೇ ಹಾಕಿದ್ದನು. ಆದು ಭುಜವನ್ನು ಸೀಳಿ ನೆಲವನ್ನೂ ಸೀಳಿ ಒಳಗೆ ಪ್ರವೇಶಿಸಿತು. ಕರ್ಣನಿಗೆ ನಿದರ್ಶನವನ್ನು ತೋರಿಸಿತು.

ತತೋ ಭೀಮಃ ಪುನಃ ಸ್ಥಂ ತು ರಥಮಾಸ್ಥಾಯ ಚಾಪಭೃತ್ ।
ಕರ್ಣಸ್ಯ ಪುರತಃ ಶತ್ರೂನ್ ದ್ರಾವಯಾಮಾಸ ಸರ್ವತಃ ॥

ಪುನಃ ಭೀಮನು ತನ್ನ ರಥವನ್ನೇರಿ ಬಿಲ್ಲನ್ನು ಹಿಡಿದು ಕರ್ಣನ ಕಣ್ಣಮುಂದೆಯೇ ಶತ್ರುಗಳನ್ನು ಎಲ್ಲೆಡೆ ಓಡಿಸಿದನು.

ತಂ ಕರ್ಣೋ ವಾರಯಾಮಾಸ ಶರೈಃ ಸನ್ನತಪರ್ವಭಿಃ ।
ಭೀಮಃ ಕರ್ಣರಥಾಯೈವ ಗದಾಂ ಚಿಕ್ಷೇಪ ವೇಗಿತಃ ॥

ಕರ್ಣ ಭೀಮನನ್ನು ಬಾಗಿದ ಗಂಟುಗಳುಳ್ಳ ಬಾಣಗಳಿಂದ ತಡೆದನು. ಭೀಮನು ಕರ್ಣನ ರಥಕ್ಕೇ ವೇಗವಾಗಿ ಗದೆ ಎಸೆದನು.

ಸ ತದ್ಗದಾವಿಘಾತಾಯ ಸ್ಥೂಣಾಕರ್ಣಾಸ್ತ್ರಮಾಸೃಜತ್ ।
ತೇನಾಸ್ತ್ರೇಣ ಪ್ರತಿಹತಾ ಸಾ ಗದಾ ಭೀಮಮಾವ್ರಜತ್ ॥

ಕರ್ಣ ಆ ಗದೆಯನ್ನು ತುಡರಿಸಲು ಸ್ಥೂಣಾಕರ್ಣವೆಂಬ ಬಾಣವನ್ನು ಪ್ರಯೋಗಿಸಿದನು. ಆ ಬಾಣದಿಂದ ತಡೆಯಲ್ಪಟ್ಟ ಭೀಮನ ಗದೆ ಭೀಮನ ಬಳಿಗೇ ಹಿಂತಿರುಗಿ ಬಂದಿತು.

ಭೀಮೋ ಗದಾಂ ಸಮಾದಾಯ ಕರ್ಣಸ್ಯ ರಥಮಾರುಹತ್ ।
ತಯಾ ಸಂಚೂರ್ಣಯಾಮಾಸ ಕರ್ಣಸ್ಯ ರಥಕೂಬರಮ್ ॥

ಭೀಮನ ಗದೆಯನ್ನು ಹಿಡಿದು ಕರ್ಣನ ರಥವನ್ನೇರಿದನು. ಗದೆಯಿಂದ ಕರ್ಣನ ರಥದ ನೊಗವನ್ನು ಪುಡಿ ಮಾಡಿದನು.

ಏವಂ ತ್ವಚ್ಚೂರ್ಣನೇ ಶಕ್ತೋ ಮತ್ಕಾಮಾತ್ ತ್ವಂ ಹಿ ಜೀವಸಿ ।
ಏವಂ ನಿದರ್ಶಯಿತ್ವೈವ ಪುನಃ ಸ್ಥಂ ರಥಮಾವ್ರಜತ್ ॥

ಹೀಗೆ ನಿನ್ನನ್ನೂ ಪುಡಿ ಮಾಡಬಲ್ಲೆ. ಆದರೆ ನನ್ನಿಚ್ಛೆಯಿಂದಲೇ ನೀನು ಬದುಕಿರುವಿ ಎಂಬುದಕ್ಕೆ ನಿದರ್ಶನವನ್ನು ತೋರಿಸಿ ಭೀಮನು ಪುನಃ ತನ್ನ ರಥಕ್ಕೆ ಬಂದನು.

ಪುನಃ ಕರ್ಣಪುರಃ ಸೇನಾಂ ಜಘಾನ ಬಹುಶೋ ರಣೇ ।
ಕರ್ಣಸ್ತು ತಂ ಪರಿತ್ಯಜ್ಯ ಸಹದೇವಮುಪಾದ್ರವತ್ ॥

ಭೀಮನು ಪುನಃ ಕರ್ಣನ ಎದುರಿನಲ್ಲಿಯೇ ಯುದ್ಧದಲ್ಲಿ ಬಹಳ ಸೈನ್ಯವನ್ನು ನಾಶಮಾಡಿದನು. ಕರ್ಣನು ಅವನನ್ನು ಬಿಟ್ಟು ಸಹದೇವನ ಕಡೆಗೆ ನಡೆದನು.

ಸ ತು ತಂ ವಿರಥೀಕೃತ್ಯ ಧನುಃ ಕಂಠೇऽವಸಜ್ಯ ಚ ।
ಕುತ್ಸಯಾಮಾಸ ಬಹುಶಃ ಸ ತು ನಿರ್ವೇದಮಾಗಮತ್ ॥

ಸಹದೇವನನ್ನು ಕರ್ಣ ವಿರಥನನ್ನಾಗಿ ಮಾಡಿ ಕುತ್ತಿಗೆಗೆ ಬಿಲ್ಲು ಸಿಕ್ಕಿಸಿ ಬಹಳ ಗೇಲಿ ಮಾಡಿದನು. ಸಹದೇವನು ಬಹಳ ವ್ಯಥೆಪಟ್ಟನು.

ನ ಹಂತುಮೈಚ್ಛತ್ ತಂ ಕರ್ಣಃ ಪೃಥಾಯ್ಯೈ ಸ್ವಂ ವಚಃ ಸ್ಮರನ್ ।
ತಂ ವಿಜಿತ್ಯ ರಣೇ ಕರ್ಣೋ ಜಘ್ನೇ ಪಾರ್ಥವರೂಥಿನೀಮ್ ॥

ಕರ್ಣನು ಸಹದೇವನನ್ನು ಕೊಲ್ಲಲು ಬಯಸಲಿಲ್ಲ. ಏಕೆಂದರೆ ಅವನು ಕುಂತಿಗೆ ಕೊಟ್ಟ ತನ್ನ ಮಾತನ್ನು ನೆನೆದುಕೊಂಡನು. ಆದರಿಂದ ಸಹದೇವನನ್ನು ಗೆದ್ದು ರಣರಂಗದಲ್ಲಿ ಪಾಂಡವರ ಸೈನ್ಯವನ್ನು ಕೊಲ್ಲತೊಡಗಿದನು.

ತತೋ ದ್ರೌಣಿರ್ವಿವಿಧೈರ್ಬಾಣಸಂಘೈ-
ರ್ಜಘಾನ ಪಾರ್ಥಸ್ಯ ಚಮೂಂ ಸಮಂತತಃ ।
ಸಾ ಹನ್ಯಮಾನಾ ರಣಕೋವಿದೇನ
ನ ಶಂ ಲೇಭೇ ಮೃತ್ಯುನಾऽನಾರ್ತಾ ಪ್ರಜೇವ ॥

ಅಶ್ವತ್ಥಾಮರು ನಾನಾ ವಿಧವಾದ ಬಾಣ ಸಮೂಹಗಳಿಂದ ಪಾಂಡವರ ಸೈನ್ಯವನ್ನು ಎಲ್ಲೆಡೆ ಕೊಲ್ಲಲು ತೊಡಗಿದರು. ಯುದ್ಧವಿಶಾರದರಾದ ಅವರಿಂದ ಹತವಾಗುತ್ತಿದ್ದ ಆ ಸೈನ್ಯಕ್ಕೆ ಮೃತ್ಯುವಿನಿಂದ ಪೀಡಿತವಾಗುವ ಆರ್ತ ಜಂತುವಿನಂತೆ ನೆಮ್ಮದಿ ಇಲ್ಲದಂತಾಯಿತು.

ದೃಷ್ಟ್ವಾ ಸೇನಾಂ ದ್ರೋಣಬಾಭಿಭೂತಾಂ
ತಮಾಹ್ವಯಾಮಾಸ ಘಟೋತ್ಕಚೋ ಯುಧೇ ।
ದ್ರೋಣಸ್ತಮಾಹಾऽಮಲಂ ನ ವತ್ಸ
ಪುತ್ರಸ್ತಾತಂ ಯೋಧಯಸ್ವಾದ್ಯ ಮಾಂ ತ್ವಮ್ ॥

ಪಾಂಡವರ ಸೈನ್ಯ ಅಶ್ವತ್ಥಾಮರ ಬಲಕ್ಕೆ ಮಣಿಯುತ್ತಿದ್ದುದನ್ನು ಕಂಡು ಘಟೋತ್ಕಚನು ಅವರನ್ನು ಯುದ್ಧಕ್ಕೆ ಆಹ್ವಾನಿಸಿದನು. ಆಗ ಅಶ್ವತ್ಥಾಮರು 'ಮಗು, ಬೇಡ ಬೇಡ, ಮಗ ತಂದೆಯೊಡನೆ ಯುದ್ಧ ಮಾಡಬಾರದು' ಎಂದರು.

ಇತ್ಯುಕ್ತ ಊಚೇ ನ ಪಿತಾ ಮಮ ತ್ವಂ
ಸಖಾ ಪಿತುರ್ಯದ್ಯಪಿ ಶತ್ರುಸಂಶ್ರಯಾತ್ ।
ಅರಿಶ್ಚ ಮೇऽಸೀತಿ ತಮಾಹ ಯದ್ಯರಿಂ
ಮಾಂ ಮನ್ಯಸೇ ತದ್ವದಹಂ ಕರೋಮಿ ತೇ ॥

ಅಶ್ವತ್ಥಾಮರು ಹೀಗೆ ಹೇಳಿದಾಗ ಘಟೋತ್ಕಚ 'ನೀವು ನನ್ನ ತಂದೆಯಲ್ಲ. ನಮ್ಮ ತಂದೆಯ ಸ್ನೇಹಿತರೆನ್ನುವುದು ನಿಜ. ಆದರೆ ಈಗ ನೀವು ಶತ್ರು ಪಕ್ಷದಲ್ಲಿರುವುದರಿಂದ ಶತ್ರುವೇ ಆಗಿರುವಿರಿ' ಎಂದನು. ಆಗ ಅಶ್ವತ್ಥಾಮರು 'ನೀನು ನನ್ನನ್ನು ಶತ್ರುವೆಂದು ತಿಳಿಯುವಿಯಾದರೆ ನಿನಗೆ ಶತ್ರುವಿನಂತೆಯೇ ವರ್ತಿಸುತ್ತೇನೆ' ಎಂದರು.

ಇತ್ಯೂಚಿವಾನ್ ಶಕ್ರಧನುಃಪ್ರಕಾಶಂ
ವಿಷ್ಫಾರ್ಯ ಚಾಪಂ ಪ್ರಕರನ್ ಶರೌಘಾನ್ ।
ಅಭ್ಯಾಗಮದ್ ರಾಕ್ಷಸಮುಗ್ರವೇಗಃ
ಸ್ವಸೇನಯಾ ಸೋऽಪಿ ತಮಭ್ಯವರ್ತತ ॥

ಅಶ್ವತ್ಥಾಮರು ಹೀಗೆ ಹೇಳಿ ಇಂದ್ರಧನುಸ್ಸಿನಂತೆ ಹೊಳೆಯುವ ಬಿಲ್ಲನ್ನು ಹೆದೆಯೇರಿಸಿ ಬಾಣಸಮೂಹಗಳನ್ನು ಚೆಲ್ಲುತ್ತಾ ಭಯಂಕರ ವೇಗಯುಕ್ತರಾಗಿ ಘಟೋತ್ಕಚನ ಬಳಿಗೆ ಬಂದರು. ಘಟೋತ್ಕಚನೂ ತನ್ನ ಸೇನೆಯೊಂದಿಗೆ ಅಶ್ವತ್ಥಾಮರನ್ನು ಎದುರಿಸಿದನು.

ಸ ರಕ್ಷಸಾಂ ಲಕ್ಷಸಮಾವೃತೋ ಬಲೀ
ನೃಭಿಶ್ಚ ವೀರೈರ್ಬಹುಭಿಃ ಸುಶಿಕ್ಷಿತೈಃ ।
ಅಕ್ಷೋಹಿಣೀಮಾತ್ರಬಲೇನ ರಾಕ್ಷಸಃ
ಸಂಕ್ಷೋಭಯಾಮಾಸ ಗುರೋಃ ಸುತಂ ಶರೈಃ ॥

ಬಲಿಷ್ಠನಾದ ಘಟೋತ್ಕಚನು ಒಂದು ಲಕ್ಷ ರಾಕ್ಷಸರಿಂದ ಪರಿವೃತನಾಗಿರುವವನು. ಯುದ್ಧವಿದ್ಯೆಯಲ್ಲಿ ಸುಶಿಕ್ಷಿತರಾದ ಬಹುಮಂದಿ ಮನುಷ್ಯ ವೀರರಿಂದಲೂ ಕೂಡಿದ್ದಾನೆ. ಒಟ್ಟು ಒಂದು ಅಕ್ಷೋಹಿಣಿ ಪರಿಮಾಣದ ಸೈನ್ಯದೊಂದಿಗೆ ಆತ ಅಶ್ವತ್ಥಾಮರನ್ನು ಬಾಣಗಳಿಂದ ಕ್ಷೋಭೆಗೊಳಿಸಿದ.

ಸ ತೇನ ಬಾಣೈರ್ಬಹುಭಿಃ ಪ್ರಪೀಡಿತೋ
ವಿಭಿನ್ನಗಾತ್ರಃ ಕ್ಷತಜಾಪ್ಲುತಾಂಗಃ ।
ವ್ಯಾವೃತ್ಯ ನೇತ್ರೇ ಕುಪಿತೋ ಮಹದ್ ಧನು
ರ್ವಿಷ್ಫಾರ್ಯ ಬಾಣೈ ರಜನೀಂ ಚಕಾರ ॥

ಅಶ್ವತ್ಥಾಮರು ಅವನ ಬಹುಬಾಣಗಳಿಂದ ಬಹಳ ಪೀಡಿತನಾಗಿ ಮೈಯೆಲ್ಲ ಗಾಯಗೊಂಡು ನೆತ್ತರಿಂದ ತೊಯ್ದು ಕೋಪಗೊಂಡು ಕಣ್ಣು ತಿರುಗಿಸುತ್ತಾ ಮಹಾಧನುಸ್ಸನ್ನು ಸೆಳೆದು ಬಾನಗಳಿಂದ ಕತ್ತಲನ್ನು ನಿರ್ಮಿಸಿದರು.

ಸೋಽಕ್ಷೋಹಿಣೀಂ ತಾಂ ಕ್ಷಣಮಾತ್ರತಃ ಕ್ಷರನ್
ಮಹಾಶರಾಂಸ್ತಾನಪಿ ರಾಕ್ಷಸಾನ್ ಕ್ಷಯಮ್ ।
ನಿನಾಯ ಪುತ್ರಂ ಚ ಘಟೋತ್ಕಚಸ್ಯ
ನಿಷ್ಪ್ಯಂ ಪುರಾ ಯೋಽಂಜನವರ್ಮನಾಮಕಃ ॥

ಅಶ್ವತ್ಥಾಮರು ಮಹಾಬಾಣಗಳನ್ನೆಸೆದು ಕ್ಷಣಮಾತ್ರದಲ್ಲಿ ಆ ಅಕ್ಷೋಹಿಣಿ ಸೈನ್ಯವನ್ನೂ ಆ ರಾಕ್ಷಸರನ್ನೂ ನಾಶಗೊಳಿಸಿದರು. ಹಿಂದೆ ಅಂಜನವರ್ಮನಾಗಿದ್ದು ನಿಷ್ಪ್ಯನೆಂದೂ ಹೆಸರು ಪಡೆದ ಘಟೋತ್ಕಚನ ಮಗನನ್ನೂ ಕೊಂದರು.

ನಿರೀಕ್ಷ್ಯ ಸೇನಾಂ ಸ್ವಸುತಂ ಚ ಪಾತಿತಂ
ಘಟೋತ್ಕಚೋ ದ್ರೋಣಸುತಂ ಶರೇಣ !

ವಿವ್ಯಾಧ ಗಾಢಂ ಸ ತು ವಿಹ್ವೋ ಧ್ವಜಂ
ಸಮಾಶ್ರಿತಶ್ಚಾsಶು ಸಸಂಜ್ಞಕೋಭವತ್ ॥

ಸೈನ್ಯವೂ ತನ್ನ ಮಗನೂ ನಾಶಹೊಂದಿದ್ದನ್ನು ಕಂಡು ಘಟೋತ್ಕಚನು ಅಶ್ವತ್ಥಾಮರನ್ನು ಬಾಣದಿಂದ ಬಲವಾಗಿ ಹೊಡೆದನು. ಅಶ್ವತ್ಥಾಮರು ಬಹಳ ವಿಹ್ವಲರಾಗಿ ಧ್ವಜವನ್ನು ಹಿಡಿದು ನಿಂತು ಬೇಗನೆ ಚೇತರಿಸಿಕೊಂಡರು.

ಉತ್ಥಾಯ ಬಾಣಂ ಯಮದಂಡಕಲ್ಪಂ
ಸಂಧಾಯ ಚಾಪೇ ಪ್ರವಿಕೃಷ್ಯ ರಾಕ್ಷಸೇ ।
ಮುಮೋಚ ತೇನಾಭಿಹತಃ ಪಪಾತ
ವಿನಷ್ಟಸಂಜ್ಞಃ ಸ್ವರಥೇ ಘಟೋತ್ಕಚಃ ॥

ಅಶ್ವತ್ಥಾಮರು ಎದ್ದು ಯಮದಂಡಕ್ಕೆ ಸಮಾನವಾದ ಬಾಣವನ್ನು ಬಿಲ್ಲಿನಲ್ಲಿ ಹೂಡಿ ಚೆನ್ನಾಗಿ ಸೆಳೆದು ಘಟೋತ್ಕಚನಿಗೆ ಎಸೆದರು. ಆ ಬಾಣದ ಏಟಿಗೆ ಘಟೋತ್ಕಚನು ಎಚ್ಚರತಪ್ಪಿ ತನ್ನ ರಥದಲ್ಲಿ ಬಿದ್ದನು.

ವಿಮೂರ್ಚ್ಛಿತಂ ಸಾರಥಿರಸ್ಯ ದೂರಂ
ನಿನಾಯ ಯುದ್ಧಾಜ್ಜಗತೋsವಿಪಶ್ಯತಃ ।
ದ್ರೌಣಶ್ಚ ಸೇನಾಂ ನಿಶಿತೈಃ ಶರೋತ್ತಮೈ
ರ್ವ್ಯದ್ರಾವಯತ್ ಪಾಂಡವಸೋಮಕಾನಾಮ್ ॥

ಮೂರ್ಛಿತನಾದ ಘಟೋತ್ಕಚನನ್ನು ಲೋಕವೆಲ್ಲ ನೋಡುತ್ತಿದ್ದಂತೆ ಅವನ ಸಾರಥಿ ರಣರಂಗದಿಂದ ದೂರಕ್ಕೆ ಕರೆದುಕೊಂಡು ಹೋದನು. ಅಶ್ವತ್ಥಾಮರು ಹರಿತವಾದ ಶ್ರೇಷ್ಠ ಬಾಣಗಳಿಂದ ಪಾಂಡವರ ಮತ್ತು ಪಾಂಚಾಲರ ಸೆನೆಯನ್ನು ಓಡಿಸಿದರು.

ಸಂಜ್ಞಾಮವಾಪ್ಯಾಥ ಘಟೋತ್ಕಚೋsಪಿ
ಕ್ರುದ್ಧೋವಿಶತ್ ಕೌರವಸೈನ್ಯಮಾಶು ।
ವಿದ್ರಾವಯಾಮಾಸ ಸ ಬಾಣವರ್ಷೈಃ
ಪ್ರಕಮ್ಪಯಾಮಾಸ ಮಹಾರಥಾಂಸ್ತಥಾ ॥

ಘಟೋತ್ಕಚನು ಎಚ್ಚರಗೊಂಡು ಕ್ರುದ್ಧನಾಗಿ ಕೌರವಸೈನ್ಯವನ್ನು ಬೇಗನೆ ಹೊಕ್ಕನು. ಬಾಣಗಳ ಮಳೆಗಳಿಂದ ಓಡಿಸಿದನು. ಮಹಾರಥರನ್ನು ನಡುಗಿಸಿದನು.

ತದೈವ ಪಾರ್ಥಂ ಪ್ರತಿ ಯೋದ್ಧುಮಾಗತಂ
ವೈಕರ್ತನಂ ವೀಕ್ಷ್ಯ ಜಗತ್ಪತಿರ್ಹರಿಃ ।
ಘಟೋತ್ಕಚಂ ಪ್ರಾಹಿಣೋಚ್ಚಕ್ತಿಮುಗ್ರಾಂ
ತಸ್ಮಿನ್ ಮೋಕ್ತುಂ ಪಾರ್ಥರಕ್ಷಾರ್ಥಮೇವ ॥

ಆಗಲೇ ಅರ್ಜುನನೊಡನೆ ಹೋರಾಡಲು ಕರ್ಣ ಬಂದುದನ್ನು ಕಂಡು ಜಗನ್ನಾಥನಾದ ಶ್ರೀಕೃಷ್ಣನು ಅರ್ಜುನನ ರಕ್ಷಣೆಗಾಗಿ ಉಗ್ರವಾದ ಶಕ್ತ್ಯಾಯುಧವನ್ನು ಘಟೋತ್ಕಚನಲ್ಲಿ ಬೀಳಿಸುವ ಉದ್ದೇಶದಿಂದ ಅವನನ್ನು ಕರ್ಣನ ಎದುರಿಗೆ ಕಳುಹಿಸಿದನು.

ಸ ಕರ್ಣಮಾಹೂಯ ಯುಯೋಧ ತೇನ
ತಸ್ಯಾನು ದುರ್ಯೋಧನಪೂರ್ವಕಾಶ್ಚ ಯೇ ।
ದ್ರೋಣೇನ ಚೈತಾನ್ ಸಮರೇ ಸ ಏಕೋ
ನಿವಾರಯಾಮಾಸ ಮಮರ್ದ ಚಾಧಿಕಮ್ ॥

ಘಟೋತ್ಕಚ ಕರ್ಣನನ್ನು ಆಹ್ವಾನಿಸಿ ಅವನೊಡನೆ, ಅವನ ಹಿಂದೆ ಸಹಾಯಕ್ಕೆ ನಿಂತಿದ್ದನು. ದುರ್ಯೋಧನ ಮುಂತಾದವರೊಡನೆ ಮತ್ತು ದ್ರೋಣರೊಡನೆ ಹೋರಾಡಿದನು. ಯುದ್ಧದಲ್ಲಿ ಅವರೆಲ್ಲರನ್ನೂ ಒಬ್ಬನೇ ತಡೆದು ಬಹಳ ಪೀಡಿಸಿದನು.

ತೇ ಬಾಧ್ಯಮಾನಾ ಬಹುಶೋ ಬಲೀಯಸಾ
ಕರ್ಣಂ ಪುರೋಧಾಯ ತಮಭ್ಯಯೋಧಯನ್ ।
ನ ವಿವ್ಯಥೇ ತತ್ರ ರಣೇ ಸ ಕರ್ಣಃ
ಸ್ವವೀರ್ಯಮಾಸ್ಥಾಯ ಮಹಾಸ್ತ್ರವೇತ್ತಾ ॥

ಬಲಿಷ್ಠನಾದ ಘಟೋತ್ಕಚನಿಂದ ಬಹಳ ಪೀಡಿತರಾದ ದುರ್ಯೋಧನ ಮುಂತಾದವರು ಕರ್ಣನನ್ನು ಮುಂದೆ ಮಾದಿಕೊಂಡು ಹೋರಾಡಿದರು. ಮಹಾ ಅಸ್ತ್ರಜ್ಞನಾದ ಕರ್ಣ ತನ್ನ ಪರಾಕ್ರಮವನ್ನು ತೋರಿಸುತ್ತಾ ಯುದ್ಧದಲ್ಲಿ ವ್ಯಥಿತನಾಗಿದ ನಿಂತನು.

ನಿವಾರಯಾಮಾಸ ಗುರೋಃ ಸುತಂ ತದಾ
ಭೀಮಸ್ತ್ರಿಗರ್ತಾನ್ ಶತಮನ್ಯುನಂದನಃ ।
ಅಲಂಬಲೋ ನಾಮ ತದೈವ ರಾಕ್ಷಸಃ
ಸಮಾಗಮದ್ ಭೀಮಸುತಂ ನಿಹಂತುಮ್ ॥

ಆಗ ಭೀಮನು ಅಶ್ವತ್ಥಾಮರನ್ನು ತಡೆದನು. ಅರ್ಜುನ ತ್ರಿಗರ್ತರನ್ನು ತಡೆದನು. ಆಗಲೆ ಅಲಂಬಲನೆಂಬ ರಾಕ್ಷಸ ಘಟೋತ್ಕಚನನ್ನು ಕೊಲ್ಲಲು ಬಂದನು.

ಯುದ್ವಾ ಪ್ರಗೃಹ್ಯ ೃನಮಥೋ ನಿಪಾತ್ಯ
ಘಟೋತ್ಕಚೋ ಭೂಮಿತಲೇಽಸಿನಾಽಸ್ಯ ।
ಉತ್ಕೃತ್ಯ ಶೀರ್ಷಂ ತು ಸುಯೋಧನೇಽಕ್ಷಿಪದ್
ವಿಷೇದುರತ್ರಾಖಿಲಭೂಮಿಪಾಲಾಃ ॥

ಅಲಂಬಲನೊಡನೆ ಘಟೋತ್ಕಚನು ಹೋರಾಡಿ ಅವನನ್ನು ಹಿಡಿದು ನೆಲದಲ್ಲಿ ಕೆಡವಿ ಖಡ್ಗದಿಂದ ತಲೆಯನ್ನು ಕಡಿದು ಆ ತಲೆಯಿಂದಲೇ ದುರ್ಯೋಧನನನ್ನು ಹೊಡೆದನು. ಆಗ ಎಲ್ಲ ರಾಜರೂ ಕಳವಳಗೊಂಡರು.

ಆಯುಧೋಽಥಾಽಗಮದುಗ್ರವೀರ್ಯೋ
ನರಾಶನಸ್ತಂ ಸ ಘಟೋತ್ಕಚೋಽಭ್ಯಯಾತ್ ।
ಯುದ್ವಾ ಮುಹೂರ್ತಂ ಸ ತು ತೇನ ಭೂಮೌ
ನಿಪಾತ್ಯ ತಂ ಯಜ್ಞಪಶುಂ ಚಕಾರ ॥

ಆನಂತರ ಉಗ್ರಪರಾಕ್ರಮಿಯಾದ ಆಲಾಯುಧನೆಂಬ ನರಭಕ್ಷಕ ರಾಕ್ಷಸನು ಬಂದನು. ಅವನನ್ನೂ ಘಟೋತ್ಕಚ ಎದುರಿಸಿದನು. ಅವನೊಡನೆ ಒಂದು ಮುಹೂರ್ತದ ಕಾಲ ಯುದ್ಧಮಾಡಿ ಅವನನ್ನು ನೆಲದಲ್ಲಿ ಕೆಡವಿ ಯಜ್ಞ ಪಶುವನ್ನಾಗಿ ಮಾಡಿದನು.

ಅಥಾಸ್ಯ ಶಿರ ಉದ್ಧೃತ್ಯ ಕ್ರೋಧಾದ್ ದುರ್ಯೋಧನೋರಸಿ ।
ಚಿಕ್ಷೇಪ ತೇನ ಸಂಭ್ರಾಂತಾಃ ಸರ್ವೇ ದುರ್ಯೋಧನಾದಯಃ ॥

ಘಟೋತ್ಕಚನು ಅಲಾಯುಧನ ಶಿರಸ್ಸನ್ನು ಕತ್ತರಿಸಿ ಅದನ್ನು ಕೋಪದಿಂದ ದುರ್ಯೋಧನನ ಎದೆಯ ಮೇಲೆ ಎಸೆದನು. ಅದರಿಂದ ದುರ್ಯೋಧನ ಮುಂತಾದವರೆಲ್ಲರೂ ಕಳವಳಗೊಂಡರು.

ಘಟೋತ್ಕಚಬಲಖ್ಯಾತ್ಯೈ ಸಮರ್ಥೇನಾಪಿ ಯೋ ರಣೇ ।
ನ ಹತೋ ಭೀಮಸೇನೇನ ಹತೇಽಸ್ಮಿನ್ ಭೈಮಸೇನಿನಾ ।
ಸರ್ವೇ ಸಂಚೋದಯಾಮಾಸುಃ ಕರ್ಣಂ ಶಕ್ತಿವಿಮೋಕ್ಷಣೇ ॥

ಅಸ್ಮಿನ್ ಹತೇ ಹತಂ ಸರ್ವಂ ಕಿಂ ನಃ ಪಾರ್ಥಃ ಕರಿಷ್ಯತಿ ॥

ಅಲಾಯುಧನನ್ನು ಕೊಲ್ಲಲು ಭೀಮನು ಸಮರ್ಥನಾಗಿದ್ದರೂ ಘಟೋತ್ಕಚನ ಬಲ ಹೀಗೆ ಪ್ರಕಟವಾಗಲೆಂದೇ ತಾನು ಕೊಲ್ಲದೆ ಬಿಟ್ಟದ್ದನು. ಘಟೋತ್ಕಚನು ಅವನನ್ನು ಕೊಂದಾಗ ಎಲ್ಲರೂ ಶಕ್ತ್ಯಾಯುಧ ಪ್ರಯೋಗಕ್ಕೆ ಕರ್ಣನನ್ನು ಒತ್ತಾಯಿಸಿದರು. 'ಈತನೊಬ್ಬ ಹತನಾದರೂ ಎಲ್ಲ ಹತರಾದಂತೆ. ಬಳಿಕ ಅರ್ಜುನ ನಮ್ಮನ್ನೇನು ಮಾಡಬಲ್ಲ?' ಎಂದರು.

ಏವಂ ಸಂಚೋದ್ಯಮಾನಃ ಸ ಧಾರ್ತರಾಷ್ಟ್ರೈಃ ಪುನಃಪುನಃ ।
ಹೈಡಿಂಬೇನಾರ್ದ್ಯಮಾನೈಸ್ತು ಸ್ವಯಂ ಚ ಭೃಶಪೀಡಿತಃ ।
ಆದತ್ತ ಶಕ್ತಿಂ ವಿಪುಲಾಂ ಪಾಕಶಾಸನಸಮ್ಮತಾಮ್ ॥

ಹೀಗೆ ಘಟೋತ್ಕಚನಿಂದ ಪೀಡಿತರಾಗಿದ್ದ ಕೌರವರು ಮತ್ತೆ ಮತ್ತೆ ಒತ್ತಾಯ ಮಾಡಿದಾಗ, ತಾನೂ ಬಹಳ ಪೀಡಿತನಾದ್ದರಿಂದ ಇಂದ್ರನ ಪ್ರೀತಿಪಾತ್ರವಾದ ಮಹತ್ತಾದ ಶಕ್ತ್ಯಾಯುಧವನ್ನು ಕರ್ಣ ಎತ್ತಿಕೊಂಡನು.

ತಾಮಂಬರಸ್ಥಾಯ ಘಟೋತ್ಕಚಾಯ
ಶೈಲೋಪಮಾಯಾತುಲವಿಕ್ರಮಾಯ ।
ಚಿಕ್ಷೇಪ ಮೃತ್ಯೋ ರಸನೋಪಮಾಮಲಂ
ಪ್ರಕಾಶಯಂತೀಂ ಪ್ರದಿಶೋ ದಿಶಶ್ಚ ॥

ಅತುಲ ಪರಾಕ್ರಮಿಯಾದ ಘಟೋತ್ಕಚನು ಆಕಾಶದಲ್ಲಿನಿಂತಿದ್ದನು. ಬೆಟ್ಟದಂತೆ ಕಾಣುತ್ತಿದ್ದನು. ಅವನ ಮೇಲೆ ಕರ್ಣನು ಮೃತ್ಯುವಿನ ನಾಲಗೆಯಂತಿದ್ದ ದಿಕ್ಕು ವಿದಿಕ್ಕುಗಳನ್ನು ಚೆನ್ನಾಗಿ ಬೆಳಗಿಸುತ್ತಿದ್ದ ಶಕ್ತ್ಯಾಯುಧವನ್ನು ಎಸೆದನು.

ನಿರ್ಭಿನ್ನವಕ್ಷಾಃ ಸ ತಯಾ ಪಪಾತ
ವಿಕೂರ್ಣಯನ್ ಶತ್ರುಬಲಂ ಹತೋಽಪಿ ।
ತಸ್ಮಿನ್ ಹತೇ ಜಹೃಷುರ್ಧಾರ್ತರಾಷ್ಟ್ರಾ
ಉಚ್ಚುಕ್ರುಶುರ್ದುಧುವುಶ್ಚಾಂಬರಾಣಿ ॥

ಶಕ್ಯಾಯುಧದಿಂದ ಘಟೋತ್ಕಚನ ಎದೆ ಒಡೆದು ಕೆಳಗೆ ಬಿದ್ದನು. ತಾನು ಹತನಾದರೂ ಬಿದ್ದು ಶತ್ರುಸೈನ್ಯವನ್ನು ಪುಡಿಮಾಡುತ್ತ ಬಿದ್ದನು. ಅವನು ಹತನಾದಾಗ ಕೌರವರು ಹರ್ಷಪಟ್ಟರು. ಕೇಕೆ ಹಾಕಿದರು. ವಸ್ತ್ರಗಳನ್ನು ಹಾರಿಸಿದರು.

ತದಾ ನನರ್ತ ಕೇಶವಃ ಸಮಾಶ್ಲಿಷಚ್ಚ ಫಲ್ಗುನಮ್ ।
ನನಾದ ಶಂಖಮಾಧಮಜ್ಜಹಾಸ ಚೋರುನಿಸ್ವನಃ ॥

ಆಗ ಶ್ರೀಕೃಷ್ಣನೂ ಕುಣಿದಾಡಿದ. ಅರ್ಜುನನನ್ನು ತಬ್ಬಿಕೊಂಡ. ಶಂಖನಾದ ಮಾಡುತ್ತ ಸಿಂಹನಾದವನ್ನು ಮಾಡಿದ. ದೊಡ್ಡ ಧ್ವನಿಯಿಂದ ನಕ್ಕ.

ತಮಪೃಚ್ಛದ್ ಗುಡಾಕೇಶಃ ಕಿಮೇತದಿತಿ ದುರ್ಮನಾಃ ।
ಹತೇ ಸುತೇಽಗ್ರಜೇಽಸ್ಮಾಕಂ ವೀರೇ ಕಿಂ ನಂದಸಿ ಪ್ರಭೋ ॥

ದುಃಖಿತನಾದ ಅರ್ಜುನ ಶ್ರೀಕೃಷ್ಣನನ್ನು ಕೇಳಿದ 'ಪ್ರಭು, ಇದೇನು? ವೀರನಾದ ನಮ್ಮ ಜ್ಯೇಷ್ಠಪುತ್ರ ಹತನಾದಾಗ ಏಕೆ ಸಂತೋಷಪಡುವಿ?' ಎಂದು.

ತಮಾಹ ಭಗವಾನ್ ಕೃಷ್ಣೋ ದಿಷ್ಟ್ಯಾ ಜೀವಸಿ ಫಲ್ಗುನ ।
ತ್ವದರ್ಥಂ ನಿಹಿತಾ ಶಕ್ತಿರ್ವಿಮುಕ್ತಾಽಸ್ಮಿನ್ ಹಿ ರಾಕ್ಷಸೇ ॥

ಭಗವಾನ್ ಶ್ರೀಕೃಷ್ಣ ಅರ್ಜುನನಿಗೆ ಹೇಳಿದ, 'ಅರ್ಜುನ, ಆದೃಷ್ಟವಶದಿಂದ ನೀನು ಬದುಕಿಕೊಂಡೆ. ನಿನಗಾಗಿ ಕಾದಿರಿಸಿದ್ದ ಶಕ್ಯಾಯುಧವನ್ನು ಕರ್ಣ ಘಟೋತ್ಕಚನ ಮೇಲೆ ಎಸೆದುಬಿಟ್ಟ.

ತತೋ ಯುಧಿಷ್ಠಿರೋ ದುಃಖಾದಮರ್ಷಾಚ್ಚಾಭ್ಯವರ್ತತ ।
ಕರ್ಣಂ ಪ್ರತಿ ತಮಾಹಾಥ ಕೃಷ್ಣದ್ವೈಪಾಯನಃ ಪ್ರಭುಃ ॥

ಆಗ ಯುಧಿಷ್ಠಿರ ಕೋಪದಿಂದ ಮತ್ತು ದುಃಖದಿಂದ ಕರ್ಣನ ಮುಂದೆ ಯುದ್ಧಕ್ಕೆ ಹೊರಟನು. ಆಗ ವೇದವ್ಯಾಸರು ಬಂದು ಹೇಳಿದರು.

ಯಯಾऽರ್ಜುನೋ ನಿಹಂತವ್ಯಸ್ತಯಾऽಸೌ ರಾಕ್ಷಸೋ ಹತಃ ।
ತನ್ಮಾ ಶುಚಸ್ತ್ವಂ ರಾಜೇಂದ್ರ ದಿಷ್ಟ್ಯಾ ಜೀವತಿ ಫಲ್ಗುನಃ ।
ಇತ್ಯುಕ್ತ್ವಾ ಪ್ರಯಯೌ ವ್ಯಾಸಸ್ತತೋ ಯುದ್ಧಮವರ್ತತ ॥

'ಯಾವ ಶಕ್ತ್ಯಾಯುಧದಿಂದ ಅರ್ಜುನ ಹತನಾಗಬೇಕಿತ್ತೋ ಅದರಿಂದ ಘಟೋತ್ಕಚ ಹತನಾಗಿದ್ದಾನೆ. ಅದರಿಂದ, ಮಹಾರಾಜ ಶೋಕಿಸಬೇಡ. ಅದೃಷ್ಟವಶಾತ್ ಅರ್ಜುನ ಬದುಕಿದ್ದಾನೆ'. ಹೀಗೆ ಹೇಳಿ ವೇದವ್ಯಾಸರು ಹೊರಟುಹೋದರು. ಬಳಿಕ ಯುದ್ಧ ಮುಂದುವರಿಯಿತು.

ಭೀಮಾರ್ಜುನಾಭ್ಯಾಮಿಹ ಹನ್ಯಮಾನೇ
ಬಲೇ ಕುರೂಣಾಮಿತರೈಶ್ಚ ಪಾಂಡವೇ ।
ಪ್ರದೀಪಹಸ್ತಾ ಅಥ ಯೋಧಕಾಶ್ಚ
ಸರ್ವೇऽಪಿ ನಿದ್ರಾವಶಗಾ ಬಭೂವುಃ ॥

ಕೌರವರ ಸೈನ್ಯವನ್ನು ಭೀಮಾರ್ಜುನರೂ ಪಾಂಡವರ ಸೈನ್ಯವನ್ನು ಕೌರವರೂ ನಾಶಮಾಡುತ್ತಿದ್ದಾಗ ದೀಪಗಳನ್ನು ಹಿಡಿದವರೂ ಯೋಧರೂ ಎಲ್ಲರೂ ನಿದ್ರಾಪರವಶರಾದರು.

ದೃಷ್ಟ್ವೈವ ತಾನಾಹ ಧನಂಜಯಸ್ತದಾ
ಸ್ವಪ್ಸ್ಯಂತು ಯಾವಚ್ಛಿನಃ ಪ್ರಕಾಶಃ ।
ಇತೀರಿತಾ ಆಶಿಷಃ ಫಲ್ಗುನಾಯ
ಪ್ರಯುಜ್ಯ ಸರ್ವೇ ಸುಷುಪುರ್ಯಥಾಸ್ಥಿತಾಃ ॥

ಸೈನಿಕರು ನಿದ್ರಾಪರವಶರಾದುದನ್ನು ಕಂಡು ಅರ್ಜುನನು ಹೇಳಿದ 'ಚಂದ್ರನ ಪ್ರಕಾಶ ಹರಡುವವರೆಗೆ ಎಲ್ಲರೂ ನಿದ್ದೆಮಾಡಿರಿ'. ಹೀಗೆ ಹೇಳಿದಾಗ ಎಲ್ಲರೂ ಅವನಿಗೆ ಆಶೀರ್ವಾದ ಮಾಡಿ, ಹೇಗಿದ್ದರೋ ಹಾಗೇ ಮಲಗಿ ನಿದ್ದೆಹೋದರು.

ಪುನಶ್ಚ ಚಂದ್ರೇಽಭ್ಯುದಿತೇ ಯುಧೇ ತೇ
ಸಮಾಯಯುಃ ಶಸ್ತ್ರಮಹಾಸ್ತ್ರವರ್ಷಾಃ ।
ತತ್ರಾಽಯಾತಃ ಸಾತ್ಯಕಿಂ ಸೋಮದತ್ತೋ
ಭೂರಿಶ್ಚ ತಾಭ್ಯಾಂ ಯುಯುಧೇ ಸ ಏಕಃ ॥

ಚಂದ್ರನುದಿಸಿದಾಗ ಪುನಃ ಅವರು ಶಸ್ತ್ರಮಹಾಸ್ತ್ರಗಳ ಮಳೆ ಸುರಿಸುತ್ತ ಯುದ್ಧಕ್ಕೆ ಬಂದರು. ಭೂರಿ ಮತ್ತು ಸೋಮದತ್ತರು ಸಾತ್ಯಕಿಯ ಎದುರಿಗೆ ಬಂದರು. ಸಾತ್ಯಕಿಯೊಬ್ಬನೇ ಅವರಿಬ್ಬರೊಡನೆ ಹೋರಾಡಿದನು.

ಹತೌ ಚ ತೌ ಪೇತತುಸ್ತೇನ ಭೂಮೌ
ಬಾಹ್ಲೀಕ ಏನಂ ಸಮರೇ ತ್ವಯೋಧಯತ್ ।
ಸ ಸಾತ್ಯಕಿಂ ವಿರಥೀಕೃತ್ಯ ಬಾಣಂ
ವಧಾಯ ತಸ್ಯಾಽಶು ಮುಮೋಚ ವೀರಃ ॥

ಸಾತ್ಯಕಿಯಿಂದ ಭೂರಿ ಸೋಮದತ್ತರು ಹತರಾಗಿ ನೆಲದಲ್ಲಿ ಬಿದ್ದರು. ಬಾಹ್ಲೀಕ ಸಾತ್ಯಕಿಯೊಡನೆ ಯುದ್ಧದಲ್ಲಿ ಹೋರಾಡಿದ. ವೀರನಾದ ಅವನು ಸಾತ್ಯಕಿಯನ್ನು ವಿರಥನನ್ನಾಗಿ ಮಾಡಿ ಅವನ ವಧೆಗಾಗಿ ಬಾಣವನ್ನೆಸೆದನು.

ಚಿಚ್ಛೇದ ತಂ ಭೀಮಸೇನಸ್ತ್ರಿಧೈವ
ತಸ್ಮೈ ಶತಘ್ನೀಂ ಪ್ರಜಹಾರ ಬಾಹ್ಲೀಕಃ !
ತಯಾ ಹತೋ ವಿಹ್ವಲಿತೋ ವೃಕೋದರೋ
ಜಘಾನ ತಂ ಗದಯಾ ಸೋಽಪತಚ್ಚ ॥

ಆ ಬಾಣವನ್ನು ಭೀಮನು ಮೂರು ಭಾಗವಾಗಿ ತುಂಡರಿಸಿದನು. ಭೀಮನಿಗೆ ಬಾಹ್ಲೀಕ ಶತಘ್ನಿಯನ್ನು ಪ್ರಯೋಗಿಸಿದನು. ಅದರಿಂದ ಹೊಡೆಸಿಕೊಂಡು ಭೀಮನು ವಿಹ್ವಲನಾದವನಂತೆ ತೋರಿಕೊಂಡು ಅವನನ್ನು ಗದೆಯಿಂದ ಹೊಡೆದನು. ಬಾಹ್ಲೀಕನು ಮೃತನಾದನು.

ಬಾಹ್ಲೀಕಃ ಪ್ರಾರ್ಥಯಾಮಾಸ ಪೂರ್ವಂ ಸ್ನೇಹಪುರಃಸರಮ್ ।
ಭೀಮ ತ್ವಯೈವ ಹಂತವ್ಯೋ ರಣೇಽಹಂ ಪ್ರೀತಿಮಿಚ್ಛತಾ ।
ತದಾ ಯಶಶ್ಚ ಧರ್ಮಂ ಚ ಲೋಕಂ ಚ ಪ್ರಾಪ್ನುಯಾಮಹಮ್ ॥

ಹಿಂದೆ ಬಾಹ್ಲೀಕನು ಭೀಮನಲ್ಲಿ ಸ್ನೇಹಪುರಸ್ಸರವಾಗಿ ಕೇಳಿಕೊಂಡಿದ್ದನು. 'ಭೀಮನೇ, ನೀನು ನನಗೆ ಸಂತೋಷವನ್ನು ಬಯಸುವಿಯಾದರೆ ನೀನೇ ನನ್ನನ್ನು ಯುದ್ಧದಲ್ಲಿ ಕೊಲ್ಲಬೇಕು. ಆಗಲೇ ನಾನು ಕೀರ್ತಿಯನ್ನೂ ಪುಣ್ಯವನ್ನೂ ಉತ್ತಮ ಲೋಕವನ್ನೂ ಪಡೆಯಬಲ್ಲೆ' ಎಂದು.

ಇತ್ಯುಕ್ತ ಆಹ ತಂ ಭೀಮೋ ನಿತರಾಂ ವ್ಯಥಿತಸ್ತದಾ ।
ಹನ್ಯಾಂ ನೈವಾನ್ಯಥಾ ಯುದ್ಧೇ ತತ್ ತೇ ಶುಶ್ರೂಷಣಂ ಭವೇತ್ ॥

ಇತಿ ತೇನ ಹತಸ್ತತ್ರ ಭೀಮಸೇನೇನ ಬಾಹ್ಲೀಕಃ ॥

ಬಾಹ್ಲೀಕನು ಹೀಗೆ ಹೇಳಿದ ಭೀಮನು 'ಯುದ್ಧದಲ್ಲಿ ನಾನು ಬಹಳ ಹೊಡೆಸಿಕೊಂಡರೆ ಮಾತ್ರ, ನಿನ್ನಾಜ್ಞೆಯಿಂದ ನಿನ್ನನ್ನು ಕೊಲ್ಲುವುದು ನಿನಗೆ ಸೇವೆಯಾಗುವುದಿದ್ದರೆ ಮಾತ್ರ, ನಿನ್ನನ್ನು ಕೊಲ್ಲುವೆ ಇಲ್ಲದಿದ್ದರೆ ಇಲ್ಲ' ಎಂದು ಹೇಳಿದನು. ಅದರಿಂದ ಭೀಮನು ಬಾಹ್ಲೀಕನನ್ನು ಕೊಂದನು.

ಹತೇ ಬಾಹ್ಲೀಕೇ ಕೌರವಾ ಭೀಮಸೇನ-
ಮಭ್ಯಾಜಗ್ಮುಃ ಕರ್ಣದುರ್ಯೋಧನಾದ್ಯಾಃ ।
ದ್ರೌಣಿಂ ಪುರಸ್ಕೃತ್ಯ ಗುರುಂ ಚ ಪಾರ್ಷತಃ
ಸಭ್ರಾತೃಕಃ ಸಾತ್ಯಕಿನಾ ಸಮಭ್ಯಯಾತ್ ॥

ಬಾಹ್ಲೀಕ ಹತನಾದಾಗ ಕರ್ಣ ದುರ್ಯೋಧನ ಮುಂತಾದ ಕೌರವ ಯೋಧರು ಅಶ್ವತ್ಥಾಮರನ್ನು ಮುಂದೆ ಮಾಡಿಕೊಂಡು ಭೀಮಸೇನನ ಮುಂದೆ ಬಂದರು. ಆಕ್ಷ ಧೃಷ್ಟದ್ಯುಮ್ನನು ಸೋದರರೊಂದಿಗೆ ಮತ್ತು ಸಾತ್ಯಕಿಯೊಂದಿಗೆ ದ್ರೋಣರ ಬಳಿಗೆ ಬಂದನು.

ಸಂಶಪ್ತಕೈರೇವ ಪಾರ್ಥೋ ಯುಯೋಧ
ತದ್ ಯುದ್ಧಮಾಸೀದತಿ ರೌದ್ರಮದ್ಭುತಮ್ ।
ಅಕ್ಷೋಹಿಣೀ ತತ್ರ ಭೀಮಾರ್ಜುನಾಭ್ಯಾಂ
ನಿಷೂದಿತಾ ರಾತ್ರಿಯುದ್ಧೇ ಸಮಸ್ತಾ ॥

ಅರ್ಜುನನು ಸಂಶಪ್ತಕರೊಡನೆ ಹೋರಾಡಿದನು. ಆ ಯುದ್ಧವು ಅತಿ ಭೀಕರ ಮತ್ತು ಅದ್ಭುತವಾಗಿದ್ದಿತು. ಅಂದು ರಾತ್ರಿ ಯುದ್ಧದಲ್ಲಿ ಸಂಪೂರ್ಣ ಒಂದು ಅಕ್ಷೌಹಿಣಿ ಕೌರವರ ಸೈನ್ಯ ಭೀಮಾರ್ಜುನರಿಂದ ಹತವಾಯಿತು.

ತತಃ ಸೂರ್ಯಶ್ಚಾಭ್ಯುದಿತಸ್ತದಾನೀಂ
ಘೋರಂ ದ್ರೋಣಃ ಕರ್ಮ ಯುದ್ಧೇ ಚಕಾರ ।
ಸ ಪಾಂಚಾಲಾನಾಂ ರಥವೃಂದಂ ಪ್ರವಿಶ್ಯ
ಜಘಾನ ಹಸ್ತ್ಯಶ್ವರಥಾನ್ ನರಾಂಶ್ಚ ॥

ಹದಿನೈದನೆಯ ದಿವಸದ ಯುದ್ಧದಲ್ಲಿ ಪಾಂಚಾಲರ ರಥ ಸಮೂಹವನ್ನು ಹೊಕ್ಕು ದ್ರೋಣರು ಅತಿಘೋರವಾದ ಹೋರಾಟ ನಡೆಸಿದರು. ಆನೆ, ಕುದುರೆ, ರಥ ಕಾಲಾಳುಗಳನ್ನು ಸಂಹರಿಸಿದರು.

ವಿದ್ರಾವಿತಾಸ್ತೇನ ಮಹಾರಥಾಶ್ಚ
ನೈವಾವಿಂದನ್ ಶರ್ಮ ಬಾಣಾಂಧಕಾರೇ ।
ಯುವೇವ ವೃದ್ಧೋಽಪಿ ಚಚಾರ ಯುದ್ಧೇ
ಸ ಉಗ್ರಧನ್ವಾ ಪರಮಾಸ್ತ್ರವೇತ್ತಾ ॥

ದ್ರೋಣರು ಮಹಾರಥರನ್ನು ಓಡಿಸಿದರು. ಬಾಣಗಳ ಕತ್ತಲಲ್ಲಿ ಯಾರಿಗೂ ನೆಮ್ಮದಿಯಿಲ್ಲದಂತೆ ಮಾಡಿದರು. ಮಹಾಸ್ತ್ರಜ್ಞಾನಿಯಾದ ಅವರು ವೃದ್ಧರಾದರೂ ಯುವಕನಂತೆ ಭಯಂಕರವಾ ಧನುಸ್ಸನ್ನು ಹಿಡಿದು ರಣರಂಗದಲ್ಲಿ ಸಂಚರಿಸಿದರು.

ರಥಾರ್ಬುದಂ ತೇನ ಹತಂ ಚ ತತ್ರ
ತತಃ ಸಹಸ್ರಂ ಗುಣಿತಂ ನರಾಣಾಮ್ ।
ತತೋ ದಶಾಂಶೋ ನಿಹತೋ ಹಯಾನಾಂ
ಗಜಾರ್ಬುದಂ ಚೈವ ರಣೋತ್ಕಟೇನ ॥

ಯುದ್ಧದಲ್ಲಿ ಅಪ್ರತಿಮರಾದ ದ್ರೋಣರು ಆ ಯುದ್ಧದಲ್ಲಿ ಇಪ್ಪತ್ತು ಸಾವಿರ ರಥ ಸ್ಥನಿಕರನ್ನು ನಾಶಪಡಿಸಿದರು. ಅದಕ್ಕೆ ಸಹಸ್ರಪಟ್ಟು ಕಾಲಾಳುಗಳನ್ನು ಕೊಂದರು. ಅವರ ಹತ್ತನೆಯ ಒಂದಂಶದಷ್ಟು ಅಶ್ವಸೈನಿಕರನ್ನು ವಧಿಸಿದರು, ಇಪ್ಪತ್ತು ಸಾವಿರ ಗಜ ಸೈನಿಕರನ್ನು ಕೊಂದರು.

ತಥಾ ವಿರಾಟದ್ರುಪದೌ ಶರಾಭ್ಯಾಂ
ನಿನಾಯ ಲೋಕಂ ಪರಮಾಜಿಮಧ್ಯೇ ।
ತತೋ ವಿಜಿತ್ಯೈವ ಗುರೋಃ ಸುತಾದೀನ್
ಧೃಷ್ಟದ್ಯುಮ್ನಂ ಭೀಮಸೇನೋ ಜುಗೋಪ ॥

ದ್ರೋಣರು ರಣರಂಗದಲ್ಲಿ ಎರಡು ಬಾಣಗಳಿಂದ ವಿರಾಟ, ದ್ರುಪದರನ್ನು ಪರಲೋಕಕ್ಕೆ ಕಳುಹಿಸಿದರು. ಆಗ ಭೀಮನು ಅಶ್ವತ್ಥಾಮ ಮುಂತಾದವರನ್ನು ಗೆದ್ದು ಧೃಷ್ಟದ್ಯುಮ್ನನನ್ನು ರಕ್ಷಿಸಿದನು.

ಧೃಷ್ಟದ್ಯುಮ್ನೋ ಭೀಮಸೇನಾಭಿಗುಪ್ತೋ
ದ್ರೋಣಂ ಹಂತುಂ ಯತ್ನಮುಚ್ಚೈಶ್ಚಕಾರ ।
ನಿವಾರಯಾಮಾಸ ಗುರುಃ ಶರೌಘೈ-
ರ್ಧೃಷ್ಟದ್ಯುಮ್ನಂ ಸೋಽಪಿ ತಂ ಸಾಯಕೇನ ॥

ವಿವ್ಯಾಧ ತೇನಾಭಿಹತಃ ಸ ಮೂರ್ಚ್ಛಾ-
ಮವಾಪ ವಿಪ್ರೋ ನಿಷಸಾದ ಚಾಽಶು ॥

ಭೀಮನ ರಕ್ಷಣೆಯಲ್ಲಿದ್ದ ಧೃಷ್ಟದ್ಯುಮ್ನನು ದ್ರೋಣರನ್ನು ಕೊಲ್ಲಲು ಬಹಳ ಪ್ರಯತ್ನ ಮಾಡಿದನು. ದ್ರೋಣರು ಬಾಣಸಮೂಹಗಳಿಂದ ಅವನನ್ನು ತಡೆದರು. ಅವನೂ ದ್ರೋಣರನ್ನು ಬಾಣದಿಂದ ಹೊಡೆದನು. ದ್ರೋಣರು ಕೂಡಲೇ ಆ ಏಟಿಗೆ ಮೂರ್ಛೆ ಹೊಂದಿ ಕುಳಿತುಬಿಟ್ಟರು.

ಧೃಷ್ಟದ್ಯುಮ್ನಃ ಸತ್ವರಂ ಖಡ್ಗಚರ್ಮಣೀ
ಆದಾಯ ತಸ್ಯಾಽರುರುಹೇ ರಥೋತ್ತಮಮ್ ।
ಸಂಜ್ಞಾಮವಾಪ್ಯಾಥ ಗುರುಃ ಶರೌಘೈಃ
ಪ್ರಾದೇಶಮಾತ್ರೈರ್ವ್ಯಥಯಾಮಾಸ ತಂ ಚ ॥

ಧೃಷ್ಟದ್ಯುಮ್ನ ಬೇಗನೆ ಖಡ್ಗ-ಗುರಾಣಿ ಹಿಡಿದು ದ್ರೋಣರ ಉತ್ತಮವಾದ ರಥವೇರಲು ತೊಡಗಿದನು. ಒಡನೆ ದ್ರೋಣರು ಎಚ್ಚೆತ್ತು ಗೇಣುದ್ದದ ಬಾಣ ಸಮೂಹಗಳಿಂದ ಅವನನ್ನು ಪೀಡಿಸಿದರು.

ಸ ತೈರತಿವ್ಯಥಿತಸ್ತದ್ರಥಾಚ್ಚ
ಪರಾವೃತ್ತಃ ಸ್ವಂ ರಥಮಾರುರೋಹ ।
ಸುಸಂರಬ್ಧೌ ತೌ ಪುನರೇವ ಯುದ್ಧಂ
ಸಂಚಕ್ರತುರ್ವೃಷ್ಟಶರಾಂಬುಧಾರೌ ॥

ಧೃಷ್ಟದ್ಯುಮ್ನನು ಆ ಬಾಣಗಳಿಂದ ಬಹಳ ವೇದನೆ ಹೊಂದಿ ದ್ರೋಣರ ರಥದಿಂದ ಹಿಂದೆ ಬಂದು ತನ್ನ ರಥವನ್ನೇರಿದನು. ಇಬ್ಬರೂ ಬಹಳ ಯತ್ನಿಸುತ್ತ ಬಾಣಗಳ ಜಲಧಾರೆ ಸುರಿಸುತ್ತಾ ಪುನಃ ಯುದ್ಧ ಮಾಡಿದರು.

ನಿವಾರ್ಯ ಶತ್ರುಂ ಸ ಶರೈರ್ಬ್ರಹ್ಮಾಸ್ತ್ರಮಸೃಜದ್ ದ್ವಿಜಃ ।
ತೇನ ಸಂದಾಹಯಾಮಾಸ ಪಾಂಚಾಲಾನ್ ಸುಬಹೂನ್ ರಣೇ ।
ಪುರುಜಿತ್ ಕುಂತಿಭೋಜಶ್ಚ ತೇನಾನ್ಯೇ ಚ ಹತಾಸ್ತದಾ ॥

ದ್ರೋಣರು ಬಾಣಗಳಿಂದ ಧೃಷ್ಟದ್ಯುಮ್ನನನ್ನು ತಡೆದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದರು. ಅದರಿಂದ ಬಹುಮಂದಿ ಪಾಂಚಾಲರನ್ನು ಸುಟ್ಟರು. ಪುರುಜಿತ್, ಕುಂತಿಭೋಜ ಮತ್ತು ಇನ್ನಿತರರು ಆಗ ಯುದ್ಧದಲ್ಲಿ ಅವರಿಂದ ಹತರಾದರು.

★ ★ ★ ★ ★

ನೂರ ಮೂವತ್ತೊಂದನೆಯ ಅಧ್ಯಾಯ

ಅರ್ಜುನನಿಂದ ಸೈಂಧವನ ಶಿರಶ್ಛೇದ.

ಶ್ರುತ್ವಾ ನಿನಾದಂ ಧನುಷಶ್ಚ ತಸ್ಯ
ವಿಸ್ಪಷ್ಟಮುತ್ಕೃಷ್ಟಮಿವಾಂತಕಸ್ಯ ।
ಶಕ್ರಾಶನಿಸ್ಫೋಟಸಮಂ ಸುಘೋರಂ
ವಿಕೃಷ್ಯಮಾಣಸ್ಯ ಧನಂಜಯೇನ ॥ ೧ ॥

ತ್ರಾಸೋದ್ವಿಗ್ನಂ ತಥೋದ್ಭ್ರಾಂತಂ ತ್ವದೀಯಂ ತದ್ಬಲಂ ನೃಪ ।
ಯುಗಾಂತವಾತಸಂಕ್ಷುಬ್ಧಂ ಚಲದ್ವೀಚಿತರಂಗಿತಮ್ ॥ ೨ ॥

ಧನಂಜಯನಿಂದ ಎಳೆಯಲ್ಪಡುವ ಧನುಸ್ಸಿನ ಅತ್ಯಂತ ಘೋರವಾದ, ಇಂದ್ರನ ವಜ್ರಾಯುಧದ ಸ್ಫೋಟಕ್ಕೆ ಸಮವಾದ, ಯಮನ ಆಕ್ರೋಶಶಬ್ದಗಳಿಗೆ ಸಮವಾದ, ಅತ್ಯಂತ ಸ್ಪಷ್ಟವಾದ ಘೋಷವನ್ನು ಕೇಳಿ ಎಲೈ ರಾಜನೇ, ಹೆದರಿಕೆಯಿಂದ ಉದ್ವೇಗಗೊಂಡ ಮತ್ತು ದಿಗ್ಭ್ರಾಂತವಾದ ನಿನ್ನ ಸೈನ್ಯವು ಯುಗಾಂತಕಾಲದ ವಾಯುವಿನಿಂದ ಕ್ಷೋಭೆಗೊಂಡ, ಮೇಲಿಂದ ಮೇಲೆ ಬರುವ ವೀಚಿತರಂಗಗಳಿಂದ ಕೂಡಿದ ಸಮುದ್ರದಂತೆ ಆಯಿತು.

ಮಧ್ಯಂದಿನಗತಂ ಸೂರ್ಯಮಾಪತಂತಮಿವಾಂಬರೇ ।
ನ ಶೇಕುಃ ಸರ್ವಭೂತಾನಿ ಪಾಂಡವಂ ಪ್ರತಿವೀಕ್ಷಿತುಮ್ ॥ ೩ ॥

ಮಧ್ಯಾಹ್ನದಲ್ಲಿನ ಸಮಯದಲ್ಲಿ ಆಕಾಶದಲ್ಲಿ ಸಾಗುವ ಸೂರ್ಯನಂತೆ ಇದ್ದ ಅರ್ಜುನನನ್ನು ಪ್ರತಿಯಾಗಿ ನೋಡಲು ಯಾವ ಪ್ರಾಣಿಯೂ ಸಮರ್ಥವಾಗಲಿಲ್ಲ.

ಸ ರಣೇ ವ್ಯಚರತ್ ಪಾರ್ಥಃ ಪ್ರೇಕ್ಷ್ಯಮಾಣೋ ಧನಂಜಯಃ ।
ಯುಗಪದ್ ದಿಕ್ಷು ಸರ್ವಾಸು ಸರ್ವಾಣ್ಯಸ್ತ್ರಾಣಿ ದರ್ಶಯನ್ ॥ ೪ ॥

ಅರ್ಜುನನು ರಣರಂಗವನ್ನು ನೋಡುತ್ತಾ ಸಂಚರಿಸಿ, ಎಲ್ಲ ದಿಕ್ಕುಗಳಲ್ಲಿಯೂ ಒಂದೇ ಕಾಲದಲ್ಲಿ ತನ್ನ ಅಸ್ತ್ರಗಳ ಸಾಮರ್ಥ್ಯವನ್ನು ತೋರಿಸಿದನು.

ಆದದಾನಂ ಮಹಾರಾಜ ಸಂದಧಾನಂ ಚ ಪಾಂಡವಮ್ ।
ಉತ್ಕರ್ಷಂತಂ ಸೃಜಂತಂ ಚ ನ ಸ್ಮ ಪಶ್ಯಾಮ ಲಾಘವಾತ್ ॥ ೫ ॥

ಎಲೈ ಮಹಾರಾಜನೇ, ಅವನ ಕ್ಷಿಪ್ರತೆಯಿಂದ ಅರ್ಜುನನು ಬತ್ತಳಿಕೆಯಿಂದ ಬಾಣಗಳನ್ನು ತೆಗೆದುಕೊಳ್ಳುವುದನ್ನೂ, ಬಾಣವನ್ನು ಹೂಡುವುದನ್ನೂ, ಹೆದೆಯನ್ನು ಎಳೆಯುವುದನ್ನೂ ಮತ್ತು ಬಾಣವನ್ನು ಪ್ರಯೋಗಿಸುವುದನ್ನೂ ನಾವು ಕಾಣಲಿಲ್ಲ.

ತತಃ ಕ್ರುದ್ಧೋ ಮಹಾಬಾಹುರೈಂದ್ರಮಸ್ತ್ರಂ ದುರಾಸದಮ್ ।
ಪ್ರಾದುಶ್ಚಕ್ರೇ ಮಹಾರಾಜ ತ್ರಾಸಯನ್ ಸರ್ವಭಾರತಾನ್ ॥ ೬ ॥

ಎಲೈ ಮಹಾರಾಜನೇ, ಆಗ ಮಹಾಬಾಹುವಾದ ಕೋಪಗೊಂಡ ಅರ್ಜುನನು ಎಲ್ಲ ಕೌರವರನ್ನು ಭಯಗೊಳಿಸುತ್ತಾ ಹತ್ತಿರ ಸುಳಿಯಲು ಸಾಧ್ಯವಿಲ್ಲದ ಐಂದ್ರಾಸ್ತ್ರವನ್ನು ಪ್ರಯೋಗಿಸಿದನು.

ತತಃ ಶರಾಃ ಪ್ರಾದುರಾಸನ್ ದಿವ್ಯಾಸ್ತ್ರಪ್ರತಿಮಂತ್ರಿತಾಃ ।
ಪ್ರದೀಪ್ತಾಶ್ಚ ಶಿಖಿಮುಖಾಃ ಶತಶೋಽಥ ಸಹಸ್ರಶಃ ॥ ೭ ॥

ಆಗ ಜ್ವಲಿಸುವ ಅಗ್ರಭಾಗವುಳ್ಳ ದಿವ್ಯಾಸ್ತ್ರಮಂತ್ರಿತವಾದ ಬಾಣಗಳು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಪ್ರಾದುರ್ಭವಿಸಿದವು.

ಆಕರ್ಣಪೂರ್ಣನಿರ್ಮುಕ್ತೈರಗ್ನ್ಯರ್ಕಶುನಿಭೈಃ ಶರೈಃ ।
ನಭೋಽಭವತ್ ತದ್ದುಷ್ಪ್ರೇಕ್ಷ್ಯಮುಲ್ಕಾಭಿರಿವ ಸಂವೃತಮ್ ॥ ೮ ॥

ಕಿವಿಯವರೆಗೂ ಹೆದೆಯನ್ನು ಪೂರ್ಣವಾಗಿ ಎಳೆದು ಪ್ರಯೋಗಿಸಿದ, ಸೂರ್ಯನ-ಅಗ್ನಿಯ ಕಿರಣಗಳನ್ನು ಹೋಲುವ ಬಾಣಗಳಿಂದ ತುಂಬಿದ ಆಕಾಶವು ಉಲ್ಕೆಗಳಿಂದ ತುಂಬಿದಂತೆ ನೋಡಲು ಅಸಾಧ್ಯವಾಯಿತು.

ತತಃ ಶಸ್ತ್ರಾಂಧಕಾರಂ ತತ್ ಕೌರವ್ಯೈಃ ಸಮುದೀರಿತಮ್ ।
ಅಶಕ್ಯಂ ಮನಸಾಽಪ್ಯನ್ಯೈಃ ಪಾಂಡವಃ ಸಂಭ್ರಮನ್ನಿವ ॥ ೯ ॥

ನಾಶಯಾಮಾಸ ವಿಕ್ರಮ್ಯ ಶರೈರ್ದಿವ್ಯಾಸ್ತ್ರಮಂತ್ರಿತೈಃ ।
ನೈಶಂ ತಮೋಽಂಶುಭಿಃ ಕ್ಷಿಪ್ರಂ ದಿನಾದಾವಿವ ಭಾಸ್ಕರಃ ॥ ೧೦ ॥

ಆಗ ಕೌರವರು ಉಂಟುಮಾಡಿದ ಬೇರೆಯವರು ನಾಶ ಮಾಡಲು ಮನಸ್ಸಿನಿಂದಲೂ ಯೋಚಿಸಲಾಗದ ಶಸ್ತ್ರಾಂಧಕಾರವನ್ನು ಅರ್ಜುನನು ಕ್ಷಿಪ್ರವಾಗಿ ದಿವ್ಯಾಸ್ತ್ರಮಂತ್ರಿತವಾದ ಬಾಣಗಳಿಂದ ದಿನದ ಆರಂಭದಲ್ಲಿ ತನ್ನ ಕಿರಣಗಳಿಂದ ಸೂರ್ಯನು ರಾತ್ರಿಯ ಕತ್ತಲನ್ನು ಶೀಘ್ರವಾಗಿ ನಾಶ ಮಾಡುವಂತೆ ನಾಶ ಮಾಡಿದನು.

ತತಸ್ತು ತಾವಕಂ ಸೈನ್ಯಂ ದೀಪ್ತೈಃ ಶರಗಭಸ್ತಿಭಿಃ ।
ಆಕ್ಷಿಪತ್ ಪಲ್ವಲಾಂಬೂನಿ ನಿದಾಘಾರ್ಕ ಇವ ಪ್ರಭುಃ ॥ ೧೧ ॥

ಅನಂತರ ತನ್ನ ದೀಪ್ತವಾದ ಬಾಣಗಳೆಂಬ ಕಿರಣಗಳಿಂದ ಪ್ರಭುವಾದ ಅರ್ಜುನನು ಬೇಸಿಗೆಯ ಕಾಲದ ಸೂರ್ಯನು ಔಗು ಪ್ರದೇಶದ ನೀರನ್ನು ಒಣಗಿಸುವಂತೆ ನಿನ್ನ ಸೈನ್ಯವನ್ನು ತಾಪಗೊಳಿಸಿದನು.

ತತೋ ದಿವ್ಯಾಸ್ತ್ರವಿದುಷಾ ಪ್ರಹಿತಾಃ ಸಾಯಕಾಂಶವಃ ।
ಸಮಾಪ್ಲವನ್ ದ್ವಿಷತ್ಸೈನ್ಯಂ ಲೋಕಂ ಭಾನೋರಿವಾಂಶವಃ ॥ ೧೨ ॥

ಆಗ ದಿವ್ಯಾಸ್ತ್ರವೇದಿಯಾದ ಅರ್ಜುನನಿಂದ ಕಳುಹಿಸಲ್ಪಟ್ಟ ಬಾಣಗಳ ಕಿರಣಗಳು ಸೂರ್ಯಕಿರಣಗಳು ಲೋಕವನ್ನು ತುಂಬಿದಂತೆ ಶತ್ರುಸೈನ್ಯವನ್ನು ತುಂಬಿದವು.

ಅಥಾಪರೇ ಸಮುತ್ಪ್ಲಾ ವಿಶಿಖಾಸ್ತಿಗ್ಮತೇಜಸಃ ।
ಹೃದಯಾನ್ಯಾಶು ವೀರಾಣಾಂ ವಿವಿಶುಃ ಪ್ರಿಯಬಂಧುರವತ್ ॥ ೧೩ ॥

ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಕ್ರೂರವಾದ ಸಾಮರ್ಥ್ಯವುಳ್ಳ ಬೇರೆ ಬಾಣಗಳು ಪ್ರಿಯಬಂಧುಗಳಂತೆ ವೀರರ ಹೃದಯವನ್ನು ಪ್ರವೇಶಿಸಿದವು.

ಯ ಏನಮೀಯುಃ ಸಮರೇ ತದ್ಯೋಧಾಃ ಶೂರಮಾನಿನಃ ।
ಶಲಭಾ ಇವ ತೇ ದೀಪ್ತಮಗ್ನಿಂ ಪ್ರಾಪ್ಯ ಯಯುಃ ಕ್ಷಯಮ್ ॥ ೧೪ ॥

ಅರ್ಜುನನನ್ನು ಸಮೀಪಿಸಿದ ತಮ್ಮನ್ನು ಶೂರರೆಂದು ತಿಳಿಯುವ ನಿನ್ನ ಯೋಧರು ಜ್ವಲಿಸುವ ಅಗ್ನಿಯನ್ನು ಸಮೀಪಿಸಿದ ಪತಂಗಗಳಂತೆ ವಿನಾಶವನ್ನು ಹೊಂದಿದರು.

ಏವಂ ಸ ಮೃದ್ನನ್ ಶತ್ರೂಣಾಂ ಜೀವಿತಾನಿ ಯಶಾಂಸಿ ಚ ।
ಪಾರ್ಥಶ್ಚಚಾರ ಸಂಗ್ರಾಮೇ ಮೃತ್ಯುರ್ವಿಗ್ರಹವಾನಿವ ॥ ೧೫ ॥

ಹೀಗೆ ಅರ್ಜುನನು ಶತ್ರುಗಳ ಜೀವಿತವನ್ನೂ ಮತ್ತು ಕೀರ್ತಿಯನ್ನೂ ನಾಶ ಪಡಿಸುತ್ತಾ, ವಿಗ್ರಹವನ್ನು ಧರಿಸಿದ ಯಮನಂತೆ ರಣರಂಗದಲ್ಲಿ ಸಂಚರಿಸಿದನು.

ಸ ಕಿರೀಟಾನಿ ವಸ್ತ್ರಾಣಿ ಸಾಂಗದಾನ್ ವಿಪುಲಾನ್ ಭುಜಾನ್ ।
ಸಕುಂಡಲಯುಗಾನ್ ಕರ್ಣಾನ್ ಕೇಷಾಂಚಿದಹರಚ್ಛರೈಃ ॥ ೧೬ ॥

ಅವನು ತನ್ನ ಬಾಣಗಳಿಂದ ಕೆಲವರ ಕಿರೀಟಗಳನ್ನೂ, ವಸ್ತ್ರವನ್ನೂ, ಆಂಗದ ಯುಕ್ತವಾದ ವಿಪುಲವಾದ ಭುಜಗಳನ್ನೂ, ಕರ್ಣ-ಕುಂಡಲಗಳಿಂದ ಸಹಿತವಾದ ಕಿವಿಗಳನ್ನೂ ಕತ್ತರಿಸಿದನು.

ಸತೋಮರಾನ್ ಗಜಸ್ಥಾನಾಂ ಸಪ್ರಾಸಾನ್ ಹಯಸಾದಿನಾಮ್ ।
ಸಚರ್ಮಣಃ ಪದಾತೀನಾಂ ರಥಿನಾಂ ಚ ಸಧನ್ವನಃ ॥
ಸಪ್ರತೋದಾನ್ನಿಯಂತೃಣಾಂ ಬಾಹೂಂಶ್ಚಿಚ್ಛೇದ ಪಾಂಡವಃ ॥ ೧೭ ॥

ಅರ್ಜುನನು ಗಜಾರೋಹಿಗಳ ತೋಮರ ಸಹಿತವಾದ ಬಾಹುಗಳನ್ನೂ, ಅಶ್ವಾರೋಹಿಗಳ ಪ್ರಾಸ ಸಹಿತವಾದ ಬಾಹುಗಳನ್ನೂ, ಪದಾತಿಗಳ ಗುರಾಣಿಯಿಂದ ಸಹಿತವಾದ ಬಾಹುಗಳನ್ನೂ, ರಥಿಕರ ಧನುಸ್ಸಿನಿಂದ ಸಹಿತವಾದ ಬಾಹುಗಳನ್ನೂ, ಸಾರಥಿಗಳ ಚಾವಟಿಯಿಂದ ಸಹಿತವಾದ ಬಾಹುಗಳನ್ನೂ ಕತ್ತರಿಸಿದನು.

ಪ್ರದೀಪ್ತೋಗ್ರಶರಾರ್ಚಿಷ್ಮಾನ್ ಬಭೌ ತತ್ರ ಧನಂಜಯಃ ।
ಸವಿಷ್ಫುಲಿಂಗಾಗ್ನಿಶಿಖೋ ಜ್ವಲನ್ನಿವ ಹುತಾಶನಃ ॥ ೧೮ ॥

ಅರ್ಜುನನು ರಣರಂಗದಲ್ಲಿ ಜ್ವಲಿಸುವ ಉಗ್ರವಾದ ಬಾಣಗಳೆಂಬ ಕಿಡಿಗಳಿಂದ ಕೂಡಿದವನಾಗಿ, ಕಿಡಿಗಳಿಂದ ಮತ್ತು ಉಗ್ರಜ್ವಾಲೆಗಳಿಂದ ಜ್ವಲಿಸುವ ಅಗ್ನಿಯಂತೆ ಶೋಭಿಸಿದನು.

ತಂ ದೇವರಾಜಪ್ರತಿಮಂ ಸರ್ವಶಸ್ತ್ರಭೃತಾಂ ವರಮ್ ।
ಯುಗಪದ್ ದಿಕ್ಷು ಸರ್ವಾಸು ರಥಸ್ಥಂ ಪುರುಷರ್ಷಭಮ್ ॥ ೧೯ ॥

ನಿಕ್ಷಿಪಂತಂ ಮಹಾಸ್ತ್ರಾಣಿ ಪ್ರೇಕ್ಷಣೀಯಂ ಧನಂಜಯಮ್ ।
ನೃತ್ಯಂತಂ ರಥಮಾರ್ಗೇಷು ಧನುರ್ಜ್ಯಾತಳನಾದಿನಮ್ ॥ ೨೦ ॥

ನಿರೀಕ್ಷಿತುಂ ನ ಶೇಕುಸ್ತೇ ಯತ್ನವಂತೋಽಪಿ ಪಾರ್ಥಿವಾಃ ।
ಮಧ್ಯಂದಿನಗತಂ ಸೂರ್ಯಂ ಪ್ರತಪಂತಮಿವಾಂಬರೇ ॥ ೨೧ ॥

ಇಂದ್ರನನ್ನು ಹೋಲುವ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಏಕಕಾಲದಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಮಹಾಸ್ತ್ರವನ್ನು ಪ್ರಯೋಗಿಸುವ, ಮನೋಹರನಾದ, ರಥ ಮಾರ್ಗಗಳಲ್ಲಿ ನರ್ತನವನ್ನು ಮಾಡುವ, ಧನುಸ್ಸಿನ ಮತ್ತು ಜ್ಯಾತಳದ ಘೋಷದಿಂದ ಕೂಡಿದ, ರಥಶ್ರೇಷ್ಠನಾದ ಪುರುಷಶ್ರೇಷ್ಠನಾದ ಮಧ್ಯಾಹ್ನದಲ್ಲಿ ಆಕಾಶದಲ್ಲಿ ಜ್ವಲಿಸುವ ಸೂರ್ಯನಂತಿದ್ದ ಅರ್ಜುನನನ್ನು ನೋಡಲು ಪ್ರಯತ್ನಪಟ್ಟರೂ ಆ ಶತ್ರುರಾಜರು ಸಮರ್ಥರಾಗಲಿಲ್ಲ.

ದೀಪ್ತೋಗ್ರಸಂಭೃತಶರಃ ಕಿರೀಟೀ ವಿರರಾಜ ಹ ।
ವರ್ಷಾಸ್ವಿವೋದೀರ್ಣಜಲಃ ಸೇಂದ್ರಧನ್ವಾಂಬುದೋ ಮಹಾನ್ ॥ ೨೨ ॥

ಜ್ವಲಿಸುವ ಉಗ್ರ ಬಾಣಗಳಿಂದ ಕೂಡಿದ ಅರ್ಜುನನು ಮಳೆಗಾಲದಲ್ಲಿ ಬಹಳ ಜಲವನ್ನು ಹೊಂದಿ ಕಾಮನಬಿಲ್ಲಿನಿಂದ ಕೂಡಿದ ದೊಡ್ಡ ಮೋಡದಂತೆ ವಿರಾಜಿಸಿದನು.

ಮಹಾಸ್ತ್ರಸಂಪ್ಲವೇ ತಸ್ಮಿನ್ ಜಿಷ್ಣುನಾ ಸಂಪ್ರವರ್ತಿತೇ ।
ಸುದುಸ್ತರೇ ಮಹಾಘೋರೇ ಮಮಜ್ಜುರ್ಯೋಧಪುಂಗವಾಃ ॥ ೨೩ ॥

ಅರ್ಜುನನಿಂದ ಪ್ರವರ್ತಿತವಾದ, ದಾಟಲು ಅಸಾಧ್ಯವಾದ, ಅತ್ಯಂತ ಘೋರವಾದ, ಮಹಾಸ್ತ್ರಗಳ ಪ್ರವಾಹದಲ್ಲಿ ಯೋಧಶ್ರೇಷ್ಠರು ಮುಳುಗಿಹೋದರು.

ಉತ್ಕೃತ್ತವದನೈರ್ದೇಹೈಃ ಶರೀರೈಃ ಕೃತ್ತಬಾಹುಭಿಃ ।
ಭುಜೈಶ್ಚ ಪಾಣಿನಿರ್ಮುಕ್ತೈಃ ಪಾಣಿಭಿರ್ವ್ಯಂಗುಳೀಕೃತೈಃ ॥ ೨೪ ॥

ಕೃತ್ತಾಗ್ರಹಸ್ತೈಃ ಕರಿಭಿಃ ಕೃತ್ತದಂತೈರ್ಮದೋತ್ಕಟೈಃ ।
ಹಯೈಶ್ಚ ವಿಧುರಗ್ರೀವೈ ರಥೈಶ್ಚ ಶಕಲೀಕೃತೈಃ ॥ ೨೫ ॥

ನಿಕೃತ್ತಾಸ್ತ್ರೈಃ ಕೃತಪಾದೈಸ್ತಥಾಽನ್ಯೈಃ ಕೃತಸಂಧಿಭಿಃ ।
ನಿಶ್ಚೇಷ್ಟೈರ್ವಿಪ್ರಧರ್ಷಿಶ್ಚ ಶತಶೋಽಥ ಸಹಸ್ರಶಃ ॥ ೨೬ ॥

ಮೃತ್ಯೋರಾಘಾತಲಲಿತಂ ತತ್ಪಾರ್ಥಾಯೋಧನಂ ಮಹತ್ ।
ಅಪಶ್ಯಾಮ ಮಹೀಪಾಲ ಭೀರೂಣಾಂ ಭಯವರ್ಧನಮ್ ॥ ೨೭ ॥

ಶಿರಸ್ಸನ್ನು ಕತ್ತರಿಸಿದ ದೇಹಗಳಿಂದಲೂ, ಬಾಹುಗಳನ್ನು ಕತ್ತರಿಸಿದ ಶರೀರಗಳಿಂದಲೂ, ಹಸ್ತರಹಿತವಾದ ಭುಜಗಳಿಂದಲೂ, ಅಂಗುಲಿಗಳಿಂದ ರಹಿತವಾದ ಹಸ್ತಗಳಿಂದಲೂ, ಸೊಂಡಿಲನ್ನು ಕತ್ತರಿಸಿದ ದಂತವನ್ನು ಭಗ್ನಗೊಳಿಸಿದ ಮದೋದ್ಕಟವಾದ ಗಜಗಳಿಂದಲೂ, ಕತ್ತಿಲ್ಲದ ಅಶ್ವಗಳಿಂದಲೂ, ಪುಡಿಮಾಡಲ್ಪಟ್ಟ ರಥಗಳಿಂದಲೂ, ಕತ್ತರಿಸಲ್ಪಟ್ಟ ಕರುಳುಗಳಿಂದಲೂ, ಕತ್ತರಿಸಲ್ಪಟ್ಟ ಪಾದಗಳಿಂದಲೂ, ಹಾಗೆಯೇ ಕತ್ತರಿಸಲ್ಪಟ್ಟ ಸಂಧಿಗಳಿಂದಲೂ ನಿಶ್ಚೇಷ್ಟರಾದ ಅಥವಾ ಶತಸಹಸ್ರಸಂಖ್ಯೆಯಲ್ಲಿ ಹೊರಳಾಡುತ್ತಿರುವ ಯೋಧರಿಂದಲೂ ಕೂಡಿದ ಎಲೈ ಮಹೀಪಾಲನೇ, ಭೀರುಗಳಿಗೆ ಭಯವನ್ನು ಹೆಚ್ಚಿಸುವ ಆ ದೊಡ್ಡ ರಣಭೂಮಿಯು ಮೃತ್ಯುವಿನ ವಧಾಸ್ಥಾನದಂತಿರುವುದನ್ನು ಪಾರ್ಥನನ್ನು ನಾವು ನೋಡಿದೆವು.

ಆಕ್ರೀಡಮಿವ ರುದ್ರಸ್ಯ ಪುರಾಭ್ಯರ್ದಯತಃ ಪಶೂನ್ ।
ಗಜಾನಾಂ ಕ್ಷುರನಿರ್ಮುಕ್ತೈಃ ಕರ್ಕೈಃ ಸಭುಜಗೇವ ಭೂಃ ॥ ೨೮ ॥

ಕ್ವಚಿದ್ ಬಭೌ ಸ್ರಗ್ವಿಣೇವ ವಕ್ತ್ರಪದ್ಮೈಃ ಸಮಾಚಿತಾ ।
ವಿಚಿತ್ರೋಷ್ಣೀಷಮುಕುಟೈಃ ಕೇಯೂರಾಂಗಕುಂಡಲೈಃ ॥ ೨೯ ॥

ಸ್ವರ್ಣಚಿತ್ರತನುತ್ರೈಶ್ಚ ಭಾಂಡೈಶ್ಚ ಗಜವಾಜಿನಾಮ್ ।
ಕಿರೀಟಶತಸಂಕೀರ್ಣಾ ತತ್ರ ತತ್ರ ಸಮಾಚಿತಾ ।
ವಿರರಾಜ ಭೃಶಂ ಚಿತ್ರಾ ಮಹೀ ನವವಧೂರಿವ ॥ ೩೦ ॥

ಹಿಂದೆ ಪಶುಗಳನ್ನು ಸಂಹರಿಸುವ ರುದ್ರದೇವರ ವಿಹಾರ ಸ್ಥಾನದಂತೆ ಭೂಮಿಯು ಕೆಲವು ಕಡೆ ಗಜಗಳ ಕತ್ತರಿಸಲ್ಪಟ್ಟ ಸೊಂಡಿಲುಗಳಿಂದ ಸರ್ಪಗಳಿಂದ ಕೂಡಿರುವಂತೆಯೂ, ಮುಖಕಮಲಗಳಿಂದ ತುಂಬಿದ ಒಂದು ಕಡೆ ಮಾಲೆಯನ್ನು ಧರಿಸಿರುವಂತೆಯೂ, ಯೋಧರ ವಿಚಿತ್ರವಾದ ಉಷ್ಣೀಷ ಮತ್ತು ಕಿರೀಟದಿಂದಲೂ, ಕೇಯೂರಾಂಗದ ಕುಂಡಲಗಳಿಂದಲೂ, ಸ್ವರ್ಣಖಚಿತವಾದ ಕವಚಗಳಿಂದಲೂ, ಗಜಾಶ್ವಗಳ ಅಲಂಕಾರಸಾಮಗ್ರಿಗಳಿಂದಲೂ, ಅಲ್ಲಲ್ಲಿ ಬಿದ್ದ ನೂರಾರು ಕಿರೀಟಗಳಿಂದಲೂ, ನಿಬಿಡವಾಗಿಯೂ, ಚಿತ್ರವಾಗಿಯೂ ತೋರುತ್ತಿದ್ದ ಭೂಮಿಯು ನವವಧುವಿನಂತೆ ಶೋಭಿಸಿತು.

ಮಜ್ಜಾಮೇದಃಕರ್ದಮಿನೀಂ ಶೋಣಿತೌಘತರಂಗಿಣೀಮ್ ।
ಮರ್ಮಾಸ್ಥಿಬಿರಗಾಧಾಂ ಚ ಕೇಶಶೈವಲಶಾದ್ವಲಾಮ್ ॥ ೩೧ ॥

ಶಿರೋಬಾಹೂಪಲತಟಾಂ ರುಗ್ಣಕ್ರೋಡಾಸ್ಥಿಸಂಕಟಾಮ್ ।
ಚಿತ್ರಧ್ವಜಪತಾಕಾಢ್ಯಾಂ ಧೃತಚಾಪೌರ್ಮಿಮಾಲಿನೀಮ್ ॥ ೩೨ ॥

ವಿಗತಾಸುಮಹಾಕಾಯಾಂ ಗಜದೇಹಾಭ್ರಸಂಕುಲಾಮ್ ।
ರಥೋಡುಪಶತಾಕೀರ್ಣಾಂ ಹಯಸಂಘಾತರೋಧಸಮ್ ॥ ೩೩ ॥

ಮಜ್ಜೆ-ಮೇದಸ್ಸುಗಳೆಂಬ ಕೆಸರಿನಿಂದ ಕೂಡಿದ, ರಕ್ತಸಮೂಹವೆಂಬ ತರಂಗಗಳಿಂದ ಕೂಡಿದ, ಮರ್ಮಸ್ಥಾನವೆಂಬ ಮೂಳೆಯಿಂದ ಬಹಳ ಆಳವಾದ, ಕೇಶಗಳೆಂಬ ಶೈವಲ ಮತ್ತು ಮೃದುಪ್ರದೇಶಗಳನ್ನು ಹೊಂದಿದ, ಶಿರಸ್ಸು ಮತ್ತು

ಬಾಹುಗಳೆಂಬ ಕಲ್ಲಿನ ದಡವನ್ನು ಹೊಂದಿದ, ಭಗ್ನವಾದ ಕ್ರೋಡಗಳ ಅಸ್ಥಿಗಳಿಂದ ನಿಬಿಡವಾದ, ವಿಚಿತ್ರಧ್ವಜವೆಂಬ ಪತಾಕೆಗಳಿಂದ ಕೂಡಿದ, ಛತ್ರ ಮತ್ತು ಧನುಸ್ಸೆಂಬ ಅಲೆಗಳಿಂದ ಕೂಡಿದ, ಮೃತರ ದೇಹಗಳೆಂಬ ದೊಡ್ಡ ಶರೀರವುಳ್ಳ, ಗಜದೇಹಗಳಿಂದ ನಿಬಿಡವಾದ, ರಥಗಳೆಂಬ ನೂರಾರು ಚಂದ್ರಗಳಿಂದ ಕೂಡಿದ, ಅಶ್ವಸಮೂಹವೆಂಬ ತೀರವುಳ್ಳ;

ರಥಚಕ್ರಯುಗೇಷಾಕ್ಷಕೂಬರೈರತಿದುರ್ಗಮಾಮ್ ।
ಪ್ರಾಸಾಸಿಶಕ್ತಿಪರಶುವಿಶಿಖಾಹಿದುರಾಸದಾಮ್ ॥ ೩೪ ॥

ಬಲಕಂಕಮಹಾನಕ್ರಾಂ ಗೋಮಾಯುಮಕರೋತ್ಕಟಾಮ್ ।
ಗೃಧ್ರೋದಗ್ರಮಹಾಗ್ರಾಹಾಂ ಶಿವಾವಿರುತಭೈರವಾಮ್ ॥ ೩೫ ॥

ನೃತ್ಯತ್ಪೈತಪಿಶಾಚಾಗ್ರೈರ್ಭೂತಾಕೀರ್ಣಾಂ ಸಹಸ್ರಶಃ ।
ಗತಾಸುಯೋಧನಿಶ್ಚೇಷ್ಟಶರೀರಶತವಾಹಿನೀಮ್ ॥ ೩೬ ॥

ಮಹಾಪ್ರತಿಭಯಾಂ ರೌದ್ರಾಂ ಘೋರಾಂ ವೈತರಣೀಮಿವ ।
ನದೀಂ ಪ್ರವರ್ತಯಾಮಾಸ ಭೀರೂಣಾಂ ಭಯವರ್ಧಿನೀಮ್ ॥ ೩೭ ॥

ಭಗ್ನವಾದ ರಥದ ಚಕ್ರಗಳು, ನೊಗಗಳು, ಮೂಕಿಗಳು, ತೂಬುಗಳು, ಕೂಬರಗಳು- ಇವುಗಳಿಂದ ಅತ್ಯಂತ ದುರ್ಗಮವಾದ, ಪ್ರಾಸಗಳು, ಖಡ್ಗಗಳು, ಶಕ್ತಿಗಳು, ಪರಶುಗಳು, ಬಾಣಗಳು ಎಂಬ ಸರ್ಪಗಳಿಂದ ಸಮೀಪ ಸುಳಿಯಲು ಅಸಾಧ್ಯವಾದ, ಬಲ-ಕಂಕ ಪಕ್ಷಿಗಳೆಂಬ ಮಹಾಮೊಸಳೆಗಳಿಂದ ಕೂಡಿದ, ನರಿಗಳೆಂಬ ದೊಡ್ಡ ಮೊಸಳೆಗಳಿಂದ ಉತ್ಕಟವಾದ, ಹದ್ದುಗಳೆಂಬ ಕ್ರೂರವಾದ ಮಹಾ ಮೊಸಳೆಗಳಿಂದ ಕೂಡಿದ, ಹೆಣ್ಣುನರಿಗಳ ರೋದನದಿಂದ ಭಯಂಕರವಾದ, ನರ್ತಿಸುವ ಪ್ರೇತ-ಪಿಶಾಚಿಗಳಿಂದ ಕೂಡಿದ, ಸಹಸ್ರಾರು ಭೂತಗಳಿಂದ ತುಂಬಿದ, ಮೃತರಾದ ಯೋಧರ ನಿಶ್ಚೇಷ್ಟವಾದ ನೂರಾರು ಶರೀರಗಳನ್ನು ಕೊಚ್ಚಿಕೊಂಡು ಹೋಗುವ, ಮಹಾಭಯಂಕರವೂ, ರೌದ್ರವೂ, ವೈತರಣಿಯಂತೆ ಘೋರವೂ, ಭೀರುಗಳಿಗೆ (ಹೇಡಿಗಳಿಗೆ) ಭಯವರ್ಧಿನಿಯೂ ಆದ ನದಿಯನ್ನು ಅರ್ಜುನನು ಹರಿಸಿದನು.

ತಂ ದೃಷ್ಟ್ವಾ ತಸ್ಯ ವಿಕ್ರಾಂತಮಂತಕಸ್ಯೇವ ರೂಪಿಣಃ ।
ಅಭೂತಪೂರ್ವಂ ಕುರುಷು ಭಯಮಾಗಾದ್ ರಣಾಜಿರೇ ॥ ೩೮ ॥

ಶರೀರವನ್ನು ಧರಿಸಿದ ಯಮನಂತೆ ಇದ್ದ ಅವನ ಹಿಂದೆಂದೂ ಕಾಣದ ಆ ಪರಾಕ್ರಮವನ್ನು ನೋಡಿ ರಣರಂಗದಲ್ಲಿ ಕುರುಸೇನೆಗೆ ಭಯವುಂಟಾಯಿತು.

ತತ ಆದಾಯ ವೀರಾಣಾಮಸ್ತ್ರೈರಸ್ತ್ರಾಣಿ ಪಾಂಡವಃ ।
ಆತ್ಮಾನಂ ರೌದ್ರಮಾಚಷ್ಟ ರೌದ್ರಕರ್ಮಣ್ಯಧಿಷ್ಠಿತಃ ॥ ೩೯ ॥

ತತೋ ರಥವರಾನ್ ರಾಜನ್ನತೃತಿಕ್ರಾಮದರ್ಜುನಃ ॥ ೪೦ ॥

ಆಗ ಪಾಂಡವನಾದ ಅರ್ಜುನನು ವೀರರ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ನುಂಗಿ ಹಾಕುತ್ತಾ ಭಯಂಕರವಾದ ಕರ್ಮವನ್ನು ಮಾಡುವವನಾಗಿ ತನ್ನನ್ನು ಭಯಂಕರವಾಗಿ ತೋರಿಸಿಕೊಳ್ಳುತ್ತಾ ಎಲ್ಲ ರಥಶ್ರೇಷ್ಠರನ್ನೂ ಮೀರಿಸಿದನು.

ಮಧ್ಯಂದಿನಗತಂ ಸೂರ್ಯಂ ಪ್ರತಪಂತಮಿವಾಂಬರೇ ।
ನ ಶೇಕುಃ ಸರ್ವಭೂತಾನಿ ಪಾಂಡವಂ ಪ್ರತಿವೀಕ್ಷಿತುಮ್ ॥ ೪೧ ॥

ಮಧ್ಯಾಹ್ನದ ಕಾಲದಲ್ಲಿ ಆಕಾಶದಲ್ಲಿ ಜ್ವಲಿಸುವ ಸೂರ್ಯನಂತೆ ಇರುವ ಅರ್ಜುನನನ್ನು ನೋಡಲು ಯಾವ ಪ್ರಾಣಿಗಳೂ ಶಕ್ತವಾಗಲಿಲ್ಲ.

ಪ್ರಸೃತಾಂಸ್ತಸ್ಯ ಗಾಂಡೀವಾತ್ ಶರವ್ರಾತಾನ್ ಮಹಾತ್ಮನಃ ।
ಸಂಗ್ರಾಮೇ ಸಂಪ್ರಪಶ್ಯಾಮೋ ಹಂಸಪಂಕ್ತಿಮಿವಾಂಬರೇ ॥ ೪೨ ॥

ಆ ಮಹಾತ್ಮನ ಗಾಂಡೀವದಿಂದ ರಣರಂಗದಲ್ಲಿ ಹೊರಹೊಮ್ಮಿದ ಬಾಣ ಸಮೂಹಗಳನ್ನು ಆಕಾಶದಲ್ಲಿ ಚಲಿಸುವ ಹಂಸಪಕ್ಷಿಗಳ ಪಂಕ್ತಿಯಂತೆ ನಾವು ನೋಡಿದೆವು.

ವಿನಿವಾರ್ಯ ಸ ವೀರಾಣಾಮಸ್ತ್ರೈರಸ್ತ್ರಾಣಿ ಸರ್ವತಃ ।
ದರ್ಶಯನ್ ರೌದ್ರಮಾತ್ಮಾನಮುಗ್ರೇ ಕರ್ಮಣಿ ಧಿಷ್ಠಿತಃ ॥ ೪೩ ॥

ಸ ತಾನ್ ರಥವರಾನ್ ರಾಜನ್ನತ್ಯಾಕ್ರಾಮತ್ತದಾರ್ಜುನಃ ।
ಮೋಹಯನ್ನಿವ ನಾರಾಚೈರ್ಜಯದ್ರಥವಧೇಪ್ಸಯಾ ॥ ೪೪ ॥

ಅರ್ಜುನನು ವೀರರ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ಎಲ್ಲ ಕಡೆಗಳಲ್ಲಿಯೂ ನಿವಾರಿಸಿ, ಉಗ್ರವಾದಕರ್ಮವನ್ನು ಮಾಡುವವನಾಗಿ ತನ್ನನ್ನು ಉಗ್ರವಾಗಿ ತೋರಿಸಿಕೊಳ್ಳುತ್ತಾ, ಎಲ್ಲ ರಥಶ್ರೇಷ್ಠರನ್ನೂ ಮೀರಿ ಜಯದ್ರಥನನ್ನು ಕೊಲ್ಲುವ ಅಭಿಪ್ರಾಯದಿಂದ ಕೌರವ ಯೋಧರನ್ನು ಮರುಳುಗೊಳಿಸುವಂತೆ ತೋರಿದನು.

ವಿಸೃಜನ್ ದಿಕ್ಷು ಸರ್ವಾಸು ಶರಾನಚ್ಯುತಸಾರಥಿಃ ।
ಸರಥೋ ವ್ಯಚರತ್ತೂರ್ಣಂ ಪ್ರೇಕ್ಷಣೀಯೋ ಧನಂಜಯಃ ॥ ೪೫ ॥

ಅಚ್ಯುತಸಾರಥಿಯಾದ ಧನಂಜಯನು ಎಲ್ಲ ದಿಕ್ಕುಗಳಲ್ಲಿಯೂ ಬಾಣಗಳನ್ನು ಪ್ರಯೋಗಿಸುತ್ತಾ ರಥಸಹಿತನಾಗಿ, ಮನೋಹರನಾಗಿ ತೀವ್ರವಾಗಿ ಸಂಚರಿಸಿದನು.

ಭ್ರಮಂತ ಇವ ಶೂರಸ್ಯ ಶರವ್ರಾತಾ ಮಹಾತ್ಮನಃ ।
ಅದೃಶ್ಯಂತಾಂತರಿಕ್ಷಸ್ಥಾಃ ಶತಶೋಽಥ ಸಹಸ್ರಶಃ ॥ ೪೬ ॥

ಮಹಾತ್ಮನಾದ ಶೂರನ ಅವನ ಬಾಣಸಮೂಹಗಳು ನೂರಾರು ಸಾವಿರಾರು ಸಂಖ್ಯೆಯಲ್ಲಿ ಅಂತರಿಕ್ಷದಲ್ಲಿ ಸಂಚರಿಸುತ್ತಿರುವಂತೆ ಕಂಡುಬಂದವು.

ಆದದಾನಂ ಮಹೇಷ್ವಾಸಂ ಸಂದಧಾನಂ ಚ ಸಾಯಕಮ್ ।
ವಿಸೃಜಂತಂ ಚ ಕೌಂತೇಯಂ ನಾನುಪಶ್ಯಾಮ ವೈ ತದಾ ॥ ೪೭ ॥

ಆಗ ಮಹಾಧನುರ್ಧಾರಿಯಾದ ಕೌಂತೇಯನು ಬಾಣಗಳನ್ನು ತೆಗೆದುಕೊಳ್ಳುವುದನ್ನು, ಹೂಡುವುದನ್ನು, ಪ್ರಯೋಗಿಸುವುದನ್ನು ನಾವು ಕಾಣಲಿಲ್ಲ.

ತಥಾ ಸರ್ವಾ ದಿಶೋ ರಾಜನ್ ಸರ್ವಾಂಶ್ಚ ರಥಿನೋ ರಣೇ ।
ಆಕುಲೀಕೃತ್ಯ ಕೌಂತೇಯೋ ಜಯದ್ರಥಮುಪಾದ್ರವತ್ ।
ವಿವ್ಯಾಧ ಚ ಚತುಃಷಷ್ಟ್ಯಾ ಶರಾಣಾಂ ನತಪರ್ವಣಾಮ್ ॥ ೪೮ ॥

ಎಲೈ ರಾಜನೇ, ಆ ರೀತಿಯಲ್ಲಿ ರಣರಂಗದಲ್ಲಿ ಎಲ್ಲ ದಿಕ್ಕುಗಳನ್ನೂ ಮತ್ತು ಎಲ್ಲ ಮಹಾರಥರನ್ನೂ ವ್ಯಾಕುಲಗೊಳಿಸಿ ಸೈಂಧವನನ್ನು ಸಮೀಪಿಸಿ ಬಾಗಿದ ತುದಿಯುಳ್ಳ ಅರವತ್ನಾಲ್ಕು ಬಾಣಗಳಿಂದ ಹೊಡೆದನು.

ಸೈಂಧವಾಭಿಮುಖಂ ಯಾಂತಂ ಯೋಧಾಃ ಸಂಪ್ರೇಕ್ಷ್ಯ ಪಾಂಡವಮ್ ।
ನ್ಯವರ್ತಂತ ರಣಾದ್ವೀರಾಃ ನಿರಾಶಾಸ್ತಸ್ಯ ಜೀವಿತೇ ॥ ೪೯ ॥

ಸೈಂಧವನಿಗೆ ಅಭಿಮುಖವಾಗಿ ಹೋಗುವ ಅರ್ಜುನನನ್ನು ನೋಡಿ ಯೋಧರು ಸೈಂಧವರ ಜೀವನದಲ್ಲಿ ನಿರಾಶರಾಗಿ ರಣರಂಗದಿಂದ ಹಿಂದಿರುಗಿದರು.

ಯೋಽಯೋಧ್ಯಧಾವದಾಕ್ರಂದೇ ತಾವಕಃ ಪಾಂಡವಂ ರಣೇ ।
ತಸ್ಯ ತಸ್ಯಾಂತಗಾ ಬಾಣಾಃ ಶರೀರೇ ನ್ಯಪತನ್ ಪ್ರಭೋ ॥ ೫೦ ॥

ಎಲೈ ಪ್ರಭುವೇ, ಯಾವ ಯಾವ ನಿನ್ನವನು ರಣರಂಗದಲ್ಲಿ ಪಾಂಡವನಾದ ಅರ್ಜುನನ ಎದುರಿಗೆ ಬಂದನೋ ಅವನವನ ಶರೀರದಲ್ಲಿ ಪ್ರಾಣಾಂತಕವಾದ ಬಾಣಗಳು ಬಿದ್ದವು.

ಕಬಂಧಸಂಕುಲಂ ಚಕ್ರೇ ತವ ಸೈನ್ಯಂ ಮಹಾರಥಃ ।
ಆರ್ಜುನೋ ಜಯತಾಂ ಶ್ರೇಷ್ಠಃ ಶರೈರಗ್ನ್ಯಂಶುಸನ್ನಿಭೈಃ ॥ ೫೧ ॥

ಮಹಾರಥನಾದ ಜಯಶಾಲಿಗಳಲ್ಲಿ ಶ್ರೇಷ್ಠನಾದ ಅರ್ಜುನನು ಅಗ್ನಿಕಿರಣಗಳಂತಹ ಬಾಣಗಳಿಂದ ರಣರಂಗವನ್ನು ರುಂಡಗಳಿಂದ ನಿಬಿಡ(ದಟ್ಟ)ವನ್ನಾಗಿ ಮಾಡಿದನು.

ಏವಂ ತತ್ತವ ರಾಜೇಂದ್ರ ಚತುರಂಗಬಲಂ ತದಾ ।
ವ್ಯಾಕುಲೀಕೃತ್ಯ ಕೌಂತೇಯೋ ಜಯದ್ರಥಮುಪಾದ್ರವತ್ ॥ ೫೨ ॥

ರಾಜೇಂದ್ರನೇ, ಹೀಗೆ ಕೌಂತೇಯನು ನಿನ್ನ ಚತುರಂಗಬಲವನ್ನು ವ್ಯಾಕುಲಗೊಳಿಸಿ ಜಯದ್ರಥನ ಸಮೀಪಕ್ಕೆ ಬಂದನು.

ದ್ರೌಣಂ ಪಂಚಾಶತಾಽವಿಧ್ಯದ್ ವೃಷಸೇನಂ ತ್ರಿಭಿಃ ಶರೈಃ ।
ಕೃಪಾಯಮಾಣಃ ಕೌಂತೇಯಃ ಕೃಪಂ ನವಭಿರಾರ್ದಯತ್ ॥ ೫೩ ॥

ಕೌಂತೇಯನಾದ ಅರ್ಜುನನು ಅಶ್ವತ್ಥಾಮರನ್ನು ಐವತ್ತು ಬಾಣಗಳಿಂದಲೂ, ವೃಷಸೇನನನ್ನು ಮೂರು ಬಾಣಗಳಿಂದಲೂ, ಕೃಪರನ್ನು ಕೃಪೆಯನ್ನು ಹೊಂದಿ ಒಂಬತ್ತು ಬಾಣಗಳಿಂದಲೂ ಮರ್ದಿಸಿದನು.

ಶಲ್ಯಂ ಷೋಡಶಭಿರ್ಬಾಣೈಃ ಕರ್ಣಂ ದ್ವಾತ್ರಿಂಶತಾ ಶರೈಃ ।
ಸೈಂಧವಂ ಚ ಚತುಃಷಷ್ಟ್ಯಾ ವಿದ್ಧ್ವಾ ಸಿಂಹ ಇವಾನದತ್ ॥ ೫೪ ॥

ಶಲ್ಯನನ್ನು ಹದಿನಾರು ಬಾಣಗಳಿಂದಲೂ, ಕರ್ಣನನ್ನು ಮೂವತ್ತೆರಡು ಬಾಣಗಳಿಂದಲೂ, ಸೈಂಧವನನ್ನು ಅರವತ್ನಾಲ್ಕು ಬಾಣಗಳಿಂದಲೂ ಹೊಡೆದು ಸಿಂಹನಾದವನ್ನು ಮಾಡಿದನು.

ಸೈಂಧವಸ್ತು ತಥಾ ವಿದ್ಧಃ ಶರೈರ್ಗಾಂಡೀವಧನ್ವನಾ ।
ನ ಚಕ್ಷಮೇ ಸುಸಂಕ್ರುದ್ಧಸ್ತೋತ್ರಾರ್ದಿತ ಇವ ದ್ವಿಪಃ ॥ ೫೫ ॥

ಗಾಂಡೀವ ಧನುರ್ಧಾರಿಯಾದ ಅರ್ಜುನನಿಂದ ಆ ರೀತಿಯಲ್ಲಿ ಬಾಣಗಳಿಂದ ಹೊಡೆಯಲ್ಪಟ್ಟ ಸೈಂಧವನು ಅದನ್ನು ಸಹಿಸದೆ ಅಂಕುಶದಿಂದ ಹೊಡೆದ ಗಜದಂತೆ ಬಹಳ ಕೋಪಗೊಂಡನು.

ಸ ವರಾಹಧ್ವಜಸ್ಫೂರ್ಣಂ ಗಾರ್ಧ್ರಪತ್ರಾನಜಿಹ್ಮಗಾನ್ ।
ಕ್ರುದ್ಧಾಶೀವಿಷಸಂಕಾಶಾನ್ ಕರ್ಮಾರಪರಿಮಾರ್ಜಿತಾನ್ ॥ ೫೬ ॥

ಆಕರ್ಣಪೂರ್ಣಮುತ್ಸೃಜ್ಯ ಕ್ಷೇಪ ಫಲ್ಗುನಸ್ಯ ರಥಂ ಪ್ರತಿ ।
ತ್ರಿಭಿಸ್ತು ವಿದ್ಧ್ವಾ ಗೋವಿಂದಂ ನಾರಾಚೈಃ ಷಡ್ಭಿರರ್ಜುನಮ್ ॥ ೫೭॥

ಅಷ್ಟಭಿರ್ವಾಜಿನೋಽವಿಧ್ಯದ್ ಧ್ವಜಂ ಚೈಕೇನ ಪತ್ರಿಣಾ ।
ಭೂಯಶ್ಚೈವಾರ್ಜುನಂ ಸಂಖ್ಯೇ ಶರವರ್ಷೈರವಾಕಿರತ್ ॥ ೫೮ ॥

ವರಾಹಧ್ವಜವುಳ್ಳ ಅವನು ಗೃಧ್ರಪತ್ರವನ್ನು ಹೊಂದಿದ, ನೇರವಾಗಿ ಸಾಗುವ, ಕೋಪಗೊಂಡ ಸರ್ಪಗಳನ್ನು ಹೋಲುವ, ಕರ್ಮಾರರಿಂದ ಸಂಸ್ಕರಿಸಲ್ಪಟ್ಟ ಬಾಣಗಳನ್ನು ಹೆದೆಯನ್ನು ಕಿವಿಯವರೆಗೂ ಎಳೆದು ಫಲ್ಗುನನ ರಥದ ಮೇಲೆ ಪ್ರಯೋಗಿಸಿದನು. ಕೃಷ್ಣನನ್ನು ಮೂರು ಬಾಣಗಳಿಂದಲೂ, ಅರ್ಜುನನನ್ನು ಆರು ಬಾಣಗಳಿಂದಲೂ, ಅರ್ಜುನನ ರಥದ ಅಶ್ವಗಳನ್ನು ಎಂಟು ಬಾಣಗಳಿಂದಲೂ, ಧ್ವಜವನ್ನು ಒಂದು ಬಾಣದಿಂದಲೂ ಹೊಡೆದು, ಪುನಃ ಅರ್ಜುನನನ್ನು ರಣರಂಗದಲ್ಲಿ ಬಾಣಗಳ ಮಳೆಯಿಂದ ಹಿಂಸಿಸಿದನು (ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು).

ಸ ವಿಷ್ಫಾರ್ಜುನಸ್ತೂರ್ಣಂ ಸೈಂಧವಪ್ರಹಿತಾನ್ ಶರಾನ್ ।
ಯುಗಪತ್ತಸ್ಯ ಚಚ್ಛೇದ ಶರಾಭ್ಯಾಂ ಸೈಂಧವಸ್ಯ ಹ ॥
ಸಾರಥೇಶ್ಚ ಶಿರಃ ಕಾಯಾದ್ ಧ್ವಜಂ ಚ ಸಮಲಂಕೃತಮ್ ॥ ೫೯ ॥

ಅರ್ಜುನನು ಸೈಂಧವನು ಪ್ರಯೋಗಿಸಿದ ಬಾಣಗಳನ್ನು ಶೀಘ್ರವಾಗಿ ನಾಶಗೊಳಿಸಿ, ಎರಡು ಬಾಣಗಳಿಂದ ಸೈಂಧವನ ಸಾರಥಿಯ ಶಿರಸ್ಸನ್ನು ಮತ್ತು ಅಲಂಕೃತವಾದ ಅವನ ರಥದ ಧ್ವಜವನ್ನು ಏಕಕಾಲದಲ್ಲಿ ಕತ್ತರಿಸಿದನು.

ಸ ಚಿನ್ನಯಷ್ಟಿಃ ಸುಮಹಾನ್ ಧನಂಜಯಶರಾಹತಃ ।
ವರಾಹಃ ಸಿಂಧುರಾಜಸ್ಯ ಪಪಾತೇಂದುಸಮಪ್ರಭಃ ॥ ೬೦ ॥

ಧನಂಜಯನ ಬಾಣಗಳಿಂದ ದಂಡವು ಭಗ್ನವಾದ ಚಂದ್ರನ ಕಾಂತಿಯನ್ನು ಹೊಂದಿದ, ಸೈಂಧವನ ವರಾಹಧ್ವಜವು ಕೆಳಗೆ ಬಿದ್ದಿತು.

ಆದಿತ್ಯಂ ಪ್ರೇಕ್ಷಮಾಣಸ್ತು ಬೀಭತ್ಸುಃ ಸೃಕ್ಕಿಣೀ ಲಿಹನ್ ।
ಅಪಶ್ಯನ್ನಾಂತರಂ ತಸ್ಯ ರಕ್ಷಿಭಿಃ ಸಂವೃತಸ್ಯ ವೈ ॥ ೬೧ ॥

ಅಥವತ್‌ಕ್ರೋಧರಕ್ತಾಕ್ಷೋ ವ್ಯಾತ್ತಾನನ ಇವಾಂತಕಃ ।
ಅಥಾಬ್ರವೀದ್ ವಾಸುದೇವಃ ಕುಂತೀಪುತ್ರಂ ಧನಂಜಯಮ್ ॥ ೬೨ ॥

ಅರ್ಜುನನು ಸೂರ್ಯನನ್ನು ನೋಡುತ್ತಾ, ಕಟಬಾಯಿಯನ್ನು ಸವರಿಕೊಳ್ಳುತ್ತಾ ರಕ್ಷಕರಿಂದ ಸುತ್ತುವರಿಯಲ್ಪಟ್ಟ ಸೈಂಧವನನ್ನು ಹೊಡೆಯಲು ಒಂದು ಅವಕಾಶವನ್ನೂ ಕಾಣದೆ ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ ಬಾಯನ್ನು ತೆರೆದು ಅಂತಕನಂತೆ ಆದನು. ಆಗ ಕೃಷ್ಣನು ಕುಂತೀಪುತ್ರನಾದ ಧನಂಜಯನನ್ನು ಕುರಿತು ಹೇಳಿದನು.

ಎಲೈ ಮಹಾಬಾಹುವೇ, ಆರು ಮಹಾರಥರಾದ ವೀರರಿಂದ ಮಧ್ಯದಲ್ಲಿ ಇರಿಸಿಕೊಂಡು ರಕ್ಷಿಸಲ್ಪಡುತ್ತಿರುವ ಜೀವಿತವನ್ನು ಬಯಸಿದ ಈ ಸೈಂಧವನು ಭಯದಿಂದ ಕೂಡಿದ್ದಾನೆ.

ನೈವ ಶಕ್ಯಸ್ತ್ವಯಾ ಹಂತುಂ ನಿರ್ವ್ಯಾಜಂ ಭರತರ್ಷಭ ।
ಸೃಕ್ಷ್ಯಾಮ್ಯಹಮುಪಾಯಂ ತಮಾದಿತ್ಯಸ್ಯಾಪವಾರಣೇ ।
ತತೋಽಸ್ತಂ ಗತಮಾದಿತ್ಯಂ ಮಂಸ್ಯತೇ ಸಿಂಧುರಾಡಿಹ ॥ ೬೩ ॥

ಎಲೈ ಪುರುಷಶ್ರೇಷ್ಠನೇ, ಭರತಶ್ರೇಷ್ಠನೇ, ಈ ಆರು ಮಹಾರಥರನ್ನು ಯುದ್ಧದಲ್ಲಿ ಗೆಲ್ಲದೆ ಇವನನ್ನು ನಿರ್ವ್ಯಾಜವಾಗಿ ನೀನು ಕೊಲ್ಲಲು ಸಾಧ್ಯವಿಲ್ಲ. ನಾನು ಸೂರ್ಯನನ್ನು ಮರೆಮಾಡಲು ಒಂದು ಉಪಾಯವನ್ನು ಸೃಷ್ಟಿಸುವೆನು. ಆಗ ಸೈಂಧವನು ಸೂರ್ಯನು ಅಸ್ತಂಗತನಾದನೆಂದು ತಿಳಿಯುವನು.

ತತೋಽಸ್ಯ ವಿಸ್ಮಯಃ ಪಾರ್ಥ ಹರ್ಷಶ್ಚೈವ ಭವಿಷ್ಯತಿ ।
ಆತ್ಮಜೀವಿತಲಾಭಾಚ್ಚ ಪ್ರತಿಜ್ಞಾಯಾಶ್ಚ ನಾಶನಾತ್ ॥ ೬೪ ॥

ಎಲೈ ಪಾರ್ಥನೇ, ಆಗ ಅವನಿಗೆ ತನ್ನ ಜೀವನವು ಉಳಿದು ನಿನ್ನ ಪ್ರತಿಜ್ಞೆಯು ಭಂಗವಾಗುವುದರಿಂದ ವಿಸ್ಮಯವೂ, ಆಶ್ಚರ್ಯವೂ ಆಗುವುದು.

ಅಸ್ತಂಗತಮಿವಾದಿತ್ಯಂ ದೃಷ್ಟ್ವಾ ಮೋಹೇನ ಬಾಲಿಶಃ ।
ನ ಹಿ ಶಕ್ಷ್ಯತ್ಯಥಾಽಽತ್ಮಾನಂ ರಕ್ಷಿತುಂ ಹರ್ಷಸಂಭವಾತ್ ॥ ೬೫ ॥

ಬಾಲಿಶನಾದ ಅವನು ಅಸ್ತಂಗತನಾದ ಆದಿತ್ಯನನ್ನು ನೋಡಿ ಉಂಟಾದ ಹರ್ಷದಿಂದ ಮೂಢನಾಗಿ ತನ್ನನ್ನು ತಾನು ರಕ್ಷಿಸಿಕೊಳ್ಳುವುದಿಲ್ಲ.

ಏತಸ್ಮಿನ್ನೇವ ಕಾಲೇ ತು ಪ್ರಹರ್ತವ್ಯಂ ಧನಂಜಯ ।
ಜಯದ್ರಥಸ್ಯ ಕ್ಷುದ್ರಸ್ಯ ಸವಿತುರ್ದರ್ಶನಾರ್ಥಿನಃ ।
ವ್ಯಪೇಕ್ಷಾ ನೈವ ಕರ್ತವ್ಯಾ ಗತೋಽಸ್ತಮಿತಿ ಭಾಸ್ಕರಃ ॥ ೬೬ ॥

ಎಲೈ ಧನಂಜಯನೇ, ಆ ಕಾಲದಲ್ಲಿ ಸೂರ್ಯನನ್ನು ನೋಡಲು ಪ್ರಯತ್ನಿಸುವ ಅವನನ್ನು ಹೊಡೆಯಬೇಕು. ಸೂರ್ಯನು ಅಸ್ತಂಗತನಾದನೆಂದು ಚಿಂತಿಸಬಾರದು ಎಂದು ಹೇಳಿದನು.

ಏವಮಸ್ತ್ವಿತಿ ಬೀಭತ್ಸುಃ ಕೇಶವಂ ಪ್ರತ್ಯಭಾಷತ ।
ತತೋಽಸೃಜತ್ ತಮಃ ಕೃಷ್ಣಃ ಸೂರ್ಯಸ್ಯಾವರಣಂ ಪ್ರತಿ ।
ಯೋಗೀ ಯೋಗೇನ ಸಂಯುಕ್ತೋ ಯೋಗಿನಾಮೀಶ್ವರೋ ಹರಿಃ ॥

ಅರ್ಜುನನು ಕೇಶವನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು. ಯೋಗೀಶ್ವರನಾದ ಹರಿಯು ಯೋಗದಿಂದ ಸಂಯುಕ್ತನಾಗಿ ಸೂರ್ಯನನ್ನು ಆವರಿಸಲು ಕತ್ತಲೆಯನ್ನು ಸೃಷ್ಟಿಸಿದನು.

ಸೃಷ್ಟೇ ತಮಸಿ ಕೃಷ್ಣೇನ ಗತೋಽಸ್ತಮಿತಿ ಭಾಸ್ಕರಃ ॥
ತ್ವದೀಯಾ ಜಹೃಷುರ್ಯೋಧಾಃ ಪಾರ್ಥನಾಶಾನ್ನರಾಧಿಪ ॥ ೬೮ ॥

ಎಲೈ ರಾಜನೇ, ಕೃಷ್ಣನು ತಮಸ್ಸನ್ನು ಸೃಷ್ಟಿಸುತ್ತಿರಲು ನಿನ್ನ ಯೋಧರು ಸೂರ್ಯನು ಅಸ್ತಂಗತನಾದನೆಂದು ತಿಳಿದು ಅರ್ಜುನನ ನಾಶದ ಕಾರಣದಿಂದಾಗಿ ಸಂತೋಷಪಟ್ಟರು.

ಪಾರ್ಥಸ್ಯ ಬಲಮಜ್ಞಾನಾತ್ತಮೋ ದೃಷ್ಟ್ವಾ ಸುದುಃಖಿತಮ್ ।
ಅಥವಂಸ್ತಾವಕಾ ಯೋಧಾ ಹರ್ಷಸಂಕುಲಚೇತಸಃ ॥ ೬೯ ॥

ಅರ್ಜುನ ಸೇನೆಯು ಕತ್ತಲೆಯನ್ನು ನೋಡಿ ಅಜ್ಞಾನದಿಂದ ಬಹಳ ದುಃಖವನ್ನು ಹೊಂದಿತು. ನಿನ್ನ ಯೋಧರು ಹರ್ಷಗೊಂಡ ಮನಸ್ಸುಳ್ಳವರಾದರು.

ತೇ ಪ್ರಹೃಷ್ಟಾ ರಣೇ ರಾಜನ್ನಪಶ್ಯನ್ ಸೈನಿಕಾ ರವಿಮ್ ।
ಉನ್ನಮ್ಯ ವಕ್ತ್ರಾಣಿ ತದಾ ಸ ಚ ರಾಜಾ ಜಯದ್ರಥಃ ॥ ೭೦ ॥

ಎಲೈ ರಾಜನೇ, ಸಂತೋಷಗೊಂಡ ನಿನ್ನ ಸೈನಿಕರು ರಣರಂಗದಲ್ಲಿ ತಮ್ಮ ಮುಖಗಳನ್ನು ಎತ್ತಿ ಸೂರ್ಯನ ಕಡೆಗೆ ನೋಡಿದರು. ಸೈಂಧವನೂ ಹಾಗೆ ಮಾಡಿದನು.

ವೀಕ್ಷಮಾಣೇ ತತಸ್ತಸ್ಮಿನ್ ಸಿಂಧುರಾಜೇ ದಿವಾಕರಮ್ ।
ಪುನರೇವಾಬ್ರವೀತ್ ಕೃಷ್ಣೋ ಧನಂಜಯಮಿದಂ ವಚಃ ।
ಉನ್ನಮಯ್ಯ ಶಿರೋಗ್ರೀವಾಂ ವೀಕ್ಷತೇ ಸೂರ್ಯಮಂಡಲಮ್ ।
ತಸ್ಯ ಶೀಘ್ರಂ ಪೃಷತ್ಕೇನ ಕಾಯಾಚ್ಛೀರ್ಷಮಪಾಹರ ॥ ೭೧ ॥

ಸೈಂಧವನು ಸೂರ್ಯನನ್ನು ನೋಡುತ್ತಿರುವಾಗ ಕೃಷ್ಣನು ಧನಂಜಯನನ್ನು ಕುರಿತು ಸೈಂಧವನು ತನ್ನ ಕತ್ತು ಮತ್ತು ಮುಖವನ್ನು ಎತ್ತಿ ಸೂರ್ಯಮಂಡಲವನ್ನು ನೋಡುತ್ತಿದ್ದಾನೆ. ನೀನು ಬಾಣದಿಂದ ಶೀಘ್ರವಾಗಿ ಅವನ ಶಿರಸ್ಸನ್ನು ದೇಹದಿಂದ ಕತ್ತರಿಸು ಎಂದು ಪುನಃ ಹೇಳಿದನು.

ಸಂಜಯಃ

ಕೇಶವೇನೈವಮುಕ್ತಃ ಸನ್ಮರ್ಮಾಣಿ ರಕ್ತಲೋಚನಃ ।
ಉದ್ಬರ್ಹ ಶರಂ ತೀಕ್ಷ್ಣಮಮರೈರಪಿ ದುಃಸಹಮ್ ॥ ೭೨ ॥

ಸಂಜಯ– ಕೇಶವನಿಂದ ಹೀಗೆ ಹೇಳಲ್ಪಟ್ಟ ಅರ್ಜುನನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ದೇವತೆಗಳಿಂದಲೂ ಸಹಿಸಲು ಅಸಾಧ್ಯವಾದ ತೀಕ್ಷ್ಣವಾದ ಒಂದು ಬಾಣವನ್ನು ಬತ್ತಳಿಕೆಯಿಂದ ತೆಗೆದನು.

ಏಕಂ ತೂಣೇಶಯಂ ಘೋರಮಿಂದ್ರಾಶನಿಸಮಪ್ರಭಮ್ ।
ವರ್ಮಭೇದಿನಮತ್ಯರ್ಥಂ ಗಂಧಮಾಲ್ಯಾರ್ಚಿತಂ ಸದಾ ॥
ವಿಸಸರ್ಜ ತತಸ್ತೂರ್ಣಂ ಸೈಂಧವಸ್ಯ ರಥಂ ಪ್ರತಿ ॥ ೭೩ ॥

ಅವನು ಬತ್ತಳಿಕೆಯಲ್ಲಿದ್ದ ಇಂದ್ರನ ವಜ್ರಾಯುಧಕ್ಕೆ ಸಮವಾದ ಕಾಂತಿಯನ್ನು ಹೊಂದಿದ, ಘೋರವಾದ, ಪ್ರಧಾನವಾದ, ಕವಚವನ್ನೂ ಭೇದಿಸುವ, ಗಂಧಮಾಲ್ಯದಿಂದ ಯಾವಾಗಲೂ ಪೂಜಿತವಾದ, ಆ ಬಾಣವನ್ನು ಶೀಘ್ರವಾಗಿ ಸೈಂಧವನ ರಥದ ಮೇಲೆ ಪ್ರಯೋಗಿಸಿದನು.

ಸ ತು ಗಾಂಡೀವನಿರ್ಮುಕ್ತಃ ಶರಃ ಶ್ಯೇನ ಇವಾಶುಗಃ ।
ಶಕುಂತಮಿವ ವೃಕ್ಷಾಗ್ರಾತ್ ಸೈಂಧವಸ್ಯಾಹರಚ್ಛಿರಃ ॥ ೭೪ ॥

ಗಾಂಡೀವದಿಂದ ಹೊರಹೊಮ್ಮಿದ ಆ ಬಾಣವು ಶೀಘ್ರಗಾಮಿಯಾದ ಹದ್ದುವೃಕ್ಷದ ತುದಿಯಲ್ಲಿರುವ ಪಕ್ಷಿಯನ್ನು ಹಾರಿಸಿದಂತೆ ಸೈಂಧವನ ಶಿರಸ್ಸನ್ನು ಕತ್ತರಿಸಿತು.

ಪ್ರಪತಿಷ್ಯತಿ ಶೀರ್ಷೇ ತು ಕೃಷ್ಣೋಽರ್ಜುನಮಥಾಬ್ರವೀತ್ ।
ಪಾರ್ಥ ಪಾರ್ಥ ಶಿರೋ ಹ್ಯೇತದ್ ಯಥಾ ನೇಯಾನ್ಮಹೀತಳಮ್ ॥
ತಥಾ ಕುರು ಕುರುಶ್ರೇಷ್ಠ ವಕ್ಷ್ಯೇ ತಸ್ಯಾಪಿ ಕಾರಣಮ್ ॥ ೭೫ ॥

ಆ ಶಿರಸ್ಸು ಬೀಳುತ್ತಿರುವಾಗ ಕೃಷ್ಣನು ಅರ್ಜುನನನ್ನು ಕುರಿತು, ಅರ್ಜುನ ಅರ್ಜುನ, ಎಲೈ ಕುರುಶ್ರೇಷ್ಠನೇ, ಈ ಶಿರಸ್ಸು ಭೂಮಿಯ ಮೇಲೆ ಬೀಳದಂತೆ ಮಾಡು. ಅದಕ್ಕೆ ಕಾರಣವನ್ನು ಹೇಳುವೆನು ಎಂದು ಹೇಳಿದನು.

ಶ್ರುತ್ವಾ ತು ವಚನಂ ತಸ್ಯ ತ್ವರಮಾಣೋಽಸ್ತ್ರಮಾಯಯಾ ।
ತಥಾಽಹರಚ್ಛಿರಸ್ತಸ್ಯ ಶರೈರೂರ್ಧ್ವಂ ಧನಂಜಯಃ ।
ದುರ್ಹೃದಾಮಪಹರ್ಷಾಯ ಸುಹೃದಾಂ ಹರ್ಷಣಾಯ ಚ ॥ ೭೬ ॥

ಕೃಷ್ಣನ ಮಾತುಗಳನ್ನು ಕೇಳಿ, ಅರ್ಜುನನು ಜಾಗ್ರತೆಯಾಗಿ ಶತ್ರುಗಳಿಗೆ ದುಃಖವನ್ನೂ, ಮಿತ್ರರಿಗೆ ಸಂತೋಷವನ್ನೂ ಉಂಟು ಮಾಡುತ್ತಾ ತನ್ನ ಅಸ್ತ್ರ ಸಾಮರ್ಥ್ಯದಿಂದ ಬಾಣಗಳಿಂದ ಆ ಶಿರಸ್ಸನ್ನು ಮೇಲೆ ಹಾರಿಸಿದನು.

ತಿರ್ಯಗೂರ್ದ್ಧಮಧಶ್ಚೈವ ಪುನರೂರ್ದ್ಧಮಥಾಪಿ ಚ ।
ದೀರ್ಘಕಾಲಮವಾಕ್ ಚೈವ ಸಂಪ್ರಕ್ರೀಡನ್ನಿವಾರ್ಜುನಃ ॥ ೭೭ ॥

ಅಡ್ಡಲಾಗಿ, ಮೇಲ್ಮುಖವಾಗಿ, ಕೆಳಮುಖವಾಗಿ, ಪುನಃ ಮೇಲ್ಮುಖವಾಗಿ, ಬಹು ಕಾಲದವರೆಗೆ ಕೆಳಮುಖವಾಗಿ ಶಿರಸ್ಸನ್ನು ಹಾರಿಸುತ್ತಾ ಅರ್ಜುನನು ಆಟವಾಡಿದನು.

ತತ್ ಸೈನ್ಯಂ ಸರ್ವತೋ ಪಶ್ಯನ್ ಮಹದಾಶ್ಚರ್ಯಮದ್ಭುತಮ್ ।
ಪ್ರಾಪಯತ್ ಸ ಶಿರೋ ಯಸ್ಮಾದ್ ಯೋಧಯನ್ನೇವ ಪಾರ್ಥಿವಾನ್ ॥

ಅರ್ಜುನನು ರಾಜರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಲೇ ಆ ಶಿರಸ್ಸನ್ನು ಹಾರಿಸುತ್ತಿದ್ದುದರಿಂದ ಆ ದೊಡ್ಡ ಅದ್ಭುತವಾದ ಆಶ್ಚರ್ಯವನ್ನು ಸೈನ್ಯದಲ್ಲಿದ್ದ ಎಲ್ಲರೂ ನೋಡಿದರು.

ಶರೈಃ ಕಂದುಕವತ್ ಕೃತ್ವಾ ತಸ್ಯಾಲೋಕಾಯ ಪಾಂಡವಃ ।
ಸಮಂತಪಂಚಕಾದ್ ಬಾಹ್ಯೇ ಶಿರಸ್ತದಹರಚ್ಛರೈಃ ॥ ೭೯ ॥

ಅರ್ಜುನನು ಶಿರಸ್ಸು ಕಾಣಿಸುವಂತೆ ಬಾಣಗಳಿಂದ ಅದನ್ನು ಚೆಂಡಿನಂತೆ ಮಾಡಿ (ಆಟವಾಡಿ) ತನ್ನ ಬಾಣಗಳಿಂದ ಅದನ್ನು ಸಮಂತಪಂಚಕದ ಹೊರಗೆ ಹಾರಿಸಿದನು.

ಜಯದ್ರಥಸ್ಯಾರ್ಜುನಬಾಣನಾಳಂ
ಮುಖಾರವಿಂದಂ ರುಧಿರಾಂಬುಸಿಕ್ತಮ್ ।
ದೃಷ್ಟಂ ನರೈಃ ಖೇಪರಿವರ್ತಮಾನಂ
ವಿದ್ಯಾಧರೋತ್ಸೃಷ್ಟಮಿವೈಕಪದ್ಮಮ್ ॥ ೮೦ ॥

ಕೆಳಭಾಗದಿಂದ ಅರ್ಜುನನ ಬಾಣವೆಂಬ ನಾಳದಿಂದ ಸಹಿತವಾದ ಜಯದ್ರಥನ ರಕ್ತಸಿಕ್ತವಾದ ಆ ಮುಖಕಮಲವು ಮೇಲೆ ಹಾರುತ್ತಾ, ವಿದ್ಯಾಧರರಿಂದ ಬೀಳಿಸಲ್ಪಟ್ಟ ಒಂದು ಪದ್ಮದಂತೆ ಜನರಿಂದ ನೋಡಲ್ಪಟ್ಟಿತು.

ಸ ದೇವಶತ್ರೂನಿವ ದೇವರಾಜಃ
ಕಿರೀಟಮಾಲೀ ವ್ಯಧಮತ್ ಸಪತ್ನಾನ್ ।
ಯಥಾ ತಮಾಂಸ್ಯಭ್ಯುದಿತಸ್ತಮೋಘ್ನಃ
ಪೂರ್ಣಃ ಪ್ರತಿಜ್ಞಾಂ ಸ ಸಮಾಪ್ಯ ವೀರಃ ॥ ೮೧ ॥

ಕಿರೀಟಮಾಲಿಯಾದ ವೀರನಾದ ಅರ್ಜುನನು ತನ್ನ ಪ್ರತಿಜ್ಞೆಯನ್ನು ನೆರವೇರಿಸಿ ದೇವರಾಜನಾದ ಇಂದ್ರನು ದೇವಶತ್ರುಗಳನ್ನು ನಾಶಪಡಿಸಿದಂತೆ, ಪೂರ್ಣವಾಗಿ ಉದಯಿಸಿದ ಸೂರ್ಯನು ತಮಸ್ಸನ್ನು ನಾಶಪಡಿಸಿದಂತೆ ಶತ್ರುವನ್ನು ನಾಶಪಡಿಸಿದನು.

ಅಥಾಬ್ರವೀತ್ ಕೇಶವಂ ಪಾಂಡವೇಯಃ
ಕಿಯಂತಮಧ್ವಾನಮಿದಂ ಹರಾಮಿ ।
ಕಿಮರ್ಥಮೇತನ್ನ ನಿಪಾತ್ಯಮುರ್ವ್ಯಾಂ
ಕ್ವ ಚ ಪ್ರಯಾತವ್ಯಮಿದಂ ಚ ಶಂಸ ॥
ಶಕ್ನೋಮ್ಯಹಂ ಯತ್ರ ಭವಾನ್ ಬ್ರವೀತಿ
ತಂ ಭೂಮಿದೇಶಂ ಚ ಶಿರೋ ನಿನೇತುಮ್ ॥ ೮೨ ॥

ಆಗ ಪಾಂಡುಪುತ್ರನಾದ ಅರ್ಜುನನು ಕೇಶವನನ್ನು ಕುರಿತು, ಈ ಶಿರಸ್ಸನ್ನು ಎಷ್ಟು ದೂರ ಹಾರಿಸಿಕೊಂಡು ಹೋಗಬೇಕು? ಇದು ಏಕೆ ನೆಲದ ಮೇಲೆ ಬೀಳಬಾರದು? ಇದನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು ಎಂದು ಹೇಳು. ನೀನು ಎಲ್ಲಿಗೆ ಹೇಳುತ್ತೀಯೋ ಆ ಭೂಪ್ರದೇಶಕ್ಕೆ ನಾನು ಶಿರಸ್ಸನ್ನು ಹಾರಿಸಿಕೊಂಡು ಹೋಗಲು ಸಮರ್ಥನಾಗಿದ್ದೇನೆ ಎಂದು ಹೇಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕತ್ರಿಂಶದಧಿಕಶತತಮೋऽಧ್ಯಾಯಃ ॥

॥ ಜಯದ್ರಥವಧಪರ್ವಣಿ ಪಂಚಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೆರಡನೆಯ ಅಧ್ಯಾಯ

ಸೈಂಧವನ ಶಿರಸ್ಸನ್ನು ರಣರಂಗದಲ್ಲಿ ಬೀಳಿಸದಿರಲು ಕೃಷ್ಣನಿಂದ ಕಾರಣ ನಿರೂಪಣೆ. ಸೈಂಧವನ ತಂದೆಯ ತೊಡೆಯಲ್ಲಿ ಶಿರಸ್ಸಿನ ಪಾತ ಮತ್ತು ಅವನ ಮರಣ.

ಸಂಜಯಃ

ಪಾರ್ಥ ಪಾರ್ಥ ಶಿರೋ ಹ್ಯೇತತ್ ಯತ್ಕೃತೇ ನ ಪತೇದ್ ಭುವಿ ।
ಶ್ರೂಯತಾಂ ತದ್‌ಯಥಾವೃತ್ತಂ ಕಾರಣಂ ಸೈಂಧವಂ ಪ್ರತಿ ॥ ೧ ॥

ಏತಸ್ಮಿನ್ನೇವ ಕಾಲೇ ತು ತ್ವರಮಾಣೇ ದಿವಾಕರೇ ।
ಆಬ್ರವೀತ್ ಪಾಂಡವಂ ತತ್ರ ತವರಮಾಣೋ ಜನಾರ್ದನಃ ॥ ೨ ॥

ಸಂಜಯ– ಈ ಕಾಲದಲ್ಲಿಯೇ ಸೂರ್ಯನು ಶೀಘ್ರವಾಗಿ ಸಾಗುತ್ತಿರಲು ಕೃಷ್ಣನು ತ್ವರೆ ಮಾಡುತ್ತಾ ಅರ್ಜುನನನ್ನು ಕುರಿತು ಹೇಳಿದನು- ಅರ್ಜುನನೇ, ಈ ಶಿರಸ್ಸು ಏತಕ್ಕಾಗಿ ಭೂಮಿಯಲ್ಲಿ ಬೀಳಬಾರದೆಂಬುದಕ್ಕೆ ಸೈಂಧವನ ವಿಷಯದಲ್ಲಿ ಹಿಂದೆ ಜರುಗಿದ ಒಂದು ಕಾರಣವನ್ನು ಕೇಳುವವನಾಗು.

ವೃದ್ಧಕ್ಷತ್ರಃ ಸೈಂಧವಸ್ಯ ಪಿತಾ ಜಗತಿ ವಿಶ್ರುತಃ ।
ಸ ಕಾಲೇನೇಹ ಮಹತಾ ಸೈಂಧವಂ ಪ್ರಾಪ್ತವಾನ್ ಸುತಮ್ ॥ ೩ ॥

ಲೋಕದಲ್ಲಿ ಪ್ರಸಿದ್ಧನಾದ ಸೈಂಧವನ ತಂದೆಯಾದ ವೃದ್ಧಕ್ಷತ್ರನು ಬಹಳ ಕಾಲದ ಮೇಲೆ ಶತ್ರುಸಂಹಾರಕನಾದ ಜಯದ್ರಥನನ್ನು ಮಗನಾಗಿ ಪಡೆದನು.

ಜಯದ್ರಥಮಮಿತ್ರಘ್ನಂ ತಂ ಚೋವಾಚ ತತೋ ನೃಪಮ್ ।
ಅಂತರ್ಹಿತಾ ತದಾ ವಾಣೀ ಮೇಘದುಂದುಭಿನಿಸ್ವನಾ ॥ ೪ ॥

ಆಗ ಮೇಘದುಂದುಭಘೋಷದಂತಿದ್ದ ಒಂದು ಅದೃಶ್ಯವಾದ ವಾಣಿಯು ಆ ರಾಜನನ್ನು ಕುರಿತು ಹೇಳಿತು.

ತವಾತ್ಮಜೋಽಯಂ ಮರ್ತ್ಯೇಷು ಕುಲಶೀಲದಮಾದಿಭಿಃ ।
ಗುಣೈರ್ಭವಿಷ್ಯತಿ ವಿಭೋ ಸದೃಶೋ ವಂಶಯೋರ್ದ್ವಯೋಃ ।
ಕ್ಷತ್ರಿಯಪ್ರವರೋ ಲೋಕೇ ನಿತ್ಯಂ ಶೂರಾಭಿಸತ್ಕೃತಃ ॥ ೫ ॥

ಎಲೈ ವಿಭುವೇ, ನಿನ್ನ ಈ ಪುತ್ರನು ತನ್ನ ಕುಲ-ಶೀಲ-ದಮಾದಿ ಗುಣಗಳಿಂದ ಎರಡು ವಂಶಗಳಿಗೂ ಯೋಗ್ಯನಾಗುವನು. ಲೋಕದಲ್ಲಿ ಅವನು ಕ್ಷತ್ರಿಯಶ್ರೇಷ್ಠನೂ ಮತ್ತು ಯಾವಾಗಲೂ ಶೂರರಿಂದ ಸತ್ಕೃತನೂ ಆಗುವನು.

ಶತ್ರುಭಿರ್ಯುದ್ಧ್ಯಮಾನಸ್ಯ ಸಂಗ್ರಾಮೇ ತ್ವಸ್ಯ ಧನ್ವಿನಃ ।
ಶಿರಶ್ಚೇತ್ಸ್ಯತಿ ಸಂಕ್ರುದ್ಧಃ ಶತ್ರುರ್ನಾಲಕ್ಷಿತೋ ಭುವಿ ॥ ೬ ॥

ಈ ಧನುರ್ಧಾರಿಯು ಶತ್ರುಗಳ ಜೊತೆಯಲ್ಲಿ ರಣರಂಗದಲ್ಲಿ ಯುದ್ಧವನ್ನು ಮಾಡುವಾಗ ಇವನ ಶತ್ರುವು ಕಣ್ಣಿಗೆ ಕಾಣಿಸದಂತೆ ಇವನ ಶಿರಸ್ಸನ್ನು ಕತ್ತರಿಸುವನು (ಎಂದು ಹೇಳಿತು).

ಏತಚ್ಛ್ರುತ್ವಾ ಸಿಂಧುರಾಜೋ ಧ್ಯಾತ್ವಾ ಚಿರಮರಿಂದಮ ।
ಜ್ಞಾತೀನ್ ಸರ್ವಾನುವಾಚೇದಂ ಪುತ್ರಸ್ನೇಹಾಭಿಪೀಡಿತಃ ॥ ೭ ॥

ಸಂಗ್ರಾಮೇ ಯುದ್ಧ್ಯಮಾನಸ್ಯ ವಹತೋ ಮಹತೀಂ ಧುರಮ್ ।
ಧರಣ್ಯಾಂ ಮಮ ಪುತ್ರಸ್ಯ ಪಾತಯಿಷ್ಯತಿ ಯಃ ಶಿರಃ ।
ತಸ್ಯಾಪಿ ಶತಧಾ ಮೂರ್ಧಾ ಫಲಿಷ್ಯತಿ ನ ಸಂಶಯಃ ॥ ೮ ॥

ಯದಿ ಚೇದಸ್ತಿ ಮೇ ಲಾಭಸ್ತಪಸೋ ವಾ ದಮಸ್ಯ ವಾ ।
ಏವಮುಕ್ತ್ವಾ ತತೋ ರಾಜ್ಯೇ ಸ್ಥಾಪಯಿತ್ವಾ ಜಯದ್ರಥಮ್ ।
ವೃದ್ಧಕ್ಷತ್ರೋ ವನಂ ಯಾತಸ್ತಪಶ್ಚೇಷ್ಟುಂ ಸಮಾಹಿತಃ ॥ ೯ ॥

ಎಲೈ ಅರಿಂದಮನೇ, ಸಿಂಧುರಾಜನಾದ ವೃದ್ಧಕ್ಷತ್ರನು ಇದನ್ನು ಕೇಳಿ, ಬಹಳ ಸಮಯದವರೆಗೆ ಯೋಚಿಸಿ, ಮಗನ ಮೇಲಿನ ಸ್ನೇಹದಿಂದ ಕೂಡಿದವನಾಗಿ ಎಲ್ಲ ಜ್ಞಾತಿಗಳನ್ನು ಕುರಿತು- ನನ್ನ ತಪಸ್ಸಿಗೆ ಮತ್ತು ಇಂದ್ರಿಯನಿಗ್ರಹಕ್ಕೆ ಏನಾದರೂ ಪ್ರಯೋಜನವಿದ್ದರೆ, ದೊಡ್ಡ ಭಾರವನ್ನು ವಹಿಸಿ ರಣರಂಗದಲ್ಲಿ ಯುದ್ಧವನ್ನು ಮಾಡುವ ಈ ನನ್ನ ಪುತ್ರನ ಶಿರಸ್ಸನ್ನು ಯಾವನು ಭೂಮಿಯ ಮೇಲೆ ಕೆಡವುವನೋ ಅವನ ಶಿರಸ್ಸೂ ಸಹ ನೂರು ಹೋಳಾಗುತ್ತದೆ (ಹೋಳಾಗಲಿ). ಇದರಲ್ಲಿ ಸಂಶಯವಿಲ್ಲ ಎಂದು ಹೇಳಿ ರಾಜ್ಯದಲ್ಲಿ ಜಯದ್ರಥನನ್ನು ಸ್ಥಾಪಿಸಿ ಕಾಡಿಗೆ ಹೋಗಿ ಇಷ್ಟವಾದ ತಪಸ್ಸನ್ನು ಪ್ರಾರಂಭಿಸಿದನು.

ಸೋಽಯಂ ತಪ್ಯತಿ ತೇಜಸ್ವೀ ತಪೋ ಘೋರಂ ದುರಾಸದಮ್ ।
ಸಮಂತಪಂಚಕಾದಸ್ಮಾದ್ ಬಹಿರ್ವಾನರಕೇತನ ॥ ೧೦ ॥

ಎಲೈ ಕಪಿಧ್ವಜನೇ, ಅಂತಹ ತೇಜಸ್ವಿಯಾದ ಈ ವೃದ್ಧಕ್ಷತ್ರನು ಸಮಂತಪಂಚಕದ ಹೊರಗೆ ಇದ್ದು ಘೋರವೂ, ಅಸಾಧ್ಯವೂ ಆದ ತಪಸ್ಸನ್ನು ಮಾಡುತ್ತಿದ್ದಾನೆ.

ತಸ್ಮಾದ್ಜಯದ್ರಥಸ್ಯ ತ್ವಂ ಶಿರಶ್ಚಿತ್ತ್ವಾ ಮಹಾಮೃಧೇ ।
ದಿವ್ಯೇನಾಸ್ತ್ರೇಣ ರಿಪುಹನ್ ಘೋರೇಣಾದ್ಭುತಕರ್ಮಣಾ ॥ ೧೧ ॥

ಸಕುಂಡಲಂ ಸಿಂಧುಪತೇಃ ಪ್ರಭಂಜನಸುತಾನುಜ ।
ಉತ್ಸಂಗೇ ಪಾತಯಸ್ವಾಶು ವೃದ್ಧಕ್ಷತ್ರಸ್ಯ ಭಾರತ ॥ ೧೨ ॥

ಎಲೈ ಶತ್ರುಸಂಹಾರಕನೇ, ಪ್ರಭಂಜನಸುತನಾದ ಭೀಮಸೇನನ ತಮ್ಮನೇ, ಭಾರತನೇ, ಆದ್ದರಿಂದ ನೀನು ಈ ಮಹಾಯುದ್ಧದಲ್ಲಿ ಜಯದ್ರಥನ ಶಿರಸ್ಸನ್ನು ಕತ್ತರಿಸಿ, ಘೋರವಾದ, ಅದ್ಭುತಕರ್ಮವನ್ನು ಮಾಡಲು ಸಮರ್ಥವಾದ, ದಿವ್ಯಾಸ್ತ್ರದಿಂದ ಕುಂಡಲ ಸಹಿತವಾದ ಜಯದ್ರಥನ ಶಿರಸ್ಸನ್ನು ವೃದ್ಧಕ್ಷತ್ರನ ತೊಡೆಯ ಮೇಲೆ ಶೀಘ್ರವಾಗಿ ಬೀಳಿಸು.

ಅಥ ತ್ವಮಸ್ಯ ಮೂರ್ಧಾನಂ ಪಾತಯಿಷ್ಯಸಿ ಭೂತಳೇ ।
ತವಾಪಿ ಶತಧಾ ಮೂರ್ಧಾ ಫಲಿಷ್ಯತಿ ನ ಸಂಶಯಃ ॥ ೧೩ ॥

ಹಾಗಿಲ್ಲದೆ ನೀನು ಭೂಮಿಯಲ್ಲಿಯೇ ಇವನ ತಲೆಯನ್ನು ಬೀಳಿಸಿದರೆ ನಿನ್ನ ತಲೆಯೂ ನೂರು ಭಾಗವಾಗುವುದರಲ್ಲಿ ಸಂಶಯವಿಲ್ಲ.

ಯಥಾ ಚೈತನ್ನ ಜಾನೀಯಾತ್ ಸ ರಾಜಾ ಪೃಥಿವೀಪತಿಃ ।
ತಥಾ ಕುರು ಕುರುಶ್ರೇಷ್ಠ ದಿವ್ಯಮಸ್ತ್ರಮುಪಾಶ್ರಿತಃ ॥ ೧೪ ॥

ಎಲೈ ಕುರುಶ್ರೇಷ್ಠನೇ, ರಾಜನಾದ ಆ ವೃದ್ಧಕ್ಷತ್ರನು ಇದನ್ನು ತಿಳಿಯದಂತೆ ದಿವ್ಯಾಸ್ತ್ರವನ್ನು ಆಶ್ರಯಿಸಿ ಈ ಕಾರ್ಯವನ್ನು ಮಾಡು.

ನ ಹ್ಯಸಾಧ್ಯಮಕಾರ್ಯಂ ವಾ ವಿದ್ಯತೇ ತವ ಕಿಂಚನ ।
ಸಮಸ್ತೇಷ್ವಪಿ ಲೋಕೇಷು ತ್ರಿಷು ವಾಸವನಂದನ ॥ ೧೫ ॥

ಎಲೈ ಇಂದ್ರನಂದನನೇ, ಸಮಸ್ತವಾದ ಮೂರುಲೋಕಗಳಲ್ಲಿಯೂ ನಿನಗೆ ಅಸಾಧ್ಯವಾದುದು ಅಥವಾ ನೀನು ಮಾಡಲಾರದುದು ಯಾವುದೂ ಇಲ್ಲ.

ಅಸ್ತ್ರಸ್ಯಾಸ್ಯ ಪ್ರಭಾವೇಣ ಪಶುಭರ್ತುಃ ಕಥಂಚನ ।
ಯಚ್ಛೈತತ್ ಸೈಂಧವಶಿರಃ ಶರೈರೇವ ಧನಂಜಯ ।
ವೃದ್ಧಕ್ಷತ್ರೇ ಪತತ್ಯೇವ ತಥಾ ನೀತಿರ್ವಿಧೀಯತಾಮ್ ॥ ೧೬ ॥

ಎಲೈ ಅರ್ಜುನನೇ, ಪಶುಪತಿಯ ಈ ಅಸ್ತ್ರದ ಪ್ರಭಾವದಿಂದ ಬಾಣಗಳಿಂದ ಹೊಡೆಯಲ್ಪಡುವ ಸೈಂಧವನ ಈ ಶಿರಸ್ಸು ವೃದ್ಧಕ್ಷತ್ರನ ತೊಡೆಯಲ್ಲಿ ಬೀಳುವಂತಹ ನೀತಿಯನ್ನು ರೂಪಿಸು (ಎಂದು ಹೇಳಿದನು).

ಅರ್ಜುನಸ್ತ್ವರಯಾ ಯುಕ್ತಸ್ತದಸ್ತ್ರಂ ಸಮುಪಾಶ್ರಿತಃ ।
ವೃದ್ಧಕ್ಷತ್ರಾಶ್ರಮಾದ್ದ್ವಾರಮಹರತ್ ತದರೇಃ ಶಿರಃ ॥ ೧೭ ॥

ಆಗ ಅರ್ಜುನನು ತ್ವರೆಯಿಂದ ಕೂಡಿದವನಾಗಿ ದಿವ್ಯವಾದ ಪಾಶುಪತಾಸ್ತ್ರವನ್ನು ಆಶ್ರಯಿಸಿ ಶತ್ರುವಿನ ಶಿರಸ್ಸನ್ನು ವೃದ್ಧಕ್ಷತ್ರನ ಆಶ್ರಮದ ದ್ವಾರದವರೆಗೂ ಹಾರಿಸಿದನು.

ಏತಸ್ಮಿನ್ನೇವ ಕಾಲೇ ತು ವೃದ್ಧಕ್ಷತ್ರೋ ಮಹೀಪತಿಃ ।
ಸಂಧ್ಯಾಮುಪಾಸ್ತೇ ತೇಜಸ್ವೀ ಸಂಬಂಧೀ ತವ ಮಾರಿಷ ॥ ೧೮ ॥

ಎಲೈ ಪೂಜ್ಯನೇ, ಈ ಕಾಲದಲ್ಲಿಯೇ ರಾಜನೂ, ತೇಜಸ್ವಿಯೂ, ನಿನ್ನ ಸಂಬಂಧಿಯೂ ಆದ ವೃದ್ಧಕ್ಷತ್ರನು ಸಂಧ್ಯೋಪಾಸನೆಯನ್ನು ಮಾಡುತ್ತಿದ್ದನು.

ಉಪಾಸೀನಸ್ಯ ತಸ್ಯಾಥ ಕೃಷ್ಣಕೇಶಂ ಸಕುಂಡಲಮ್ ।
ಸಿಂಧುರಾಜಸ್ಯ ಮೂರ್ಧಾನಮುತ್ಸಂಗೇ ಸಮಪಾತಯತ್ ॥ ೧೯ ॥

ಕುಳಿತುಕೊಂಡು ಸಂಧ್ಯೋಪಾಸನೆಯನ್ನು ಮಾಡುತ್ತಿದ್ದ ಅವನ ತೊಡೆಯ ಮೇಲೆ ಜಯದ್ರಥನ ಕೃಷ್ಣಕೇಶಗಳಿಂದಲೂ, ಕರ್ಣ ಕುಂಡಲಗಳಿಂದಲೂ ಕೂಡಿದ ಶಿರಸ್ಸನ್ನು ಅರ್ಜುನನು ಬೀಳಿಸಿದನು.

ತಸ್ಯೋತ್ಸಂಗೇ ನಿಪತಿತಂ ಶಿರಸ್ತಚ್ಚಾರುಕುಂಡಲಮ್ ।
ವೃದ್ಧಕ್ಷತ್ರಸ್ಯ ನೃಪತೇರಲಕ್ಷಿತಮರಿಂದಮ ॥ ೨೦ ॥

ಎಲೈ ಅರಿಂದಮನೇ, ಸುಂದರವಾದ ಕುಂಡಲಗಳಿಂದ ಸಹಿತವಾದ ಆ ಶಿರಸ್ಸು ತನ್ನ ತೊಡೆಯ ಮೇಲೆ ಬಿದ್ದುದನ್ನು ವೃದ್ಧಕ್ಷತ್ರನು ಶೀಘ್ರವಾಗಿ ಗಮನಿಸಲಿಲ್ಲ.

ಕೃತಜಪ್ಯಸ್ಯ ತಸ್ಯಾಥ ವೃದ್ಧಕ್ಷತ್ರಸ್ಯ ಧೀಮತಃ ।
ಉತ್ತಿಷ್ಠತಸ್ತತ್ ಸಹಸಾ ಶಿರೋಽಗಚ್ಛದ್ ಧರಾತಳಮ್ ॥ ೨೧ ॥

ಮೇಧಾವಿಯಾದ ವೃದ್ಧಕ್ಷತ್ರನು ಜಪವನ್ನು ಮಾಡಿ ಏಳುವಾಗ ತಕ್ಷಣ ಆ ಶಿರಸ್ಸು ಭೂಮಿಯ ಮೇಲೆ ಬಿದ್ದಿತು.

ತತಸ್ಸ ನರೇಂದ್ರಸ್ಯ ಪುತ್ರಮೂರ್ಧನಿ ಭೂತಳಮ್ ।
ಗತೇ ತಸ್ಯಾಪಿ ಶತಧಾ ಮೂರ್ಧಾಗಚ್ಛದರಿಂದಮ ॥ ೨೨ ॥

ಎಲೈ ಅರಿಂದಮನೇ, ತನ್ನ ಪುತ್ರನ ಶಿರಸ್ಸು ಭೂಮಿಯ ಸ್ಪರ್ಶವನ್ನು ಮಾಡುತ್ತಿರಲು ವೃದ್ಧಕ್ಷತ್ರನ ಶಿರಸ್ಸೂ ಸಹ ನೂರು ಭಾಗವಾಗಿ ಒಡೆಯಿತು.

ತಚ್ಛಿರಃ ಶತಧಾ ರಾಜನ್ ಪಪಾತ ಪೃಥಿವೀತಳೇ ।
ತತಃ ಸರ್ವಾಣಿ ಭೂತಾನಿ ವಿಸ್ಮಯಂ ಜಗ್ಮುರುತ್ತಮಮ್ ।
ವಾಸುದೇವಶ್ಚ ಬೀಭತ್ಸುಂ ಪ್ರಶಶಂಸ ಮಹಾರಥಮ್ ॥ ೨೩ ॥

ಎಲೈ ರಾಜನೇ, ಆ ಶಿರಸ್ಸು ನೂರು ಹೋಳಾಗಿ ಭೂಮಿಯ ಮೇಲೆ ಬಿದ್ದಿತು. ಆಗ ಎಲ್ಲ ಭೂತಗಳೂ ಬಹಳ ವಿಸ್ಮಯವನ್ನು ಹೊಂದಿದವು. ಕೃಷ್ಣನಾದರೂ ಮಹಾರಥನಾದ ಅರ್ಜುನನನ್ನು ಪ್ರಶಂಸಿಸಿದನು.

ಕರ್ಮಣಾ ತೇನ ಪಾರ್ಥಸ್ಯ ವಿಸ್ಮಿತಾಃ ಸರ್ವದೇವತಾಃ ।
ಸರ್ವಥಾ ಸಮರೇ ಯಸ್ಯ ಗೋಪ್ತಾ ನಿತ್ಯಂ ಜನಾರ್ದನಃ ॥ ೨೪ ॥

ಕಥಂ ತಸ್ಯ ಜಯೋ ನ ಸ್ಯಾದಿತಿ ಭೂತಾನಿ ಮೇನಿರೇ ।
ಏತದರ್ಥಂ ಶಿರಸ್ತಸ್ಯ ಚ್ಯಾವಯಾಮಾಸ ಪಾಂಡವಃ ॥ ೨೫ ॥

ಅರ್ಜುನನ ಆ ಕರ್ಮವನ್ನು ನೋಡಿದ ದೇವತೆಗಳೆಲ್ಲರೂ ವಿಸ್ಮಿತರಾದರು. ಯಾವನಿಗೆ ಕೃಷ್ಣನು ಯುದ್ಧದಲ್ಲಿ ನಿತ್ಯವೂ ಸರ್ವಥಾ ರಕ್ಷಕನಾಗಿದ್ದಾನೆಯೋ ಅಂತಹವನಿಗೆ ಜಯವುಂಟಾಗದಿರಲು ಹೇಗೆ ಸಾಧ್ಯ ಎಂದು ಭೂತಗಳು ಭಾವಿಸಿದವು.

ಸಮಂತಪಂಚಕಾದ್ ಬಾಹ್ಯಂ ಶರೈರೇವ ಯಥಾಕ್ರಮಮ್ ।
ಕೃತ್ವಾ ತಚ್ಚ ಮಹತ್ ಕರ್ಮ ನಿಹತ್ಯ ಚ ಜಯದ್ರಥಮ್ ।
ಅಸ್ತ್ರಂ ಪಾಶುಪತಂ ಪಾರ್ಥಃ ಸಂಹರ್ತುಮುಪಚಕ್ರಮೇ ॥ ೨೬ ॥

ಅರ್ಜುನನು ಈ ಕಾರಣಕ್ಕಾಗಿ ಅವನ ಶಿರಸ್ಸನ್ನು ಬಾಣಗಳಿಂದ ಕ್ರಮವಾಗಿ ಸಮಂತಪಂಚಕದ ಹೊರಗೆ ಹಾರಿಸಿಕೊಂಡು ಹೋದನು. ಅರ್ಜುನನು ಆ ಮಹಾಕಾರ್ಯವನ್ನು ಮಾಡಿ ಜಯದ್ರಥನನ್ನು ಕೊಂದು, ಪಾಶುಪತಾಸ್ತ್ರವನ್ನು ಉಪಸಂಹಾರ ಮಾಡಲು ಪ್ರಾರಂಭಿಸಿದನು.

ಸಂಹರತ್ಯಪಿ ಕೌಂತೇಯೇ ತದಸ್ತ್ರಂ ತತ್ರ ಭಾರತ ।
ವವೌ ಶೀತಃ ಸುಗಂಧಶ್ಚ ಪವನೋ ಹ್ಲಾದಯನ್ನಿವ ॥ ೨೭ ॥

ಎಲೈ ಭಾರತನೇ, ಕುಂತೀಪುತ್ರನಾದ ಅರ್ಜುನನು ಆ ಅಸ್ತ್ರವನ್ನು ಉಪಸಂಹಾರ ಮಾಡುತ್ತಿರಲು ಶೀತವೂ, ಸುಗಂಧಯುಕ್ತವೂ ಆದ ವಾಯುವು ಸಂತೋಷವನ್ನುಂಟು ಮಾಡುತ್ತಾ ಬೀಸಿತು.

ಸಂಹಾರಂ ಚ ಪ್ರಮೋಕ್ಷಂ ಚ ದೃಷ್ಟ್ವಾ ತತ್ರ ದಿವೌಕಸಃ ।
ವಿಸ್ಮಯಂ ಪರಮಂ ಜಗ್ಮುಃ ಪ್ರಶಶಂಸುಶ್ಚ ಪಾಂಡವಮ್ ॥ ೨೮ ॥

ಅಸ್ತ್ರದ ಪ್ರಯೋಗವನ್ನು ಮತ್ತು ಉಪಸಂಹಾರವನ್ನು ನೋಡಿದ ದೇವತೆಗಳು ಬಹಳ ವಿಸ್ಮಯವನ್ನು ಹೊಂದಿ ಅರ್ಜುನನನ್ನು ಪ್ರಶಂಸಿಸಿದರು.

ಏವಮಸ್ತ್ರೇಣ ತಾನ್ ವೀರಾನ್ ಯೋಧಯಿತ್ವಾ ಧನಂಜಯಃ ।
ಜಯದ್ರಥಶಿರಃ ಪಶ್ಚಾಚ್ಚ್ಯಾವಯಾಮಾಸ ಪಾಂಡವಃ ॥ ೨೯ ॥

ಹೀಗೆ ವೀರನಾದ ಪಾಂಡುಪುತ್ರನಾದ ಅರ್ಜುನನು ಶತ್ರುಗಳ ಜೊತೆಯಲ್ಲಿ ಯುದ್ಧವನ್ನುಮಾಡಿ ಜಯದ್ರಥನ ಶಿರಸ್ಸನ್ನು ಅಲ್ಲಿಂದ ಹೊರಗೆ ತೆಗೆದುಕೊಂಡು ಹೋಗಿ ಬೀಳಿಸಿದನು.

ತಚ್ಛಿರಶ್ಚ್ಯಾವಮಾನಂ ತು ದದೃಶುಸ್ತಾವಕಾ ಯುಧಿ ।
ಶಲ್ಯಕರ್ಣಕೃಪಾ ರಾಜನ್ ಮೋಹಿತಾಃ ಸವ್ಯಸಾಚಿನಾ ॥ ೩೦ ॥

ಅರ್ಜುನನ ಅದ್ಭುತವಾದ ಕರ್ಮದಿಂದ ಮೋಹಿತರಾದ ನಿನ್ನವರಾದ ಶಲ್ಯ, ಕರ್ಣ, ಕೃಪರು ಎಲೈ ರಾಜನೇ, ರಣರಂಗದಲ್ಲಿ ಆ ಶಿರಸ್ಸು ಹಾಗೆ ಹಾರುತ್ತಿದ್ದುದನ್ನು ನೋಡಿದರು.

ಶಿರಸಿ ಚ್ಯಾವಿತೇ ತಸ್ಯ ಶರೈರಾಶೀವಿಷೋಪಮೈಃ ।
ಪಶ್ಚಾತ್ ಕಾಯೋಽಪತದ್ ಭೂಮಿಂ ಶೋಚಯನ್ ಸರ್ವಪಾರ್ಥಿವಾನ್ ॥

ವಿಷಸರ್ಪಸದೃಶವಾದ ಬಾಣಗಳಿಂದ ಅವನ ಶಿರಸ್ಸು ಹಾಗೆ ಹಾರಿಸಲ್ಪಡುತ್ತಿರಲು ಅವನ ಶರೀರವು ಎಲ್ಲ ರಾಜರಿಗೂ ದುಃಖವನ್ನುಂಟು ಮಾಡುತ್ತಾ, ಅನಂತರ ಭೂಮಿಯ ಮೇಲೆ ಬಿದ್ದಿತು.

ದೃಷ್ಟ್ವಾ ತು ನಿಹತಂ ಸಂಖ್ಯೇ ಸಿಂಧುರಾಜಂ ಮಹಾರಥಮ್ ॥
ಪುತ್ರಾಣಾಂ ತವ ನೇತ್ರೇಭ್ಯೋ ದುಃಖಾದ್ ಬಹ್ವಪತಜ್ಜಲಮ್ ॥ ೩೨ ॥

ಮಹಾರಥನಾದ ಸಿಂಧುರಾಜನು ರಣರಂಗದಲ್ಲಿ ಹತನಾದುದನ್ನು ನೋಡಿ ನಿನ್ನ ಪುತ್ರರ ಕಣ್ಣುಗಳಿಂದ ಬಹಳವಾದ ದುಃಖಜಲವು ಹರಿಯಿತು.

ಭೀಮಸೇನೋಽಪಿ ಸಂಗ್ರಾಮೇ ಬೋಧಯನ್ನಿವ ಪಾಂಡವಮ್ ।
ಸಿಂಹನಾದೇನ ಮಹತಾ ಪೂರಯಾಮಾಸ ರೋದಸೀ ॥ ೩೩ ॥

ಭೀಮಸೇನನೂ ಸಹ ರಣರಂಗದಲ್ಲಿ (ಸೈಂಧವ ವಧೆಯನ್ನು) ಯುಧಿಷ್ಠಿರನಿಗೆ ತಿಳಿಸುವವನಂತೆ ದೊಡ್ಡ ಸಿಂಹನಾದದಿಂದ ಭೂಮಿ ಮತ್ತು ಅಂತರಿಕ್ಷಗಳನ್ನು ತುಂಬಿದನು.

ತಂ ಶ್ರುತ್ವಾ ತು ಮಹಾನಾದಂ ಧರ್ಮಪುತ್ರೋ ಯುಧಿಷ್ಠಿರಃ ।
ಭೀಮಶ್ಚ ವೃಷ್ಣಿಸಿಂಹಶ್ಚ ಯುಧಾಮನ್ಯುಶ್ಚ ಭಾರತ ॥ ೩೪ ॥

ಉತ್ತಮೌಜಾಶ್ಚ ವಿಕ್ರಾಂತ ಶಂಖಾನ್ ದಧ್ಮುಃ ಪೃಥಕ್ ಪೃಥಕ್ ॥
ಸೈಂಧವಂ ನಿಹತಂ ಮೇನೇ ಫಲ್ಗುನೇನ ಮಹಾತ್ಮನಾ ॥ ೩೫ ॥

ಆ ಮಹಾನಾದವನ್ನು ಕೇಳಿದ ಧರ್ಮಪುತ್ರನಾದ ಯುಧಿಷ್ಠಿರ, ಭೀಮ, ವೃಷ್ಣಿಸಿಂಹನಾದ ಸಾತ್ಯಕಿ, ಯುಧಾಮನ್ಯು, ಉತ್ತಮೌಜ ಮೊದಲಾದ

ಪರಾಕ್ರಮಶಾಲಿಗಳು ತಮ್ಮ ತಮ್ಮ ಶಂಖಗಳನ್ನು ಊದಿದರು. ಎಲೈ ಭಾರತನೇ, ಯುಧಿಷ್ಠಿರನು ಮಹಾತ್ಮನಾದ ಅರ್ಜುನನಿಂದ ಸೈಂಧವನು ಹತನಾಗಿದ್ದಾನೆ ಎಂದು ತಿಳಿದನು.

ತತೋ ವಾದಿತ್ರಘೋಷೇಣ ಸ್ವಾನ್ ಯೋಧಾನಭಿಹರ್ಷಯನ್ ।
ಅಭ್ಯವರ್ತತ ಸಂಗ್ರಾಮೇ ಭಾರದ್ವಾಜಂ ಯುಯುತ್ಸಯಾ ॥ ೩೬ ॥

ಆನಂತರ ವಾದಿತ್ರಘೋಷದಿಂದ ತನ್ನ ಯೋಧರನ್ನು ಹರ್ಷಗೊಳಿಸುತ್ತಾ ರಣರಂಗದಲ್ಲಿ ದ್ರೋಣರ ಜೊತೆಯಲ್ಲಿ ಯುದ್ಧ ಮಾಡಲು ಬಯಸಿ ಅವರೆಡೆಗೆ ಸಾಗಿದನು.

ತತಃ ಪ್ರವವೃತೇ ರಾಜನ್ಪ್ರಂ ಗಚ್ಛತಿ ಭಾಸ್ಕರೇ ।
ದ್ರೋಣಸ್ಯ ಸೋಮಕೈಃ ಸಾರ್ಧಂ ಸಂಗ್ರಾಮೋ ಲೋಮಹರ್ಷಣಃ ॥

ಎಲೈ ರಾಜನೇ, ಸೂರ್ಯನು ಇನ್ನೇನು ಅಸ್ತಂಗತನಾಗುತ್ತಿರಲು ಆಗ ದ್ರೋಣರಿಗೂ ಮತ್ತು ಸೋಮಕರಿಗೂ ರೋಮಾಂಚಕಾರಿಯಾದ ಯುದ್ಧವು ನಡೆಯಿತು.

ತೇ ತು ಸರ್ವಪ್ರಯತ್ನೇನ ಭಾರದ್ವಾಜಂ ಜಿಘಾಂಸವಃ ।
ಸೈಂಧವೇ ನಿಹತೇ ರಾಜನ್ನಯುದ್ಧ್ಯಂತ ಮಹಾರಥಾಃ ॥ ೩೮ ॥

ಎಲೈ ರಾಜನೇ, ಸೈಂಧವನು ಹತನಾಗುತ್ತಿರಲು ಸೋಮಕ ಮಹಾರಥರು ದ್ರೋಣರನ್ನು ಕೊಲ್ಲಲು ಬಯಸಿ ಸರ್ವಪ್ರಯತ್ನದಿಂದ ಯುದ್ಧವನ್ನು ಮಾಡಿದರು.

ಪಾಂಡವಾಸ್ತು ಜಯಂ ಲಬ್ಧ್ವಾ ಸೈಂಧವಂ ವಿನಿಹತ್ಯ ಚ ।
ಅಯೋಧಯಂಸ್ತತೋ ದ್ರೋಣಂ ಜಯೋನ್ಮತ್ತಾಸ್ತತಸ್ತತಃ ॥ ೩೯ ॥

ಪಾಂಡವರಾದರೋ ಸೈಂಧವನನ್ನು ಕೊಂದು ಜಯವನ್ನು ಪಡೆದು ಜಯೋನ್ಮತ್ತರಾಗಿ ಅಲ್ಲಲ್ಲಿ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಅರ್ಜುನೋऽಪಿ ರಣೇ ಯೋಧಾಂಸ್ತಾವಕಾನ್ ರಥಸತ್ತಮಾನ್ ।
ಅಯೋಧಯನ್ಮಹಾರಾಜ ಹತ್ವಾ ಸೈಂಧವಕಂ ನೃಪಮ್ ॥ ೪೦ ॥

ಎಲೈ ಮಹಾರಾಜನೇ, ಅರ್ಜುನನೂ ಸಹ ರಣರಂಗದಲ್ಲಿ ರಾಜನಾದ ಸೈಂಧವನನ್ನು ಕೊಂದು ನಿನ್ನ ರಥಶ್ರೇಷ್ಠರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸ ದೇವಶತ್ರೂನಿವ ದೇವರಾಜಃ
ಕಿರೀಟಮಾಲೀ ವ್ಯಧಮತ್ ಸಮಂತಾತ್ ।
ಯಥಾ ತಮಾಂಸ್ಯಭ್ಯುದಿತಸ್ತಮೋಘ್ನಃ
ಪೂರ್ವಾಂ ಪ್ರತಿಜ್ಞಾಂ ಸಮವಾಪ್ಯ ವೀರಃ ॥ ೪೧ ॥

ಕಿರೀಟಮಾಲಿಯಾದ ಅರ್ಜುನನು ತನ್ನ ಪೂರ್ವಪ್ರತಿಜ್ಞೆಯನ್ನು ನೆರವೇರಿಸಿ ದೇವರಾಜನಾದ ಇಂದ್ರನು ದೇವಶತ್ರುಗಳನ್ನು ನಾಶಪಡಿಸಿದಂತೆ, ಉದಯಿಸಿದ ಸೂರ್ಯನು ಕತ್ತಲೆಯನ್ನು ನಾಶಪಡಿಸಿದಂತೆ ಶತ್ರುಗಳನ್ನು ನಾಶಪಡಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಾತ್ರಿಂಶದಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ಷಟ್‌ಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ತೆರಡನೆಯ
ಅಧ್ಯಾಯ ಮುಗಿಯಿತು.

॥ ಜಯದ್ರಥವಧ ಪರ್ವವು ಮುಗಿಯಿತು ॥

★ ★ ★ ★ ★

೬. ಘಟೋತ್ಕಚವಧಪರ್ವ

ನೂರ ಮೂವತ್ಮೂರನೆಯ ಅಧ್ಯಾಯ

ಸೈಂಧವವಧೆಯಿಂದ ಪಾಂಡವರ ಹರ್ಷ. ಸತ್ಕಾರ ಮತ್ತು ಸಲ್ಲಾಪ.

ಧೃತರಾಷ್ಟ್ರಃ

ತಸ್ಮಿನ್ ಏನಿಹತೇ ವೀರೇ ಸೈಂಧವೇ ಸವ್ಯಸಾಚಿನಾ ।
ಮಾಮಕಾ ಯದಕುರ್ವಂತ ತನ್ಮಾಚಕ್ಷ್ವ ಸಂಜಯ ॥ ೧ ॥

ಧೃತರಾಷ್ಟ್ರ- ಎಲೈ ಸಂಜಯನೇ, ವೀರನಾದ ಆ ಸೈಂಧವನು ಅರ್ಜುನನಿಂದ ಕೊಲ್ಲಲ್ಪಡುತ್ತಿರಲು ನನ್ನವರು ಏನು ಮಾಡಿದರು ಎಂದು ಹೇಳು.

ಪಶ್ಯತಾಂ ಸರ್ವಯೋಧಾನಾಂ ಮಾಮಕಾನಾಂ ಮಹಾರಣೇ ।
ಅಹನ್ಯತ ಕಥಂ ಯುದ್ಧೇ ಸೈಂಧವಃ ಸವ್ಯಸಾಚಿನಾ ॥ ೨ ॥

ನನ್ನ ಎಲ್ಲ ಯೋಧರು ನೋಡುತ್ತಿರುವಂತೆಯೇ ಮಹಾಯುದ್ಧದಲ್ಲಿ ಅರ್ಜುನನಿಂದ ಸೈಂಧವನು ಹೇಗೆ ಹತನಾದನು?

ಕಥಂ ದ್ರೋಣಕೃಪೈರ್ಗುಪ್ತಃ ಕರ್ಣೇನ ಚ ಮಹಾರಣೇ ।
ಫಲ್ಗುನಾಗ್ನಿಮುಖಂ ಘೋರಂ ಪ್ರವಿಷ್ಟಃ ಸಾಧು ಸೈಂಧವಃ ॥ ೩ ॥

ಮಹಾಯುದ್ಧದಲ್ಲಿ ಅಶ್ವತ್ಥಾಮರಿಂದಲೂ, ಕೃಪರಿಂದಲೂ ಮತ್ತು ಕರ್ಣನಿಂದಲೂ ರಕ್ಷಿಸಲ್ಪಟ್ಟ ಸೈಂಧವನು ಹೇಗೆ ಅರ್ಜುನನ ಘೋರವಾದ ಅಗ್ನಿಮುಖವನ್ನು ಚೆನ್ನಾಗಿ ಪ್ರವೇಶಿಸಿದನು?

ತಸ್ಮಿನ್ ಹತೇ ಮಹೇಷ್ವಾಸೇ ಮಂದಾತ್ಮಾ ಚ ಸುಯೋಧನಃ ।
ಭ್ರಾತೃಭಿಃ ಸಹಿತಃ ಸೂತ ಕಿಮಕಾರ್ಷೀದನಂತರಮ್ ॥ ೪ ॥

ಮಹಾಧನುರ್ಧಾರಿಯಾದ ಅವನು ಹತನಾಗುತ್ತಿರಲು ಮಂದನಾದ ಸುಯೋಧನನು ತನ್ನ ತಮ್ಮಂದಿರಿಂದ ಸಹಿತನಾಗಿ ಎಲೈ ಸೂತನೇ, ಅನಂತರ ಏನು ಮಾಡಿದನು?

ಸಂಜಯಃ

ಸೈಂಧವಂ ನಿಹತಂ ದೃಷ್ಟ್ವಾ ರಣೇ ಪಾರ್ಥೇನ ಮಾರಿಷ ।
ಅಮರ್ಷವಶಮಾಪನ್ನಃ ಕೃಪಃ ಶಾರದ್ವತಸ್ತದಾ ॥ ೫ ॥

ಮಹತಾ ಶರವರ್ಷೇಣ ಪಾಂಡವಂ ಸಮವಾಕಿರತ್ ।
ದ್ರೌಣಿಶ್ಚಾಭ್ಯದ್ರವತ್ಪಾರ್ಥಂ ರಥಮಾಸ್ಥಾಯ ಫಲ್ಗುನಮ್ ॥ ೬ ॥

ಸಂಜಯ– ಎಲೈ ಪೂಜ್ಯನೇ, ಯುದ್ಧದಲ್ಲಿ ಅರ್ಜುನನಿಂದ ಸೈಂಧವನು ಹತನಾದುದನ್ನು ನೋಡಿ, ಶಾರದ್ವತರ ಪುತ್ರರಾದ ಕೃಪರು ರೋಷಾವಿಷ್ಟರಾಗಿ ಅರ್ಜುನನ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಕರೆದರು. ಅಶ್ವತ್ಥಾಮರೂ ಸಹ ರಥವನ್ನೇರಿ ಅರ್ಜುನನ ಕಡೆಗೆ ಧಾವಿಸಿದರು.

ತಾವೇನಂ ರಥಿನಾಂ ಶ್ರೇಷ್ಠೌ ರಥಾಭ್ಯಾಂ ರಥಸತ್ತಮಮ್ ।
ಉಭಾವುಭಯತಸ್ತೀಕ್ಷ್ಣೈರ್ವಿಶಿಖೈರಭ್ಯವರ್ಷತಾಮ್ ॥ ೭ ॥

ರಥಶ್ರೇಷ್ಠರಾದ ಅವರಿಬ್ಬರೂ ಎರಡು ಪಾರ್ಶ್ವಗಳಿಂದ ತೀಕ್ಷ್ಣವಾದ ಬಾಣಗಳಿಂದ ರಥಶ್ರೇಷ್ಠನಾದ ಅರ್ಜುನನನ್ನು ಪೀಡಿಸಿದರು.

ಸ ತಥಾ ಶರವರ್ಷಾಭ್ಯಾಂ ಸುಮಹದ್ಭ್ಯಾಂ ಮಹಾಭುಜಃ ।
ಪೀಡ್ಯಮಾನಃ ಪರಾಮಾರ್ತಿಮಗಮದ್ರಥಿನಾಂ ವರಃ ॥ ೮ ॥

ಆ ರೀತಿಯಾಗಿ ಬಹಳ ಶ್ರೇಷ್ಠರಾದ ಆ ಇಬ್ಬರಿಂದ ಬಾಣಗಳ ಮಳೆಗಳಿಂದ ಪೀಡಿಸಲ್ಪಟ್ಟ ರಥಿಶ್ರೇಷ್ಠನಾದ ಅರ್ಜುನನು ಬಹಳ ದುಃಖವನ್ನು ಹೊಂದಿದನು.

ಸೋಽಜಿಘಾಂಸುರ್ಗುರುಂ ಸಂಖೇ ಗುರೋಸ್ತನಯಮೇವ ಚ ।
ಚಕಾರಾಚಾರ್ಯಕಂ ತತ್ರ ಕುಂತೀಪುತ್ರೋ ಧನಂಜಯಃ ॥ ೯ ॥

ಕುಂತೀಪುತ್ರನಾದ ಧನಂಜಯನು ಯುದ್ಧದಲ್ಲಿ ಗುರುಗಳನ್ನೂ ಮತ್ತು ಗುರುಪುತ್ರರನ್ನೂ ಕೊಲ್ಲಲು ಬಯಸದೆ ಅವರಿಗೆ ಗುರುತ್ವಪ್ರಯುಕ್ತವಾದ ಗೌರವವನ್ನು ತೋರಿಸಿದನು.

ಅಸ್ತ್ರೈರಸ್ತ್ರಾಣಿ ಸಂವಾರ್ಯ ದ್ರೌಣೇಃ ಶಾರದ್ವತಸ್ಯ ಚ ।
ಮಂದವೇಗಾನಿಷೂಂಸ್ತಾಭ್ಯಾಮಜಿಘಾಂಸುರವಾಸೃಜತ್ ॥ ೧೦ ॥

ಅಶ್ವತ್ಥಾಮರ ಮತ್ತು ಕೃಪರ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ನಿವಾರಿಸಿ, ಅವರನ್ನು ಕೊಲ್ಲಲು ಇಷ್ಟಪಡದೆ ಮಂದವೇಗವುಳ್ಳ ಬಾಣಗಳನ್ನು ಪ್ರಯೋಗಿಸಿದನು.

ತೇ ಚಾಪಿ ಭೃಶಮಭ್ಯಘ್ನನ್ ವಿಶಿಖಾ ಜಯಚೋದಿತಾಃ ।
ಬಹುತ್ವಾತ್ತು ಪರಾಮಾರ್ತಿಂ ಶರಾಣಾಂ ತಾವಗಚ್ಛತಾಮ್ ॥ ೧೧ ॥

ಅರ್ಜುನನಿಂದ ಪ್ರೇರಿತವಾದ ಆ ಬಾಣಗಳೂ ಸಹ ಅವರನ್ನು ಚೆನ್ನಾಗಿ ಪೀಡಿಸಿದವು. ಬಾಣಗಳ ಸಂಖ್ಯೆಯು ಬಹಳವಾಗಿದ್ದುದರಿಂದ ಅವರಿಬ್ಬರೂ ಬಹಳ ದುಃಖವನ್ನು ಹೊಂದಿದರು.

ಅಥ ಶಾರದ್ವತೋ ರಾಜನ್ ಕೌಂತೇಯಶರಪೀಡಿತಃ ।
ಅವಾಸೀದದ್ ರಥೋಪಸ್ಥೇ ಮೂರ್ಚ್ಛಾಮಭಿಜಗಾಮ ಹ ॥ ೧೨ ॥

ಎಲೈ ರಾಜನೇ, ಆಗ ಅರ್ಜುನನ ಶರಪೀಡಿತರಾದ ಕೃಪರು ರಥಪೀಠದಲ್ಲಿ ಕುಸಿದು ಮೂರ್ಛೆಯನ್ನು ಹೊಂದಿದರು.

ವಿಹ್ವಲಂ ತಮಭಿಜ್ಞಾಯ ಭರ್ತಾರಂ ಶರಪೀಡಿತಮ್ ।
ಹತೋಽಯಮಿತಿ ಚ ಜ್ಞಾತ್ವಾ ಸಾರಥಿಸ್ತಮಪಾವಹತ್ ॥ ೧೩ ॥

ತನ್ನ ಸ್ವಾಮಿಯಾದ ಕೃಪರು ಬಾಣದಿಂದ ಪೀಡಿತರಾಗಿ ವಿಹ್ವಲವಾಗಿದ್ದಾರೆಂದೂ, ಹತರಾಗಿದ್ದಾರೆಂದೂ ತಿಳಿದು ಅವನ ಸಾರಥಿಯು ಅವರ ರಥವನ್ನು ರಣರಂಗದಿಂದ ಹೊರಗೆ ತೆಗೆದುಕೊಂಡು ಹೋದನು.

ತಸ್ಮಿನ್ ಸನ್ನೇ ಮಹಾರಾಜ ಕೃಪೇ ಶಾರದ್ವತೇ ಯುಧಿ ।
ಅಶ್ವತ್ಥಾಮಾಪ್ಯಪಾಯಾಸೀತ್ ಪಾಂಡವೇಯಾದ್ ರಥಾಂತರಮ್ ॥

ಎಲೈ ಮಹಾರಾಜನೇ, ಶಾರದ್ವತರಾದ ಕೃಪರು ಯುದ್ಧದಲ್ಲಿ ವಿನಾಶವನ್ನು ಹೊಂದುತ್ತಿರಲು ಅಶ್ವತ್ಥಾಮರೂ ಸಹ ಪಾಂಡವರನ್ನು ಬಿಟ್ಟು ಇನ್ನೊಂದು ರಥಕ್ಕೆ ಹೋದರು.

ದೃಷ್ಟ್ವಾ ಶಾರದ್ವತಂ ಪಾರ್ಥೋ ಮೂರ್ಚ್ಛಿತಂ ಶರಪೀಡಿತಮ್ ।
ರಥ ಏವ ಮಹೇಷ್ವಾಸಃ ಕೃಪಣಂ ಪರ್ಯದೇವಯತ್ ॥ ೧೫ ॥

ಮಹಾಧನುರ್ಧಾರಿಯಾದ ಅರ್ಜುನನು ಶಾರದ್ವತರಾದ ಕೃಪರು ಶರಪೀಡಿತರಾಗಿ ಮೂರ್ಛೆಯನ್ನು ಹೊಂದಿದ್ದಾರೆಂದು ತಿಳಿದು ರಥದಲ್ಲಿಯೇ ಕುಳಿತು ಕರುಣಾಜನಕವಾಗಿ ಗೋಳಾಡಿದನು.

ಅಶ್ರುಪೂರ್ಣಮುಖೋ ದೀನೋ ವಚನಂ ಚೇದಮಬ್ರವೀತ್ ।
ಪಶ್ಯನ್ನಿದಂ ಮಹಾಪ್ರಾಜ್ಞಃ ಕ್ಷತ್ತಾ ರಾಜಾನಮುಕ್ತವಾನ್ ।
ಕುಲಾಂತಕರಣೇ ಪಾಪೇ ಜಾತಮಾತ್ರೇ ಸುಯೋಧನೇ ॥ ೧೬ ॥

ನೀಯತಾಂ ಪರಲೋಕಾಯ ಸಾಧ್ವಯಂ ಕುಲಪಾಂಸನಃ ।
ಅಸ್ಮಾದ್ಧಿ ಕುರುಮುಖ್ಯಾನಾಂ ಮಹದುತ್ಪತ್ಸ್ಯತೇ ಭಯಮ್ ॥ ೧೭ ॥

ಕಣ್ಣೀರಿನಿಂದ ತುಂಬಿದ ಮುಖವುಳ್ಳವನಾಗಿ, ದೀನನಾಗಿ ಈ ಮಾತುಗಳನ್ನು ಆಡಿದನು- ಇದೆಲ್ಲವನ್ನೂ ಮೊದಲೇ ಗಮನಿಸಿದ ಮಹಾಪ್ರಾಜ್ಞನಾದ ವಿದುರನು ಕುಲನಾಶಕನೂ, ಪಾಪಿಯೂ ಆದ ಸುಯೋಧನನು ಹುಟ್ಟಿದ ತಕ್ಷಣವೇ ಧೃತರಾಷ್ಟ್ರನನ್ನು ಕುರಿತು, ಈ ಕುಲಪಾಂಸನನಾದ ಶಿಶುವು ಪರಲೋಕಕ್ಕೆ ಕಳುಹಿಸಲ್ಪಡಲಿ. ಇವನಿಂದ ಶ್ರೇಷ್ಠರಾದ ಕುರುಗಳಿಗೆ ದೊಡ್ಡ ಭಯವು ಉಂಟಾಗುವುದು ಎಂದು ಹೇಳಿದ್ದನು.

ತದಿದಂ ಸಮನುಪ್ರಾಪ್ತಂ ವಚನಂ ಸತ್ಯವಾದಿನಃ ।
ತತ್ಕತೇ ಹ್ಯದ್ಯ ಪಶ್ಯಾಮಿ ಶರತಲ್ಪಗತಂ ಕೃಪಮ್ ॥ ೧೮ ॥

ಸತ್ಯವಾದಿಯಾದ ವಿದುರನ ವಚನವು ಈಗ (ಫಲ ಸಹಿತವಾಗಿ) ಪ್ರಾಪ್ತವಾಗಿದೆ. ಆ ಕಾರಣದಿಂದ ನಾನು ಈ ದಿನ ಶರತಲ್ಪದಲ್ಲಿ ಇರುವ ಕೃಪರನ್ನು ನೋಡುತ್ತಿದ್ದೇನೆ.

ಧಿಗಸ್ತು ಕ್ಷಾತ್ರಮಾಚಾರಂ ಧಿಗಸ್ತು ಬಲಪೌರುಷಮ್ ।
ಕೋ ಹಿ ಬ್ರಾಹ್ಮಣಮಾಚಾರ್ಯಮಭಿದ್ರುಹ್ಯೇತ ಮಾದೃಶಃ ॥ ೧೯ ॥

ಕ್ಷತ್ರಿಯ ಧರ್ಮಕ್ಕೆ ಧಿಕ್ಕಾರವಿರಲಿ. ಬಲ-ಪೌರುಷಗಳಿಗೆ ಧಿಕ್ಕಾರವಿರಲಿ. ನನ್ನಂತಹ ಯಾವನು ತಾನೆ ಬ್ರಾಹ್ಮಣರಾದ ಆಚಾರ್ಯರಿಗೆ ದ್ರೋಹವನ್ನು ಮಾಡಿಯಾನು?

ಋಷಿಪುತ್ರೋ ಮಮಾಚಾರ್ಯೋ ದ್ರೋಣಸ್ಯ ದಯಿತಃ ಸಖಾ ।
ಏಷ ಶೇತೇ ರಥೋಪಸ್ಥೇ ಮದ್ಬಾಣೈರಭಿಪೀಡಿತಃ ॥ ೨೦ ॥

ಋಷಿಪುತ್ರರೂ, ದ್ರೋಣರ ಪ್ರಿಯಸ್ನೇಹಿತರೂ ಆದ ನನ್ನ ಈ ಗುರುಗಳು ನನ್ನ ಬಾಣಗಳಿಂದ ಬಹಳ ಪೀಡಿತರಾಗಿ ರಥಪೀಠದಲ್ಲಿ ಮಲಗಿದ್ದಾರೆ.

ಅಕಾಮಯಾನೇನ ಮಯಾ ವಿಶಿಖೈರರ್ದಿತೋ ಭೃಶಮ್ ।
ಅವಾಸೀದದ್ರಥೋಪಸ್ಥೇ ಪ್ರಾಣಾನ್ ಪೀಡಯತೀವ ಮೇ ॥ ೨೧ ॥

ನನಗೆ ಇಷ್ಟವಿಲ್ಲದಿದ್ದರೂ ಬಾಣಗಳಿಂದ ಚೆನ್ನಾಗಿ ಹೊಡೆದೆನು. ರಥಪೀಠದಲ್ಲಿ ಕುಸಿದ ಅವರು ನನ್ನ ಪ್ರಾಣಗಳನ್ನು ಪೀಡಿಸುತ್ತಿದ್ದಾರೆ.

ಶರಾರ್ದಿತೇನ ಹಿ ಮಯಾ ಪ್ರೇಕ್ಷಣೀಯೋ ಮಹಾದ್ಯುತಿಃ ।
ಪುತ್ರಶೋಕಾಭಿಭೂತೇನ ಶಠೈರಭ್ಯರ್ದಿತೇನ ಚ ।
ಪ್ರತ್ಯಕ್ಷೋ ಬಹುಭಿರ್ಬಾಣೈರ್ದಶಧರ್ಮಗತೇನ ವೈ ॥ ೨೨ ॥

ಪುತ್ರಶೋಕದಿಂದ ಕೂಡಿದ, ಬಾಣಗಳಿಂದ ಪೀಡಿತನಾದ ಮತ್ತು ದಶಧರ್ಮಗತನಾದ (ದುರವಸ್ಥೆಯನ್ನು ಹೊಂದಿದ) ನನ್ನಿಂದ ಮಹಾಕಾಂತಿಯುಕ್ತರೂ, ಮನೋಹರರೂ ಆದ ಗುರುಗಳು ಅನೇಕ ಬಾಣಗಳಿಂದ ಪೀಡಿಸಲ್ಪಟ್ಟರು.

ಶೋಚಯತ್ಯೇಷ ನಿಪತನ್ ಭೂಯಃ ಪುತ್ರವಧಾದ್ಧಿ ಮಾಮ್ ।
ಕೃಪಣಂ ಸ್ವರಥೇ ಸನ್ನಂ ಪಶ್ಯ ಕೃಷ್ಣ ಯಥಾಗತಮ್ ॥ ೨೩ ॥

ತಮ್ಮ ರಥದಲ್ಲಿ ಕುಸಿದ ಇವರು ನನಗೆ ನನ್ನ ಪುತ್ರವಧೆಗಿಂತಲೂ ಹೆಚ್ಚಾದ ದುಃಖವನ್ನು ಉಂಟುಮಾಡುತ್ತಿದ್ದಾರೆ. ಕೃಷ್ಣನೇ, ತಮ್ಮ ರಥದಲ್ಲಿ ಕುಸಿದು ಅಂತಹ ಅವಸ್ಥೆಯನ್ನು ಹೊಂದಿರುವ ಕೃಪಣರಾದ ಕೃಪಾಚಾರ್ಯರನ್ನು ನೋಡು.

ಉಪಾಕೃತ್ಯ ತು ವೈ ವಿದ್ಯಾಮಾಚಾರ್ಯೇಭ್ಯೋ ನರರ್ಷಭಾಃ ।
ಪ್ರಯಚ್ಛಂತೀಹ ಯೇ ಕಾಮಾನ್ ದೇವತ್ವಮುಪಯಾಂತಿ ತೇ ॥ ೨೪ ॥

ಯಾವ ನರಶ್ರೇಷ್ಠರು ಗುರುಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಅವರಿಗೆ ಅಪೇಕ್ಷಿತವಾದ ಗುರುದಕ್ಷಿಣೆಯನ್ನು ಕೊಡುತ್ತಾರೆಯೋ ಅವರು ದೇವತ್ವವನ್ನು ಹೊಂದುತ್ತಾರೆ.

ಯೇ ತು ವಿದ್ಯಾಮುಪಾದಾಯ ಗುರುಭ್ಯಃ ಪುರುಷಾಧಮಾಃ ।
ಘ್ನಂತಿ ತಾನೇವ ದುರ್ವೃತ್ತಾಸ್ತೇ ವೈ ನಿರಯಗಾಮಿನಃ ॥ ೨೫ ॥

ಯಾವ ಪುರುಷಾಧಮರು ಗುರುಗಳಿಂದ ವಿದ್ಯೆಯನ್ನು ಸ್ವೀಕರಿಸಿ, ಅವರನ್ನೇ ಕೊಲ್ಲುತ್ತಾರೋ ದುರ್ನಡತೆಯುಳ್ಳ ಅಂತಹವರು ನರಕಕ್ಕೆ ಹೋಗುವರು.

ತದಿದಂ ನರಕಾಯಾದ್ಯ ಕೃತಂ ಕರ್ಮ ಮಯಾ ಧ್ರುವಮ್ ।
ಆಚಾರ್ಯಂ ಶರವರ್ಷೇಣ ರಥೇ ಸಾದಯತಾ ಕೃಪಮ್ ॥ ೨೬ ॥

ಗುರುಗಳಾದ ಕೃಪಾಚಾರ್ಯರನ್ನು ಬಾಣಗಳ ಮಳೆಯಿಂದ ರಥದಲ್ಲಿ ಕುಸಿಯುವಂತೆ ಮಾಡಿರುವ ನನ್ನಿಂದ ಈ ದಿನ ಖಂಡಿತವಾಗಿ ನರಕಕ್ಕೆ ಹೋಗುವ ಕ್ರೂರಕರ್ಮವು ಮಾಡಲ್ಪಟ್ಟಿದೆ.

ಯತ್ತತ್ ಪೂರ್ವಮುಪಾಕುರ್ವನ್ನಸ್ತ್ರಂ ಮಾಮಬ್ರವೀತ್ ಕೃಪಃ ।
ನ ಕಥಂಚನ ಕೌರವ್ಯ ಪ್ರಹರ್ತವ್ಯಂ ಗುರಾವಿತಿ ॥ ೨೭ ॥

ಗುರುಗಳಾದ ಕೃಪರು ಹಿಂದೆ ನನಗೆ ಅಸ್ತ್ರವಿದ್ಯೆಯ ಉಪದೇಶವನ್ನು ಮಾಡುವಾಗ ನನ್ನನ್ನು ಕುರಿತು– 'ಎಲೈ ಕೌರವ್ಯನೇ, ಯಾವ ಕಾರಣದಿಂದಲೂ ಗುರುಗಳಿಗೆ ಹೊಡೆಯಬಾರದು' ಎಂದು ಹೇಳಿದ್ದರು.

ತದಿದಂ ವಚನಂ ಸಾಧೋರಾಚಾರ್ಯಸ್ಯ ಮಹಾತ್ಮನಃ ।
ನಾನುಷ್ಠಿತಂ ತಮೇವಾಜೌ ವಿಶಿಖೈರಭವರ್ಷತಾ ॥ ೨೮ ॥

ಯುದ್ಧದಲ್ಲಿ ಅವರ ಮೇಲೆ ಬಾಣಗಳ ಮಳೆಯನ್ನು ಸುರಿಸಿ ನಾನು ಮಹಾತ್ಮರೂ, ಸಜ್ಜನರೂ ಆದ ಆಚಾರ್ಯರ ಈ ಮಾತನ್ನು ನಡೆಸಿಕೊಡಲಿಲ್ಲ.

ನಮಸ್ತಸ್ಮೈ ಸುಪೂಜ್ಯಾಯ ಗೌತಮಾಯಾಪಲಾಯಿನೇ ।
ಧಿಗಸ್ತು ಮಮ ವಾರ್ಷ್ಣೇಯ ಯೋ ಹ್ಯಸ್ಮೈ ಪ್ರಹರಾಮ್ಯಹಮ್ ॥೨೯॥

ಯುದ್ಧದಿಂದ ಹಿಮ್ಮೆಟ್ಟಿರುವ ಆತ್ಯಂತ ಪೂಜ್ಯರಾದ ಆ ಕೃಪರಿಗೆ ನಮಸ್ಕಾರವಿರಲಿ. ಎಲೈ ಕೃಷ್ಣನೇ, ಅಂತಹವರಿಗೆ ಹೊಡೆಯುವ ನನಗೆ ಧಿಕ್ಕಾರವಿರಲಿ.

ತಥಾ ವಿಲಪಮಾನೇ ತು ಸವ್ಯಸಾಚಿನಿ ತಂ ಪ್ರತಿ ।
ಸೈಂಧವಂ ನಿಹತಂ ದೃಷ್ಟ್ವಾ ರಾಧೇಯಃ ಸಮುಪಾದ್ರವತ್ ॥ ೩೦ ॥

ಅರ್ಜುನನು ಕೃಪರನ್ನು ಕುರಿತು ಆ ರೀತಿಯಲ್ಲಿ ಗೋಳಾಡುತ್ತಿದ್ದಾಗ ಸೈಂಧವನು ಹತನಾದುದನ್ನು ನೋಡಿ ಕರ್ಣನು ಅರ್ಜುನನ ಬಳಿಗೆ ಧಾವಿಸಿಬಂದನು.

ತಮಾಪತಂತಂ ರಾಧೇಯಮರ್ಜುನಸ್ಯ ರಥಂ ಪ್ರತಿ ।
ಪಾಂಚಲ್ಯೌ ಸಾತ್ಯಕಿಶ್ಚೈವ ಸಹಸಾ ಸಮುಪಾದ್ರವನ್ ॥ ೩೧ ॥

ಅರ್ಜುನನ ರಥದ ಮೇಲೆ ಎರಗುತ್ತಿದ್ದ ರಾಧಾಪುತ್ರನಾದ ಕರ್ಣನನ್ನು ಪಾಂಚಾಲ ದೇಶದ ಯುಧಾಮನ್ಯು, ಉತ್ತಮೌಜರು ಮತ್ತು ಸಾತ್ಯಕಿಯು ತಕ್ಷಣ ಧಾವಿಸಿ ಎದುರಿಸಿದರು.

ಉಪಾಯಾಂತಂ ತು ರಾಧೇಯಂ ದೃಷ್ಟ್ವಾ ಪಾರ್ಥೋ ಮಹಾರಥಃ ।
ಪ್ರಹಸನ್ ದೇವಕೀಪುತ್ರಮಿದಂ ವಚನಮಬ್ರವೀತ್ ॥ ೩೨ ॥

ಸಮೀಪಕ್ಕೆ ಬಂದ ಕರ್ಣನನ್ನು ನೋಡಿ ಮಹಾರಥನಾದ ಅರ್ಜುನನು ನಗುತ್ತಾ ದೇವಕೀಪುತ್ರನಾದ ಕೃಷ್ಣನನ್ನು ಕುರಿತು ಈ ಮಾತನ್ನು ಆಡಿದನು.

ಏಷ ಪ್ರಯಾತ್ಯಾಧಿರಥಿಃ ಸಾತ್ಯಕೇಃ ಸ್ಯಂದನಂ ಪ್ರತಿ ।
ನ ಮೃಷ್ಯತಿ ಹತಂ ನೂನಂ ಭೂರಿಶ್ರವಸಮಾಹವೇ ॥ ೩೩ ॥

ಅಧಿರಥ ಪುತ್ರನಾದ ಈ ಕರ್ಣನು ಸಾತ್ಯಕಿಯ ರಥದ ಬಳಿಗೆ ಹೋಗುತ್ತಿದ್ದಾನೆ. ಭೂರಿಶ್ರವನು ಯುದ್ಧದಲ್ಲಿ ಹತನಾದುದನ್ನು ಅವನು ಖಂಡಿತ ಸಹಿಸುತ್ತಿಲ್ಲ.

ಯತ್ರ ಯಾತ್ಯೇಷ ತತ್ರ ತ್ವಂ ಚೋದಯಾಶ್ವಾನ್ ಜನಾರ್ದನ ।
ಮಾ ಸೋಮದತ್ತೇಃ ಪದವೀಂ ಗಮಯೇತ್ ಸಾತ್ಯಕಿಂ ವೃಷಃ ॥ ೩೪ ॥

ಎಲೈ ಜನಾರ್ದನನೇ, ಅವನು ಹೋದ ಕಡೆಯಲ್ಲಿಯೇ ನನ್ನ ಅಶ್ವಗಳನ್ನು ಪ್ರಚೋದಿಸು. ಕರ್ಣನು ಸಾತ್ಯಕಿಯನ್ನು ಭೂರಿಶ್ರವನ ಮಾರ್ಗದಲ್ಲಿ ಕಳುಹಿಸುವುದು ಬೇಡ (ಎಂದು ಹೇಳಿದನು).

ಏವಮುಕ್ತೋ ಮಹಾಬಾಹುಃ ಕೇಶವಃ ಸವ್ಯಸಾಚಿನಾ ।
ಪ್ರತ್ಯುವಾಚ ಮಹಾತೇಜಾಃ ಕಾಲಯುಕ್ತಮಿದಂ ವಚಃ ॥ ೩೫ ॥

ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಮಹಾಬಾಹುವೂ, ಮಹಾತೇಜಸ್ವಿಯೂ ಆದ ಕೇಶವನು ಆ ಸಮಯಕ್ಕೆ ಯೋಗ್ಯವಾದ ಈ ಮಾತನ್ನು ಆಡಿದನು.

ಅಲಮೇಷ ಮಹಾಬಾಹುಃ ಕರ್ಣಾಯೈಕೋ ಹಿ ಪಾಂಡವ ।
ಕಂ ಪುನರ್ದ್ರೌಪದೇಯಾಭ್ಯಾಂ ಸಹಿತಃ ಸಾತ್ವತರ್ಷಭಃ ॥ ೩೬ ॥

ಎಲೈ ಪಾಂಡವನೇ, ಕರ್ಣನನ್ನು ಎದುರಿಸಲು ಮಹಾಬಾಹುವಾದ ಒಬ್ಬ ಸಾತ್ಯಕಿಯು ಸಾಕು. ಇನ್ನು ದ್ರುಪದಪುತ್ರರಾದ ಯುಧಾಮನ್ಯು ಮತ್ತು ಉತ್ತಮೌಜರಿಂದ ಸಾತ್ಯಕಿಯು ಸಹಿತನಾದ ಮೇಲೆ ಹೇಳುವುದೇನಿದೆ?

ನ ಚ ತಾವತ್ ಕ್ಷಮಃ ಪಾರ್ಥ ಕರ್ಣೇನ ತವ ಸಂಗರಃ ।
ಪ್ರಜ್ವಲಂತೀ ಮಹೋಲ್ಕೇವ ತಿಷ್ಠತ್ಯಸ್ಯ ಹಿ ವಾಸವೀ ।
ತ್ವದರ್ಥಂ ಪೂಜ್ಯಮಾನೈಷಾ ರಕ್ಷ್ಯತೇ ಪರವೀರಹನ್ ॥ ೩೭ ॥

ಎಲೈ ಪಾರ್ಥನೇ, ಸದ್ಯದಲ್ಲಿ ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡುವುದು ನಿನಗೆ ಯೋಗ್ಯವಲ್ಲ. ಎಲೈ ಶತ್ರುಘಾತಕನೇ, ಇಂದ್ರನು ಕೊಟ್ಟ ಶಕ್ತಿಯು ಮಹೋಲ್ಕೆಯಂತೆ ಪ್ರಜ್ವಲಿಸುತ್ತಾ ನಿತ್ಯವೂ ಪೂಜಿಸಲ್ಪಟ್ಟು ನಿನ್ನ ಸಲುವಾಗಿ ರಕ್ಷಿಸಲ್ಪಟ್ಟು ಅವನ ಬಳಿಯಲ್ಲಿದೆ.

ಅತಃ ಕರ್ಣಃ ಪ್ರಯಾತ್ವತ್ರ ಸಾತ್ವತಸ್ಯ ಯಥಾ ತಥಾ ।
ಅಹಂ ಜ್ಞಾಸ್ಯಾಮಿ ಕೌರವ್ಯ ಕಾಲಮಸ್ಯ ದುರಾತ್ಮನಃ ।
ಯತ್ಕೃತಂ ವಿಶಿಖೈಸ್ತೀಕ್ಷ್ಣೈಃ ಪಾತಯಿಷ್ಯತಿ ಭೂತಲೇ ॥ ೩೮ ॥

ಆದ್ದರಿಂದ ಕರ್ಣನು ಸಾತ್ಯಕಿಯ ಕಡೆಗೆ ಹೇಗೆ ಬೇಕೋ ಹಾಗೆ ಹೋಗಲಿ. ಎಲೈ ಕೌರವ್ಯನೇ, ದುರಾತ್ಮನಾದ ಅವನನ್ನು ನೀನು ತೀಕ್ಷ್ಣವಾದ ಬಾಣಗಳಿಂದ ಭೂತಳದಲ್ಲಿ ಕೆಡವುವ ಕಾಲವನ್ನು ನಾನು ತಿಳಿಯುವೆನು.

ಧೃತರಾಷ್ಟ್ರಃ

ಯೋಽಸೌ ಕರ್ಣೇನ ವೀರೇಣ ವಾರ್ಷ್ಣೇಯಸ್ಯ ಸಮಾಗಮಃ ।
ಹತೇ ತು ಭೂರಿಶ್ರವಸಿ ಸೈಂಧವೇ ಚ ನಿಪಾತಿತೇ ॥ ೩೯ ॥

ಸಾತ್ಯಕಿಶ್ಚಾಪಿ ವಿರಥಃ ಕಂ ಸಮಾರೂಢವಾನ್ ರಥಮ್ ।
ಚಕ್ರರಕ್ಷೌ ಚ ಪಾಂಚಲ್ಯೌ ತನ್ಮಾಚಕ್ಷ್ವ ಸಂಜಯ ॥ ೪೦ ॥

ಧೃತರಾಷ್ಟ್ರ– ಭೂರಿಶ್ರವನು ಹತನಾದಮೇಲೆ, ಸೈಂಧವನೂ ಹತನಾದ ಮೇಲೆ, ಈ ಕರ್ಣ ಮತ್ತು ಸಾತ್ಯಕಿಗೆ ಪರಸ್ಪರ ಸಮಾಗಮವಾಯಿತಷ್ಟೆ! ರಥಹೀನನಾಗಿದ್ದ ಸಾತ್ಯಕಿಯು ಆಗ ಯಾವ ರಥವನ್ನು ಏರಿದನು? ಎಲೈ ಸಂಜಯನೇ, ಅವನ ಚಕ್ರರಕ್ಷಕರಾಗಿದ್ದ ಪಾಂಚಾಲ ದೇಶದ ಯುಧಾಮನ್ಯು ಮತ್ತು ಉತ್ತಮೌಜರು ಯಾವ ರಥವನ್ನು ಏರಿದರೆಂದು ನನಗೆ ಹೇಳು.

ಸಂಜಯಃ

ಹಂತ ತೇ ವರ್ಣಯಿಷ್ಯಾಮಿ ಯಥಾವೃತ್ತಂ ಮಹಾರಣೇ ।
ಶುಶ್ರೂಷಸ್ವ ಸ್ಥಿರೋ ಭೂತ್ವಾ ದುರಾಚರಿತಮಾತ್ಮನಃ ॥ ೪೧ ॥

ಸಂಜಯ– ಸಂತೋಷ. ಮಹಾಯುದ್ಧದಲ್ಲಿ ಏನು ನಡೆಯಿತೆಂದು ನಾನು ನಿನಗೆ ವರ್ಣಿಸುವೆನು. ನಿನ್ನ ದುರಾಚಾರ ಫಲವಾದ ಅದನ್ನು ಸ್ಥಿರವಾಗಿ ಕೇಳು.

ಪೂರ್ವಮೇವ ಹಿ ಕೃಷ್ಣಸ್ಯ ಮನೋಗತಮಿದಂ ಪ್ರಭೋ ।
ವಿಜೇತವ್ಯೋ ಯಥಾ ವೀರಃ ಸಾತ್ಯಕಿರ್ಯೂಪಕೇತುನಾ ॥ ೪೨ ॥

ಎಲೈ ಪ್ರಭುವೇ, ವೀರನಾದ ಸಾತ್ಯಕಿಯು ಭೂರಿಶ್ರವನಿಂದ ಜಯಿಸಲ್ಪಡ-
ಬೇಕೆಂಬುದು ಮೊದಲಿನಿಂದಲೂ ಕೃಷ್ಣನ ಅಭಿಪ್ರಾಯವಾಗಿದ್ದಿತು.

ಅತೀತಾನಾಗತಂ ರಾಜನ್ ಸ ಹಿ ವೇತ್ತಿ ಜನಾರ್ದನಃ ।
ಅತಃ ಸೂತಂ ಸಮಾಹೂಯ ದಾರುಕಂ ಸಂದಿದೇಶ ಹ ।
ರಥೋ ಮೇ ಯುಜ್ಯತಾಂ ಕಾಲ್ಯಮಿತಿ ರಾಜನ್ ಮಹಾಬಲಃ ॥ ೪೩ ॥

ರಾಜನೇ, ಅತೀತಾನಾಗತವಾದ ಎಲ್ಲವನ್ನೂ ಜನಾರ್ದನನು ತಿಳಿದಿದ್ದಾನೆ.
ಆದ್ದರಿಂದ ಮಹಾಬಲನಾದ ಅವನು ತನ್ನ ಸೂತನಾದ ದಾರುಕನನ್ನು ಕರೆದು
ಪ್ರಾತಃಕಾಲದಲ್ಲಿನನ್ನ ರಥವನ್ನು ಆಣಿಗೊಳಿಸು ಎಂದು ಸಂದೇಶವನ್ನು ನೀಡಿದನು.

ನ ಹಿ ದೇವಾ ನ ಗಂಧರ್ವಾ ನ ಯಕ್ಷೋರಗರಾಕ್ಷಸಾಃ ।
ಮಾನವಾ ವಾ ವಿಜೇತಾರಃ ಕೃಷ್ಣಯೋಃ ಸಂತಿ ಕೇಚನ ॥ ೪೪ ॥

ಮೊದಲು ಕೃಷ್ಣಾರ್ಜುನರು ಕುಳಿತ ರಥದಲ್ಲಿ ಅನಂತರ ಯಾರು ಕುಳಿತರೂ
ದೇವತೆಗಳಾಗಲೀ, ಗಂಧರ್ವರಾಗಲೀ, ಯಕ್ಷೋರಗರಾಕ್ಷಸರಾಗಲೀ, ಮಾನವರಾಗಲೀ
ಅವರನ್ನು ಜಯಿಸಲಾರರು (ಲಕ್ಷಾಲಂಕಾರ).

ಪಿತಾಮಹಪುರೋಗಾಶ್ಚ ದೇವಾಃ ಸಿದ್ಧಾಶ್ಚ ತಂ ವಿದುಃ ।
ತಯೋಃ ಪ್ರಭಾವಮತುಲಂ ಶೃಣು ಯುದ್ಧ ಚ ತದ್ಯಥಾ ॥ ೪೫ ॥

ಬ್ರಹ್ಮದೇವರೇ ಮೊದಲಾದ ದೇವತೆಗಳೂ ಮತ್ತು ಸಿದ್ಧರೂ ಈ ವಿಷಯವನ್ನು
ತಿಳಿದಿದ್ದಾರೆ. ಸಾತ್ಯಕಿ ಮತ್ತು ಕರ್ಣರ ಅತುಲವಾದ ಪ್ರಭಾವವನ್ನು ಮತ್ತು ಅವರಿಗೆ
ನಡೆದ ಯುದ್ಧದ ರೀತಿಯನ್ನು ಕೇಳು.

ಸಾತ್ಯಕಿಂ ವಿರಥಂ ದೃಷ್ಟ್ವಾ ಕರ್ಣಂ ಚಾಭ್ಯುದ್ಯತಾಯುಧಮ್ ।
ದಧ್ಮೌ ಶಂಖಂ ಮಹಾವೇಗಮಾರ್ಷಭೇಣೈವ ಪೂರಿತಮ್ ॥ ೪೫ ॥

ಸಾತ್ಯಕಿಯು ರಥಹೀನನಾಗಿರುವುದನ್ನು ಮತ್ತು ಕರ್ಣನು ಆಯುಧವನ್ನು ಎತ್ತಿ
ಹಿಡಿದಿರುವುದನ್ನು ನೋಡಿದ ಕೃಷ್ಣನು ತನ್ನ ಶಂಖವನ್ನು ದಾರುಕನಿಗೆ ಸೂಚನೆಯನ್ನು
ಕೊಡಲು ಋಷಭನಾದವು ಬರುವಂತೆ ಊದಿದನು.

ದಾರುಕೋಽವೇತ್ಯ ಸಂದೇಶಂ ಶ್ರುತ್ವಾ ಶಂಖಸ್ಯ ಚ ಸ್ವನಮ್ ।
ರಥಮಾನ್ವಾನಯತ್ ತಸ್ಮೈ ಸುಪರ್ಣೋಚ್ಛ್ರಿತಕೇತನಮ್ ॥ ೪೬ ॥

ದಾರುಕನು ಶಂಖದ ಧ್ವನಿಯನ್ನು ಕೇಳಿ, ಕೃಷ್ಣನ ಸಂದೇಶವನ್ನು ತಿಳಿದು ಗರುಡ ಧ್ವಜವುಳ್ಳ ರಥವನ್ನು ಅವನಿಗಾಗಿ ತಂದನು.

ಸ ಕೇಶವಸ್ಯಾನುಮತೇ ರಥಂ ದಾರುಕಸಂಯುತಮ್ ।
ಆರುರೋಹ ಶನೈಃ ಪೌತ್ರೋ ಜ್ವಲನಾದಿತ್ಯಸನ್ನಿಭಮ್ ॥ ೪೭ ॥

ಕೇಶವನ ಅಪ್ಪಣೆಯಂತೆ ಸಾತ್ಯಕಿಯು ದಾರುಕನಿಂದ ಕೂಡಿದ ಜ್ವಲಿಸುವ ಸೂರ್ಯನ ಕಾಂತಿಯನ್ನು ಹೊಂದಿದ ಆ ರಥವನ್ನು ಏರಿದನು.

ಕಾಮಗೈಃ ಸೈನ್ಯಸುಗ್ರೀವಮೇಘಪುಷ್ಪಬಲಾಹಕೈಃ ।
ಹಯೋದಗ್ರೈರ್ಮಹಾವೇಗೈರ್ಹೇಮಭಾಂಡವಿಭೂಷಿತೈಃ ॥ ೪೮ ॥

ಯುಕ್ತಂ ಸಮಾರುಹ್ಯ ಚ ತಂ ವಿಮಾನಪ್ರತಿಮಂ ರಥಮ್ ।
ಅಭ್ಯದ್ರವತ ರಾಧೇಯಂ ಪ್ರವಪನ್ ಸಾಯಕಾನ್ ಬಹೂನ್ ॥ ೪೯ ॥

ಕಾಮಗಾಮಿಗಳಾದ, ಮಹಾವೇಗವನ್ನು ಹೊಂದಿದ, ಹೇಮಾಭರಣಗಳಿಂದ ಭೂಷಿತವಾದ, ಸೈನ್ಯ-ಸುಗ್ರೀವ-ಮೇಘಪುಷ್ಪ-ಬಲಾಹಕಗಳೆಂಬ ನಾಲ್ಕು ಶ್ರೇಷ್ಠವಾದ ಅಶ್ವಗಳನ್ನು ಹೂಡಿದ, ವಿಮಾನದಂತಿದ್ದ ರಥವನ್ನು ಏರಿ, ಬಾಣಗಳನ್ನು ಬೀಜಗಳಂತೆ ಚೆಲ್ಲುತ್ತಾ ಕರ್ಣನ ಮೇಲೆ ಎರಗಿದನು.

ಚಕ್ರರಕ್ಷಾವಪಿ ತದಾ ಯುಧಾಮನ್ಯೂತ್ತಮೌಜಸೌ ।
ಧನಂಜಯರಥಂ ಹಿತ್ವಾ ರಾಧೇಯಂ ಪ್ರತ್ಯುದೀಯತುಃ ॥ ೫೦ ॥

ಚಕ್ರರಕ್ಷಕರಾದ ಯುಧಾಮನ್ಯು ಮತ್ತು ಉತ್ತಮೌಜರೂ ಅರ್ಜುನನ ರಥವನ್ನು ಬಿಟ್ಟು ಆಗ ಕರ್ಣನ ಮೇಲೆಯೇ ಎರಗಿದರು.

ರಾಧೇಯೋಽಪಿ ಮಹಾರಾಜ ಶರವರ್ಷಂ ಸಮುತ್ಸೃಜನ್ ।
ಅಭ್ಯದ್ರವತ್ ಸುಸಂಕ್ರುದ್ಧೋ ರಣೇ ಶೈನೇಯಮಚ್ಯುತಮ್ ॥ ೫೧ ॥

ಎಲೈ ಮಹಾರಾಜನೇ, ಕರ್ಣನೂ ಸಹ ಬಹಳ ಕೋಪಗೊಂಡು ರಣರಂಗದಲ್ಲಿ ತನ್ನ ಗುಣಗಳಿಂದ ಚ್ಯುತನಾಗದ ಸಾತ್ಯಕಿಯ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾ ಆವನ ಕಡೆಗೆ ಧಾವಿಸಿದನು.

ನೈವ ದೈವಂ ನ ಗಾಂಧರ್ವಂ ನಾಸುರೋರಗರಾಕ್ಷಸಮ್ ।
ತಾದೃಶಂ ಭುವಿ ವಾ ಯುದ್ಧಂ ದಿವಿ ವಾ ಶ್ರುತಮಿತ್ಯುತ ॥ ೫೨ ॥

ದೇವತೆಗಳಿಗಾಗಲೀ, ಗಂಧರ್ವರಿಗಾಗಲೀ, ಅಸುರೋರಗರಾಕ್ಷಸರಿಗಾಗಲೀ ಭೂಮಿಯಲ್ಲಿ ಅಥವಾ ಆಕಾಶದಲ್ಲಿ ಅಂತಹ ಯುದ್ಧವು ನಡೆದುದನ್ನು ಯಾರೂ ಕೇಳಿರಲಿಲ್ಲ.

ಉಪಾರಮತ ತತ್ ಸೈನ್ಯಂ ಸರಥಾಶ್ವನರದ್ವಿಪಮ್ ।
ತಯೋರ್ದೃಷ್ಟ್ವಾ ಮಹಾರಾಜ ಕರ್ಮ ಸಮ್ಮೂಢಚೇತನಮ್ ॥ ೫೩ ॥

ಎಲೈ ಮಹಾರಾಜನೇ, ಅವರಿಬ್ಬರ ಕರ್ಮವನ್ನು ನೋಡಿ ಮೂಢರಾದ, ರಥಾಶ್ವ-ನರ-ಗಜಗಳಿಂದ ಕೂಡಿದ ಅವರ ಸೈನ್ಯಗಳು ಯುದ್ಧವನ್ನು ನಿಲ್ಲಿಸಿದವು.

ಸರ್ವೇ ಚ ಸಮಪಶ್ಯಂತ ತದ್ಯುದ್ಧಮತಿಮಾನುಷಮ್ ।
ತಯೋರ್ನ್ಯವರಯೋ ರಾಜನ್ ಸಾರಥ್ಯಂ ದಾರುಕಸ್ಯ ಚ ॥ ೫೪ ॥

ಎಲೈ ರಾಜನೇ, ಅವರೆಲ್ಲರೂ ನರಶ್ರೇಷ್ಠರಾದ ಅವರ ಅತಿಮಾನುಷವಾದ ಆ ಯುದ್ಧವನ್ನು ಮತ್ತು ದಾರುಕನ ಸಾರಥ್ಯ ಕೌಶಲವನ್ನು ನೋಡುತ್ತಾ ನಿಂತರು.

ಗತಪ್ರತ್ಯಾಗತಾವೃತ್ತೈರ್ಮಂಡಲೈಃ ಸನ್ನಿವರ್ತನೈಃ ।
ಸಾರಥೇಸ್ತು ರಥಸ್ಥಸ್ಯ ಕಾಶ್ಯಪೇಯಸ್ಯ ವಿಸ್ಮಿತಾಃ ॥ ೫೫ ॥

ಕಾಶ್ಯಪ ಗೋತ್ರದ ಸಾರಥಿಯಾದ ದಾರುಕನ ಮುಂದೆ ಸಾಗುವುದು, ಹಿಂದೆ ಬರುವುದು, ತಿರುಗುವುದು, ಮಂಡಲಗಳನ್ನು ಮಾಡುವುದು ಮೊದಲಾದ ಕೌಶಲವನ್ನು ನೋಡಿ ಎಲ್ಲರೂ ವಿಸ್ಮಿತರಾದರು.

ನಭಸ್ತಲಗತಾಶ್ಚೈವ ದೇವಗಂಧರ್ವದಾನವಾಃ ।
ಅತೀವಾವಹಿತಾ ದ್ರಷ್ಟುಂ ಕರ್ಣಶೈನೇಯಯೋ ರಣಮ್ ॥ ೫೬ ॥

ಆಕಾಶದಲ್ಲಿ ನಿಂತ ದೇವ-ಗಂಧರ್ವ-ದಾನವರು ಕರ್ಣ ಮತ್ತು ಸಾತ್ಯಕಿಯರ ಯುದ್ಧವನ್ನು ನೋಡಲು ಬಹಳ ಆಸಕ್ತರಾಗಿ ನಿಂತರು.

ಮಿತ್ರಾರ್ಥೇ ತೌ ಪರಾಕ್ರಾಂತೌ ಸ್ಪರ್ಧಿನೌ ಶುಷ್ಮಿಣೌ ರಣೇ ।
ಕರ್ಣಶ್ಚಾಮರಸಂಕಾಶೋ ಯುಯುಧಾನಶ್ಚ ಸಾತ್ಯಕಿಃ ॥ ೫೭ ॥

ದೇವತಾಕಾಂತಿಯನ್ನು ಹೊಂದಿದ ಕರ್ಣನು ಮತ್ತು ಸಾತ್ಯಕಿಯಾದ ಯುಯುಧಾನನು ಸ್ಪರ್ಧಿಸುವವರಾಗಿ, ವೀರ್ಯವಂತರಾಗಿ ಮಿತ್ರರ ಸಲುವಾಗಿ ಯುದ್ಧದಲ್ಲಿ ಪರಾಕ್ರಮವನ್ನು ಮಾಡಿದರು.

ಅನ್ಯೋನ್ಯಂ ತೌ ಮಹಾರಾಜ ಶರವರ್ಷೈರವರ್ಷತಾಮ್ ।
ಪ್ರಮಮಾಥ ಶಿನೇಃ ಪೌತ್ರಂ ಕರ್ಣಃ ಸಾಯಕವೃಷ್ಟಿಭಿಃ ॥ ೫೮ ॥

ಎಲೈ ಮಹಾರಾಜನೇ, ಅವರು ಪರಸ್ಪರವಾಗಿ ಬಾಣಗಳ ಮಳೆಯನ್ನು ಸುರಿಸಿದರು. ಕರ್ಣನು ಬಾಣಗಳ ಮಳೆಯಿಂದ ಶಿನಿಯ ಪೌತ್ರನಾದ ಸಾತ್ಯಕಿಯನ್ನು ಮರ್ದಿಸಿದನು.

ಅಮೃಷ್ಯಮಾಣೋ ನಿಧನಂ ಕೌರವ್ಯಜಲಸಂಧಯೋಃ ।
ಕರ್ಣಃ ಶೋಕಸಮಾವಿಷ್ಟೋ ಮಹೋರಗ ಇವ ಶ್ವಸನ್ ॥ ೫೯ ॥

ಸ ಶೈನೇಯಂ ರಣೇ ಕ್ರುದ್ಧಃ ಪ್ರದಹನ್ನಿವ ಚಕ್ಷುಷಾ ।
ಅಭ್ಯದ್ರವತ ವೇಗೇನ ಪುನಃ ಪುನರರಿಂದಮಃ ॥ ೬೦ ॥

ಕರ್ಣನು ಭೂರಿಶ್ರವ ಮತ್ತು ಜಲಸಂಧರ ವಧೆಯನ್ನು ಸಹಿಸದೆ ಶೋಕದಿಂದ ಕೂಡಿದವನಾಗಿ ಮಹಾಸರ್ಪದಂತೆ ಉಸಿರನ್ನು ಬಿಡುತ್ತಾ ಸಾತ್ಯಕಿಯನ್ನು ತನ್ನ ದೃಷ್ಟಿಯಿಂದ ಸುಡುವವನಂತೆ ಪುನಃ ಪುನಃ ಅರಿಂದಮನಾದ ಅವನು ವೇಗದಿಂದ ಸಾತ್ಯಕಿಯ ಮೇಲೆ ಎರಗಿದನು.

ತಂ ತು ಸಂಪ್ರೇಕ್ಷ್ಯ ಸಂಕ್ರುದ್ಧಂ ಸಾತ್ಯಕಿಃ ಪ್ರತ್ಯವಿಧ್ಯತ ।
ಮಹತಾ ಶರವರ್ಷೇಣ ಗಜಃ ಪ್ರತಿಗಜಂ ಯಥಾ ॥ ೬೧ ॥

ಅವನು ಬಹಳ ಕೋಪಗೊಂಡಿರುವುದನ್ನು ನೋಡಿ ಸಾತ್ಯಕಿಯು ದೊಡ್ಡ ಬಾಣಗಳ ವೃಷ್ಟಿಯನ್ನು ಕರೆದು ಗಜವು ಪ್ರತಿಗಜವನ್ನು ಹಿಂಸಿಸಿದಂತೆ ಅವನನ್ನು ಹಿಂಸಿಸಿದನು.

ತೌ ಸಮೇತ್ಯ ನರವ್ಯಾಘ್ರೌ ವ್ಯಾಘ್ರಾವಿವ ತರಸ್ವಿನೌ ।
ಅನ್ಯೋನ್ಯಂ ಸಂತತಕ್ಷತಾತೇ ರಣೇಽನುಪಮವಿಕ್ರಮೌ ॥ ೬೨ ॥

ಯುದ್ಧದಲ್ಲಿ ಅನುಪಮ ಪರಾಕ್ರಮವುಳ್ಳ ನರವ್ಯಾಘ್ರರಾದ ಅವರಿಬ್ಬರು ವೇಗಶಾಲಿಗಳಾದ ವ್ಯಾಘ್ರಗಳಂತೆ ಪರಸ್ಪರವಾಗಿ ಸಂಧಿಸಿ ಪರಸ್ಪರವಾಗಿ ಗಾಯಗೊಳಿಸಿದರು.

ತತಃ ಕರ್ಣಂ ಶಿನೇಃ ಪೌತ್ರಃ ಸರ್ವಪಾರಶವೈಃ ಶರೈಃ ।
ಬಿಭೇದ ಸರ್ವಗಾತ್ರೇಷು ಪುನಃ ಪುನರರಿಂದಮಃ ॥ ೬೩ ॥

ಅನಂತರ ಶಿನಿಯ ಪೌತ್ರನಾದ ಸಾತ್ಯಕಿಯು ಪೂರ್ಣವಾಗಿ ಕಬ್ಬಿಣದಿಂದ ಮಾಡಿದ ಬಾಣಗಳಿಂದ ಕರ್ಣನನ್ನು ಅವನ ಶರೀರದಲ್ಲೆಲ್ಲ ಪುನಃ ಪುನಃ ಭೇದಿಸಿದನು.

ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾಹರತ್ ।
ಅಶ್ವಾಂಶ್ಚ ಚತುರಃ ಶ್ವೇತಾನ್ ನಿಜಘ್ನೇ ನಿಶಿತೈಃ ಶರೈಃ ॥ ೬೪ ॥

ಅವನ ಸಾರಥಿಯನ್ನು ಭಲ್ಲದಿಂದ ರಥದ ಮುಂಭಾಗದಿಂದ ಕೆಡವಿದನು. ನಾಲ್ಕು ಶ್ವೇತಾಶ್ವಗಳನ್ನು ತೀಕ್ಷ್ಣವಾದ ಬಾಣಗಳಿಂದ ಕೊಂದನು.

ಛಿತ್ತ್ವಾ ಧ್ವಜಂ ಶತೇನೈವ ಶತಧಾ ಪುರುಷರ್ಷಭಃ ।
ಚಕಾರ ವಿರಥಂ ಕರ್ಣಂ ತವ ಪುತ್ರಸ್ಯ ಪಶ್ಯತಃ ॥ ೬೫ ॥

ನೂರು ಬಾಣಗಳಿಂದ ಪುರುಷಶ್ರೇಷ್ಠನಾದ ಅವನು ಧ್ವಜವನ್ನು ನೂರು ಭಾಗವಾಗಿ ಕತ್ತರಿಸಿ ನಿನ್ನ ಪುತ್ರನು ನೋಡುತ್ತಿರುವಂತೆಯೇ ಕರ್ಣನನ್ನು ರಥಹೀನನನ್ನಾಗಿ ಮಾಡಿದನು.

ತತೋ ವಿಮನಸೋ ರಾಜಂಸ್ತಾವಕಾಃ ಪುರುಷರ್ಷಭಾಃ ।
ವೃಷಸೇನಃ ಕರ್ಣಸುತಃ ಶಲ್ಯೋ ಮದ್ರಾಧಿಪಸ್ತಥಾ ॥ ೬೬ ॥

ದ್ರೋಣಪುತ್ರಶ್ಚ ಶೈನೇಯಂ ಸರ್ವತಃ ಪರ್ಯವಾರಯನ್ ।
ತತಃ ಪರ್ಯಾಕುಲಂ ಸರ್ವಂ ನ ಪ್ರಾಜ್ಞಾಯತ ಕಿಂಚನ ॥ ೬೭ ॥

ಎಲೈ ರಾಜನೇ, ಆಗ ವಿಷಾದಗೊಂಡ ನಿನ್ನ ಪುರುಷಶ್ರೇಷ್ಠರಾದ, ಕರ್ಣಸುತನಾದ ವೃಷಸೇನ, ಮದ್ರಾದಿಪತಿಯಾದ ಶಲ್ಯ ಮತ್ತು ದ್ರೋಣಪುತ್ರರಾದ ಅಶ್ವತ್ಥಾಮರು ಎಲ್ಲಕಡೆಗಳಿಂದಲೂ ಸಾತ್ಯಕಿಯನ್ನು ಸುತ್ತುವರಿದರು. ಅನಂತರ ಎಲ್ಲವೂ ಮಿಶ್ರಣವನ್ನು ಹೊಂದಿತು. ಏನೂ ತಿಳಿಯಲಿಲ್ಲ.

ತಥಾ ಸಾತ್ಯಕಿನಾ ವೀರೇ ವಿರಥೇ ಸೂತಜೇ ಕೃತೇ ।
ಹಾಹಾಕಾರಸ್ತತೋ ರಾಜನ್ ಸರ್ವಸೈನ್ಯೇಷು ಚಾಭವತ್ ॥ ೬೮ ॥

ಎಲೈ ರಾಜನೇ, ಸಾತ್ಯಕಿಯಿಂದ ವೀರನಾದ ಕರ್ಣನು ಆ ರೀತಿಯಲ್ಲಿ ರಥಹೀನನಾಗಿ ಮಾಡಲ್ಪಡುತ್ತಿರಲು ಎಲ್ಲ ಸೈನ್ಯಗಳಲ್ಲಿಯೂ ಹಾಹಾಕಾರ ಉಂಟಾಯಿತು.

ಕರ್ಣೋಽಪಿ ವಿಹ್ವಲೋ ರಾಜನ್ ಸಾತ್ವತೇನಾರ್ದಿತಃ ಶರೈಃ ।
ದುರ್ಯೋಧನರಥಂ ರಾಜನ್ನಾರುರೋಹ ವಿನಿಃಶ್ವಸನ್ ॥ ೬೯ ॥

ಮಾನಯಂಸ್ತವ ಪುತ್ರಸ್ಯ ಬಾಲ್ಯಾತ್ ಪ್ರಭೃತಿ ಸೌಹೃದಮ್ ।
ಕೃತಾಂ ರಾಜ್ಯಪ್ರದಾನೇನ ಪ್ರತಿಜ್ಞಾಂ ಪರಿಪಾಲಯನ್ ॥ ೭೦ ॥

ಎಲೈ ರಾಜನೇ, ಸಾತ್ಯಕಿಯ ಬಾಣಗಳಿಂದ ಪೀಡಿತನಾಗಿ ವಿಹ್ವಲನಾದ ಕರ್ಣನೂ ಸಹ ನಿಟ್ಟುಸಿರನ್ನು ಬಿಡುತ್ತಾ ಬಾಲ್ಯದಿಂದಲೂ ನಿನ್ನ ಪುತ್ರನು ತೋರಿಸಿದ ಸೌಹಾರ್ದವನ್ನು ಗೌರವಿಸುತ್ತಾ, ರಾಜ್ಯಪ್ರದಾನ ಕಾಲದಲ್ಲಿ ತಾನು ಮಾಡಿದ ಪ್ರತಿಜ್ಞೆಯನ್ನು ಪಾಲಿಸುತ್ತಾ ದುರ್ಯೋಧನನ ರಥವನ್ನು ಏರಿದನು.

ತಥಾ ತು ವಿರಥೇ ಕರ್ಣೇ ಪುತ್ರಾನ್ ವೈ ತವ ಪಾರ್ಥಿವ ।
ದುಃಶಾಸನಮುಖಾನ್ ಶೂರಾನ್ ನಾವಧೀತ್ ಸಾತ್ಯಕಿರ್ವಶೀ ॥ ೭೧ ॥

ಎಲೈ ರಾಜನೇ, ಕರ್ಣನು ಆ ರೀತಿಯಲ್ಲಿ ರಥಹೀನನಾಗುತ್ತಿರಲು ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡ ಸಾತ್ಯಕಿಯು ನಿನ್ನ ಪುತ್ರರಾದ ದುಶ್ಶಾಸನ ಮೊದಲಾದ ಶೂರರನ್ನು ಕೊಲ್ಲಲಿಲ್ಲ.

ರಕ್ಷನ್ ಪ್ರತಿಜ್ಞಾಂ ಚ ಪುನರ್ಭೀಮಸೇನಕೃತಾಂ ಪುರಾ ।
ವಿರಥಾನ್ ವಿಹ್ವಲಾಂಶ್ಚಕ್ರೇ ನ ತು ಪ್ರಾಣೈರ್ವ್ಯಯೋಜಯತ್ ॥ ೭೨ ॥

ಹಿಂದೆ ಭೀಮಸೇನನು ಮಾಡಿದ ಪ್ರತಿಜ್ಞೆಯನ್ನು ರಕ್ಷಿಸುವವನಾಗಿ ಅವರನ್ನು ರಥಹೀನರನ್ನಾಗಿ ಮತ್ತು ವಿಹ್ವಲರನ್ನಾಗಿ ಮಾಡಿದನು. ಪ್ರಾಣವಿಯೋಗವನ್ನು ಉಂಟು ಮಾಡಲಿಲ್ಲ.

ಭೀಮಸೇನೇನ ತು ವಧಃ ಪುತ್ರಾಣಾಂ ತೇ ಪ್ರತಿಶ್ರುತಃ ।
ಪುನರ್ದ್ಯೂತೇ ಚ ಪಾರ್ಥೇನ ವಧಃ ಕರ್ಣಸ್ಯ ಸಂಶ್ರುತಃ ॥ ೭೩ ॥

ಭೀಮಸೇನನಿಂದ ನಿನ್ನ ಪುತ್ರರ ವಧೆಯು ಪ್ರತಿಜ್ಞೆ ಮಾಡಲ್ಪಟ್ಟಿತು. ಹಾಗೆಯೇ ದ್ಯೂತಕಾಲದಲ್ಲಿ ಅರ್ಜುನನಿಂದ ಕರ್ಣನ ವಧೆಯು ಪ್ರತಿಜ್ಞೆ ಮಾಡಲ್ಪಟ್ಟಿತು.

ವಧೇ ತ್ವದುರ್ವನ್ ಯತ್ನಂ ತೇ ತಸ್ಯ ಕರ್ಣಮುಖಾಸ್ತದಾ ।
ನಾಶಕ್ನುವಂಶ್ಚ ತಂ ಹಂತುಂ ಸಾತ್ಯಕಿಂ ಪ್ರವರಾ ರಥಾಃ ॥ ೭೪ ॥

ಕರ್ಣ ಮೊದಲಾದವರು ಸಾತ್ಯಕಿಯನ್ನು ಕೊಲ್ಲಲು ಪ್ರಯತ್ನ ಮಾಡಿದರು. ಆದರೆ ಶ್ರೇಷ್ಠರಥರಾದ ಅವರು ಅವನನ್ನು ಕೊಲ್ಲಲು ಶಕ್ತರಾಗಲಿಲ್ಲ.

ದ್ರೌಣಶ್ಚ ಕೃತವರ್ಮಾ ಚ ತಥೈವಾನ್ಯೇ ಮಹಾರಥಾಃ ।
ನಿರ್ಜಿತಾ ಧನುಷೈಕೇನ ಶತಶಃ ಕ್ಷತ್ರಿಯರ್ಷಭಾಃ ।
ಕಾಂಕ್ಷತಃ ಪರಲೋಕಂ ಚ ಧರ್ಮರಾಜಸ್ಯ ಚ ಪ್ರಿಯಮ್ ॥ ೭೫ ॥

ಅಶ್ವತ್ಥಾಮರು, ಕೃತವರ್ಮ ಮತ್ತು ಇನ್ನೂ ಅನೇಕ ಮಹಾರಥರು ಮತ್ತು ನೂರಾರು ಸಂಖ್ಯೆಯ ಕ್ಷತ್ರಿಯ ಶ್ರೇಷ್ಠರು ಪರಲೋಕವನ್ನು ಬಯಸಿ ಧರ್ಮರಾಜನಿಗೆ ಪ್ರಿಯವನ್ನು ಮಾಡಲು ಬಯಸಿದ ಸಾತ್ಯಕಿಯ ಒಂದು ಧನುಸ್ಸಿನಿಂದ ಪರಾಜಿತರಾದರು.

ಕೃಷ್ಣಯೋಃ ಸದೃಶೋ ವೀರ್ಯೇ ಸಾತ್ಯಕಿಃ ಶತ್ರುಕರ್ಶನಃ ।
ಕೃಷ್ಣೋ ವಾಪಿ ಭವೇಲ್ಲೋಕೇ ಪಾರ್ಥೋ ವಾಪಿ ಧನುರ್ಧರಃ ।
ಶೈನೇಯೋ ವಾ ನರವ್ಯಾಘ್ರಶ್ಚತುರ್ಥೋ ನೋಪಲಭ್ಯತೇ ॥ ೭೬ ॥

ಶತ್ರುಕರ್ಶನನಾದ ಸಾತ್ಯಕಿಯು ಪರಾಕ್ರಮದಲ್ಲಿ ಕೃಷ್ಣಾರ್ಜುನರಿಗೆ ಸಮಾನನಾದವನು. ಲೋಕದಲ್ಲಿ ಕೃಷ್ಣನು ಪರಾಕ್ರಮಿಯಾಗಬಹುದು ಅಥವಾ ಧನುರ್ಧಾರಿಯಾದ ಅರ್ಜುನನು ಪರಾಕ್ರಮಿಯಾಗಬಹುದು ಅಥವಾ ನರವ್ಯಾಘ್ರನಾದ ಸಾತ್ಯಕಿಯು ಪರಾಕ್ರಮಿಯಾಗಬಹುದು. ನಾಲ್ಕನೆಯವನು ಕಾಣುವುದಿಲ್ಲ.

ಅಜಯ್ಯಂ ರಥಮಾಸ್ಥಾಯ ವಾಸುದೇವಸ್ಯ ಸಾತ್ಯಕಿಃ ।
ವಿರಥಂ ಕೃತವಾನ್ ಕರ್ಣಂ ವಾಸುದೇವಸಮೋ ಯುವಾ ॥ ೭೭ ॥

ಕೃಷ್ಣನಿಗೆ ಸಮಾನನಾದ ಯುವಕನಾದ ಸಾತ್ಯಕಿಯು ಅಜೇಯವಾದ ಕೃಷ್ಣನ ರಥವನ್ನು ಏರಿ ಕರ್ಣನನ್ನು ರಥಹೀನನನ್ನಾಗಿ ಮಾಡಿದನು.

ಧೃತರಾಷ್ಟ್ರಃ

ದಾರುಕೇಣ ಸಮಾಯುಕ್ತಂ ಸ್ವಬಾಹುಬಲದರ್ಪಿತಃ ।
ಕಚ್ಚಿದನ್ಯಂ ಸಮಾರೂಢಃ ಸ ರಥಂ ಸಾತ್ಯಕಿಃ ಪುನಃ ॥ ೭೮ ॥

ಧೃತರಾಷ್ಟ್ರ- ದಾರುಕನಿಂದ ಸಹಿತವಾದ ರಥವನ್ನು ಏರಿದ ತನ್ನ ಬಾಹುಬಲದಿಂದ ದರ್ಪಿತನಾದ ಸಾತ್ಯಕಿಯು ಪುನಃ ಇನ್ನೊಂದು ರಥವನ್ನು ಏರಿದನೆ?

ಏತದಿಚ್ಛಾಮ್ಯಹಂ ಶ್ರೋತುಂ ಕುಶಲೋ ಹ್ಯಸಿ ಭಾಷಿತುಮ್ ।
ಅಸಹ್ಯಂ ತಮಹಂ ಮನ್ಯೇ ತನ್ಮಾಚಕ್ಷ್ವ ಸಂಜಯ ॥ ೭೯ ॥

ನಾನು ಇದನ್ನು ತಿಳಿಯಲು ಬಯಸುತ್ತೇನೆ. ನೀನು ಚೆನ್ನಾಗಿ ಹೇಳುತ್ತಿದ್ದೀಯೆ. ಎಲೈ ಸಂಜಯನೇ, ಸಾತ್ಯಕಿಯ ಪರಾಕ್ರಮವು ಶತ್ರುಗಳು ಸಹಿಸಲು ಸಾಧ್ಯವಿಲ್ಲದುದು ಎಂದು ನಾನು ತಿಳಿಯುತ್ತೇನೆ. ಅದನ್ನು ನನಗೆ ಹೇಳು.

ಸಂಜಯಃ

ಶೃಣು ರಾಜನ್ ಯಥಾ ತಸ್ಯ ರಥಮನ್ಯಂ ಮಹಾಮತಿಃ ।
ದಾರುಕಸ್ಯಾನುಜಸ್ತೂರ್ಣಂ ಕಲ್ಪನಾವಿಧಿಕಲ್ಪಿತಮ್ ॥ ೮೦ ॥

ಆಯಸೈಃ ಕಾಂಚನೈಶ್ಚಾಪಿ ಪಟ್ಟೈರ್ನದ್ಧಂ ಸಕೂಬರಮ್ ।
ತಾರಾಸಹಸ್ರಖಚಿತಂ ಸಿಂಹಧ್ವಜಪತಾಕಿನಮ್ ॥ ೮೧ ॥

ಆಶ್ವೈರ್ವಾತಜವೈರ್ಯುಕ್ತಂ ಹೇಮಭಾಂಡಪರಿಚ್ಛದೈಃ ।
ಪಾಂಡರೈರಿಂದುಸಂಕಾಶೈಃ ಸರ್ವಶಬ್ದಾತಿಗೈರ್ದೃಢೈಃ ॥ ೮೨ ॥

ಚಿತ್ರಕಾಂಚನಸನ್ನಾಹೈರ್ವಾಜಮುಖ್ಯೈರ್ವಿಶಾಂಪತೇ ।
ಘಂಟಾಜಾಲಾಕುಲರವಂ ಶಕ್ತಿತೋಮರವಿದ್ಯುತಮ್ ॥ ೮೩ ॥

ವೃತಂ ಸಾಂಗ್ರಾಮಿಕೈರ್ದ್ರವ್ಯೈರ್ಬಹುಶಸ್ತ್ರಪರಿಚ್ಛದಮ್ ।
ರಥಂ ಸಂಪಾದಯಾಮಾಸ ಮೇಘಗಂಭೀರನಿಸ್ವನಮ್ ॥ ೮೪ ॥

ಸಂಜಯ– ಎಲೈ ರಾಜನೇ, ಮಹಾಮೇಧಾವಿಯಾದ ದಾರುಕನ ತಮ್ಮನು ಸಾತ್ಯಕಿಗೆ ಶಾಸ್ತ್ರೋಕ್ತರೀತಿಯಲ್ಲಿ ಅಣಿಗೊಳಿಸಿದ ಕಬ್ಬಣ ಮತ್ತು ಸುವರ್ಣದ ಪಟ್ಟಗಳಿಂದ ಬಿಗಿಯಲ್ಪಟ್ಟ ಕೂಬರಸಹಿತವಾದ, ನೂರು ನಕ್ಷತ್ರಗಳ ಚಿಹ್ನೆಯನ್ನು ಹೊಂದಿದ, ಸಿಂಹಧ್ವಜ ಮತ್ತು ಪತಾಕೆಗಳನ್ನು ಹೊಂದಿದ, ಸುವರ್ಣಾಲಂಕೃತವಾದ ಮನೋವೇಗವುಳ್ಳ ಚಂದ್ರನಂತೆ ಶ್ವೇತವರ್ಣದಿಂದ ಕೂಡಿದ ಸರ್ವಶಬ್ದಗಳನ್ನೂ ಸಹಿಸುವ, ಚಿನ್ನದ ಕಡಿವಾಣದ ಸಲಕರಣೆಗಳನ್ನು ಹೊಂದಿದ, ಶ್ರೇಷ್ಠವಾದ ಅಶ್ವಗಳನ್ನು ಹೂಡಿದ, ಘಂಟೆಗಳ ಸಮೂಹದಿಂದ ನಿಬಿಡವಾದ ನಾದವನ್ನು ಹೊಂದಿದ, ಶಕ್ತಿ-ತೋಮರಗಳಿಂದ (ಶಕ್ತಿ-ತೋಮರಗಳ ಮಿಂಚುಗಳಿಂದ) ಕೂಡಿದ, ಯುದ್ಧದ ಸರ್ವೋಪಕರಣಗಳಿಂದಲೂ ಮತ್ತು ಸರ್ವಶಸ್ತ್ರಗಳಿಂದಲೂ ತುಂಬಲ್ಪಟ್ಟ ಮೇಘದಂತೆ ಗಂಭೀರವಾದ ಘೋಷವುಳ್ಳ ರಥವನ್ನು ಸಂಪಾದಿಸಿದನು.

ತಂ ಸಮಾರುಹ್ಯ ಶೈನೇಯಸ್ತವ ಸೈನ್ಯಮುಪಾದ್ರವತ್ ।
ದಾರುಕೋಽಪಿ ಯಥಾಕಾಮಂ ಪ್ರಯಯೌ ಕೇಶವಾಂತಿಕಮ್॥ ೮೫ ॥

ಸಾತ್ಯಕಿಯು ಆ ರಥವನ್ನು ಏರಿ ನಿನ್ನ ಸೈನ್ಯದ ಮೇಲೆ ದಾಳಿ ಮಾಡಿದನು. ದಾರುಕನೂ ಸಹ ಅವನ ಮನಸ್ಸಿಗೆ ಬಂದಂತೆ ಕೃಷ್ಣನ ಶಿಬಿರಕ್ಕೆ ಹೋದನು.

ಕರ್ಣಸ್ಯಾಪಿ ಮಹಾರಾಜ ಶಂಖಗೋಕ್ಷೀರಪಾಂಡರೈಃ ।
ಚಿತ್ರಕಾಂಚನಸನ್ನಾಹೈಃ ಸದಶ್ವೈರ್ವೇಗವತ್ತರೈಃ ॥ ೮೬ ॥

ಹೇಮಕಕ್ಷ್ಯಾದ್ವಜೋಪೇತಂ ಕ್ಲೃಪ್ತಯಂತ್ರಪತಾಕಿನಮ್ ।
ಅಗ್ರ್ಯಂ ರಥಂ ಸುಯಂತಾರಂ ಬಹುಶಸ್ತ್ರಪರಿಚ್ಛದಮ್ ॥ ೮೭ ॥

ಉಪಾಜಹ್ರುಸ್ತಮಾಸ್ಥಾಯ ಕರ್ಣೋಽಪ್ಯಭ್ಯದ್ರವದ್ ರಿಪೂನ್ ।
ಏತತ್ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೮೮ ॥

ಎಲೈ ಮಹಾರಾಜನೇ, ಕರ್ಣನಿಗೂ ಸಹ ಅವನ ಸೇವಕರು ಶಂಖ, ಗೋಕ್ಷೀರ ದಂತಹ ಬಿಳಿಯ ವರ್ಣದಿಂದ ಕೂಡಿದ, ವಿಚಿತ್ರವಾದ ಸುವರ್ಣಮಯವಾದ ಸಲಕರಣೆಗಳಿಂದ ಕೂಡಿದ, ವೇಗಶಾಲಿಗಳಾದ ಒಳ್ಳೆಯ ಅಶ್ವಗಳನ್ನು ಹೂಡಿದ, ಚಿನ್ನದ ಸರಪಣಿಗಳು ಮತ್ತು ಧ್ವಜದಿಂದ ಕೂಡಿದ, ಯಂತ್ರ ಮತ್ತು ಪತಾಕೆಗಳನ್ನು ಹೊಂದಿದ, ಒಳ್ಳೆಯ ಸಾರಥಿಯನ್ನು ಹೊಂದಿದ, ಬಹುಶಸ್ತ್ರಸಲಕರಣೆಗಳಿಂದ ಕೂಡಿದ ಶ್ರೇಷ್ಠವಾದ ರಥವನ್ನು ತಂದರು. ಅದನ್ನು ಏರಿ ಕರ್ಣನು ಶತ್ರುಗಳ ಮೇಲೆ ಎರಗಿದನು. ಎಲೈ ರಾಜನೇ, ನೀನು ಕೇಳಿದ ಎಲ್ಲವನ್ನೂ ನಾನು ನಿನಗೆ ಹೇಳಿದ್ದೇನೆ.

ಭೂಯಶ್ಚಾಪಿ ನಿಬೋಧ ತ್ವಂ ತವಾಪನಯಜಂ ಕ್ಷಯಮ್ ।
ಏಕತ್ರಿಂಶತ್ತವ ಸುತಾ ಭೀಮಸೇನೇನ ಪಾತಿತಾಃ ॥ ೮೯ ॥

ನಿನ್ನ ಅಪಚಾರದಿಂದ ಉಂಟಾದ ವಿನಾಶವನ್ನು ಪುನಃ ಕೇಳುವವನಾಗು. ನಿನ್ನ ಮೂವತ್ತೊಂದು ಪುತ್ರರು ಭೀಮಸೇನನಿಂದ ಹತರಾದರು.

ದುರ್ಮುಖಿಂ ಪ್ರಮುಖೇ ಕೃತ್ವಾ ಸತತಂ ಚಿತ್ರಯೋಧಿನಮ್ ।
ಶತಶೋ ನಿಹತಾಃ ಶೂರಾಃ ಸಾತ್ವತೇನಾರ್ಜುನೇನ ಚ ॥ ೯೦ ॥

ದುರ್ಮುಖಿನನ್ನು ಮುಂದೆ ಮಾಡಿಕೊಂಡ ಚಿತ್ರಯೋಧಿಗಳಾದ ನೂರಾರು ಶೂರರು ಸಾತ್ಯಕಿಯಿಂದಲೂ ಮತ್ತು ಅರ್ಜುನನಿಂದಲೂ ಹತರಾದರು.

ಭೀಷ್ಮಂ ಪ್ರಮುಖತಃ ಕೃತ್ವಾ ಭಗದತ್ತಂ ಚ ಮಾರಿಷ ।
ಏವಮೇಷ ಕ್ಷಯೋ ವೃತ್ತೋ ರಾಜನ್ ದುರ್ಮಂತ್ರಿತೇ ತವ ॥ ೯೧ ॥

ಎಲೈ ರಾಜನೇ, ಪೂಜ್ಯನೇ, ನಿನ್ನ ದುರ್ಮಂತ್ರಣದ ನಿಮಿತ್ತದಿಂದಾಗಿ ಭೀಷ್ಮರನ್ನು ಮುಂದೆ ಮಾಡಿಕೊಂಡ ಅವರು, ಭಗದತ್ತನನ್ನು ಮುಂದೆ ಮಾಡಿಕೊಂಡ ಅವರು ಹೀಗೆಯೇ ಸೈನ್ಯದ ವಿನಾಶವನ್ನು ಹೊಂದಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಯಸ್ತ್ರಿಂಶಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ನಾಲ್ಕನೆಯ ಅಧ್ಯಾಯ

ಭೀಮಸೇನನನ್ನು ಅವಹೇಳನ ಮಾಡಿದ ಕರ್ಣನನ್ನು ಕುರಿತು ಅರ್ಜುನನ ಮಾತುಗಳು. ಅರ್ಜುನನ ಪುತ್ರನ ವಧೆಯ ಪ್ರತಿಜ್ಞೆ. ಕೃಷ್ಣನಿಂದ ಅರ್ಜುನನ ಪ್ರಶಂಸೆ ಮತ್ತು ಅರ್ಜುನನಿಗೆ ರಣರಂಗದ ಪ್ರದರ್ಶನ.

ಧೃತರಾಷ್ಟ್ರ:

ತಥಾ ಗತೇಷು ಶೂರೇಷು ತೇಷಾಂ ಮಮ ಚ ಸಂಜಯ ।
ಕಂ ವೈ ಭೀಮಸ್ತದಾಕಾರ್ಷೀತ್ ತನ್ಮಮಾಚಕ್ಷ್ವ ಸಂಜಯ ॥ ೧ ॥

ಧೃತರಾಷ್ಟ್ರ– ಎಲೈ ಸಂಜಯನೇ, ನನ್ನ ಮತ್ತು ಅವರ ಶೂರರು ಆ ರೀತಿಯಲ್ಲಿ ನಾಶ ಹೊಂದುತ್ತಿರುವಾಗ ಭೀಮಸೇನನು ಏನು ಮಾಡಿದನೆಂದು ನನಗೆ ಹೇಳು.

ಸಂಜಯಃ

ವಿರಥೋ ಭೀಮಸೇನೋ ವೈ ಕರ್ಣವಾಕ್‌ಶಲ್ಯಪೀಡಿತಃ ।
ಅಮರ್ಷವಶಮಾಪನ್ನಃ ಫಲ್ಗುನಂ ವಾಕ್ಯಮಬ್ರವೀತ್ ॥ ೨ ॥

ಪುನಃ ಪುನಸ್ತೂಬರಕ ಮೂಢ ಔದರಿಕೇತಿ ಚ ।
ಅಕೃತಾಸ್ತ್ರಕ್ಷ ಮಾ ಯೋಧೀರ್ಬಾಲ ಸಂಗ್ರಾಮಕಾತರ ॥ ೩ ॥

ಇತಿ ಮಾಮಬ್ರವೀತ್ ಕರ್ಣಃ ಪಶ್ಯತಸ್ತೇ ಧನಂಜಯ ।
ಏವಂ ವಕ್ತಾ ಚ ಮೇ ವಧ್ಯಸ್ತೇನ ಚೋಽಕ್ತೋಸ್ಮಿ ಭಾರತ ॥ ೪ ॥

ಸಂಜಯ– ಕರ್ಣನ ಬಾಣಗಳಿಂದ ಪೀಡಿತನಾದ ಭೀಮಸೇನನು ತನ್ನ ರಥವನ್ನು ಕಳೆದುಕೊಂಡು ರೋಷವಶನಾಗಿ ಅರ್ಜುನನನ್ನು ಕುರಿತು ಕರ್ಣನು ನನ್ನನ್ನು ಕುರಿತು ಪುನಃ ಪುನಃ ತೂಬರಕನೆಂದೂ, ಮೂಢನೆಂದೂ, ಹೊಟ್ಟೆಬಾಕನೆಂದೂ, ಅಸ್ತ್ರಜ್ಞಾನವಿಲ್ಲದವನೆಂದೂ, ಯುದ್ಧಾಕಾಂಕ್ಷಿಯಾದ ಬಾಲಕನೇ ಯುದ್ಧವನ್ನು ಮಾಡಬೇಡ ಎಂದೂ ನಿನ್ನ ಎದುರಿನಲ್ಲಿಯೇ ಹೇಳಿದ್ದಾನೆ. ಎಲೈ ಭಾರತನೇ, ಹೀಗೆ ಹೇಳುವವನು ನನ್ನಿಂದ ವಧ್ಯನಾಗುತ್ತಾನೆ ಮತ್ತು ಅವನು ಹೀಗೆ ಹೇಳಿದ್ದಾನೆ.

ಏತದ್ ವ್ರತಂ ಮಹಾಬಾಹೋ ತ್ವಯಾ ಸಹ ಕೃತಂ ಮಯಾ ।
ಯಥೈತನ್ಮಮ ಕೌಂತೇಯ ತಥಾ ತವ ನ ಸಂಶಯಃ ॥ ೫ ॥

ತದ್ವಧ್ಯಾಯ ನರಶ್ರೇಷ್ಠ ಸ್ಮರೈತದ್ವಚನಂ ಮಮ ।
ಯಥಾ ಭವತಿ ತತ್ ಸತ್ಯಂ ತಥಾ ಕುರು ಧನಂಜಯ ॥ ೬ ॥

ಎಲೈ ಮಹಾಬಾಹುವೇ, ನಾನು ನಿನ್ನ ಜೊತೆಯಲ್ಲಿ ಇಂತಹ ಪ್ರತಿಜ್ಞೆಯನ್ನು ಮಾಡಿದ್ದೇನೆ. ಎಲೈ ಕೌಂತೇಯನೇ, ಈ ನನ್ನ ಪ್ರತಿಜ್ಞೆಯು ಹೇಗೆ ನನ್ನದೋ ಹಾಗೆಯೇ ನಿನ್ನದೂ ಎಂಬುದರಲ್ಲಿ ಸಂಶಯವಿಲ್ಲ. ಎಲೈ ನರಶ್ರೇಷ್ಠನೇ, ಅವನ ವಧೆಯ ವಿಷಯದಲ್ಲಿ ನಾನು ಹಿಂದೆ ಆಡಿದ ಮಾತುಗಳನ್ನು ಸ್ಮರಿಸು. ಎಲೈ ಧನಂಜಯನೇ, ಆದು ಸತ್ಯವಾಗುವಂತೆ ಮಾಡು ಎಂದು ಹೇಳಿದನು.

ತಚ್ಛ್ರುತ್ವಾ ವಚನಂ ತಸ್ಯ ಭೀಮಸ್ಯಾಮಿತವಿಕ್ರಮಃ ।
ತತೋಽರ್ಜುನೋಽಬ್ರವೀತ್ ಕರ್ಣಂ ಕಿಂಚಿದಭ್ಯೇತ್ಯ ಸಂಯುಗೇ ॥

ಭೀಮನ ಆ ಮಾತುಗಳನ್ನು ಕೇಳಿ ಅಮಿತವಿಕ್ರಮನಾದ ಅರ್ಜುನನು ರಣರಂಗದಲ್ಲಿ ಕರ್ಣನನ್ನು ಸ್ವಲ್ಪ ಸಮೀಪಿಸಿ ಅವನನ್ನು ಕುರಿತು ಹೀಗೆ ಹೇಳಿದನು.

ಕರ್ಣ ಕರ್ಣ ವೃಥಾದೃಷ್ಟೇ ಸೂತಪುತ್ರಾತ್ಮಸಂಸ್ತುತ ।
ಅಧರ್ಮಬುದ್ಧೇ ಶೃಣು ಮೇ ಯತ್ತ್ವಾ ವಕ್ಷ್ಯಾಮಿ ಸಾಂಪ್ರತಮ್ ॥ ೮ ॥

ಎಲೈ ಕರ್ಣನೇ, ಕರ್ಣನೇ, ವಕ್ರದೃಷ್ಟಿಯುಳ್ಳವನೇ, ಸೂತಪುತ್ರನೇ, ಆತ್ಮಶ್ಲಾಘಿಯೇ, ಅಧಮ ಬುದ್ಧಿಯುಳ್ಳವನೇ, ನಾನು ನಿನಗೆ ಈಗ ಹೇಳುವ ಮಾತುಗಳನ್ನು ಕೇಳು.

ದ್ವಿವಿಧಂ ಕರ್ಮ ಶೂರಾಣಾಂ ಯುದ್ಧೇ ಜಯಪರಾಜಯೌ ।
ತೌ ಚಾಪ್ಯನಿತ್ಯೌ ರಾಧೇಯ ವಾಸವಸ್ಯಾಪಿ ಯುದ್ಧ್ಯತಃ ॥ ೯ ॥

ಮುಮೂರ್ಷುರ್ಯುಯುಧಾನೇನ ವಿರಥೋಽಸಿ ವಿಸರ್ಜಿತಃ ।
ಯದೃಚ್ಛಯಾ ಭೀಮಸೇನಂ ವಿರಥಂ ಕೃತವಾನಸಿ ॥ ೧೦ ॥

ಎಲೈ ಕರ್ಣನೇ, ಶೂರರಿಗೆ ಯುದ್ಧದಲ್ಲಿ ಜಯ ಅಥವಾ ಪರಾಜಯ ಎಂಬ ಎರಡು ವಿಧವಾದ ಫಲಗಳಿವೆ. ಅವು ಇಂದ್ರನು ಯುದ್ಧ ಮಾಡಿದರೂ ನಿತ್ಯವಾದವುಗಳು. ಸಾತ್ಯಕಿಯ ಜೊತೆಯಲ್ಲಿ ನೀನು ಯುದ್ಧವನ್ನು ಮಾಡಿ ನೀನು

ಸಾಯುವ ಸ್ಥಿತಿಯಲ್ಲಿದ್ದಾಗ ನಿನ್ನನ್ನು ವಿರಥನನ್ನಾಗಿ ಮಾಡಿ ಅವನು ನಿನ್ನನ್ನು ಬಿಟ್ಟಿದ್ದಾನೆ. ಭೀಮಸೇನನನ್ನು ಅಕಸ್ಮಾತ್ತಾಗಿ ನೀನು ರಥಹೀನನನ್ನಾಗಿ ಮಾಡಿದ್ದೀಯೆ.

ಅಧರ್ಮಸ್ತೈಷ ರಾಧೇಯ ಯತ್ತ್ವ ಭೀಮಮವೋಚಥಾಃ ।
ಯುದ್ಧಧರ್ಮಂ ವಿಜಾನನ್ ವೈ ಯುದ್ಧ್ಯಂತಮಪಲಾಯಿನಮ್ ।
ಪೂರಯಂತಂ ಯಥಾಶಕ್ತಿ ಶೂರಕರ್ಮಾಹವೇ ತಥಾ ॥ ೧೧ ॥

ಎಲೈ ರಾಧೇಯನೇ, ಯುದ್ಧಧರ್ಮವನ್ನು ತಿಳಿದ ನೀನು ಯುದ್ಧದಲ್ಲಿ ಹಿಮ್ಮೆಟ್ಟದೆ ಯುದ್ಧವನ್ನು ಮಾಡುವ ತನ್ನ ಶಕ್ತಿಗೆ ಅನುಗುಣವಾಗಿ ರಣರಂಗದಲ್ಲಿ ಕ್ರೂರಕರ್ಮವನ್ನು ಮಾಡುವ ಯುದ್ಧವನ್ನು ಪೂರ್ಣಗೊಳಿಸುವ ಭೀಮನನ್ನು ಕುರಿತು ಆಡಿದ ಮಾತುಗಳು ಅಧರ್ಮದಿಂದ ಕೂಡಿದವು.

ಪಶ್ಯತಾಂ ಸರ್ವಸೈನ್ಯಾನಾಂ ಕೇಶವಸ್ಯ ಮಮೈವ ಚ ।
ವಿರಥೋ ಭೀಮಸೇನೇನ ಕೃತೋಽಸಿ ಬಹುಶೋ ರಣೇ ।
ನ ಚ ತ್ವಾಂ ಪರುಷಂ ಕಿಂಚಿದುಕ್ತವಾನ್ ಪಾಂಡುನಂದನಃ ॥ ೧೨ ॥

ಎಲ್ಲ ಸೈನ್ಯಗಳೂ ಕೃಷ್ಣನೂ ಮತ್ತು ನಾನೂ ನೋಡುತ್ತಿರುವಂತೆಯೇ ಭೀಮಸೇನನಿಂದ ನೀನು ಅನೇಕ ಬಾರಿ ರಥಹೀನನಾಗಿ ಮಾಡಲ್ಪಟ್ಟಿದ್ದೀಯೆ. ಆದರೆ ಪಾಂಡುನಂದನನಾದ ಅವನು ನಿನ್ನನ್ನು ಕುರಿತು ಎಂದೂ ಒರಟು ಮಾತುಗಳನ್ನು ಆಡಲಿಲ್ಲ.

ಯಸ್ಮಾತ್ತು ಬಹು ರೂಕ್ಷಂ ಚ ಶ್ರಾವಿತಸ್ತೇ ವೃಕೋದರಃ ।
ಪರೋಕ್ಷಂ ಯಚ್ಚ ಸೌಭದ್ರೋ ಯುಷ್ಮಾಭಿರ್ನಿಹತೋ ಮಮ ॥ ೧೩ ॥

ತಸ್ಮಾದಸ್ಯಾವಲೇಪಸ್ಯ ಸದ್ಯಃ ಫಲಮವಾಪ್ನುಹಿ ।
ತ್ವಯಾ ತಸ್ಯ ಧನುಶ್ಚಿನ್ನಮಾತ್ಮನಾಶಾಯ ದುರ್ಮತೇ ॥ ೧೪ ॥

ನೀನು ಭೀಮಸೇನನನ್ನು ಕುರಿತು ಬಹಳ ಒರಟಾದ ಮಾತುಗಳನ್ನು ಆಡಿದುದರಿಂದಲೂ ಮತ್ತು ನನ್ನ ಪರೋಕ್ಷದಲ್ಲಿ ನೀವೆಲ್ಲರೂ ಸೇರಿ ಅಭಿಮನ್ಯುವನ್ನು ಕೊಂದುದರಿಂದಲೂ ಆ ಅಹಂಕಾರದ ಫಲವನ್ನು ಸದ್ಯದಲ್ಲಿಯೇ ಹೊಂದುವವನಾಗು.

ಎಲೈ ದುರ್ಮತಿಯೇ, ನೀನು ನಿನ್ನ ಆತ್ಮನಾಶಕ್ಕಾಗಿ ಭೀಮಸೇನನ ಧನುಸ್ಸನ್ನು ಕತ್ತರಿಸಿದ್ದೀಯೆ.

ತಸ್ಮಾದ್ ವಧ್ಯೋಽಸಿ ಮೇ ಮೂಢ ಸಭೃತ್ಯಬಲವಾಹನಃ ।
ಕುರು ತ್ವಂ ಸರ್ವಕೃತ್ಯಾನಿ ಮಹತ್ತೇ ಭಯಮಾಗತಮ್ ॥ ೧೫ ॥

ಆದ್ದರಿಂದ ಎಲೈ ಮೂಢನೇ, ನಿನ್ನ ಭೃತ್ಯ-ಬಲ-ವಾಹನ ಸಹಿತನಾಗಿ ನೀನು ನನ್ನಿಂದ ವಧ್ಯನಾಗಿದ್ದೀಯೆ. ಮಾಡಬೇಕಾದ ಎಲ್ಲ ಕಾರ್ಯಗಳನ್ನು ಮಾಡಿ ಮುಗಿಸು. ನಿನಗೆ ದೊಡ್ಡ ಭಯವು ಪ್ರಾಪ್ತವಾಗಿದೆ.

ಹಂತಾಸ್ಮಿ ವೃಷಸೇನಂ ತೇ ಪ್ರೇಕ್ಷಮಾಣಸ್ಯ ಸಂಯುಗೇ ।
ಯೇ ಚಾನ್ಯೇಽಪ್ಯುಪಯಾಸ್ಯಂತಿ ಬುದ್ಧಿಮೋಹೇನ ಮಾಂ ನೃಪಾಃ ।
ತಾಂಶ್ಚ ಸರ್ವಾನ್ ಹನಿಷ್ಯಾಮಿ ಸತ್ಯೇನಾಯುಧಮಾಲಭೇ ॥ ೧೬ ॥

ನೀನು ನೋಡುತ್ತಿರುವಂತೆಯೇ ನಿನ್ನ ಪುತ್ರನಾದ ವೃಷಸೇನನನ್ನು ಕೊಲ್ಲುವೆನು. ಇನ್ನು ಬುದ್ಧಿಮೌಢ್ಯದಿಂದ ಉಳಿದ ಯಾವ ರಾಜರು ನನ್ನ ಬಳಿಗೆ ಬರುತ್ತಾರೆಯೋ ಅವರೆಲ್ಲರನ್ನೂ ಕೊಲ್ಲುವೆನು ಎಂದು ಆಯುಧವನ್ನು ಮುಟ್ಟಿ ಶಪಥವನ್ನು ಮಾಡುತಿದ್ದೇನೆ.

ತ್ವಾಂ ಚ ಮೂಢಾಕೃತಪ್ರಜ್ಞಮತಿಮಾನಿನಮಾಹವೇ ।
ದೃಷ್ಟ್ವಾ ದುರ್ಯೋಧನೋ ಮಂದೋ ಭೃಶಂ ತಪ್ಸ್ಯತಿ ಪಾತಿತಮ್ ॥

ಎಲೈ ಮೂಢನೇ, ರಣರಂಗದಲ್ಲಿ ನನ್ನಿಂದ ಕೆಡವಲ್ಪಟ್ಟ ಬುದ್ಧಿಶೂನ್ಯನಾದ ನಿನ್ನನ್ನು ನೋಡಿ ಮಂದನಾದ ದುರ್ಯೋಧನನು ಬಹಳ ತಾಪವನ್ನು ಪಡುವನು (ಎಂದು ಹೇಳಿದನು).

ಸಂಜಯಃ

ಆರ್ಜುನೇನ ಪ್ರತಿಜ್ಞಾತೇ ವಧೇ ಕರ್ಣಸುತಸ್ಯ ತು ।
ಮಹಾನ್ ಸುತುಮುಲಃ ಶಬ್ದೋ ಬಭೂವ ರಥಿನಾಂ ತದಾ ॥ ೧೮ ॥

ಸಂಜಯ– ಅರ್ಜುನನು ಕರ್ಣಪುತ್ರನ ವಧೆಯನ್ನು ಪ್ರತಿಜ್ಞೆ ಮಾಡುತ್ತಿರಲು ರಥಿಕರಲ್ಲಿ ತೀವ್ರವಾದ ದೊಡ್ಡ ಶಬ್ದವುಂಟಾಯಿತು.

ತಸ್ಮಿನ್ನಾಕುಲಸಂಗ್ರಾಮೇ ವರ್ತಮಾನೇ ಮಹಾಭಯೇ ।
ಮಂದರಶ್ಮಿಃ ಸಹಸ್ರಾಂಶುರಸ್ತಂ ಗಿರಿಮುಪಾಗಮತ್ ॥ ೧೯ ॥

ಮಹಾಭಯಂಕರವಾದ ಆ ಸಂಕೀರ್ಣ ಯುದ್ಧವು ನಡೆಯುತ್ತಿರುವಾಗ ಸೂರ್ಯನು ಮಂದಕಿರಣವುಳ್ಳವನಾಗಿ ಅಸ್ತಪರ್ವತದ ಕಡೆಗೆ ಸಾಗಿದನು.

ತತೋ ರಾಜನ್ ಹೃಷೀಕೇಶಃ ಸಂಗ್ರಾಮಶಿರಸಿ ಸ್ಥಿತಮ್ ।
ತೀರ್ಣಪ್ರತಿಜ್ಞಂ ಬೀಭತ್ಸುಂ ಪರಿಷ್ವಜ್ಯೇದಮಬ್ರವೀತ್ ॥ ೨೦ ॥

ಎಲೈ ರಾಜನೇ, ಆಗ ಕೃಷ್ಣನು ರಣರಂಗದಲ್ಲಿ ತನ್ನ ಪ್ರತಿಜ್ಞೆಯನ್ನು ಪೂರೈಸಿ ನಿಂತ ಅರ್ಜುನನನ್ನು ಆಲಿಂಗಿಸಿ ಈ ಮಾತನ್ನು ಆಡಿದನು.

ದಿಷ್ಟ್ಯಾ ಸಂಪಾದಿತಾ ಜಿಷ್ಣೋ ಪ್ರತಿಜ್ಞಾ ಮಹತೀ ತ್ವಯಾ ।
ದಿಷ್ಟ್ಯಾ ಚ ನಿಹತಃ ಪಾಪೋ ವೃದ್ಧಕ್ಷತ್ರಃ ಸಹಾತ್ಮಜಃ ॥ ೨೧ ॥

ಎಲೈ ಜಿಷ್ಣುವೇ, ದೇವರ ದಯದಿಂದ ನಿನ್ನ ದೊಡ್ಡ ಪ್ರತಿಜ್ಞೆಯು ನೆರವೇರಿಸಲ್ಪಟ್ಟಿತು. ದೇವರ ದಯದಿಂದಲೇ ವೃದ್ಧಕ್ಷತ್ರನು ಮತ್ತು ಪಾಪಿಯಾದ ಅವನ ಮಗನು ನಿನ್ನಿಂದ ಹತರಾದರು.

ಧಾರ್ತರಾಷ್ಟ್ರಬಲಂ ಪ್ರಾಪ್ಯ ದೇವಸೇನಾಪಿ ಭಾರತ ।
ಸೀದೇತ ಸಮರೇ ಜಿಷ್ಣೋ ನಾತ್ರ ಕಾರ್ಯಾ ವಿಚಾರಣಾ ॥ ೨೨ ॥

ಎಲೈ ಭಾರತನೇ, ಜಿಷ್ಣುವೇ, ದುರ್ಯೋಧನನ ಸೇನೆಯನ್ನು ಸಮೀಪಿಸಿದರೆ ದೇವಸೈನ್ಯವು ಯುದ್ಧದಲ್ಲಿ ಕುಸಿದೀತು! ಇದರಲ್ಲಿ ಸಂಶಯವಿಲ್ಲ.

ನ ತಂ ಪಶ್ಯಾಮಿ ಲೋಕೇಷು ಚಿಂತಯನ್ ಪುರುಷಂ ಕ್ವಚಿತ್ ।
ತ್ವದೃತೇ ಪುರುಷವ್ಯಾಘ್ರ ಯ ಏತದ್ ಯೋಧಯೇದ್ ಬಲಮ್ ॥

ಎಲೈ ಪುರುಷವ್ಯಾಘ್ರನೇ, ನಾನು ಎಷ್ಟು ಯೋಚನೆಯನ್ನು ಮಾಡಿದರೂ ಲೋಕಗಳಲ್ಲಿ ನಿನ್ನನ್ನು ಬಿಟ್ಟು ದುರ್ಯೋಧನ ಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡಬಲ್ಲ ಯಾವ ಪುರುಷನನ್ನೂ ಕಾಣುವುದಿಲ್ಲ.

ಮಹಾಪ್ರಭಾವಾ ಬಹವಸ್ತ್ವಯಾ ತುಲ್ಯಾಧಿಕಾಪಿ ವಾ ।
ಸಮೇತಾಃ ಪೃಥಿವೀಪಾಲಾ ಧಾರ್ತರಾಷ್ಟ್ರಸ್ಯ ಕಾರಣಾತ್ ।
ತೇ ತ್ವಾಂ ಪ್ರಾಪ್ಯ ರಣೇ ಕ್ರುದ್ಧಂ ನಾಭ್ಯವರ್ತಂತ ದಂಶಿತಾಃ ॥ ೨೪ ॥

ದುರ್ಯೋಧನನ ಸಲುವಾಗಿ ಮಹಾಪ್ರಭಾವವುಳ್ಳ, ನಿನಗೆ ಸಮಾನರಾದ ಅಥವಾ ಅಧಿಕರಾದ ಶಸ್ತ್ರಾಧಿ ಸನ್ನದ್ಧರಾದ ಅನೇಕ ರಾಜರು ರಣರಂಗದಲ್ಲಿ ಕ್ರುದ್ಧನಾದ ನಿನ್ನನ್ನು ಸಮೀಪಿಸಿ ಹಿಂದಿರುಗಲಿಲ್ಲ.

ತವ ವೀರ್ಯಂ ಬಲಂ ಚೈವ ರುದ್ರಶಕ್ರಾಂತಕೋಪಮಮ್ ।
ನೇದೃಶಂ ಶಕ್ನುಯಾತ್ ಕರ್ತುಂ ಪರಾಕ್ರಮಮ್ ।
ಯಾದೃಶಂ ಕೃತವಾನದ್ಯ ತ್ವಮೇಕಃ ಶತ್ರುತಾಪನಃ ॥ ೨೫ ॥

ನಿನ್ನ ಬಲ-ಪರಾಕ್ರಮಗಳು ರುದ್ರ-ಇಂದ್ರ-ಯಮರ ಬಲ-ಪರಾಕ್ರಮಗಳಿಗೆ ಸದೃಶವಾಗಿವೆ. ಶತ್ರುತಾಪನನಾದ ನೀನು ಈ ದಿನ ರಣರಂಗದಲ್ಲಿ ಎಂತಹ ಕಾರ್ಯವನ್ನು ಮಾಡಿದ್ದೀಯೋ ಅಂತಹ ಪರಾಕ್ರಮವನ್ನು ಬೇರೆ ಯಾವನೂ ಮಾಡಲಾರ.

ಏವಮೇವ ಹತೇ ಕರ್ಣೇ ಸಾನುಬಂಧೇ ದುರಾತ್ಮನಿ ।
ವರ್ಧಯಿಷ್ಯಾಮಿ ಭೂಯಸ್ತ್ವಾಂ ವಿಜಿತಾರಿಂ ಹತದ್ವಿಷಮ್ ॥ ೨೬ ॥

ಇದೇ ರೀತಿಯಲ್ಲಿ ದುರಾತ್ಮನಾದ ಕರ್ಣನು ಪರಿವಾರಸಹಿತನಾಗಿ ನಿನ್ನಿಂದ ಹತನಾದಾಗ ಶತ್ರುಗಳನ್ನು ಗೆದ್ದು ಅವನನ್ನು ಕೊಂದ ನಿನಗೆ ನಾನು ಪುನಃ ಶುಭವನ್ನು ಹಾರೈಸುವೆನು ಎಂದು ಹೇಳಿದನು.

ತಮರ್ಜುನಃ ಪ್ರತ್ಯುವಾಚ ಪ್ರಸಾದಾತ್ ತವ ಮಾಧವ ।
ಪ್ರತಿಜ್ಞೇಯಂ ಮಯೋತ್ತೀರ್ಣಾ ಏಬುದ್ಧೈರಪಿ ದುಸ್ತರಾ ॥ ೨೭ ॥

ಸಂಜಯ– ಅವನನ್ನು ಕುರಿತು ಅರ್ಜುನನು ಎಲೈ ಮಾಧವನೇ, ನಿನ್ನ ಅನುಗ್ರಹದಿಂದ ದೇವತೆಗಳೂ ದಾಟಲಾರದ ಈ ಪ್ರತಿಜ್ಞೆಯನ್ನು ನಾನು ದಾಟಿದ್ದೇನೆ.

ಅನಾಶ್ಯರ್ಯೋ ಜಯಸ್ತೇಷಾಂ ಯೇಷಾಂ ನಾಥೋಽಸಿ ಮಾಧವ ।
ತ್ವತ್ಪ್ರಸಾದಾನ್ಮಹೀಂ ಕೃತ್ಸ್ನಾಂ ಸಂಪ್ರಾಪ್ಸ್ಯತಿ ಯುಧಿಷ್ಠಿರಃ ॥ ೨೮ ॥

ಎಲೈ ಮಾಧವನೇ, ಯಾರಿಗೆ ನೀನು ನಾಥನಾಗಿದ್ದೀಯೋ ಅವರಿಗೆ ಯುದ್ಧದಲ್ಲಿ ಜಯವು ಆಶ್ಚರ್ಯಕರವಲ್ಲ. ನಿನ್ನ ಅನುಗ್ರಹದಿಂದ ಯುಧಿಷ್ಠಿರನು ಸಮಗ್ರವಾದ ಭೂಮಿಯನ್ನು ಹೊಂದುವನು.

ತವೈವ ಭಾರೋ ವಾರ್ಷ್ಣೇಯ ತವೈವ ವಿಜಯಃ ಪ್ರಭೋ ।
ವರ್ಧನೀಯಾಸ್ತವ ವಯಂ ಪ್ರೇಷ್ಯಾಶ್ಚ ಮಧುಸೂದನ ॥ ೨೯ ॥

ಎಲೈ ವಾರ್ಷ್ಣೇಯನೇ, ಯುದ್ಧವು ನಿನ್ನ ಮೇಲೆಯೇ ಇರುವ ಭಾರ. ಪ್ರಭುವೇ, ಜಯವೂ ನಿನ್ನದೇ. ಮಧುಸೂದನನೇ, ನಾವು ನಿನ್ನ ದಾಸರು. ನೀನು ಯಾವಾಗಲೂ ನಮಗೆ ಶುಭವನ್ನು ಚಿಂತಿಸಬೇಕು ಎಂದು ಹೇಳಿದನು.

ಸಂಜಯಃ

ಏವಮುಕ್ತಃ ಸ್ಮಯನ್ ಕೃಷ್ಣಃ ಶನಕೈರ್ವಾಹಯನ್ ಹಯಾನ್ ।
ದರ್ಶಯಾಮಾಸ ಪಾರ್ಥಾಯ ಕ್ರೂರಮಾಯೋಧನಂ ಮಹತ್ ॥

ಸಂಜಯ– ಹೀಗೆ ಹೇಳಲ್ಪಟ್ಟ ಕೃಷ್ಣನು ನಗುತ್ತಾ ನಿಧಾನವಾಗಿ ಅಶ್ವಗಳನ್ನು ಪ್ರಚೋದಿಸುತ್ತಾ ಅರ್ಜುನನಿಗೆ ಕ್ರೂರವಾದ ಆ ದೊಡ್ಡ ರಣರಂಗವನ್ನು ತೋರಿಸಿದನು.

ಶ್ರೀಕೃಷ್ಣಃ

ಪ್ರಾರ್ಥಯಂತೋ ಜಯಂ ಯುದ್ಧೇ ಪ್ರಥಿತಂ ಚ ಮಹದ್ಯಶಃ ।
ಪೃಥಿವ್ಯಾಂ ಶೇರತೇ ಶೂರಾಃ ಪಾರ್ಥಿವಾಸ್ತ್ವಚ್ಛರೈರ್ಹತಾಃ ॥ ೩೧ ॥

ಶ್ರೀಕೃಷ್ಣ– ಯುದ್ಧದಲ್ಲಿ ಜಯವನ್ನೂ, ವಿಸ್ತಾರವಾದ ಕೀರ್ತಿಯನ್ನೂ ಅಪೇಕ್ಷಿಸುತ್ತಾ ನಿನ್ನ ಬಾಣದಿಂದ ಹತರಾದ ಶೂರರು ಭೂಮಿಯ ಮೇಲೆ ಮಲಗಿದ್ದಾರೆ.

ವಿಕೀರ್ಣಶಸ್ತ್ರಾಭರಣಾ ವಿಪನ್ನಾಶ್ವರಥದ್ವಿಪಾಃ ।
ಸಂಛಿನ್ನಭಿನ್ನವರ್ಮಾಣೋ ವೈಕ್ಲವ್ಯಂ ಪರಮಂ ಗತಾಃ ॥ ೩೨ ॥

ತಮ್ಮ ಶಸ್ತ್ರಾಭರಣಗಳು ಅಸ್ತವ್ಯಸ್ತವಾಗಿ ತಮ್ಮ ಅಶ್ವ-ರಥ-ಗಜಗಳು ನಾಶವನ್ನು ಹೊಂದಿ, ಕವಚಗಳು ಛಿನ್ನ-ಭಿನ್ನವಾಗಿ ಪರಮ ವೈಕ್ಲವ್ಯವನ್ನು ಹೊಂದಿ ಮೃತರಾಗಿ ಬಿದ್ದಿದ್ದಾರೆ.

ಸಸತ್ತ್ವಾ ಗತಸತ್ತ್ವಾ ಶ್ಚ ಪ್ರಭಯಾ ಪರಯಾ ಯುತಾಃ ।
ಸಜೀವಾ ಇವ ಲಕ್ಷ್ಯಂತೇ ಗತಸತ್ತ್ವಾ ನರಾಧಿಪಾಃ ॥ ೩೩ ॥

ಪ್ರಾಣವಿರುವ ಮತ್ತು ಮೃತರಾದ ರಾಜರು ಒಳ್ಳೆಯ ಕಾಂತಿಯಿಂದ ಕೂಡಿದವರಾಗಿ ಜೀವವಿರುವವರಂತೆ ನೂರಾರು ಸಂಖ್ಯೆಯಲ್ಲಿ ಕಾಣುತ್ತಿದ್ದಾರೆ.

ತೇಷಾಂ ಶರೈಃ ಸ್ವರ್ಣಪುಂಖೈಃ ಶಸ್ತ್ರೈಶ್ಚ ವಿವಿಧೈಃ ಶಿತೈಃ ।
ವಾಹನೈರಾಯುಧೈಶ್ಚೈವ ಸಂಪೂರ್ಣಾಂ ಪಶ್ಯ ಮೇದಿನೀಮ್ ॥ ೩೪ ॥

ಅವರ ಸ್ವರ್ಣಪುಂಖ ಸಹಿತವಾದ ಬಾಣಗಳಿಂದಲೂ, ನಾನಾ ವಿಧವಾದ ನಿಶಿತವಾದ ಶಸ್ತ್ರಗಳಿಂದಲೂ, ವಾಹನಗಳಿಂದಲೂ ಮತ್ತು ಆಯುಧಗಳಿಂದಲೂ ತುಂಬಿಹೋಗಿರುವ ಭೂಮಿಯನ್ನು ನೋಡು.

ವರ್ಮಭಿಶ್ಚರ್ಮಭಿರ್ಹಾರೈಃ ಶಿರೋಭಿಶ್ಚ ಸಕುಂಡಲೈಃ ।
ಉಷ್ಣೀಷೈರ್ಮುಕುಟೈಃ ಸ್ರಗ್ಭಿಶ್ಚೂಡಾಮಣಿಭರಂಬರೈಃ ॥ ೩೫ ॥

ಕಂಠಸೂತ್ರೈರಂಗದೈಶ್ಚ ನಿಷ್ಕೈರಪಿ ಚ ಸುಪ್ರಭೈಃ ।
ಅನ್ಯೈಶ್ಚಾಭರಣೈಶ್ಚಿತ್ರೈರ್ಭಾತಿ ಭಾರತ ಮೇದಿನೀ ॥ ೩೬ ॥

ಎಲೈ ಭಾರತನೇ, ಅವರ ಕವಚಗಳಿಂದಲೂ, ಗುರಾಣಿಗಳಿಂದಲೂ, ಕುಂಡಲಸಹಿತವಾದ ಶಿರಸ್ಸುಗಳಿಂದಲೂ, ರುಮಾಲುಗಳಿಂದಲೂ, ಕಿರೀಟಗಳಿಂದಲೂ, ಮಾಲೆಗಳಿಂದಲೂ, ಚೂಡಾಮಣಿಗಳಿಂದಲೂ, ವಸ್ತ್ರಗಳಿಂದಲೂ, ಕಂಠಸೂತ್ರಗಳಿಂದಲೂ, ಅಂಗದಗಳಿಂದಲೂ, ಕಾಂತಿಯುಕ್ತವಾದ ಸುವರ್ಣನಾಣ್ಯಗಳಿಂದಲೂ ಮತ್ತು ಉಳಿದ ಆಭರಣಗಳಿಂದಲೂ ಭೂಮಿಯು ಚಿತ್ರವಿಚಿತ್ರವಾಗಿ ತೋರುತ್ತಿದೆ.

ಚಾಮರೈರ್ವ್ಯಜನೈಶ್ಚಿತ್ರೈರ್ಧ್ವಜೈಶ್ಚಾಶ್ವರಥದ್ವಿಪೈಃ ।
ವಿವಿಧೈಶ್ಚ ಪರಿಸ್ತೋಮೈರಶ್ವಾನಾಂ ಚ ಪ್ರಕೀರ್ಣಕೈಃ ॥ ೩೭ ॥

ಕುಥಾಭಿಶ್ಚ ವಿಚಿತ್ರಾಭಿರ್ವರೂಥೈಶ್ಚ ಮಹಾಧನೈಃ ।
ಸಂಸ್ತೀರ್ಣಾಂ ವಸುಧಾಂ ಪಶ್ಯ ಚಿತ್ರಪಟ್ಟೈರಿವಾವೃತಾಮ್ ॥ ೩೮ ॥

ಚಾಮರಗಳಿಂದಲೂ, ವ್ಯಜನಗಳಿಂದಲೂ, ವಿಚಿತ್ರವಾದ ಧ್ವಜಗಳಿಂದಲೂ, ಅಶ್ವ-ರಥ-ಗಜಗಳಿಂದಲೂ, ವಿವಿಧವಾದ ಅಶ್ವಗಳ ಸಲಕರಣೆಗಳಿಂದಲೂ, ರತ್ನಕಂಬಳಿಗಳಿಂದಲೂ, ವಿಚಿತ್ರವಾದ ಬೆಲೆಬಾಳುವ ರಕ್ಷಣ ಸಾಮಗ್ರಿಗಳಿಂದಲೂ, ಬೇರೆ ಬೇರೆ ಬಣ್ಣದ ವಸ್ತ್ರಗಳನ್ನು ಧರಿಸಿದಂತಿರುವ ಈ ಭೂಮಿಯನ್ನು ನೋಡು.

ನಾಗೇಭ್ಯಃ ಪತಿತಾನನ್ಯಾನ್ ಕಲ್ಪಿತೇಭ್ಯೋ ದ್ವಿಪೈಃ ಸಹ ।
ಸಿಂಹಾನ್ ವಜ್ರಪ್ರಣುನ್ನೇಭ್ಯೋ ಗಿರ್ಯಗ್ರೇಭ್ಯ ಇವ ಚ್ಯುತಾನ್ ॥೩೯॥

ಸಂಸ್ಕೃತಾನ್ ವಾಜಿಭಃ ಸಾರ್ಧಂ ಧರಣ್ಯಾಂ ಪಶ್ಯ ಚಾಪರಾನ್ ।
ಪದಾತಿಸಾದಿಸಂಘಾಂಶ್ಚ ಕ್ಷತಜೌಘಪರಿಪ್ಲುತಾನ್ ॥ ೪೦ ॥

ಆನೆಗೊಳಿಸಿದ ಗಜಗಳ ಜೊತೆಯಲ್ಲಿ ಉರುಳಿದ ಗಿರಿಶಿಖರದಿಂದ ವಜ್ರಾಯುಧ ಪ್ರಹಾರಕ್ಕೆ ತುತ್ತಾದ ಸಿಂಹಗಳಂತೆ ಕೆಳಗೆ ಉರುಳಿರುವ ಈ ರಾಜರನ್ನು ನೋಡು. ಭೂಮಿಯ ಮೇಲೆ ತಮ್ಮ ಅಶ್ವಗಳ ಜೊತೆಯಲ್ಲಿ ಬದ್ಧರಾಗಿ ಬಿದ್ದಿರುವಂತಹ ಈ ಬೇರೆ ರಾಜರನ್ನು ನೋಡು. ರಕ್ತಸಮೂಹದಿಂದ ಪೂರ್ಣವಾಗಿ ಒದ್ದೆಯಾದ ಈ ಪದಾತಿಗಳ ಸಮೂಹವನ್ನೂ ಮತ್ತು ಅಶ್ವಾರೋಹಿಗಳ ಸಮೂಹವನ್ನೂ ನೋಡು.

ಸಂಜಯಃ

ಏವಂ ಸಂದರ್ಶಯನ್ ಕೃಷ್ಣೋ ರಣಭೂಮಿಂ ಕಿರೀಟಿನಃ ।
ಸ್ವೈಃ ಸಮೇತಃ ಸ ಮುದಿತಃ ಪಾಂಚಜನ್ಯಂ ವ್ಯನಾದಯತ್ ॥ ೪೧ ॥

ಸಂಜಯ– ಹೀಗೆ ಕೃಷ್ಣನು ಅರ್ಜುನನಿಗೆ ರಣಭೂಮಿಯನ್ನು ತೋರಿಸುತ್ತಾ ತನ್ನವರ ಜೊತೆಯಲ್ಲಿ ಸೇರಿ ಸಂತೋಷಗೊಂಡು ಪಾಂಚಜನ್ಯ ಶಂಖವನ್ನು ಊದಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುಸ್ಶಾಶದಧಿಕಶತತಮೋಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ದ್ವಿತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೈದನೆಯ ಅಧ್ಯಾಯ

ಯುಧಿಷ್ಠಿರನಿಂದ ಕೃಷ್ಣ-ಭೀಮ-ಸಾತ್ಯಕಿಗಳ ಸತ್ಕಾರ.

ಸಂಜಯಃ

ತತೋ ರಾಜಾನಮಭ್ಯೇತ್ಯ ಧರ್ಮರಾಜಂ ಯುಧಿಷ್ಠಿರಮ್ ।
ಚಚಕ್ಷೇ ಸಂಪ್ರಹೃಷ್ಟಾತ್ಮಾ ಹತಃ ಪಾರ್ಥೇನ ಸೈಂಧವಮ್ ॥ ೧ ॥

ಸಂಜಯ– ಆಗ ಕೃಷ್ಣನು ಧರ್ಮರಾಜನಾದ ಯುಧಿಷ್ಠಿರನ ಬಳಿಗೆ ಬಂದು ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಅರ್ಜುನನಿಂದ ಸೈಂಧವನು ಹತನಾಗಿದ್ದಾನೆಂದು ಹೇಳಿದನು.

ದಿಷ್ಟ್ಯಾ ವರ್ಧಸಿ ರಾಜೇಂದ್ರ ಹತಶತ್ರುರ್ನರೋತ್ತಮ ।
ದಿಷ್ಟ್ಯಾ ನಿಸ್ತೀರ್ಣವಾಂಶ್ಚೈವ ಪ್ರತಿಜ್ಞಾಮನುಜಸ್ತವ ॥
ಸ ತ್ವೇವಮುಕ್ತಃ ಕೃಷ್ಣೇನ ಹೃಷ್ಟಃ ಪರಪುರಂಜಯಃ ॥ ೨ ॥

ಎಲೈ ರಾಜೇಂದ್ರನೇ, ನರೋತ್ತಮನೇ, ದೇವರ ದಯದಿಂದ ನಿನ್ನ ಶತ್ರುವು ಹತನಾಗಿ ನೀನು ಶ್ರೇಯಸ್ಸನ್ನು ಹೊಂದಿದ್ದೀಯೆ. ದೇವರ ದಯದಿಂದಲೇ ನಿನ್ನತಮ್ಮನು ತನ್ನ ಪ್ರತಿಜ್ಞೆಯನ್ನು ಪೂರೈಸಿದ್ದಾನೆ (ಎಂದು ಹೇಳಿದನು).

ತತೋ ಯುಧಿಷ್ಠಿರೋ ರಾಜಾ ರಥಾದಾಪ್ಲುತ್ಯ ಭಾರತ ।
ಪರ್ಯಷ್ವಜತ್ ತದಾ ಕೃಷ್ಣಾನ್ವಾನಂದಾಶ್ರುಪರಿಪ್ಲುತಃ ॥ ೩ ॥

ಕೃಷ್ಣನಿಂದ ಹೀಗೆ ಹೇಳಲ್ಪಟ್ಟ ಪರಪುರಂಜಯನೂ, ಸಂತುಷ್ಟನೂ ಆದ ಯುಧಿಷ್ಠಿರನು ತನ್ನ ರಥದಿಂದ ಕೆಳಗೆ ಹಾರಿ ಆನಂದಬಾಷ್ಪಪೂರಿತನಾಗಿ ಕೃಷ್ಣಾರ್ಜುನರನ್ನು ಆಲಿಂಗಿಸಿದನು.

ಪ್ರಮೃಜ್ಯ ವದನಂ ಶುಭ್ರಂ ಪುಂಡರೀಕಸಮಪ್ರಭಮ್ ।
ಆಬ್ರವೀದ್ ವಾಸುದೇವಂ ಚ ಪಾಂಡವಂ ಚ ಧನಂಜಯಮ್ ॥ ೪ ॥

ಪದ್ಮಪುಷ್ಪದಂತಿದ್ದ ಆವರಿಬ್ಬರ ಶುಭ್ರವಾದ ಮುಖಗಳನ್ನು ನೇವರಿಸಿ ಕೃಷ್ಣನನ್ನು ಮತ್ತು ಪಾಂಡವನಾದ ಅರ್ಜುನನನ್ನು ಕುರಿತು ಮಾತನಾಡಿದನು.

ದಿಷ್ಟ್ಯಾ ಪಶ್ಯಾಮಿ ಸಂಗ್ರಾಮೇ ತೀರ್ಣಭಾರೌ ಮಹಾರಥೌ ।
ದಿಷ್ಟ್ಯಾ ಚ ನಿಹತಃ ಪಾಪಃ ಸೈಂಧವಃ ಪುರುಷಾಧಮಃ ॥ ೫ ॥

ದೇವರದಯದಿಂದ ಯುದ್ಧದಲ್ಲಿ ನಿಮ್ಮ ಕರ್ತವ್ಯವನ್ನು ನೆರವೇರಿಸಿದ ಮಹಾರಥರಾದ ನಿಮ್ಮನ್ನು ನೋಡುತ್ತಿದ್ದೇನೆ. ದೇವರ ದಯದಿಂದ ಪುರುಷಾಧಮನೂ, ಪಾಪಿಯೂ ಆದ ಸೈಂಧವನು ಹತನಾಗಿದ್ದಾನೆ.

ಕೃಷ್ಣ ದಿಷ್ಟ್ಯಾ ಮಮ ಪ್ರೀತಿರ್ಮಹತೀ ಪ್ರತಿಪಾದಿತಾ ।
ದಿಷ್ಟ್ಯಾ ಶತ್ರುಗಣಾಶ್ಚೈವ ನಿಮಗ್ನಾಃ ಶೋಕಸಾಗರೇ ॥ ೬ ॥

ಎಲೈ ಕೃಷ್ಣನೇ, ದೇವರ ದಯದಿಂದ ನೀನು ನನಗೆ ಬಹಳ ಸಂತೋಷವನ್ನು ಉಂಟುಮಾಡಿದ್ದೀಯೆ. ದೇವರ ದಯದಿಂದಲೇ ಶತ್ರುಸಮೂಹಗಳು ಶೋಕ ಸಾಗರದಲ್ಲಿ ಮುಳುಗಿವೆ.

ನ ತೇಷಾಂ ದುಷ್ಕರಂ ಕಿಂಚಿತ್ ತ್ರಿಷು ಲೋಕೇಷು ವಿದ್ಯತೇ ।
ಸರ್ವಲೋಕಗುರುರ್ಯೇಷಾಂ ತ್ವಂ ನಾಥೋ ಮಧುಸೂದನ ॥ ೭ ॥

ಎಲೈ ಮಧುಸೂದನನೇ, ಸರ್ವಲೋಕಗುರುವಾದ ನೀನು ಯಾರಿಗೆ ನಾಥನಾಗಿದ್ದೀಯೋ ಅವರಿಗೆ ಮೂರುಲೋಕಗಳಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ.

ತವ ಪ್ರಸಾದಾದ್ ಗೋವಿಂದ ವಯಂ ಜೇಷ್ಯಾಮಹೇ ರಿಪೂನ್ ।
ಯಥಾ ಪೂರ್ವಂ ಪ್ರಸಾದಾತ್ ತೇ ದಾನವಾನ್ ಪಾಕಶಾಸನಃ ॥ ೮ ॥

ಎಲೈ ಗೋವಿಂದನೇ, ಹಿಂದೆ ನಿನ್ನ ಅನುಗ್ರಹದಿಂದ ಪಾಕಶಾಸನನಾದ ಇಂದ್ರನು ದಾನವರನ್ನು ಜಯಿಸಿದಂತೆ, ನಾವು ನಿನ್ನ ಅನುಗ್ರಹದಿಂದ ಶತ್ರುಗಳನ್ನು ಜಯಿಸುವೆವು.

ಪೃಥಿವೀವಿಜಯೋ ವಾಪಿ ತ್ರೈಲೋಕ್ಯವಿಜಯೋಽಪಿ ವಾ ।
ಧ್ರುವೋ ಹಿ ತೇಷಾಂ ವಾರ್ಷ್ಣೇಯ ಯೇಷಾಂ ತುಷ್ಟೋಽಸಿ ಮಾಧವ ॥

ಎಲೈ ಮಾಧವನೇ, ನೀನು ಯಾರಿಗೆ ಪ್ರಸನ್ನನಾಗಿದ್ದೀಯೋ ಅವರಿಗೆ ಪೃಥಿವಿಯ ಜಯವಾಗಲೀ ಅಥವಾ ಮೂರುಲೋಕಗಳ ಜಯವಾಗಲೀ ಖಂಡಿತವಾಗಿ ಉಂಟಾಗುತ್ತದೆ.

ನ ತೇಷಾಂ ವಿದ್ಯತೇ ಪಾಪಂ ಸಂಗ್ರಾಮೇ ವಾ ಪರಾಜಯಃ ।
ತ್ರಿದಶೇಶ್ವರನಾಥಸ್ತ್ವಂ ಯೇಷಾಂ ತುಷ್ಟೋಽಸಿ ಮಾಧವ ॥ ೧೦ ॥

ಎಲೈ ಮಾಧವನೇ, ಸ್ವರ್ಗದ ಪ್ರಭುಗಳಿಗೆ ನಾಥನಾದ ನೀನು ಯಾರಿಗೆ ಪ್ರಸನ್ನನಾಗಿದ್ದೀಯೋ ಅವರಿಗೆ ಪಾಪವಾಗಲೀ, ಯುದ್ಧದಲ್ಲಿ ಪರಾಜಯವಾಗಲೀ ಇರುವುದಿಲ್ಲ.

ತ್ವತ್ಪ್ರಸಾದಾದ್ಧೃಷೀಕೇಶ ಶಕ್ರಃ ಸುರಗಣೇಶ್ವರಃ ।
ತ್ರೈಲೋಕ್ಯವಿಜಯಂ ಶ್ರೀಮಾನ್ ಪ್ರಾಪ್ತವಾನ್ ರಣಮೂರ್ಧನಿ ॥ ೧೧ ॥

ಎಲೈ ಹೃಷೀಕೇಶನೇ, ನಿನ್ನ ಅನುಗ್ರಹದಿಂದ, ಸುರಗಣೇಶ್ವರನಾದ ಸಂಪದ್ಯುಕ್ತನಾದ ಇಂದ್ರನು ದೊಡ್ಡ ಯುದ್ಧದಲ್ಲಿ ತ್ರಿಲೋಕ ವಿಜಯವನ್ನು ಸಂಪಾದಿಸಿದನು.

ತವ ಚೈವ ಪ್ರಸಾದೇನ ತ್ರಿದಶಾಸ್ತ್ರಿದಶೇಶ್ವರ ।
ಅಮರತ್ವಂ ಗತಾಃ ಕೃಷ್ಣ ಲೋಕಾಂಶ್ಚಾಕ್ಷಯವತೇಽಕ್ಷಯಾನ್ ॥ ೧೨ ॥

ಎಲೈ ಕೃಷ್ಣನೇ, ಅಮರಪ್ರಭುವೇ, ನಿನ್ನ ಅನುಗ್ರಹದಿಂದಲೇ ದೇವತೆಗಳು ಅಮರತ್ವವನ್ನು ಹೊಂದಿ ಅಕ್ಷಯಲೋಕಗಳನ್ನು ಹೊಂದುತ್ತಾರೆ.

ತ್ವತ್ಪ್ರಸಾದಸಮುತ್ಥೇನ ವಿಕ್ರಮೇಣಾರಿಸೂದನ ।
ಸುರೇಶತ್ವಂ ಗತಃ ಶಕ್ರೋ ಹತ್ವಾ ದೈತ್ಯಾನ್ ಸಹಸ್ರಶಃ ॥ ೧೩ ॥

ಎಲೈ ಶತ್ರುಸೂದನನೇ, ನಿನ್ನ ಅನುಗ್ರಹದಿಂದ ಉಂಟಾದ ಪರಾಕ್ರಮದಿಂದ ಇಂದ್ರನು ಸಹಸ್ರ ಸಂಖ್ಯೆಯಲ್ಲಿ ದೈತ್ಯರನ್ನು ಕೊಂದು ದೇವತೆಗಳಿಗೆ ಒಡೆಯನಾದನು.

ತ್ವತ್ಪ್ರಸಾದಾದ್ಧೃಷೀಕೇಶ ಜಗತ್ ಸ್ಥಾವರಜಂಗಮಮ್ ।
ಸ್ವವರ್ತ್ಮನಿ ಸ್ಥಿತಂ ವೀರ ಜಪಹೋಮೇಷು ವರ್ತತೇ ॥ ೧೪ ॥

ಎಲೈ ಹೃಷೀಕೇಶನೇ, ವೀರನೇ, ನಿನ್ನ ಅನುಗ್ರಹದಿಂದ ಸ್ಥಾವರ-ಜಂಗಮಾತ್ಮಕವಾದ ಈ ಪ್ರಪಂಚವು ತನ್ನ ಮಾರ್ಗದಲ್ಲಿ ನೆಲೆಸಿ ಜಪ-ಹೋಮಗಳಲ್ಲಿ ನಿರತವಾಗಿದೆ.

ವಿಕೀರ್ಣಮಿದಂ ಪೂರ್ವಂ ಸರ್ವಮಾಸೀತ್ತಮೋಮಯಮ್ ।
ತ್ವತ್ಪ್ರಸಾದಾತ್ ಪ್ರಕಾಶತ್ವಂ ಜಗತ್ ಪ್ರಾಪ್ತಂ ನರೋತ್ತಮ ॥ ೧೫ ॥

ಏಕಾರ್ಣವವಾದ ಈ ಜಗತ್ತೆಲ್ಲವೂ ಮೊದಲು ಕತ್ತಲೆಯಿಂದ ಆವೃತವಾಗಿದ್ದಿತು. ಎಲೈ ನರೋತ್ತಮನೇ, ನಿನ್ನ ಅನುಗ್ರಹದಿಂದ ಆನಂತರ ಪ್ರಕಾಶಗೊಂಡಿತು.

ಸ್ರಷ್ಟಾರಂ ಸರ್ವಲೋಕಾನಾಂ ಪರಮಾತ್ಮಾನಮಚ್ಯುತಮ್ ।
ಯೇ ಪ್ರಪನ್ನಾ ಹೃಷೀಕೇಶಂ ನ ತೇ ಮುಹ್ಯಂತಿ ಕರ್ಹಿಚಿತ್ ॥ ೧೬ ॥

ಸರ್ವಲೋಕಗಳ ಸೃಷ್ಟಿಕರ್ತನೂ, ಪರಮಾತ್ಮನೂ, ಚತುರ್ವಿಧ ನಾಶರಹಿತನೂ ಆದ ಹೃಷೀಕೇಶನಾದ ನಿನಗೆ ಶರಣಾಗತರಾದವರು ಯಾವ ಮೋಹಕ್ಕೂ ಒಳಗಾಗುವುದಿಲ್ಲ.

ಅನಾದಿನಿಧನಂ ದೇವಂ ಲೋಕಕರ್ತಾರಮವ್ಯಯಮ್ ।
ತ್ವಾಂ ಭಕ್ತಾ ಯೇ ಹೃಷೀಕೇಶ ದುರ್ಗಾಣ್ಯತಿತರಂತಿ ತೇ ॥ ೧೭ ॥

ಎಲೈ ಹೃಷೀಕೇಶನೇ, ಆದ್ಯಂತರಹಿತನಾದ ಲೋಕಕರ್ತನಾದ, ಶಾಶ್ವತನಾದ, ದೇವನಾದ ನಿನ್ನಲ್ಲಿ ಭಕ್ತಿಯನ್ನು ಮಾಡುವವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ.

ಪರಂ ಪುರಾಣಂ ಪುರುಷಂ ಪುರಾಣಾನಾಂ ಪರಂ ಚ ಯತ್ ।
ಪ್ರಪದ್ಯತಸ್ತಂ ಪರಮಂ ಪರಾ ಭೂತಿರ್ವಿಧೀಯತೇ ॥ ೧೮ ॥

ಸರ್ವೋತ್ತಮನೂ, ಪುರಾಣ ಪುರುಷನೂ, ಪ್ರಾಚೀನರಾದ ಎಲ್ಲರಿಗಿಂತಲೂ ಉತ್ತಮನೂ ಆದ ನಿನಗೆ ಶರಣಾಗತರಾದವರಿಗೆ ಶ್ರೇಷ್ಠವಾದ ಸಮೃದ್ಧಿಯು ಉಂಟಾಗುತ್ತದೆ.

ಯೋಽಗಾತ ಚತುರೋ ವೇದಾನ್ಸಶ್ಚ ವೇದೇಷು ಗೀಯತೇ ।
ತಂ ಪ್ರಪದ್ಯ ಮಹಾತ್ಮಾನಂ ಭೂತಿಮಾಪ್ನೋತ್ಯನುತ್ತಮಾಮ್ ॥ ೧೯ ॥

ನಾಲ್ಕು ವೇದಗಳನ್ನೂ ಗಾನ ಮಾಡಿದ, ನಾಲ್ಕು ವೇದಗಳಿಂದ ಪ್ರತಿಪಾದ್ಯನಾದ ಮಹಾತ್ಮನಾದ ನಿನ್ನನ್ನು ಶರಣು ಹೊಂದಿ ಶ್ರೇಷ್ಠವಾದ ಐಶ್ವರ್ಯವನ್ನು ಪಡೆಯುತ್ತಾರೆ.

ಧನಂಜಯಸಖಾ ಯಶ್ಚ ಧನಂಜಯಹಿತಶ್ಚ ಯಃ ।
ತಂ ಧನಂಜಯಗೋಪ್ತಾರಂ ಪ್ರಪದ್ಯ ಸುಖಮೇಧತೇ ॥ ೨೦ ॥

ಧನಂಜಯನ ಸ್ನೇಹಿತನಾದವನೂ, ಅವನ ಹಿತದಲ್ಲಿ ರತನಾದವನೂ, ಅವನನ್ನು ರಕ್ಷಿಸುವವನೂ ಆದ ನಿನ್ನನ್ನು ಶರಣು ಹೊಂದಿ ಸುಖವನ್ನು ಪಡೆಯುತ್ತಾರೆ.

ಇತ್ಯಬ್ರವೀತ್ ತದಾ ರಾಜಾ ಪರಿಷ್ವಜ್ಯ ಚ ಕೇಶವಮ್ ।
ಸಂಪ್ರಹೃಷ್ಟಮನಾ ರಾಜನ್ ಧರ್ಮಪುತ್ರೋ ಯುಧಿಷ್ಠಿರಃ ॥ ೨೧ ॥

ಎಲೈ ರಾಜನೇ, ಧರ್ಮಪುತ್ರನಾದ ಯುಧಿಷ್ಠಿರನು ಆಗ ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಕೇಶವನನ್ನು ಆಲಿಂಗಿಸಿ ಹೀಗೆ ಮಾತನಾಡಿದನು.

ಇತ್ಯುಕ್ತೌ ತೌ ಮಹಾತ್ಮಾನಾವುಭೌ ಕೇಶವಪಾಂಡವೌ ।
ತಾವಬ್ರೂತಾಂ ತದಾ ಹೃಷ್ಟೌ ರಾಜಾನಂ ಪೃಥಿವೀಪತಿಮ್ ॥ ೨೨ ॥

ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ಮಹಾತ್ಮರಾದ ಆ ಕೃಷ್ಣಾರ್ಜುನರಿಬ್ಬರೂ ಸಂತೋಷದಿಂದ ಕೂಡಿ ರಾಜನಾದ ಅವನನ್ನು ಕುರಿತು ಮಾತನಾಡಿದರು.

ತವ ಕೋಪಾಗ್ನಿನಾ ದಗ್ಧಃ ಪಾಪೋ ರಾಜಾ ಜಯದ್ರಥಃ ।
ಉದೀರ್ಣಂ ಚಾಪಿ ಸುಮಹದ್ಧಾರ್ತರಾಷ್ಟ್ರಬಲಂ ರಣೇ ॥ ೨೩ ॥

ಹನ್ಯತೇ ನಿಹತಂ ಚೈವ ವಿನಂಕ್ಷ್ಯತಿ ಚ ಭಾರತ ।
ತವ ಕ್ರೋಧಹತಾ ಹ್ಯೇತೇ ಕೌರವಾಃ ಶತ್ರುಸೂದನ ॥ ೨೪ ॥

ಎಲೈ ಭಾರತನೇ, ನಿನ್ನ ಕೋಪಾಗ್ನಿಯಿಂದ ರಾಜನಾದ ಜಯದ್ರಥನು ಮತ್ತು ಬಲೋನ್ನದ್ಧವಾದ ದುರ್ಯೋಧನನ ದೊಡ್ಡ ಸೈನ್ಯವು ರಣರಂಗದಲ್ಲಿ ದಹಿಸಲ್ಪಡುತ್ತದೆ. ಎಲೈ ಭಾರತನೇ, ದಹಿಸಲ್ಪಟ್ಟದ್ದೆ, ದಹಿಸಲ್ಪಡುತ್ತಿದೆ ಮತ್ತು ಮುಂದೆ ದಹಿಸಲ್ಪಡುವುದು. ಎಲೈ ಶತ್ರುಸೂದನನೇ, ಈ ಕೌರವರು ನಿನ್ನ ಕ್ರೋಧದಿಂದ ಹತರಾಗಿದ್ದಾರೆ.

ತ್ವಾಂ ಹಿ ಚಕ್ಷುರ್ಹಣಂ ವೀರಂ ಕೋಪಯಿತ್ವಾ ಸುಯೋಧನಃ ।
ಸಮಿತ್ರಬಂಧುಃ ಸಮರೇ ಪ್ರಾಣಾಂಸ್ತ್ಯಕ್ಷ್ಯತಿ ದುರ್ಮತಿಃ ॥ ೨೫ ॥

ದೃಷ್ಟಿಯಿಂದಲೇ ಕೊಲ್ಲುವ ವೀರನಾದ ನಿನ್ನನ್ನು ಕೋಪಗೊಳಿಸಿ, ದುರ್ಮತಿಯಾದ ಸುಯೋಧನನು ಯುದ್ಧದಲ್ಲಿ ಮಿತ್ರ- ಬಾಂಧವರೊಡನೆ ಪ್ರಾಣಗಳನ್ನು ತ್ಯಜಿಸುವನು.

ತವ ಕ್ರೋಧಹತಃ ಪೂರ್ವಂ ದೇವೈರಪಿ ಸುದುರ್ಜಯಃ ।
ಶರತಲ್ಪಗತಃ ಶೇತೇ ಭೀಷ್ಮಃ ಕುರುಪಿತಾಮಹಃ ॥ ೨೬ ॥

ದೇವತೆಗಳಿಂದಲೂ ದುರ್ಜಯರಾದ ಕುರುಪಿತಾಮಹರಾದ ಭೀಷ್ಮರು ನಿನ್ನ ಕ್ರೋಧದಿಂದ ಹತರಾಗಿ ಮೊದಲೇ ಶರತಲ್ಪದಲ್ಲಿ ಮಲಗಿದ್ದಾರೆ.

ದುರ್ಲಭೋ ಹಿ ಜಯಸ್ತೇಷಾಂ ಸಂಗ್ರಾಮೇ ರಿಪುಸೂದನ ।
ಯಾತಾ ಮೃತ್ಯುವಶಂ ತೇ ವೈ ಯೇಷಾಂ ಕ್ರುದ್ಧೋಽಸಿ ಪಾಂಡವ ॥

ಎಲೈ ಶತ್ರುಸೂದನನೇ, ಪಾಂಡವನೇ, ಯಾರ ಮೇಲೆ ನೀನು ಕೋಪಗೊಳ್ಳುವಿಯೋ ಅವರಿಗೆ ಯುದ್ಧದಲ್ಲಿ ಜಯವು ದುರ್ಲಭವಾದುದು. ಅವರು ಮೃತ್ಯುವಶರಾಗುವರು.

ರಾಜ್ಯಂ ಪ್ರಾಣಾಃ ಪ್ರಿಯಾಃ ಪುತ್ರಾಃ ಸೌಖ್ಯಾನಿ ವಿವಿಧಾನಿ ಚ ।
ಆಚಿರಾತ್ ತಸ್ಯ ನಶ್ಯಂತಿ ಯೇಷಾಂ ಕ್ರುದ್ಧೋಽಸಿ ಮಾನದ ॥ ೨೮ ॥

ಎಲೈ ಮಾನದನೇ, ನೀನು ಯಾರ ಮೇಲೆ ಕೋಪಗೊಳ್ಳುವಿಯೋ ಅವರ ರಾಜ್ಯ, ಪ್ರಾಣಗಳು, ಪ್ರಿಯಪುತ್ರರು, ವಿವಿಧವಾದ ಸೌಖ್ಯಗಳು ಎಲ್ಲವೂ ಶೀಘ್ರವಾಗಿ ನಾಶವನ್ನು ಹೊಂದುತ್ತವೆ.

ಏನಷ್ಟಾನ್ ಕೌರವಾನ್ ಮನ್ಯೇ ಸಪುತ್ರಪಶುಬಾಂಧವಾನ್ ।
ರಾಜಧರ್ಮಪರೇ ನಿತ್ಯಂ ತ್ವಯಿ ಕ್ರುದ್ಧೇ ಯುಧಿಷ್ಠಿರ ॥ ೨೯ ॥

ಎಲೈ ಯುಧಿಷ್ಠಿರನೇ, ರಾಜಧರ್ಮದಲ್ಲಿ ನಿರತನಾದ ನೀನು ಕೋಪಗೊಂಡಿರಲು ಪುತ್ರ-ಪಶು-ಬಾಂಧವರಿಂದ ಸಹಿತರಾದ ಕೌರವರು ನಷ್ಟರಾಗಿದ್ದಾರೆಂದು ಭಾವಿಸುತ್ತೇನೆ (ಎಂದು ಹೇಳಿದನು).

ತತೋ ಭೀಮೋ ಮಹಾಬಾಹುಃ ಸಾತ್ಯಕಿಶ್ಚ ಮಹಾರಥಃ ।
ಅಭಿವಾದ್ಯ ಗುರುಂ ಜ್ಯೇಷ್ಠಂ ಮಾರ್ಗಣೈಃ ಕೃತವಿಕ್ಷತೌ ।
ಷ್ಠಿತಾವಾಸ್ತಾಂ ಮಹೇಷ್ವಾಸೌ ಪಾಂಚಾಲ್ಯೈಃ ಪರಿವಾರಿತೌ ॥ ೩೦ ॥

ಆಗ ಮಹಾಬಾಹುವಾದ ಭೀಮನು ಮತ್ತು ಮಹಾರಥನಾದ ಸಾತ್ಯಕಿಯು, ಗುರುವೂ-ಹಿರಿಯನೂ ಆದ ಯುಧಿಷ್ಠಿರನಿಗೆ ನಮಸ್ಕರಿಸಿ, ಅವರ ದೇಹವೆಲ್ಲವೂ ಬಾಣಗಳಿಂದ ಗಾಯಗೊಂಡು ಮಹಾಧನುರ್ಧಾರಿಗಳಾದ ಅವರು ಪಾಂಚಾಲರಿಂದ ಕೂಡಿ ಎದುರಿಗೆ ನಿಂತರು.

ತೌ ದೃಷ್ಟ್ವಾ ಮುದಿತೌ ವೀರೌ ಪ್ರಾಂಜಲೀ ಚಾಗ್ರತಃ ಸ್ಥಿತೌ ।
ಅಭ್ಯನಂದತ ಕೌಂತೇಯಸ್ತಾವುಭೌ ಭೀಮಸಾತ್ಯಕೀ ॥ ೩೧ ॥

ಎದುರಿಗೆ ಸಂತೋಷದಿಂದ ಕೈಮುಗಿದು ನಿಂತ ಆ ಇಬ್ಬರು ವೀರರಾದ ಭೀಮ-ಸಾತ್ಯಕಿಯರನ್ನು ನೋಡಿ ಯುಧಿಷ್ಠಿರನು ಅವರಿಬ್ಬರನ್ನೂ ಅಭಿನಂದಿಸಿದನು.

ದಿಷ್ಟ್ಯಾ ಪಶ್ಯಾಮಿ ವಾಂ ವೀರೌ ವಿಮುಕ್ತೌ ಸೈನ್ಯಸಾಗರಾತ್ ।
ದ್ರೋಣಗ್ರಾಹಾದ್ ದುರಾಧರ್ಷಾದ್ ಹಾರ್ದಿಕ್ಯಮಕರಾಲಯಾತ್ ।
ದಿಷ್ಟ್ಯಾ ಚ ನಿರ್ಜಿತಾಃ ಸಂಖೇ ಪೃಥಿವ್ಯಾಂ ಸರ್ವಪಾರ್ಥಿವಾಃ ॥ ೩೨ ॥

ದೇವರ ದಯದಿಂದ ಸೈನ್ಯಸಾಗರದಿಂದಲೂ, ಸಮೀಪಿಸಲು ಅಸಾಧ್ಯವಾದ ದ್ರೋಣರೆಂಬ ಮೊಸಳೆಯಿಂದಲೂ, ಕೃತವರ್ಮನೆಂಬ ಸಮುದ್ರದಿಂದಲೂ ದಾಟಿ ಬಂದ ನಿಮ್ಮನ್ನು ನೋಡುತ್ತಿದ್ದೇನೆ. ದೇವರ ದಯದಿಂದ ಭೂಮಿಯಲ್ಲಿರುವ ಎಲ್ಲ ರಾಜರೂ ಯುದ್ಧದಲ್ಲಿ ಪರಾಜಿತರಾಗಿದ್ದಾರೆ.

ಯುವಾಂ ವಿಜಯಿನೌ ಚಾಪಿ ದಿಷ್ಟ್ಯಾ ಪಶ್ಯಾಮಿ ಸಂಯುಗೇ ।
ದಿಷ್ಟ್ಯಾ ದ್ರೋಣೋ ಜಿತಃ ಸಂಖೇ ಹಾರ್ದಿಕ್ಯಶ್ಚ ಮಹಾಬಲಃ ॥ ೩೩ ॥

ದೇವರ ದಯದಿಂದ ಯುದ್ಧದಲ್ಲಿ ವಿಜಯವನ್ನು ಸಂಪಾದಿಸಿದ ನಿಮ್ಮಿಬ್ಬರನ್ನು ನೋಡುತ್ತಿದ್ದೇನೆ. ದೇವರ ದಯದಿಂದ ಯುದ್ಧದಲ್ಲಿ ದ್ರೋಣರು ಮತ್ತು ಮಹಾಬಲನಾದ ಕೃತವರ್ಮನು ಪರಾಜಿತರಾಗಿದ್ದಾರೆ.

ಸೈನ್ಯಾರ್ಣವಂ ಸಮುತ್ತೀರ್ಣೌ ದಿಷ್ಟ್ಯಾ ಪಶ್ಯಾಮಿ ಚಾನಘೌ ।
ಸಮರಶ್ಲಾಘಿನೌ ವೀರೌ ಸಮರೇಷ್ವಪಲಾಯಿನೌ ।
ಮಮ ಪ್ರಾಣಸಮೌ ಚೈವ ದಿಷ್ಟ್ಯಾ ಪಶ್ಯಾಮಿ ವಾಮಹಮ್ ॥ ೩೪ ॥

ದೇವರ ದಯದಿಂದ ಸೈನ್ಯಸಾಗರವನ್ನು ದಾಟಿ ಬಂದ, ನಿರ್ದೋಷರಾದ, ಸಮರಶ್ಲಾಘಿಗಳಾದ, ಯುದ್ಧದಲ್ಲಿ ಹಿಮ್ಮೆಟ್ಟದಿರುವ ವೀರರಾದ ನಿಮ್ಮನ್ನು ನೋಡುತ್ತಿದ್ದೇನೆ. ದೇವರ ದಯದಿಂದ ನನಗೆ ಪ್ರಾಣ ಸಮರಾದ ನಿಮ್ಮಿಬ್ಬರನ್ನು ನಾನು ನೋಡುತ್ತಿದ್ದೇನೆ.

ಇತ್ಯುಕ್ತ್ವಾ ಪಾಂಡವೋ ರಾಜಾ ಯುಯುಧಾನವೃಕೋದರೌ ।
ಸಸ್ವಜೇ ಪುರುಷವ್ಯಾಘ್ರೌ ಹರ್ಷಾದ್ ಬಾಷ್ಪಂ ಮುಮೋಚ ಹ ॥ ೩೫ ॥

ಹೀಗೆ ಹೇಳಿ ಪಾಂಡುಪುತ್ರನಾದ ಧರ್ಮರಾಜನು ಪುರುಷವ್ಯಾಘ್ರರಾದ ಭೀಮ-ಸಾತ್ಯಕಿಯರನ್ನು ಆಲಿಂಗಿಸಿ ಸಂತೋಷದಿಂದ ಬಾಷ್ಪಗಳನ್ನು ಸುರಿಸಿದನು.

ತತಃ ಪ್ರಮುದಿತಂ ಸರ್ವಂ ಬಲಮಾಸೀದ್ ವಿಶಾಂಪತೇ ।
ಪಾಂಡವಾನಾಂ ಜಯಂ ದೃಷ್ಟ್ವಾ ಯುದ್ಧಾಯ ಚ ಮನೋ ದಧೇ ॥

ಎಲೈ ರಾಜನೇ, ಆಗ ಪಾಂಡವರ ಜಯವನ್ನು ನೋಡಿ ಆವರ ಸೈನ್ಯವೆಲ್ಲವೂ ಸಂತೋಷಗೊಂಡು ಯುದ್ಧಕ್ಕಾಗಿ ಮನಸ್ಸಿನಲ್ಲಿ ಸಿದ್ಧರಾದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚತ್ರಿಂಶದಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತಾರನೆಯ ಅಧ್ಯಾಯ

ಸೈಂಧವನ ವಧೆಯಿಂದ ದುರ್ಯೋಧನನ ಶೋಕ ಮತ್ತು ಆತ್ಮನಿಂದೆ.

ಸಂಜಯಃ

ಸೈಂಧವೇ ನಿಹತೇ ರಾಜನ್ ಪುತ್ರಸ್ತವ ಸುಯೋಧನಃ ।
ಅಶ್ರುಕ್ಲಿನ್ನಮುಖೋ ದೀನೋ ನಿರುತ್ಸಾಹೋ ದ್ವಿಷದ್ಜಯೇ ।
ಅಮನ್ಯತಾರ್ಜುನಸಮೋ ಯೋಧೋ ಭುವಿ ನ ವಿದ್ಯತೇ ॥ ೧ ॥

ನ ದ್ರೋಣೋ ನ ಚ ರಾಧೇಯೋ ನಾಶ್ವತ್ಥಾಮಾ ಕೃಪೋ ನ ಚ ।
ಕ್ರುದ್ಧಸ್ಯ ಪ್ರಮುಖೇ ಸ್ಥಾತುಂ ಪರ್ಯಾಪ್ತಾ ಇತಿ ಮಾರಿಷ ॥ ೨ ॥

ಸಂಜಯ– ಎಲೈ ರಾಜನೇ, ಸೈಂಧವನು ಹತನಾಗುತ್ತಿರಲು ನಿನ್ನ ಪುತ್ರನಾದ ದುರ್ಯೋಧನನು ಕಣ್ಣೀರಿನಿಂದ ತುಂಬಿದ ಮುಖವುಳ್ಳವನಾಗಿ, ದೀನನಾಗಿ ಶತ್ರುಜಯದಲ್ಲಿ ಉತ್ಸಾಹವನ್ನು ಕಳೆದುಕೊಂಡು ಅರ್ಜುನನಿಗೆ ಸಮರಾದ ಯೋಧರು ಭೂಮಿಯಲ್ಲಿ ಯಾರೂ ಇಲ್ಲ. ದ್ರೋಣರಾಗಲೀ, ಕರ್ಣನಾಗಲೀ, ಅಶ್ವತ್ಥಾಮರಾಗಲೀ, ಕೃಪರಾಗಲೀ ಕ್ರುದ್ಧನಾದ ಅವನ ಮುಂದೆ ನಿಲ್ಲಲು ಸಮರ್ಥರಲ್ಲವೆಂದು ತಿಳಿದನು.

ನಿರ್ಜಿತ್ಯ ಹಿ ರಣೇ ಪಾರ್ಥಃ ಸರ್ವಾನ್ ಮಮ ಮಹಾರಥಾನ್ ।
ಅವಧೀತ್ ಸೈಂಧವಂ ಸಂಖೇ ನೈನಂ ಕಶ್ಚಿದವಾರಯತ್ ॥ ೩ ॥

ಅರ್ಜುನನು ನನ್ನ ಸೈನ್ಯದ ಎಲ್ಲ ಮಹಾರಥರನ್ನೂ ಜಯಿಸಿ ರಣರಂಗದಲ್ಲಿ ಸೈಂಧವನನ್ನು ಕೊಂದನು. ಅವನನ್ನು ಯಾರೂ ತಡೆಯಲಿಲ್ಲ.

ಸರ್ವಥಾ ಹತಮೇವೈತತ್ ಕೌರವಾಣಾಂ ಮಹದ್ಬಲಮ್ ।
ನ ಹ್ಯಸ್ಯ ವಿದ್ಯತೇ ತ್ರಾತಾ ಸಾಕ್ಷಾದಪಿ ಪುರಂದರಃ ॥ ೪ ॥

ಕೌರವರ ಈ ದೊಡ್ಡ ಸೈನ್ಯವು ಎಲ್ಲ ರೀತಿಯಿಂದಲೂ ವಿನಾಶವನ್ನು ಹೊಂದಿದೆ. ಸಾಕ್ಷಾತ್ ಇಂದ್ರನೂ ಇದನ್ನು ರಕ್ಷಿಸಲಾರ.

ಯಮುಪಾಶ್ರಿತ್ಯ ಸಂಗ್ರಾಮೇ ಕೃತಃ ಶಸ್ತ್ರಮುದ್ಯಮಃ ।
ಸ ಕರ್ಣೋ ನಿರ್ಜಿತಃ ಸಂಖೇ ಹತಶ್ಚೈವ ಜಯದ್ರಥಃ ॥ ೫ ॥

ಯಾವ ಕರ್ಣನನ್ನು ಆಶ್ರಯಿಸಿ ಯುದ್ಧದಲ್ಲಿ ಶಸ್ತ್ರವ್ಯಾಪಾರವನ್ನು ಮಾಡಿದೆವೋ ಅಂತಹ ಕರ್ಣನೂ ಯುದ್ಧದಲ್ಲಿ ಪರಾಜಿತನಾಗಿದ್ದಾನೆ. ಜಯದ್ರಥನು ಹತನಾಗಿದ್ದಾನೆ.

ಪರುಷಾಣಿ ಸಭಾಮಧ್ಯೇ ಪ್ರೋಕ್ತವಾನ್ ಯಃ ಸ್ಮ ಪಾಂಡವಾನ್ ।
ಸ ಕರ್ಣೋ ನಿರ್ಜಿತಃ ಸಂಖೇ ಸೈಂಧವಶ್ಚ ನಿಪಾತಿತಃ ॥ ೬ ॥

ಯಾವ ಕರ್ಣನು ಸಭೆಯ ಮಧ್ಯದಲ್ಲಿ ಪಾಂಡವರನ್ನು ಕುರಿತು ಉಗ್ರವಾದ ಮಾತುಗಳನ್ನು ಆಡಿದನೋ ಅಂತಹ ಅವನು ರಣರಂಗದಲ್ಲಿ ನಿರ್ಜಿತನಾಗಿದ್ದಾನೆ, ಸೈಂಧವನು ಹತನಾಗಿದ್ದಾನೆ.

ಯಸ್ಯ ವೀರ್ಯಂ ಸಮಾಶ್ರಿತ್ಯ ಶಮಂ ಯಾಚಂತಮಚ್ಯುತಮ್ ।
ತೃಣವತ್ ತಮಹಂ ಮನ್ಯೇ ಸ ಕರ್ಣೋ ನಿರ್ಜಿತೋ ಯುಧಿ ॥ ೭ ॥

ಯಾರ ಪರಾಕ್ರಮವನ್ನು ಆಶ್ರಯಿಸಿ ನಾನು ಸಂಧಿಯನ್ನು ಬೇಡಲು ಬಂದ ಕೃಷ್ಣನನ್ನು ತೃಣಕ್ಕೆ ಸಮಾನವಾಗಿ ನೋಡಿದೆನೋ ಅಂತಹ ಕರ್ಣನು ಯುದ್ಧದಲ್ಲಿ ಪರಾಜಿತನಾಗಿದ್ದಾನೆ.

ಏವಂ ಕ್ಲಾಂತಮನಾ ರಾಜನ್ನುಪಾಯಾದ್ ದ್ರೋಣಮೀಕ್ಷಿತುಮ್ ।
ಆಗಸೃತ್ ಸರ್ವಲೋಕಸ್ಯ ಪುತ್ರಸ್ತೇ ಭರತರ್ಷಭ ॥ ೮ ॥

ಎಲೈ ರಾಜನೇ, ಭರತಶ್ರೇಷ್ಠನೇ, ಹೀಗೆ ಮನಸ್ಸಿನಲ್ಲಿ ದುಃಖದಿಂದ ಯೋಚಿಸುತ್ತಾ ಸರ್ವಲೋಕಕ್ಕೂ ಅಪರಾಧವನ್ನು ಮಾಡಿದ ನಿನ್ನ ಪುತ್ರನು ದ್ರೋಣರನ್ನು ನೋಡಲು ಹೊರಟನು.

ತತಸ್ತತ್ ಸರ್ವಮಾಚಖ್ಯೌ ಕುರೂಣಾಂ ವೈಶಸಂ ಮಹತ್ ।
ಪರಾನ್ ವಿಜಯತಶ್ಚಾಪಿ ಧಾರ್ತರಾಷ್ಟ್ರಾನ್ ನಿಮಜ್ಜತಃ ॥ ೯ ॥

ಆನಂತರ ಅಲ್ಲಿ ಕುರುಗಳಿಗೆ ಉಂಟಾದ ದೊಡ್ಡ ಹಿಂಸೆಯನ್ನೂ, ಶತ್ರುಗಳಾದ ಪಾಂಡವರು ಗೆಲ್ಲುತ್ತಿರುವುದನ್ನೂ, ಧೃತರಾಷ್ಟ್ರಪುತ್ರರು ಮುಳುಗಿಹೋಗುತ್ತಿರುವುದನ್ನೂ ಹೇಳಿದನು.

ದುರ್ಯೋಧನಃ

ಪಶ್ಯ ಮೂರ್ಧಾವಸಿಕ್ತಾನಾಮಾಚಾರ್ಯ ಕದನಂ ಕೃತಮ್ ।
ಕೃತ್ವಾ ಪ್ರಮುಖತಃ ಶೂರಂ ಭೀಷ್ಮಂ ಮಮ ಪಿತಾಮಹಮ್ ॥ ೧೦ ॥

ದುರ್ಯೋಧನ– ಪಟ್ಟಾಭಿಷಿಕ್ತರಾಜರಿಗೆ ಗುರುಗಳಾದ ಎಲೈ ದ್ರೋಣರೇ, ನಾವು ಪಿತಾಮಹರಾದ ಶೂರರಾದ ಭೀಷ್ಮರನ್ನು ಮುಂದೆ ಮಾಡಿಕೊಂಡು ಮಾಡಿದ ಯುದ್ಧವನ್ನು ನೋಡಿ.

ತಂ ನಿಹತ್ಯ ಪ್ರಲುಬ್ಧೋಽಯಂ ಶಖಂಡೀ ಪೂರ್ಣಮಾನಸಃ ।
ಪಾಂಚಾಲೈಃ ಸಹಿತಃ ಸರ್ವೈಃ ಸೇನಾಗ್ರಮಭಿಕರ್ಷತಿ ॥ ೧೧ ॥

ಬಹಳವಾದ ಆಸೆಯುಳ್ಳ ಈ ಶಿಖಂಡಿಯು ಅವರನ್ನು ಕೊಂದು ತನ್ನ ಮನೋರಥವನ್ನು ಪೂರ್ಣ ಮಾಡಿಕೊಂಡು ಎಲ್ಲ ಪಾಂಚಾಲರಿಂದಲೂ ಸಹಿತರಾಗಿ ಆ ಸೇನೆಯನ್ನು ಮುಂದೆ ನಡೆಸುತ್ತಿದ್ದಾನೆ.

ಅಪರಶ್ಚಾಪಿ ದುರ್ಧರ್ಷಃ ಶಿಷ್ಯಸ್ತೇ ಸವ್ಯಸಾಚಿನಾ ।
ಅಕ್ಷೌಹಿಣೀಃ ಸಪ್ತ ಹತ್ವಾ ಹತೋ ರಾಜಾ ಜಯದ್ರಥಃ ॥ ೧೨ ॥

ನಿಮ್ಮ ದುರ್ಧರ್ಷನಾದ ಇನ್ನೊಬ್ಬ ಶಿಷ್ಯನಾದ ಜಯದ್ರಥನೂ ಸಹ ಏಳು ಅಕ್ಷೌಹಿಣಿ ಸೈನ್ಯವನ್ನು ಕೊಂದು ಅರ್ಜುನನಿಂದ ಹತನಾಗಿದ್ದಾನೆ.

ಆಸ್ಮದ್ವಿಜಯಕಾಮಾನಾಂ ಸುಹೃದಾಮುಪಕಾರಿಣಾಮ್ ।
ಗಂತಾಸ್ಮಿ ಕಥಮಾನೃಣ್ಯಂ ಗತಾನಾಂ ಯಮಸಾದನಮ್ ॥ ೧೩ ॥

ನಮ್ಮ ವಿಜಯವನ್ನು ಬಯಸಿ ಉಪಕಾರವನ್ನು ಮಾಡಿ ಯಮಲೋಕಕ್ಕೆ ಹೋದ ಯೋಧರಿಗೆ ನಾನು ಯಾವ ರೀತಿಯಲ್ಲಿ ಋಣವನ್ನು ತೀರಿಸಲಿ?

ಯೇ ಮದರ್ಥಂ ಪರೀಪ್ಸಂತಿ ವಸುಧಾಂ ವಸುಧಾಧಿಪಾಃ ।
ತೇ ಹಿತ್ವಾ ವಸುಧೈಶ್ವರ್ಯಂ ವಸುಧಾಮಧಿಶೇರತೇ ॥ ೧೪ ॥

ಯಾವ ರಾಜರು ನನ್ನ ಸಲುವಾಗಿ ಭೂಮಿಯನ್ನು ರಕ್ಷಿಸಿದರೋ ಅವರು ಭೂಮಿಯ ಐಶ್ವರ್ಯವನ್ನು ತ್ಯಜಿಸಿ ಭೂಮಿಯ ಮೇಲೆ ಮೃತರಾಗಿ ಮಲಗಿದ್ದಾರೆ.

ಸೋಽಹಂ ಕಾಪುರುಷಃ ಕೃತ್ವಾ ಮಿತ್ರಾಣಾಂ ಕ್ಷಯಮೀದೃಶಮ್ ।
ನಾಶ್ವಮೇಧಸಹಸ್ರೇಣ ಪಾತುಮಾತ್ಮಾನಮುತ್ಸಹೇ ॥ ೧೫ ॥

ಮಿತ್ರರಿಗೆ ಇಂತಹ ಕ್ಷಯವನ್ನು ಉಂಟುಮಾಡಿದ ಕೆಟ್ಟ ಪುರುಷನಾದ ನಾನು ಸಹಸ್ರ ಅಶ್ವಮೇಧಗಳಿಂದಲೂ ನನ್ನನ್ನು ರಕ್ಷಿಸಿಕೊಳ್ಳಲಾರೆ.

ಮಮ ಲುಬ್ಧಸ್ಯ ಪಾಪಸ್ಯ ತಥಾ ಧರ್ಮಾಪಚಾಯಿನಃ ।
ವ್ಯಾಯಚ್ಛಂತೋ ಜಿಗೀಷಂತಃ ಪ್ರಾಪ್ತಾ ವೈವಸ್ವತಕ್ಷಯಮ್ ॥ ೧೬ ॥

ಆಸೆಬುರುಕನೂ, ಪಾಪಿಯೂ, ಧರ್ಮಭ್ರಷ್ಟನೂ ಆದ ನನ್ನ ಸಲುವಾಗಿ ಶತ್ರುಗಳನ್ನು ಗೆಲ್ಲಲು ಬಯಸಿ ಶಸ್ತ್ರೋದ್ಯೋಗವನ್ನು ಮಾಡಿದ ಅವರು ಯಮಪಟ್ಟಣವನ್ನು ತಲುಪಿದ್ದಾರೆ.

ಕಥಂ ಪತಿತವೃತ್ತಸ್ಯ ಪೃಥಿವೀ ಸುಹೃದಾಂ ದ್ರುಹಃ ।
ವಿವರಂ ನಾಶಕದ್ ದಾತುಂ ಮಮ ಪಾರ್ಥಿವಸಂಸದಿ ॥ ೧೭ ॥

ಭೂಮಿಯು ದುರ್ನಡತೆಯುಳ್ಳ ಮಿತ್ರದ್ರೋಹಿಯಾದ, ರಾಜರ ಸಭೆಯಲ್ಲಿ ಸಿಂಹಾಸನದ ಮೇಲೆ ಕುಳಿತ ನನ್ನನ್ನು ಏಕೆ ನುಂಗಲಿಲ್ಲ?

ಸೋಽಹಂ ರುಧಿರಸಿಕ್ತಾಂಗಂ ರಾಜ್ಞಾಂ ಮಧ್ಯೇ ಪಿತಾಮಹಮ್ ।
ಶಯಾನಂ ನಾಶಕಂ ತ್ರಾತುಂ ಭೀಷ್ಮಮಾಯೋಧನೇ ಹತಮ್ ॥ ೧೮ ॥

ಅಂತಹ ನಾನು ರಣರಂಗದಲ್ಲಿ ತಾಡಿತರಾಗಿ, ದೇಹವೆಲ್ಲ ರಕ್ತದಿಂದ ಒದ್ದೆಯಾಗಿ ರಣಭೂಮಿಯಲ್ಲಿ ಮಲಗಿದ ಪಿತಾಮಹರಾದ ಭೀಷ್ಮರನ್ನು ರಾಜರ ಮಧ್ಯದಲ್ಲಿ ರಕ್ಷಿಸಲು ಸಮರ್ಥನಾಗಲಿಲ್ಲ.

ತಂ ಮಾಮನಾರ್ಯಪುರುಷಂ ಮಿತ್ರದ್ರುಹಮಧಾರ್ಮಿಕಮ್ ।
ಕಿಂ ಸ ವಕ್ಷ್ಯತಿ ದುರ್ಧರ್ಷಃ ಸಮೇತ್ಯ ಪರಲೋಕಜಿತ್ ॥ ೧೯ ॥

ಪರಲೋಕವನ್ನು ಗೆದ್ದಿರುವ ದುರ್ಧರ್ಷರಾದ ಭೀಷ್ಮರು ಅನಾರ್ಯನೂ, ಮಿತ್ರದ್ರೋಹಿಯೂ, ಅಧಾರ್ಮಿಕನೂ ಆದ ನನ್ನನ್ನು ನೋಡಿ ಏನು ಹೇಳುವರು?

ಜಲಸಂಧಂ ಮಹೇಷ್ವಾಸಂ ಪಶ್ಯ ಸಾತ್ಯಕಿನಾ ಹತಮ್ ।
ಮದರ್ಥಮುದ್ಯತಂ ಶೂರಂ ಪ್ರಾಣಾಂಶ್ಚಕ್ತ್ವಾ ಮಹಾರಥಮ್ ॥ ೨೦ ॥

ನನ್ನ ಸಲುವಾಗಿ ಪ್ರಾಣವನ್ನು ಲೆಕ್ಕಿಸದೆ ಯುದ್ಧವನ್ನು ಮಾಡಿದ ಮಹಾಧನುರ್ಧಾರಿಯೂ, ಮಹಾರಥನೂ ಆದ ಜಲಸಂಧನು ಸಾತ್ಯಕಿಯಿಂದ ಹತನಾದುದನ್ನು ನೋಡಿ.

ಕಾಂಬೋಜಂ ನಿಹತಂ ದೃಷ್ಟ್ವಾ ತಥಾಲಂಬುಸಮೇವ ಚ ।
ಅನ್ಯಾನ್ ಬಹೂಂಶ್ಚ ಸುಹೃದೋ ಜೀವಿತಾರ್ಥೋಽದ್ಯ ಕೋ ಮಮ ॥

ಕಾಂಬೋಜನು ಹತನಾದುದನ್ನು ನೋಡಿ ಹಾಗೆಯೇ ಅಲಂಬುಸನೂ ಬೇರೆ ಬಹಳ ಸಹೃದರೂ ಹತರಾದುದನ್ನು ನೋಡಿ ಈ ದಿನ ನಾನು ಬದುಕಿ ಏನು ಪ್ರಯೋಜನ?

ವ್ಯಾಯಚ್ಛಂತೋ ಹತಾಃ ಶೂರಾ ಮದರ್ಥೇ ಯೇಽಪರಾಙ್ಮುಖಾಃ ।
ಯತಮಾನಾಃ ಪರಂ ಶಕ್ತ್ಯಾ ವಿಜೇತುಮಹಿತಾನ್ ಮಮ ॥ ೨೨ ॥

ನನ್ನ ಶತ್ರುಗಳನ್ನು ಜಯಿಸಲು ಯುದ್ಧದಲ್ಲಿ ಹಿಮ್ಮೆಟ್ಟದ ಶೂರರು ನನ್ನ ಸಲುವಾಗಿ ಶಕ್ತಿ ಮೀರಿ ಪ್ರಯತ್ನಪಟ್ಟು ಶಸ್ತ್ರಗಳನ್ನು ಪ್ರಯೋಗಿಸಿದರು.

ತೇಷಾಂ ಗತ್ವಾಹಮಾನೃಣ್ಯಮದ್ಯ ಶಕ್ತ್ಯಾ ಪರಂತಪ ।
ತರ್ಪಯಿಷ್ಯಾಮಿ ತಾನೇವ ಜಲೇನ ಯಮುನಾಮನು ॥ ೨೩ ॥

ಎಲೈ ಪರಂತಪರೇ, ಈ ದಿನ ನಾನು ನನ್ನ ಶಕ್ತಿಯಿಂದ ಯುದ್ಧ ಮಾಡಿ ಅವರ ಋಣದಿಂದ ಮುಕ್ತನಾಗಿ ಅವರಿಗೆ ಯಮುನಾ ಜಲದಿಂದ ತರ್ಪಣವನ್ನು ಕೊಡುವೆನು.

ಸತ್ಯಂ ತೇ ಪ್ರತಿಜಾನಾಮಿ ಸರ್ವಶಸ್ತ್ರಭೃತಾಂ ವರ ।
ಇಷ್ಟಾಪೂರ್ತೇನ ಚ ಶಪೇ ವೀರ್ಯೇಣ ಚ ಸುತೈರಪಿ ॥ ೨೪ ॥

ಎಲ್ಲ ಧನುರ್ಧಾರಿಗಳಲ್ಲಿ ಶ್ರೇಷ್ಠರೇ, ಇದನ್ನು ನಾನು ಮಾಡಿದ ಇಷ್ಟಾಪೂರ್ತಗಳ ಮೇಲೆ ಆಣೆಯನ್ನು ಮಾಡಿ, ನನ್ನ ಪರಾಕ್ರಮದ ಮೇಲೆ ಮತ್ತು ನನ್ನ ಮಕ್ಕಳ ಮೇಲೆ ಆಣೆಯನ್ನು ಮಾಡಿ ನಿಮಗೆ ಸತ್ಯವಾಗಿ ಹೇಳುತ್ತಿದ್ದೇನೆ.

ನಿಹತ್ಯ ತಾನ್ ರಣೇ ಸರ್ವಾನ್ ಪಾಂಚಾಲಾನ್ ಪಾಂಡವೈಃ ಸಹ ।
ಶಾಂತಿಂ ಲಬ್ಧಾಸ್ಮಿ ತೇಷಾಂ ವಾ ರಣೇ ಗಂತಾ ಸಲೋಕತಾಮ್ ॥೨೫॥

ಯುದ್ಧದಲ್ಲಿ ಪಾಂಡವರಿಂದ ಸಹಿತರಾದ ಎಲ್ಲ ಪಾಂಚಾಲರನ್ನೂ ಕೊಂದು ನಾನು ಶಾಂತಿಯನ್ನು ಪಡೆಯುವೆನು. ಅಥವಾ ಅವರು (ನನ್ನ ವೀರರು) ಹೋದ ಲೋಕಕ್ಕೇ ನಾನೂ ಹೋಗುವೆನು.

ನ ಹೀದಾನೀಂ ಸಹಾಯಾ ಮೇ ಪರೀಪ್ಸಂ ತ್ಯನುಕುಕೃತಾಃ ।
ಶ್ರೇಯೋ ಹಿ ಪಾಂಡೂನ್ ಮನ್ಯಂತೇ ನ ತಥಾಽಸ್ಮಾನ್ ಮಹಾಭುಜ ॥

ನನ್ನಿಂದ ಗೌರವಿಸಲ್ಪಡದ ನನ್ನ ಅನುಚರರು ಈಗ ನನ್ನ ಕಡೆ ನೋಡುವುದಿಲ್ಲ; ಎಲೈ ಮಹಾಭುಜರೇ, ಅವರು ಪಾಂಡವರನ್ನೇ ತಮ್ಮ ಶ್ರೇಯಸ್ಸಿಗೆ ಕಾರಣರೆಂದು ತಿಳಿಯುತ್ತಾರೆ. ನನ್ನನ್ನು ಹಾಗೆ ತಿಳಿಯುವುದಿಲ್ಲ.

ಸ್ವಯಂ ಹಿ ಮೃತ್ಯುರ್ವಿಹಿತಃ ಸತ್ಯಸಂಧೇನ ಸಂಯುಗೇ ।
ಭವಾನುಪೇಕ್ಷಾಂ ಕುರುತೇ ಸುಶಿಷ್ಯತ್ವಾದ್ ಧನಂಜಯೇ ॥ ೨೭ ॥

ಸತ್ಯಸಂಧರಾದ ಭೀಷ್ಮರು ರಣರಂಗದಲ್ಲಿ ತಮ್ಮ ಮೃತ್ಯುವನ್ನು ತಾವೇ ತಂದುಕೊಂಡರು. ನೀವೂ ಸಹ ಒಳ್ಳೆಯ ಶಿಷ್ಯನಾದುದರಿಂದ ಅರ್ಜುನನನ್ನು ಉಪೇಕ್ಷೆ ಮಾಡುತ್ತಿದ್ದೀರಿ.

ಅತೋ ವಿನಿಹತಾಃ ಸರ್ವೇ ಯೇಽಸ್ಮಜ್ಜಯಚಿಕೀರ್ಷವಃ ।
ಕರ್ಣಮೇವ ತು ಪಶ್ಯಾಮಿ ಸಂಪ್ರತ್ಯಸ್ಮಜ್ಜಯೈಷಿಣಮ್ ॥ ೨೮ ॥

ಆದ್ದರಿಂದ ನಮ್ಮ ಜಯವನ್ನು ಆಶಿಸಿ ಯುದ್ಧ ಮಾಡುವರೆಲ್ಲರೂ ಮೃತರಾಗಿದ್ದಾರೆ. ಈಗ ಕರ್ಣನೊಬ್ಬನು ಮಾತ್ರ ನಮ್ಮ ಜಯವನ್ನು ಬಯಸುತ್ತಿರುವುದನ್ನು ನೋಡುತ್ತಿದ್ದೇನೆ.

ಯೋ ಹಿ ಮಿತ್ರಮವಿಜ್ಞಾಯ ಯಾಥಾತಥ್ಯೇನ ಮಂದಧೀಃ ।
ಮಿತ್ರಾರ್ಥೇ ಯೋಜಯತ್ಯೇನಂ ತಸ್ಯ ಸೋಽರ್ಥೋಽವಸೀದತಿ ॥೨೯॥

ಯಾವ ಮೂಢನು ತನ್ನ ಮಿತ್ರನನ್ನು ಸರಿಯಾಗಿ ತಿಳಿಯದೆ ಅವನನ್ನು ಮಿತ್ರಕಾರ್ಯದಲ್ಲಿ ನಿಯೋಗಿಸುತ್ತಾನೆಯೋ ಅವನ ಸಂಪತ್ತು ಶೀಘ್ರದಲ್ಲಿ ನಾಶವನ್ನು ಹೊಂದುತ್ತದೆ.

ತಾದೃಗ್ರೂಪಮಿದಂ ಕಾರ್ಯಂ ಕೃತಂ ಮಮ ಸುಹೃದ್ಭ್ಯವೈಃ ।
ಮೋಹಾಲ್ಲುಬ್ಧಸ್ಯ ಪಾಪಸ್ಯ ಜಿಹ್ಮಾಚಾರ್ಯೈತತ್ತತಸ್ತತಃ ॥ ೩೦ ॥

ನನ್ನ ಮಿತ್ರರೆಂದು ಕರೆದುಕೊಳ್ಳುವವರು ಮೋಹದಿಂದ ಲೋಭಿಯಾದ, ಪಾಪಿಯಾದ, ಕಪಟಾಚಾರಿಯಾದ ನನ್ನ ಸಲುವಾಗಿ ಅಂತಹ ಕಾರ್ಯವನ್ನು ಮಾಡಿದನು.

ಹತೋ ಜಯದ್ರಥಶ್ಚೈವ ಸೌಮದತ್ತಿಶ್ಚ ವೀರ್ಯವಾನ್ ।
ಅಭೀಷಾಹಾಃ ಶೂರಸೇನಾಃ ಶಿಬಯೋಽಥ ವಸಾತಯಃ ॥ ೩೧ ॥

ನನ್ನ ಸಲುವಾಗಿ ಜಯದ್ರಥನೂ, ಪರಾಕ್ರಮಿಯಾದ ಭೂರಿಶ್ರವನೂ, ಅಭೀಷಾಹರೂ, ಶೂರಸೇನರೂ, ಶಿಬಿಗಳೂ, ವಸಾತಿಗಳೂ ಮೃತರಾದರು.

ಸೋಽಹಮದ್ಯ ಗಮಿಷ್ಯಾಮಿ ಯತ್ರ ತೇ ಪುರುಷರ್ಷಭಾಃ ।
ಹತಾ ಮದರ್ಥಂ ಸಂಗ್ರಾಮೇ ಯುದ್ಧ್ಯಮಾನಾಃ ಕಿರೀಟಿನಾ ॥ ೩೨ ॥

ಅಂತಹ ನಾನು ಈ ದಿನ ನನ್ನ ಸಲುವಾಗಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಹತರಾದ ಆ ಪುರುಷಶ್ರೇಷ್ಠರು ಹೋದ ಸ್ಥಳಕ್ಕೇ ಹೋಗುವೆನು.

ನ ಹಿ ಮೇ ಜೀವಿತೇನಾರ್ಥಸ್ತಾನೃತೇ ಪುರುಷರ್ಷಭಾನ್ ।
ಆಚಾರ್ಯಃ ಪಾಂಡುಪುತ್ರಾಣಾಮನುಜಾನಾತು ನೋ ಭವಾನ್ ॥೩೩॥

ಆ ಪುರುಷಶ್ರೇಷ್ಠರನ್ನು ಬಿಟ್ಟು ನಾನು ಬದುಕುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಪಾಂಡುಪುತ್ರರ ಆಚಾರ್ಯರೇ, ನನಗೆ ಅನುಮತಿಯನ್ನು ಕೊಡಿ.

ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ

ದ್ರೋಣಪರ್ವಣಿ ಷಟ್‌ತ್ರಿಂಶದಧಿಕಶತತಮೋಽಧ್ಯಾಯಃ ॥

ಘಟೋತ್ಕಚವಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೇಳನೆಯ ಅಧ್ಯಾಯ

ದುರ್ಯೋಧನನನ್ನು ನಿಂದಿಸಿ ರಾತ್ರಿ ಯುದ್ಧಕ್ಕಾಗಿ ದ್ರೋಣರ ಪ್ರಸ್ತಾಪ

ಧೃತರಾಷ್ಟ್ರಃ

ಸಿಂಧುರಾಜೇ ಹತೇ ತಾತ ಸಮರೇ ಸವ್ಯಸಾಚಿನಾ ।
ತಥೈವ ಭೂರಿಶ್ರವಸಿ ಕಿಮಾಸೀದ್ ವೋ ಮನಸ್ತದಾ ॥ ೧ ॥

ದುರ್ಯೋಧನೇನ ಚ ದ್ರೋಣಸ್ತಥೋಕ್ತಃ ಕುರುಸಂಸದಿ ।
ಕಿಮುಕ್ತವಾನ್ ಪರಂ ತಸ್ಮಾತ್ ತನ್ಮಮಾಚಕ್ಷ್ವ ಸಂಜಯ ॥ ೨ ॥

ಧೃತರಾಷ್ಟ್ರ- ಎಲೈ ಪ್ರೀತಿಪಾತ್ರನೇ, ಅರ್ಜುನನಿಂದ ರಣರಂಗದಲ್ಲಿ ಸೈಂಧವನೂ ಹಾಗೆಯೇ ಭೂರಿಶ್ರವನೂ ಹತನಾಗುತ್ತಿರಲು ನಿಮ್ಮ ಮನಸ್ಸು ಹೇಗಿದ್ದಿತು? ಸಂಜಯನೇ,

ದುರ್ಯೋಧನನಿಂದ ಕೌರವರ ಸಭೆಯಲ್ಲಿ ಹಾಗೆ ಹೇಳಲ್ಪಟ್ಟ ದ್ರೋಣರು ಅನಂತರ ಏನು ಹೇಳಿದರು ಎಂದು ನನಗೆ ಹೇಳು.

ಸಂಜಯಃ

ನಿಷ್ಠಾನಕೋ ಮಹಾನಾಸೀತ್ ಸೈನ್ಯಾನಾಂ ತವ ಭಾರತ ।
ಸೈಂಧವಂ ನಿಹತಂ ದೃಷ್ಟ್ವಾ ಭೂರಿಶ್ರವಸಮೇವ ಚ ॥ ೩ ॥

ಮಂತ್ರಿತಂ ತವ ಪುತ್ರಸ್ಯ ತೇ ಸರ್ವಮವಮೇನಿರೇ ।
ಯೇನ ಮಂತ್ರೇಣ ನಿಹತಾಃ ಶತಶಃ ಕ್ಷತ್ರಿಯರ್ಷಭಾಃ ॥ ೪ ॥

ಸಂಜಯ– ಎಲೈ ಭಾರತನೇ, ಸೈಂಧವ ಮತ್ತು ಭೂರಿಶ್ರವರು ಹತರಾದುದನ್ನು ನೋಡಿ ನಿನ್ನ ಸೈನ್ಯದಲ್ಲಿ ಘೋರವಾದ ಶಬ್ದವುಂಟಾಯಿತು. ಯಾವ ನಿನ್ನ ಪುತ್ರನ ಮಂತ್ರಾಲೋಚನೆಯಿಂದ ನೂರಾರು ಕ್ಷತ್ರಿಯ ಶ್ರೇಷ್ಠರು ಹತರಾದರೋ ಅಂತಹ ಮಂತ್ರಾಲೋಚನೆಯನ್ನು ಸೈನ್ಯಗಳು ತಿರಸ್ಕರಿಸಿದವು.

ದ್ರೋಣಸ್ತು ತದ್ವಚಃ ಶ್ರುತ್ವಾ ಪುತ್ರಸ್ಯ ತವ ದುರ್ಮನಾಃ ।
ಮುಹೂರ್ತಮಿವ ತು ಧ್ಯಾತ್ವಾ ಭೃಶಮಾರ್ತೋ೨ಭ್ಯಭಾಷತ ॥ ೫ ॥

ದ್ರೋಣರು ನಿನ್ನ ಪುತ್ರನ ಮಾತುಗಳನ್ನು ಕೇಳಿ ಬಹಳ ಬೇಸರಗೊಂಡು ಒಂದು ಮುಹೂರ್ತದ ಕಾಲ ಚಿಂತಿಸಿ ಬಹಳ ದುಃಖದಿಂದ ಮಾತನಾಡಿದರು.

ದುರ್ಯೋಧನ ಕಿಮೇವಂ ಮಾಂ ವಾಕ್‌ಶರೈರಭಿಕೃಂತಸಿ ।
ಅಜಯ್ಯಂ ಸಮರೇ ನಿತ್ಯಂ ಬ್ರುವಾಣಂ ಸವ್ಯಸಾಚಿನಮ್ ॥ ೬ ॥

ಎಲೈ ದುರ್ಯೋಧನನೇ, ಅರ್ಜುನನು ಯುದ್ಧದಲ್ಲಿ ಅಜೇಯನಾದವನು ಎಂದು ನಿತ್ಯವೂ ಹೇಳುತ್ತಿರುವ ನನ್ನನ್ನು ಏಕೆ ಹೀಗೆ ವಾಗ್ಬಾಣಗಳಿಂದ ಗಾಯಗೊಳಿಸುತ್ತಿದ್ದೀಯೆ?

ಏತೇನೈವಾರ್ಜುನಂ ಜ್ಞಾತುಮಲಂ ಕೌರವ ಸಂಯುಗೇ ।
ಯಚ್ಚಿಖಂಡ್ಯವಧೀದ್ ಭೀಷ್ಮಂ ಪಾಲ್ಯಮಾನಃ ಕಿರೀಟಿನಾ ॥ ೭ ॥

ಅರ್ಜುನನಿಂದ ರಕ್ಷಿತನಾಗಿ ಶಿಖಂಡಿಯು ಭೀಷ್ಮರನ್ನು ಬಾಣಗಳಿಂದ ಹೊಡೆದುದರಿಂದಲೇ ಎಲೈ ಕೌರವನೇ, ಯುದ್ಧದಲ್ಲಿ ಅರ್ಜುನನ ಸಾಮರ್ಥ್ಯವೆಷ್ಟಿದೆ ಎಂದು ತಿಳಿಯಬಹುದು.

ಅವಧ್ಯಂ ನಿಹತಂ ದೃಷ್ಟ್ವಾ ಸಂಯುಗೇ ದೇವಮಾನುಷೈಃ ।
ತದೈವಾಜ್ಞಾಪಿಷಮಹಂ ನೇಯಮಸ್ತೀತಿ ಭಾರತೀ ॥ ೮ ॥

ದೇವ-ದಾನವರಿಂದ ಅವಧ್ಯರಾದ ಭೀಷ್ಮರು ರಣರಂಗದಲ್ಲಿ ಹತರಾದುದನ್ನು ನೋಡಿ ನಾನು ಆಗಲೇ ಈ ಕೌರವ ಸೇನೆಯು ಇಲ್ಲವೆಂದು ತಿಳಿದೆ.

ಯಂ ಪುಂಸಾಂ ತ್ರಿಷು ಲೋಕೇಷು ಸರ್ವಶೂರಮಮಂಸ್ಮಹಿ ।
ತಸ್ಮಿನ್ ವಿನಿಹತೇ ಶೂರೇ ಕಂ ಶೇಷಂ ಪರ್ಯುಪಾಸ್ಮಹೇ ॥ ೯ ॥

ಯಾರನ್ನು ಮೂರುಲೋಕದಲ್ಲೂ ಸರ್ವಶೂರರೆಂದು ನಾವು ತಿಳಿದಿದ್ದೆವೋ ಅಂತಹ ಭೀಷ್ಮರು ಹತರಾದ ಮೇಲೆ ಇನ್ನು ಏನು ಉಳಿಯುವುದು?

ಯಾನ್ ಸ್ಮ ತಾನ್ ಗ್ಲಹತೇ ತಾತಃ ಶಕುನಿಃ ಕುರುಸಂಸದಿ ।
ಅಕ್ಷಾನ್ ನ ತೇಽಕ್ಷಾ ನಿಶಿತಾ ಬಾಣಾಸ್ತೇ ಶತ್ರುತಾಪನಾಃ ॥ ೧೦॥

ಮತ್ತು ಎಲೈ ಪ್ರೀತಿಪಾತ್ರನೇ, ಶಕುನಿಯು ಕೌರವ ಸಭೆಯಲ್ಲಿ ಯಾವ ದಾಳಗಳನ್ನು ಉರುಳಿಸಿ ದ್ಯೂತವಾಡಿದನೋ ಅವು ದಾಳಗಳಲ್ಲ, ಅವು ಶತ್ರುಭಯಂಕರವಾದ ತೀಕ್ಷ್ಣವಾದ ಬಾಣಗಳು.

ತ ಏತೇ ಘ್ನಂತಿ ನಸ್ತಾತ ವಿಶಿಖಾ ಯಮಚೋದಿತಾಃ ।
ಯಾಂಸ್ತದಾ ಖ್ಯಾಪ್ಯಮಾನಾಂಸ್ತ್ವಂ ವಿದುರೇಣ ನ ಬುಧ್ಯಸೇ ॥ ೧೧ ॥

ಎಲೈ ಪ್ರೀತಿಪಾತ್ರನೇ, ವಿದುರನು ಆ ಸಮಯದಲ್ಲಿ ಘೋಷಿಸುತ್ತಿದ್ದ ಯಾವ ಮಾತುಗಳನ್ನು ನೀನು ಕೇಳಲಿಲ್ಲವೋ ಆ ಮಾತುಗಳು ಅರ್ಜುನನಿಂದ ಪ್ರೇರಿತವಾದ ಬಾಣಗಳಾಗಿ ನಮ್ಮನ್ನು ಕೊಲ್ಲುತ್ತಿವೆ.

ತಾಸ್ತಾ ವಿಲಪತಶ್ಚಾಪಿ ವಿದುರಸ್ಯ ಮಹಾತ್ಮನಃ ।
ಧೀರಸ್ಯ ವಾಚೋ ನಾಶೌಷೀಃ ಕ್ಷೇಮಾಯ ವದತಃ ಶಿವಾಃ ॥ ೧೨ ॥

ನಮ್ಮ ಕ್ಷೇಮದ ಸಲುವಾಗಿ ಯೋಗ್ಯವಾದ ಶುಭವಾದ ಆಯಾ ಮಾತುಗಳನ್ನು ಆಡುತ್ತಿದ್ದ ಧೀರನೂ, ಮಹಾತ್ಮನೂ ಆದ ವಿದುರನ ವಿಲಾಪಪೂರ್ವಕವಾದ ಮಾತುಗಳನ್ನು ನೀನು ಕೇಳಲಿಲ್ಲ.

ತದಿದಂ ವರ್ತತೇ ಘೋರಮಾಗತಂ ವೈಶಸಂ ಮಹತ್ ।
ತಸ್ಯಾವಮಾನಾದ್ ವಾಕ್ಯಸ್ಯ ದುರ್ಯೋಧನ ಕೃತೇ ತವ ॥ ೧೩ ॥

ಎಲೈ ದುರ್ಯೋಧನನೇ, ವಿದುರನ ವಾಕ್ಯಗಳನ್ನು ಅವಮಾನ ಮಾಡಿದ ಕಾರಣದಿಂದ, ನಿನ್ನ ನಿಮಿತ್ತದಿಂದಾಗಿ ಈ ಘೋರವೂ, ದೊಡ್ಡದೂ ಆದ ಹಿಂಸೆಯು ಪ್ರಾಪ್ತವಾಗಿದೆ.

ಯಚ್ಚ ನಃ ಪ್ರೇಕ್ಷಮಾಣಾನಾಂ ಕೃಷ್ಣಾಮಾನಾಯಯಃ ಸಭಾಮ್ ।
ಅನರ್ಹತೀಂ ಕುಲೇ ಜಾತಾಂ ಸರ್ವಧರ್ಮಾನುಚಾರಿಣೀಮ್ ॥ ೧೪ ॥

ತಸ್ಯಾಧರ್ಮಸ್ಯ ಗಾಂಧಾರೇ ಫಲಂ ಪ್ರಾಪ್ತಮಿದಂ ತ್ವಯಾ ।
ನೋ ಚೇತ್ ಪಾಪಂ ಪರೇ ಲೋಕೇ ತ್ವಮರ್ಚ್ಛೇಥಾಸ್ತತೋಽಧಿಕಮ್॥

ನಾವು ನೋಡುತ್ತಿರುವಂತೆಯೇ ಹಾಗೆ ಮಾಡಲು ಯೋಗ್ಯಳಲ್ಲದಂತಹ ಶ್ರೇಷ್ಠಕುಲದಲ್ಲಿ ಜನಿಸಿದಂತಹ, ಸರ್ವಧರ್ಮಾಚಾರಿಣಿಯಾದ ದ್ರೌಪದಿಯನ್ನು ಸಭೆಗೆ ಎಳೆಸಿ ತಂದಿಯಷ್ಟೆ? ಎಲೈ ಗಾಂಧಾರಿ ಪುತ್ರನೇ, ಆ ಅಧರ್ಮದ ಈ ಫಲವು ಈಗ ಪ್ರಾಪ್ತವಾಗಿದೆ. ಇಲ್ಲದಿದ್ದರೆ ನೀನು ಪರಲೋಕದಲ್ಲಿ ಇದಕ್ಕಿಂತ ಹೆಚ್ಚಿನ ದುಃಖವನ್ನು ಹೊಂದುತ್ತಿದ್ದೆ.

ಯಚ್ಚ ತಾನ್ ಪಾಂಡವಾನ್ ದ್ಯೂತೇ ವಿಷಮೇಣ ವಿಜಿತ್ಯ ಹ ।
ಪ್ರಾವ್ರಾಜಯಸ್ತದಾರಣ್ಯೇ ರೌರವಾಜಿನವಾಸಸಃ ॥ ೧೬ ॥

ಪುತ್ರಾಣಾಮಿವ ಚೈತೇಷಾಂ ಧರ್ಮಮಾಚರತಾಂ ಸದಾ ।
ದ್ರುಹ್ಯೇತ್ ಕೋ ನು ನರೋ ಲೋಕೇ ಮದನ್ಯೋ ಬ್ರಾಹ್ಮಣಬ್ರುವಃ ॥

ಆ ಪಾಂಡವರನ್ನು ಕಪಟ ದ್ಯೂತದಲ್ಲಿ ಗೆದ್ದು, ಕೃಷ್ಣಾಜಿನ ವಸ್ತ್ರವನ್ನು ಉಡಿಸಿ ಕಾಡಿಗೆ ಕಳುಹಿಸಿದೆಯಷ್ಟೆ? ಯಾವಾಗಲೂ ಧರ್ಮಾಚರಣೆಯನ್ನು ಮಾಡುತ್ತ

ಪುತ್ರರಂತೆ ಇರುವ ಇವರಿಗೆ ನನ್ನನ್ನು ಬಿಟ್ಟು ಬೇರೆ ಯಾವ ಬ್ರಾಹ್ಮಣಾಧಮನು ಲೋಕದಲ್ಲಿ ದ್ರೋಹವನ್ನು ಮಾಡಿಯಾನು?

ಪಾಂಡವಾನಾಮಯಂ ಕೋಪಸ್ತ್ವಯಾ ಶಕುನಿನಾ ಸಹ ।
ಆಹೃತೋ ಧೃತರಾಷ್ಟ್ರಸ್ಯ ಸಮ್ಮತೇ ಕುರುಸಂಸದಿ ॥ ೧೮ ॥

ದುಃಶಾಸನೇನ ಸಂಯುಕ್ತಃ ಕರ್ಣೇನ ಪರಿವರ್ಧಿತಃ ।
ಕ್ಷತ್ತುರ್ವಾಕ್ಯಮನಾದೃತ್ಯ ತ್ವಯಾಭ್ಯಸ್ತಃ ಪುನಃ ಪುನಃ ॥ ೧೯ ॥

ಕೌರವ ಸಭೆಯಲ್ಲಿ ಧೃತರಾಷ್ಟ್ರನ ಸಮ್ಮತಿಯಲ್ಲಿ ಶಕುನಿಯಿಂದ ಕೂಡಿದ ನಿನ್ನಿಂದ ಪಾಂಡವರಿಗೆ ಕೋಪವುಂಟು ಮಾಡಲ್ಪಟ್ಟಿತು. ದುಶ್ಶಾಸನನಿಂದ ಚೆನ್ನಾಗಿ ಬೆಳೆಸಲ್ಪಟ್ಟ ಆ ಕೋಪವು ಕರ್ಣನಿಂದ ಅಭಿವೃದ್ಧಿ ಹೊಂದಿಸಲ್ಪಟ್ಟಿತು. ವಿದುರನ ಮಾತನ್ನು ಕೇಳದೆ ನೀನು ಅದನ್ನು ಪುನಃ ಪುನಃ ಅಭಿವೃದ್ಧಿಗೊಳಿಸಿದೆ.

ಯತ್ತತ್ ಸರ್ವೇ ಪರಾಭೂಯ ಪರ್ಯವಾರಯತಾರ್ಜುನಿಮ್ ।
ಸಿಂಧುರಾಜಾನಮಾಶ್ರಿತ್ಯ ಸ ವೋ ಮಧ್ಯೇ ಕಥಂ ಹತಃ ॥ ೨೦ ॥

ನೀವೆಲ್ಲರೂ ಸೇರಿ ಸೈಂಧವನನ್ನು ಆಶ್ರಯಿಸಿ ಅಭಿಮನ್ಯುವನ್ನು ಸುತ್ತುವರಿದಿರಷ್ಟೆ? ಅವನು ನಿಮ್ಮ ಮಧ್ಯದಲ್ಲಿ ಹೇಗೆ ಹತನಾದನು?

ಕಥಂ ತ್ವಯಿ ಚ ಕರ್ಣೇ ಚ ಕೃಪೇ ಶಲ್ಯೇ ಚ ಜೀವತಿ ।
ಅಶ್ವತ್ಥಾಮ್ನಿ ಚ ಕೌರವ್ಯ ನಿಧನಂ ಸೈಂಧವೋಽಗಮತ್ ॥ ೨೧ ॥

ಎಲೈ ಕೌರವ್ಯನೇ, ನೀನೂ, ಕರ್ಣನೂ, ಕೃಪರೂ, ಶಲ್ಯರೂ, ಅಶ್ವತ್ಥಾಮರೂ ಜೀವಿಸಿರುವಾಗ ಸೈಂಧವನು ಹೇಗೆ ನಿಧನವನ್ನು ಹೊಂದಿದನು?

ಯದ್ವಸ್ತತ್ ಸರ್ವರಾಜಾನಸ್ತೇಜಸ್ತಿಗ್ಮಮುಪಾಸತೇ ।
ಸಿಂಧುರಾಜಂ ಪರಿತ್ರಾತುಂ ಸ ವೋ ಮಧ್ಯೇ ಕಥಂ ಹತಃ ॥ ೨೨ ॥

ಎಲ್ಲರಾಜರೂ ಸೈಂಧವನನ್ನೂ ನಿಮ್ಮ ಸಾಮರ್ಥ್ಯವನ್ನೂ ಉಪಜೀವಿಸಿಕೊಂಡು ಇದ್ದಾರಷ್ಟೆ? ಅಂತಹ ಸೈಂಧವನು ನಿಮ್ಮ ಮಧ್ಯದಲ್ಲಿ ಹೇಗೆ ಹತನಾದನು?

ಮಯ್ಯೇವ ಹಿ ವಿಶೇಷೇಣ ತಥಾ ದುರ್ಯೋಧನ ತ್ವಯಿ ।
ಆಶಂಸತ ಪರಿತ್ರಾಣಮರ್ಜುನಾತ್ ಸ ಮಹೀಪತಿಃ ॥ ೨೩ ॥

ಎಲೈ ದುರ್ಯೋಧನನೇ, ರಾಜನಾದ ಸೈಂಧವನು ಅರ್ಜುನನಿಂದ ರಕ್ಷಣೆಗಾಗಿ ವಿಶೇಷವಾಗಿ ನನ್ನಲ್ಲಿ ಮತ್ತು ನಿನ್ನಲ್ಲಿ ಬಹಳ ಆಸೆಯನ್ನು ಹೊಂದಿದ್ದನು.

ತತಸ್ತಸ್ಮಿನ್ ಪರಿತ್ರಾಣಮಲಬ್ಧವತಿ ಫಲ್ಗುನಾತ್ ।
ನ ಕಿಂಚದನುಪಶ್ಯಾಮಿ ಜೀವಿತತ್ರಾಣಮಾತ್ಮನಃ ॥ ೨೪ ॥

ಆನಂತರ ಅವನು ಫಲ್ಗುನನ ಎದುರಿನಲ್ಲಿ ರಕ್ಷಣೆಯನ್ನು ಪಡೆಯದಿರಲು ನಮ್ಮ ಜೀವಿತವನ್ನು ರಕ್ಷಿಸುವ ಯಾವುದೂ ಇಲ್ಲ ಎಂದು ತಿಳಿಯುತ್ತೇನೆ.

ಮಜ್ಜಂತಮಿವ ಚಾತ್ಮಾನಂ ಧೃಷ್ಟದ್ಯುಮ್ನಸ್ಯ ಕಿಲ್ಬಿಷೇ ।
ಪಶ್ಯಾಮ್ಯಹತ್ವಾ ಪಾಂಚಾಲಾನ್ ಸಹ ತೇನ ಶಿಖಂಡಿನಾ ॥ ೨೫ ॥

ಶಿಖಂಡಿಯ ಜೊತೆಯಲ್ಲಿ ಪಾಂಚಾಲರನ್ನು ಕೊಲ್ಲದೆ ನಾನು ಧೃಷ್ಟದ್ಯುಮ್ನನ ಕೆಟ್ಟ ಪರಾಕ್ರಮದಲ್ಲಿ ಮುಳುಗಿ ಹೋಗುತ್ತಿದ್ದೇನೆಂದು ಭಾವಿಸುತ್ತಿದ್ದೇನೆ.

ತನ್ಮಾ ಕಿಮಭಿತಪ್ಯಂತಂ ವಾಕ್‌ಶರೈರಭಿಕೃಂತಸಿ ।
ಅಶಕ್ತಃ ಸಿಂಧುರಾಜಸ್ಯ ಭೂತ್ವಾ ತ್ರಾಣಾಯ ಭಾರತ ॥ ೨೬ ॥

ಎಲೈ ಭಾರತನೇ, ಸೈಂಧವನನ್ನು ರಕ್ಷಿಸಲು ಅಸಮರ್ಥನಾದ ನೀನು ಹೀಗೆ ದುಃಖಪಡುತ್ತಿರುವ ನನ್ನನ್ನು ವಾಗ್ಬಾಣಗಳಿಂದ ಏಕೆ ಗಾಯಗೊಳಿಸುತ್ತಿದ್ದೀಯೆ?

ಸೌವರ್ಣಂ ಸತ್ಯಸಂಧಸ್ಯ ಧ್ವಜಮಕ್ಲಿಷ್ಟಕರ್ಮಣಃ ।
ಅಪಶ್ಯನ್ ಯುಧಿ ಭೀಷ್ಮಸ್ಯ ಕಥಮಾಶಂಪಸೇ ಜಯಮ್ ॥ ೨೭ ॥

ಸತ್ಯಸಂಧರೂ, ಲೀಲಾಜಾಲವಾಗಿ ಯುದ್ಧವನ್ನು ಮಾಡುವವರೂ ಆದ ಭೀಷ್ಮರ ಸುವರ್ಣಮಯವಾದ ಧ್ವಜವನ್ನು ರಣರಂಗದಲ್ಲಿ ನೋಡದೆ ಹೇಗೆ ಜಯವನ್ನು ಆಶಿಸುತ್ತೀಯೆ?

ಮಧ್ಯೇ ಮಹಾರಥಾನಾಂ ಚ ಯತ್ರಾಹನ್ಯತ ಸೈಂಧವಃ ।
ಹತೋ ಭೂರಿಶ್ರವಾಶ್ಚೈವ ಕಂ ಶೇಷಂ ತತ್ರ ಮನ್ಯಸೇ ॥ ೨೮ ॥

ಮಹಾರಥರ ಮಧ್ಯದಲ್ಲಿ ಸೈಂಧವನೂ ಮತ್ತು ಭೂರಿಶ್ರವನು ಹತನಾದ ಮೇಲೆ ಏನು ಉಳಿಯುವುದೆಂದು ತಿಳಿದಿದ್ದೀಯೆ?

ಕೃಪ ಏವ ಚ ದುರ್ಧರ್ಷೋ ಯದಿ ಜೀವತಿ ಪಾರ್ಥಿವ ।
ಯೋ ನಾಗಾತ್ ಸಿಂಧುರಾಜಸ್ಯ ವರ್ತ್ಮ ತಂ ಪೂಜಯಾಮ್ಯಹಮ್ ॥

ಎಲೈ ರಾಜನೇ, ಇನ್ನೂ ಬದುಕಿದ್ದರೆ ಕೃಪರೊಬ್ಬರೇ ದುರ್ಧರ್ಷರಾದವರು. ಅವರು ಸೈಂಧವನ ಮಾರ್ಗವನ್ನು ಹಿಡಿದು ಹೋಗಲಿಲ್ಲ. ಅವರನ್ನು ನಾನು ಗೌರವಿಸುತ್ತೇನೆ.

ಯಚ್ಚಾಪಶ್ಯಂ ಹತಂ ಭೀಷ್ಮಂ ಪಶ್ಯತಸ್ತೇಽನುಜಸ್ಯ ವೈ ।
ದುಃಶಾಸನಸ್ಯ ಕೌರವ್ಯ ಕುರ್ವಾಣಂ ಕರ್ಮ ದುಷ್ಕರಮ್ ।
ಅವಧ್ಯಕಲ್ಪಂ ಸಂಗ್ರಾಮೇ ದೇವೈರಪಿ ಸವಾಸವೈಃ ॥ ೩೦ ॥

ನ ತೇ ವಸುಂಧರಾಸ್ತೀತಿ ತದಹಂ ಚಿಂತಯಂ ನೃಪ ।
ಇಮಾನಿ ಪಾಂಡವಾನಾಂ ಚ ಸೃಂಜಯಾನಾಂ ಚ ಭಾರತ ।
ಅನೀಕಾನ್ಯಾದ್ರವಂತೇ ಮಾಂ ಸಹಿತಾನ್ಯದ್ಯ ಮಾರಿಷ ॥ ೩೧ ॥

ದುಷ್ಕರವಾದ ಕರ್ಮವನ್ನು ಮಾಡುತ್ತಿದ್ದಂತಹ, ಯುದ್ಧದಲ್ಲಿ ಇಂದ್ರನಿಂದ ಸಹಿತರಾದ ದೇವತೆಗಳಿಂದಲೂ ಅವಧ್ಯ ಕಲ್ಪರಾಗಿದ್ದಂತಹ ಭೀಷ್ಮರು ನನ್ನ ನಿನ್ನ ಮತ್ತು ನಿನ್ನ ತಮ್ಮನಾದ ದುಶ್ಶಾಸನನ ಕಣ್ಣೆದುರಿಗೇ ಹತರಾದುದನ್ನು ನೋಡಿ ಎಲೈ ರಾಜನೇ, ನಾನು ಆಗಲೇ ನಿನಗೆ ಭೂಮಿಯ ಒಡೆತನವು ಇಲ್ಲವೆಂದು ಭಾವಿಸಿದೆನು. ಎಲೈ ಭಾರತನೇ, ಶ್ರೇಷ್ಠನೇ, ಪಾಂಡವರ ಮತ್ತು ಸೃಂಜಯರ ಈ ಸೈನ್ಯಗಳು ಒಂದುಗೂಡಿ ನನ್ನ ಮೇಲೆ ಎರಗುತ್ತಿವೆ.

ನಾಹತ್ವಾ ಸರ್ವಪಾಂಚಾಲಾನ್ ಕವಚಸ್ಯ ವಿಮೋಕ್ಷಣಮ್ ।
ಕರ್ತಾಸ್ಮಿ ಸಮರೇ ಕರ್ಮ ಧಾರ್ತರಾಷ್ಟ್ರ ಹಿತಂ ತವ ॥ ೩೨ ॥

ಎಲೈ ದುರ್ಯೋಧನನೇ, ಎಲ್ಲ ಪಾಂಚಾಲರನ್ನೂ ಕೊಲ್ಲದೆ ನಾನು ನನ್ನ ಕವಚವನ್ನು ಬಿಚ್ಚುವುದಿಲ್ಲ. ಯುದ್ಧದಲ್ಲಿ ನಿನಗೆ ಹಿತವಾದ ಇಂತಹ ಕರ್ಮವನ್ನು ಮಾಡುವೆನು.

ರಾಜನ್ ಬ್ರೂಯಾಃ ಸುತಂ ಮೇ ತ್ವಮಶ್ವತ್ಥಾಮಾನಮಾಹವೇ ।
ನ ಸೋಮಕಾಃ ಪ್ರಮೋಕ್ತವ್ಯಾ ಜೀವಿತಂ ಪರಿರಕ್ಷತಾ ॥ ೩೩ ॥

ಯಚ್ಚ ಪಿತ್ರಾನುಶಿಷ್ಟೋಽಪಿ ತದ್ವಚಃ ಪರಿಪಾಲಯ ।
ಆನೃಶಂಸ್ಯೇ ದಮೇ ಸತ್ಯೇ ಆರ್ಜವೇ ಚ ಸ್ಥಿರೋ ಭವ ॥ ೩೪ ॥

ಧರ್ಮಾರ್ಥಕಾಮಕುಶಲೋ ಧರ್ಮಾರ್ಥಾವಪ್ಯಪೀಡಯನ್ ।
ಧರ್ಮಪ್ರಧಾನಃ ಕಾರ್ಯಾಣಿ ಕುರ್ಯಾಶ್ಚೈತಿ ಪುನಃ ಪುನಃ ॥ ೩೫ ॥

ಚಕ್ಷುರ್ಮನೋಭ್ಯಾಂ ಸಂತೋಷ್ಯಾ ವಿಪ್ರಾಃ ಸೇವ್ಯಾಶ್ಚ ಶಕ್ತಿತಃ ।
ನ ಚೈಷಾಂ ವಿಪ್ರಿಯಂ ಕಾರ್ಯಂ ತೇ ಹಿ ವಹ್ನಿಶಿಖೋಪಮಾಃ ॥ ೩೬ ॥

ರಾಜನೇ, ಯುದ್ಧವನ್ನು ಮಾಡುತ್ತಿರುವ ನನ್ನ ಪುತ್ರನಾದ ಅಶ್ವತ್ಥಾಮರಿಗೆ ನಿನ್ನ ಜೀವನವನ್ನು ರಕ್ಷಿಸಿಕೊಳ್ಳಲು ಸೋಮಕರನ್ನು ಉಳಿಸಬಾರದು. ತಂದೆಯು ಹೇಳಿದ ಆದೇಶದಂತೆ ನಡೆದುಕೊಳ್ಳುವವನಾಗು. ದಯೆ, ಇಂದ್ರಿಯನಿಗ್ರಹ, ಸತ್ಯ ಮತ್ತು ಆರ್ಜವಗಳಲ್ಲಿ ಸ್ಥಿರವಾಗಿ ನಿಲ್ಲು. ಧರ್ಮಾರ್ಥಕಾಮ ಕುಶಲನಾದ ನೀನು ಧರ್ಮಾರ್ಥಗಳನ್ನು ಹಿಂಸಿಸದೆ ಧರ್ಮಪ್ರಧಾನನಾಗಿ ಕಾರ್ಯಗಳನ್ನು ಮಾಡು ಎಂದು ಪುನಃ ಪುನಃ ಹೇಳು. ಬ್ರಾಹ್ಮಣರನ್ನು ಕಣ್ಣುಗಳಿಂದಲೂ, ಮನಸ್ಸಿನಿಂದಲೂ ಸಂತೋಷಪಡಿಸಬೇಕು. ಶಕ್ತಿ ಇದ್ದಷ್ಟು ಅವರ ಸೇವೆಯನ್ನು ಮಾಡಬೇಕು. ಅವರಿಗೆ ಯಾವ ಅಹಿತವನ್ನೂ ಮಾಡಬಾರದು. ಅವರು ಅಗ್ನಿಶಿಖೆಯಿದ್ದಂತೆ ಎಂದೂ ಹೇಳು (ಎಂದು ಹೇಳಿದರು).

ಏಷ ತ್ವಹಮನೀಕಾನಿ ಪ್ರವಿಶಾಮ್ಯರಿಸೂದನ ।
ರಣಾಯ ಮಹತೇ ರಾಜಂಸ್ತ್ವಯಾ ವಾಕ್ಯಲ್ಯಪೀಡಿತಃ ॥ ೩೭ ॥

ಎಲೈ ರಾಜನೇ, ಶತ್ರುಸೂದನನೇ, ನಿನ್ನ ವಾಗ್ಬಾಣಗಳಿಂದ ಪೀಡಿತನಾದ ನಾನು ಯುದ್ಧಕ್ಕಾಗಿ ಪಾಂಡವ ಸೈನ್ಯಗಳನ್ನು ಪ್ರವೇಶಿಸುತ್ತಿದ್ದೇನೆ.

ತ್ವಂ ಚ ದುರ್ಯೋಧನ ಬಲಂ ಯದಿ ಶಕ್ನೋಷಿ ಧಾರಯ ।
ರಾತ್ರಾವಪಿ ಹಿ ಯೋತ್ಸ್ಯಂತೇ ಸಂರಬ್ಧಾ ಕುರುಸೃಂಜಯಾಃ ॥ ೩೮ ॥

ಎಲೈ ದುರ್ಯೋಧನನೇ, ನಿನಗೆ ಸಾಮರ್ಥ್ಯವಿದ್ದರೆ ನಿನ್ನ ಸೈನ್ಯವನ್ನು ಹಿಡಿದು ನಿಲ್ಲು. ಕೋಪಗೊಂಡ ಕುರು-ಸೃಂಜಯರು ರಾತ್ರಿಯಲ್ಲಿಯೂ ಯುದ್ಧವನ್ನು ಮಾಡುವರು.

ಏವಮುಕ್ತ್ವಾ ತತಃ ಪ್ರಾಯಾದ್ ದ್ರೋಣಃ ಪಾಂಡವಸೃಂಜಯಾನ್ ।
ಮುಷ್ಣನ್ ಕ್ಷತ್ರಿಯತೇಜಾಂಸಿ ನಕ್ಷತ್ರಾಣಾಮಿವಾಂಶುಮಾನ್ ॥ ೩೯ ॥

ಹೀಗೆ ಹೇಳಿ ದ್ರೋಣರು ನಕ್ಷತ್ರಗಳ ತೇಜಸ್ಸನ್ನು ಸೂರ್ಯನು ಸೆಳೆಯುವಂತೆ ಕ್ಷತ್ರಿಯರ ತೇಜಸ್ಸನ್ನು ಅಪಹರಿಸುತ್ತಾ ಪಾಂಡವ-ಸೃಂಜಯರ ಕಡೆಗೆ ಧಾವಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತತ್ರಿಂಶದಧಿಕಶತತಮೋಧ್ಯಾಯಃ ॥

॥ ಜಯದ್ರಥವಧಪರ್ವಣಿ ಪಂಚಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೆಂಟನೆಯ ಅಧ್ಯಾಯ

ಜಯದ್ರಥನ ವಧೆಗಾಗಿ ದ್ರೋಣರನ್ನು ನಿಂದಿಸುವ ದುರ್ಯೋಧನನನ್ನು ನಿರಾಕರಿಸಿ ಕರ್ಣನಿಂದ ದೈವಹೇತುತ್ವ ಸಮರ್ಥನೆ.

ಸಂಜಯಃ

ತತೋ ದುರ್ಯೋಧನೋ ರಾಜಾ ದ್ರೋಣೇನೈವಂ ಪ್ರಚೋದಿತಃ ।
ಅಮರ್ಷವಶಮಾಪನ್ನೋ ಯುದ್ಧಾಯೈವ ಮನೋ ದಧೇ ॥ ೧ ॥

ದ್ರೋಣರಿಂದ ಹೀಗೆ ಪ್ರೇರಿಸಲ್ಪಟ್ಟ ರಾಜನಾದ ದುರ್ಯೋಧನನು ಆಗ ರೋಷವಶನಾಗಿ ಯುದ್ಧವನ್ನು ಮಾಡಲು ನಿರ್ಧರಿಸಿದನು.

ಅಬ್ರವೀಚ್ಚ ತದಾ ಕರ್ಣಂ ಪುತ್ರೋ ದುರ್ಯೋಧನಸ್ತವ ।
ಪಶ್ಯ ಕೃಷ್ಣಸಹಾಯೇನ ಪಾಂಡವೇನ ಕಿರೀಟಿನಾ ।
ಆಚಾರ್ಯವಿಹಿತಂ ವ್ಯೂಹಂ ಭಿನ್ನಂ ದೇವೈಃ ಸುದುರ್ಭಿದಮ್ ॥ ೨ ॥

ತವ ವ್ಯಾಯಚ್ಛಮಾನಸ್ಯ ದ್ರೋಣಸ್ಯ ಚ ಮಹಾತ್ಮನಃ ।
ಮಿಷತಾಂ ಯೋಧಮುಖ್ಯಾನಾಂ ಸೈಂಧವೋ ವಿನಿಪಾತಿತಃ ॥ ೩ ॥

ನಿನ್ನ ಪುತ್ರನಾದ ದುರ್ಯೋಧನನು ಆಗ ಕರ್ಣನನ್ನು ಕುರಿತು- ನೋಡು, ಕೃಷ್ಣನ ಸಹಾಯವುಳ್ಳ ಅರ್ಜುನನು ದೇವತೆಗಳೂ ಭೇದಿಸಲು ಸಾಧ್ಯವಿಲ್ಲದ ದ್ರೋಣರು ರಚಿಸಿದ ವ್ಯೂಹವನ್ನು ಭೇದಿಸಿದನು. ನೀನೂ ಮತ್ತು ಮಹಾತ್ಮರಾದ ದ್ರೋಣರೂ ಯುದ್ಧದಲ್ಲಿ ಉದ್ಯುಕ್ತರಾಗಿದ್ದರೂ ನಿಮ್ಮ ಮತ್ತು ಶ್ರೇಷ್ಠ ಯೋಧರ ಕಣ್ಣೆದುರಿಗೇ ಸೈಂಧವನು ಹತನಾದನು.

ಪಶ್ಯ ರಾಧೇಯ ರಾಜಾನಃ ಪೃಥಿವ್ಯಾಂ ಪ್ರವರಾ ಯುಧಿ ।
ಪಾರ್ಥೇನೈಕೇನ ನಿಹತಾಃ ಸಿಂಹೇನೇವೇತರಾ ಮೃಗಾಃ ॥ ೪ ॥

ಎಲೈ ಕರ್ಣನೇ, ಪೃಥಿವಿಯಲ್ಲಿ ಶ್ರೇಷ್ಠರಾದ ರಾಜರು ಸಿಂಹದಿಂದ ಜಿಂಕೆಗಳು ಹತವಾದಂತೆ ಒಬ್ಬ ಅರ್ಜುನನಿಂದ ಹತರಾಗುತ್ತಿರುವುದನ್ನು ನೋಡು.

ಮಮ ವ್ಯಾಯಚ್ಛಮಾನಸ್ಯ ಸಮರೇ ಶತ್ರುಸೂದನ ।
ಅಲ್ಪಾವಶೇಷಂ ಸೈನ್ಯಂ ಮೇ ಕೃತಂ ಶಕ್ರಾತ್ಮಜೇನ ಹ ॥ ೫ ॥

ಎಲೈ ಶತ್ರುಸೂದನನೇ, ಯುದ್ಧದಲ್ಲಿ ನಾನು ಪೂರ್ಣವಾಗಿ ತೊಡಗಿದ್ದರೂ ಇಂದ್ರಪುತ್ರನಾದ ಅರ್ಜುನನು ನನ್ನ ಸೈನ್ಯದಲ್ಲಿ ಸ್ವಲ್ಪವೇ ಶೇಷವು ಉಳಿಯುವಂತೆ ಮಾಡಿದ್ದಾನೆ.

ಕಥಂ ಹ್ಯನಿಚ್ಛಮಾನಸ್ಯ ದ್ರೋಣಸ್ಯ ಯುಧಿ ಫಲ್ಗುನಃ ।
ಭಿಂದ್ಯಾತ್ ಸುದುರ್ಭಿದಂ ವ್ಯೂಹಂ ಯತಮಾನೋಽಪಿ ಸಂಯುಗೇ ॥

ದ್ರೋಣರ ಸಮ್ಮತಿ ಇಲ್ಲದಿದ್ದರೆ ಅರ್ಜುನನು ರಣರಂಗದಲ್ಲಿ ಪ್ರಯತ್ನಪಟ್ಟರೂ ಅತ್ಯಂತ ದುರ್ಭೇದ್ಯವಾದ ವ್ಯೂಹವನ್ನು ಹೇಗೆ ಭೇದಿಸಿಯಾನು?

ಪ್ರಿಯೋ ಹಿ ಫಲ್ಗುನೋ ನಿತ್ಯಮಾಚಾರ್ಯಸ್ಯ ಮಹಾತ್ಮನಃ ।
ತತೋಽಸ್ಯ ದತ್ತವಾನ್ ದ್ವಾರಂ ನಯುದ್ಧೇನಾರಿಮರ್ದನ ॥ ೭ ॥

ಎಲೈ ಅರಿಮರ್ದನನೇ, ಮಹಾತ್ಮರಾದ ಆಚಾರ್ಯರಿಗೆ ಅರ್ಜುನನು ಯಾವಾಗಲೂ ಪ್ರಿಯನಾದವನು. ಆ ಕಾರಣದಿಂದ ಅವನಿಗೆ ಯುದ್ಧವಿಲ್ಲದೆಯೇ ಅವರೊಂದು ಪ್ರವೇಶ ದ್ವಾರವನ್ನು ಕಲ್ಪಿಸಿಕೊಟ್ಟರು.

ಅಭಯಂ ಸೈಂಧವಸ್ಯಾಜೌ ದತ್ತ್ವಾ ದ್ರೋಣಃ ಪರಂತಪಃ ।
ಪ್ರಾದಾತ್ ಕಿರೀಟಿನೇ ದ್ವಾರಂ ಪಶ್ಯನ್ ನಿರ್ಗುಣತಾಂ ಮಮ ॥ ೮ ॥

ಪರಂತಪರಾದ ದ್ರೋಣರು ಯುದ್ಧದಲ್ಲಿ ಸೈಂಧವನಿಗೆ ಅಭಯವನ್ನು ಕೊಟ್ಟು ನನ್ನ ನಿರ್ಗುಣತ್ವವನ್ನು ನೋಡಿ ಅರ್ಜುನನಿಗೆ ದಾರಿಯನ್ನು ಮಾಡಿಕೊಟ್ಟರು.

ಯದ್ಯದಾಸ್ಯಮನುಜ್ಞಾಂ ವೈ ಪೂರ್ವಮೇವ ಗೃಹಾನ್ ಪ್ರತಿ ।
ಸಿಂಧುರಾಜಸ್ಯ ಸಮರೇ ನಾಭವಿಷ್ಯಜ್ಜನಕ್ಷಯಃ ॥ ೯ ॥

ನಾನು ಸೈಂಧವನಿಗೆ ಮೊದಲೇ ಮನೆಗೆ ಹೋಗಲು ಅನುಮತಿಯನ್ನು ನೀಡಿದ್ದರೆ ಯುದ್ಧದಲ್ಲಿ ಇಂತಹ ಜನಕ್ಷಯವು ಆಗುತ್ತಿರಲಿಲ್ಲ.

ಜಯದ್ರಥೋ ಜೀವಿತಾರ್ಥೀ ಗಚ್ಛಮಾನೋ ಗೃಹಾನ್ ಪ್ರತಿ ।
ಮಯಾನಾರ್ಯೇಣ ಸಂರುದ್ಧೋ ದ್ರೋಣಾತ್ ಪ್ರಾಪ್ಯಾಭಯಂ ರಣೇ॥

ಅದ್ಯ ಮೇ ಭ್ರಾತರಃ ಕ್ಷೀಣಾಶ್ಚಿತ್ರಸೇನಾದಯೋ ಯುಧಿ ।
ಭೀಮಸೇನಂ ಸಮಾಸಾದ್ಯ ಪಶ್ಯತಾಂ ನೋ ದುರಾತ್ಮನಾಮ್ ॥ ೧೧ ॥

ಬದುಕಲು ಬಯಸಿ ಮನೆಗೆ ಹೊರಟಿದ್ದ ಜಯದ್ರಥನನ್ನು ದ್ರೋಣರಿಂದ ಅಭಯವನ್ನು ಪಡೆದು ಅನಾರ್ಯನಾದ ನಾನು ತಡೆದೆನು. ಈ ದಿನ ದುರಾತ್ಮರಾದ ನಾವು ನೋಡುತ್ತಿರುವಂತೆಯೇ ನಮ್ಮ ತಮ್ಮಂದಿರಾದ ಚಿತ್ರಸೇನ ಮೊದಲಾದವರು ಯುದ್ಧದಲ್ಲಿ ಭೀಮಸೇನನನ್ನು ಸಮೀಪಿಸಿ ನಾಶವನ್ನು ಹೊಂದಿದ್ದಾರೆ.

ಕರ್ಣಃ

ಆಚಾರ್ಯಂ ಮಾ ವಿಗರ್ಹಸ್ವ ಶಕ್ತಾ ಯುದ್ಧ್ಯತ್ಯಸೌ ದ್ವಿಜಃ ।
ಅಜಯ್ಯಾನ್ ಪಾಂಡವಾನ್ ಮನ್ಯೇ ದ್ರೋಣೇನಾಸ್ತ್ರವಿದಾ ಮೃಧೇ ॥

ಕರ್ಣ– ಆಚಾರ್ಯರನ್ನು ನಿಂದಿಸಬೇಡ. ಆ ಬ್ರಾಹ್ಮಣರು ಶಕ್ತಿ ಇದ್ದಷ್ಟು ಯುದ್ಧವನ್ನು ಮಾಡುತ್ತಿದ್ದಾರೆ. ಪಾಂಡವರು ಅಸ್ತ್ರಜ್ಞರಾದ ದ್ರೋಣರಿಂದ ಯುದ್ಧದಲ್ಲಿ ಜಯಿಸಲು ಅಸಾಧ್ಯರಾದವರು ಎಂದು ಭಾವಿಸುತ್ತೇನೆ.

ತಥಾ ಹ್ಯೇನಮತಿಕ್ರಮ್ಯ ಪ್ರವಿಷ್ಟಃ ಶ್ವೇತವಾಹನಃ ।
ದೈವದ್ಯಹ್ಯೋಽನ್ಯಥಾಭಾವೋ ನ ಮನ್ಯೇ ವಿದ್ಯತೇ ಕ್ವಚಿತ್ ॥ ೧೩ ॥

ಆ ರೀತಿಯಲ್ಲಿ ಶ್ವೇತವಾಹನನಾದ ಅರ್ಜುನನು ದ್ರೋಣರನ್ನೂ ದಾಟಿ ನಮ್ಮ ಸೈನ್ಯವನ್ನು ಪ್ರವೇಶಿಸಿದನು. ದೈವ ನಿಯತಿಗೆ ಎಂದೂ ವ್ಯತ್ಯಾಸವಿಲ್ಲವೆಂದು ನಾನು ಭಾವಿಸುತ್ತೇನೆ.

ತತೋ ನೋ ಯುದ್ಧ್ಯಮಾನಾನಾಂ ಪರಂ ಶಕ್ಯಾ ಸುಯೋಧನ ।
ಸೈಂಧವೋ ನಿಹತೋ ರಾಜನ್ ದೈವಮತ್ರ ಪರಂ ಸ್ಮೃತಮ್ ॥ ೧೪ ॥

ಎಲೈ ಸುಯೋಧನನೇ, ರಾಜನೇ, ಆ ಕಾರಣದಿಂದ ನಾವು ನಮ್ಮ ಪೂರ್ಣಶಕ್ತಿಯಿಂದ ಯುದ್ಧವನ್ನು ಮಾಡುತ್ತಿದ್ದರೂ ಸೈಂಧವನು ಹತನಾದನು. ಈ ವಿಷಯದಲ್ಲಿ ದೈವವೇ ಶ್ರೇಷ್ಠವೆಂದು ಹೇಳುತ್ತಾರೆ.

ಪರಂ ಯತ್ನಂ ಕುರ್ವತಾಂ ಚ ತ್ವಯಾ ಸಾರ್ಧಂ ರಣಾಜಿರೇ ।
ಹತ್ವಾಸ್ಮಾಕಂ ಪೌರುಷಂ ಹಿ ದೈವಂ ಪಶ್ಚಾತ್ಕರೋತಿ ನಃ ।
ಸತತಂ ಚೇಷ್ಟಮಾನಾನಾಂ ನಿಕೃತ್ಯಾ ವಿಕ್ರಮೇಣ ಚ ॥ ೧೫ ॥

ರಣರಂಗದಲ್ಲಿ ನಿನ್ನ ಜೊತೆಯಲ್ಲಿ ಬಹಳ ಪ್ರಯತ್ನವನ್ನು ಮಾಡುತ್ತಾ ಮೋಸದಿಂದಲೂ, ಪರಾಕ್ರಮದಿಂದಲೂ ಕ್ರಿಯೆಗಳನ್ನು ಮಾಡುತ್ತಿರುವ ನಮ್ಮ ಪರಾಕ್ರಮವನ್ನು ನಾಶಗೊಳಿಸಿ ದೈವವು ನಮ್ಮನ್ನು ಹಿಂದಕ್ಕೆ ತಳ್ಳುತ್ತಿದೆ.

ದೈವೋಪಸೃಷ್ಟಃ ಪುರುಷೋ ಯತ್ ಕರ್ಮ ಕುರುತೇ ಕ್ವಚಿತ್ ।
ಕೃತಂ ಕೃತಂ ಸ್ಮ ತತ್ ತಸ್ಯ ದೈವೇನ ವಿನಿಹನ್ಯತೇ ॥ ೧೬ ॥

ದೈವ ಹತನಾದ ಪುರುಷನು ಯಾವ ಯಾವ ಕರ್ಮವನ್ನು ಮಾಡುತ್ತಾನೆಯೋ ಅವೆಲ್ಲವೂ ದೈವದಿಂದ ನಾಶಗೊಳಿಸಲ್ಪಡುತ್ತದೆ.

ಯತ್ ಕರ್ತವ್ಯಂ ಮನುಷ್ಯೇಣ ವ್ಯವಸಾಯವತಾ ಸತಾ ।
ತತ್ಕಾರ್ಯಮವಿಶಂಕೇನ ವಿದ್ವಿರ್ದೈವೇ ಪ್ರತಿಷ್ಠಿತಾ ॥ ೧೭ ॥

ಸಜ್ಜನನಾದ ಪುರುಷನು ಒಳ್ಳೆಯ ನಿರ್ಧಾರದಿಂದ ಏನು ಮಾಡಬೇಕೋ ಅದನ್ನು ನಿಶ್ಶಂಕೆಯಿಂದ ಮಾಡಬೇಕು. ಆ ಕಾರ್ಯದ ಸಿದ್ಧಿಯು ದೈವವನ್ನು ಅವಲಂಬಿಸಿದೆ.

ನಿಕೃತ್ಯಾ ನಿಕೃತಾಃ ಪಾರ್ಥಾ ವಿಷಯೋಗೈಶ್ಚ ಭಾರತ ।
ದಗ್ಧಾ ಜತುಗೃಹೇ ಚಾಪಿ ದ್ಯೂತೇನ ಚ ಪರಾಜಿತಾಃ ॥ ೧೮ ॥

ಎಲೈ ಭಾರತನೇ, ಪಾಂಡವರು ಅನೇಕ ಮೋಸಗಳಿಂದ ವಂಚಿಸಲ್ಪಟ್ಟಿದ್ದಾರೆ. ವಿಷಪ್ರಯೋಗದಿಂದಲೂ, ಜತುಗೃಹ ದಾಹದಿಂದಲೂ, ಮತ್ತು ದ್ಯೂತದ ಪರಾಜಯದಿಂದಲೂ (ಅವರು ವಂಚಿಸಲ್ಪಟ್ಟಿದ್ದಾರೆ).

ರಾಜನೀತಿಂ ವ್ಯಪಾಶ್ರಿತ್ಯ ಪ್ರಹಿತಾಶ್ಚೈವ ಕಾನನಮ್ ।
ಯತ್ನೇನ ಚ ಕೃತಂ ಯತ್ ತೇ ದೈವೇನ ವಿನಿಪಾತಿತಮ್ ॥ ೧೯ ॥

ರಾಜನೀತಿಯನ್ನು ಆಶ್ರಯಿಸಿ ನೀನು ಅವರನ್ನು ಅರಣ್ಯಕ್ಕೆ ಕಳುಹಿಸಿದೆ. ನೀನು ಪ್ರಯತ್ನಪೂರ್ವಕವಾಗಿ ಮಾಡಿದ್ದೆಲ್ಲವನ್ನೂ ದೈವವು ಭಗ್ನಗೊಳಿಸುತ್ತಿದೆ.

ಯುದ್ಧ್ಯಸ್ವ ಯತ್ನಮಾಸ್ಥಾಯ ಮೃತ್ಯುಂ ಕೃತ್ವಾ ನಿವರ್ತನಮ್ ।
ಯತತಸ್ತವ ತೇಷಾಂ ಚ ದೈವಂ ಮಾರ್ಗೇಣ ಯಾಸ್ಯತಿ ॥ ೨೦ ॥

ಮೃತ್ಯುವನ್ನು ಹಿಂದಕ್ಕೆ ತಳ್ಳಿ (ಮೃತ್ಯುಭಯವನ್ನು ಬಿಟ್ಟು) ಪ್ರಯತ್ನಪೂರ್ವಕವಾಗಿ ಯುದ್ಧವನ್ನು ಮಾಡು. ನೀನು ಮತ್ತು ಅವರು ಪ್ರಯತ್ನಪೂರ್ವಕವಾಗಿ ಯುದ್ಧವನ್ನು ಮಾಡಿದರೆ ದೈವವು ತನ್ನ ಮಾರ್ಗದಲ್ಲಿ ಸಾಗುವುದು.

ನ ತೇಷಾಂ ಮತಿಪೂರ್ವಂ ಹಿ ಸುಕೃತಂ ದೃಶ್ಯತೇ ಕ್ವಚಿತ್ ।
ದುಷ್ಕೃತಂ ತವ ವಾ ವೀರ ಬುದ್ಧ್ಯಾ ಹೀನಂ ಕುರೂದ್ವಹ ॥ ೨೧ ॥

ಎಲೈ ಕುರೂದ್ವಹನೇ, ನೀನು ಪಾಂಡವರಿಗೆ ಬುದ್ಧಿಪೂರ್ವಕವಾಗಿ ಯಾವ ಒಳ್ಳೆಯ ಕಾರ್ಯವನ್ನೂ ಮಾಡಿರುವುದು ಕಂಡುಬರುವುದಿಲ್ಲ. ಎಲೈ ವೀರನೇ, ಬುದ್ಧಿಯಿಲ್ಲದೆ ಮಾಡಿದ ಯಾವ ದುಷ್ಕರ್ಮವೂ ಕಂಡುಬರುವುದಿಲ್ಲ (ಎಲ್ಲ ದುಷ್ಕರ್ಮಗಳನ್ನೂ ಬುದ್ಧಿಪೂರ್ವಕವಾಗಿಯೇ ಮಾಡಿದ್ದೀಯೆ).

ದೈವಂ ಪ್ರಮಾಣಂ ಸರ್ವಸ್ಯ ಸುಕೃತಸ್ಯೇತರಸ್ಯ ವಾ ।
ಅನನ್ಯಕರ್ಮ ದೈವಂ ಹಿ ಜಾಗರ್ತಿ ಸ್ವಪತಾಮಪಿ ॥ ೨೨ ॥

ಸುಕೃತ-ದುಷ್ಕೃತಗಳೆಲ್ಲದಕ್ಕೂ ದೈವವೇ ಪ್ರಮಾಣ. ದೈವಕ್ಕೆ ಅವರ ಕರ್ಮಗಳಿಗೆ ಅನುಸಾರವಾಗಿ ಫಲವನ್ನು ಕೊಡುವುದನ್ನು ಬಿಟ್ಟು ಬೇರೆ ಕಾರ್ಯವಿಲ್ಲ. ನಾವು ಮಲಗಿದ್ದರೂ ದೈವವು ಎಚ್ಚರಿಕೆಯಿಂದ ಇರುತ್ತದೆ.

ಬಹೂನಿ ತವ ಸೈನ್ಯಾನಿ ಯೋಧಾಶ್ಚ ಬಹವಸ್ತಥಾ ।
ನ ತಥಾ ಪಾಂಡುಪುತ್ರಾಣಾಮೇವಂ ಯುದ್ಧಮವರ್ತತ ॥ ೨೩ ॥

ನಿನ್ನ ಸೈನ್ಯಗಳು ಮತ್ತು ಯೋಧರು ಬಹುಸಂಖ್ಯಾತರಾದವರು, ಪಾಂಡವರ ಸೈನ್ಯವು ಹಾಗಲ್ಲ. ಹೀಗೆ ಯುದ್ಧವು ಪ್ರಾರಂಭವಾಯಿತು.

ತೈರಲ್ಪೈರ್ಬಹವೋ ಯೂಯಂ ಕ್ಷಯಂ ನೀತಾಃ ಪ್ರಹಾರಿಣಃ ।
ಶಂಕೇ ದೈವಸ್ಯ ತತ್ಕರ್ಮ ಪೌರುಷಂ ಯೇನ ನಾಶಿತಮ್ ॥ ೨೪ ॥

ಅಲ್ಪಸಂಖ್ಯೆಯುಳ್ಳ ಅವರಿಂದ ಬಹುಸಂಖ್ಯೆಯುಳ್ಳವರೂ ಯುದ್ಧದಲ್ಲಿ ಪ್ರಹಾರಶೀಲರೂ ಆದ ನೀವು ವಿನಾಶವನ್ನು ಹೊಂದಿದಿರಿ. ನಿಮ್ಮ ಪುರುಷಪ್ರಯತ್ನವನ್ನು ನಾಶಮಾಡಿದುದು ದೈವದ ಕಾರ್ಯವೆಂದು ತಿಳಿಯುತ್ತೇನೆ.

ಸಂಜಯಃ

ಏವಂ ಸಂಭಾಷಮಾಣಾನಾಂ ಬಹು ತತ್ತದ್ಬಲಾಧಿಪ ।
ಪಾಂಡವಾನಾಮನೀಕಾನಿ ಸಮದೃಶ್ಯಂತ ಸಂಯುಗೇ ॥ ೨೫ ॥

ಸಂಜಯ– ಎಲೈ ರಾಜನೇ, ಹೀಗೆ ಬೇರೆ ಬೇರೆ ವಿಷಯಗಳನ್ನು ಬಹಳವಾಗಿ ಮಾತನಾಡುತ್ತಿರಲು ರಣರಂಗದಲ್ಲಿ ಪಾಂಡವರ ಸೈನ್ಯಗಳು ಕಾಣಿಸಿಕೊಂಡವು.

ತತಃ ಪ್ರವವೃತೇ ಯುದ್ಧಂ ವ್ಯತಿಷಕ್ತರಥದ್ವಿಪಮ್ ।
ತಾವಕಾನಾಂ ಪರೈಃ ಸಾರ್ಧಂ ರಾಜನ್ ದುರ್ಮಂತ್ರಿತೇ ತವ ॥ ೨೬ ॥

ಎಲೈ ರಾಜನೇ, ಆಗ ನಿನ್ನ ಮತ್ತು ಆವರ ರಥ-ಗಜಗಳು ಮಿಶ್ರಿತವಾಗಿ ನಿನ್ನ ದುರ್ನೀತಿಯ ಫಲವಾಗಿ ಯುದ್ಧವು ಪ್ರವೃತ್ತವಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟತ್ರಿಂಶದಧಿಕಶತತಮೋಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಷಷ್ಠೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೊಂಬತ್ತನೆಯ ಅಧ್ಯಾಯ

ರಾತ್ರಿಯುದ್ಧದಲ್ಲಿ ದುರ್ಯೋಧನನಿಂದ ಯುಧಿಷ್ಠಿರಪರಾಜಯ.

ಸಂಜಯಃ

ತದುದೀರ್ಣಗಜಾಶ್ವಿಷ್ಟಂ ಬಲಂ ತವ ಜನಾಧಿಪ ।
ಪಾಂಡುಸೇನಾಮಭಿದ್ರುತ್ಯ ಯೋಧಯಾಮಾಸ ಸರ್ವತಃ ॥ ೧ ॥

ಸಂಜಯ– ಎಲೈ ರಾಜನೇ, ಶ್ರೇಷ್ಠವಾದ ಗಜಾಶ್ವ ಸಮೂಹಗಳಿಂದ ಕೂಡಿದ ನಿನ್ನ ಸೈನ್ಯವು ಪಾಂಡವಸೇನೆಗೆ ಅಭಿಮುಖವಾಗಿ ಹೋಗಿ, ಎಲ್ಲ ಕಡೆಗಳಲ್ಲಿಯೂ ಯುದ್ಧವನ್ನು ಮಾಡಿತು.

ಪಾಂಚಾಲಾಃ ಕುರವಶ್ಚೈವ ಯೋಧಯಂತಃ ಪರಸ್ಪರಮ್ ।
ಯಮರಾಷ್ಟ್ರಾಯ ಮಹತೇ ಪರಲೋಕಾಯ ದೀಕ್ಷಿತಾಃ ॥ ೨ ॥

ಪಾಂಚಾಲರೂ ಮತ್ತು ಕೌರವರೂ ಪರಸ್ಪರವಾಗಿ ಯುದ್ಧವನ್ನು ಮಾಡುತ್ತಾ ಯಮಲೋಕಕ್ಕೂ ಮತ್ತು ಶ್ರೇಷ್ಠವಾದ ಪರಲೋಕಕ್ಕೂ ಹೋಗಲು ದೀಕ್ಷಿತರಾದರು.

ಶೂರಾಃ ಶೂರೈಃ ಸಮಾಗಮ್ಯ ಶರತೋಮರಶಕ್ತಿಭಿಃ ।
ವಿವ್ಯಧುಃ ಸಮರೇ ತೂರ್ಣಂ ನಿನ್ಯುಶ್ಚೈವ ಯಮಕ್ಷಯಮ್ ॥ ೩ ॥

ಶೂರರು ಶೂರರ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ಶರ-ತೋಮರ-ಶಕ್ತಿಗಳಿಂದ ರಣರಂಗದಲ್ಲಿ ಪರಸ್ಪರವಾಗಿ ಹೊಡೆದು ಶೀಘ್ರವಾಗಿ ಯಮಲೋಕಕ್ಕೆ ಕಳುಹಿಸಿದರು.

ರಥಿನಾಂ ರಥಿಭಿಃ ಸಾರ್ಧಂ ರುಧಿರಸ್ರಾವಿ ದಾರುಣಮ್ ।
ಪ್ರಾವರ್ತತ ಮಹದ್ಯುದ್ಧಂ ನಿಘ್ನತಾಮಿತರೇತರಮ್ ॥ ೪ ॥

ವಾರಣಾಶ್ಚ ಮಹಾರಾಜ ಸಮಾಸಾದ್ಯ ಪರಸ್ಪರಮ್ ।
ವಿಷಾಣೈರ್ದಾರಯಾಮಾಸುಃ ಸಂಕ್ರುದ್ಧಾಶ್ಚ ಮದೋತ್ಕಟಾಃ ॥ ೫ ॥

ರಥಿಗಳು ರಥಿಗಳ ಜೊತೆಯಲ್ಲಿ ಪರಸ್ಪರವಾಗಿ ಹೊಡೆದಾಡುವಾಗ ರಕ್ತಸ್ರಾವಿಯಾದ ಘೋರವಾದ ಯುದ್ಧವು ನಡೆಯಿತು. ಎಲೈ ಮಹಾರಾಜನೇ, ಮದೋತ್ಕಟವಾದ ಮತ್ತು ಕೋಪಗೊಂಡ ಗಜಗಳು ಪರಸ್ಪರವಾಗಿ ಸಂಧಿಸಿ ತಮ್ಮ ದಂತಗಳಿಂದ ಪರಸ್ಪರವಾಗಿ ಸೀಳಿಹಾಕಿದವು.

ಹಯಾರೋಹಾನ್ ಹಯಾರೋಹಾಃ ಪ್ರಾಸಶಕ್ತಿಪರಶ್ವಧೈಃ ।
ಬಿಭಿದುಸ್ತುಮುಲೇ ಯುದ್ಧೇ ಪ್ರಾರ್ಥಯಂತೋ ಮಹದ್ಯಶಃ ॥ ೬ ॥

ಅಶ್ವಾರೋಹಿಗಳು ತೀವ್ರವಾದ ಯುದ್ಧದಲ್ಲಿ ದೊಡ್ಡ ಕೀರ್ತಿಯನ್ನು ಸಂಪಾದಿಸಲು ಬಯಸಿ ಪ್ರಾಸ-ಶಕ್ತಿ-ಪರಶ್ವಧಗಳಿಂದ ಅಶ್ವಾರೋಹಿಗಳನ್ನು ಗಾಯಗೊಳಿಸಿದರು.

ಪತ್ತಯಶ್ಚ ಮಹಾಬಾಹೋ ಶತಶಃ ಶಸ್ತ್ರಪಾಣಯಃ ।
ಅನ್ಯೋನ್ಯಮಾರ್ದಯನ್ ರಾಜನ್ನಿತ್ಯಯತ್ತಾಃ ಪರಾಕ್ರಮೇ ॥ ೭ ॥

ಎಲೈ ರಾಜನೇ, ಮಹಾಬಾಹುವೇ, ನಿತ್ಯವೂ ಪರಾಕ್ರಮದಲ್ಲಿ ಪ್ರಯತ್ನಪಡುವ ಪದಾತಿಗಳು ಶಸ್ತ್ರಗಳನ್ನು ಹಿಡಿದು ನೂರಾರು ಸಂಖ್ಯೆಯಲ್ಲಿ ಪರಸ್ಪರವಾಗಿ ಹಿಂಸಿಸಿದರು.

ಗೋತ್ರಾಣಾಂ ನಾಮಧೇಯಾನಾಂ ಕುಲಾನಾಂ ಚೈವ ಮಾರಿಷ ।
ಶ್ರವಣಾದ್ಧಿ ವಿಜಾನೀಮಃ ಪಾಂಚಾಲಾನ್ ಕುರುಭಿಃ ಸಹ ॥ ೮ ॥

ಎಲೈ ಪೂಜ್ಯನೇ, ಗೋತ್ರಗಳನ್ನೂ, ನಾಮಧೇಯಗಳನ್ನೂ ಮತ್ತು ಕುಲಗಳನ್ನೂ ಉಚ್ಚಾರ ಮಾಡುತ್ತಿದ್ದುದರಿಂದ ಪಾಂಚಾಲರನ್ನೂ ಕೌರವರನ್ನೂ ತಿಳಿಯುತ್ತಿದ್ದೆವು.

ಅನ್ಯೋನ್ಯಂ ಸಮರೇ ಯೋಧಾಃ ಶರಶಕ್ತಿಪರಶ್ವಧೈಃ ।
ಪ್ರೇಷಯನ್ ಪರಲೋಕಾಯ ವಿಚರಂತೋ ಹ್ಯಭೀತವತ್ ॥ ೯ ॥

ಯೋಧರು ರಣರಂಗದಲ್ಲಿ ನಿರ್ಭಯವಾಗಿ ಸಂಚರಿಸುತ್ತಾ ಪರಸ್ಪರವಾಗಿ ಶರ-ಶಕ್ತಿ-ಪರಶುಗಳಿಂದ ಹೊಡೆದು ಪರಲೋಕಕ್ಕೆ ಕಳುಹಿಸಿದರು.

ಶರೈರ್ದಶ ದಿಶೋ ರಾಜಂಸ್ತೇಷಾಂ ಮುಕ್ತೈಃ ಸಹಸ್ರಶಃ ।
ನ ಭ್ರಾಜಂತ ಯಥಾಪೂರ್ವಂ ಭಾಸ್ಕರೇಽಸ್ತಂ ಗತೇಽಪಿ ಚ ॥ ೧೦ ॥

ಎಲೈ ರಾಜನೇ, ಅವರು ಸಹಸ್ರ ಸಂಖ್ಯೆಯಲ್ಲಿ ಪ್ರಯೋಗಿಸಿದ ಆಕಾಶದಲ್ಲಿ ವ್ಯಾಪ್ತವಾದ ಬಾಣಗಳಿಂದಲೂ ಮತ್ತು ಸೂರ್ಯನು ಅಸ್ತಂಗತನಾದ ಕಾರಣದಿಂದಲೂ ದಿಕ್ಕುಗಳು ಮೊದಲಿನಂತೆ ಪ್ರಕಾಶಿಸುತ್ತಿರಲಿಲ್ಲ.

ತಥಾ ಪ್ರಯುದ್ಧ್ಯಮಾನೇಷು ಪಾಂಡವೇಯೇಷು ನಿರ್ಭಯಃ ।
ದುರ್ಯೋಧನೋ ಮಹಾರಾಜ ವ್ಯಗಾಹತ ತದ್ಬಲಮ್ ॥ ೧೧ ॥

ಎಲೈ ಮಹಾರಾಜನೇ, ಪಾಂಡವಯೋಧರು ಆ ರೀತಿಯಲ್ಲಿ ಯುದ್ಧವನ್ನು ಮಾಡುತ್ತಿರಲು ದುರ್ಯೋಧನನು ನಿರ್ಭಯನಾಗಿ ಆ ಸೈನ್ಯವನ್ನು ಪ್ರವೇಶಿಸಿದನು.

ಸೈಂಧವಸ್ಯ ವಧೇನೈವ ಭೃಶಂ ದುಃಖಸಮನ್ವಿತಃ ।
ಮರ್ತವ್ಯಮಿತಿ ಸಂಚಿಂತ್ಯ ಪ್ರಾವಿಶತ್ತು ದ್ವಿಷದ್ಬಲಮ್ ॥ ೧೨ ॥

ನಾದಯನ್ ರಥಘೋಷೇಣ ಕಂಪಯನ್ನಿವ ಮೇದಿನೀಮ್ ।
ಅಭ್ಯವರ್ತತ ಪುತ್ರಸ್ತೇ ಪಾಂಡವಾನಾಮನೀಕಿನೀಮ್ ॥ ೧೩ ॥

ಸೈಂಧವನ ವಧೆಯಿಂದಲೇ ಬಹಳ ದುಃಖದಿಂದ ಕೂಡಿದ ಅವನು ತನ್ನ ಮರಣವನ್ನು ನಿಶ್ಚಯಿಸಿ ಶತ್ರುಸೈನ್ಯವನ್ನು ಪ್ರವೇಶಿಸಿದನು. ತನ್ನ ರಥಘೋಷದಿಂದ ಎಲ್ಲಕಡೆಗಳಲ್ಲಿಯೂ ನಾದವನ್ನು ಮಾಡುತ್ತಾ ಭೂಮಿಯನ್ನು ಕಂಪಿಸುವವನಂತೆ ನಿನ್ನ ಪುತ್ರನು ಪಾಂಡವರ ಸೈನ್ಯದ ಮೇಲೆ ಎರಗಿದನು.

ಸ ಸನ್ನಿಪಾತಸ್ತುಮುಲಸ್ತಸ್ಯ ತೇಷಾಂ ಚ ಭಾರತ ।
ಅಭವತ್ ಸರ್ವಸೈನ್ಯಾನಾಮಭಾವಕರಣೋ ಮಹಾನ್ ॥ ೧೪ ॥

ಎಲೈ ಭಾರತನೇ, ಅವನಿಗೂ ಮತ್ತು ಪಾಂಡವರಿಗೂ ಉಂಟಾದ ಆ ಸಂಘರ್ಷವು ಸರ್ವಸೈನ್ಯದ ವಿನಾಶವನ್ನು ಮಾಡುವುದಾಗಿ ಬಹಳ ತೀವ್ರವಾಗಿದ್ದಿತು.

ಮಧ್ಯಂದಿನಗತಂ ಸೂರ್ಯಂ ಪ್ರತಪಂತಂ ಗಭಸ್ತಿಭಿಃ ।
ತಥಾ ತವ ಸುತಂ ಮಧ್ಯೇ ಪ್ರತಪಂತಂ ಶರೋರ್ಮಿಭಿಃ ॥ ೧೫ ॥

ಮಧ್ಯಾಹ್ನದಲ್ಲಿ ಕಿರಣಗಳಿಂದ ಜ್ವಲಿಸುವ ಸೂರ್ಯನನ್ನು ನೋಡಲು ಅಸಾಧ್ಯವಾದಂತೆ ಬಾಣಗಳ ಅಲೆಗಳಿಂದ ಪಾಂಡವರ ಸೈನ್ಯವನ್ನು ತಾಪಗೊಳಿಸುತ್ತಿದ್ದ ನಿನ್ನ ಪುತ್ರನಾದ ದುರ್ಯೋಧನನನ್ನು ನೋಡಲು ಪಾಂಡವರಿಗೆ ಸಾಧ್ಯವಾಗಲಿಲ್ಲ.

ನ ಶೇಕುರ್ಭಾರತಂ ಯುದ್ಧೇ ಪಾಂಡವಾಃ ಸಮವೇಕ್ಷಿತುಮ್ ।
ಪಲಾಯನೇ ಕೃತೋತ್ಸಾಹಾ ನಿರುತ್ಸಾಹಾ ದ್ವಿಷಜ್ಜಯೇ ।
ಪರ್ಯಧಾವಂತ ಪಾಂಚಾಲಾ ವಧ್ಯಮಾನಾ ಮಹಾತ್ಮನಾ ॥ ೧೬ ॥

ಮಹಾತ್ಮನಾದ ದುರ್ಯೋಧನನಿಂದ ಹೊಡೆಯಲ್ಪಡುತ್ತಿದ್ದ ಪಾಂಚಾಲರು ಶತ್ರುಜಯದಲ್ಲಿ ಉತ್ಸಾಹವನ್ನು ಕಳೆದುಕೊಂಡು ಪಲಾಯನವನ್ನು ಮಾಡುವುದರಲ್ಲಿ ಉತ್ಸಾಹವನ್ನು ಹೊಂದಿ ಎಲ್ಲ ಕಡೆಗಳಲ್ಲಿಯೂ ಓಡಿದರು.

ರುಗ್ಣಪುಂಖೈಃ ಪ್ರಸನ್ನಾಗ್ರೈಸ್ತವ ಪುತ್ರೇಣ ಧನ್ವಿನಾ ।
ಅರ್ದ್ಯಮಾನಾಃ ಶರೈಸ್ತೂರ್ಣಂ ನ್ಯಪತನ್ ಪಾಂಡುಸೈನಿಕಾಃ ॥ ೧೭ ॥

ನಿನ್ನ ಪುತ್ರನು ಪ್ರಯೋಗಿಸಿದ ರುಗ್ಣಪುಂಖಗಳನ್ನು ಹೊಂದಿದ, ತೀಕ್ಷ್ಣವಾದ ತುದಿಯನ್ನು ಹೊಂದಿದ ಬಾಣಗಳಿಂದ ಪೀಡಿತರಾದ ಪಾಂಡು ಸೈನಿಕರು ಶೀಘ್ರವಾಗಿ ಹತರಾಗಿ ಬಿದ್ದರು.

ನ ತಾದೃಶಂ ರಣೇ ಕರ್ಮ ಕೃತವಂತಸ್ತು ತಾವಕಾಃ ।
ಯಾದೃಶಂ ಕೃತವಾನ್ ರಾಜಾ ಪುತ್ರಸ್ತವ ವಿಶಾಂಪತೇ ॥ ೧೮ ॥

ಎಲೈ ರಾಜನೇ, ನಿನ್ನ ಪುತ್ರನು ಯುದ್ಧದಲ್ಲಿ ಮಾಡಿದ ಕಾರ್ಯಕ್ಕೆ ಸದೃಶವಾದ ಕಾರ್ಯವನ್ನು ಅಲ್ಲಿಯವರೆಗೆ ನಿನ್ನವರು ಯಾರೂ ಮಾಡಿರಲಿಲ್ಲ

ಪುತ್ರೇಣ ತವ ಸಾ ಸೇನಾ ಪಾಂಡವೀ ಮಥಿತಾ ರಣೇ ।
ನಳಿನೀ ದ್ವಿರದೇನೇವ ಸಮಂತಾತ್ ಫುಲ್ಲಪಂಕಜಾ ॥ ೧೯ ॥

ಆರಳಿದ ಪದ್ಮಗಳುಳ್ಳ ಪದ್ಮ ಸರೋವರವು ಆನೆಯಿಂದ ವಿನಾಶಗೊಳಿಸಲ್ಪಟ್ಟಂತೆ ಪಾಂಡವರ ಸೈನ್ಯವು ರಣರಂಗದಲ್ಲಿ ನಿನ್ನ ಪುತ್ರನಿಂದ ವಿನಾಶಗೊಳಿಸಲ್ಪಟ್ಟಿತು.

ಕ್ಷೀಣತೋಯಾನಿಲಾರ್ಕಾಭ್ಯಾಂ ಹತತ್ವಿಡಿವ ಪದ್ಮಿನೀ ।
ಬಭೂವ ಪಾಂಡವೀ ಸೇನಾ ತವ ಪುತ್ರಸ್ಯ ತೇಜಸಾ ॥ ೨೦ ॥

ನೀರು ಒಣಗಿ ಹೋಗಿ ಸೂರ್ಯಾಗ್ನಿಗಳ ಪ್ರತಾಪಕ್ಕೆ ಸಿಕ್ಕಿದ ಪದ್ಮಸರೋವರವು ತನ್ನ ಕಾಂತಿಯನ್ನು ಕಳೆದುಕೊಳ್ಳುವಂತೆ ಪಾಂಡವರ ಸೈನ್ಯವು ನಿನ್ನ ಪುತ್ರನ ತೇಜಸ್ಸಿನಿಂದ ಕಾಂತಿಹೀನವಾಯಿತು.

ಪಾಂಡುಸೇನಾಂ ಹತಾಂ ದೃಷ್ಟ್ವಾ ತವ ಪುತ್ರೇಣ ಭಾರತ ।
ಭೀಮಸೇನಪುರೋಗಾಸ್ತು ಪಾಂಚಾಲಾಃ ಸಮುಪಾದ್ರವನ್ ॥ ೨೧ ॥

ಎಲೈ ಭಾರತನೇ, ನಿನ್ನ ಪುತ್ರನಿಂದ ಪಾಂಡುಸೇನೆಯು ಹೊಡೆಯಲ್ಪಡುತ್ತಿರುವುದನ್ನು ನೋಡಿ ಭೀಮಸೇನನನ್ನು ಮುಂದೆ ಮಾಡಿಕೊಂಡು ಪಾಂಚಾಲರು ಅಲ್ಲಿಗೆ ಓಡಿಬಂದರು.

ಸ ಭೀಮಸೇನಂ ದಶಭಿರ್ಮಾದ್ರೀಪುತ್ರೌ ತ್ರಿಭಿಸ್ತ್ರಿಭಿಃ ।
ವಿರಾಟದ್ರುಪದೌ ಷಡ್ಭಿಃ ಶತೇನ ಚ ಶಿಖಂಡಿನಮ್ ॥ ೨೨ ॥

ಧೃಷ್ಟದ್ಯುಮ್ನಂ ಚ ಸಪ್ತತ್ಯಾ ಧರ್ಮಪುತ್ರಂ ಚ ಸಪ್ತಭಿಃ ।
ಕೇಕಯಾಂಶ್ಚೈವ ಚೇದೀಂಶ್ಚ ಬಹುಭಿರ್ನಿಶಿತೈಃ ಶರೈಃ ॥ ೨೩ ॥

ಸಾತ್ವತಂ ಪಂಚಭಿರ್ವಿದ್ಧ್ವಾ ದ್ರೌಪದೇಯಾಂಸ್ತ್ರಿಭಿಸ್ತ್ರಿಭಿಃ ।
ಘಟೋತ್ಕಚಂ ಚ ಸಮರೇ ವಿದ್ಧ್ವಾ ಸಿಂಹ ಇವಾನದತ್ ॥ ೨೪ ॥

ನಿನ್ನ ಪುತ್ರನಾದ ದುರ್ಯೋಧನನು ಭೀಮಸೇನನನ್ನು ಹತ್ತು ಬಾಣಗಳಿಂದಲೂ, ನಕುಲ-ಸಹದೇವರನ್ನು ಮೂರು ಮೂರು ಬಾಣಗಳಿಂದಲೂ, ವಿರಾಟ-ದ್ರುಪದರನ್ನು ಆರು ಬಾಣಗಳಿಂದಲೂ, ಶಿಖಂಡಿಯನ್ನು ನೂರು ಬಾಣಗಳಿಂದಲೂ, ಧೃಷ್ಟದ್ಯುಮ್ನನನ್ನು ಎಪ್ಪತ್ತು ಬಾಣಗಳಿಂದಲೂ, ಯುಧಿಷ್ಠಿರನನ್ನು ಏಳು ಬಾಣಗಳಿಂದಲೂ, ಕೇಕಯರನ್ನು ಮತ್ತು ಚೇದಿಗಳನ್ನು ತೀಕ್ಷ್ಣವಾದ ಅನೇಕ

ಬಾಣಗಳಿಂದಲೂ, ಸಾತ್ಯಕಿಯನ್ನು ಐದು ಬಾಣಗಳಿಂದಲೂ, ದ್ರೌಪದಿಯ ಪುತ್ರರನ್ನು ಮೂರು-ಮೂರು ಬಾಣಗಳಿಂದಲೂ , ಘಟೋತ್ಕಚನನ್ನು (ಅರವತ್ನಾಲ್ಕು) ಬಾಣಗಳಿಂದಲೂ ಹೊಡೆದು ಸಿಂಹನಾದವನ್ನು ಮಾಡಿದನು.

ಶತಶಶ್ಚಾಪರಾನ್ ಯೋಧಾನ್ ಸದ್ವಿಪಾಶ್ವರಥಾನ್ ರಣೇ ।
ಶರೈರವಚಕರ್ತೋಗ್ರೈಃ ಕ್ರುದ್ಧೋಽಂತಕ ಇವ ಪ್ರಜಾಃ ॥ ೨೫ ॥

ತಸ್ಯ ತಾನ್ ನಿಘ್ನತಃ ಶತ್ರೂನ್ ರುಗ್ಮಪೃಷ್ಠಂ ಮಹದ್ಧನುಃ ।
ಭಲ್ಲಾಭ್ಯಾಂ ಪಾಂಡವೋ ಜ್ಯೇಷ್ಠಶ್ಚಿಚ್ಛೇದ ಮಾರಿಷ ॥ ೨೬ ॥

ಸುವರ್ಣಮಯವಾದ ಪೃಷ್ಠವುಳ್ಳ ಶತ್ರುಗಳನ್ನು ಸಂಹಾರ ಮಾಡುವ ಅವನ ದೊಡ್ಡ ಧನುಸ್ಸನ್ನು ಪಾಂಡವರಲ್ಲಿ ಹಿರಿಯನಾದ ಧರ್ಮರಾಜನು ಎರೆ ಪೂಜ್ಯನೇ, ಎರಡು ಭಲ್ಲಗಳಿಂದ ಮೂರು ಭಾಗವಾಗಿ ಕತ್ತರಿಸಿದನು.

ವಿವ್ಯಾಧ ಚೈನಂ ದಶಭಿಃ ಸಮ್ಯಗಸ್ತ್ರೈಃ ಶಿತೈಃ ಶರೈಃ ।
ಮರ್ಮಾಣಿ ಭಿತ್ತ್ವಾ ತೇ ಸರ್ವೇ ಸಂಭಗ್ನಾಃ ಕ್ಷಿತಿಮಾವಿಶನ್ ॥೨೭॥

ದುರ್ಯೋಧನನನ್ನು ಚೆನ್ನಾಗಿ ಪ್ರಯೋಗಿಸಿದ ತೀಕ್ಷ್ಣವಾದ ಹತ್ತು ಬಾಣಗಳಿಂದ ಹೊಡೆದನು. ಅವೆಲ್ಲವೂ ಅವನ ಮರ್ಮಗಳನ್ನು ಭೇದಿಸಿ ಭಗ್ನವಾಗಿ ಭೂಮಿಯಲ್ಲಿ ಇಳಿದವು.

ತತಃ ಪ್ರಮುದಿತಾ ಯೋಧಾಃ ಪರಿವವ್ರುರ್ಯುಧಿಷ್ಠಿರಮ್ ।
ವೃತ್ರಹತ್ಯೈ ಯಥಾ ದೇವಾಃ ಪರಿವವ್ರುಃ ಪುರಂದರಮ್ ॥ ೨೮ ॥

ಆಗ ವೃತ್ರಹತ್ಯೆಗಾಗಿ ದೇವತೆಗಳು ಇಂದ್ರನನ್ನು ಸುತ್ತುವರಿದಂತೆ ಸಂತೋಷಗೊಂಡ ಪಾಂಡವ ಯೋಧರು ಯುಧಿಷ್ಠಿರನನ್ನು ಸುತ್ತುವರಿದರು.

ತತೋ ಯುಧಿಷ್ಠಿರೋ ರಾಜಾ ತವ ಪುತ್ರಸ್ಯ ಮಾರಿಷ ।
ಶರಂ ಪರಮದುರ್ವಾರಂ ಪ್ರೇಷಯಾಮಾಸ ಸಂಯುಗೇ ।
ಸ ತೇನ ಭೃಶಸಂವಿದ್ಧೋ ನಿಷಾದ ರಥೋತ್ತಮೇ ॥ ೨೯ ॥

ಎಲೈ ಪೂಜ್ಯನೇ, ಆಗ ಯುಧಿಷ್ಠಿರನು ರಣರಂಗದಲ್ಲಿ ನಿನ್ನ ಪುತ್ರನ ಮೇಲೆ ನಿವಾರಿಸಲು ಅಸಾಧ್ಯವಾದ ಒಂದು ಶ್ರೇಷ್ಠವಾದ ಬಾಣವನ್ನು ಪ್ರಯೋಗಿಸಿದನು. ಆ ಬಾಣದಿಂದ ಚೆನ್ನಾಗಿ ಹೊಡೆಯಲ್ಪಟ್ಟ ದುರ್ಯೋಧನನು ತನ್ನ ಶ್ರೇಷ್ಠ ರಥದಲ್ಲಿ ಕುಸಿದು ಬಿದ್ದನು.

ತತಃ ಪಾಂಚಾಲಸೈನ್ಯಾನಾಂ ಭೃಶಮಾಸೀದ್ ರವೋ ಮಹಾನ್ ।
ಹತೋ ರಾಜೇತಿ ರಾಜೇಂದ್ರ ಮುದಿತಾನಾಂ ಸಮಂತತಃ ॥ ೩೦ ॥

ಎಲೈ ರಾಜೇಂದ್ರನೇ, ಆಗ ಪಾಂಚಾಲ ಸೈನ್ಯದಲ್ಲಿ ಇದ್ದ ಎಲ್ಲರಿಗೂ ಸಂತೋಷದಿಂದ ರಾಜನಾದ ದುರ್ಯೋಧನನು ಹತನಾದನು ಎಂಬ ದೊಡ್ಡನಾದವು ಉಂಟಾಯಿತು.

ಬಾಣಶಬ್ದರವಶ್ಚೋಗ್ರಃ ಶುಶ್ರುವೇ ತತ್ರ ಮಾರಿಷ ।
ಅಥ ದ್ರೋಣೋ ದ್ರುತಂ ತತ್ರ ಪ್ರತ್ಯದೃಶ್ಯತ ಸಂಯುಗೇ ॥ ೩೧ ॥

ಎಲೈ ಪೂಜ್ಯನೇ, ಬಾಣಶಬ್ದಗಳು ಮತ್ತು ಉಗ್ರವಾದ ಯೋಧರ ನಾದಗಳು ಅಲ್ಲಿ ಕೇಳಿಬಂದವು. ಆಗ ರಣರಂಗದಲ್ಲಿ ಅಲ್ಲಿ ಶೀಘ್ರವಾಗಿ ದ್ರೋಣರು ಕಾಣಿಸಿಕೊಂಡರು.

ಹೃಷ್ಟೋ ದುರ್ಯೋಧನಶ್ಚಾಪಿ ದೃಢಮಾದಾಯ ಕಾರ್ಮುಕಮ್ ।
ತಿಷ್ಠ ತಿಷ್ಠೇತಿ ರಾಜಾನಂ ಬ್ರುವನ್ ಪಾಂಡವಮಭ್ಯಯಾತ್ ॥ ೩೨ ॥

ಸಂತೋಷಗೊಂಡ ದುರ್ಯೋಧನನೂ ಸಹ ದೃಢವಾದ ಧನುಸ್ಸನ್ನು ತೆಗೆದುಕೊಂಡು ಧರ್ಮರಾಜನನ್ನು ಕುರಿತು ನಿಲ್ಲು-ನಿಲ್ಲು ಎಂದು ಹೇಳುತ್ತಾ ಅವನ ಕಡೆಗೆ ಸಾಗಿದನು.

ಪ್ರತ್ಯುದ್ಯಯುಸ್ತಂ ತ್ವರಿತಾಃ ಪಾಂಚಾಲಾ ರಾಜಗೃದ್ಧಿನಃ ।
ತಾನ್ ದ್ರೋಣಃ ಪ್ರತಿಜಗ್ರಾಹ ಪರೀಪ್ಸನ್ ಕುರುಸತ್ತಮಮ್ ।
ಚಂಡವಾತೋದ್ಧತಾನ್ ಮೇಘಾನ್ ನಿಘ್ನನ್ ರಶ್ಮಿಮುಚೋ ಯಥಾ ॥

ಧರ್ಮರಾಜನನ್ನು ಉಳಿಸಲು ಬಯಸಿದ ಪಾಂಚಾಲರು ಶೀಘ್ರವಾಗಿ ಆವನ ಮೇಲೆ ಎರಗಿದರು. ದ್ರೋಣರು ಚೆಂಡಮಾರುತದಿಂದ ಎದ್ದ ಮೋಡಗಳನ್ನು ಸೂರ್ಯನು ನಾಶಗೊಳಿಸುವಂತೆ ದುರ್ಯೋಧನನನ್ನು ರಕ್ಷಿಸಲು ಬಯಸಿ ಆ ಯೋಧರನ್ನು ಸ್ವೀಕರಿಸಿದರು.

ತತೋ ರಾಜನ್ ಮಹಾನಾಸೀತ್ ಸಂಗ್ರಾಮೋ ಭೂರಿವರ್ಧನಃ ।
ತಾವಕಾನಾಂ ಪರೇಷಾಂ ಚ ಸಮೇತಾನಾಂ ಯುಯುತ್ಸಯಾ ॥ ೩೪ ॥

ಎಲೈ ರಾಜನೇ, ಆಗ ಪರಸ್ಪರ ಯುದ್ಧದ ಅಭಿಲಾಷೆಯಿಂದ ಸೇರಿದ ನಿನ್ನವರಿಗೂ ಮತ್ತು ಪರರಿಗೂ ಯಮರಾಷ್ಟ್ರವರ್ಧನವಾದ ದೊಡ್ಡ ಸಂಗ್ರಾಮವು ಉಂಟಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನಚತ್ವಾರಿಂಶದಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತನೆಯ ಅಧ್ಯಾಯ

ರಾತ್ರಿಯುದ್ಧದ ಪ್ರಾರಂಭ. ದ್ರೋಣರ ಪರಾಕ್ರಮ.

ಧೃತರಾಷ್ಟ್ರಃ

ಯತ್ತದಾ ಪ್ರಾವಿಶತ್ ಪಾಂಡೂನಾಚಾರ್ಯಃ ಕುಪಿತೋ ವಶೀ ।
ಉಕ್ತ್ವಾ ದುರ್ಯೋಧನಂ ಸಮ್ಯಙ್ಮಮ ಶಾಸ್ತ್ರಾತಿಗಂ ಸುತಮ್ ॥೧॥

ಪ್ರವಿಶ್ಯ ವಿಚರಂತಂ ಚ ರಣೇ ಶೂರಮವಸ್ಥಿತಮ್ ।
ಕಥಂ ದ್ರೋಣಂ ಮಹೇಷ್ವಾಸಂ ಪಾಂಡವಾಃ ಪರ್ಯವಾರಯನ್ ॥೨॥

ಧೃತರಾಷ್ಟ್ರ– ಆಚಾರ್ಯರಾದ ದ್ರೋಣರು ಶಾಸ್ತ್ರನಿಯಮವನ್ನು ಮೀರಿದ ನನ್ನ ಪುತ್ರನಾದ ದುರ್ಯೋಧನನನ್ನು ಕುರಿತು ಸರಿಯಾಗಿ ಮಾತನಾಡಿ ಕುಪಿತರೂ ಸ್ವವಶರೂ

ಆದ ಅವರು ಪಾಂಡವಸೇನೆಯನ್ನು ಪ್ರವೇಶಿಸಿ ಸಂಚರಿಸುತ್ತಿರುವಾಗ ರಣರಂಗದಲ್ಲಿ ಶೂರರಾಗಿ ನಿಂತ ಮಹಾಧನುರ್ಧಾರಿಗಳಾದ ದ್ರೋಣರನ್ನು ಪಾಂಡವರು ಹೇಗೆ ನಿವಾರಿಸಿದರು?

ಕೇಽರಕ್ಷನ್ ದಕ್ಷಿಣಂ ಚಕ್ರಮಾಚಾರ್ಯಸ್ಯ ಮಹಾತ್ಮನಃ ।
ಕೇ ಚೋತ್ತರಮರಕ್ಷಂತ ನಿಘ್ನತಃ ಶಾತ್ರವಾನ್ ರಣೇ ॥ ೩ ॥

ಮಹಾತ್ಮರಾದ ಆಚಾರ್ಯರ ದಕ್ಷಿಣ ಪಕ್ಷವನ್ನು ಯಾರು ರಕ್ಷಿಸಿದರು? ರಣರಂಗದಲ್ಲಿ ಶತ್ರುಗಳನ್ನು ಕೊಲ್ಲುವ ಅವರ ವಾಮ ಪಕ್ಷವನ್ನು ಯಾರು ರಕ್ಷಿಸಿದರು?

ನೃತ್ಯನ್ ಸ ರಥಮಾರ್ಗೇಷು ಸರ್ವಶಸ್ತ್ರಭೃತಾಂ ವರಃ ।
ಧೂಮಕೇತುರಿವ ಕ್ರುದ್ಧಃ ಕಥಂ ಮೃತ್ಯುಮುಪೇಯಿವಾನ್ ॥ ೪ ॥

ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ, ರಥಮಾರ್ಗಗಳಲ್ಲಿ ನರ್ತನವನ್ನು ಮಾಡುವ ಧೂಮಕೇತುವಿನಂತೆ ಕ್ರುದ್ಧರಾದ ಅವರು ಹೇಗೆ ಮರಣವನ್ನು ಹೊಂದಿದರು?

ಸಂಜಯಃ

ಸಾಯಾಹ್ನೇ ಸೈಂಧವಂ ಹತ್ವಾ ರಾಜ್ಞಾ ಪಾರ್ಥಃ ಸಮೇತ್ಯ ಚ ।
ಸಾತ್ಯಕಿಶ್ಚ ಮಹೇಷ್ವಾಸೋ ದ್ರೋಣಮೇವಾಭ್ಯಧಾವತಾಮ್ ॥ ೫ ॥

ಸಂಜಯ– ಸಾಯಂಕಾಲದಲ್ಲಿ ಅರ್ಜುನನು ಸೈಂಧವನನ್ನು ಕೊಂದು, ಧರ್ಮರಾಜನ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ಅವನೂ ಮತ್ತು ಮಹಾಧನುರ್ಧಾರಿಯಾದ ಸಾತ್ಯಕಿಯೂ ದ್ರೋಣರ ಮೇಲೆಯೇ ನುಗ್ಗಿದರು.

ತಥಾ ಯುಧಿಷ್ಠಿರಸ್ತೂರ್ಣಂ ಭೀಮಸೇನಶ್ಚ ಪಾಂಡವಃ ।
ಪೃಥಕ್ಚಮೂಭ್ಯಾಂ ಸಂಸಕ್ತೌ ದ್ರೋಣಮೇವಾಭ್ಯಧಾವತಾಮ್ ॥ ೬ ॥

ಹಾಗೆಯೇ ಪಾಂಡವರಾದ ಯುಧಿಷ್ಠಿರ ಮತ್ತು ಭೀಮಸೇನರು ಶೀಘ್ರವಾಗಿ ಬೇರೆ ಬೇರೆ ಸೈನ್ಯಗಳಿಂದ ಕೂಡಿದವರಾಗಿ ದ್ರೋಣರ ಮೇಲೆಯೇ ಧಾವಿಸಿದರು.

ತಥೈವ ನಕುಲೋ ಧೀಮಾನ್ ಸಹದೇವಶ್ಚ ದುರ್ಜಯಃ ।
ಧೃಷ್ಟದ್ಯುಮ್ನಃ ಶತಾನೀಕೋ ವಿರಾಟಶ್ಚ ಸಕೇಕಯಃ ।
ಮತ್ಸ್ಯಾಃ ಸಾಲ್ವೇಯಸೇನಾಶ್ಚ ದ್ರೋಣಮೇವ ಯಯುರ್ಯುಧಿ ॥ ೭ ॥

ಹಾಗೆಯೇ ಮೇಧಾವಿಯಾದ ನಕುಲನೂ, ದುರ್ಜಯನಾದ ಸಹದೇವನೂ, ಧೃಷ್ಟದ್ಯುಮ್ನನೂ, ಶತಾನೀಕನೂ, ಕೇಕಯರಿಂದ ಸಹಿತನಾದ ವಿರಾಟನೂ, ಮತ್ಸ್ಯರೂ, ಸಾಲ್ವಪುತ್ರರ ಯೋಧರೂ ರಣರಂಗದಲ್ಲಿ ದ್ರೋಣರ ಮೇಲೆಯೇ ಎರಗಿದರು.

ದ್ರುಪದಶ್ಚ ತಥಾ ರಾಜಾ ಪಾಂಚಾಲೈರಭರಕ್ಷಿತಃ ।
ಧೃಷ್ಟದ್ಯುಮ್ನಪಿತಾ ರಾಜನ್ ದ್ರೋಣಮೇವಾಭ್ಯವರ್ತತ ॥ ೮ ॥

ಎಲೈ ರಾಜನೇ, ಹಾಗೆಯೇ ಪಾಂಚಾಲರಿಂದ ರಕ್ಷಿತನಾದ ಧೃಷ್ಟದ್ಯುಮ್ನನ ತಂದೆಯಾದ ದ್ರುಪದರಾಜನು ದ್ರೋಣರ ಮೇಲೆಯೇ ಧಾವಿಸಿದನು.

ದ್ರೌಪದೇಯಾ ಮಹೇಷ್ವಾಸಾ ರಾಕ್ಷಸಶ್ಚ ಘಟೋತ್ಕಚಃ ।
ಸಸೇನಾಸ್ತೇऽಭ್ಯವರ್ತಂತ ದ್ರೋಣಮೇವ ಮಹಾದ್ಯುತಿಮ್ ॥ ೯ ॥

ಮಹಾಧನುರ್ಧಾರಿಗಳಾದ ದ್ರೌಪದಿಯ ಪುತ್ರರೂ, ರಾಕ್ಷಸನಾದ ಘಟೋತ್ಕಚನೂ ತಮ್ಮ ಸೈನ್ಯದಿಂದ ಸಹಿತರಾಗಿ ದ್ರೋಣರ ಮೇಲೆಯೇ ಎರಗಿದರು.

ಪ್ರಭದ್ರಕಾಶ್ಚ ಪಾಂಚಲಾಃ ಷಟ್‌ಸಹಸ್ರಾಃ ಪ್ರಹಾರಿಣಃ ।
ದ್ರೋಣಮೇವಾಭ್ಯವರ್ತಂತ ಪುರಸ್ಕೃತ್ಯ ಶಿಖಂಡಿನಮ್ ॥ ೧೦ ॥

ಪ್ರಭದ್ರಕರೂ ಮತ್ತು ಪಾಂಚಾಲರೂ ಸೇರಿ ಆರು ಸಹಸ್ರ ಪ್ರಹಾರಶೀಲರಾದ ಯೋಧರು ಶಿಖಂಡಿಯನ್ನು ಮುಂದೆ ಮಾಡಿಕೊಂಡು ದ್ರೋಣರ ಕಡೆಗೆ ನುಗ್ಗಿದರು.

ತಥೇತರೇ ನರವ್ಯಾಘ್ರಾಃ ಪಾಂಡವಾನಾಂ ಮಹಾರಥಾಃ ।
ಸಹಿತಾಃ ಸಂನ್ಯವರ್ತಂತ ದ್ರೋಣಮೇವ ದ್ವಿಜರ್ಷಭಮ್ ॥ ೧೧ ॥

ಹಾಗೆಯೇ ಪಾಂಡವರ ನರಶ್ರೇಷ್ಠರಾದ ಇತರ ಮಹಾರಥರು ಒಟ್ಟಾಗಿ ಬ್ರಾಹ್ಮಣಶ್ರೇಷ್ಠರಾದ ದ್ರೋಣರ ಮೇಲೆಯೇ ನುಗ್ಗಿದರು.

ತೇಷು ಶೂರೇಷು ಯುದ್ಧಾಯ ಗತೇಷು ಭರತರ್ಷಭ ।
ಬಭೂವ ರಜನೀ ಘೋರಾ ಭೀರೂಣಾಂ ಭಯವರ್ಧಿನೀ ॥ ೧೨ ॥

ಯೋಧಾನಾಮಶಿವಾ ರೌದ್ರಾ ರಾಜನ್ಕಂತಕಗಾಮಿನೀ ।
ಕುಂಜರಾಶ್ವಮನುಷ್ಯಾಣಾಂ ಪ್ರಾಣಾಂತಕರಣೇ ತದಾ ॥ ೧೩ ॥

ಎಲೈ ಭರತಶ್ರೇಷ್ಠನೇ, ಆ ಶೂರರು ಯುದ್ಧಕ್ಕಾಗಿ ಹೋಗುತ್ತಿರಲು ಹೇಡಿಗಳಿಗೆ ಭಯವನ್ನು ಹೆಚ್ಚಿಸುವ, ಯೋಧರನ್ನು ಅಶುಭವಾದ ಭಯಂಕರವಾದ ಯಮಲೋಕಕ್ಕೆ ಸಾಗಿಸುವ, ಗಜಾಶ್ವ-ಮನುಷ್ಯರ ಪ್ರಾಣಗಳನ್ನು ಅಪಹರಿಸುವ ಘೋರವಾದ ರಾತ್ರಿಯಾಯಿತು.

ತಸ್ಯಾಂ ರಜನ್ಯಾಂ ಘೋರಾಯಾಂ ನದಂತ್ಯಃ ಸರ್ವತಃ ಶಿವಾಃ ।
ನ್ಯವೇದಯನ್ ಭಯಂ ಘೋರಂ ಸಜ್ವಾಲಕವಳೈರ್ಮುಖೈಃ ॥ ೧೪ ॥

ಆ ಘೋರವಾದ ರಾತ್ರಿಯಲ್ಲಿ ನರಿಗಳು ಎಲ್ಲ ಕಡೆಗಳಲ್ಲಿಯೂ ರೋದಿಸುತ್ತಾ ತಮ್ಮ ಮುಖದಲ್ಲಿ ಜ್ವಾಲೆಯಿಂದ ಸಹಿತವಾದ ಕವಳಗಳನ್ನು ಇಟ್ಟುಕೊಂಡು ಪ್ರಾಪ್ತವಾದ ಘೋರವಾದ ಭಯವನ್ನು ನಿವೇದಿಸಿದವು.

ಉಲೂಕಾಶ್ಚಾಪ್ಯದೃಶ್ಯಂತ ಶಂಸಂತೋ ವಿಪುಲಂ ಭಯಮ್ ।
ವಿಶೇಷತಃ ಕೌರವಾಣಾಂ ಧ್ವಜಿನ್ಯಾಮತಿದಾರುಣಮ್ ॥ ೧೫ ॥

ಗೂಬೆಗಳು ವಿಪುಲವಾದ ಭಯವನ್ನು ಅದರಲ್ಲಿಯೂ ಕೌರವರ ಸೇನೆಗೆ ಅತಿದಾರುಣವಾದ ಭಯವನ್ನು ಸೂಚಿಸುತ್ತಾ ಕಂಡುಬಂದವು.

ತತಃ ಸೈನ್ಯೇಷು ರಾಜೇಂದ್ರ ಶಬ್ದಃ ಸಮಭವನ್ಮಹಾನ್ ।
ಭೇರೀಶಬ್ದೇನ ಮಹತಾ ಮೃದಂಗಾನಾಂ ಸ್ವನೇನ ಚ ॥ ೧೬ ॥

ಗಜಾನಾಂ ಗರ್ಜಿತೈಶ್ಚಾಪಿ ತುರಂಗಾಣಾಂ ಚ ಹೇಷಿತೈಃ ।
ಖುರಶಬ್ದನಿಪಾತೈಶ್ಚ ತುಮುಲಃ ಸರ್ವತೋಽಭವತ್ ॥ ೧೭ ॥

ಎಲೈ ರಾಜೇಂದ್ರನೇ, ಆಗ ಸೈನ್ಯಗಳಲ್ಲಿ ದೊಡ್ಡ ಭೇರೀ ಶಬ್ದಗಳಿಂದಲೂ, ಮೃದಂಗಗಳ ನಾದದಿಂದಲೂ, ಗಜಗಳ ಬೃಂಹಣದಿಂದಲೂ, ಅಶ್ವಗಳ ಹೇಶಾರವ ಮತ್ತು ಖುರಶಬ್ದಗಳಿಂದಲೂ, ವಿಪುಲವಾದ ದೊಡ್ಡ ಶಬ್ದವು ಎಲ್ಲ ಕಡೆಗಳಲ್ಲಿಯೂ ಉಂಟಾಯಿತು.

ತತಃ ಸಮಭವದ್ ಯುದ್ಧಂ ಸಂಧ್ಯಾಯಾಮತಿದಾರುಣಮ್ ।
ದ್ರೋಣಸ್ಯ ಚ ಮಹಾರಾಜ ಸೃಂಜಯಾನಾಂ ಚ ಸರ್ವಶಃ ॥ ೧೮ ॥

ಎಲೈ ಮಹಾರಾಜನೇ, ಅನಂತರ ಸಂಧ್ಯಾಕಾಲದಲ್ಲಿ ದ್ರೋಣರಿಗೂ ಮತ್ತು ಎಲ್ಲ ಸೃಂಜಯರಿಗೂ ಬಹಳ ದಾರುಣವಾದ ಯುದ್ಧವು ನಡೆಯಿತು.

ತಮಸಾ ಚಾವೃತೇ ಲೋಕೇ ನ ಪ್ರಾಜ್ಞಾಯತ ಕಿಂಚನ ।
ಸೈನ್ಯೇನ ರಜಸಾ ಚೈವ ಸಮಂತಾದುತ್ಥಿತೇನ ಹ ॥ ೧೯ ॥

ರಣರಂಗವು ಕತ್ತಲೆಯಿಂದ ಆವರಿಸಲ್ಪಡುತ್ತಿರಲು ಮತ್ತು ಸೈನ್ಯದಿಂದ ಎಲ್ಲ ಕಡೆಯಲ್ಲಿಯೂ ಎದ್ದ ಧೂಳಿನಿಂದ ಯಾವುದೂ ತಿಳಿಯುತ್ತಿರಲಿಲ್ಲ.

ನರಸ್ಯಾಶ್ವಸ್ಯ ನಾಗಸ್ಯ ಸಮಸಜ್ಜತ ಶೋಣಿತಮ್ ।
ನಾಪಶ್ಯಾಮ ರಜೋ ಭೌಮಂ ಕಶ್ಮಲೇನಾಭಸಂವೃತಾಃ ॥ ೨೦ ॥

ಮನುಷ್ಯರ, ಅಶ್ವಗಳ ಮತ್ತು ಗಜಗಳ ರಕ್ತಗಳು ಮಿಶ್ರಣಗೊಂಡವು. ವಿಷಾದದಿಂದ ಕೂಡಿದ ನಮಗೆ ಭೂಮಿಯ ಧೂಳು ಕಾಣಲಿಲ್ಲ.

ರಾತ್ರೌ ವಂಶವನಸ್ಯೇವ ದಹ್ಯಮಾನಸ್ಯ ಪರ್ವತೇ ।
ಘೋರಶ್ಚಟಚಟಾಶಬ್ದಃ ಶಸ್ತ್ರಾಣಾಂ ಪತತಾಮಭೂತ್ ॥ ೨೧ ॥

ರಾತ್ರಿಯ ಕಾಲದಲ್ಲಿ ಪರ್ವತದಲ್ಲಿ ಉರಿಯುವ ಬಿದಿರುವನದ ಶಬ್ದದಂತೆ ಶಸ್ತ್ರಗಳ ಸಂಘಾತದಿಂದ ಉಂಟಾದ ಘೋರವಾದ ಚಟಚಟ ಶಬ್ದವು ಕೇಳಿಬಂದಿತು.

ನೈವ ಸ್ವೇ ನ ಪರೇ ರಾಜನ್ ಪ್ರಾಜ್ಞಾಯಂತ ತಮೋವೃತೇ ।
ಉನ್ಮತ್ತಮಿವ ತತ್ ಸರ್ವಂ ಬಭೂವ ರಜನೀಮುಖೇ ॥ ೨೨ ॥

ಎಲೈ ರಾಜನೇ, ಕತ್ತಲೆಯಿಂದ ಆವರಿಸಲ್ಪಟ್ಟ ರಣರಂಗದಲ್ಲಿ ತನ್ನವರಾಗಲೀ, ಶತ್ರುಗಳಾಗಲೀ ಯಾರೆಂದು ತಿಳಿಯಲಿಲ್ಲ. ರಾತ್ರಿಯ ಪ್ರಾರಂಭದ ಕಾಲದಲ್ಲಿ ಎಲ್ಲವೂ ಹುಚ್ಚುಹಿಡಿದಂತೆ ಆಯಿತು.

ಭೌಮಂ ರಜೋಽಥ ರಾಜೇಂದ್ರ ಶೋಣಿತೇನ ಪ್ರಶಾಮಿತಮ್ ।
ಶಾತಕೌಂಭೈಶ್ಚ ಕವಚೈರ್ಭೂಷಣೈಶ್ಚ ತಮೋಽಭ್ಯಗಾತ್ ॥ ೨೩ ॥

ಎಲೈ ರಾಜೇಂದ್ರನೇ, ಆನಂತರ ಭೂಮಿಯ ಧೂಳು ಹರಿಯುವ ರಕ್ತದಿಂದ ಶಾಂತವಾಯಿತು. ಸುವರ್ಣಮಯವಾದ ಕವಚಗಳಿಂದಲೂ ಮತ್ತು ಆಭರಣಗಳಿಂದಲೂ ಕತ್ತಲೆಯು ನಾಶವನ್ನು ಹೊಂದಿತು.

ತತಃ ಸಾ ಭಾರತೀ ಸೇನಾ ಮಣಿಹೇಮವಿಭೂಷಿತಾ ।
ದ್ಯೌರಿವಾಸೀತ್ ಸನಕ್ಷತ್ರಾ ರಜನ್ಯಾಂ ಭರತರ್ಷಭ ॥ ೨೪ ॥

ಗೋಮಾಯುಬಲಸಂಘುಷ್ಟಾ ಶಕ್ತಿಧ್ವಜಸಮಾಕುಲಾ ।
ದಾರುಣಾಭಿರುತಾ ಘೋರಾ ಕ್ಷ್ವೇಡಿತೋತ್ಕುಷ್ಟನಾದಿತಾ ॥ ೨೫ ॥

ಎಲೈ ಭರತರ್ಷಭನೇ, ಆನಂತರ ನರಿಗಳ ಘೋಷದಿಂದಲೂ ಮತ್ತು ಬಲಪಕ್ಷಿಗಳ ಘೋಷದಿಂದಲೂ ಕೂಡಿದ, ಶಕ್ತಿ-ಧ್ವಜಗಳಿಂದ ನಿಬಿಡವಾದ, ದಾರುಣವಾದ ಶಬ್ದಗಳಿಂದ ಕೂಡಿದ, ಸಿಂಹನಾದ ಮೊದಲಾದ ಉತ್ಕೃಷ್ಟನಾದಗಳಿಂದ ಕೂಡಿದ ಘೋರವಾದ ಕೌರವರ ಸೇನೆಯು ಮಣಿ-ಸುವರ್ಣಗಳಿಂದ ಭೂಷಿತವಾಗಿ ರಾತ್ರಿಯಲ್ಲಿ ನಕ್ಷತ್ರ ಸಹಿತವಾದ ಆಕಾಶದಂತೆ ಆಯಿತು.

ತತೋಽಭವನ್ಮಹಾಶಬ್ದಸ್ತುಮುಲೋ ಲೋಮಹರ್ಷಣಃ ।
ಸಮಾವೃಣ್ವನ್ ದಿಶಃ ಸರ್ವಾ ಮಹೇಂದ್ರಾಶನಿನಿಸ್ವನಃ ॥ ೨೬ ॥

ಆನಂತರ ತೀವ್ರವೂ, ರೋಮಾಂಚಕಾರಿಯೂ ಆದ ಮಹಾಶಬ್ದವು ಉಂಟಾಯಿತು. ಮಹೇಂದ್ರನ ವಜ್ರದ ನಾದಕ್ಕೆ ಸಮವಾದ ಘೋಷದಿಂದ ಎಲ್ಲ ದಿಕ್ಕುಗಳೂ ತುಂಬಿದವು.

ಸಾ ನಿಶೀಥೇ ಮಹಾರಾಜ ಸೇನಾಽದೃಶ್ಯತ ಭಾರತೀ ।
ಅಂಗದೈಃ ಕುಂಡಲೈರ್ನಿಷ್ಕೈಃ ಶಸ್ತ್ರೈಶ್ಚೈವಾವಭಾಸಿತಾ ॥ ೨೭ ॥

ಎಲೈ ಮಹಾರಾಜನೇ, ಆ ರಾತ್ರಿಯಲ್ಲಿ ಕೌರವ ಸೇನೆಯು ಅಂಗದಗಳಿಂದಲೂ, ಕುಂಡಲಗಳಿಂದಲೂ, ಚಿನ್ನದ ಹಾರಗಳಿಂದಲೂ ಮತ್ತು ಶಸ್ತ್ರಗಳಿಂದಲೂ ಪ್ರಕಾಶಿಸಲ್ಪಟ್ಟು ಕಾಣುತ್ತಿದ್ದಿತು.

ತತ್ರ ನಾಗಾ ರಥಾಶ್ಚೈವ ಜಾಂಬೂನದವಿಭೂಷಿತಾಃ ।
ನಿಶಾಯಾಂ ಪ್ರತ್ಯದೃಶ್ಯಂತ ಮೇಘಾ ಇವ ಸವಿದ್ಯುತಃ ॥ ೨೮ ॥

ಅಲ್ಲಿ ಸುವರ್ಣಾಲಂಕೃತವಾದ ಗಜಗಳು ಮತ್ತು ರಥಗಳು ಮಿಂಚಿನಿಂದ ಸಹಿತವಾದ ಮೋಡಗಳಂತೆ ರಾತ್ರಿಯ ಕಾಲದಲ್ಲಿ ಕಂಡುಬಂದವು.

ಋಷ್ಟಿಶಕ್ತಿಗದಾಬಾಣಮುಸಲಪ್ರಾಸಪಟ್ಟಶಾಃ ।
ಸಂಪತಂತೋ ವ್ಯದೃಶ್ಯಂತ ಭ್ರಾಜಮಾನಾ ಇವಾಗ್ನಯಃ ॥ ೨೯ ॥

ಪ್ರಯೋಗಿಸಲ್ಪಡುವ ಋಷ್ಟಿ-ಶಕ್ತಿ-ಗದೆ-ಬಾಣ-ಮುಸಲ-ಪ್ರಾಸ-ಪಟ್ಟಶ ಮೊದಲಾದ ಆಯುಧಗಳು ಪ್ರಕಾಶಿಸುವ ಅಗ್ನಿಗಳಂತೆ ತೋರುತ್ತಿದ್ದವು.

ದುರ್ಯೋಧನಪುರೋವಾತಾಂ ರಥನಾಗಬಲಾಹಕಾಮ್ ।
ವಾದಿತ್ರಘೋಷಸ್ತನಿತಾಂ ಚಾಪವಿದ್ಯುದ್ ದುರ್ದಿನೈರ್ವೃತಾಮ್ ॥ ೩೦ ॥

ದ್ರೋಣಪಾಂಡವಪರ್ಜನ್ಯಾಂ ಖಡ್ಗಶಕ್ತಿಗದಾಶನಿಮ್ ।
ಶರಧಾರಾಸ್ತ್ರಪವನಾಂ ಭೃಶಂ ಶೀತೋಷ್ಣಸಂಕುಲಾಮ್ ॥ ೩೧ ॥

ಘೋರಾಂ ವಿಸ್ಮಾಪನೀಮುಗ್ರಾಂ ಜೀವಿತಚ್ಛೇದಮಪ್ಲವಾಮ್ ।
ತಾಂ ಪ್ರಾವಿಶನ್ನತಿಭಯಾಂ ಸೇನಾಂ ಯುದ್ಧಚಿಕೀರ್ಷವಃ ॥ ೩೨ ॥

ದುರ್ಯೋಧನನೆಂಬ ಪೂರ್ವವಾಯುವಿನಿಂದ ಕೂಡಿದ, ಗಜ-ರಥಗಳೆಂಬ ಮೋಡಗಳಿಂದ ಕೂಡಿದ, ವಾದ್ಯಘೋಷಗಳೆಂಬ ಗುಡುಗುಗಳಿಂದ ಕೂಡಿದ, ಧನುಸ್ಸುಗಳೆಂಬ ವಿದ್ಯುದ್ಧ್ವಜಗಳಿಂದ ಕೂಡಿದ, ದ್ರೋಣ-ಪಾಂಡವರೆಂಬ ಪರ್ಜನ್ಯರಿಂದ ಕೂಡಿದ, ಖಡ್ಗ-ಶಕ್ತಿ-ಗದೆಗಳೆಂಬ ಸಿಡಿಲುಗಳಿಂದ ಕೂಡಿದ, ಶರಗಳೆಂಬ ಮಳೆಯ ಧಾರೆಗಳಿಂದ ಕೂಡಿದ, ಆಸ್ತ್ರಗಳಿಂದ ಉಂಟಾದ ವಾಯುವಿನಿಂದ ಕೂಡಿದ, ಶೀತೋಷ್ಣ ಮಿಶ್ರಿತವಾದ, ಆಶ್ಚರ್ಯಕರವಾದ, ಘೋರವಾದ, ಯೋಧರ ಮತ್ತು ವಾಹನಗಳ ಜೀವಿತವನ್ನು ಅಪಹರಿಸುವ, ದೋಣಿಯಿಲ್ಲದ ಅತಿಭಯಂಕರವಾದ ಆ ಸೈನ್ಯರೂಪವಾದ ನದಿಯನ್ನು ಯುದ್ಧವನ್ನು ಮಾಡಲು ಬಯಸಿದ ಯೋಧರು ಪ್ರವೇಶಿಸಿದರು.

ತಸ್ಮಿನ್ ರಾತ್ರಿಮುಖೇ ಘೋರೇ ಮಹಾಶಬ್ದನಿನಾದಿತೇ ।
ಭೀರೂಣಾಂ ತ್ರಾಸಜನನೇ ಶೂರಾಣಾಂ ಹರ್ಷವರ್ಧನೇ ॥ ೩೩ ॥

ರಾತ್ರಿಯುದ್ದೇ ತದಾ ಘೋರೇ ವರ್ತಮಾನೇ ಸುದಾರುಣೇ ।
ದ್ರೋಣಮಭ್ಯದ್ರವನ್ ಕ್ರುದ್ಧಾಃ ಸಹಿತಾಃ ಪಾಂಡುಸೃಂಜಯಾಃ ॥ ೩೪ ॥

ರಾತ್ರಿಯ ಆರಂಭದಲ್ಲಿ ಪ್ರಾರಂಭವಾದ ಘೋರವಾದ ಮಹಾಶಬ್ದದಿಂದ ಕೂಡಿದ, ಹೇಡಿಗಳಿಗೆ ಭಯಜನಕವೂ, ಶೂರರಿಗೆ ಸಂತೋಷಜನಕವೂ ಆದ ಆ ಘೋರವಾದ ರಾತ್ರಿಯ ಯುದ್ಧದಲ್ಲಿ ಪಾಂಡವ-ಸೃಂಜಯರು ಸಹಿತರಾಗಿ ಕೋಪದಿಂದ ದ್ರೋಣರ ಮೇಲೆ ಧಾವಿಸಿದರು.

ಯೇ ಯೇ ಪ್ರಮುಖತೋ ರಾಜನ್ನ್ಯವರ್ತಂತ ಮಹಾತ್ಮನಃ ।
ತಾನ್ ಸರ್ವಾನ್ ವಿಮುಖಾಂಶ್ಚಕ್ರೇ ಕಾಂಶ್ಚಿನ್ನಿನ್ಯೇ ಯಮಕ್ಷಯಮ್ ॥

ಎಲೈ ರಾಜನೇ, ಪಾಂಡವರ ಸೈನ್ಯದಲ್ಲಿ ಮಹಾತ್ಮರಾದ ದ್ರೋಣರ ಎದುರಿಗೆ ಯಾರು-ಯಾರು ಬಂದರೋ ಅವರೆಲ್ಲರನ್ನೂ ದ್ರೋಣರು ಯುದ್ಧವಿಮುಖರನ್ನಾಗಿ ಮಾಡಿದರು. ಕೆಲವರನ್ನು ಯಮಲೋಕಕ್ಕೆ ಕಳುಹಿಸಿದರು.

ತಾನಿ ನಾಗಸಹಸ್ರಾಣಿ ರಥಾನಾಮಯುತಾನಿ ಚ ।
ಪದಾತಿಹಯಸಂಘಾನಾಂ ಪ್ರಯುತಾನ್ಯರ್ಬುದಾನಿ ಚ ।
ದ್ರೋಣೇನೈಕೇನ ನಾರಾಚೈರ್ನಿರ್ಭಿನ್ನಾನಿ ನಿಶಾಮುಖೇ ॥ ೩೬ ॥

ರಾತ್ರಿಯ ಆರಂಭಕಾಲದಲ್ಲಿ ದ್ರೋಣರೊಬ್ಬರಿಂದಲೇ ನಾರಾಚಗಳಿಂದ ಸಹಸ್ರ, ಗಜಗಳು, ಹತ್ತು ಸಹಸ್ರ ರಥಗಳು, ಪ್ರಯುತ-ಅಬುದ ಸಂಖ್ಯೆಯ ಪದಾತಿ, ಹಯ ಸಮೂಹಗಳು ನಿರ್ಭಿನ್ನವಾದವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತ್ವಾರಿಂಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೊಂದನೆಯ ಅಧ್ಯಾಯ

ಭೀಮಸೇನನಿಂದ ದುರ್ಮದ-ದುಷ್ಕರ್ಣಾದಿಗಳ ವಧೆ.

ಧೃತರಾಷ್ಟ್ರ

ತಸ್ಮಿನ್ ಪ್ರವಿಷ್ಟೇ ದುರ್ಧರ್ಷೇ ಸೃಂಜಯಾನಮಿತೌಜಸಿ ।
ಅಮೃಷ್ಯಮಾಣೇ ಸಂರಬ್ಧೇ ಕಾ ವೋಽಭೂದ್ಬೃ ಮತಿಸ್ತದಾ ॥ ೧ ॥

ಧೃತರಾಷ್ಟ್ರ- ದುರ್ಧರ್ಷರೂ, ಅಮಿತಪರಾಕ್ರಮಿಗಳೂ ಆದ ದ್ರೋಣರು ಕೋಪಗೊಂಡು ಸೃಂಜಯರ ಸೇನೆಯನ್ನು ಪ್ರವೇಶಿಸುತ್ತಿರಲು ಆಗ ನಿಮ್ಮ ಅಭಿಪ್ರಾಯವು ಹೇಗಿದ್ದಿತು?

ದುರ್ಯೋಧನಂ ತಥಾ ಪುತ್ರಮುಕ್ತ್ವಾ ಶಾಸ್ತ್ರಾತಿಗಂ ಮಮ ।
ಯತ್ ಪ್ರಾವಿಶದಮೇಯಾತ್ಮಾ ಕಂ ಪಾರ್ಥಃ ಪ್ರತ್ಯಪದ್ಯತ ॥ ೨ ॥

ಶಾಸ್ತ್ರವನ್ನು ಮೀರುವ ನನ್ನ ಪುತ್ರನಾದ ದುರ್ಯೋಧನನನ್ನು ಕುರಿತು ಹಾಗೆ ಮಾತನಾಡಿ ಅಚಿಂತ್ಯಸಾಮರ್ಥ್ಯವುಳ್ಳ ದ್ರೋಣರು ಸೈನ್ಯವನ್ನು ಪ್ರವೇಶಿಸಿದಾಗ ಯುಧಿಷ್ಠಿರನು ಏನು ಯೋಚಿಸಿದನು?

ನಿಹತೇ ಸೈಂಧವೇ ವೀರೇ ಭೂರಿಶ್ರವಸಿ ಚೈವ ಹಿ ।
ಯದಭ್ಯಗಾನ್ಮಹಾತೇಜಾಃ ಪಾಂಚಾಲಾನಪರಾಜಿತಃ ॥ ೩ ॥

ಕಿಮಮನ್ಯತ ದುರ್ಧರ್ಷಃ ಪ್ರವಿಷ್ಟೇ ಶತ್ರುತಾಪನೇ ।
ದುರ್ಯೋಧನಶ್ಚ ಕಿಂ ಕೃತ್ಯಂ ಪ್ರಾಪ್ತಕಾಲಮಮನ್ಯತ ॥ ೪ ॥

ವೀರನಾದ ಸೈಂಧವನು ಮತ್ತು ಭೂರಿಶ್ರವನು ಹತರಾಗಿ ಮಹಾತೇಜಸ್ವಿಗಳೂ, ಅಪರಾಜಿತರೂ, ಶತ್ರುತಾಪನರೂ ಆದ ದ್ರೋಣರು ತಮ್ಮ ಸೈನ್ಯವನ್ನು ಪ್ರವೇಶಿಸಿದಾಗ ದುರ್ಧರ್ಷನಾದ ಅರ್ಜುನನು ಏನು ಭಾವಿಸಿದನು? ದುರ್ಯೋಧನನಾದರೂ ಆ ಕಾಲದಲ್ಲಿ ಏನು ಮಾಡುವುದು ಯೋಗ್ಯವೆಂದು ಭಾವಿಸಿದನು?

ಕೇ ಚ ತಂ ವರದಂ ವೀರಮನ್ವಯುರ್ದ್ವಿಜಸತ್ತಮಮ್ ।
ಕೇ ಚಾಸ್ಯ ಪೃಷ್ಠತೋಽಗಚ್ಛನ್ ವೀರಾಃ ಶೂರಸ್ಯ ಯುದ್ಧ್ಯತಃ ।
ಕೇ ಪುರಸ್ತಾದಯುದ್ಧ್ಯಂತ ನಿಘ್ನತಃ ಶಾತ್ರವಾನ್ ರಣೇ ॥ ೫ ॥

ಆಶ್ರಿತರಿಗೆ ಅಭಯವನ್ನು ಕೊಡುವ ವೀರರಾದ ಆ ದ್ವಿಜಶ್ರೇಷ್ಠರನ್ನು ಯಾರು ಹಿಂಬಾಲಿಸಿದರು? ಯುದ್ಧವನ್ನು ಮಾಡುವ ಆ ಶೂರರ ಹಿಂದೆ ಯಾವ ವೀರರು ಹೋದರು? ರಣರಂಗದಲ್ಲಿ ಶತ್ರುಗಳನ್ನು ಕೊಲ್ಲುವ ಅವರ ಮುಂದೆ ನಿಂತು ಯಾರು ಯುದ್ಧವನ್ನು ಮಾಡಿದರು?

ಮನ್ಯೇ೭ಹಂ ಪಾಂಡವಾನ್ ಸರ್ವಾನ್ ಭಾರದ್ವಾಜಶರಾರ್ದಿತಾನ್ ।
ಶಿಶಿರೇ ಕಂಪಮಾನಾ ವೈ ಕೃಶಾ ಗಾವ ಇವಾಭಿಭೋ ॥ ೬ ॥

ಎಲೈ ಜಯಶೀಲನೇ, ಪಾಂಡವರೆಲ್ಲರೂ ಶಿಶಿರ ಋತುವಿನಲ್ಲಿ ನಡುಗುವ ಕೃಶವಾದ ಗೋವುಗಳಂತೆ ದ್ರೋಣರ ಬಾಣಗಳಿಂದ ಪೀಡಿತರಾದರೆಂದು ಭಾವಿಸುತ್ತೇನೆ.

ಪ್ರವಿಶ್ಯ ಸ ಮಹೇಷ್ವಾಸಃ ಪಾಂಚಾಲಾನರಿಮರ್ದನಃ ।
ಕಥಂ ನು ಪುರುಷವ್ಯಾಘ್ರಃ ಪಂಚತ್ವಮುಪಜಗ್ಮಿವಾನ್ ॥ ೭ ॥

ಮಹಾಧನುರ್ಧಾರಿಗಳೂ, ಶತ್ರುಮರ್ದನರೂ ಆದ ಪುರುಷವ್ಯಾಘ್ರರಾದ ಅವರು ಪಾಂಚಾಲ ಸೇನೆಯನ್ನು ಪ್ರವೇಶಿಸಿ ಹೇಗೆ ಮರಣವನ್ನು ಹೊಂದಿದರು?

ಸರ್ವೇಷು ಸೈನ್ಯೇಷು ಚ ಸಂಗತೇಷು
ರಾತ್ರೌ ಸಮೇತೇಷು ಮಹಾರಥೇಷು ।
ಸಂಲ್ಲೋಡ್ಯಮಾನೇಷು ಪೃಥಗ್ವಿಧೇಷು
ಕೇ ವಸ್ತದಾನೀಂ ಮತಿಮಂತ ಆಸನ್ ॥ ೮ ॥

ರಾತ್ರಿಯ ಕಾಲದಲ್ಲಿ ಎಲ್ಲ ಸೈನ್ಯಗಳೂ ಮತ್ತು ಮಹಾರಥರೂ ಕೂಡಿ ಬೇರೆ ಬೇರೆ ಸೈನ್ಯಗಳು ಪೀಡಿಸಲ್ಪಡುತ್ತಿರಲು ಆಗ ನಿಮ್ಮಲ್ಲಿ ಯಾರು ಪ್ರಜ್ಞಾವಂತರಿದ್ದರು?

ಹತಾಂಶ್ಚೈವ ವಿಷಕ್ತಾಂಶ್ಚ ಪರಾಭೂತಾಂಶ್ಚ ಶಂಸಸಿ ।
ರಥಿನೋ ವಿರಥಾಂಶ್ಚೈವ ಕೃತಾನ್ ಯುದ್ಧೇಷು ಮಾಮಕಾನ್ ॥ ೯ ॥

ನನ್ನವರು ಕೆಲವರು ಹತರಾದರೆಂದೂ, ಕೆಲವರು ಸೋತರೆಂದೂ, ಕೆಲವರು ಯುದ್ಧವನ್ನು ಮಾಡುತ್ತಾ ನಿಂತರೆಂದೂ ಹೇಳುತ್ತಿದ್ದೀಯೆ. ಯುದ್ಧದಲ್ಲಿ ನನ್ನ ರಥಿಕರು ರಥಹೀನರಾಗಿ ಮಾಡಲ್ಪಟ್ಟರೆಂದೂ ಹೇಳುತ್ತಿದ್ದೀಯೆ.

ಕಥಮೇಷಾಂ ತದಾ ತತ್ರ ಪಾರ್ಥಾನಾಮಪಲಾಯಿನಾಮ್ ।
ಪ್ರಕಾಶಮಭವದ್ ರಾತ್ರೌ ಕಥಂ ಕುರುಷು ಸಂಜಯ ॥ ೧೦ ॥

ರಣಭೂಮಿಯಲ್ಲಿ ಹಿಮ್ಮೆಟ್ಟದಿರುವ ಪಾಂಡವರಿಗೆ ಆ ರಾತ್ರಿಯ ಕಾಲದಲ್ಲಿ ಹೇಗೆ ಪ್ರಕಾಶವುಂಟಾಯಿತು? ಎಲೈ ಸಂಜಯನೇ, ಕುರುಗಳಿಗಾದರೂ ಹೇಗೆ ಪ್ರಕಾಶ ಉಂಟಾಯಿತು?

ಸಂಜಯಃ

ರಾತ್ರಿಯುದ್ಧೇ ತದಾ ರಾಜನ್ ವರ್ತಮಾನೇ ಸುದಾರುಣೇ ।
ದ್ರೋಣಮಭ್ಯದ್ರವನ್ ರಾತ್ರೌ ಪಾಂಡವಾಃ ಸಹಸೈನಿಕಾಃ ॥ ೧೧ ॥

ಸಂಜಯ– ಎಲೈ ರಾಜನೇ, ಅತ್ಯಂತ ದಾರುಣವಾದ ರಾತ್ರಿ ಯುದ್ಧವು ನಡೆಯುತ್ತಿರಲು ರಾತ್ರಿಯ ಕಾಲದಲ್ಲಿ ಪಾಂಡವರು ತಮ್ಮ ಸೈನಿಕರಿಂದ ಸಹಿತರಾಗಿ ದ್ರೋಣರ ಮೇಲೆ ಮುನ್ನುಗ್ಗಿದರು.

ತತೋ ದ್ರೋಣಃ ಕೇಕಯಾಂಶ್ಚ ಧೃಷ್ಟದ್ಯುಮ್ನಸ್ಯ ಚಾತ್ಮಜಾನ್ ।
ಪ್ರೇಷಯನ್ ಮೃತ್ಯುಲೋಕಾಯ ಸರ್ವಾನಿಷುಭಿರಾಶುಗೈಃ ॥ ೧೨ ॥

ಆಗ ದ್ರೋಣರು ಶೀಘ್ರಗಾಮಿಗಳಾದ ಬಾಣಗಳಿಂದ ಕೇಕಯರನ್ನೂ, ಧೃಷ್ಟದ್ಯುಮ್ನ ಪುತ್ರರನ್ನೂ ಮೃತ್ಯುಲೋಕಕ್ಕೆ ಕಳುಹಿಸಿದರು.

ತಸ್ಯ ಪ್ರಮುಖತೋ ರಾಜನ್ ಯೇಽವರ್ತಂತ ಮಹಾರಥಾಃ ।
ತಾನ್ ಸರ್ವಾನ್ ಪ್ರೇಷಯಾಮಾಸ ಪರಲೋಕಾಯ ಭಾರತ ॥ ೧೩ ॥

ಎಲೈ ಭಾರತನೇ, ದ್ರೋಣರ ಎದುರಿಗೆ ಇದ್ದ ಮಹಾರಥರನ್ನೆಲ್ಲಾ ಅವರು ಪರಲೋಕಕ್ಕೆ ಕಳುಹಿಸಿದರು.

ಪ್ರಮಥ್ನಂತಂ ತದಾ ವೀರಂ ಭಾರದ್ವಾಜಂ ಮಹಾರಥಮ್ ।
ಅಭ್ಯವರ್ತತ ಸಂಕ್ರುದ್ಧಃ ಶಿಬೀ ರಾಜನ್ ಪ್ರತಾಪವಾನ್ ॥ ೧೪ ॥

ಪಾಂಡವರ ಸೇನೆಯನ್ನು ಮರ್ದಿಸುತ್ತಿದ್ದ ವೀರರೂ ಮಹಾರಥರೂ ಆದ ದ್ರೋಣರ ಕಡೆಗೆ ಪ್ರತಾಪಶಾಲಿಯೂ, ಕೋಪಗೊಂಡವನೂ ಆದ ಶಿಬಿರಾಜನು ನುಗ್ಗಿ ಬಂದನು.

ತಮಾಪತಂತಂ ಸಂಪ್ರೇಕ್ಷ್ಯ ಪಾಂಡವಾನಾಂ ಮಹಾರಥಮ್ ।
ವಿವ್ಯಾಧ ದಶಭಿರ್ದ್ರೋಣಃ ಸರ್ವಪಾರಶವೈಃ ಶರೈಃ ॥ ೧೫ ॥

ತಮ್ಮ ಮೇಲೆ ಎರಗುತ್ತಿರುವ ಪಾಂಡವರ ಆ ಮಹಾರಥನನ್ನು ನೋಡಿ ದ್ರೋಣರು ಪೂರ್ಣವಾಗಿ ಕಬ್ಬಿಣದಿಂದ ಮಾಡಿದ ಹತ್ತು ಬಾಣಗಳಿಂದ ಅವನನ್ನು ಹೊಡೆದರು.

ತಂ ಶಿಬಿಃ ಪ್ರತಿವಿವ್ಯಾಧ ತ್ರಿಂಶತಾ ನಿಶಿತೈಃ ಶರೈಃ ।
ಸಾರಥಿಂ ಚಾಸ್ಯ ಭಲ್ಲೇನ ಸ್ಮಯಮಾನೋ ನ್ಯಪಾತಯತ್ ॥ ೧೬ ॥

ಶಿಬಿಯು ಮೂವತ್ತು ತೀಕ್ಷ್ಣವಾದ ಬಾಣಗಳಿಂದ ಅವರನ್ನು ಪ್ರತಿಯಾಗಿ ಹೊಡೆದನು ಮತ್ತು ನಗುತ್ತಾ ಅವರ ಸಾರಥಿಯನ್ನು ಒಂದು ಭಲ್ಲದಿಂದ ಹೊಡೆದು ರಥದಿಂದ ಕೆಳಗೆ ಉರುಳಿಸಿದನು.

ತಸ್ಯ ದ್ರೋಣೋ ಹಯಾನ್ ಹತ್ವಾ ಸಾರಥಿಂ ಚ ಮಹಾತ್ಮನಃ ।
ಅಥಾಸ್ಯ ಸಶಿರಸ್ತ್ರಾಣಂ ಶಿರಃ ಕಾಯಾದಪಾಹರತ್ ॥ ೧೭ ॥

ದ್ರೋಣರು ಮಹಾತ್ಮನಾದ ಅವನ ಅಶ್ವಗಳನ್ನೂ ಮತ್ತು ಸಾರಥಿಯನ್ನೂ ಕೊಂದು, ಶಿರಸ್ತ್ರಾಣ ಸಹಿತವಾದ ಅವನ ಶಿರಸ್ಸನ್ನು ದೇಹದಿಂದ ಕತ್ತರಿಸಿದರು.

ಕಳಿಂಗಾನಾಂ ಚ ಸೈನ್ಯೇನ ಕಳಿಂಗಸ್ಯ ಸುತೋ ರಣೇ ।
ಪೂರ್ವಂ ಪಿತೃವಧಾತ್ ಕ್ರುದ್ಧೋ ಭೀಮಸೇನಮುಪಾದ್ರವತ್ ॥ ೧೮ ॥

ಕಳಿಂಗ ರಾಜನ ಮಗನು ಕಳಿಂಗ ಸೈನ್ಯದ ಜೊತೆಯಲ್ಲಿ ಹಿಂದೆಯೇ ತನ್ನ ತಂದೆಯ ವಧೆಯನ್ನು ಮಾಡಿದ ಕಾರಣದಿಂದ ಕ್ರುದ್ಧನಾಗಿ ಭೀಮಸೇನನ ಮೇಲೆ ಮುನ್ನುಗ್ಗಿದನು.

ಸ ಭೀಮಂ ಪಂಚಭಿರ್ವಿದ್ಧ್ವಾ ಪುನರ್ವಿವ್ಯಾಧ ಸಪ್ತಭಿಃ ।
ವಿಶೋಕಂ ತ್ರಿಭಿರಾಜಘ್ನೇ ಧ್ವಜಮೇಕೇನ ಪತ್ರಿಣಾ ॥ ೧೯ ॥

ಅವನು ಭೀಮನನ್ನು ಐದು ಬಾಣಗಳಿಂದ ಹೊಡೆದು, ಪುನಃ ಏಳು ಬಾಣಗಳಿಂದ ಹೊಡೆದನು. ಭೀಮಸೇನನ ಸಾರಥಿಯಾದ ವಿಶೋಕನನ್ನು ಮೂರು ಬಾಣಗಳಿಂದಲೂ, ರಥದ ಧ್ವಜವನ್ನು ಒಂದು ಬಾಣದಿಂದಲೂ ಹೊಡೆದನು.

ಕಳಿಂಗಾನಾಂ ತು ತಂ ಶೂರಂ ಕ್ರುದ್ಧಂ ಕ್ರುದ್ಧೋ ವೃಕೋದರಃ ।
ರಥಾದ್ ರಥಮಭಿದ್ರುತ್ಯ ಮುಷ್ಟಿನಾऽಭಜಘಾನ ಹ ॥ ೨೦ ॥

ಕೋಪಗೊಂಡ ವೃಕೋದರನು ತನ್ನ ರಥದಿಂದ ಅವನ ರಥಕ್ಕೆ ಹಾರಿ ಕಳಿಂಗ ದೇಶದ ಶೂರನೂ, ಕ್ರುದ್ಧನೂ ಆದ ಅವನನ್ನು ಮುಷ್ಟಿಯಿಂದ ಹೊಡೆದನು.

ತಸ್ಯ ಮುಷ್ಟಿಹತಸ್ಯಾಜೌ ಪಾಂಡವೇನ ಬಲೀಯಸಾ ।
ಸರ್ವಾಣ್ಯಸ್ಥೀನಿ ಸಹಸಾ ಪ್ರಾಪತನ್ ವೈ ಪೃಥಕ್ ಪೃಥಕ್ ॥ ೨೧ ॥

ಬಲಿಷ್ಠನಾದ ಭೀಮಸೇನನಿಂದ ರಣರಂಗದಲ್ಲಿ ಮುಷ್ಟಿಯಿಂದ ಹೊಡೆಯಲ್ಪಟ್ಟ ಅವನ ಶರೀರದ ಎಲ್ಲ ಮೂಳೆಗಳೂ ತಕ್ಷಣ ಬೇರೆ ಬೇರೆಯಾಗಿ ಬಿದ್ದವು.

ತಂ ಕರ್ಣೋ ಭ್ರಾತರಶ್ಚಾಸ್ಯ ನಾಮೃಷ್ಯಂತ ಮಹಾರಥಾಃ ।
ತೇ ಭೀಮಸೇನಂ ನಾರಾಚೈರ್ದಹ್ಶುರಾಶೀವಿಷೋಪಮೈಃ ॥ ೨೨ ॥

ಅದನ್ನು ಕರ್ಣನೂ ಮಹಾರಥರಾದ ಅವನ ತಮ್ಮಂದಿರೂ ಸಹಿಸಲಿಲ್ಲ. ಅವರು ಸರ್ಪಸದೃಶವಾದ ನಾರಾಚಗಳಿಂದ ಭೀಮಸೇನನನ್ನು ಹೊಡೆದರು.

ತತಃ ಶತ್ರುರಥಂ ತ್ಯಕ್ತ್ವಾ ಭೀಮೋ ಧ್ರುವರಥಂ ಗತಃ ।
ಧ್ರುವಂ ಚಾಸ್ಯಂತಮನಿಶಂ ಮುಷ್ಟಿನಾ ಸಮಪೋಥಯತ್ ।
ಸ ತಥಾ ಪಾಂಡುಪುತ್ರೇಣ ಬಲಿನಾ ನಿಹತೋऽಪತತ್ ॥ ೨೩ ॥

ಆಗ ಭೀಮನು ಶತ್ರುರಥವನ್ನು ಬಿಟ್ಟು ಧ್ರುವನ ರಥಕ್ಕೆ ಬಂದನು. ಸತತವಾಗಿ ಬಾಣಗಳನ್ನು ಪ್ರಯೋಗಿಸುತ್ತಿದ್ದ ಧ್ರುವನನ್ನು ಮುಷ್ಟಿಯಿಂದ ಜಜ್ಜಿದನು. ಅವನೂ ಸಹ ಬಲಿಷ್ಠನಾದ ಪಾಂಡುಪುತ್ರನಾದ ಭೀಮಸೇನನಿಂದ ಹತನಾಗಿ ಕೆಳಗೆ ಬಿದ್ದನು.

ತಂ ನಿಹತ್ಯ ಮಹಾರಾಜ ಭೀಮಸೇನೋ ಮಹಾಬಲಃ ।
ಜಯರಾತರಥಂ ಪ್ರಾಪ್ಯ ಮುಹುಃ ಸಿಂಹ ಇವಾನದತ್ ॥ ೨೪ ॥

ಎಲೈ ಮಹಾರಾಜನೇ, ಮಹಾಬಲನಾದ ಭೀಮಸೇನನು ಅವನನ್ನು ಕೊಂದು ಜಯರಾತನ ರಥಕ್ಕೆ ಬಂದು ಪುನಃ ಸಿಂಹದಂತೆ ಗರ್ಜಿಸಿದನು.

ಜಯರಾತಮಥಾಕ್ಷಿಪ್ಯ ನದನ್ ಸವ್ಯೇನ ಪಾಣಿನಾ ।
ತಳೇನ ನಾಶಯಾಮಾಸ ಕರ್ಣಸ್ಯೈವಾಗ್ರತಃ ಸ್ಥಿತಮ್ ॥ ೨೫ ॥

ಗರ್ಜಿಸುತ್ತಾ ಜಯರಾತನನ್ನು ಎಡಗೈಯಿಂದ ಎಸೆದು, ಬಲ ಅಂಗೈಯಿಂದ ಕರ್ಣನ ಎದುರಿನಲ್ಲಿ ಅವನನ್ನು ನಾಶಮಾಡಿದನು.

ಕರ್ಣಸ್ತು ಪಾಂಡವೇ ಶಕ್ತಿಂ ಕಾಂಚನೀಂ ಸಮವಾಸೃಜತ್ ।
ತತಸ್ತಾಮೇವ ಜಗ್ರಾಹ ಪ್ರಹಸನ್ ಪಾಂಡುನಂದನಃ ॥ ೨೬ ॥

ಕರ್ಣನು ಭೀಮಸೇನನ ಮೇಲೆ ಸುವರ್ಣಾಲಂಕೃತವಾದ ಶಕ್ತಿಯನ್ನು ಪ್ರಯೋಗಿಸಿದನು. ಪಾಂಡುನಂದನನಾದ ಭೀಮನು ನಗುತ್ತಾ ಅದನ್ನೇ ಹಿಡಿದುಕೊಂಡನು.

ಕರ್ಣಾಯೈವ ಚ ದುರ್ಧರ್ಷಶ್ಚಿಕ್ಷೇಪಾಜೌ ವೃಕೋದರಃ ।
ತಾಮಂತರಿಕ್ಷೇ ಚಿಚ್ಛೇದ ಶಕುನಿಸ್ತೈಲಪಾಯಿನಾ ॥ ೨೭ ॥

ರಣರಂಗದಲ್ಲಿ ದುರ್ಧರ್ಷನಾದ ವೃಕೋದರನು ಅದನ್ನು ಕರ್ಣನ ಮೇಲೆಯೇ ಎಸೆದನು. ಶಕುನಿಯು ತೈಲವನ್ನು ಕುಡಿಸಿದ ಬಾಣದಿಂದ ಅದನ್ನು ಅಂತರಿಕ್ಷದಲ್ಲಿಯೇ ಕತ್ತರಿಸಿದನು.

ತತಸ್ತವ ಸುತಾ ರಾಜನ್ ಭೀಮಸ್ಯ ರಥಮಾವ್ರಜನ್ ।
ಮಹತಾ ಶರವರ್ಷೇಣ ಛಾದಯಂತೋ ವೃಕೋದರಮ್ ॥ ೨೮ ॥

ಎಲೈ ರಾಜನೇ, ಅನಂತರ ನಿನ್ನ ಪುತ್ರರು ಬಾಣಗಳ ದೊಡ್ಡ ಮಳೆಯಿಂದ ಭೀಮಸೇನನನ್ನು ಆವರಿಸುತ್ತಾ ಭೀಮಸೇನನ ರಥದ ಬಳಿಗೆ ಬಂದರು.

ದುರ್ಮದಸ್ಯ ತತೋ ಭೀಮಃ ಪ್ರಹಸನ್ನಿವ ಸಂಯುಗೇ ।
ಸಾರಥಿಂ ಚ ಹಯಾಂಶ್ಚೈವ ಶರೈರ್ನಿನ್ಯೇ ಯಮಕ್ಷಯಮ್ ।
ದುರ್ಮದಸ್ತು ತತೋ ಯಾನಂ ದುಷ್ಕರ್ಣಸ್ಯಾವಪುಪ್ಲುವೇ ॥ ೨೯ ॥

ಆಗ ಭೀಮನು ರಣರಂಗದಲ್ಲಿ ನಗುತ್ತಾ ತನ್ನ ಬಾಣಗಳಿಂದ ದುರ್ಮದನ ಸಾರಥಿಯನ್ನೂ ಮತ್ತು ಅಶ್ವಗಳನ್ನೂ ಯಮಲೋಕಕ್ಕೆ ಕಳುಹಿಸಿದನು. ದುರ್ಮದನು ಅಲ್ಲಿಂದ ದುಷ್ಕರ್ಣನ ರಥಕ್ಕೆ ಹಾರಿದನು.

ತಾವೇಕರಥಮಾರೂಢೌ ಭ್ರಾತರೌ ಪರತಾಪನೌ ।
ಸಂಗ್ರಾಮಶಿರಸೋ ಮಧ್ಯೇ ಭೀಮಂ ದ್ವಾವಭ್ಯಧಾವತಾಮ್ ॥
ಯಥಾಂಬುಪತಿಮಿತ್ರೌ ಹಿ ತಾರಕಂ ದೈತ್ಯಸತ್ತಮಮ್ ॥ ೩೦ ॥

ಒಂದೇ ರಥವನ್ನು ಏರಿದ ಶತ್ರುತಾಪನರಾದ ಆ ಸಹೋದರರು ಆ ಘೋರವಾದ ಯುದ್ಧದ ಮಧ್ಯದಲ್ಲಿ ಮಿತ್ರವರುಣರು ದೈತ್ಯಶ್ರೇಷ್ಠನಾದ ತಾರಕಾಸುರನ ಮೇಲೆ ಎರಗಿದಂತೆ ಭೀಮನ ಮೇಲೆ ಎರಗಿದರು.

ತತಸ್ತು ದುರ್ಮದಶ್ಚೈವ ದುಷ್ಕರ್ಣಶ್ಚ ತವಾತ್ಮಜೌ ।
ರಥಮೇಕಂ ಸಮಾರುಹ್ಯ ಭೀಮಂ ಬಾಣೈರವಿದ್ಧ್ಯತಾಮ್ ॥ ೩೧ ॥

ಆನಂತರ ನಿನ್ನ ಪುತ್ರರಾದ ದುರ್ಮದ ಮತ್ತು ದುಷ್ಕರ್ಣರು ಒಂದೇ ರಥವನ್ನು ಏರಿ ಭೀಮನನ್ನು ಬಾಣಗಳಿಂದ ಹೊಡೆದರು.

ತತಃ ಕರ್ಣಸ್ಯ ಮಿಷತೋ ದ್ರೌಣೇರ್ದುರ್ಯೋಧನಸ್ಯ ಚ ।
ಕೃಪಸ್ಯ ಸೋಮದತ್ತಸ್ಯ ಬಾಹ್ಲೀಕಸ್ಯ ಚ ಪಾಂಡವಃ ॥ ೩೨ ॥

ದುರ್ಮದಸ್ಯ ಚ ವೀರಸ್ಯ ದುಷ್ಕರ್ಣಸ್ಯ ಚ ತಂ ರಥಮ್ ।
ಪಾದಪ್ರಹಾರೇಣ ಧರಾಂ ಪ್ರಾವೇಶಯದರಿಂದಮಃ ॥ ೩೩ ॥

ಆಗ ಕರ್ಣನೂ, ಅಶ್ವತ್ಥಾಮರೂ, ದುರ್ಯೋಧನನೂ, ಕೃಪರೂ, ಸೋಮದತ್ತನೂ, ಬಾಹ್ಲೀಕರೂ ನೋಡುತ್ತಿರುವಂತೆಯೇ ಅರಿಂದಮನಾದ ಪಾಂಡುಪುತ್ರನಾದ ಭೀಮನು ವೀರರಾದ ದುರ್ಮದ ಮತ್ತು ದುಷ್ಕರ್ಣರ ರಥವನ್ನು ಪಾದದಿಂದ ಒದ್ದು ಭೂಮಿಯ ಮೇಲೆ ಬೀಳುವಂತೆ ಮಾಡಿದನು.

ತತಃ ಸುತೌ ತೇ ಬಲಿನೌ ಶೂರೌ ದುಷ್ಕರ್ಣದುರ್ಮದೌ ।
ಮುಷ್ಟಿನಾಹತ್ಯ ಸಂಕ್ರುದ್ಧಃ ಮಮರ್ದ ಚರಣೇನ ಚ ॥ ೩೪ ॥

ಆನಂತರ ಬಲಿಷ್ಠರೂ, ಶೂರರೂ, ನಿನ್ನ ಪುತ್ರರೂ ಆದ ದುಷ್ಕರ್ಣ-ದುರ್ಮದರನ್ನು ಮುಷ್ಟಿಯಿಂದ ಗುದ್ದಿ ಕೋಪಗೊಂಡು ಪಾದದಿಂದ ಮರ್ದಿಸಿದನು.

ತತೋ ಹಾಹಾಕೃತೇ ಸೈನ್ಯೇ ದೃಷ್ಟ್ವಾ ಭೀಮಂ ನೃಪಾಬ್ರುವನ್ ।
ರುದ್ರೋಽಯಂ ಭೀಮರೂಪೇಣ ಧಾರ್ತರಾಷ್ಟ್ರೇಷು ಗೃಧ್ಯತಿ ॥ ೩೫ ॥

ಆಗ ಸೈನ್ಯದಲ್ಲಿ ಹಾಹಾಕಾರ ಉಂಟಾಗುತ್ತಿರಲು ಭೀಮನನ್ನು ನೋಡಿ ರಾಜರು ರುದ್ರದೇವನೇ ಭೀಮರೂಪದಿಂದ ಧೃತರಾಷ್ಟ್ರಪುತ್ರರನ್ನು ಬಯಸಿ ಸಂಹರಿಸುತ್ತಿದ್ದಾನೆ ಎಂದು ಹೇಳಿದರು.

ಏವಮುಕ್ತ್ವಾ ಪಲಾಯಂತ ಸರ್ವೇ ಭಾರತ ಪಾರ್ಥಿವಾಃ ।
ವಿಸಂಜ್ಞಾ ವಾಹಯನ್ ವಾಹಾನ್ ನ ಚ ದ್ವೌ ಸಹ ಧಾವತಃ ॥ ೩೬ ॥

ಎಲೈ ಭಾರತನೇ, ಹೀಗೆ ಹೇಳಿ ಎಲ್ಲ ರಾಜರೂ ಪಲಾಯನ ಮಾಡಿದರು. ಶರೀರದಲ್ಲಿ ಸರಿಯಾದ ಎಚ್ಚರವಿಲ್ಲದೆ ತಮ್ಮ ವಾಹನಗಳನ್ನು ಓಡಿಸಿದರು. ಯಾರಿಬ್ಬರೂ ಜೊತೆಯಲ್ಲಿ ಓಡಲಿಲ್ಲ.

ತತೋ ಬಲೇ ಭೃಶಲುಲಿತೇ ನಿಶಾಮುಖೇ
ಸುಪೂಜಿತೋ ನೃಪವೃಷಭೈರ್ವ್ಯಕೋದರಃ ।
ಮಹಾಬಲಃ ಕಮಲವಿಬುದ್ಧಲೋಚನೋ
ಯುಧಿಷ್ಠಿರಂ ನೃಪತಿಮಪೂಜಯದ್ ಬಲೀ ॥ ೩೭ ॥

ಆಗ ನಿಶಾಮುಖದಲ್ಲಿ ಕೌರವಸೈನ್ಯವು ಬಹಳವಾಗಿ ಮರ್ದಿಸಲ್ಪಡುತ್ತಿರಲು ನೃಪಶ್ರೇಷ್ಠರಿಂದ ಚೆನ್ನಾಗಿ ಪೂಜಿತನಾದ ಮಹಾಬಲನೂ, ಕಮಲದಂತೆ ಕಣ್ಣುಳ್ಳವನೂ ಆದ ವೃಕೋದರನು ರಾಜನಾದ ಯುಧಿಷ್ಠಿರನನ್ನು ಪೂಜಿಸಿದನು.

ತತೋ ಯಮೌ ದ್ರುಪದವಿರಾಟಕೇಕಯಾ
ಯುಧಿಷ್ಠಿರಶ್ಚಾಪಿ ಪರಾಂ ಮುದಂ ಯಯುಃ ।
ವೃಕೋದರಂ ಭೃಶಮಭಿಪೂಜಯಂಶ್ಚ ತೇ
ಯಥಾಂಧಕೇ ಪ್ರತಿನಿಹತೇ ಹರಂ ಸುರಾಃ ॥ ೩೮ ॥

ಆಗ ನಕುಲ-ಸಹದೇವರೂ, ದ್ರುಪದ-ವಿರಾಟ-ಕೇಕಯರೂ ಮತ್ತು ಯುಧಿಷ್ಠಿರನೂ ಬಹಳ ಸಂತೋಷವನ್ನು ಹೊಂದಿದರು. ಅಂಧಕಾಸುರನ

ಸಂಹಾರವಾದಾಗ ದೇವತೆಗಳು ರುದ್ರದೇವರನ್ನು ಪೂಜಿಸಿದಂತೆ ಅವರು ವೃಕೋದರನನ್ನು ಬಹಳವಾಗಿ ಪೂಜಿಸಿದರು.

ತತಃ ಸುತಾಸ್ತವ ವರುಣಾತ್ಮಜೋಪಮಾ
ರುಷಾನ್ವಿತಾಃ ಸಹ ಗುರುಣಾ ಮಹಾತ್ಮನಾ ।
ವೃಕೋದರಂ ಸರಥಪದಾತಿಕುಂಜರಾ
ಯುಯುತ್ಸವೋ ಭೃಶಮಭಿಪರ್ಯವಾರಯನ್ ॥ ೩೯ ॥

ಆಗ ವರುಣಪುತ್ರರಿಗೆ ಸಮವಾದ ಪರಾಕ್ರಮವುಳ್ಳ ನಿನ್ನ ಪುತ್ರರು ಕೋಪದಿಂದ ಕೂಡಿ ಮಹಾತ್ಮರಾದ ದ್ರೋಣರಿಂದ ಸಹಿತರಾಗಿ ತಮ್ಮ ರಥ-ಪದಾತಿ-ಗಜಗಳಿಂದ ಸಹಿತರಾಗಿ ಭೀಮನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಅವನನ್ನು ತೀವ್ರವಾಗಿ ಸುತ್ತುವರಿದು ತಡೆದರು.

ತತೋಽಭವತ್ತಿಮಿರಘನೈರಿವಾವೃತಂ
ಮಹಾಭಯೇ ಭಯದಮತೀವ ದಾರುಣಮ್ ।
ನಿಶಾಮುಖೇ ಬಲವೃಕಗೃಧ್ರಮೋದನಂ
ಮಹಾತ್ಮನಾಂ ನೃಪವರಯುದ್ಧಮದ್ಭುತಮ್ ॥ ೪೦ ॥

ಎಲೈ ರಾಜಶ್ರೇಷ್ಠನೇ, ಆಗ ಕತ್ತಲೆ ಮತ್ತು ಮೋಡಗಳಿಂದ ಆವೃತವಾದಂತಿದ್ದ ಮಹಾಭಯಂಕರವಾದ, ಅತ್ಯಂತ ದಾರುಣವಾದ ನಿಶಾಮುಖದಲ್ಲಿ ಬಲ-ವೃಕ-ಗೃಧ್ರಗಳಿಗೆ ಸಂತೋಷವನ್ನು ಕೊಡುವ ಮಹಾತ್ಮರ ಅದ್ಭುತವಾದ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಚತ್ವಾರಿಂಶದಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೆರಡನೆಯ ಅಧ್ಯಾಯ

ಸಾತ್ಯಕಿಯಿಂದ ಸೋಮದತ್ತನ ಪರಾಜಯ. ಅಶ್ವತ್ಥಾಮ-ಘಟೋತ್ಕಚರ ಯುದ್ಧ. ಅಶ್ವತ್ಥಾಮರಿಂದ ದ್ರುಪದಪುತ್ರರ ಮತ್ತು ಕುಂತಿಭೋಜಪುತ್ರರ ವಧೆ.

ಸಂಜಯಃ

ಪ್ರಾಯೋಪವಿಷ್ಟೇ ತು ಹತೇ ಪುತ್ರೇ ಸಾತ್ಯಕಿನಾ ತತಃ ।
ಸೋಮದತ್ತೋ ಭೃಶಂ ಕ್ರುದ್ಧಃ ಸಾತ್ಯಕಿಂ ವಾಕ್ಯಮಬ್ರವೀತ್ ॥ ೧ ॥

ಸಂಜಯ– ಪ್ರಾಯೋಪವಿಷ್ಟನಾದ ತನ್ನ ಪುತ್ರನು ಸಾತ್ಯಕಿಯಿಂದ ಹತನಾಗುತ್ತಿರಲು ಸೋಮದತ್ತನು ಬಹಳ ಕೋಪಗೊಂಡು ಸಾತ್ಯಕಿಯನ್ನು ಕುರಿತು ಹೇಳಿದನು.

ಕ್ಷತ್ರಧರ್ಮಃ ಪುರಾ ದೃಷ್ಟೋ ಯಸ್ತು ದೇವೈರ್ಮಹಾತ್ಮಭಿಃ ।
ತಂ ತ್ವಂ ಸಾತ್ವತ ಸಂತ್ಯಜ್ಯ ದಸ್ಯುಧರ್ಮೇ ಕಥಂ ರತಃ ॥ ೨ ॥

ಎಲೈ ಸಾತ್ವತನೇ, ಮಹಾತ್ಮರಾದ ದೇವತೆಗಳು ಹಿಂದೆ ಕಂಡುಕೊಂಡ ಕ್ಷತ್ರಿಯ ಧರ್ಮವನ್ನು ಪರಿತ್ಯಜಿಸಿ ನೀನು ಹೇಗೆ ದಸ್ಯುಧರ್ಮದಲ್ಲಿ ನಿರತನಾಗಿದ್ದೀಯೆ?

ಪರಾಙ್ಮುಖಾಯ ದೀನಾಯ ನ್ಯಸ್ತಶಸ್ತ್ರಾಯ ಯಾಚತೇ ।
ಕ್ಷತ್ರಧರ್ಮರತಃ ಪ್ರಾಜ್ಞಃ ಕಥಂ ನು ಪ್ರಹರೇದ್ ರಣೇ ॥ ೩ ॥

ಯುದ್ಧ ಪರಾಙ್ಮುಖನಾದವನಿಗೆ, ದೀನನಾದವನಿಗೆ, ಶಸ್ತ್ರಸಂನ್ಯಾಸ ಮಾಡಿದವನಿಗೆ, ಬೇಡುವವನಿಗೆ ಕ್ಷತ್ರಧರ್ಮನಿಷ್ಠನಾದ ಯಾವ ಪ್ರಾಜ್ಞನು ಯುದ್ಧದಲ್ಲಿ ಹೊಡೆದಾನು?

ದ್ವಾವೇವ ಕಿಲ ವೃಷ್ಣೀನಾಂ ತತ್ರ ಖ್ಯಾತೌ ಮಹಾರಥೌ ।
ಪ್ರದ್ಯುಮ್ನಶ್ಚ ಮಹಾಬಾಹುಸ್ತ್ವಂ ಚೈವ ಯುಧಿ ಸಾತ್ವತ ॥ ೪ ॥

ಎಲೈ ಸಾತ್ವತನೇ, ವೃಷ್ಣಿಗಳ ಮಧ್ಯದಲ್ಲಿ ಪ್ರಖ್ಯಾತರಾದ ಮಹಾರಥರು ಇಬ್ಬರಯಷ್ಟೆ? ಒಬ್ಬನು ಮಹಾಬಾಹುವಾದ ಪ್ರದ್ಯುಮ್ನ ಮತ್ತು ಇನ್ನೊಬ್ಬನು ನೀನೆ.

ಕಥಂ ಪ್ರಾಯೋಪವಿಷ್ಟಾಯ ಪಾರ್ಥೇನ ಛಿನ್ನಬಾಹವೇ ।
ನೃಶಂಸಂ ಪತನೀಯಂ ಚ ತಾದೃಶಂ ಕೃತವಾನಸಿ ॥ ೫ ॥

ಅರ್ಜುನನಿಂದ ಬಾಹುವು ಕತ್ತರಿಸಲ್ಪಟ್ಟುಪ್ರಾಯೋಪವೇಶಕ್ಕೆ ಕುಳಿತ ಅವನಿಗೆ ಕ್ರೂರವೂ, ನೀಚವೂ ಆದ ಕಾರ್ಯವನ್ನು ನೀನು ಹೇಗೆ ಮಾಡಿದೆ?

ಶಪೇ ಸಾತ್ವತ ಪುತ್ರಾಭ್ಯಾಮಿಷ್ಟೇನ ಸುಕೃತೇನ ಚ ।
ಅನತೀತಾಮಿಮಾಂ ರಾತ್ರಿಂ ಯದಿ ತ್ವಾಂ ವೀರಮಾನಿನಮ್ ॥ ೬ ॥

ಆರಕ್ಷ್ಯಮಾಣಂ ಪಾರ್ಥೇನ ಜಿಷ್ಣುನಾ ಸಸುತಾನುಜಮ್ ।
ನ ಹನ್ಯಾಂ ನಿರಯೇ ಘೋರೇ ಪತೇಯಂ ವೃಷ್ಣಿಪಾಂಸನ ॥ ೭ ॥

ಎಲೈ ಸಾತ್ವತನೇ, ನನ್ನ ಪುತ್ರರ ಮೇಲೆ, ಬಂಧುಗಳ ಮೇಲೆ, ಪುಣ್ಯದ ಮೇಲೆ ಆಣೆ ಮಾಡಿ ಹೇಳುತ್ತಿದ್ದೇನೆ. ಈ ರಾತ್ರಿ ಅರ್ಜುನನಿಂದ ರಕ್ಷಿಸಲ್ಪಡದಿದ್ದರೆ ವೀರಮಾನಿಯಾದ ನಿನ್ನನ್ನು ನಿನ್ನ ಮಕ್ಕಳು ಮತ್ತು ಸಹೋದರರ ಜೊತೆಯಲ್ಲಿ ಈ ರಾತ್ರಿಯು ಕಳೆಯುವುದರೊಳಗೆ ಕೊಲ್ಲದಿದ್ದರೆ ಎಲೈ ವೃಷ್ಣಿಪಾಂಸನನೇ, ನಾನು ಘೋರವಾದ ನರಕದಲ್ಲಿ ಬಿದ್ದೇನು (ಎಂದು ಹೇಳಿದನು).

ಏವಮುಕ್ತ್ವಾ ಸುಸಂಕ್ರುದ್ಧಃ ಸೋಮದತ್ತೋ ಮಹಾಬಲಃ ।
ದಧ್ಮೌ ಶಂಖಂ ಚ ತಾರೇಣ ಸಿಂಹನಾದಂ ನನಾದ ಚ ॥ ೮ ॥

ಹೀಗೆ ಹೇಳಿ ಬಹಳ ಕೋಪಗೊಂಡವನೂ, ಮಹಾಬಲನೂ ಆದ ಸೋಮದತ್ತನು ತಾರಸ್ವರದಲ್ಲಿ ತನ್ನ ಶಂಖವನ್ನು ಊದಿ ಸಿಂಹನಾದವನ್ನು ಮಾಡಿದನು.

ತತಃ ಕಮಲಪತ್ರಾಕ್ಷಃ ಸಿಂಹದಂಷ್ಟ್ರೋ ಮಹಾಬಲಃ ।
ಸಾತ್ವತೋ ಭೃಶಸಂಕ್ರುದ್ಧಃ ಸೋಮದತ್ತಮಥಾಬ್ರವೀತ್ ॥ ೯ ॥

ಆಗ ಕಮಲಪತ್ರಾಕ್ಷನೂ, ಸಿಂಹದಂಷ್ಟ್ರನೂ, ಮಹಾಬಲನೂ ಆದ ಸಾತ್ವತನು ಬಹಳ ಕೋಪಗೊಂಡು ಸೋಮದತ್ತನನ್ನು ಕುರಿತು ಹೇಳಿದನು.

ಹತೋ ಭೂರಿಶ್ರವಾ ವೀರಸ್ತವ ಪುತ್ರೋ ಮಹಾರಥಃ ।
ಶಲಶ್ಚೈವ ತಥಾ ರಾಜನ್ ಭ್ರಾತೃವ್ಯಸನಕರ್ಶಿತಃ ॥ ೧೦ ॥

ಎಲೈ ರಾಜನೇ, ನಿನ್ನಪುತ್ರನೂ, ಮಹಾರಥನೂ, ವೀರನೂ ಆದ ಭೂರಿಶ್ರವನು ಹತನಾಗಿದ್ದಾನೆ. ಹಾಗೆಯೇ ಅಣ್ಣನ ವ್ಯಸನದಿಂದ ಕರ್ಶಿತನಾದ ಶಲನೂ ಹತನಾಗಿದ್ದಾನೆ.

ತ್ವಾಂ ಚಾಪ್ಯದ್ಯ ವಧಿಷ್ಯಾಮಿ ಸಪುತ್ರಪಶುಬಾಂಧವಮ್ ।
ತಿಷ್ಠೇದಾನೀಂ ರಣೇ ಯತ್ತಃ ಕೌರವೋಽಸಿ ವಿಶೇಷತಃ ॥ ೧೧ ॥

ನಿನ್ನನ್ನೂ ಸಹ ಪಶು-ಪುತ್ರ-ಬಾಂಧವರ ಜೊತೆಯಲ್ಲಿ ಈ ದಿನ ಕೊಲ್ಲುವೆನು. ರಣರಂಗದಲ್ಲಿ ಈಗ ಸ್ಥಿರವಾಗಿ ನಿಲ್ಲುವವನಾಗು. ನೀನು ವಿಶೇಷವಾಗಿ ಕೌರವನಾಗಿದ್ದೀಯಷ್ಟೆ?

ಯಸ್ಮಿನ್ ದಾನಂ ದಮಃ ಶೌಚಮಹಿಂಸಾ ಹ್ರೀರ್ಧೃತಿಃ ಕ್ಷಮಾ ।
ಅನಪಾಯೀನಿ ಸರ್ವಾಣಿ ನಿತ್ಯಂ ರಾಜ್ಞಿ ಯುಧಿಷ್ಠಿರೇ ॥ ೧೨ ॥

ಮೃದಂಗಕೇತೋಸ್ತನ್ಯ ತ್ವಂ ತೇಜಸಾ ನಿಹತಃ ಪುರಾ ।
ಸಕರ್ಣಸೌಬಲಃ ಸಂಖೇ ವಿನಾಶಂ ಸಮುಪೇಷ್ಯಸಿ ॥ ೧೩ ॥

ಯಾವ ಯುಧಿಷ್ಠಿರನಲ್ಲಿ ದಾನ, ಇಂದ್ರಿಯನಿಗ್ರಹ, ಶೌಚ, ಅಹಿಂಸೆ, ನಾಚಿಕೆ, ಧೈರ್ಯ, ಸಹನೆ- ಈ ಎಲ್ಲ ಗುಣಗಳೂ ಎಂದೂ ಹೋಗದೆ ನಿತ್ಯದಲ್ಲಿಯೂ ನೆಲೆಸಿವೆಯೋ ಅಂತಹ ಮೃದಂಗಧ್ವಜನಾದ ಅವನ ತೇಜಸ್ಸಿನಿಂದಲೇ ನೀನು ಮೊದಲೇ ಮೃತನಾಗಿದ್ದೀಯೆ. ಇನ್ನು ಕರ್ಣ-ಶಕುನಿಗಳ ಜೊತೆಯಲ್ಲಿ ರಣರಂಗದಲ್ಲಿ ವಿನಾಶವನ್ನು ಹೊಂದುವಿ.

ಶಪೇಽಹಂ ಕೃಷ್ಣಚರಣೈರಿಷ್ಟಾಪೂರ್ತೇನ ಚೈವ ಹ ।
ಯದಿ ತ್ವಾಂ ಸಸುತಂ ಪಾಪಂ ನ ಹನ್ಯಾಂ ಯುಧಿ ರೋಷಿತಃ ।
ಅಪಯಾನ್ಯಸಿ ಚೇತ್ಕ್ಷತ್ತ್ವಾ ತತೋ ಮುಕ್ತೋ ಭವಿಷ್ಯಸಿ ॥ ೧೪ ॥

ಪಾಪಿಯಾದ ನಿನ್ನನ್ನು ನಾನು ರೋಷದಿಂದ ಕೂಡಿ ಯುದ್ಧದಲ್ಲಿ ಕೊಲ್ಲದಿದ್ದರೆ ನಾನು ಕೃಷ್ಣನ ಪಾದಗಳ ಮೇಲೆ ಮತ್ತು ನನ್ನ ಇಷ್ಟಾಪೂರ್ತಗಳ ಮೇಲೆ ಆಣೆಯನ್ನು ಮಾಡಿ ಹೇಳುತ್ತಿದ್ದೇನೆ. ರಣರಂಗವನ್ನು ಬಿಟ್ಟು ಹೊರಗೆ ಹೋದರೆ ಮಾತ್ರ ನೀನು ಮುಕ್ತನಾಗುವಿ.

ಏವಮಾಭಾಷ್ಯ ಚಾನ್ಯೋನ್ಯಂ ಕ್ರೋಧಸಂರಕ್ತಲೋಚನೌ ।
ಪ್ರವೃತ್ತೌ ಶರಸಂಪಾತಂ ಕರ್ತುಂ ಪುರುಷಪತ್ತಮೌ ॥ ೧೫ ॥

ಕ್ರೋಧದಿಂದ ಕೆಂಪಾದ ಕಣ್ಣುಳ್ಳ ಪುರುಷಶ್ರೇಷ್ಠರಾದ ಅವರು ಪರಸ್ಪರವಾಗಿ ಹೀಗೆ ಮಾತನಾಡಿ ಬಾಣಗಳಿಂದ ಹೊಡೆಯಲು ಪ್ರವೃತ್ತರಾದರು.

ತತೋ ಗಜಸಹಸ್ರೇಣ ರಥಾನಾಮಯುತೇನ ಚ ।
ದುರ್ಯೋಧನಃ ಸೋಮದತ್ತಂ ಪರಿವಾರ್ಯ ವ್ಯವಸ್ಥಿತಃ ॥ ೧೬ ॥

ಆಗ ಸಹಸ್ರ ಗಜಗಳಿಂದಲೂ, ಹತ್ತು ಸಹಸ್ರ ರಥರಿಂದಲೂ ದುರ್ಯೋಧನನು ಸೋಮದತ್ತನನ್ನು ಸುತ್ತುವರಿದು (ಅವನ ರಕ್ಷಣೆಗಾಗಿ) ನಿಂತನು.

ಶಕುನಿಶ್ಚ ಸುಸಂಕ್ರುದ್ಧಃ ಸರ್ವಶಸ್ತ್ರಭೃತಾಂ ವರಃ ।
ಪುತ್ರಪೌತ್ರೈಃ ಪರಿವೃತೋ ಭ್ರಾತೃಭಿಶ್ಚೇಂದ್ರವಿಕ್ರಮೈಃ ।
ಸ್ಯಾಲಸ್ತವ ಮಹಾಬಾಹುರ್ವಜ್ರಸಂಹನನೋ ಯುವಾ ॥ ೧೭ ॥

ಸಾಗ್ರಂ ಶತಸಹಸ್ರಂ ತು ಹಯಾನಾಂ ತಸ್ಯ ಧೀಮತಃ ।
ಸೋಮದತ್ತಂ ಮಹೇಷ್ವಾಸಂ ಸಮಂತಾತ್ ಪರ್ಯರಕ್ಷತ ॥ ೧೮ ॥

ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಬಹಳ ಕೋಪಗೊಂಡ, ನಿನ್ನ ಭಾವಮೈದುನನೂ, ಮಹಾಬಾಹುವೂ, ವಜ್ರಶರೀರವುಳ್ಳ ಯೋಧನೂ ಆದ ಶಕುನಿಯು ಪುತ್ರ-ಪೌತ್ರರಿಂದಲೂ, ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಸೋದರರಿಂದಲೂ ಸಹಿತನಾಗಿ ಮೇಧಾವಿಯಾದ ತನ್ನ ಬಳಿ ಇದ್ದ ಒಂದು ಲಕ್ಷ ಅಶ್ವಗಳ ಜೊತೆಯಲ್ಲಿ ಮಹಾಧನುರ್ಧಾರಿಯಾದ ಸೋಮದತ್ತನನ್ನು ಎಲ್ಲ ಕಡೆಗಳಿಂದಲೂ ರಕ್ಷಿಸಿದನು.

ರಕ್ಷ್ಯಮಾಣಶ್ಚ ಬಲಿಭಿಶ್ಚಾದಯಾಮಾಸ ಸಾತ್ಯಕಿಮ್ ।
ತಂ ಛಾದ್ಯಮಾನಂ ವಿಶಿಖೈರ್ದುಷ್ಪ್ರಾಪ್ತಾ ಸನ್ನತಪರ್ವಭಿಃ ।
ಧೃಷ್ಟದ್ಯುಮ್ನೋಽಭ್ಯಯಾತ್ ಕ್ರುದ್ಧಃ ಪ್ರಗೃಹ್ಯ ಮಹತೀಂ ಚಮೂಮ್ ॥

ಬಲಿಷ್ಠರಿಂದ ರಕ್ಷಿಸಲ್ಪಟ್ಟ ಸೋಮದತ್ತನು ಸಾತ್ಯಕಿಯನ್ನು ಬಾಣಗಳಿಂದ ಮುಚ್ಚಿಹಾಕಿದನು. ಬಾಗಿದ ತುದಿಯುಳ್ಳ ಬಾಣಗಳಿಂದ ಸಾತ್ಯಕಿಯು ಮುಚ್ಚಲ್ಪಡುವುದನ್ನು ನೋಡಿ ಕೋಪಗೊಂಡ ಧೃಷ್ಟದ್ಯುಮ್ನನು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಅವನ ರಕ್ಷಣೆಗಾಗಿ ಬಂದನು.

ಚಂಡವಾತಾಭಿಸೃಷ್ಟಾನಾಮುದಧೀನಾಮಿವ ಸ್ವನಃ ।
ಆಸೀದ್ರಾಜನ್ ಬಲೌಘಾನಾಮನ್ಯೋನ್ಯಮಭಿನಿಘ್ನತಾಮ್ ॥ ೨೦ ॥

ಎಲೈ ರಾಜನೇ, ಪರಸ್ಪರವಾಗಿ ಹೊಡೆದಾಡುವ ಎರಡು ಸೈನ್ಯಗಳಿಂದ ಉಂಟಾದ ಧ್ವನಿಯು ಬಿರುಗಾಳಿಗೆ ಎದ್ದ ಸಮುದ್ರಗಳ ಘೋಷದಂತೆ ಇದ್ದಿತು.

ಏವ್ಯಾಧ ಸೋಮದತ್ತಸ್ತು ಸಾತ್ವತಂ ನವಭಿಃ ಶರೈಃ ।
ಸಾತ್ಯಕಿರ್ದಶಭಿಶ್ಚೈನಮವಧೀತ್ ಕುರುಪುಂಗವಮ್ ॥ ೨೧ ॥

ಸೋಮದತ್ತನು ಸಾತ್ಯಕಿಯನ್ನು ಒಂಬತ್ತು ಬಾಣಗಳಿಂದ ಹೊಡೆದನು. ಸಾತ್ಯಕಿಯು ಕುರುಶ್ರೇಷ್ಠನಾದ ಸೋಮದತ್ತನನ್ನು ಹತ್ತು ಬಾಣಗಳಿಂದ ಹೊಡೆದನು.

ಸೋಽತಿವಿದ್ಧೋ ಬಲವತಾ ಸಮರೇ ದೃಢಧನ್ವನಾ ।
ರಥೋಪಸ್ಥಂ ಸಮಾಸಾದ್ಯ ಮುಮೋಹ ಗತಚೇತನಃ ॥ ೨೨ ॥

ದೃಢ ಧನುಸ್ಸನ್ನು ಹೊಂದಿದ ಬಲಿಷ್ಠನಾದ ಸಾತ್ಯಕಿಯಿಂದ ರಣರಂಗದಲ್ಲಿ ಗಾಢವಾಗಿ ಹೊಡೆಯಲ್ಪಟ್ಟ ಸೋಮದತ್ತನು ರಥಪೀಠದ ಬಳಿಗೆ ಬಂದು ಪ್ರಜ್ಞೆಯನ್ನು ಕಳೆದುಕೊಂಡು ಮೂರ್ಛೆ ಹೋದನು.

ತಂ ವಿಮೂಢಂ ಸಮಾಲಕ್ಷ್ಯ ಸಾರಥಿಸ್ತ್ವರಯಾಽನ್ವಿತಃ ।
ಅಪೋವಾಹ ರಣಾದ್ ವೀರಂ ಸೋಮದತ್ತಂ ಮಹಾರಥಮ್ ॥

ಅವನು ಮೂರ್ಛೆ ಹೋದುದನ್ನು ಗಮನಿಸಿದ ಅವನ ಸಾರಥಿಯು ತ್ವರೆಯಿಂದ ಕೂಡಿದವನಾಗಿ ಮಹಾರಥನಾದ, ವೀರನಾದ ಸೋಮದತ್ತನನ್ನು ರಣರಂಗದಿಂದ ಹೊರಗೆ ಕರೆದುಕೊಂಡು ಹೋದನು.

ತಂ ವಿಸಂಜ್ಞಂ ಸಮಾಲೋಕ್ಯ ಯುಯುಧಾನಶರಾರ್ದಿತಮ್ ।
ದ್ರೌಣಿರಭ್ಯದ್ರವತ್ ಕ್ರುದ್ಧಃ ಸಾತ್ವತಂ ರಣಮೂರ್ಧನಿ ॥ ೨೪ ॥

ಸಾತ್ಯಕಿಯ ಬಾಣಗಳಿಂದ ಪೀಡಿತನಾಗಿ ಸೋಮದತ್ತನು ಮೂರ್ಛೆ ಹೋದುದನ್ನು ನೋಡಿ ಕೋಪಗೊಂಡ ಅಶ್ವತ್ಥಾಮರು ರಣರಂಗದಲ್ಲಿ ಸಾತ್ವತನ ಮೇಲೆ ಧಾವಿಸಿ ಬಂದರು.

ತಮಾಪತಂತಂ ಸಂಪ್ರೇಕ್ಷ್ಯ ಶೈನೇಯಸ್ಯ ರಥಂ ಪ್ರತಿ ।
ಭೈಮಸೇನಿಃ ಸುಸಂಕ್ರುದ್ಧಃ ಪ್ರತ್ಯಮಿತ್ರಮವಾರಯತ್ ॥ ೨೫ ॥

ಸಾತ್ಯಕಿಯ ರಥದ ಕಡೆಗೆ ಶೀಘ್ರವಾಗಿ ಬರುತ್ತಿದ್ದ ಅವರನ್ನು ನೋಡಿ ಭೀಮಸೇನನ ಪುತ್ರನಾದ ಘಟೋತ್ಕಚನು ಬಹಳ ಕೋಪಗೊಂಡು ಶತ್ರುವಾದ ಅಶ್ವತ್ಥಾಮರನ್ನು ತಡೆದನು.

ಕಾರ್ಷ್ಣಾಯಸಮಯಂ ಘೋರಮೃಕ್ಷಚರ್ಮಾವೃತಂ ಮಹತ್ ।
ಯುಕ್ತಂ ಗಜನಿಭೈರ್ವಾಹೈರ್ನ ಹಯೈರ್ನಾಪಿ ವಾ ಗಜೈಃ ॥ ೨೬ ॥

ವಿಸ್ಪಷ್ಟಮಷ್ಟಚಕ್ರೇಣ ವಿವೃತಾಕ್ಷೇಣ ಕೂಜತಾ ।
ಧ್ವಜೇನೋಚ್ಛ್ರಿತತುಂಡೇನ ಗೃಧ್ರರಾಜೇನ ರಾಜತಾ ॥ ೨೭ ॥

ಲೋಹಿತಾರ್ದ್ರಪತಾಕಂ ತಮಾಂತ್ರಮಾಲಾವಿಭೂಷಿತಮ್ ।
ಅಷ್ಟಚಕ್ರಸಮಾಯುಕ್ತಮಾಸ್ಥಾಯ ವಿಪುಲಂ ರಥಮ್ ॥ ೨೮ ॥

ಶೂಲಮುದ್ಗರಧಾರಿಣ್ಯಾ ಶೈಲಪಾದಪಹಸ್ತಯಾ ।
ರಕ್ಷಸಾಂ ಘೋರರೂಪಾಣಾಮಕ್ಷೌಹಿಣ್ಯಾ ಸಮಾವೃತಃ ॥ ೨೯ ॥

ಕಬ್ಬಣದಿಂದ ಮಾಡಲ್ಪಟ್ಟು ಕರಡಿಯ ಚರ್ಮದಿಂದ ಆವೃತವಾದ, ದೊಡ್ಡದಾದ ಮತ್ತು ಘೋರವಾದ, ಆಶ್ವಗಳಿಂದಲೂ ಅಲ್ಲದೆ ಗಜಗಳಿಂದಲೂ ಅಲ್ಲದೆ ಗಜದಂತಹ ಆಶ್ವಗಳಿಂದ ಹೂಡಲ್ಪಟ್ಟ, ಎಂಟು ಚಕ್ರಗಳಿಂದ ಕೂಡಿದ, ಸ್ಪಷ್ಟವಾಗಿ ಕಾಣುವ ನಾದವನ್ನು ಮಾಡುವ ತೂಬಿನಿಂದ ಕೂಡಿದ, ಬಾಯಿ ತೆರೆದ ಗೃಧ್ರ ರಾಜನ ಧ್ವಜದಿಂದ ವಿರಾಜಿಸುವ, ರಕ್ತದಿಂದ ಆರ್ದ್ರವಾದಂತಹ ಪತಾಕೆಯನ್ನು ಹೊಂದಿದ, ಕರುಳಿನ ಮಾಲೆಗಳಿಂದ ವಿಭೂಷಿತವಾದ, ಎಂಟುಮೂಲೆಗಳಿಂದ ಕೂಡಿದ, ಶೂಲ-ಮುದ್ಗರಾದಿ ಶಸ್ತ್ರಗಳನ್ನು ಹೊಂದಿದ, ವಿಸ್ತಾರವಾದ ರಥವನ್ನು ಏರಿ, ಶೈಲಗಳನ್ನೂ ಮತ್ತು ವೃಕ್ಷಗಳನ್ನೂ ಕೈಯಲ್ಲಿ ಹಿಡಿದ, ಘೋರರೂಪರಾದ ರಾಕ್ಷಸರ ಒಂದು ಅಕ್ಷೌಹಿಣಿ ಸೈನ್ಯದಿಂದ ಕೂಡಿ (ಅಶ್ವತ್ಥಾಮರ ಕಡೆಗೆ ಧಾವಿಸಿದನು).

ತಮುದ್ಯತಮಹಾಚಾಪಂ ನಿಶಾಮ್ಯ ವ್ಯಥಿತಾ ನೃಪಾಃ ।
ಯುಗಾಂತಕಾಲಸಮಯೇ ದಂಡಹಸ್ತಮಿವಾಂತಕಮ್ ॥ ೩೦ ॥

ಯುಗಾಂತಕಾಲದಲ್ಲಿ ಕೈಯಲ್ಲಿ ದಂಡವನ್ನು ಹಿಡಿದ ಯಮನಂತೆ ಇರುವ, ಧನುಸ್ಸನ್ನು ಎತ್ತಿ ಹಿಡಿದ, ಅವನನ್ನು ನೋಡಿ ಕೌರವ ರಾಜರು ವ್ಯಥೆಯನ್ನು ಹೊಂದಿದರು.

ಭಯಾರ್ದಿತಾ ಪ್ರಚುಕ್ಷೋಭ ಪುತ್ರಸ್ಯ ತವ ವಾಹಿನೀ ।
ವಾಯುನಾ ಕ್ಷೋಭಿತಾವರ್ತಾ ಗಂಗೇವೋರ್ದ್ಧತರಂಗಿಣೀ ॥ ೩೧ ॥

ಬಿರುಗಾಳಿಯಿಂದ ಸುಳಿಗಳಿಗೆ ಕ್ಷೋಭೆ ಉಂಟಾದ, ಊರ್ಧ್ವಗಾಮಿಯಾದ ಗಂಗೆಯಂತೆ ನಿನ್ನ ಪುತ್ರನ ಸೈನ್ಯವು ಭಯದಿಂದ ಪೀಡಿತವಾಗಿ ಕ್ಷೋಭೆಯನ್ನು ಹೊಂದಿತು.

ಘಟೋತ್ಕಚಪ್ರಯುಕ್ತೇನ ಸಿಂಹನಾದೇನ ಭೀಷಿತಾಃ ।
ಪ್ರಸುಸ್ರುವುರ್ಗಜಾ ಮೂತ್ರಂ ವಿವ್ಯಥುಶ್ಚ ನರಾ ಭೃಶಮ್ ॥ ೩೨ ॥

ಘಟೋತ್ಕಚನು ಮಾಡಿದ ಸಿಂಹನಾದದಿಂದ ಭೀಷಿತರಾಗಿ ಗಜಗಳು ಮೂತ್ರವನ್ನು ಸುರಿಸಿದವು, ಯೋಧರು ಬಹಳ ವ್ಯಥೆಯಿಂದ ಕೂಡಿದರು.

ತತೋಽಶ್ಮವೃಷ್ಟಿರತ್ಯರ್ಥಮಾಸೀತ್ ತತ್ರ ಸಮಂತತಃ ।
ಸಂಧ್ಯಾಕಾಲಾಧಿಕಬಲೈಃ ಪ್ರಮುಕ್ತಾ ರಾಕ್ಷಸೈಃ ಕ್ಷಿತೌ ॥ ೩೩ ॥

ಅನಂತರ ಸಂಧ್ಯಾಕಾಲದಲ್ಲಿ ವಿಶೇಷ ಬಲದಿಂದ ಯುಕ್ತರಾಗುವ ಆ ರಾಕ್ಷಸರಿಂದ ಪ್ರೇರಿಸಲ್ಪಟ್ಟ ಕಲ್ಲುಗಳ ಮಳೆಯು ಎಲ್ಲ ಕಡೆಗಳಲ್ಲಿಯೂ ಭೂಮಿಯ ಮೇಲೆ ಬಿದ್ದಿತು.

ಆಯಸಾನಿ ಚ ಚಕ್ರಾಣಿ ಭುಶುಂಡ್ಯಃ ಪ್ರಾಸತೋಮರಾಃ ।
ಪತಂತ್ಯವಿರಲಾಃ ಶೂಲಾಃ ಶತಘ್ನ್ಯಃ ಪಟ್ಟಶಾಸ್ತಥಾ ॥ ೩೪ ॥

ಕಬ್ಬಿಣದ ಚಕ್ರಗಳು, ಭುಶುಂಡಿಗಳು, ಪ್ರಾಸ-ತೋಮರಗಳು, ನಿಬಿಡವಾದ ಶೂಲಗಳು, ಶತಘ್ನಿಗಳು ಮತ್ತು ಪಟ್ಟಸಗಳು ಬಿದ್ದವು.

ತದುಗ್ರಮತಿರೌದ್ರಂ ಚ ದೃಷ್ಟ್ವಾ ಯುದ್ಧಂ ನರಾಧಿಪಾಃ ।
ತನಯಾಸ್ತವ ಕರ್ಣಶ್ಚ ವ್ಯಥಿತಾಃ ಪ್ರಾದ್ರವನ್ ದಿಶಃ ॥ ೩೫ ॥

ಅತ್ಯಂತ ಭಯಂಕರವಾದ ಆ ಯುದ್ಧವನ್ನು ನೋಡಿ ರಾಜರೂ, ನಿನ್ನ ಪುತ್ರರೂ ಮತ್ತು ಕರ್ಣನೂ ವ್ಯಥೆಯಿಂದ ಕೂಡಿದವರಾಗಿ ದಿಕ್ಕು-ದಿಕ್ಕುಗಳಿಗೆ ಓಡಿ ಹೋದರು.

ತತ್ಕೃತೋಽಸ್ತ್ರಬಲಶ್ಲಾಘೀ ದ್ರೌಣಿರ್ಮಾನೀ ನ ವಿವ್ಯಥೇ ।
ವ್ಯಧಮಚ್ಚ ಶರೈರ್ಮಾಯಾಂ ಘಟೋತ್ಕಚವಿನಿರ್ಮಿತಾಮ್ ॥ ೩೬ ॥

ಅವರಲ್ಲಿ ಅಸ್ತ್ರಬಲವನ್ನು ಶ್ಲಾಘಿಸುವ, ಆತ್ಮಾಭಿಮಾನವುಳ್ಳ ಅಶ್ವತ್ಥಾಮರೊಬ್ಬರು ವ್ಯಥೆಯನ್ನು ಹೊಂದಲಿಲ್ಲ. ಅವರು ಘಟೋತ್ಕಚನಿಂದ ನಿರ್ಮಿತವಾದ ಮಾಯೆಯನ್ನು ತಮ್ಮ ಬಾಣಗಳಿಂದ ವಿನಾಶಗೊಳಿಸಿದರು.

ನಿಹತಾಯಾಂ ತು ಮಾಯಾಯಾಮಮರ್ಷೀ ಸ ಘಟೋತ್ಕಚಃ ।
ವಿಸಸರ್ಜ ಶರಾನ್ ಘೋರಾಂಸ್ತೇಽಶ್ವತ್ಥಾಮಾನಮಾವಿಶನ್ ।
ಭುಜಗಾ ಇವ ವೇಗೇನ ವಲ್ಮೀಕಂ ಕ್ರೋಧಮೂರ್ಚ್ಛಿತಾಃ ॥ ೩೭ ॥

ತನ್ನ ಮಾಯೆಯು ನಾಶವನ್ನು ಹೊಂದುತ್ತಿರಲು ರೋಷಗೊಂಡ ಘಟೋತ್ಕಚನು ಘೋರವಾದ ಬಾಣಗಳನ್ನು ಪ್ರಯೋಗಿಸಿದನು. ಅವು ಕ್ರೋಧ ಮೂರ್ಛಿತವಾದ ಸರ್ಪಗಳು ವೇಗವಾಗಿ ಹುತ್ತದೊಳಗೆ ಹೋಗುವಂತೆ ಅಶ್ವತ್ಥಾಮರ ಶರೀರವನ್ನು ಪ್ರವೇಶಿಸಿದವು.

ತೇ ಶರಾ ರುಧಿರಾಭ್ಯಕ್ತಾ ಭಿತ್ತ್ವಾ ಶಾರದ್ವತೀಸುತಮ್ ।
ವಿವಿಶುರ್ಧರಣೀಂ ಶೀಘ್ರಾ ರುಗ್ಮಪುಂಖಾಃ ಶಿಲಾಶಿತಾಃ ॥ ೩೮ ॥

ರುಗ್ಮಪುಂಖಗಳನ್ನು ಹೊಂದಿ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ರಕ್ತಸಿಕ್ತವಾದ ಆ ಬಾಣಗಳು ಶಾರದ್ವತೀ ಪುತ್ರರಾದ ಅಶ್ವತ್ಥಾಮರನ್ನು ಭೇದಿಸಿ ಶೀಘ್ರವಾಗಿ ಭೂಮಿಯಲ್ಲಿ ಇಳಿದವು.

ಅಶ್ವತ್ಥಾಮಾ ತು ಸಂಕ್ರುದ್ಧೋ ಲಘುಹಸ್ತಃ ಪ್ರತಾಪವಾನ್ ।
ಘಟೋತ್ಕಚಮಭಿಕ್ರುದ್ಧಂ ಬಿಭೇದ ದಶಭಿಃ ಶರೈಃ ॥ ೩೯ ॥

ಶೀಘ್ರ ಹಸ್ತರೂ, ಪ್ರತಾಪಶಾಲಿಗಳೂ ಆದ ಅಶ್ವತ್ಥಾಮರು ಬಹಳ ಕ್ರುದ್ಧರಾಗಿ ಕ್ರುದ್ಧನಾದ ಘಟೋತ್ಕಚನನ್ನು ಹತ್ತು ಬಾಣಗಳಿಂದ ಭೇದಿಸಿದರು.

ಘಟೋತ್ಕಚೋಽತಿವಿದ್ಧಸ್ತು ದ್ರೌಣಿಪುತ್ರೇಣ ಮರ್ಮಸು ।
ಚಕ್ರಂ ಶತಸಹಸ್ರಾರಮಗೃಹ್ಣಾದ್ ವ್ಯಥಿತೋ ಭೃಶಮ್ ॥ ೪೦ ॥

ದ್ರೋಣ ಪುತ್ರರಿಂದ ಮರ್ಮಸ್ಥಾನಗಳಲ್ಲಿ ಗಾಢವಾಗಿ ಹೊಡೆಯಲ್ಪಟ್ಟ ಘಟೋತ್ಕಚನು ಬಹಳ ವ್ಯಥೆಯಿಂದ ಕೂಡಿ ಶತಸಹಸ್ರ ಅರಗಳಿರುವ ಚಕ್ರವನ್ನು ತೆಗೆದುಕೊಂಡನು.

ಕ್ಷುರಾಂತಂ ಬಾಲಸೂರ್ಯಾಭಂ ಮಣಿವಜ್ರವಿಭೂಷಿತಮ್ ।
ಅಶ್ವತ್ಥಾಮ್ನಸ್ತು ಚಿಕ್ಷೇಪ ಭೈಮಸೇನಿರ್ಜಘಾಂಸಯಾ ॥ ೪೧ ॥

ಭೀಮಸೇನನ ಪುತ್ರನಾದ ಘಟೋತ್ಕಚನು ಕತ್ತಿಯಂತೆ ಅಲುಗನ್ನು ಹೊಂದಿದ್ದ, ಬಾಲಸೂರ್ಯ ಕಾಂತಿಯನ್ನು ಹೊಂದಿದ್ದ ಮಣಿವಜ್ರ ವಿಭೂಷಿತವಾದ ಆ ಚಕ್ರವನ್ನು ಅಶ್ವತ್ಥಾಮರನ್ನು ಕೊಲ್ಲಲು ಬಯಸಿ ಅವರ ಮೇಲೆ ಎಸೆದನು.

ವೇಗೇನ ಮಹತಾ ಗಚ್ಛದ್ ವಿಕ್ಷಿಪ್ತಂ ದ್ರೌಣಿನಾ ಶರೈಃ ।
ಅಭಾಗ್ಯಸ್ಯೇವ ಸಂಕಲ್ಪಸ್ತನ್ಮೋಘಂ ನ್ಯಪತದ್ ಭುವಿ ॥ ೪೨ ॥

ಘಟೋತ್ಕಚನಿಂದ ಪ್ರಯೋಗಿಸಲ್ಪಟ್ಟು ಬಹಳ ವೇಗದಿಂದ ಸಾಗುತ್ತಿದ್ದ ಆ ಚಕ್ರವು ಅಶ್ವತ್ಥಾಮರಿಂದ ಬಾಣಗಳಿಂದ ಭೇದಿಸಲ್ಪಟ್ಟು ಭಾಗ್ಯಹೀನನ ಸಂಕಲ್ಪದಂತೆ ವ್ಯರ್ಥವಾಗಿ ಭೂಮಿಯ ಮೇಲೆ ಬಿದ್ದಿತು.

ಘಟೋತ್ಕಚಸ್ಯತತ್ಸೂರ್ಣಂ ದೃಷ್ಟ್ವಾ ಚಕ್ರಂ ನಿಪಾತಿತಮ್ ।
ದ್ರೌಣಿಂ ಪ್ರಾಚ್ಛಾದಯದ್ ಬಾಣೈಃ ಸ್ವರ್ಭಾನುರಿವ ಭಾಸ್ಕರಮ್ ॥ ೪೩ ॥

ಘಟೋತ್ಕಚನು ತನ್ನ ಚಕ್ರವು ನಾಶ ಹೊಂದಿ ಭೂಮಿಯ ಮೇಲೆ ಬಿದ್ದುದನ್ನು ನೋಡಿ ತನ್ನ ಬಾಣಗಳಿಂದ ರಾಹುವು ಸೂರ್ಯನನ್ನು ಮುತ್ತಿದಂತೆ ಅಶ್ವತ್ಥಾಮರನ್ನು ಮುಚ್ಚಿಹಾಕಿದನು.

ಘಟೋತ್ಕಚಸುತಃ ಶ್ರೀಮಾನ್ ಭಿನ್ನಾಂಜನಚಯೋಪಮಃ ।
ರುರೋಧ ದ್ರೌಣಿಮಾಯಾಂತಂ ಪ್ರಭಂಜನಮಿವಾದ್ರಿರಾಟ್ ॥ ೪೪ ॥

ಘಟೋತ್ಕಚನ ಪುತ್ರನಾದ ಕಾಂತಿಯುಕ್ತನಾದ ಸ್ಪಷ್ಟವಾದ ಕಾಡಿಗೆಯ ರಾಶಿಯಂತಿದ್ದ ಕಾಂತಿಯುಕ್ತನಾದ ಅಂಜನಪರ್ವನು ಸಾಗಿ ಬರುತ್ತಿದ್ದ ಅಶ್ವತ್ಥಾಮರನ್ನು ವಾಯುವನ್ನು ಪರ್ವತವು ತಡೆಯುವಂತೆ ತಡೆದನು.

ಪೌತ್ರೇಣ ಭೀಮಸೇನಸ್ಯ ಶರೈಃ ಸೋಽಂಜನಪರ್ವಣಾ ।
ಬಭೌ ಮೇಘೇನ ಧಾರಾಭಿರ್ಗಿರಿರ್ಮೇರುರಿವಾರ್ದಿತಃ ॥ ೪೫ ॥

ಭೀಮಸೇನನ ಪೌತ್ರನಾದ ಅಂಜನಪರ್ವನಿಂದ ಬಾಣಗಳಿಂದ ಪೀಡಿಸಲ್ಪಟ್ಟ ಅಶ್ವತ್ಥಾಮರು ಮೇಘದಿಂದ ಜಲಧಾರೆಗಳಿಂದ ಪೀಡಿಸಲ್ಪಟ್ಟ ಪರ್ವತದಂತೆ ಶೋಭಿಸಿದರು.

ಅಶ್ವತ್ಥಾಮಾ ತ್ವಸಂಭ್ರಾಂತೋ ರುದ್ರೋಪೇಂದ್ರೇಂದ್ರವಿಕ್ರಮಃ ।
ಧ್ವಜಮೇಕೇನ ಬಾಣೇನ ಚಿಚ್ಛೇದಾಂಜನಪರ್ವಣಃ ॥ ೪೬ ॥

ರುದ್ರ-ಉಪೇಂದ್ರ-ಇಂದ್ರರ ಪರಾಕ್ರಮವನ್ನು ಹೊಂದಿದ ಅಶ್ವತ್ಥಾಮರಾದರೋ ಯಾವ ಗಾಬರಿಯೂ ಇಲ್ಲದೆ ಅಂಜನಪರ್ವನ ಧ್ವಜವನ್ನು ಕತ್ತರಿಸಿದರು.

ದ್ವಾಭ್ಯಾಂ ತು ರಥಯಂತಾರಂ ತ್ರಿಭಿಶ್ಚಾಸ್ಯ ತ್ರಿವೇಣುಕಮ್ ।
ಧನುರೇಕೇನ ಚಿಚ್ಛೇದ ಚತುರ್ಭಿಶ್ಚತುರೋ ಹಯಾನ್ ॥ ೪೭ ॥

ಎರಡು ಬಾಣಗಳಿಂದ ಅವನ ಸಾರಥಿಯನ್ನೂ, ಮೂರು ಬಾಣಗಳಿಂದ ರಥದ ತ್ರಿವೇಣುವನ್ನೂ, ಒಂದು ಬಾಣದಿಂದ ಅವನ ಧನುಸ್ಸನ್ನೂ, ನಾಲ್ಕು ಬಾಣಗಳಿಂದ ನಾಲ್ಕು ಅಶ್ವಗಳನ್ನೂ ಕತ್ತರಿಸಿದರು.

ವಿರಥಸ್ಯೈವ ತಂ ಹಸ್ತಾದ್ಧೇಮಬಿಂದುಭಿರಾಚಿತಮ್ ।
ವಿಶಿಖೇನ ಸುತೀಕ್ಷ್ಣೇನ ಖಡ್ಗಮಸ್ಯ ದ್ವಿಧಾಽಕರೋತ್ ॥ ೪೮ ॥

ರಥವನ್ನು ಕಳೆದುಕೊಂಡು ಚಿನ್ನದ ಬಿಂದುಗಳಿಂದ ನಿಬಿಡವಾದ ಖಡ್ಗವನ್ನು ಎತ್ತಿಹಿಡಿದ ಆಂಜನಪರ್ವನ ಖಡ್ಗವನ್ನು ತೀಕ್ಷ್ಣವಾದ ಬಾಣದಿಂದ ಎರಡು ಭಾಗವಾಗಿ ಕತ್ತರಿಸಿದರು.

ಗದಾ ಹೇಮಾಂಗದಾ ರಾಜಂಸ್ತೂರ್ಣಂ ಹೈಡಿಂಬಸೂನುನಾ ।
ಭ್ರಾಮ್ಯೋತ್ಕ್ಷಿಪ್ತಾ ಶರೈಃ ಸಾಪಿ ದ್ರೌಣಿನಾಭ್ಯಾಹತಾऽಪತತ್ ॥ ೪೯ ॥

ಎಲೈ ರಾಜನೇ, ಚಿನ್ನದ ಪಟ್ಟಿಯುಳ್ಳ ಗದೆಯು ಆಗ ಘಟೋತ್ಕಚಪುತ್ರನಿಂದ ಚೆನ್ನಾಗಿ ತಿರುಗಿಸಿ ಅಶ್ವತ್ಥಾಮರ ಮೇಲೆ ಎಸೆಯಲ್ಪಟ್ಟತು. ಅಶ್ವತ್ಥಾಮರು ಅದನ್ನೂ ಬಾಣಗಳಿಂದ ಹೊಡೆದು ಕೆಡವಿದರು.

ತತೋಽಂತರಿಕ್ಷಮುತ್ಪತ್ಯ ಕಾಲಮೇಘ ಇವೋನ್ನದನ್ ।
ವವರ್ಷಾಂಜನಪರ್ವಾ ಸ ದ್ರುಮವರ್ಷಂ ನಭಸ್ತಳಾತ್ ॥ ೫೦ ॥

ಅನಂತರ ಅಂಜನಪರ್ವನು ಕಾಲಮೇಘದಂತೆ ಗರ್ಜಿಸುತ್ತಾ ಅಂತರಿಕ್ಷಕ್ಕೆ ಹಾರಿ ಅಂತರಿಕ್ಷದಿಂದ ಅಶ್ವತ್ಥಾಮರ ಮೇಲೆ ವೃಕ್ಷಗಳ ಮಳೆಯನ್ನು ಸುರಿಸಿದನು.

ತತೋ ಮಾಯಾಧರಂ ದ್ರೌಣಿರ್ಘಟೋತ್ಕಚಸುತಂ ದಿವಿ ।
ಮಾರ್ಗಣೈರಭ್ಯವಿವ್ಯಾಧ ಘನಂ ಸೂರ್ಯ ಇವಾಂಶುಭಿಃ ॥ ೫೧ ॥

ಆಗ ಅಶ್ವತ್ಥಾಮರು ಮಾಯಾವಿಯಾದ ಘಟೋತ್ಕಚಪುತ್ರನನ್ನು ಆಕಾಶದಲ್ಲಿ ಮೋಡವನ್ನು ಸೂರ್ಯನು ತನ್ನ ಕಿರಣಗಳಿಂದ ನಾಶಪಡಿಸುವಂತೆ ತಮ್ಮ ಬಾಣಗಳಿಂದ ಹೊಡೆದರು.

ಸೋಽವತೀರ್ಯ ಪುನಸ್ತಸ್ಥೌ ರಥೇ ಹೇಮಪರಿಷ್ಕೃತೇ ।
ಮಹೀಧರ ಇವಾತ್ಯುಚ್ಚಃ ಶ್ರೀಮಾನಂಜನಪರ್ವತಃ ॥ ೫೨ ॥

ಕಾಂತಿಯುಕ್ತನಾದ ಅಂಜನಪರ್ವನು ಅಂತರಿಕ್ಷದಿಂದ ಇಳಿದು ಪುನಃ ಸುವರ್ಣಾಲಂಕೃತವಾದ ತನ್ನ ರಥದಲ್ಲಿ ಎತ್ತರವಾದ ಪರ್ವತದಂತೆ ನಿಂತನು.

ತಮಯಸ್ಮಯವರ್ಮಾಣಂ ದ್ರೌಣಿರ್ಭೀಮಾತ್ಮಜಾತ್ಮಜಮ್ ।
ಜಘಾನಾಂಜನಪರ್ವಾಣಂ ಮಹೇಶ್ವರ ಇವಾಂಧಕಮ್ ॥ ೫೩ ॥

ಭೀಮನ ಪುತ್ರನ ಪುತ್ರನಾದ, ಕಬ್ಬಿಣದ ಕವಚವನ್ನು ಧರಿಸಿದ ಅಂಜನಪರ್ವನನ್ನು ಅಶ್ವತ್ಥಾಮರು ಮಹೇಶ್ವರನು ಅಂಧಕಾಸುರನನ್ನು ಕೊಂದಂತೆ ಕೊಂದುಹಾಕಿದರು.

ಅಥ ದೃಷ್ಟ್ವಾ ಹತಂ ಪುತ್ರಮಶ್ವತ್ಥಾಮ್ನಾ ಮಹಾಬಲಮ್ ।
ದ್ರೌಣೇಃ ಸಕಾಶಮಭ್ಯೇತ್ಯ ರೋಷಾತ್ ಪ್ರಚಲಿತಾಂಗದಃ ॥ ೫೪ ॥

ಪ್ರಾಹ ವಾಕ್ಯಮಸಂಭ್ರಾಂತೋ ವೀರಂ ಶಾರದ್ವತೀಸುತಮ್ ।
ದಹಂತಂ ಪಾಂಡವಾನೀಕಂ ವನಮಗ್ನಿಮಿವೋದ್ಧತಮ್ ॥ ೫೫ ॥

ತಿಷ್ಠ ತಿಷ್ಠ ನ ಮೇ ಜೀವನ್ ದ್ರೋಣಪುತ್ರ ಗಮಿಷ್ಯಸಿ ।
ತ್ವಾಮದ್ಯ ನಿಹನಿಷ್ಯಾಮಿ ಕ್ರೌಂಚಮಗ್ನಿಸುತೋ ಯಥಾ ॥ ೫೬ ॥

ಮಹಾಬಲನಾದ ತನ್ನ ಪುತ್ರನು ಅಶ್ವತ್ಥಾಮರಿಂದ ಹತನಾದುದನ್ನು ನೋಡಿ ಘಟೋತ್ಕಚನು ರೋಷದಿಂದ ನಡುಗುವ ಬಾಹುಗಳನ್ನುಳ್ಳವನಾಗಿ ಅಶ್ವತ್ಥಾಮರ ಸಮೀಪಕ್ಕೆ ಬಂದು ಶಾರದ್ವತೀ ಸುತರೂ, ವೀರರೂ, ಉದ್ಧತವಾದ ಅಗ್ನಿಯು ವನವನ್ನು ಸುಡುವಂತೆ ಪಾಂಡವ ಸೇನೆಯನ್ನು ದಹಿಸುವವರೂ ಆದ ಅಶ್ವತ್ಥಾಮರನ್ನು ಕುರಿತು ಯಾವ ಗಾಬರಿಯೂ ಇಲ್ಲದೆ 'ಎಲೈ ದ್ರೋಣಪುತ್ರನೇ, ನಿಲ್ಲು, ನಿಲ್ಲು. ಜೀವ ಸಹಿತನಾಗಿ ನೀನು ನನ್ನಿಂದ ಹೊರಗೆ ಹೋಗುವುದಿಲ್ಲ. ಅಗ್ನಿಸುತನಾದ ಷಣ್ಮುಖನು ಕ್ರೌಂಚ ಪರ್ವತವನ್ನು ಸೀಳಿದಂತೆ ನಾನು ಈ ದಿನ ನಿನ್ನನ್ನು ಕೊಲ್ಲುವೆನು' ಎಂದು ಹೇಳಿದನು.

ಅಶ್ವತ್ಥಾಮಾ

ಗಚ್ಛ ವತ್ಸ ಸಹಾನ್ಯೈಸ್ತ್ವಂ ಯುದ್ಧ್ಯಸ್ವಾಮರವಿಕ್ರಮ ।
ನ ಹಿ ಪುತ್ರೇಣ ಹೈಡಿಂಬೇ ಪಿತಾ ನ್ಯಾಯ್ಯಂ ಪ್ರಬಾಧಿತುಮ್ ॥ ೫೭ ॥

ಅಶ್ವತ್ಥಾಮ– ಮಗು, ದೇವಪರಾಕ್ರಮವನ್ನು ಹೊಂದಿದವನೇ, ಹೋಗಿ ಬೇರೆಯವರ ಜೊತೆಯಲ್ಲಿ ಯುದ್ಧವನ್ನು ಮಾಡು. ಹಿಡಿಂಬಿಯ ಪುತ್ರನೇ, ಪುತ್ರನು ತಂದೆಯನ್ನು ಬಾಧಿಸುವುದು ನ್ಯಾಯವಲ್ಲ.

ಕಾಮಂ ಖಲು ನ ಮೇ ರೋಷೋ ಹೈಡಿಂಬೇ ವಿದ್ಯತೇ ತ್ವಯಿ ।
ಕಂ ತು ರೋಷಾನ್ವಿತೋ ಜಂತುರ್ಹನ್ಯಾದಾತ್ಮಾನಮಪ್ಯುತ ॥ ೫೮ ॥

ಎಲೈ ಹಿಡಿಂಬಿಯ ಪುತ್ರನೇ, ಖಂಡಿತವಾಗಿ ನನಗೆ ನಿನ್ನಲ್ಲಿ ರೋಷವಿಲ್ಲ. ಆದರೆ ರೋಷಾನ್ವಿತನಾದ ವ್ಯಕ್ತಿಯು ತನ್ನನ್ನೇ ತಾನು ಕೊಂದುಕೊಳ್ಳುತ್ತಾನೆ.

ಸಂಜಯಃ

ಶ್ರುತ್ವೈತತ್ಕ್ರೋಧತಾಮ್ರಾಕ್ಷಃ ಪುತ್ರಶೋಕಸಮನ್ವಿತಃ ।
ಅಶ್ವತ್ಥಾಮಾನಮಾಯಸ್ತೋ ಭೈಮಸೇನಿರಭಾಷತ ॥ ೫೯ ॥

ಸಂಜಯ– ಈ ಮಾತುಗಳನ್ನು ಕೇಳಿ ಪುತ್ರಶೋಕಸಮನ್ವಿತನಾದ, ಭೀಮಸೇನ ಪುತ್ರನಾದ ಘಟೋತ್ಕಚನು ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ ಕ್ರೋಧವನ್ನು ಹೊಂದಿ ಅಶ್ವತ್ಥಾಮರನ್ನು ಕುರಿತು ಮಾತನಾಡಿದನು.

ಕಿಮಹಂ ಕಾತರೋ ದ್ರೌಣೇ ಪೃಥಗ್ಜನ ಇವಾಹವೇ ।
ಭೀಮಾತ್ ಖಲ್ವಹಮುತ್ಪನ್ನಃ ಕುರೂಣಾಂ ವಿಪುಲೇ ಕುಲೇ ॥ ೬೦ ॥

ಪಾಂಡವಾನಾಮಹಂ ಪುತ್ರಃ ಸಮರೇಷ್ವನಿವರ್ತಿನಾಮ್ ।
ರಕ್ಷಸಾಮಧಿರಾಜೋಽಹಂ ದಶಗ್ರೀವಸಮೋ ಬಲೇ ॥ ೬೧ ॥

ತಿಷ್ಠ ತಿಷ್ಠ ನ ಮೇ ಜೀವನ್ ದ್ರೋಣಪುತ್ರ ಗಮಿಷ್ಯಸಿ ।
ಯುದ್ಧಶ್ರದ್ಧಾಮಹಂ ತೇಽದ್ಯ ವಿನೇಷ್ಯಾಮಿ ರಣಾಜಿರೇ ॥ ೬೨ ॥

ಎಲೈ ಅಶ್ವತ್ಥಾಮರೇ, ನಾನು ಸಾಮಾನ್ಯ ಜನರಂತೆ ಯುದ್ಧಕ್ಕೆ ಹೆದರುವವನೇ? ಕುರುಗಳ ಪವಿತ್ರವಾದ ಕುಲದಲ್ಲಿ ನಾನು ಭೀಮಸೇನನಿಂದ ಜನಿಸಿದ್ದೇನೆ. ನಾನು ಯುದ್ಧದಲ್ಲಿ ಹಿಮ್ಮೆಟ್ಟದಿರುವ ಪಾಂಡವರ ಪುತ್ರ. ನಾನು ರಾಕ್ಷಸರಿಗೆ ಅಧಿಪತಿ. ಬಲದಲ್ಲಿ ರಾವಣನಿಗೆ ಸಮಾನನಾದವನು. ದ್ರೋಣಪುತ್ರರೇ, ನಿಲ್ಲಿ, ನಿಲ್ಲಿ. ನೀವು ಜೀವ ಸಹಿತವಾಗಿ ಇಲ್ಲಿಂದ ಹೋಗುವುದಿಲ್ಲ. ಈ ದಿನ ನಾನು ರಣರಂಗದಲ್ಲಿ ನಿಮ್ಮ ಯುದ್ಧಶ್ರದ್ಧೆಯನ್ನು ನಾಶಮಾಡುವೆನು ಎಂದು ಹೇಳಿದನು.

ಇತ್ಯುಕ್ತ್ವಾ ರೋಷತಾಮ್ರಾಕ್ಷೋ ರಾಕ್ಷಸಃ ಸುಮಹಾಬಲಃ ।
ದ್ರೌಣಿಮಭ್ಯದ್ರವತ್ ಕ್ರುದ್ಧೋ ಗಜೇಂದ್ರಮಿವ ಕೇಸರೀ ॥ ೬೩ ॥

ಹೀಗೆ ಹೇಳಿ ರೋಷದಿಂದ ಕೆಂಪಾದ ಕಣ್ಣುಳ್ಳವನಾಗಿ ಅತ್ಯಂತ ಬಲಶಾಲಿಯಾದ ರಾಕ್ಷಸನು ಕ್ರೋಧಗೊಂಡ ಸಿಂಹವು ಗಜೇಂದ್ರನ ಮೇಲೆ ಎರಗಿದಂತೆ ಅಶ್ವತ್ಥಾಮರ ಮೇಲೆ ಮುನ್ನುಗ್ಗಿದನು.

ರಥಾಕ್ಷಮಾತ್ರೈರಿಷುಭಿರಭ್ಯವರ್ಷದ್ ಘಟೋತ್ಕಚಃ ।
ರಥಿನಾಮೃಷಭಂ ದ್ರೌಣಿಂ ಧಾರಾಭಿರಿವ ತೋಯದಃ ॥ ೬೪ ॥

ರಥದ ಆಕ್ಷದಂತಹ ಸ್ಥೂಲವಾದ ಬಾಣಗಳಿಂದ ಘಟೋತ್ಕಚನು ಮೋಡವು ಜಲಧಾರೆಗಳಿಂದ ಪರ್ವತವನ್ನು (ಪೀಡಿಸುವಂತೆ) ರಥಿಶ್ರೇಷ್ಠರಾದ ಅಶ್ವತ್ಥಾಮರನ್ನು ಪೀಡಿಸಿದನು.

ಶರವೃಷ್ಟಿಂ ಶರೈರ್ದ್ರೌಣಿರಪ್ರಾಪ್ತಾಂ ತಾಂ ವ್ಯಶಾತಯತ್ ।
ತತೋಽಂತರಿಕ್ಷೇ ಬಾಣಾನಾಂ ಸಂಗ್ರಾಮೋಽನ್ಯ ಇವಾಭವತ್ ॥ ೬೫ ॥

ಅಶ್ವತ್ಥಾಮರು ತಮ್ಮ ಬಾಣಗಳಿಂದ ಆ ಘಟೋತ್ಕಚನ ಬಾಣಗಳು ತಮ್ಮ ಬಳಿಗೆ ಬರುವುದಕ್ಕಿಂತ ಮೊದಲೇ ಅವುಗಳನ್ನು ನಾಶಗೊಳಿಸಿದರು. ಆಗ ಆಕಾಶದಲ್ಲಿಯೇ ಬಾಣಗಳ ಪರಸ್ಪರ ಸಂಗ್ರಾಮವುಂಟಾಯಿತು.

ಅಥಾಸ್ತ್ರಸಂಘರ್ಷಕೃತೈರ್ವಿಸ್ಫುಲಿಂಗೈಃ ಸಮಾಬಭೌ ।
ವಿಭಾವರೀಮುಖೇ ವ್ಯೋಮ ಖದ್ಯೋತೈರಿವ ಚಿತ್ರಿತಮ್ ॥ ೬೬ ॥

ಅಸ್ತ್ರಗಳ ಪರಸ್ಪರ ಸಂಘರ್ಷದಿಂದ ಉಂಟಾದ ಅಗ್ನಿಯ ಕಿಡಿಗಳಿಂದ ಆ ರಾತ್ರಿಯ ಮುಖದಲ್ಲಿ ಆಕಾಶವು ಮಿಣುಕು ಹುಳುಗಳಿಂದ ಚಿತ್ರಿತವಾದಂತೆ ಕಂಡುಬಂದಿತು.

ನಿಶಾಮ್ಯ ನಿಹತಾಂ ಮಾಯಾಂ ದ್ರೌಣಿನಾ ರಣಮಾನಿನಾ ।
ಘಟೋತ್ಕಚಸ್ತತೋ ಮಾಯಾಂ ಸಸರ್ಜಾಂತರ್ಹಿತಃ ಪುನಃ ॥ ೬೭ ॥

ಯುದ್ಧದಲ್ಲಿ ಅಭಿಮಾನವುಳ್ಳ ಅಶ್ವತ್ಥಾಮರಿಂದ ತನ್ನ ಮಾಯೆಯು ಹತವಾದುದನ್ನು ನೋಡಿ ಘಟೋತ್ಕಚನು ಪುನಃ ಅಂತರ್ಧಾನವನ್ನು ಹೊಂದಿ ಮಾಯೆಯನ್ನು ಸೃಷ್ಟಿಸಿದನು.

ಸೋಽಭವದ್ ಗಿರಿರತ್ಯುಚ್ಚಃ ಶಿಖರೈಸ್ತರುಸಂಕಟೈಃ ।
ಶೂಲಪ್ರಾಸಾಸಿಮುಸಲಜಲಪ್ರಸ್ರವಣೋ ಮಹಾನ್ ॥ ೬೮ ॥

ಅವನು ವೃಕ್ಷಸಮೂಹದಿಂದ ಕೂಡಿದ ಶಿಖರಗಳನ್ನುಳ್ಳ, ಶೂಲ-ಪ್ರಾಸ-ಖಡ್ಗ-ಮುಸಲಗಳೆಂಬ ಜಲಧಾರೆಗಳಿಂದ ಕೂಡಿದ, ಎತ್ತರವಾದ ದೊಡ್ಡ ಪರ್ವತವಾದನು.

ತಮಂಜನಚಯಪ್ರಖ್ಯಂ ದ್ರೌಣಿರ್ದುಷ್ಪ್ರಾ ಮಹೀಧರಮ್ ।
ಪ್ರಪತದ್ಭಿಶ್ಚ ಬಹುಭಿಃ ಶಸ್ತ್ರಸಂಘೈರ್ನ ಚುಕ್ಷುಭೇ ॥ ೬೯ ॥

ಕಾಡಿಗೆಯ ರಾಶಿಯಂತಿದ್ದ ಆ ಪರ್ವತವನ್ನು ನೋಡಿದ ಅಶ್ವತ್ಥಾಮರು ಅದರಿಂದ ಬೀಳುತ್ತಿದ್ದ ಅನೇಕ ಶಸ್ತ್ರಸಮೂಹಗಳಿಂದ ಕ್ಷೋಭೆಯನ್ನು ಹೊಂದಲಿಲ್ಲ.

ತತಃ ಸ್ಥಯನ್ನಿವ ದ್ರೌಣಿರ್ವಜ್ರಮಸ್ತ್ರಮುದೀರಯತ್ ।
ಸ ತೇನಾಸ್ತ್ರೇಣ ಶೈಲೇಂದ್ರಃ ಕ್ಷಿಪ್ತಃ ಕ್ಷಿಪ್ರಮನಶ್ಯತ ॥ ೭೦ ॥

ಆಗ ಅಶ್ವತ್ಥಾಮರು ನಗುತ್ತಾ ವಜ್ರಾಸ್ತ್ರವನ್ನು ಪ್ರಯೋಗಿಸಿದರು. ಆ ಅಸ್ತ್ರದಿಂದ ಹೊಡೆಯಲ್ಪಟ್ಟ ಆ ಶ್ರೇಷ್ಠ ಪರ್ವತವು ಶೀಘ್ರವಾಗಿ ನಾಶವನ್ನು ಹೊಂದಿತು.

ತತಃ ಸ ತೋಯದೋ ಭೂತ್ವಾ ನೀಲಃ ಸೇಂದ್ರಾಯುಧೋ ದಿವಿ ।
ಅಶ್ಮವೃಷ್ಟಿಭರತ್ಯುಗ್ರೋ ದ್ರೌಣಮಾಚ್ಛಾದಯದ್ ರಣೇ ॥ ೭೧ ॥

ಅನಂತರ ಅತಿಘೋರನಾದ ಅವನು ಕಾಮನಬಿಲ್ಲಿನಿಂದ ಕೂಡಿದ ಕಪ್ಪು ಮೋಡವಾಗಿ ಆಕಾಶದಲ್ಲಿದ್ದು ಅಶ್ವತ್ಥಾಮರನ್ನು ರಣರಂಗದಲ್ಲಿ ಕಲ್ಲಿನ ಮಳೆಯಿಂದ ಮುಚ್ಚಿದನು.

ಅಥ ಸಂಧಾಯ ವಾಯವ್ಯಮಸ್ತ್ರಮಸ್ತ್ರವಿದಾಂ ವರಃ ।
ವ್ಯಧಮದ್ ದ್ರೋಣತನಯೋ ನೀಲಮೇಘಂ ಸಮುತ್ಥಿತಮ್ ॥ ೭೨ ॥

ಆನಂತರ ಅಸ್ತ್ರಜ್ಞರಲ್ಲಿ ಶ್ರೇಷ್ಠರಾದ ದ್ರೋಣಪುತ್ರರು ವಾಯವ್ಯಾಸ್ತ್ರವನ್ನು ಹೂಡಿ ಆಕಾಶದಲ್ಲಿದ್ದ ನೀಲಮೇಘವನ್ನು ನಾಶಮಾಡಿದರು.

ಸ ಮಾರ್ಗಣಗಣೈರ್ದ್ರೌಣಿರ್ದಿಶಃ ಪ್ರಚ್ಛಾದ್ಯ ಸರ್ವತಃ ।
ಶತಂ ರಥಸಹಸ್ರಾಣಾಂ ಜಘಾನ ದ್ವಿಪದಾಂ ವರಃ ॥ ೭೩ ॥

ಮನುಷ್ಯಶ್ರೇಷ್ಠರಾದ ಅಶ್ವತ್ಥಾಮರು ತಮ್ಮ ಬಾಣಗಳ ಸಮೂಹದಿಂದ ಎಲ್ಲ ದಿಕ್ಕುಗಳನ್ನೂ ಆಚ್ಛಾದಿಸಿ ಒಂದು ಲಕ್ಷ ರಥರನ್ನು ಕೊಂದರು.

ಸ ದೃಷ್ಟ್ವಾ ಪುನರಾಯಾಂತಂ ರಥೇನಾಯತಕಾರ್ಮುಕಮ್ ।
ಘಟೋತ್ಕಚಮಸಂಭ್ರಾಂತಂ ರಾಕ್ಷಸೈರ್ಬಹುಭಿರ್ವೃತಮ್ ॥ ೭೪ ॥

ಸಿಂಹಶಾರ್ದೂಲಸದೃಶೈರ್ಮತ್ತದ್ವಿರದವಿಕ್ರಮೈಃ ।
ಗಜಸ್ಥೈಶ್ಚ ರಥಸ್ಥೈಶ್ಚ ವಾಜಿಪೃಷ್ಠಗತೈರಪಿ ॥ ೭೫ ॥

ವಿವೃತಾಸ್ಯಶಿರೋಗ್ರೀವೈರ್ಹೈಡಿಂಬಾನುಚರೈಃ ಸಹ ।
ಪೌಲಸ್ತ್ಯೈರ್ಯಾತುಧಾನೈಶ್ಚ ತಾಮಸೈಶ್ಚೋಗ್ರವಿಕ್ರಮೈಃ ॥ ೭೬ ॥

ನಾನಾಶಸ್ತ್ರಧರೈರ್ವೀರೈರ್ನಾನಾವಚಭೂಷಣೈಃ ।
ಮಹಾಬಲೈರ್ಭೀಮರವೈಃ ಸಂರಂಭೋದ್ಭತ್ತಲೋಚನೈಃ ॥ ೭೭ ॥

ಉಪಸ್ಥಿತೈಸ್ತತೋ ಯುದ್ಧೇ ರಾಕ್ಷಸೈಯುರ್ದ್ಧದುರ್ಮದೈಃ ।
ವಿಷಣ್ಣಮಭಿಸಂಪ್ರೇಕ್ಷ್ಯ ಪುತ್ರಂ ತೇ ದ್ರೌಣಿರಬ್ರವೀತ್ ॥ ೭೮ ॥

ಸಿಂಹ-ವ್ಯಾಘ್ರಸದೃಶರಾದ, ಮತ್ತಗಜ ಪರಾಕ್ರಮವುಳ್ಳ, ಗಜವನ್ನು ಏರಿದ, ರಥವನ್ನು ಏರಿದ, ಅಶ್ವಗಳನ್ನು ಏರಿದ, ಬಾಯ್ತೆರೆದ ಶಿರೋಗ್ರೀವಗಳನ್ನೂ ತೋರಿಸುತ್ತಿದ್ದ ಘಟೋತ್ಕಚನ ಅನುಚರರಿಂದಲೂ ಕೂಡಿ, ಅನೇಕ ರಾಕ್ಷಸರ ಜೊತೆಯಲ್ಲಿ ಪರಿವೃತನಾಗಿ ತಾಮಸರಾದ, ಉಗ್ರವಿಕ್ರಮಶಾಲಿಗಳಾದ ಪೌಲಸ್ತ್ಯರಿಂದಲೂ ಮತ್ತು ಯಾತುಧಾನರಿಂದಲೂ ಕೂಡಿ, ನಾನಾ ಶಸ್ತ್ರಗಳನ್ನು ಧರಿಸಿ, ನಾನಾ ಕವಚ-ಭೂಷಣಗಳನ್ನು ಧರಿಸಿದ ವೀರರಿಂದಲೂ ಕೂಡಿ, ಮಹಾಬಲರೂ ಭಯಂಕರ ನಾದಗಳನ್ನು ಮಾಡುವವರೂ ಕೋಪದಿಂದ ತೆರೆದ ಕಣ್ಣುಳ್ಳವರೂ ಯುದ್ಧದುರ್ಮದರೂ, ಯುದ್ಧದಲ್ಲಿ ಸಮೀಪದಲ್ಲಿರುವವರೂ ಆದ ರಾಕ್ಷಸರಿಂದ ಕೂಡಿದ ಘಟೋತ್ಕಚನನ್ನು ನೋಡಿ ವಿಷಾದ ಹೊಂದಿದ ನಿನ್ನ ಪುತ್ರನನ್ನು ಕುರಿತು ಅಶ್ವತ್ಥಾಮರು ಹೇಳಿದರು.

ತಿಷ್ಠ ದುರ್ಯೋಧನಾದ್ಯ ತ್ವಂ ನ ಕಾರ್ಯಃ ಸಂಭ್ರಮಸ್ತ್ವಯಾ ।
ಸಹೈಭಿರ್ಭ್ರಾತೃಭಿರ್ವೀರೈಃ ಪಾರ್ಥಿವೈಶ್ಚೇಂದ್ರವಿಕ್ರಮೈಃ ॥ ೭೯ ॥

ನಿಹನಿಷ್ಯಾಮ್ಯಮಿತ್ರಾಂಸ್ತೇ ನ ತವಾಸ್ತಿ ಪರಾಜಯಃ ।
ಸತ್ಯಂ ತೇ ಪ್ರತಿಜಾನಾಮಿ ಪರ್ಯಾಶ್ವಾಸಯ ವಾಹಿನೀಮ್ ॥ ೮೦ ॥

ದುರ್ಯೋಧನನೇ, ಗಾಬರಿಗೊಳ್ಳಬೇಡ. ನೀನು ವೀರರಾದ ನಿನ್ನ ಸಹೋದರರಿಂದಲೂ, ಇಂದ್ರನ ಪರಾಕ್ರಮವನ್ನು ಹೊಂದಿದ ರಾಜರಿಂದಲೂ ಕೂಡಿ ಈ ದಿನ ನಿಲ್ಲು. ನಿನ್ನ ಶತ್ರುಗಳನ್ನು ನಾನು ಕೊಲ್ಲುವೆನು. ನಿನಗೆ ಪರಾಜಯ ಉಂಟಾಗುವುದಿಲ್ಲ. ನಿನಗೆ ಸತ್ಯಪ್ರತಿಜ್ಞೆಯನ್ನು ಮಾಡಿ ಹೇಳುತ್ತಿದ್ದೇನೆ. ನಿನ್ನ ಸೈನ್ಯವನ್ನು ಸಮಾಧಾನಗೊಳಿಸು (ಎಂದು ಹೇಳಿದರು).

ದುರ್ಯೋಧನಃ

ನ ತ್ವೇತದದ್ಭುತಂ ಮನ್ಯೇ ಯತ್ತೇ ಮಹದಿದಂ ಮನಃ ।
ಅಸ್ಮಾಸು ಚ ಪರಾ ಭಕ್ತಿಸ್ತವ ಗೌತಮಿನಂದನ ॥ ೮೧ ॥

ದುರ್ಯೋಧನ– ಎಲೈ ಗೌತಮಿಪುತ್ರರೇ, ನಿಮ್ಮ ಈ ದೊಡ್ಡ ಮಾತುಗಳು ನಮ್ಮಲ್ಲಿ ನಿಮಗಿರುವ ನಿಷ್ಠೆಯು ಆಶ್ಚರ್ಯಕರವಲ್ಲವೆಂದು ನನಗೆ ತೋರಿಸುತ್ತವೆ.

ಸಂಜಯಃ

ಅಶ್ವತ್ಥಾಮಾನಮುಕ್ತ್ವೈವಂ ತತಃ ಸೌಬಲಮಬ್ರವೀತ್ ।
ವೃತಃ ಶತಸಹಸ್ರೇಣ ರಥಾನಾಂ ರಣಶೋಭಿನಾಮ್ ॥ ೮೨ ॥

ಷಷ್ಟ್ಯಾ ಗಜಸಹಸ್ರೈಶ್ಚ ಪ್ರಯಾಹಿ ತ್ವಂ ಧನಂಜಯಮ್ ।
ಕರ್ಣಶ್ಚ ವೃಷಸೇನಶ್ಚ ಕೃಪೋ ನೀಲಸ್ತಥೈವ ಚ ॥ ೮೩ ॥

ಉದೀಚ್ಯಾಃ ಕೃತವರ್ಮಾ ಚ ಪುರುಮಿತ್ರಃ ಶ್ರುತಾರ್ಪಣಃ ।
ದುಃಶಾಸನೋ ನಿಕುಂಭಶ್ಚ ಕುಂಡಭೇದೀ ಉರುಕ್ರಮಃ ॥ ೮೪ ॥

ಪುರಂಜಯೋ ದೃಢರಥಃ ಪತಾಕೀ ಹೇಮಪಂಕಜಃ ।
ಶಲ್ಯಾರುಣೀಂದ್ರಸೇನಾಶ್ಚ ಸಂಜಯೋ ವಿಜಯೋ ಜಯಃ ॥ ೮೫ ॥

ಕಮಲಾಕ್ಷಃ ಪುರುಃ ಕ್ರಾಥೀ ಜಯವರ್ಮಾ ಸುದರ್ಶನಃ ।
ಏತೇ ತ್ವಾಮನುಯಾಸ್ಯಂತಿ ಪತ್ತೀನಾಮಯುತಾನಿ ಷಟ್ ॥ ೮೬ ॥

ಸಂಜಯ– ಅಶ್ವತ್ಥಾಮರನ್ನು ಕುರಿತು ಹೀಗೆ ಹೇಳಿ ಅನಂತರ ಶಕುನಿಯನ್ನು ಕುರಿತು ಸೋದರಮಾವನೇ, ಯುದ್ಧದಲ್ಲಿ ಶೋಭಿಸುವ ಒಂದುಲಕ್ಷ ರಥದಿಂದಲೂ, ಅರವತ್ತು ಸಾವಿರ ಗಜಗಳಿಂದಲೂ ಕೂಡಿ ನೀನು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಹೋಗು. ಕರ್ಣ, ವೃಷಸೇನ, ಕೃಪ, ನೀಲ, ಉತ್ತರ ದೇಶದ ರಾಜರು, ಕೃತವರ್ಮ, ಪುರುಮಿತ್ರ, ಶ್ರುತಾರ್ಪಣ, ದುಶ್ಶಾಸನ, ನಿಕುಂಭ, ಕುಂಡಭೇದಿ, ಉರುಕ್ರಮ, ಪುರಂಜಯ, ದೃಢರಥ, ಪತಾಕಿ, ಹೇಮಪಂಕಜ, ಶಲ್ಯ, ಅರುಣಿ, ಇಂದ್ರಸೇನ, ಸಂಜಯ, ವಿಜಯ, ಜಯ, ಕಮಲಾಕ್ಷ, ಪುರು, ಕ್ರಾಥೀ, ಜಯವರ್ಮ, ಸುದರ್ಶನ - ಇವರೆಲ್ಲರೂ ಅರವತ್ತು ಸಾವಿರ ಪದಾತಿಗಳೊಂದಿಗೆ ನಿನ್ನನ್ನು ಹಿಂಬಾಲಿಸುವರು.

ಜಹಿ ಭೀಮಂ ಯಮೌ ಚೋಭೌ ಧರ್ಮರಾಜಂ ಚ ಮಾತುಲ ।
ಅಸುರಾನಿವ ದೇವೇಂದ್ರೋ ಜಯಾಶಾ ಮೇ ತ್ವಯಿ ಸ್ಥಿತಾ ॥ ೮೭ ॥

ಎಲೈ ಸೋದರಮಾವನೇ, ದೇವೇಂದ್ರನು ಅಸುರರನ್ನು ಸಂಹರಿಸಿದಂತೆ ಭೀಮಸೇನನನ್ನೂ, ನಕುಲ-ಸಹದೇವರಿಬ್ಬರನ್ನೂ ಮತ್ತು ಧರ್ಮರಾಜನನ್ನೂ ಕೊಲ್ಲು. ನಿನ್ನಲ್ಲಿ ನನಗೆ ಜಯದ ಆಸೆಯಿದೆ.

ದಾರಿತಾನ್ ದ್ರೌಣಿನಾ ಬಾಣೈರ್ಭೃಶಂ ವಿಕ್ಷತವಿಗ್ರಹಾನ್ ।
ಜಹಿ ಮಾತುಲ ಕೌಂತೇಯಾನಸುರಾನಿವ ಪಾವಕಃ ॥ ೮೮ ॥

ಎಲೈ ಸೋದರಮಾವನೇ, ಅಶ್ವತ್ಥಾಮರ ಬಾಣಗಳಿಂದ ಬಹಳವಾಗಿ ಸೀಳಲ್ಪಟ್ಟು ಗಾಯಗೊಂಡ ಶರೀರವುಳ್ಳ ಕುಂತೀಪುತ್ರರನ್ನು, ಷಣ್ಮುಖನು ಅಸುರರನ್ನು ಕೊಂದಂತೆ ಕೊಲ್ಲುವವನಾಗು.

ಏವಮುಕ್ತೋ ಯಯೌ ಶೀಘ್ರಂ ಪುತ್ರೇಣ ತವ ಸೌಬಲಃ ।
ಪಿಪ್ರೀಷುಸ್ತೇ ಸುತಾನ್ ರಾಜನ್ ದಿಧಕ್ಷುಶ್ಚೈವ ಪಾಂಡವಾನ್ ॥ ೮೯॥

ನಿನ್ನ ಪುತ್ರನಿಂದ ಹೀಗೆ ಹೇಳಲ್ಪಟ್ಟ ಶಕುನಿಯು ನಿನ್ನ ಪುತ್ರನಿಗೆ ಸಂತೋಷವನ್ನು ಉಂಟುಮಾಡಲು ಬಯಸಿ, ಪಾಂಡವರನ್ನು ದಹಿಸಲು ಬಯಸಿ ಶೀಘ್ರವಾಗಿ ಅಲ್ಲಿಂದ ಹೊರಟನು.

ಅಥ ಪ್ರವವೃತೇ ಯುದ್ಧಂ ದ್ರೌಣಿರಾಕ್ಷಸಯೋರ್ಮುಧೇ ।
ವಿಭಾವರ್ಯಾಂ ಸುತುಮುಲಂ ಶಕ್ರಪ್ರಹ್ಲಾದಯೋರಿವ ॥ ೯೦ ॥

ಆನಂತರ ಆ ರಾತ್ರಿಯಲ್ಲಿ ಅಶ್ವತ್ಥಾಮರಿಗೂ ಮತ್ತು ರಾಕ್ಷಸನಾದ ಘಟೋತ್ಕಚನಿಗೂ ಇಂದ್ರ-ಪ್ರಹ್ಲಾದರಿಗೆ ನಡೆದಂತೆ ಅತ್ಯಂತ ತೀವ್ರವಾದ ಯುದ್ಧವು ನಡೆಯಿತು.

ತತೋ ಘಟೋತ್ಕಚೋ ಬಾಣೈರ್ದಶಭಿರ್ಗೌತಮೀಸುತಮ್ ।
ಜಘಾನೋರಸಿ ಸಂಕ್ರುದ್ಧೋ ವಿಷಾಗ್ನಿಪ್ರತಿಮೈರ್ದೃಢೈಃ ॥ ೯೧ ॥

ಆಗ ಘಟೋತ್ಕಚನು ಕೋಪಗೊಂಡು ವಿಷಸದೃಶವಾದ, ಅಗ್ನಿಸದೃಶವಾದ, ದೃಢವಾದ ಹತ್ತು ಬಾಣಗಳಿಂದ ಗೌತಮೀಪುತ್ರರಾದ ಅಶ್ವತ್ಥಾಮರನ್ನು ಎದೆಯಲ್ಲಿ ಹೊಡೆದನು.

ಸ ತೈರಭ್ಯಾಹತೋ ಗಾಢಂ ಶರೈರ್ಭೀಮಸುತೇರಿತೈಃ ।
ಚಚಾಲ ರಥಮಧ್ಯಸ್ಥೋ ವಾತೋದ್ಧೂತ ಇವ ದ್ರುಮಃ ॥ ೯೨ ॥

ಭೀಮಪುತ್ರನು ಪ್ರಯೋಗಿಸಿದ ಆ ಬಾಣಗಳಿಂದ ಗಾಢವಾಗಿ ಹೊಡೆಯಲ್ಪಟ್ಟ ಅಶ್ವತ್ಥಾಮರು ರಥದ ಮಧ್ಯದಲ್ಲಿ ಬಿರುಗಾಳಿಗೆ ಸಿಕ್ಕಿದ ವೃಕ್ಷದಂತೆ ಅಲುಗಾಡಿದರು.

ಭೂಯಶ್ಚಾಂಜಲಿಕೇನಾಸ್ಯ ಮಾರ್ಗಣೇನ ಮಹಾಪ್ರಭಮ್ ।
ದ್ರೌಣಿಹಸ್ತಸ್ಥಿತಂ ಚಾಪಂ ಚಿಚ್ಛೇದಾಶು ಘಟೋತ್ಕಚಃ ॥ ೯೩ ॥

ಘಟೋತ್ಕಚನು ಪುನಃ ಒಂದು ಮಹಾಪ್ರಭೆಯುಳ್ಳ ಅಂಜಲಿಕವನ್ನು ಪ್ರಯೋಗಿಸಿ, ಆ ಬಾಣದಿಂದ ಅಶ್ವತ್ಥಾಮರ ಕೈಯಲ್ಲಿದ್ದ ಧನುಸ್ಸನ್ನು ಶೀಘ್ರವಾಗಿ ಕತ್ತರಿಸಿದನು.

ತತೋಽನ್ಯದ್ ದ್ರೌಣಿರಾದಾಯ ಧನುರ್ಭಾರಸಹಂ ಮಹತ್ ।
ವವರ್ಷ ವಿಶಿಖಾಂಸ್ತೀಕ್ಷ್ಣಾನ್ ವಾರಿಧಾರಾ ಇವಾಂಬುದಃ ॥ ೯೪ ॥

ಆಗ ಅಶ್ವತ್ಥಾಮರು ಭಾರಸಾಧನವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಮೋಡವು ಬಹಳ ಮಳೆಯನ್ನು ಸುರಿಸಿಸುವಂತೆ ಘಟೋತ್ಕಚನ ಮೇಲೆ ತೀಕ್ಷ್ಣವಾದ ಬಾಣ ಧಾರೆಗಳನ್ನು ಸುರಿಸಿದರು.

ತತಃ ಶಾರದ್ವತೀಪುತ್ರಃ ಪ್ರೇಷಯಾಮಾಸ ಭಾರತ ।
ಸುವರ್ಣಪುಂಖಾನ್ ಶತ್ರುಘ್ನಾನ್ ಖಿಚರಾನ್ ಖಿಚರಾನ್ ಪ್ರತಿ ॥

ಅನಂತರ ಎಲೈ ಭಾರತನೇ, ಶಾರದ್ವತೀಪುತ್ರರಾದ ಅಶ್ವತ್ಥಾಮರು ಅಂತರಿಕ್ಷ ಸಂಚಾರಿಗಳಾದ ರಾಕ್ಷಸರ ಮೇಲೆ ಶತ್ರುನಾಶಕವಾದ, ಸುವರ್ಣಪುಂಖಗಳನ್ನು ಹೊಂದಿದ, ಆಕಾಶದಲ್ಲಿ ಸಂಚರಿಸುವ ಬಾಣಗಳನ್ನು ಪ್ರಯೋಗಿಸಿದರು.

ತದ್ಬಾಣೈರರ್ದಿತಂ ಯೂಥಂ ರಕ್ಷಸಾಂ ಪೀನವಕ್ಷಸಾಮ್ ।
ಸಿಂಹೈರಿವ ಬಭೌ ಮತ್ತಂ ಗಜಾನಾಮಾಕುಲಂ ಕುಲಮ್ ॥ ೯೬ ॥

ಆ ಬಾಣಗಳಿಂದ ತೀವ್ರವಾಗಿ ಪೀಡೆಗೊಳಗಾದ, ಉನ್ನತ ವಕ್ಷಃಸ್ಥಳವುಳ್ಳ ರಾಕ್ಷಸರ ಸಮೂಹವು ಸಿಂಹಗಳಿಂದ ಆಕುಲವಾದ ಮದಗಜಗಳ ಸಮೂಹದಂತೆ ಶೋಭಿಸಿತು.

ವಿಧಮ್ಯ ರಾಕ್ಷಸಾನ್ ಬಾಣೈಃ ಸಾಶ್ವಸೂತರಥಾನ್ ವಿಭುಃ ।
ದದಾಹ ಭಗವಾನ್ ವಹ್ನಿರ್ಭೂತಾನೀವ ಯುಗಕ್ಷಯೇ ॥ ೯೭ ॥

ವಿಭುವಾದ ಅಶ್ವತ್ಥಾಮರು ತಮ್ಮ ಬಾಣಗಳಿಂದ ಅಶ್ವ-ಸೂತ-ರಥ ಸಹಿತರಾದ ರಾಕ್ಷಸರನ್ನು ಚದುರಿಸಿ, ಪೂಜ್ಯರಾದ ಅವರು ಯುಗಾಂತಕಾಲದಲ್ಲಿ ವಹ್ನಿಯು ಪ್ರಾಣಿಗಳನ್ನು ಸುಡುವಂತೆ ಅವರನ್ನು ಸುಟ್ಟುಹಾಕಿದರು.

ಸ ದಗ್ಧ್ವಾಕ್ಷೌಹಿಣೀಂ ಬಾಣೈರ್ನೈರ್ಋತಾನ್ ರುರುಚೇ ಭೃಶಮ್ ।
ಪುರೇವ ತ್ರಿಪುರಂ ದಗ್ಧ್ವಾ ದಿವಿ ದೇವೋ ಮಹೇಶ್ವರಃ ॥ ೯೮ ॥

ಅವರು ತಮ್ಮ ಬಾಣಗಳಿಂದ ರಾಕ್ಷಸರ ಒಂದು ಅಕ್ಷೌಹಿಣೀ ಸೈನ್ಯವನ್ನು ನಾಶ ಮಾಡಿ ತ್ರಿಪುರವನ್ನು ದಹಿಸಿದ ದೇವನಾದ ಮಹೇಶ್ವರನು ಹಿಂದೆ ಸ್ವರ್ಗದಲ್ಲಿ ಮೆರೆದಂತೆ ಬಹಳವಾಗಿ ಶೋಭಿಸಿದರು.

ಯುಗಾಂತೇ ಸರ್ವಭೂತಾನಿ ದಗ್ಧ್ವೇವ ವಸುರುಲ್ಬಣಃ ।
ರರಾಜ ಜಯತಾಂ ಶ್ರೇಷ್ಠೋ ದ್ರೋಣಪುತ್ರಸ್ತವಾಹಿತಾನ್ ॥ ೯೯ ॥

ಯುಗಾಂತ ಕಾಲದಲ್ಲಿ ಉಲ್ಬಣವಾದ ಅಗ್ನಿಯು ಎಲ್ಲ ಪ್ರಾಣಿಗಳನ್ನೂ ಸುಟ್ಟು ಶೋಭಿಸುವಂತೆ ಜಯಶೀಲರಲ್ಲಿ ಶ್ರೇಷ್ಠರಾದ ದ್ರೋಣಪುತ್ರರು ನಿನ್ನ ಶತ್ರುಗಳನ್ನು ದಹಿಸಿ ಶೋಭಿಸಿದರು.

ತೇಷು ರಾಜಸಹಸ್ರೇಷು ಪಾಂಡವೇಯೇಷು ಭಾರತ ।
ನೈನಂ ನಿರೀಕ್ಷಿತುಂ ಕಶ್ಚಿಚ್ಛಕ್ನೋತಿ ದ್ರೋಣಿಮಾಹವೇ ।
ಋತೇ ಘಟೋತ್ಕಚಾದ್ ವೀರಾದ್ ರಾಕ್ಷಸೇಂದ್ರಾನ್ಮಹಾಬಲಾತ್ ॥

ಎಲೈ ಭಾರತನೇ, ಆ ಪಾಂಡವಸೇನೆಯ ಸಹಸ್ರ ರಾಜರಲ್ಲಿ ವೀರನೂ, ರಾಕ್ಷಸೇಂದ್ರನೂ, ಮಹಾಬಲನೂ ಆದ ಘಟೋತ್ಕಚನೊಬ್ಬನನ್ನು ಬಿಟ್ಟು ಬೇರೆ ಯಾರೂ ರಣರಂಗದಲ್ಲಿ ಈ ಅಶ್ವತ್ಥಾಮರನ್ನು ನೋಡಲು ಶಕ್ತರಾಗಲಿಲ್ಲ.

ಸ ಪುನರ್ಭರತಶ್ರೇಷ್ಠ ಕ್ರೋಧಾದ್ ರಕ್ತಾಂತಲೋಚನಃ ।
ತಳಂ ತಳೇನ ಸಂಹತ್ಯ ಸಂದಶ್ಯ ದಶನಚ್ಛದಮ್ ।
ಸ್ವಸೂತಮಬ್ರವೀತ್ ಕ್ಷುದ್ರೋ ದ್ರೋಣಪುತ್ರಾಯ ಮಾಂ ವಹ ॥೧೦೧॥

ಎಲೈ ಭರತಶ್ರೇಷ್ಠನೇ, ಆ ಘಟೋತ್ಕಚನಾದರೋ ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ, ಅಂಗೈಯನ್ನು ಅಂಗೈಯಿಂದ ಉಜ್ಜುತ್ತಾ, ಹಲ್ಲುಮುಡಿಗಳನ್ನು ಕಚ್ಚಿ,

ಕೋಪಗೊಂಡು ತನ್ನ ಸೂತನನ್ನು ಕುರಿತು ದ್ರೋಣಪುತ್ರರ ಕಡೆಗೆ ನನ್ನನ್ನು ಕರೆದುಕೊಂಡು ಹೋಗು ಎಂದು ಹೇಳಿದನು.

ಸ ಯಯೌ ಘೋರರೂಪೇಣ ತೇನ ಜೈತ್ರಪತಾಕಿನಾ ।
ದ್ವೈರಥಂ ದ್ರೋಣಪುತ್ರೇಣ ಪುನರಪ್ಯರಿಸೂದನಃ ॥ ೧೦೨ ॥

ಶತ್ರುಸೂದನನಾದ ಅವನು ಜೈತ್ರಪತಾಕೆಯುಳ್ಳ, ಘೋರರೂಪವುಳ್ಳ ರಥದಲ್ಲಿ ಕುಳಿತು ದ್ರೋಣಪುತ್ರರಿಂದ ದ್ವೈರಥಯುದ್ಧವನ್ನು ಮಾಡಲು ಅನುಕೂಲವಾಗುವಂತೆ ಅಲ್ಲಿಂದ ಹೊರಟನು.

ಸ ಚಿಕ್ಷೇಪ ತತಃ ಕ್ರುದ್ಧೋ ದ್ರೋಣಪುತ್ರಾಯ ರಾಕ್ಷಸಃ ।
ಅಷ್ಟಚಕ್ರಾಂ ಮಹಾರೌದ್ರಾಮಶನೀಂ ರುದ್ರನಿರ್ಮಿತಾಮ್ ॥ ೧೦೩ ॥

ಕೋಪಗೊಂಡ ರಾಕ್ಷಸನಾದ ಘಟೋತ್ಕಚನು ದ್ರೋಣಪುತ್ರರ ಮೇಲೆ ರುದ್ರ ನಿರ್ಮಿತವಾದ, ಅತ್ಯಂತ ಭಯಂಕರವಾದ, ಎಂಟುಮೂಲೆಗಳಿಂದ ಕೂಡಿದ ಅಶನಿಯನ್ನೂ (ಆಯುಧ ವಿಶೇಷವನ್ನು) ಎಸೆದನು.

ತಾಮವಪ್ಲುತ್ಯ ಜಗ್ರಾಹ ದ್ರೌಣಿರ್ನ್ಯಸ್ಯ ರಥೇ ಧನುಃ ।
ಚಿಕ್ಷೇಪ ಚೈನಾಂ ತಸ್ಯೈವ ಸ್ಯಂದನಾತ್ ಸೋಽವಪುಪ್ಲುವೇ ॥ ೧೦೪ ॥

ಅಶ್ವತ್ಥಾಮರು ತಮ್ಮ ಧನುಸ್ಸನ್ನು ರಥದಲ್ಲಿಟ್ಟು ರಥದಿಂದ ಹಾರಿ ಆ ಅಶನಿಯನ್ನು ಹಿಡಿದು, ಅದನ್ನು ಘಟೋತ್ಕಚನ ರಥವನ್ನೇ ಉದ್ದೇಶಿಸಿ ಅದರ ಮೇಲೆಯೇ ಎಸೆದರು. ಘಟೋತ್ಕಚನು ಕೆಳಗೆ ಹಾರಿದನು.

ಸಾಶ್ವಸೂತಧ್ವಜಂ ವಾಹಂ ಭಸ್ಮ ಕೃತ್ವಾ ಮಹಾಪ್ರಭಾ ।
ವಿವೇಶ ವಸುಧಾಂ ಭಿತ್ತ್ವಾ ಸಾಶನಿರ್ಭೃಶದಾರುಣಾ ॥ ೧೦೫ ॥

ಅತ್ಯಂತ ಭಯಂಕರವಾದ ಮಹಾಪ್ರಭೆಯನ್ನು ಹೊಂದಿದ ಆ ಅಶನಿಯು ಅಶ್ವ-ಸೂತ-ಧ್ವಜ ಸಹಿತವಾದ ಘಟೋತ್ಕಚನ ರಥವನ್ನು ಭಸ್ಮ ಮಾಡಿ ಭೂಮಿಯನ್ನು ಸೀಳಿ ಒಳಗೆ ಇಳಿಯಿತು.

ದ್ರೌಣೇಸ್ತತ್ಕರ್ಮ ದೃಷ್ಟ್ವಾ ತು ಸರ್ವಭೂತಾನ್ಯಪೂಜಯನ್ ।
ಯದವಪ್ಲುತ್ಯ ಜಗ್ರಾಹ ಘೋರಾಂ ಶಂಕರನಿರ್ಮಿತಾಮ್ ॥ ೧೦೬ ॥

ಅಶ್ವತ್ಥಾಮರು ರಥದಿಂದ ಹಾರಿ ಶಂಕರನಿರ್ಮಿತವಾದ ಘೋರವಾದ ಅಶನಿಯನ್ನು ಹಿಡಿದುದನ್ನು ನೋಡಿ ಅವರ ಆ ಕಾರ್ಯವನ್ನು ಎಲ್ಲ ಪ್ರಾಣಿಗಳೂ ಪೂಜಿಸಿದವು.

ಧೃಷ್ಟದ್ಯುಮ್ನರಥಂ ಗತ್ವಾ ಭೈಮಸೇನಿಸ್ತತೋ ನೃಪ ।
ಮುಮೋಚ ನಿಶಿತಾನ್ ಬಾಣಾನ್ ಪುನರ್ದ್ರೌಣೇರ್ಮಹೋರಸಿ ॥

ಎಲೈ ರಾಜನೇ, ಆನಂತರ ಘಟೋತ್ಕಚನು ಧೃಷ್ಟದ್ಯುಮ್ನನ ರಥವನ್ನು ಸೇರಿ ಪುನಃ ಅಶ್ವತ್ಥಾಮರ ಎದೆಯಲ್ಲಿ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು.

ಧೃಷ್ಟದ್ಯುಮ್ನೋಽಪ್ಯಸಂಭ್ರಾಂತೋ ಮುಮೋಚಾಶೀವಿಷೋಪಮಾನ್ ।
ಸುವರ್ಣಪುಂಖಾನ್ ವಿಶಿಖಾನ್ ದ್ರೋಣಪುತ್ರಸ್ಯ ವಕ್ಷಸಿ ॥ ೧೦೮ ॥

ಧೃಷ್ಟದ್ಯುಮ್ನನೂ ಸಹ ಯಾವ ಗಾಬರಿಯೂ ಇಲ್ಲದೆ ಸುವರ್ಣ ಪುಂಖಗಳನ್ನು ಹೊಂದಿದ, ಸರ್ಪಸದೃಶವಾದ ಬಾಣಗಳನ್ನು ದ್ರೋಣಪುತ್ರರ ಎದೆಯಲ್ಲಿ ಪ್ರಯೋಗಿಸಿದನು.

ತತೋ ಮುಮೋಚ ನಾರಾಚಾನ್ ದ್ರೌಣಿಸ್ತಾಭ್ಯಾಂ ಸಹಸ್ರಶಃ ।
ತಾವಪ್ಯಗ್ನಿಶಿಖಾಪ್ರಖ್ಯೈರ್ಜಘ್ನತುಸ್ತಸ್ಯ ಮಾರ್ಗಣಾನ್ ॥ ೧೦೯ ॥

ಆಗ ಅಶ್ವತ್ಥಾಮರು ಅವರಿಬ್ಬರ ಮೇಲೆ ಸಹಸ್ರ ಸಂಖ್ಯೆಯಲ್ಲಿ ನಾರಾಚಗಳನ್ನು ಪ್ರಯೋಗಿಸಿದರು. ಧೃಷ್ಟದ್ಯುಮ್ನ-ಘಟೋತ್ಕಚರೂ ಸಹ ಅಗ್ನಿಶಿಖೆಗಳಂತಿದ್ದ ತಮ್ಮ ಬಾಣಗಳಿಂದ ಅಶ್ವತ್ಥಾಮರ ಬಾಣಗಳನ್ನು ಹೊಡೆದು ಹಾಕಿದರು.

ಅತಿತೀವ್ರಮಭೂದ್ ಯುದ್ಧಂ ತಯೋಃ ಪುರುಷಸಿಂಹಯೋಃ ।
ಯೋಧಾನಾಂ ಪ್ರೀತಿಜನನಂ ದ್ರೌಣೇಶ್ಚ ಭರತರ್ಷಭ ॥ ೧೧೦ ॥

ಎಲೈ ಭರತಶ್ರೇಷ್ಠನೇ, ಪುರುಷಸಿಂಹರಾದ ಅವರಿಬ್ಬರಿಗೂ ಎಲ್ಲ ಯೋಧರಿಗೂ ಮತ್ತು ಅಶ್ವತ್ಥಾಮರಿಗೂ ಸಂತೋಷದಾಯಕವಾದ ತೀವ್ರವಾದ ಯುದ್ಧವು ನಡೆಯಿತು.

ತತೋ ರಥಸಹಸ್ರೇಣ ದ್ವಿರದಾನಾಂ ಶತೈಸ್ತ್ರಿಭಿಃ ।
ಷಡ್ಭಿರ್ವಾಜಿಸಹಸ್ರೈಶ್ಚ ಭೀಮಸ್ತಂ ದೇಶಮಾವ್ರಜತ್ ॥ ೧೧೧ ॥

ಆಗ ಒಂದು ಸಹಸ್ರ ರಥದಿಂದಲೂ, ಮುನ್ನೂರು ಗಜಗಳಿಂದಲೂ, ಆರು ಸಹಸ್ರ ಅಶ್ವಗಳಿಂದಲೂ ಕೂಡಿದ ಭೀಮನು ಆ ಪ್ರದೇಶಕ್ಕೆ ಬಂದನು.

ತತೋ ಭೀಮಾತ್ಮಜಂ ರಕ್ಷೋ ಧೃಷ್ಟದ್ಯುಮ್ನಂ ಚ ಸಾನುಗಮ್ ।
ಅಯೋಧಯತ ಧರ್ಮಾತ್ಮಾ ದ್ರೌಣಿರಕ್ಲಿಷ್ಟಕರ್ಮಕೃತ್ ॥ ೧೧೨ ॥

ಆಗ ಭೀಮಪುತ್ರನಾದ ರಾಕ್ಷಸನನ್ನೂ, ಅನುಚರ ಸಹಿತನಾದ ಧೃಷ್ಟದ್ಯುಮ್ನನನ್ನೂ ಲೀಲಾಜಾಲವಾಗಿ ಯುದ್ಧವನ್ನು ಮಾಡುವ ಧರ್ಮಾತ್ಮರಾದ ಅಶ್ವತ್ಥಾಮರು ಬಾಣಗಳಿಂದ ಹೊಡೆದರು.

ತತ್ರಾದ್ಭುತತಮಂ ದ್ರೌಣಿರ್ದರ್ಶಯಾಮಾಸ ವಿಕ್ರಮಮ್ ।
ಅಶಕ್ಯಂ ಕರ್ತುಮನ್ಯೇನ ಸರ್ವಭೂತೇಷು ಭಾರತ ॥ ೧೧೩ ॥

ಎಲೈ ಭಾರತನೇ, ಆಗ ಅಶ್ವತ್ಥಾಮರು ಎಲ್ಲಪ್ರಾಣಿಗಳಲ್ಲಿ ಬೇರೆ ಯಾರಿಂದಲೂ ಮಾಡಲು ಅಸಾಧ್ಯವಾದ ತಮ್ಮ ಅತ್ಯಂತ ಅದ್ಭುತವಾದ ಪರಾಕ್ರಮವನ್ನು ತೋರಿಸಿದರು.

ನಿಮೇಷಾಂತರಮಾತ್ರೇಣ ಸಾಶ್ವಸೂತರಥದ್ವಿಪಾಮ್ ।
ಅಕ್ಷೋಹಿಣೀಂ ರಾಕ್ಷಸಾನಾಂ ಶಿತೈರ್ಬಾಣೈರಶಾತಯತ್ ॥ ೧೧೪ ॥

ಮಿಷತೋ ಭೀಮಸೇನಸ್ಯ ಹೈಡಿಂಬೇಃ ಪಾರ್ಷತಸ್ಯ ಚ ।
ಯಮಯೋರ್ಧರ್ಮಪುತ್ರಸ್ಯ ವಿಜಯಸ್ಯಾಚ್ಯುತಸ್ಯ ಚ ॥ ೧೧೫ ॥

ಒಂದು ನಿಮಿಷ ಮಾತ್ರದಲ್ಲಿ ಭೀಮಸೇನನೂ, ಘಟೋತ್ಕಚನೂ, ಧೃಷ್ಟದ್ಯುಮ್ನನೂ, ನಕುಲ-ಸಹದೇವರೂ, ಅರ್ಜುನನೂ, ಕೃಷ್ಣನೂ ನೋಡುತ್ತಿರುವಂತೆಯೇ ಅಶ್ವತ್ಥಾಮರು ರಾಕ್ಷಸರ ಒಂದು ಅಕ್ಷೋಹಿಣಿ ಸೈನ್ಯವನ್ನು ನಿಶಿತವಾದ ಬಾಣಗಳಿಂದ ವಿನಾಶ-ಗೊಳಿಸಿದರು.

ಪ್ರಗಾಢಮಂಜೋಗತಿಭಿರ್ನಾರಾಚೈರಭತಾಡಿತಾಃ ।
ನಿಪೇತುರ್ದ್ವಿರದಾ ಭೂಮೌ ದ್ವಿಶೃಂಗಾ ಇವ ಪರ್ವತಾಃ ॥ ೧೧೬ ॥

ಚೆನ್ನಾಗಿ ಸಾಗುವ ನಾರಾಚಗಳಿಂದ ಗಾಢವಾಗಿ ಹೊಡೆಯಲ್ಪಟ್ಟ ಗಜಗಳು ಎರಡು ಶಿಖರವುಳ್ಳ ಪರ್ವತಗಳಂತೆ ಭೂಮಿಯಲ್ಲಿ ಬಿದ್ದವು.

ನಿಕೃತ್ತೈರ್ಹಸ್ತಿಹಸ್ತೈಶ್ಚ ವಿಚಲದ್ಭಿರಿತಸ್ತತಃ ।
ರರಾಜ ವಸುಧಾ ಕೀರ್ಣಾ ವಿಸರ್ಪದ್ಭಿರಿವೋರಗೈಃ ॥ ೧೧೭ ॥

ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಅಲ್ಲಲ್ಲಿ ಹೊರಳಾಡುವ ಸೊಂಡಿಲುಗಳಿಂದ ಭೂಮಿಯು ಹೊರಳಾಡುವ ಸರ್ಪಗಳಿಂದ ಹರಡಲ್ಪಟ್ಟಂತೆ ತೋರುತ್ತಿದ್ದಿತು.

ಕ್ಷಿಪ್ತೈಃ ಕಾಂಚನದಂಡೈಶ್ಚ ನೃಪಚ್ಛತ್ರೈಃ ಕ್ಷಿತಿರ್ಬಭೌ ।
ದ್ಯೌರಿವೋದಿತಚಂದ್ರಾರ್ಕಾ ಗ್ರಹಾಕೀರ್ಣಾ ಯುಗಕ್ಷಯೇ ॥ ೧೧೮ ॥

ರಾಜರ ಎಸೆದ ಚಿನ್ನದ ದಂಡಗಳಿಂದ ಕೂಡಿದ ಶ್ವೇತಛತ್ರಗಳಿಂದ ಭೂಮಿಯು ಯುಗಾಂತ ಕಾಲದಲ್ಲಿ ಉದಯಿಸಿದ ಸೂರ್ಯ-ಚಂದ್ರರಿಂದ ಮತ್ತು ಗ್ರಹಗಳಿಂದ ತುಂಬಿದ ಆಕಾಶದಂತೆ ಕಾಣುತ್ತಿದ್ದಿತು.

ಪ್ರವೃದ್ಧದ್ವಜಮಂಡೂಕಾಂ ಭೇರೀವಿಸ್ತೀರ್ಣಕಚ್ಛಪಾಮ್ ।
ಛತ್ರಹಂಸಾವಲೀಜುಷ್ಟಾಂ ಫೇನಚಾಮರಮಾಲಿನೀಮ್ ॥ ೧೧೯ ॥

ಕಂಕಗೃಧ್ರಮಹಾಗ್ರಾಹಾಂ ನೈಕಾಯುಧಝಷಾಕುಲಾಮ್ ।
ರಥಕ್ಷಿಪ್ತಮಹಾವಪ್ರಾಂ ಪತಾಕಾರುಚಿರದ್ರುಮಾಮ್ ॥ ೧೨೦ ॥

ಶರಮೀನಾಂ ಮಹಾರೌದ್ರಾಂ ಪ್ರಾಸಶಕ್ಯುಗ್ರಡುಂಡುಭಾಮ್ ।
ಮಜ್ಜಾಮಾಂಸಮಹಾಪಂಕಾಂ ಕಬಂಧಾವರ್ಜಿತೋಡುಪಾಮ್ ॥೧೨೧॥

ಕೇಶಶೈವಲಕಲ್ಮಾಷಾಂ ಭೀರೂಣಾಂ ಕಶ್ಮಲಾವಹಾಮ್ ।
ನಾಗೇಂದ್ರಹಯಯೋಧಾನಾಂ ಶರೀರವ್ಯಯಸಂಭವಾಮ್ ॥ ೧೨೨ ॥

ಶೋಣಿತೌಘಮಹಾವೇಗಾಂ ದ್ರೌಣಿಃ ಪ್ರಾವರ್ತಯನ್ನದೀಮ್ ।
ಯೋಧಾರ್ತರವನಿರ್ಘೋಷಾಂ ಕ್ಷತಜೋರ್ಮಿಸಮಾಕುಲಾಮ್ ॥೧೨೩॥

ಉನ್ನತವಾದ ಧ್ವಜಗಳೆಂಬ ಮಂಡೂಕಗಳಿಂದಲೂ, ಭೇರಿಗಳೆಂಬ ವಿಸ್ತಾರವಾದ ಕೂರ್ಮಗಳಿಂದಲೂ, ಛತ್ರಗಳೆಂಬ ಹಂಸಸಮೂಹಗಳಿಂದಲೂ, ನೊರೆಗಳೆಂಬ ಚಾಮರದ ಪುಂಖಗಳಿಂದಲೂ, ಕಂಕಗೃಧ್ರಗಳೆಂಬ ಮಹಾಮೊಸಳೆಗಳಿಂದಲೂ, ಅನೇಕ ಆಯುಧಗಳೆಂಬ ಮೊಸಳೆಗಳಿಂದಲೂ, ಎಸೆದ ರಥಗಳೆಂಬ ದೊಡ್ಡ ಕೋಟೆಗಳಿಂದಲೂ, ಪತಾಕೆಗಳೆಂಬ ಮನೋಹರವಾದ ವೃಕ್ಷಗಳಿಂದಲೂ, ಬಾಣಗಳೆಂಬ ಮೀನುಗಳಿಂದಲೂ, ಪ್ರಾಸ-ಶಕ್ತಿಗಳೆಂಬ ಉಗ್ರವಾದ ಡುಂಡುಭ ಜಾತಿಯ ಸರ್ಪಗಳಿಂದಲೂ, ಮಜ್ಜಾ-ಮಾಂಸಗಳೆಂಬ ದೊಡ್ಡ ಕೆಸರಿನಿಂದಲೂ, ರುಂಡಗಳೆಂಬ ಜನರಿಲ್ಲದ ದೋಣಿಗಳಿಂದಲೂ, ಯುವಕರ ಮತ್ತು ವೃದ್ಧರ ಕಪ್ಪಾದ ಮತ್ತು ಬಿಳಿಯ ತಲೆಕೂದಲುಗಳೆಂಬ ಪಾಚಿಗಳಿಂದಲೂ, ಹೇಡಿಗಳಿಗೆ ವಿಷಾದವನ್ನುಂಟು ಮಾಡುವ ಮಹಾಭೀಕರವಾದ ಅಶ್ವ-ಗಜ-ಯೋಧರ ಮೃತ ಶರೀರಗಳಿಂದ ಉಂಟಾದ ರಕ್ತ ಪ್ರವಾಹದ ಮಹಾವೇಗವನ್ನು ಹೊಂದಿದ, ಯೋಧರ ಸಂಕಟಧ್ವನಿ ಎಂಬ ದೊಡ್ಡ ಘೋಷವನ್ನು ಹೊಂದಿದ, ರಕ್ತದ ತರಂಗಗಳಿಂದ ನಿಬಿಡವಾದ ಮಹಾಘೋರವಾದ ನದಿಯನ್ನು ಅಶ್ವತ್ಥಾಮರು ಪ್ರವರ್ತಿಸಿದರು (ನಿರ್ಮಿಸಿದರು).

ಪ್ರಾಯಾದತಿಮಹಾಘೋರಂ ಯಮಕ್ಷಯಮಹೋದಧಿಮ್ ।
ನಿಹತ್ಯ ರಾಕ್ಷಸಾನ್ ಬಾಣೈರ್ದ್ರೌಣಿರ್ಹೈಡಿಂಬಮಾರ್ದಯತ್ ॥೧೨೪॥

ಆ ನದಿಯು ಮಹಾಘೋರವಾದ ಯಮಲೋಕವೆಂಬ ಸಾಗರದ ಕಡೆಗೆ ಹರಿಯಿತು. ಅಶತ್ಥಾಮರು ರಾಕ್ಷಸರನ್ನು ಸಂಹರಿಸಿ ಘಟೋತ್ಕಚನನ್ನು ಚೆನ್ನಾಗಿ ಪೀಡಿಸಿದರು.

ಪುನರಪ್ಯತಿಸಂಕ್ರುದ್ಧಃ ಸವೃಕೋದರಪಾರ್ಷತಾನ್ ।
ಸ ನಾರಾಚಗಣೈಃ ಪಾರ್ಥಾನ್ ದ್ರೌಣಿರ್ವಿದ್ವಾ ಮಹಾಬಲಃ॥ ೧೨೫ ॥

ಜಘಾನ ಸುರಥಂ ನಾಮ ದ್ರುಪದಸ್ಯ ಸುತಂ ವಿಭುಃ ।
ಪುನಃ ಶ್ರುತಂಜಯಂ ನಾಮ ಸುರಥಸ್ಯಾನುಜಂ ರಣೇ ॥ ೧೨೬ ॥

ಪುನಃ ಕೋಪಗೊಂಡ ಮಹಾಬಲರಾದ ಅಶ್ವತ್ಥಾಮರು ವೃಕೋದರ ಮತ್ತು ಧೃಷ್ಟದ್ಯುಮ್ನನಿಂದ ಸಹಿತರಾದ ಪಾಂಡವಯೋಧರನ್ನು ನಾರಾಚ ಸಮೂಹಗಳಿಂದ

ಹೊಡೆದು, ದ್ರುಪದಪುತ್ರನಾದ ಸುರಥನೆಂಬುವವನನ್ನು ಕೊಂದರು. ವಿಶೇಷ ಸಾಮರ್ಥ್ಯವುಳ್ಳವರು ಪುನಃ ಶ್ರುತಂಜಯನೆಂಬ ಸುರಥನ ತಮ್ಮನನ್ನೂ ರಣರಂಗದಲ್ಲಿ ಕೊಂದರು.

ಬಲಾನೀಕಂ ಜಯಾನೀಕಂ ಜಯಾಶ್ವಂ ಚಾಭಿಜಘ್ನಿವಾನ್ ।
ಶ್ರುತಾಹ್ವಯಂ ಚ ರಾಜೇಂದ್ರ ದ್ರೌಣಿರ್ನಿನ್ಯೇ ಯಮಕ್ಷಯಮ್ ॥೧೨೭॥

ಎಲೈ ರಾಜೇಂದ್ರನೇ, ದ್ರುಪದನ ಮಕ್ಕಳಾದ ಬಲಾನೀಕ, ಜಯಾನೀಕ, ಜಯಾಶ್ವ, ಶ್ರುತಾಹ್ವಯ - ಇವರನ್ನು ಅಶ್ವತ್ಥಾಮರು ಬಾಣಗಳಿಂದ ಹೊಡೆದು ಯಮಲೋಕಕ್ಕೆ ಕಳುಹಿಸಿದರು.

ತ್ರಿಭಿಶ್ಚಾನ್ಯೈಃ ಶರೈಸ್ತೀಕ್ಷ್ಣೈಃ ಸುಪುಂಖೈ ರುಗ್ಮಮಾಲಿನಮ್ ।
ಶತ್ರುಂಜಯಂ ಚ ಬಲಿನಂ ಶಕ್ರಲೋಕಂ ನಿನಾಯ ಹ ॥ ೧೨೮ ॥

ಒಳ್ಳೆಯ ಪುಂಖಗಳನ್ನು ಹೊಂದಿದ ಬೇರೆಯ ಮೂರು ನಿಶಿತವಾದ ಬಾಣಗಳಿಂದ ರುಗ್ಮಮಾಲಿಯನ್ನೂ ಮತ್ತು ಬಲಿಷ್ಠನಾದ ಶತ್ರುಂಜಯನನ್ನೂ ಇಂದ್ರಲೋಕಕ್ಕೆ ಕಳುಹಿಸಿದರು.

ಜಘಾನ ಸ ಪೃಷಧ್ರಂ ಚ ಚಂದ್ರದೇವಂ ಚ ಮಾನಿನಮ್ ।
ಕುಂತಿಭೋಜಸುತಾಂಶ್ಚಾಜೌ ದಶಭಿರ್ದಶ ಜಘ್ನಿವಾನ್ ॥ ೧೨೯ ॥

ಆಹಂಕಾರಿಗಳಾದ ಪೃಷಧ್ರನನ್ನೂ ಮತ್ತು ಚಂದ್ರದೇವನನ್ನೂ ಕೊಂದು, ಕುಂತಿಭೋಜನ ಹತ್ತುಪುತ್ರರನ್ನು ರಣರಂಗದಲ್ಲಿ ಹತ್ತು ಬಾಣಗಳಿಂದ ಕೊಂದರು.

ಅಶ್ವತ್ಥಾಮಾ ಸುಸಂಕ್ರುದ್ಧಃ ಸಂಧಾಯೋಗ್ರಮಜಿಹ್ಮಗಮ್ ।
ಮುಮೋಚಾಕರ್ಣಪೂರ್ಣೇನ ಧನುಷಾ ಶರಮುತ್ತಮಮ್ ।
ಯಮದಂಡೋಪಮಂ ಘೋರಮುದ್ದಿಶ್ಯಾಶು ಘಟೋತ್ಕಚಮ್ ॥೧೩೦॥

ಬಹಳ ಕೋಪಗೊಂಡ ಅಶ್ವತ್ಥಾಮರು ನೇರವಾಗಿ ಸಾಗುವ ಒಂದು ಉಗ್ರವಾದ ಬಾಣವನ್ನು ಧನುಸ್ಸಿನಲ್ಲಿ ಹೂಡಿ ಹೆದೆಯನ್ನು ಕಿವಿಯವರೆಗೂ ಎಳೆದು ಯಮದಂಡ ಸದೃಶವಾದ ಆ ಶ್ರೇಷ್ಠವಾದ ಮತ್ತು ಘೋರವಾದ ಬಾಣವನ್ನು ಘಟೋತ್ಕಚನ ಮೇಲೆ ಪ್ರಯೋಗಿಸಿದರು.

ಸ ಭಿತ್ತ್ವಾ ಹೃದಯಂ ತಸ್ಯ ರಾಕ್ಷಸಸ್ಯ ಮಹಾಶರಃ ।
ವಿವೇಶ ವಸುಧಾಂ ಶೀಘ್ರಂ ಸಪುಂಖಃ ಪೃಥಿವೀಪತೇ ॥ ೧೩೧ ॥

ಎಲೈ ರಾಜನೇ, ಆ ದೊಡ್ಡ ಬಾಣವು ರಾಕ್ಷಸನಾದ ಘಟೋತ್ಕಚನ ಹೃದಯವನ್ನು ಭೇದಿಸಿ, ಒಳ್ಳೆಯ ಪುಂಖದೊಡನೆ ಶೀಘ್ರವಾಗಿ ಭೂಮಿಯಲ್ಲಿ ಇಳಿಯಿತು.

ತಂ ಹತಂ ಪತಿತಂ ಜ್ಞಾತ್ವಾ ಧೃಷ್ಟದ್ಯುಮ್ನೋ ಮಹಾರಥಃ ।
ದ್ರೌಣೇಃ ಸಕಾಶಾದ್ ರಾಜೇಂದ್ರ ಅಪನಿನ್ಯೇ ರಥಾಂತರಮ್ ॥ ೧೩೨ ॥

ಕೆಳಗೆ ಬಿದ್ದ ಘಟೋತ್ಕಚನು ಮೃತನಾದನೆಂದು ತಿಳಿದು, ಎಲೈ ರಾಜೇಂದ್ರನೇ, ಮಹಾರಥನಾದ ಧೃಷ್ಟದ್ಯುಮ್ನನು ಅಶ್ವತ್ಥಾಮರನ್ನು ಬಿಟ್ಟು ಬೇರೆಯ ರಥದ ಕಡೆಗೆ ಹೋದನು.

ತಥಾ ಪರಾಙ್ಮುಖರಥಂ ಸೈನ್ಯಂ ಯೌಧಿಷ್ಠಿರಂ ನೃಪ ।
ಪರಾಜಿತ್ಯ ರಣೇ ವೀರೋ ದ್ರೋಣಪುತ್ರೋ ನನಾದ ಹ ।
ಪೂಜಿತಃ ಸರ್ವಭೂತೈಶ್ಚ ತವ ಪುತ್ರೈಶ್ಚ ಭಾರತ ॥ ೧೩೩ ॥

ಆ ರೀತಿಯಲ್ಲಿ ಯುಧಿಷ್ಠಿರನ ಸೈನ್ಯದ ಮಹಾರಥರು ಯುದ್ಧ ಪರಾಙ್ಮುಖರಾಗುವಂತೆ ಮಾಡಿ ಎಲೈ ರಾಜನೇ, ಮಹಾರಥನೇ, ದ್ರೋಣಪುತ್ರರಾದ ವೀರರಾದ ಅಶ್ವತ್ಥಾಮರು ಯುಧಿಷ್ಠಿರ ಸೈನ್ಯವನ್ನು ಯುದ್ಧದಲ್ಲಿ ಸೋಲಿಸಿ, ಸಿಂಹನಾದವನ್ನು ಮಾಡಿ ಸರ್ವಯೋಧರಿಂದಲೂ ಮತ್ತು ನಿನ್ನ ಪುತ್ರರಿಂದಲೂ ಪೂಜಿಸಲ್ಪಟ್ಟರು.

ಅಥ ಶರಶತಭಿನ್ನಕೃತ್ತದೇಹೈ-
ರ್ಹತಪತಿತೈಃ ಕ್ಷಣದಾಚರೈಃ ಸಮಂತಾತ್ ।
ನಿಧನಮುಪಗತೈರ್ಮಹೀ ಕೃತಾಭೂದ್-
ಗಿರಿಶಿಖರೈರಿವ ದುರ್ಗಮಾತಿರೌದ್ರಾ ॥ ೧೩೪ ॥

ಆಗ ನೂರಾರು ಬಾಣಗಳಿಂದ ದೇಹವು ಕತ್ತರಿಸಲ್ಪಟ್ಟು ಎಲ್ಲ ಕಡೆಗಳಲ್ಲಿಯೂ ಮೃತರಾಗಿ ಬಿದ್ದ ರಾಕ್ಷಸ ಶರೀರಗಳಿಂದ ತುಂಬಿದ ಭೂಮಿಯು ಪರ್ವತ ಶಿಖರಗಳಿಂದ ಹರಡಲ್ಪಟ್ಟಂತೆ ನಡೆಯಲು ಅತ್ಯಂತ ದುರ್ಗಮವೂ ಮತ್ತು ಅತಿಭಯಂಕರವೂ ಆಗಿದ್ದಿತು.

ತಂ ಸಿದ್ಧಗಂಧರ್ವಪಿಶಾಚಸಂಘಾ
ನಾಗಾಃ ಸುಪರ್ಣಾಃ ಪಿತರೋ ವಯಾಂಸಿ ।
ರಕ್ಷೋಗಣಾ ಭೂತಗಣಾಶ್ಚ ದ್ರೋಣ-
ಮಪೂಜಯನ್ನಪ್ಸರಸಃ ಸುರಾಶ್ಚ ॥ ೧೩೫ ॥

ಆ ಅಶ್ವತ್ಥಾಮರನ್ನು ಸಿದ್ಧ-ಗಂಧರ್ವ-ಪಿಶಾಚ ಸಮೂಹಗಳು ನಾಗಗಳೂ, ಸುಪರ್ಣಗಳೂ, ಪಿತೃಗಳೂ, ಪಕ್ಷಿಗಳೂ, ರಾಕ್ಷಸಸಮೂಹಗಳೂ, ಭೂತ-ಸಮೂಹಗಳೂ, ದೇವತೆಗಳೂ ಅಪ್ಸರೆಯರೂ ಪೂಜಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಿಚತ್ವಾರಿಂಶದಧಿಕಶತತಮೋಽಧ್ಯಾಯಃ ॥

॥ ಜಯದ್ರಥವಧಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೂರನೆಯ ಅಧ್ಯಾಯ

ಭೀಮಸೇನನಿಂದ ಬಾಹ್ಲೀಕ ರಾಜನ, ದುರ್ಯೋಧನ ಹತ್ತು ತಮ್ಮಂದಿರ ಮತ್ತು ಶಕುನಿಯ ಐದು ತಮ್ಮಂದಿರ ವಧೆ.

ಸಂಜಯಃ

ದ್ರುಪದಸ್ಯಾತ್ಮಜಾನ್ ದೃಷ್ಟ್ವಾ ಕುಂತಿಭೋಜಸುತಾಂಸ್ತಥಾ ।
ದ್ರೋಣಪುತ್ರೇಣ ನಿಹತಾನ್ ರಾಕ್ಷಸಾಂಶ್ಚ ಸಹಸ್ರಶಃ ॥ ೧ ॥

ಯುಧಿಷ್ಠಿರೋ ಭೀಮಸೇನೋ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಯುಯುಧಾನಶ್ಚ ಸಂಯತ್ತಾ ಯುದ್ಧಾಯೈವ ಮನೋ ದಧುಃ ॥ ೨ ॥

ಸಂಜಯ– ದ್ರುಪದನ ಪುತ್ರರೂ, ಕುಂತಿಭೋಜನ ಪುತ್ರರೂ ಮತ್ತು ಸಹಸ್ರ ಸಂಖ್ಯೆಯಲ್ಲಿ ರಾಕ್ಷಸರೂ ಅಶ್ವತ್ಥಾಮರಿಂದ ಹತರಾದುದನ್ನು ನೋಡಿ ಯುಧಿಷ್ಠಿರ, ಭೀಮಸೇನ, ಪಾರ್ಷತನಾದ ಧೃಷ್ಟದ್ಯುಮ್ನ ಮತ್ತು ಯುಯುಧಾನರು ಪ್ರಯತ್ನ ಪೂರ್ವಕವಾಗಿ ಯುದ್ಧವನ್ನು ಮುಂದುವರಿಸಲು ಮನಸ್ಸು ಮಾಡಿದರು.

ಸೋಮದತ್ತಃ ಪುನಃ ಕ್ರುದ್ಧೋ ದೃಷ್ಟ್ವಾ ಸಾತ್ಯಕಿಮಾಹವೇ ।
ಮಹತಾ ಶರವರ್ಷೇಣ ಛಾದಯಾಮಾಸ ಸರ್ವತಃ ॥ ೩ ॥

ಸೋಮದತ್ತನು ಪುನಃ ಕೋಪಗೊಂಡು, ರಣರಂಗದಲ್ಲಿ ಸಾತ್ಯಕಿಯನ್ನು ನೋಡಿ ಬಾಣಗಳ ದೊಡ್ಡ ಮಳೆಯಿಂದ ಅವನನ್ನು ಎಲ್ಲ ಕಡೆಯಿಂದ ಮುಚ್ಚಿಹಾಕಿದನು.

ತತಃ ಸಮಭವದ್ ಯುದ್ಧಮತೀವ ಭಯವರ್ಧನಮ್ ।
ತ್ವದೀಯಾನಾಂ ಪರೇಷಾಂ ಚ ಘೋರಂ ವಿಜಯಕಾಂಕ್ಷಿಣಾಮ್ ॥ ೪ ॥

ಅನಂತರ ಜಯಾಕಾಂಕ್ಷಿಗಳಾದ ನಿನ್ನವರಿಗೂ ಮತ್ತು ಪಾಂಡವರಿಗೂ ಬಹಳ ಭಯಂಕರವಾದ, ಘೋರವಾದ ಯುದ್ಧವು ನಡೆಯಿತು.

ದಶಭಿಃ ಸಾತ್ವತಸ್ಯಾರ್ಥೇ ಭೀಮೋ ವಿವ್ಯಾಧ ಕೌರವಮ್ ।
ಸೋಮದತ್ತೋಽಪಿ ತಂ ವೀರಂ ಶತೇನ ಪ್ರತ್ಯವಿಧ್ಯತ ॥ ೫ ॥

ಧೃಷ್ಟದ್ಯುಮ್ನನನ್ನು ರಕ್ಷಿಸುವ ಸಲುವಾಗಿ ಭೀಮಸೇನನು ಹತ್ತು ಬಾಣಗಳಿಂದ ಕೌರವನಾದ ಸೋಮದತ್ತನನ್ನು ಹೊಡೆದನು. ಸೋಮದತ್ತನೂ ಸಹ ವೀರನಾದ ಭೀಮಸೇನನನ್ನು (ಸಾತ್ಯಕಿಯನ್ನು) ನೂರು ಬಾಣಗಳಿಂದ ಪ್ರತಿಯಾಗಿ ಹೊಡೆದನು.

ಸಾತ್ವತಸ್ತ ಭೃಶಂಕ್ರುದ್ಧಃ ಪುತ್ರಾಧಿಭರಭಪ್ಲುತಮ್ ।
ವೃದ್ಧಮೃದ್ಧಂ ಗುಣೈಃ ಸರ್ವೈರ್ಯಯಾತಿಮಿವ ನಾಹುಷಮ್ ॥ ೬ ॥

ವಿವ್ಯಾಧ ದಶಭಿಸ್ತೀಕ್ಷ್ಣೈಃ ಶರೈರ್ವಜ್ರನಿಪಾತಿಭಿಃ ।
ಶಕ್ಯಾ ಚೈನಮಥಾಹತ್ಯ ಪುನರ್ವಿವ್ಯಾಧ ಸಪ್ತಭಿಃ ॥ ೭ ॥

ಸಾತ್ಯಕಿಯು ಅತ್ಯಂತ ಕೋಪಗೊಂಡು ಪುತ್ರವ್ಯಸನದಿಂದ ತುಂಬಿಹೋಗಿದ್ದ ವೃದ್ಧನೂ, ನಹುಷ ಪುತ್ರನಾದ ಯಯಾತಿಯಂತೆ ಸರ್ವಗುಣಗಳಿಂದ ಸಮೃದ್ಧನೂ ಆದ ಬಾಹ್ಲೀಕರಾಜನನ್ನು ವಜ್ರದಂತೆ ಬೀಳುವ ಹತ್ತು ತೀಕ್ಷ್ಣವಾದ ಬಾಣಗಳಿಂದ ಹೊಡೆದನು. ಅನಂತರ ಅವನನ್ನು ಶಕ್ಯಾಯುಧದಿಂದ ಹೊಡೆದು ಪುನಃ ಏಳು ಬಾಣಗಳಿಂದ ಹೊಡೆದನು.

ತತಸ್ತು ಸಾತ್ಯಕೇರರ್ಥೇ ಭೀಮಸೇನೋ ನವಂ ದೃಢಮ್ ।
ಮುಮೋಚ ಪರಿಘಂ ಘೋರಂ ಸೋಮದತ್ತಸ್ಯ ಮೂರ್ಧನಿ ॥ ೮ ॥

ಆನಂತರ ಸಾತ್ಯಕಿಯ ಸಲುವಾಗಿ ಭೀಮಸೇನನು ಹೊಸದಾದ ಬಲಿಷ್ಠವಾದ ಘೋರವಾದ ಪರಿಘವನ್ನು ತೆಗೆದುಕೊಂಡು ಅದನ್ನು ಸೋಮದತ್ತನ ಶಿರಸ್ಸಿನ ಮೇಲೆ ಎಸೆದನು.

ಸಾತ್ಯಕಿಶ್ಚಾಗ್ನಿಸಂಕಾಶಂ ಮುಮೋಚ ಶರಮುತ್ತಮಮ್ ।
ಸೋಮದತ್ತೋರಸಿ ಕ್ರುದ್ಧಃ ಸುಪತ್ರಂ ನಿಶಿತಂ ಯುಧಿ ॥ ೯ ॥

ಸಾತ್ಯಕಿಯೂ ಸಹ ಕ್ರುದ್ಧನಾಗಿ ಒಳ್ಳೆಯ ಪತ್ರಗಳಿಂದ ಕೂಡಿದ ಅಗ್ನಿಯಂತಿದ್ದ ನಿಶಿತವಾದ ಶ್ರೇಷ್ಠವಾದ ಒಂದು ಬಾಣದಿಂದ ರಣರಂಗದಲ್ಲಿ ಸೋಮದತ್ತನನ್ನು ಎದೆಯಲ್ಲಿ ಹೊಡೆದನು.

ಯುಗಪತ್ಪೇತತುರಥ ಘೋರೌ ಪರಿಘಮಾರ್ಗಣೌ ।
ಶರೀರೇ ಸೋಮದತ್ತಸ್ಯ ಸ ಪಪಾತ ಮಹಾರಥಃ ॥ ೧೦ ॥

ಘೋರವಾದ ಭೀಮಸೇನನ ಪರಿಘವೂ ಮತ್ತು ಸಾತ್ಯಕಿಯ ಬಾಣವೂ ಒಂದೇ ಕಾಲದಲ್ಲಿ ಸೋಮದತ್ತನ ಶರೀರದಲ್ಲಿ ಬಿದ್ದವು. ಮಹಾರಥನಾದ ಅವನು ರಥದಿಂದ ಕೆಳಗೆ ಬಿದ್ದನು.

ವ್ಯಾಮೋಹಿತೇ ತು ತನಯೇ ಬಾಹ್ಲೀಕಃ ಸಮುಪಾದ್ರವತ್ ।
ವಿಸೃಜನ್ ಶರವರ್ಷಾಣಿ ಕಾಲವರ್ಷೀವ ತೋಯದಃ ॥ ೧೧ ॥

ತನ್ನ ಪುತ್ರನು ಮೂರ್ಛೆಯನ್ನು ಹೊಂದುತ್ತಿರಲು ಬಾಹ್ಲೀಕ ರಾಜನು ಮಳೆಗಾಲದಲ್ಲಿ ಮೋಡವು ನೀರನ್ನು ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸುತ್ತಾ ಅಲ್ಲಿಗೇ ಧಾವಿಸಿದನು.

ಭೀಮೋಽಥ ಸಾತ್ವತಸ್ಯಾರ್ಥೇ ಬಾಹ್ಲೀಕಂ ನವಭಿಃ ಶರೈಃ ।
ಪೀಡಯನ್ ವೈ ಮಹಾತ್ಮಾನಂ ವಿವ್ಯಾಧ ರಣಮೂರ್ಧನಿ ॥ ೧೨ ॥

ಆಗ ಭೀಮನು ಧೃಷ್ಟದ್ಯುಮ್ನನ ಸಲುವಾಗಿ ಪ್ರತೀಪ ಪುತ್ರನೂ, ಮಹಾತ್ಮನೂ ಆದ ಬಾಹ್ಲೀಕನನ್ನು ಆ ಘೋರವಾದ ಯುದ್ಧದಲ್ಲಿ ಒಂಬತ್ತು ಬಾಣಗಳಿಂದ ಹೊಡೆದನು (ಪ್ರತೀಪನ ಪುತ್ರ ಬಾಹ್ಲೀಕ. ಬಾಹ್ಲೀಕನ ಪುತ್ರ ಸೋಮದತ್ತ. ಸೋಮದತ್ತನ ಪುತ್ರರು ಭೂರಿ, ಭೂರಿಶ್ರವ ಮತ್ತು ಶಲ).

ಪ್ರಾತಿಪೇಯಸ್ತು ಸಂಕ್ರುದ್ಧಃ ಶಕ್ತಂ ಭೀಮಸ್ಯ ವಕ್ಷಸಿ ।
ನಿಚಖಾನ ಮಹಾಬಾಹುಃ ಪುರಂದರ ಇವಾಶನಿಮ್ ॥ ೧೩ ॥

ಪ್ರತೀಪ ಪುತ್ರನಾದ ಮಹಾಬಾಹುವಾದ ಬಾಹ್ಲೀಕನು ಬಹಳ ಕೋಪಗೊಂಡು ಭೀಮನ ಎದೆಯಲ್ಲಿ ಇಂದ್ರನು ವಜ್ರಾಯುಧವನ್ನು ನಾಟಿಸಿದಂತೆ ಒಂದು ಬಾಣವನ್ನು ನಾಟಿಸಿದನು.

ಸ ತಯಾऽಭಹತೋ ಭೀಮಶ್ಚಕಂಪೇ ಚ ಮುಮೋಹ ಚ ।
ಪ್ರಾಪ್ಯ ಚೇತಶ್ಚ ಬಲವಾನ್ ಗದಾಮಸ್ಯೈ ಸಸರ್ಜ ಹ ॥ ೧೪ ॥

ಆ ಬಾಣದಿಂದ ಹೊಡೆಯಲ್ಪಟ್ಟ ಭೀಮನು ನಡುಗಿ ಮೂರ್ಛೆಯನ್ನು ಹೊಂದಿದನು. ಬಲಿಷ್ಠನಾದ ಅವನು ಪುನಃ ಪ್ರಜ್ಞೆಯನ್ನು ಹೊಂದಿ ಬಾಹ್ಲೀಕನ ಮೇಲೆ ಒಂದು ಗದೆಯನ್ನು ಎಸೆದನು.

ಸಾ ಪಾಂಡವೇನ ಪ್ರಹಿತಾ ಬಾಹ್ಲೀಕಸ್ಯ ಶಿರೋऽಹರತ್ ।
ಸ ಪಪಾತ ಹತಃ ಪೃಥ್ವ್ಯಾಂ ವಜ್ರಾಹತ ಇವಾದ್ರಿರಾಟ್ ॥ ೧೫ ॥

ಪಾಂಡವನಾದ ಭೀಮಸೇನನಿಂದ ಎಸೆಯಲ್ಪಟ್ಟ ಆ ಗದೆಯು ಬಾಹ್ಲೀಕನ ಶಿರಸ್ಸನ್ನು ಹಾರಿಸಿತು. ಅವನು ವಜ್ರಾಯುಧದ ಹೊಡೆತಕ್ಕೆ ಸಿಕ್ಕಿದ ಪರ್ವತರಾಜನಂತೆ ಮೃತನಾಗಿ ಭೂಮಿಯ ಮೇಲೆ ಬಿದ್ದನು.

ತಸ್ಮಿನ್ ವಿನಿಹತೇ ವೀರೇ ಬಾಹ್ಲೀಕೇ ಪುರುಷರ್ಷಭೇ ।
ಪುತ್ರಾಸ್ತೇऽಭ್ಯರ್ದಯನ್ ಭೀಮಂ ದಶ ದಾಶರಥೇಃ ಸಮಾಃ ॥ ೧೬ ॥

ಪುರುಷಶ್ರೇಷ್ಠನಾದ ವೀರನಾದ ಆ ಬಾಹ್ಲೀಕನು ಹತನಾಗುತ್ತಿರಲು ರಾಮನಿಗೆ ಸಮಾನವಾದ ಪರಾಕ್ರಮವುಳ್ಳ ನಿನ್ನ ಹತ್ತು ಪುತ್ರರು ಭೀಮನನ್ನು ಮರ್ದಿಸಿದರು.

ನಾರಾಚೈರ್ದಶಭಿರ್ಭೀಮಸ್ತಾನ್ ನಿಹತ್ಯ ತವಾತ್ಮಜಾನ್ ।
ಕರ್ಣಸ್ಯ ದಯಿತಂ ಪುತ್ರಂ ವೃಷಸೇನಮವಾಕಿರತ್ ॥ ೧೭ ॥

ಭೀಮನು ಹತ್ತು ನಾರಾಚಗಳಿಂದ ಆ ನಿನ್ನ ಹತ್ತು ಪುತ್ರರನ್ನು ಹೊಡೆದು ಕರ್ಣನ ಪ್ರೀತಿಪಾತ್ರ ಪುತ್ರನಾದ ವೃಷಸೇನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತತೋ ವೃಷರಥೋ ನಾಮ ಭ್ರಾತಾ ಕರ್ಣಸ್ಯ ವಿಶ್ರುತಃ ।
ಜಘಾನ ಭೀಮಂ ನಾರಾಚೈಸ್ತಮಪ್ಯಭ್ಯವಧೀದ್ ಬಲೀ ॥ ೧೮ ॥

ಆಗ ಕರ್ಣನ ಪ್ರಖ್ಯಾತನಾದ ತಮ್ಮನಾದ ವೃಷರಥನು ಭೀಮನನ್ನು ನಾರಾಚಗಳಿಂದ ಹೊಡೆದನು. ಬಲಿಷ್ಠನಾದ ಭೀಮಸೇನನು ಅವನನ್ನೂ ಕೊಂದನು.

ತತಃ ಸಪ್ತ ರಥಾನ್ ವೀರಃ ಸ್ಯಾಲಾನಾಂ ತವ ಭಾರತ ।
ನಿಹತ್ಯ ಭೀಮೋ ನಾರಾಚೈಃ ಶತಚಂದ್ರಮಪೋಥಯತ್ ॥ ೧೯ ॥

ಎಲೈ ಭಾರತನೇ, ಆನಂತರ ವೀರನಾದ ಭೀಮನು ನಿನ್ನ ಭಾವಮೈದುರಾದ ಏಳು ರಥರನ್ನು ಕೊಂದು ನಾರಾಚಗಳಿಂದ ಶತಚಂದ್ರನನ್ನು ಸಂಹರಿಸಿದನು.

ಅಮರ್ಷಯಂತೋ ನಿಹತಂ ಶತಚಂದ್ರಂ ಮಹಾರಥಮ್ ।
ಶಕುನೇರ್ಭ್ರಾತರೋ ವೀರಾ ಗಜಾಕ್ಷಃ ಶರಭೋ ವಿಭುಃ ।
ಅಭಿದ್ರುತ್ಯ ಶರೈಸ್ತೀಕ್ಷ್ಣೈರ್ಭೀಮಸೇನಮತಾಡಯನ್ ॥ ೨೦ ॥

ಮಹಾರಥನಾದ ಶತಚಂದ್ರನು ಹತನಾದುದನ್ನು ನೋಡಿ ರೋಷಕ್ಕೆ ಒಳಗಾದ, ಶಕುನಿಯ ಸಹೋದರರಾದ, ವೀರರಾದ ಗಜಾಕ್ಷ, ಶರಭ ಮತ್ತು ವಿಭು ಎಂಬುವವರು ಭೀಮಸೇನನ ಕಡೆಗೆ ಧಾವಿಸಿ ಅವನನ್ನು ತೀಕ್ಷ್ಣವಾದ ಬಾಣಗಳಿಂದ ಹೊಡೆದರು.

ಸ ತುದ್ಯಮಾನೋ ನಾರಾಚೈರ್ವ್ಯಷ್ಟಿವೇಗೈರಿವರ್ಷಭಃ ।
ಜಘಾನ ಪಂಚಭಿರ್ಬಾಣೈಃ ಪಂಚೈವಾತಿಬಲೋ ರಥಾನ್ ।
ತಾನ್ ದೃಷ್ಟ್ವಾ ನಿಹತಾನ್ ವೀರಾನ್ ವಿಚೇಲುರ್ನೃಪಸತ್ತಮಾಃ॥ ೨೧ ॥

ನಾರಾಚಗಳಿಂದ ಹಿಂಸಿಸಲ್ಪಡುತ್ತಿದ್ದ ಭೀಮನು ಗೂಳಿಯು ಮಳೆಯ ಧಾರೆಗಳನ್ನು ತಡೆದಂತೆ ಅವುಗಳನ್ನು ಧರಿಸಿ, ಅತಿಬಲನಾದ ಅವನು ಐದು ಬಾಣಗಳಿಂದ

ಮಹಾರಥರಾದ ಆ ಐದು ಯೋಧರನ್ನೂ ಕೊಂದನು. ಆ ವೀರರು ಹತರಾದುದನ್ನು ನೋಡಿ ನೃಪಶ್ರೇಷ್ಠರು ನಡುಗಿದರು.

ತತೋ ಯುಧಿಷ್ಠಿರಃ ಕ್ರುದ್ಧಸ್ತವಾನೀಕಮಶಾತಯತ್ ।
ಮಿಷತಃ ಕುಂಭಯೋನೇಶ್ಚ ಪುತ್ರಾಣಾಂ ಚ ತವಾನಘ ॥ ೨೨ ॥

ಅನಂತರ ಯುಧಿಷ್ಠಿರನು ಕೋಪಗೊಂಡು ಎಲೈ ಅನಘನೇ, ಕುಂಭಯೋನಿಗಳಾದ ದ್ರೋಣರು ಮತ್ತು ನಿನ್ನ ಪುತ್ರರು ನೋಡುತ್ತಿರುವಂತೆಯೇ ನಿನ್ನ ಸೈನ್ಯವನ್ನು ನಾಶಗೊಳಿಸಿದನು.

ಅಂಬಷ್ಠಾನ್ ಮಾಲವಾನ್ ಶೂರಾಂಸ್ತ್ರಿಗರ್ತಾನ್ ಸಶಿಬೀನಪಿ ।
ಪ್ರಾಹಿಣೋತ್ ಮೃತ್ಯುಲೋಕಾಯ ಗಣಾನ್ ಯುದ್ಧೇ ಯುಧಿಷ್ಠಿರಃ ॥

ಅಂಬಷ್ಠರ, ಮಾಲವರ, ತ್ರಿಗರ್ತಶೂರರ, ಶಿಬಿಗಳ ಸಮೂಹಗಳನ್ನು ಯುಧಿಷ್ಠಿರನು ರಣರಂಗದಲ್ಲಿಮೃತ್ಯುಲೋಕಕ್ಕೆ ಕಳುಹಿಸಿದನು.

ಅಭೀಷಾಹಾನ್ ಶೂರಸೇನಾನ್ ಬಾಹ್ಲೀಕಾನ್ ಸವಸಾತಿಕಾನ್ ।
ನಿಕೃತ್ಯ ಪೃಥಿವೀಂ ರಾಜಾ ಚಕ್ರೇ ಶೋಣಿತಕರ್ದಮಾಮ್ ॥ ೨೪ ॥

ರಾಜನಾದ ಯುಧಿಷ್ಠಿರನು ಅಭೀಷಾಹರನ್ನು, ಶೂರಸೇನರನ್ನು, ಬಾಹ್ಲೀಕರನ್ನು ಮತ್ತು ವಸಾತಿಗಳನ್ನು ಕೊಂದು ಭೂಮಿಯನ್ನು ರಕ್ತದ ಕೆಸರುಳ್ಳದ್ದಾಗಿ ಮಾಡಿದನು.

ಯೌಧೇಯಾರಟ್ಟರಾಜನ್ಯಮದ್ರಕಾಣಾಂ ಗಣಾನ್ ಯುಧಿ ।
ಪ್ರಾಹಿಣೋತ್ ಮೃತ್ಯುಲೋಕಾಯ ಶೂರಾನ್ ಬಾಣೈರ್ಯುಧಿಷ್ಠಿರಃ ॥

ಯುಧಿಷ್ಠಿರನು ತನ್ನ ಬಾಣಗಳಿಂದ ಶೂರರಾದ ಯೌಧೇಯರ, ಆರಟ್ಟರ, ರಾಜನ್ಯರ, ಮದ್ರಕರ ಗಣಗಳನ್ನು ರಣರಂಗದಲ್ಲಿಮೃತ್ಯುಲೋಕಕ್ಕೆ ಕಳುಹಿಸಿದನು.

ಹತಾಹರತ ಗೃಹ್ಣೀತ ವಿದ್ಧ್ಯತ ವ್ಯವಕೃಂತತ ।
ಇತ್ಯಾಸೀತ್ತುಮುಲಃ ಶಬ್ದೋ ಯುಧಿಷ್ಠಿರರಥಂ ಪ್ರತಿ ॥ ೨೬ ॥

ಕೊಲ್ಲಿ, ಎಳೆದು ತನ್ನಿ, ಹಿಡಿಯಿರಿ, ಹೊಡೆಯಿರಿ, ಕತ್ತರಿಸಿ ಎಂಬ ತೀವ್ರವಾದ ಶಬ್ದಗಳು ಯುಧಿಷ್ಠಿರನ ರಥದ ಬಳಿಯಲ್ಲಿ ಉಂಟಾದವು.

ಸೈನ್ಯಾನಿ ದ್ರಾವಯಂತಂ ತಂ ದ್ರೋಣೋ ದೃಷ್ಟ್ವಾ ಯುಧಿಷ್ಠಿರಮ್ ।
ಚೋದಿತಸ್ತವ ಪುತ್ರೇಣ ಸಾಯಕೈರಭ್ಯವಾಕಿರತ್ ॥ ೨೭ ॥

ದ್ರೋಣರು ತಮ್ಮ ಸೈನ್ಯವನ್ನು ಓಡಿಸುತ್ತಿದ್ದ ಯುಧಿಷ್ಠಿರನನ್ನು ನೋಡಿ ನಿನ್ನ ಪುತ್ರನಿಂದ ಪ್ರಚೋದಿತರಾಗಿ ಯುಧಿಷ್ಠಿರನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ದ್ರೋಣಸ್ತು ಪರಮಕ್ರುದ್ಧೋ ವಾಯವ್ಯಾಸ್ತ್ರೇಣ ಪಾರ್ಥಿವಮ್ ।
ವಿವ್ಯಾಧ ಸೋಽಸ್ಯ ತದ್ದಿವ್ಯಮಸ್ತ್ರಮಸ್ತ್ರೇಣ ಜಘ್ನಿವಾನ್ ॥ ೨೮ ॥

ಬಹಳ ಕೋಪಗೊಂಡ ದ್ರೋಣರು ರಾಜನಾದ ಯುಧಿಷ್ಠಿರನನ್ನು ವಾಯವ್ಯಾಸ್ತ್ರದಿಂದ ಹೊಡೆದರು. ಯುಧಿಷ್ಠಿರನು ಆ ದಿವ್ಯಾಸ್ತ್ರವನ್ನು ಪ್ರತ್ಯಸ್ತ್ರದಿಂದ ನಾಶಪಡಿಸಿದನು.

ತಸ್ಮಿನ್ ವಿನಿಹತೇ ಚಾಸ್ತ್ರೇ ಭಾರದ್ವಾಜೋ ಯುಧಿಷ್ಠಿರೇ ।
ವಾರುಣಂ ಯಾಮ್ಯಮಾಗ್ನೇಯಂ ತ್ವಾಷ್ಟ್ರಂ ಸಾವಿತ್ರಮೇವ ಚ ।
ಚಿಕ್ಷೇಪ ಪರಮಕ್ರುದ್ಧೋ ಜಿಘಾಂಸುಃ ಪಾಂಡುನಂದನಮ್ ॥ ೨೯ ॥

ತಮ್ಮ ವಾಯವ್ಯಾಸ್ತ್ರವು ನಾಶವನ್ನು ಹೊಂದುತ್ತಿರಲು ದ್ರೋಣರು ಪರಮಕ್ರುದ್ಧರಾಗಿ ಪಾಂಡುನಂದನನಾದ ಯುಧಿಷ್ಠಿರನನ್ನು ಕೊಲ್ಲಲು ಬಯಸಿ ಅವನ ಮೇಲೆ ವಾರುಣಾಸ್ತ್ರವನ್ನೂ, ಯಾಮ್ಯಾಸ್ತ್ರವನ್ನೂ, ಆಗ್ನೇಯಾಸ್ತ್ರವನ್ನೂ, ತ್ವಾಷ್ಟ್ರಾಸ್ತ್ರವನ್ನೂ ಮತ್ತು ಸಾವಿತ್ರಾಸ್ತ್ರವನ್ನೂ ಪ್ರಯೋಗಿಸಿದರು.

ಕ್ಷಿಪ್ತಾನಿ ಕ್ಷಿಪ್ಯಮಾಣಾನಿ ತಾನಿ ಚಾಸ್ತ್ರಾಣಿ ಧರ್ಮಜಃ ।
ಜಘಾನಾಸ್ತ್ರೈರ್ಮಹಾಬಾಹುಃ ಕುಂಭಯೋನೇರವಿತ್ರಸನ್ ॥ ೩೦ ॥

ಕುಂಭಯೋನಿಗಳಾದ ದ್ರೋಣರಿಂದ ಪ್ರಯೋಗಿಸಲ್ಪಟ್ಟ ಮತ್ತು ಪ್ರಯೋಗಿಸಲ್ಪಡುತ್ತಿದ್ದ ಆ ಅಸ್ತ್ರಗಳನ್ನು ಮಹಾಬಾಹುವಾದ ಧರ್ಮರಾಜನು ಹೆದರದೆ ಅಸ್ತ್ರಗಳಿಂದ ನಾಶಪಡಿಸಿದನು.

ಸತ್ಯಾಂ ಚಿಕೀರ್ಷಮಾಣಸ್ತು ಪ್ರತಿಜ್ಞಾಂ ಕುಂಭಸಂಭವಃ ।
ಪ್ರಾದುಶ್ಚಕ್ರೇಽಸ್ತಮೈಂದ್ರಂ ವೈ ಪ್ರಾಜಾಪತ್ಯಂ ಚ ಭಾರತ ।
ಜಘಾಂಸುರ್ಧರ್ಮತನಯಂ ತವ ಪುತ್ರಹಿತೇ ರತಃ ॥ ೩೧ ॥

ಕುಂಭಸಂಭವರಾದ ದ್ರೋಣರು ತಮ್ಮ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡಲು ಬಯಸಿ ನಿನ್ನ ಪುತ್ರನ ಹಿತದಲ್ಲಿರತರಾಗಿ ಧರ್ಮರಾಜನನ್ನು ಕೊಲ್ಲುವ ಇಚ್ಛೆಯುಳ್ಳವರಾಗಿ ಎಲೈ ಭಾರತನೇ, ಐಂದ್ರಾಸ್ತ್ರವನ್ನೂ ಮತ್ತು ಪ್ರಾಜಾಪತ್ಯ ಅಸ್ತ್ರವನ್ನು ಪ್ರಾದುರ್ಭಾವ-ಗೊಳಿಸಿದರು.

ಪತಿಃ ಕುರೂಣಾಂ ಗಜಸಿಂಹಗಾಮೀ
ವಿಶಾಲವಕ್ಷಾಃ ಪೃಥುಲೋಹಿತಾಕ್ಷಃ ।
ಪ್ರಾದುಶ್ಚಕಾರಾಸ್ತ್ರಮಹೀನತೇಜಾ
ಮಾಹೇಂದ್ರಮನ್ಯತ್ ಸ ಜಘಾನ ತೇಽಸ್ತ್ರೈ ॥ ೩೨ ॥

ಕುರುಪತಿಯೂ, ಗಜಸಿಂಹಗತಿಯುಳ್ಳವನೂ, ವಿಶಾಲವಕ್ಷಸ್ಥಳವುಳ್ಳವನೂ, ವಿಸ್ತಾರವಾದ ಲೋಹಿತಾಕ್ಷವುಳ್ಳವನೂ, ಪೂರ್ಣವಾದ ತೇಜಸ್ಸುಳ್ಳವನೂ ಆದ ಯುಧಿಷ್ಠಿರನು ಇನ್ನೊಂದು ಐಂದ್ರಾಸ್ತ್ರವನ್ನು ಪ್ರಾದುರ್ಭಾವಗೊಳಿಸಿ ಆ ಎರಡು ಅಸ್ತ್ರಗಳನ್ನು ನಾಶಪಡಿಸಿದನು.

ವಿಹನ್ಯಮಾನೇಷ್ವಸ್ತ್ರೇಷು ದ್ರೋಣಃ ಕ್ರೋಧಸಮನ್ವಿತಃ ।
ಯುಧಿಷ್ಠಿರವಧಪ್ರೇಪ್ಸುರ್ಬ್ರಾಹ್ಮಮಸ್ತ್ರಮುದೈರಯತ್ ॥ ೩೩ ॥

ತಮ್ಮ ಅಸ್ತ್ರಗಳು ನಾಶಪಡಿಸಲ್ಪಡುತ್ತಿರಲು ಕ್ರೋಧ ಸಮನ್ವಿತರಾದ ದ್ರೋಣರು ಯುಧಿಷ್ಠಿರನ ವಧೆಯನ್ನು ಬಯಸಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದರು.

ತತೋ ನಾಜ್ಞಾಸಿಷಂ ಕಿಂಚಿದ್ ಘೋರೇಣ ತಮಸಾವೃತೇ ।
ಸರ್ವಭೂತಾನಿ ಚ ಪರಂ ತ್ರಾಸಂ ಜಗ್ಮುರ್ಮಹೀಪತೇ ॥ ೩೪ ॥

ಎಲೈ ರಾಜನೇ, ಆಗ ಘೋರವಾದ ತಮಸ್ಸಿನಿಂದ ಎಲ್ಲವೂ ಆವೃತವಾಗಿರಲು ನಾನು ಏನನ್ನೂ ತಿಳಿಯಲಿಲ್ಲ. ಆದರೆ ಎಲ್ಲ ವಾಹನಗಳೂ ಮತ್ತು ಯೋಧರೂ ಬಹಳ ತ್ರಾಸ (ಸಂಕಟ)ವನ್ನು ಹೊಂದಿದರು.

ಬ್ರಹ್ಮಾಸ್ತ್ರಮುದ್ಯತಂ ದೃಷ್ಟ್ವಾ ಕುಂತೀಪುತ್ರೋ ಯುಧಿಷ್ಠಿರಃ ।
ಬ್ರಹ್ಮಾಸ್ತ್ರೇಣೈವ ರಾಜೇಂದ್ರ ತದಸ್ತ್ರಂ ಪ್ರತ್ಯವಾರಯತ್ ॥ ೩೫ ॥

ಕಾರ್ಯೋನ್ಮುಖವಾದ ಬ್ರಹ್ಮಾಸ್ತ್ರವನ್ನು ನೋಡಿದ ಕುಂತೀಪುತ್ರನಾದ ಯುಧಿಷ್ಠಿರನು ಎಲೈ ರಾಜೇಂದ್ರನೇ, ಬ್ರಹ್ಮಾಸ್ತ್ರದಿಂದಲೇ ಆ ಅಸ್ತ್ರವನ್ನು ನಿವಾರಿಸಿದನು.

ತತಃ ಸೈನಿಕಮುಖ್ಯಾಸ್ತೇ ಪ್ರಶಶಂಸುರ್ನರರ್ಷಭೌ ।
ದ್ರೋಣಪಾರ್ಥೌ ಮಹೇಷ್ವಾಸೌ ಸರ್ವಯುದ್ಧವಿಶಾರದೌ ॥ ೩೬ ॥

ಆಗ ಆ ಸೈನಿಕರಲ್ಲಿ ಮುಖ್ಯರಾದವರು ಮಹಾಧನುರ್ಧಾರಿಗಳೂ, ಸರ್ವ ಯುದ್ಧವಿಶಾರದರೂ, ನರಶ್ರೇಷ್ಠರೂ ಆದ ದ್ರೋಣರನ್ನು ಮತ್ತು ಯುಧಿಷ್ಠಿರನನ್ನು ಪ್ರಶಂಸೆ ಮಾಡಿದರು.

ತತಃ ಪ್ರಮುಚ್ಯ ಕೌಂತೇಯಂ ದ್ರೋಣೋ ದ್ರುಪದವಾಹಿನೀಮ್ ।
ವ್ಯಧಮದ್ ರೋಷತಾಮ್ರಾಕ್ಷೋ ವಾಯವ್ಯಾಸ್ತ್ರೇಣ ಭಾರತ ॥ ೩೭ ॥

ಎಲೈ ಭಾರತನೇ, ಆಗ ಕೋಪದಿಂದ ಕೆಂಪಾದ ಕಣ್ಣುಳ್ಳ ದ್ರೋಣರು ಧರ್ಮರಾಜನನ್ನು ಬಿಟ್ಟು ದ್ರುಪದನ ಸೈನ್ಯವನ್ನು ವಾಯವ್ಯಾಸ್ತ್ರದಿಂದ ಹಾರಿಸಿದರು.

ತೇ ಹನ್ಯಮಾನಾ ದ್ರೋಣೇನ ಪಾಂಚಾಲಾಃ ಪ್ರಾದ್ರವನ್ ಭಯಾತ್ ।
ಪಶ್ಯತೋ ಭೀಮಸೇನಸ್ಯ ಪಾರ್ಥಸ್ಯ ಚ ಮಹಾತ್ಮನಃ ॥ ೩೮ ॥

ದ್ರೋಣರ ಆ ಅಸ್ತ್ರದಿಂದ ಪೀಡಿಸಲ್ಪಟ್ಟ ಪಾಂಚಾಲರು ಭೀಮಸೇನನು ಮತ್ತು ಮಹಾತ್ಮನಾದ ಅರ್ಜುನನು ನೋಡುತ್ತಿರುವಂತೆಯೇ ಭಯದಿಂದ ಓಡಿಹೋದರು.

ತತಃ ಕಿರೀಟೀ ಭೀಮಶ್ಚ ಸಹಸಾ ಸಂನ್ಯವರ್ತತಾಮ್ ।
ಮಹದ್ಭ್ಯಾಂ ರಥವಂಶಾಭ್ಯಾಂ ಪರಿಗೃಹ್ಯ ಬಲಂ ತವ ॥ ೩೯ ॥

ಆಗ ಅರ್ಜುನ ಮತ್ತು ಭೀಮಸೇನನು ದೊಡ್ಡ ರಥಸಮೂಹಗಳನ್ನು ತೆಗೆದುಕೊಂಡು ನಿನ್ನ ಸೈನ್ಯವನ್ನು ಉದ್ದೇಶಿಸಿ ತಕ್ಷಣ ಹಿಂದಿರುಗಿದರು.

ಬೀಭತ್ಸುರ್ದಕ್ಷಿಣಂ ಪಾರ್ಶ್ವಮುತ್ತರಂ ತು ವೃಕೋದರಃ ।
ಭಾರದ್ವಾಜಂ ಶರೌಘಾಭ್ಯಾಂ ಮಹದ್ಭ್ಯಾಮಭ್ಯವರ್ಷತಾಮ್ ॥ ೪೦ ॥

ಅರ್ಜುನನು ದ್ರೋಣರ ಸೈನ್ಯದ ಬಲಭಾಗವನ್ನೂ, ವೃಕೋದರನು ಎಡಭಾಗವನ್ನೂ ತಮ್ಮ ದೊಡ್ಡ ಬಾಣಸಮೂಹಗಳಿಂದ ಪೀಡಿಸಿದರು.

ತೌ ತದಾ ಸೃಂಜಯಾಶ್ಚೈವ ಪಾಂಚಾಲಾಶ್ಚ ಮಹೌಜಸಃ ।
ಅನ್ವಗಚ್ಛನ್ ಮಹಾರಾಜ ಮತ್ಸ್ಯಾಶ್ಚ ಸಹ ಸಾತ್ವತೈಃ ॥ ೪೧ ॥

ಎಲೈ ಮಹಾರಾಜನೇ, ಆಗ ಅವರಿಬ್ಬರನ್ನೂ ಸೃಂಜಯರೂ, ಮಹಾಶಕ್ತಿವಂತರಾದ ಪಾಂಚಾಲರೂ, ಸಾತ್ವತರಿಂದ ಸೇರಿದ ಮತ್ಸ್ಯರೂ ಹಿಂಬಾಲಿಸಿದರು.

ತತಃ ಸಾ ಭಾರತೀ ಸೇನಾ ವಧ್ಯಮಾನಾ ಕಿರೀಟಿನಾ ।
ದ್ರೋಣೇನ ವಾರ್ಯಮಾಣಾಸ್ತೇ ಸ್ವಯಂ ತವ ಸುತೇನ ಚ ।
ನಾಶಕ್ಯಂತ ಮಹಾರಾಜ ಯೋಧಾ ವಾರಯಿತುಂ ತದಾ ॥ ೪೨ ॥

ಆಗ ಅರ್ಜುನನಿಂದ ಹೊಡೆಯಲ್ಪಡುತ್ತಿದ್ದ ಆ ಕೌರವಸೇನೆಯು ದ್ರೋಣರಿಂದಲೂ ಮತ್ತು ಸ್ವತಃ ನಿನ್ನ ಪುತ್ರರಿಂದಲೂ ತಡೆಯಲ್ಪಟ್ಟಿತು. ಎಲೈ ಮಹಾರಾಜನೇ, ಉಳಿದ ಯೋಧರು ಅವರನ್ನು ತಡೆಯಲು ಆಗ ಸಮರ್ಥರಾಗಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಿಚತ್ವಾರಿಂಶದಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ನಾಲ್ಕನೆಯ ಅಧ್ಯಾಯ

ದುರ್ಯೋಧನನ ಎದುರಿನಲ್ಲಿ ಕರ್ಣ ಮತ್ತು ಕೃಪರ ಕಲಹ.

ಸಂಜಯಃ

ಉದೀರ್ಯಮಾಣಂ ತದ್ ದೃಷ್ಟ್ವಾ ಪಾಂಡವಾನಾಂ ಮಹದ್ಬಲಮ್ ।
ಅವಿಷಹ್ಯಂ ಚ ಮನ್ವಾನಃ ಕರ್ಣಂ ದುರ್ಯೋಧನೋಽಬ್ರವೀತ್ ॥೧॥

ಸಂಜಯ– ಪಾಂಡವರ ದೊಡ್ಡ ಸೈನ್ಯವು ಅಭ್ಯುದ್ಧಿ ಹೊಂದುತ್ತಿರುವುದನ್ನು ನೋಡಿ ಅದನ್ನು ತಡೆಯಲು ಅಸಾಧ್ಯವೆಂದು ತಿಳಿದ ದುರ್ಯೋಧನನು ಕರ್ಣನನ್ನು ಕುರಿತು ಮಾತನಾಡಿದನು.

ಅಯಂ ಸ ಕಾಲಃ ಸಂಪ್ರಾಪ್ತೋ ಮಿತ್ರಾಣಾಂ ಮಿತ್ರವತ್ಸಲ ।
ತ್ರಾಯಸ್ವ ಸಮರೇ ಕರ್ಣ ಸರ್ವಾನ್ ಯೋಧಾನ್ ಮಹಾಬಲ ॥ ೨ ॥

ಪಾಂಚಾಲೈರ್ಮತ್ಸ್ಯಕೈಕೇಯೈಃ ಪಾಂಡವೈಶ್ಚ ಮಹಾರಥೈಃ ।
ವೃತಾನ್ ಸಮಂತಾತ್ ಸಂಕ್ರುದ್ಧೈರ್ನಿಃಶ್ವಸದ್ಭಿರಿವೋರಗೈಃ ॥ ೩ ॥

ಎಲೈ ಮಿತ್ರವತ್ಸಲನೇ, ಮಿತ್ರರು ಉಪಕಾರವನ್ನು ಮಾಡಬೇಕಾದ ಕಾಲವು ಈಗ ಪ್ರಾಪ್ತವಾಗಿದೆ. ಎಲೈ ಕರ್ಣನೇ, ಮಹಾಬಲನೇ, ಬಹಳ ಕೋಪಗೊಂಡು ಸರ್ಪಗಳಂತೆ ಉಸಿರಾಡುತ್ತಿರುವ ಪಾಂಚಾಲರಿಂದಲೂ, ಮತ್ಸ್ಯ ಕೇಕಯರಿಂದಲೂ, ಮಹಾರಥರಾದ ಪಾಂಡವರಿಂದಲೂ ಎಲ್ಲ ಕಡೆಗಳಲ್ಲಿಯೂ ಸುತ್ತುವರಿಯಲ್ಪಟ್ಟ ಎಲ್ಲಾ ಯೋಧರನ್ನೂ ಯುದ್ಧದಲ್ಲಿ ರಕ್ಷಿಸು.

ಏತೇ ನದಂತಿ ಸಂಹೃಷ್ಟಾಃ ಪಾಂಡವಾ ಜಿತಕಾಶಿನಃ ।
ಶಕ್ರೋಪಮಾಶ್ಚ ಬಹವಃ ಪಾಂಚಾಲಾನಾಂ ರಥವ್ರಜಾಃ ॥ ೪ ॥

ಜಯವನ್ನು ಗಮನಿಸಿದ ಪಾಂಡವರೂ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಪಾಂಚಾಲರ ಈ ರಥಸಮೂಹಗಳೂ ಸಂತೋಷದಿಂದ ಗರ್ಜಿಸುತ್ತಿವೆ.

ಕರ್ಣಃ

ಪರಿತ್ರಾತುಮಿಹ ಪ್ರಾಪ್ತೋ ಯದಿ ಪಾರ್ಥಂ ಪುರಂದರಃ ।
ತಮಪ್ಯಾಶು ಪರಾಜಿತ್ಯ ತತೋ ಹಂತಾಸ್ಮಿ ಪಾಂಡವಮ್ ॥ ೫ ॥

ಕರ್ಣ– ಅರ್ಜುನನನ್ನು ರಕ್ಷಣೆ ಮಾಡಲು ಇಂದ್ರನೇ ಬಂದರೂ ನಾನು ಅವನನ್ನೂ ಶೀಘ್ರವಾಗಿ ಪರಾಜಯಗೊಳಿಸಿ ಅರ್ಜುನನನ್ನು ಕೊಲ್ಲುವೆನು.

ಸತ್ಯಂ ತೇ ಪ್ರತಿಜಾನಾಮಿ ಸಮಾಶ್ವಸಿಹಿ ಭಾರತ ।
ಹಂತಾಸ್ಮಿ ಪಾಂಡುತನಯಾನ್ ಪಾಂಚಾಲಾಂಶ್ಚ ಸಮಾಗತಾನ್ ॥ ೬ ॥

ಎಲೈ ಭಾರತನೇ, ನಿನಗೆ ಶಪಥವನ್ನು ಮಾಡಿ ಹೇಳುತ್ತಿದ್ದೇನೆ. ಸಮಾಧಾನವನ್ನು ಹೊಂದು. ಯುದ್ಧಕ್ಕೆ ಬಂದ ಪಾಂಡುಪುತ್ರರನ್ನು ಮತ್ತು ಪಾಂಚಾಲರನ್ನು ಕೊಲ್ಲುವೆನು.

ಜಯಂ ತೇ ಪ್ರತಿಜಾನಾಮಿ ವಾಸವಸ್ಯೇವ ಪಾವಕಿಃ ।
ಪ್ರಿಯಂ ತವ ಮಯಾ ಕಾರ್ಯಮಿತಿ ಜೇವಾಮಿ ಪಾರ್ಥಿವ ॥ ೭ ॥

ಷಣ್ಮುಖನು ಇಂದ್ರನಿಗೆ ವಾಗ್ದಾನ ಮಾಡಿದಂತೆ ನಾನು ಈ ದಿನ ನಿನಗೆ ಜಯದ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ. ಎಲೈ ರಾಜನೇ, ನಾನು ನಿನಗೆ ಪ್ರಿಯವನ್ನು ಮಾಡಬೇಕು ಎಂದು ಬದುಕಿದ್ದೇನೆ.

ಸರ್ವೇಷಾಮೇವ ಪಾರ್ಥಾನಾಂ ಫಲ್ಗುನೋ ಬಲವತ್ತರಃ ।
ತಸ್ಯಾಮೋಘಾಂ ವಿಮೋಕ್ಷ್ಯಾಮಿ ಶಕ್ತಂ ಶಕ್ರವಿನಿರ್ಮಿತಾಮ್ ॥ ೮ ॥

ಪಾಂಡವರಲ್ಲಿ ಅರ್ಜುನನು ಎಲ್ಲರಿಗಿಂತಲೂ ಬಲಶಾಲಿಯಾದವನು. ಅವನ ಮೇಲೆ ಇಂದ್ರನು ಕೊಟ್ಟ ಅಮೋಘವಾದ ಶಕ್ತಿಯನ್ನು ಪ್ರಯೋಗಿಸುವೆನು.

ತಸ್ಮಿನ್ ಹತೇ ಮಹೇಷ್ವಾಸೇ ಭ್ರಾತರಸ್ತಸ್ಯ ಮಾನದ ।
ತವ ವಶ್ಯಾ ಭವಿಷ್ಯಂತಿ ವನಂ ಯಾಸ್ಯಂತಿ ವಾ ಪುನಃ ॥ ೯ ॥

ಎಲೈ ಮಾನದನೇ, ಮಹಾಧನುರ್ಧಾರಿಯಾದ ಅರ್ಜುನನು ಹತನಾದರೆ ಅವನ ಸಹೋದರರು ನಿನ್ನ ವಶವಾಗುವರು ಅಥವಾ ಪುನಃ ಕಾಡಿಗೆ ಹೋಗುವರು.

ಮಯಿ ಜೀವತಿ ಕೌರವ್ಯ ವಿಷಾದಂ ಮಾ ಕೃಥಾಃ ಕ್ವಚಿತ್ ।
ಅಹಂ ಜೇಷ್ಯಾಮಿ ಸಮರೇ ಸಹಿತಾನ್ ಸರ್ವಪಾಂಡವಾನ್ ॥ ೧೦ ॥

ಎಲೈ ಕೌರವ್ಯನೇ, ನಾನು ಬದುಕಿರುವಾಗ ಯಾವ ಕಾರಣದಿಂದಲೂ ವಿಷಾದವನ್ನು ಮಾಡಬೇಡ. ನಾನು ಒಂದುಗೂಡಿದ ಎಲ್ಲ ಪಾಂಡವರನ್ನೂ ಯುದ್ಧದಲ್ಲಿ ಜಯಿಸುವೆನು.

ಪಾಂಚಾಲಾನ್ ಕೇಕಯಾಂಶ್ಚೈವ ವೃಷ್ಣಿಂಶ್ಚಾಪಿ ಸಮಾಗತಾನ್ ।
ಬಾಣೌಘೈಃ ಶಕಲೀಕೃತ್ಯ ತವ ದಾಸ್ಯಾಮಿ ಮೇದಿನೀಮ್ ॥ ೧೧ ॥

ರಣರಂಗಕ್ಕೆ ಬಂದ ಪಾಂಚಾಲರನ್ನೂ ಕೇಕಯರನ್ನೂ ವೃಷ್ಣಿಗಳನ್ನೂ ನನ್ನ ಬಾಣಗಳ ಸಮೂಹಗಳಿಂದ ಪುಡಿ ಮಾಡಿ ನಿನಗೆ ಭೂಮಿಯನ್ನು ಒಪ್ಪಿಸುವೆನು.

ಸಂಜಯಃ

ಏವಂ ಬ್ರುವಾಣಂ ಕರ್ಣಂ ತು ಕೃಪಃ ಶಾರದ್ವತೋಬ್ರವೀತ್ ।
ಸ್ಥಯನ್ನಿವ ಮಹಾಬಾಹುಃ ಸೂತಪುತ್ರಮಿದಂ ವಚಃ ॥ ೧೨ ॥

ಸಂಜಯ– ಹೀಗೆ ಮಾತನಾಡುತ್ತಿದ್ದ ಸೂತಪುತ್ರನಾದ ಕರ್ಣನನ್ನು ಕುರಿತು ಮಹಾಬಾಹುಗಳಾದ, ಶಾರದ್ವತರಾದ ಕೃಪರು ನಗುತ್ತಾ ಈ ಮಾತನ್ನು ಆಡಿದರು.

ಶೋಭನಂ ಶೋಭನಂ ಕರ್ಣ ಸನಾಥಃ ಕುರುಪುಂಗವಃ ।
ತ್ವಯಾ ನಾಥೇನ ರಾಧೇಯ ವಚಸಾ ಯದಿ ಸಿಧ್ಯತಿ ॥ ೧೩ ॥

ಕರ್ಣನೇ, ಒಳ್ಳೆಯದು, ಒಳ್ಳೆಯದು. ಮಾತಿನಿಂದಲೇ ಎಲ್ಲವೂ ಸಿದ್ಧಿಸುವುದಾದರೆ ಎಲೈ ರಾಧೇಯನೇ, ನಿನ್ನನ್ನು ನಾಥನನ್ನಾಗಿ ಪಡೆದು ಕುರುಶ್ರೇಷ್ಠನಾದ ದುರ್ಯೋಧನನು ಸನಾಥನಾಗಿದ್ದಾನೆ.

ಬಹುಶಃ ಕತ್ಥಸೇ ಕರ್ಣ ಕೌರವ್ಯಸ್ಯ ಸಮೀಪತಃ ।
ನ ತು ತೇ ವಿಕ್ರಮಃ ಕಶ್ಚಿದ್ ದೃಶ್ಯತೇ ಬಲಮೇವ ವಾ ॥ ೧೪ ॥

ಎಲೈ ಕರ್ಣನೇ, ದುರ್ಯೋಧನನ ಸಮೀಪದಲ್ಲಿ ನಿನ್ನ ಪ್ರತಾಪವನ್ನು ಬಹಳವಾಗಿ ಕೊಚ್ಚಿಕೊಳ್ಳುತ್ತಿದ್ದೀಯೆ. ಆದರೆ ನಿನ್ನ ಪರಾಕ್ರಮವಾಗಲೀ, ಬಲವಾಗಲೀ ಯಾವುದೂ ಕಂಡುಬರುವುದಿಲ್ಲ.

ಸಮಾಗಮಃ ಪಾಂಡುಸುತೈರ್ದ್ಯೂತೇ ಬಹುಶೋ ಯುಧಿ ।
ಸರ್ವತ್ರ ನಿರ್ಜಿತಶ್ಚಾಸಿ ಪಾಂಡವೈಃ ಸೂತನಂದನ ॥ ೧೫ ॥

ನೀನು ಪಾಂಡುಸುತರ ಜೊತೆಯಲ್ಲಿ ಯುದ್ಧದಲ್ಲಿ ಸಮಾಗಮ ಹೊಂದಿದುದನ್ನು ಅನೇಕ ಸಲ ನೋಡಿದ್ದೇವೆ. ಎಲೈ ಸೂತಪುತ್ರನೇ, ಎಲ್ಲ ಕಡೆಗಳಲ್ಲಿಯೂ ನೀನು ಪಾಂಡವರಿಂದ ಪರಾಜಿತನಾಗಿದ್ದೀಯೆ.

ಹ್ರಿಯಮಾಣೇ ತದಾ ಕರ್ಣ ಗಂಧರ್ವೈರ್ಧೃತರಾಷ್ಟ್ರಜೇ ।
ತದಾಯುದ್ಧ್ಯಂತ ಸೈನ್ಯಾನಿ ತ್ವಮೇಕಸ್ತು ಪಲಾಯಥಾಃ ॥ ೧೬ ॥

ಎಲೈ ಕರ್ಣನೇ, ಗಂಧರ್ವರು ಧೃತರಾಷ್ಟ್ರ ಪುತ್ರನಾದ ದುರ್ಯೋಧನನನ್ನು ಅಪಹರಿಸಿಕೊಂಡು ಹೋಗಿದ್ದಾಗ ಸೈನ್ಯಗಳು ಯುದ್ಧವನ್ನು ಮಾಡಿದವು. ನೀನೊಬ್ಬನು ಮಾತ್ರ ಪಲಾಯನ ಮಾಡಿದ್ದೆ.

ವಿರಾಟನಗರೇ ಚಾಪಿ ಸಮೇತಾಃ ಸರ್ವಕೌರವಾಃ ।
ಪಾರ್ಥೇನ ನಿರ್ಜಿತಾ ಯುದ್ಧೇ ತ್ವಂ ಚ ಕರ್ಣ ಸಹಾನುಜಃ ॥ ೧೬ ॥

ವಿರಾಟನಗರದಲ್ಲಿ ಎಲ್ಲ ಕೌರವರೂ ಸೇರಿದರು. ಎಲೈ ಕರ್ಣನೇ, ನೀನೂ ನಿನ್ನ ಸಹೋದರರೂ ಅಲ್ಲಿ ಯುದ್ಧದಲ್ಲಿ ಅರ್ಜುನನಿಂದ ಪರಾಜಿತರಾದರಿ.

ಏಕಸ್ಯಾಹ್ಯಸಮರ್ಥಸ್ತ್ವಂ ಫಲ್ಗುನಸ್ಯ ರಣಾಜಿರೇ ।
ಕಥಮುತ್ಸಹಸೇ ಜೇತುಂ ಸಕೃಷ್ಣಾನ್ ಸರ್ವಪಾಂಡವಾನ್ ॥ ೧೪ ॥

ರಣರಂಗದಲ್ಲಿ ಒಬ್ಬ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ನಿನಗೆ ಸಾಮರ್ಥ್ಯವಿಲ್ಲ. ಕೃಷ್ಣನಿಂದ ಸಹಿತರಾದ ಎಲ್ಲ ಪಾಂಡವರನ್ನೂ ಗೆಲ್ಲುವುದಕ್ಕೆ ಹೇಗೆ ಆಶಿಸುತ್ತೀಯೆ?

ಅಬ್ರುವನ್ ಕರ್ಣ ಯುದ್ಧ್ಯಸ್ವ ಬಹು ಕತ್ಥಸಿ ಸೂತಜ ।
ಅನುಕ್ತ್ವಾ ವಿಕ್ರಮೇದ್ ಯಸ್ತು ತದ್ವೈ ಸತ್ಪುರುಷವ್ರತಮ್ ॥ ೧೯ ॥

ಎಲೈ ಕರ್ಣನೇ, ಮಾತನಾಡದೆ ಯುದ್ಧವನ್ನು ಮಾಡು. ಎಲೈ ಸೂತಪುತ್ರನೇ, ಆತ್ಮಶ್ಲಾಘನೆಯ ಅನೇಕ ಮಾತುಗಳನ್ನು ಆಡುತ್ತಿದ್ದೀಯೆ. ಬಾಯಿಂದ ಮಾತನಾಡದೆ ಪರಾಕ್ರಮವನ್ನು ತೋರಿಸುವುದು ಸತ್ಪುರುಷರ ವ್ರತ.

ಗರ್ಜಿತ್ವಾ ಸೂತಪುತ್ರ ತ್ವಂ ಶಾರದಾಭ್ರಮಿವಾಜಲಮ್ ।
ನಿಷ್ಫಲೋ ದೃಶ್ಯಸೇ ಕರ್ಣ ತಚ್ಚ ರಾಜಾ ನ ಬುಧ್ಯತೇ ॥ ೨೦ ॥

ಎಲೈ ಸೂತಪುತ್ರನೇ, ಶರತ್ಕಾಲದ ನೀರಿಲ್ಲದ ಮೋಡದಂತೆ ಗರ್ಜನೆಯನ್ನು ಮಾಡಿ ನೀನು ಫಲರಹಿತನಾಗಿ ಕಾಣುತ್ತಿದ್ದೀಯೆ. ಎಲೈ ಕರ್ಣನೇ, ಅದನ್ನು ರಾಜನು ತಿಳಿಯುತ್ತಿಲ್ಲ.

ತಾವದ್ ಗರ್ಜಸಿ ರಾಧೇಯ ಯಾವತ್ಪಾರ್ಥಂ ನ ಪಶ್ಯಸಿ ।
ಪುರಾ ಪಾರ್ಥಂ ಹಿ ತೇ ದೃಷ್ಟ್ವಾ ದುರ್ಲಭಂ ಗರ್ಜಿತಂ ಭವೇತ್ ॥೨೧॥

ಎಲೈ ರಾಧೇಯನೇ, ಅರ್ಜುನನನ್ನು ಎಲ್ಲಿಯವರೆಗೆ ನೀನು ನೋಡುವುದಿಲ್ಲವೋ ಅಲ್ಲಿಯವರೆಗೆ ಗರ್ಜಿಸುತ್ತೀಯೆ. ಅರ್ಜುನನನ್ನು ನೋಡಿದ ಮೇಲೆ ನಿನ್ನ ಗರ್ಜನೆಯು ದುರ್ಲಭವಾಗುತ್ತದೆ..

ತ್ವಮನಾಸಾದ್ಯ ತಾನ್ ಬಾಣಾನ್ ಫಲ್ಗುನಸ್ಯ ವಿಗರ್ಜಸಿ ।
ಪಾರ್ಥಸಾಯಕವಿದ್ಧಸ್ಯ ದುರ್ಲಭಂ ಗರ್ಜಿತಂ ಭವೇತ್ ॥ ೨೨ ॥

ನೀನು ಅರ್ಜುನನ ಬಾಣಗಳ ಸ್ಪರ್ಶವನ್ನು ಅನುಭವಿಸದೆ ಗರ್ಜಿಸುತ್ತಿದ್ದೀಯೆ. ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟಾಗ ಎಲೈ ಕರ್ಣನೇ, ನಿನ್ನ ಗರ್ಜನೆಯು ದುರ್ಲಭವಾಗುವುದು.

ಬಾಹುಭಃ ಕ್ಷತ್ರಿಯಾಃ ಶೂರಾ ವಾಗ್ಭಿಃ ಶೂರಾ ದ್ವಿಜಾತಯಃ ।
ಧನುಷಾ ಫಲ್ಗುನಃ ಶೂರಃ ಕರ್ಣಃ ಶೂರೋ ಮನೋರಥೈಃ ॥ ೨೩ ॥

ಕ್ಷತ್ರಿಯರು ಬಾಹುಗಳಿಂದ ಶೂರರಾಗಿರುತ್ತಾರೆ. ಬ್ರಾಹ್ಮಣರು ಮಾತುಗಳಿಂದ ಶೂರರಾಗಿರುತ್ತಾರೆ. ಅರ್ಜುನನು ಧನುಸ್ಸಿನಿಂದ ಶೂರನಾಗಿದ್ದಾನೆ. ಕರ್ಣನು ಮನೋರಥಗಳಿಂದ ಶೂರನಾಗಿದ್ದಾನೆ (ಎಂದು ಹೇಳಿದರು).

ಏವಂ ಪರುಷಿತಸ್ತೇನ ತದಾ ಶಾರದ್ವತೇನ ಸಃ ।
ಕರ್ಣಃ ಪ್ರಹರತಾಂ ಶ್ರೇಷ್ಠಃ ಕೃಪಂ ವಾಕ್ಯಮಥಾಬ್ರವೀತ್ ॥ ೨೪ ॥

ಹೀಗೆ ಕೃಪಾಚಾರ್ಯರಿಂದ ಉಗ್ರವಚನವನ್ನು ಕೇಳಿದ, ಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಕರ್ಣನು ಅನಂತರ ಕೃಪರನ್ನು ಕುರಿತು ಮಾತನಾಡಿದನು.

ಶೂರಾ ಗರ್ಜಂತಿ ಸತತಂ ಪ್ರಾವೃಷೀವ ಬಲಾಹಕಾಃ ।
ಫಲಂ ಚಾಶು ಪ್ರಯಚ್ಛಂತಿ ಬೀಜಮುಪ್ತಮೃತಾವಿವ ॥ ೨೫ ॥

ಮಳೆಗಾಲದ ಮೋಡಗಳಂತೆ ಶೂರರು ಸತತವಾಗಿ ಗರ್ಜಿಸುತ್ತಾರೆ. ಸಕಾಲದಲ್ಲಿ ಬಿತ್ತಿದ ಬೀಜಗಳಂತೆ ಫಲವನ್ನೂ ಬೇಗ ಕೊಡುತ್ತಾರೆ.

ದೋಷಮತ್ರ ನ ಪಶ್ಯಾಮಿ ಶೂರಾಣಾಂ ರಣಮೂರ್ಧನಿ ।
ತತ್ತದ್ವಿಕತ್ಥಮಾನಾನಾಂ ಭಾರಂ ಚೋದ್ವಹತಾಂ ಮೃಧೇ ॥ ೨೬ ॥

ಯುದ್ಧದ ಭಾರವನ್ನು ಹೊತ್ತು ಆಯಾ ಮಾತುಗಳಿಂದ ಶೂರರು ರಣರಂಗದಲ್ಲಿ ತಮ್ಮ ಪ್ರತಾಪವನ್ನು ಹೇಳಿಕೊಳ್ಳುವುದರಲ್ಲಿ ನಾನು ಯಾವ ದೋಷವನ್ನೂ ಕಾಣುವುದಿಲ್ಲ.

ಯಂ ಭಾರಂ ಪುರುಷೋ ವೋಢುಂ ಮನಸಾ ಹಿ ವ್ಯವಸ್ಯತಿ ।
ದೈವಮಸ್ಯ ಧ್ರುವಂ ತತ್ರ ಸಾಹಾಯ್ಯಾಯೋಪಪದ್ಯತೇ ॥ ೨೭ ॥

ಪುರುಷನು ಯಾವ ಭಾರವನ್ನು ಹೊರಲು ಮನಸ್ಸಿನಲ್ಲಿ ನಿರ್ಧರಿಸುತ್ತಾನೆಯೋ ಆ ವಿಷಯದಲ್ಲಿ ದೈವವು ಖಂಡಿತವಾಗಿ ಅವನಿಗೆ ಸಹಾಯವನ್ನು ಮಾಡುತ್ತದೆ.

ವ್ಯವಸಾಯದ್ವಿತೀಯೋಽಹಂ ಮನಸಾ ಭಾರಮುದ್ವಹನ್ ।
ಗರ್ಜಾಮಿ ಯದ್ಯಹಂ ವಿಪ್ರಾ ತವ ಕಿಂ ತತ್ರ ನಶ್ಯತಿ ॥ ೨೮ ॥

ಅಂತಹ ನಿರ್ಧಾರದಿಂದ ಕೂಡಿದ ನಾನು ಮನಸ್ಸಿನಲ್ಲಿಯೇ ನನ್ನ ದೊಡ್ಡ ಭಾರವನ್ನು (ಜವಾಬ್ದಾರಿಯನ್ನು) ಹೊತ್ತು ಗರ್ಜಿಸಿದರೆ, ಎಲೈ ಬ್ರಾಹ್ಮಣನೇ, ನಿನ್ನ ಗಂಟು ಏನು ಹೋಗುತ್ತದೆ?

ವೃಥಾ ಶೂರಾ ನ ಗರ್ಜಂತಿ ಸಜಲಾ ಇವ ತೋಯದಾಃ ।
ಸಾಮರ್ಥ್ಯಮಾತ್ಮನೋ ಜ್ಞಾತ್ವಾ ತತೋ ಗರ್ಜಂತಿ ಪಂಡಿತಾಃ ॥ ೨೯॥

ನೀರು ತುಂಬಿದ ಮೋಡಗಳಂತೆ ಶೂರರು ವ್ಯರ್ಥವಾಗಿ ಗರ್ಜಿಸುವುದಿಲ್ಲ. ಮೇಧಾವಿಗಳಾದ ಅವರು ತಮ್ಮ ಸಾಮರ್ಥ್ಯವನ್ನು ತಿಳಿದು ಅನಂತರ ಗರ್ಜಿಸುತ್ತಾರೆ.

ಸೋಽಹಮದ್ಯ ರಣೇ ಯತ್ತಃ ಸಹಿತೌ ಕೃಷ್ಣಪಾಂಡವೌ ।
ಉತ್ಸಹೇ ತರಸಾ ಜೇತುಂ ತತೋ ಗರ್ಜಾಮಿ ಗೌತಮ ॥ ೩೦ ॥

ಈ ದಿನ ನಾನು ಯುದ್ಧದಲ್ಲಿ ಜೊತೆಗೂಡಿದ ಕೃಷ್ಣಾರ್ಜುನರನ್ನು ನನ್ನ ಸಾಮರ್ಥ್ಯದಿಂದ ಗೆಲ್ಲಲು ಉತ್ಸಾಹದಿಂದಿದ್ದೇನೆ. ಎಲೈ ಗೌತಮರೇ, ಆ ಕಾರಣದಿಂದ ಗರ್ಜಿಸುತ್ತಿದ್ದೇನೆ.

ಪಶ್ಯ ತ್ವಂ ಗರ್ಜಿತಸ್ಯಾಸ್ಯ ಫಲಂ ಮೇ ವಿಪ್ರ ಸಾನುಗಃ ।
ಹತ್ವಾ ಪಾಂಡುಸುತಾನಾಜೌ ಸಹಕೃಷ್ಣಾನ್ ಸಸಾತ್ವತಾನ್ ।
ದುರ್ಯೋಧನಾಯ ದಾಸ್ಯಾಮಿ ಪೃಥಿವೀಂ ಹತಕಂಟಕಾಮ್ ॥ ೩೧ ॥

ಎಲೈ ವಿಪ್ರನೇ, ನಿನ್ನ ಅನುಚರರಿಂದ ಸಹಿತನಾಗಿ ನನ್ನ ಗರ್ಜನೆಯ ಫಲವನ್ನು ನೋಡು. ನಾನು ರಣರಂಗದಲ್ಲಿ ಕೃಷ್ಣನಿಂದ ಮತ್ತು ಸಾತ್ವತರಿಂದ ಸಹಿತರಾದ ಪಾಂಡುಪುತ್ರರನ್ನು ಕೊಂದು ನಿಷ್ಕಂಟಕವಾದ ಭೂಮಿಯನ್ನು ದುರ್ಯೋಧನನಿಗೆ ಕೊಡುವೆನು.

ಕೃಪಃ

ಮನೋರಥಪ್ರಲಾಪೋ ಮೇ ನ ಗ್ರಾಹ್ಯಸ್ತವ ಸೂತಜ ।
ಯದಾಕ್ಷಿಪಸಿ ವೈ ಕೃಷ್ಣೌ ಧರ್ಮರಾಜಂ ಚ ಪಾಂಡವಮ್ ॥ ೩೨ ॥

ಧ್ರುವಸ್ತತ್ರ ಜಯಃ ಕರ್ಣ ಯತ್ರ ಯುದ್ಧವಿಶಾರದೌ ।
ದೇವಗಂಧರ್ವಯಕ್ಷಾಣಾಂ ಮನುಷ್ಯೋರಗರಕ್ಷಸಾಮ್ ।
ದಂಸಿತಾನಾಮಪಿ ರಣೇ ಅಜೇಯೌ ಕೃಷ್ಣಪಾಂಡವೌ ॥ ೩೩ ॥

ಕೃಪ– ಎಲೈ ಸೂತಪುತ್ರನೇ, ಕೃಷ್ಣಾರ್ಜುನರನ್ನೂ ಮತ್ತು ಪಾಂಡವನಾದ ಧರ್ಮರಾಜನನ್ನೂ ನಿಂದಿಸುವ ನಿನ್ನ ಮನೋರಥಪ್ರಲಾಪಗಳನ್ನು ನಾನು ಸ್ವೀಕರಿಸುವುದಿಲ್ಲ. ಯುದ್ಧವಿಶಾರದರಾದ ಕೃಷ್ಣ-ಪಾಂಡವರು ಯುದ್ಧ ಸನ್ನದ್ಧರಾದ ದೇವ-ಗಂಧರ್ವ- ಯಕ್ಷರಿಂದಲೂ, ಮನೋಷ್ಯೋರಗ-ರಾಕ್ಷಸರಿಂದಲೂ ಯುದ್ಧದಲ್ಲಿ ಅಜೇಯರಾದವರು ಎಲೈ ಕರ್ಣನೇ, ಕೃಷ್ಣಾರ್ಜುನರು ಮತ್ತು ಧರ್ಮರಾಜನು ಇರುವಲ್ಲಿ ಜಯವು ನಿಶ್ಚಿತವಾದುದು.

ಬ್ರಹ್ಮಣ್ಯಃ ಸತ್ಯವಾಗ್‌ದಾಂತೋ ಗುರುದೈವತಪೂಜಕಃ ।
ನಿತ್ಯಂ ಧರ್ಮರತಶ್ಚೈವ ಕೃತಾಸ್ತ್ರಶ್ಚ ವಿಶೇಷತಃ ।
ಧೃತಿಮಾಂಶ್ಚ ಕೃತಜ್ಞಶ್ಚ ಧರ್ಮಪುತ್ರೋ ಯುಧಿಷ್ಠಿರಃ ॥ ೩೪ ॥

ಧರ್ಮಪುತ್ರನಾದ ಯುಧಿಷ್ಠಿರನು ಬ್ರಾಹ್ಮಣರಲ್ಲಿ ವಾತ್ಸಲ್ಯವುಳ್ಳವನೂ, ಸತ್ಯವಚನವುಳ್ಳವನು, ಇಂದ್ರಿಯನಿಗ್ರಹವುಳ್ಳವನು, ಗುರುದೇವತಾ ಪೂಜ್ಯನಾದವನೂ, ನಿತ್ಯವೂ ಧರ್ಮರತನು, ಅಸ್ತ್ರಜ್ಞನು, ವಿಶೇಷವಾದ ಧೈರ್ಯವನ್ನು ಹೊಂದಿರುವವನು ಮತ್ತು ಕೃತಜ್ಞನಾದವನು.

ಭ್ರಾತರಶ್ಚಾಸ್ಯ ಬಲಿನಃ ಸರ್ವಾಸ್ತ್ರೇಷು ಕೃತಶ್ರಮಾಃ ।
ಗುರುವೃತ್ತಿರತಾಃ ಪ್ರಾಜ್ಞಾ ಧರ್ಮನಿತ್ಯಾ ಯಶಸ್ವಿನಃ ॥ ೩೫ ॥

ಅವನ ಸಹೋದರರೂ ಬಲಿಷ್ಠರಾದವರು, ಎಲ್ಲ ಅಸ್ತ್ರಗಳಲ್ಲಿಯೂ ಪರಿಶ್ರಮ ಉಳ್ಳವರು, ಹಿರಿಯರನ್ನು ಅನುಸರಿಸುವವರು, ಪ್ರಾಜ್ಞರು, ನಿತ್ಯವೂ ಧರ್ಮನಿಷ್ಠರು ಮತ್ತು ಕೀರ್ತಿಶಾಲಿಗಳು.

ಸಂಬಂಧಿನಶ್ಚೇಂದ್ರವೀರ್ಯಾಃ ಸ್ವನುರಕ್ತಾಃ ಪ್ರಹಾರಿಣಃ ।

ಅವರ ಸಂಬಂಧಿಗಳಾದರೂ ಇಂದ್ರನ ಪರಾಕ್ರಮವುಳ್ಳವರು, ಒಳ್ಳೆಯ ಸ್ವಾಮಿನಿಷ್ಠೆಯುಳ್ಳವರು, ಪ್ರಹಾರಶೀಲರಾದವರು.

ಧೃಷ್ಟದ್ಯುಮ್ನಃ ಶಿಖಂಡೀ ಚ ದೌರ್ಮುಖಿರ್ಜನಮೇಜಯಃ ॥ ೩೬ ॥

ಚಂದ್ರಸೇನೋ ಭದ್ರಸೇನಃ ಕೀರ್ತಿಧರ್ಮಾ ಧ್ರುವೋ ಧರಃ ।
ವಸುಚಂದ್ರೋ ದಾಮಚಂದ್ರಃ ಸಿಂಹಚಂದ್ರಃ ಸುವೇಧನಃ ॥ ೩೭ ॥

ದ್ರುಪದಸ್ಯ ತಥಾ ಪುತ್ರಾ ದ್ರುಪದಶ್ಚ ಮಹಾಸ್ತ್ರವಿತ್ ।
ಯೇಷಾಮರ್ಥಾಯ ಸಂಯತ್ತೋ ಮತ್ಸ್ಯರಾಜಃ ಸಹಾನುಗಃ ॥ ೩೮ ॥

ಶತಾನೀಕಃ ಸುದರ್ಶನಃ ಶ್ರುತಾನೀಕಃ ಶ್ರುತಧ್ವಜಃ ।
ಬಲಾನೀಕೋ ಜಯಾನೀಕೋ ಜಯಾಶ್ವೋ ರಥವಾಹನಃ ॥ ೩೯ ॥

ಚಂದ್ರೋದಯಃ ಕಾಮರಥೋ ವಿರಾಟಭ್ರಾತರಃ ಶುಭಾಃ ।
ಯಮೌ ಚ ದ್ರೌಪದೇಯಾಶ್ಚ ರಾಕ್ಷಸಶ್ಚ ಘಟೋತ್ಕಚಃ ।
ಯೇಷಾಮರ್ಥಾಯ ಯುದ್ಧ್ಯಂತೇ ನ ತೇಷಾಂ ವಿದ್ಯತೇ ಕ್ಷಯಃ ॥೪೦॥

ಧೃಷ್ಟದ್ಯುಮ್ನ, ಶಿಖಂಡಿ, ದೌರ್ಮುಖಿನಾದ ಜನಮೇಜಯ, ಚಂದ್ರಸೇನ, ಭದ್ರಸೇನ, ಕೀರ್ತಿಧರ್ಮ, ಧ್ರುವ, ಧರ, ವಸುಚಂದ್ರ, ದಾಮಚಂದ್ರ, ಸಿಂಹಚಂದ್ರ, ಸುವೇಧನ, ದ್ರುಪದ ಪುತ್ರರು ಮತ್ತು ಮಹಾಸ್ತ್ರವೇತ್ತನಾದ ದ್ರುಪದ ಮತ್ತು ಅವರ ಸಲುವಾಗಿ ಯುದ್ಧ ಮಾಡಲು ಸಿದ್ಧರಾಗಿರುವ ಮತ್ಸ್ಯರಾಜನಾದ ವಿರಾಟ ಮತ್ತು ಅವನ ಅನುಚರರು, ಶತಾನೀಕ, ಸುದರ್ಶನ, ಶ್ರುತಾನೀಕ, ಶ್ರುತಧ್ವಜ, ಬಲಾನೀಕ, ಜಯಾನೀಕ, ಜಯಾಶ್ವ, ರಥವಾಹನ, ಚಂದ್ರೋದಯ, ಕಾಮರಥ, ಶೂರರಾದ ವಿರಾಟ ಸಹೋದರರು, ನಕುಲ-ಸಹದೇವರು, ದ್ರೌಪದಿಯ ಪುತ್ರರು, ರಾಕ್ಷಸನಾದ

ಘಟೋತ್ಕಚ - ಇವರು ಯಾರ ಸಲುವಾಗಿ ಯುದ್ಧ ಮಾಡುತ್ತಾರೆಯೋ ಅವರಿಗೆ ಯುದ್ಧದಲ್ಲಿ ಹಾನಿಯುಂಟಾಗುವುದಿಲ್ಲ.

ಕಾಮಂ ಖಲು ಜಗತ್ ಸರ್ವಂ ಸದೇವಾಸುರಮಾನವಮ್ ।
ಸಯಕ್ಷರಾಕ್ಷಸಗಣಂ ಸಭೂತಭುಜಗದ್ವಿಪಮ್ ।
ನಿಃಶೇಷಮಸ್ತ್ರವೀರ್ಯೇಣ ಕುರ್ಯಾತಾಂ ಭೀಮಫಲ್ಗುನೌ ॥ ೪೧ ॥

ತಮ್ಮ ಮನಸ್ಸಿಗೆ ಬಂದಂತೆ ದೇವಾಸುರ ಮಾನವರಿಂದ ಸಹಿತವಾದ, ಯಕ್ಷ-ರಾಕ್ಷಸ ಗಣ ಸಹಿತವಾದ, ಭೂತ-ಭುಜಗ-ದ್ವಿಪ (ಆನೆ)ಸಹಿತವಾದ ಜಗತ್ತೆಲ್ಲವನ್ನೂ ಭೀಮಾರ್ಜುನರು ತಮ್ಮ ಅಸ್ತ್ರವೀರ್ಯದಿಂದ ನಿಶ್ಶೇಷವಾಗಿ ನಾಶ ಮಾಡಿಯಾರು.

ಯುಧಿಷ್ಠಿರಶ್ಚ ಪೃಥಿವೀಂ ನಿರ್ದಹೇದ್ ಘೋರಚಕ್ಷುಷಾ ।
ಅಪ್ರಮೇಯಬಲಃ ಶೌರಿರ್ಯೇಷಾಮರ್ಥೇ ಚ ದಂಪತಿಃ ।
ಕಥಂ ತಾನ್ ಸಂಯುಗೇ ಕರ್ಣ ಜೇತುಮುತ್ಸಹಸೇ ಪರಾನ್ ॥ ೪೨ ॥

ಯುಧಿಷ್ಠಿರನಾದರೂ ತನ್ನ ಘೋರದೃಷ್ಟಿಯಿಂದ ಭೂಮಿಯನ್ನೇ ಸುಟ್ಟಾನು. ಅಪ್ರಮೇಯ ಬಲನಾದ ಕೃಷ್ಣನು ಅವರ ಸಲುವಾಗಿ ಯುದ್ಧಸನ್ನದ್ಧನಾಗಿದ್ದಾನೆ. ಕರ್ಣನೇ, ಅಂತಹ ಶತ್ರುಗಳನ್ನು ನೀನು ಜಯಿಸಲು ಹೇಗೆ ಆಶಿಸುತ್ತೀಯೆ?

ಮಹಾನಪನಯಸ್ತ್ವೇಷ ತವ ನಿತ್ಯಂ ಹಿ ಸೂತಜ ।
ಯಸ್ತ್ವಮುತ್ಸಹಸೇ ಯೋದ್ಧುಂ ಸಮರೇ ಶೌರಿಣಾ ಸಹ ॥ ೪೩ ॥

ಎಲೈ ಸೂತಪುತ್ರನೇ, ನೀನು ಯಾವಾಗಲೂ ಕೃಷ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಲು ಏನು ಬಯಸುತ್ತಿದ್ದೀಯೋ ಅದು ನಿನ್ನಿಂದಾದ ದೊಡ್ಡ ಅಪಚಾರ.

ಸಂಜಯಃ

ಏವಮುಕ್ತಸ್ತು ರಾಧೇಯಃ ಪ್ರಹಸನ್ ಭರತರ್ಷಭ ।
ಅಬ್ರವೀಚ್ಚ ತದಾ ಕರ್ಣೋ ಗುರುಂ ಶಾರದ್ವತಂ ಕೃಪಮ್ ॥ ೪೪ ॥

ಸಂಜಯ– ಎಲೈ ಭರತಶ್ರೇಷ್ಠನೇ, ಹೀಗೆ ಹೇಳಲ್ಪಟ್ಟ ಕರ್ಣನು ನಗುತ್ತಾ ಗುರುಗಳೂ, ಶರದ್ವತನ ಪುತ್ರರೂ ಆದ ಕೃಪಾಚಾರ್ಯರನ್ನು ಕುರಿತು ಆಗ ಮಾತನಾಡಿದನು.

ಸತ್ಯಮುಕ್ತಂ ತ್ವಯಾ ಬ್ರಹ್ಮನ್ ಪಾಂಡವಾನ್ ಪ್ರತಿ ಯದ್ವಚಃ ।
ಏತೇ ಚಾನ್ಯೇ ಚ ಬಹವೋ ಗುಣಾಃ ಪಾಂಡುಸುತೇಷು ವೈ ॥ ೪೫ ॥

ಎಲೈ ಬ್ರಾಹ್ಮಣನೇ, ಪಾಂಡವರ ವಿಷಯದಲ್ಲಿ ನೀನು ಹೇಳಿದ ಮಾತುಗಳು ಸತ್ಯವಾದವುಗಳು. ಪಾಂಡವರಲ್ಲಿ ಇವು ಮತ್ತು ಇನ್ನೂ ಅನೇಕ ಗುಣಗಳು ಇವೆ.

ಅಜಯ್ಯಾಶ್ಚ ರಣೇ ಪಾರ್ಥಾ ದೇವೈರಪಿ ಸವಾಸವೈಃ ।
ಸದೈತ್ಯಯಕ್ಷಗಂಧರ್ವಪಿಶಾಚೋರಗರಾಕ್ಷಸೈಃ ।
ತಥಾಪಿ ಪಾರ್ಥಾನ್ ಜೇಷ್ಯಾಮಿ ಶಕ್ರ್ಯಾ ವಾಸವದತ್ತಯಾ ॥ ೪೬ ॥

ಇಂದ್ರನಿಂದ ಸಹಿತರಾದ ದೇವತೆಗಳಿಂದಲೂ, ದೈತ್ಯ-ಯಕ್ಷ-ಗಂಧರ್ವ-ಪಿಶಾಚೋರಗ-ರಾಕ್ಷಸರಿಂದಲೂ ಪಾಂಡವರು ಯುದ್ಧದಲ್ಲಿ ಅಜೇಯರಾದವರು. ಆದರೂ ಇಂದ್ರನು ಕೊಟ್ಟ ಶಕ್ತಿಯ ಬಲದಿಂದ ನಾನು ಪಾಂಡವರನ್ನು ಗೆಲ್ಲುವೆನು.

ಮಮಾಪ್ಯಮೋಘಾ ದತ್ತೇಯಂ ಶಕ್ತಿಃ ಶಕ್ರೇಣ ವೈ ದ್ವಿಜ ।
ಏತಯಾ ನಿಹನಿಷ್ಯಾಮಿ ಸವ್ಯಸಾಚಿನಮಾಹವೇ ॥ ೪೭ ॥

ಎಲೈ ಬ್ರಾಹ್ಮಣನೇ, ನನ್ನ ಬಳಿ ಇಂದ್ರನು ಕೊಟ್ಟ ಅಮೋಘವಾದ ಈ ಶಕ್ತಿಯಿದೆ. ಈ ಶಕ್ತಿಯಿಂದ ನಾನು ಯುದ್ಧದಲ್ಲಿ ಅರ್ಜುನನನ್ನು ಕೊಲ್ಲುವೆನು.

ಹತೇ ತು ಪಾಂಡವೇ ಕೃಷ್ಣೋ ಭ್ರಾತರಶ್ಚಾಸ್ಯ ಸೋದರಾಃ ।
ಅನರ್ಜುನಾ ನ ಶಕ್ಷ್ಯಂತಿ ಮಹೀಂ ಭೋಕ್ತುಂ ಕಥಂಚನ ॥ ೪೮ ॥

ಅರ್ಜುನನು ಹತನಾದರೆ ಕೃಷ್ಣನೂ ಮತ್ತು ಅವನ ಸಹೋದರರೂ ಅರ್ಜುನನಿಲ್ಲದೆ ಯಾವ ರೀತಿಯಿಂದಲೂ ಭೂಮಿಯನ್ನು ಭೋಗಿಸಲು ಸಮರ್ಥರಾಗುವುದಿಲ್ಲ.

ತೇಷು ನಷ್ಟೇಷು ಸರ್ವೇಷು ಪೃಥಿವೀಯಂ ಸಸಾಗರಾ ।
ಅಯತ್ನಾತ್ ಕೌರವೇಯಸ್ಯ ವಶೇ ಸ್ಥಾಸ್ಯತಿ ಗೌತಮ ॥ ೪೯ ॥

ಅವರೆಲ್ಲರೂ ನಾಶವನ್ನು ಹೊಂದಿದ ಮೇಲೆ ಸಾಗರ ಸಹಿತವಾದ ಈ ಭೂಮಿಯು ಎಲೈ ಗೌತಮನೇ, ಅನಾಯಾಸವಾಗಿ ದುರ್ಯೋಧನನ ವಶದಲ್ಲಿ ನಿಲ್ಲುವುದು.

ಸುನೀತೈರಿಹ ಸರ್ವಾರ್ಥಾಃ ಸಿಧ್ಯಂತೇ ನಾತ್ರ ಸಂಶಯಃ ।
ಏತಮರ್ಥಮಹಂ ಜ್ಞಾತ್ವಾ ತತೋ ಗರ್ಜಾಮಿ ಗೌತಮ ॥ ೫೦ ॥

ಒಳ್ಳೆಯ ನೀತಿಯಿಂದ ಇಲ್ಲಿ ಎಲ್ಲ ಅರ್ಥಗಳೂ ಸಿದ್ಧಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಎಲೈ ಗೌತಮನೇ, ಈ ವಿಷಯವನ್ನು ತಿಳಿದೇ ನಾನು ಗರ್ಜಿಸುತ್ತಿದ್ದೇನೆ.

ತ್ವಂ ತು ವೃದ್ಧಶ್ಚ ವಿಪ್ರಶ್ಚ ಅಶಕ್ತಶ್ಚಾಪಿ ಸಂಯುಗೇ ।
ಕೃತಸ್ನೇಹಶ್ಚ ಪಾರ್ಥೇಷು ಮೋಹಾನ್ಮಾಮವಮನ್ಯಸೇ ॥ ೫೧ ॥

ನೀನಾದರೂ ಬ್ರಾಹ್ಮಣ, ವೃದ್ಧ ಮತ್ತು ಯುದ್ಧ ಮಾಡಲು ಅಶಕ್ತನಾದವನು. ಪಾಂಡವರಲ್ಲಿ ಸ್ನೇಹವನ್ನು ಮಾಡಿ ಮೋಹದಿಂದ ನನಗೆ ಅವಮಾನವನ್ನು ಮಾಡುತ್ತಿದ್ದೀಯೆ.

ಯದ್ಯೇವಂ ವಕ್ಷ್ಯಸೇ ಭೂಯೋ ಮಾಮಪ್ರಿಯಮಿಹ ದ್ವಿಜ ।
ತತಸ್ತೇ ಖಡ್ಗಮುದ್ಯಮ್ಯ ಜಿಹ್ವಾಂ ಛೇತ್ಸ್ಯಾಮಿ ದುರ್ಮತೇ ॥ ೫೨ ॥

ಎಲೈ ಬ್ರಾಹ್ಮಣನೇ, ದುರ್ಮತಿಯೇ, ನೀನು ಪುನಃ ಏನಾದರೂ ನನಗೆ ಅಪ್ರಿಯವಾದ ಮಾತನ್ನು ಆಡಿದರೆ ಖಡ್ಗವನ್ನು ಹಿಡಿದು ನಿನ್ನ ನಾಲಿಗೆಯನ್ನು ಕತ್ತರಿಸುವೆನು.

ಯಚ್ಚಾಪಿ ಪಾಂಡವಾನ್ ವಿಪ್ರ ಸ್ತೋತುಮಿಚ್ಛಸಿ ಸಂಯುಗೇ ।
ಭೀಷಯನ್ ಸರ್ವಸೈನ್ಯಾನಿ ಕೌರವೇಯಾಣಿ ದುರ್ಮತೇ ।
ಅತ್ರಾಪಿ ಶೃಣು ಮೇ ವಾಕ್ಯಂ ಯಥಾವದ್ ಗದತೋ ದ್ವಿಜ ॥ ೫೩ ॥

ಎಲೈ ಬ್ರಾಹ್ಮಣನೇ, ನೀನು ದುರ್ಯೋಧನನ ಎಲ್ಲ ಸೈನ್ಯಗಳನ್ನು ಭಯಗೊಳಿಸುತ್ತಾ ಯುದ್ಧದಲ್ಲಿ ಪಾಂಡವರನ್ನು ಪ್ರಶಂಸಿಸಲು ಬಯಸುತ್ತಿರುವೆಯಷ್ಟೆ? ಎಲೈ ದುರ್ಮತಿಯೇ, ಬ್ರಾಹ್ಮಣನೇ, ಈ ವಿಷಯದಲ್ಲಿನನ್ನ ಮಾತನ್ನು ಸರಿಯಾಗಿ ಕೇಳು.

ದುರ್ಯೋಧನಶ್ಚ ದ್ರೋಣಶ್ಚ ಶಕುನಿರ್ದುರ್ಮುಖೋ ಜಯಃ ।
ದುಃಶಾಸನೋ ವೃಷಸೇನೋ ಮದ್ರರಾಜಸ್ತ್ವಮೇವ ಚ ।
ಸೋಮದತ್ತಶ್ಚ ಭೂರಿಶ್ಚ ತಥಾ ದ್ರೌಣಿರ್ವಿಂಶತಿಃ ॥ ೫೪ ॥

ತಿಷ್ಠೇಯುರ್ದಂಶಿತಾ ಯತ್ರ ಸರ್ವೇ ಯುದ್ಧವಿಶಾರದಾಃ ।
ಜಯೇದೇತಾನ್ ರಣೇ ಕೋ ನು ಶಕ್ರತುಲ್ಯಬಲೋಽಪ್ಯರಿಃ ॥ ೫೫ ॥

ದುರ್ಯೋಧನ, ದ್ರೋಣರು, ಶಕುನಿ, ದುರ್ಮುಖ, ಜಯ, ದುಶ್ಶಾಸನ, ವೃಷಸೇನ, ಮದ್ರರಾಜನಾದ ಶಲ್ಯ, ನೀನು, ಸೋಮದತ್ತ, ಭೂರಿ, ಹಾಗೆಯೇ ಅಶ್ವತ್ಥಾಮ, ವಿವಿಂಶತಿ- ಯುದ್ಧವಿಶಾರದರಾದ ಇವರೆಲ್ಲರೂ ಸೇರಿ ಎಲ್ಲಿ ಶಸ್ತ್ರಕವಚ ಸನ್ನದ್ಧರಾಗಿ ನಿಲ್ಲುವರೋ ಅಲ್ಲಿ ಇಂದ್ರನಿಗೆ ಸಮಾನನಾದ ಶತ್ರುವೂ ಸಹ ಇವರನ್ನು ಯುದ್ಧದಲ್ಲಿ ಹೇಗೆ ಗೆದ್ದಾನು?

ಶೂರಾಶ್ಚ ಹಿ ಕೃತಾಸ್ತ್ರಾಶ್ಚ ಬಲಿನಃ ಸ್ವರ್ಗಲಿಪ್ಸವಃ ।
ಧರ್ಮಜ್ಞಾ ಯುದ್ಧಕುಶಲಾ ಹನ್ಯುಯುರ್ದ್ದೇ ಸುರಾನಪಿ ॥ ೫೬ ॥

ಶೂರರೂ, ಅಸ್ತ್ರಜ್ಞರೂ, ಬಲಿಷ್ಠರೂ, ಸ್ವರ್ಗಪ್ರಾಪ್ತಿಯಲ್ಲಿ ಆಸಕ್ತಿಯುಳ್ಳವರೂ, ಧರ್ಮಜ್ಞರೂ, ಯುದ್ಧಕುಶಲರೂ ಆದ ಇವರು ಯುದ್ಧದಲ್ಲಿ ದೇವತೆಗಳನ್ನೂ ಕೊಂದಾರು.

ಏತೇ ಸ್ಥಾಸ್ಯಂತಿ ಸಂಗ್ರಾಮೇ ಪಾಂಡವಾನಾಂ ವಧಾರ್ಥಿನಃ ।
ಜಯಮಾಕಾಂಕ್ಷಮಾಣಾ ಹಿ ಕೌರವೇಯಸ್ಯ ದಂಶಿತಾಃ ॥ ೫೭ ॥

ಇವರು ಪಾಂಡವರ ವಧೆಯನ್ನು ಬಯಸಿ ಯುದ್ಧಸನ್ನದ್ಧರಾಗಿ ದುರ್ಯೋಧನನ ಜಯವನ್ನು ಆಶಿಸುತ್ತಾ ಯುದ್ಧದಲ್ಲಿ ನಿಲ್ಲುವರು.

ದೈವಾಯತ್ತಮಹಂ ಮನ್ಯೇ ಜಯಂ ಸುಬಲಿನಾಮಪಿ ।
ಯತ್ರ ಭೀಷ್ಮೋ ಮಹಾಬಾಹುಃ ಶೇತೇ ಶರಶತಾಚಿತಃ ॥ ೫೮ ॥

ಮಹಾಬಾಹುಗಳಾದ ಭೀಷ್ಮರು ನೂರಾರು ಬಾಣಗಳು ದೇಹದಲ್ಲಿ ಹೊಕ್ಕು ಮಲಗಿರುವಾಗ ನಾನು ಅತ್ಯಂತ ಬಲಿಷ್ಠರಿಗೂ ಸಹ ಜಯವು ದೈವವನ್ನು ಅವಲಂಬಿಸಿದೆ ಎಂದು ಭಾವಿಸುತ್ತೇನೆ.

ವಿಕರ್ಣಶ್ಚಿತ್ರಸೇನಶ್ಚ ಬಾಹ್ಲೀಕೋಽಥ ಜಯದ್ರಥಃ ।
ಭೂರಿಶ್ರವಾ ಜಯಶ್ಚೈವ ಜಲಸಂಧಃ ಸುದಕ್ಷಿಣಃ ॥ ೫೯ ॥

ಶಲಶ್ಚ ರಥಿನಾಂ ಶ್ರೇಷ್ಠೋ ಭಗದತ್ತಶ್ಚ ವೀರ್ಯವಾನ್ ।
ಏತೇ ಚಾನ್ಯೇ ಚ ರಾಜಾನೋ ದೇವೈರಪಿ ಸುದುರ್ಜಯಾಃ ॥ ೬೦ ॥

ನಿಹತಾಃ ಸಮರೇ ಶೂರಾಃ ಪಾಂಡವೈರ್ಬಲವತ್ತರಾಃ ।
ಕಮನ್ಯದ್ ದೈವಸಂಯೋಗಾನ್ನನ್ಯಸೇ ಪುರುಷಾಧಮ ॥ ೬೧ ॥

ವಿಕರ್ಣ, ಚಿತ್ರಸೇನ, ಬಾಹ್ಲೀಕ, ಜಯದ್ರಥ, ಭೂರಿಶ್ರವ, ಜಯ, ಜಲಸಂಧ, ಸುದಕ್ಷಿಣ, ರಥಿಶ್ರೇಷ್ಠನಾದ ಶಲ, ಪರಾಕ್ರಮಶಾಲಿಯಾದ ಭಗದತ್ತ - ಪಾಂಡವರಿಗಿಂತ ಹೆಚ್ಚು ಬಲಶಾಲಿಗಳಾದ ಇವರೂ, ದೇವತೆಗಳಿಂದಲೂ ದುರ್ಜಯರಾದ ಇನ್ನೂ ಅನೇಕ ಶೂರರೂ, ಯುದ್ಧದಲ್ಲಿ ಹತರಾಗಿದ್ದಾರೆ. ಎಲೈ ಪುರುಷಾಧಮನೇ, ಇದಕ್ಕೆ ದೈವ ನಿಯತಿಯನ್ನು ಬಿಟ್ಟು ಬೇರೆ ಯಾವ ಕಾರಣವನ್ನು ತಿಳಿಯುತ್ತೀಯೆ?

ಯಾಂಶ್ಚ ತಾನ್ ಸ್ತೌಷಿ ಸತತಂ ದುರ್ಯೋಧನರಿಪೂನ್ ದ್ವಿಜ ।
ತೇಷಾಮಪಿ ಹತಾಃ ಶೂರಾಃ ಶತಶೋಽಥ ಸಹಸ್ರಶಃ ॥ ೬೨ ॥

ಎಲೈ ಬ್ರಾಹ್ಮಣನೇ, ದುರ್ಯೋಧನನ ಶತ್ರುಗಳಾದ ಯಾವ ಪಾಂಡವರನ್ನು ನೀನು ಸತತವಾಗಿ ಸ್ತೋತ್ರ ಮಾಡುತ್ತಿದ್ದೀಯೋ ಅವರ ಕಡೆಯಲ್ಲಿಯೂ ಶೂರರು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಹತರಾಗಿದ್ದಾರೆ.

ಕ್ಷೀಯಂತೇ ಸರ್ವಸೈನ್ಯಾನಿ ಕುರೂಣಾಂ ಪಾಂಡವೈಃ ಸಹ ।
ಪ್ರಭಾವಂ ನಾತ್ರ ಪಶ್ಯಾಮಿ ಪಾಂಡವಾನಾಂ ಕಥಂಚನ ॥ ೬೩ ॥

ಕುರುಗಳ ಸೈನ್ಯವೂ, ಪಾಂಡವಸೈನ್ಯವೂ ಎಲ್ಲವೂ ಕ್ಷಯವನ್ನು ಹೊಂದುತ್ತಿದೆ. ಇದರಲ್ಲಿ ನಾನು ಪಾಂಡವರ ವಿಶೇಷ ಸಾಮರ್ಥ್ಯವನ್ನೇನೂ ಯಾವ ರೀತಿಯಿಂದಲೂ ಕಾಣುತ್ತಿಲ್ಲ.

ಯಾಂಸ್ತಾನ್ ಬಲವತೋ ನಿತ್ಯಂ ಮನ್ಯಸೇ ತ್ವಂ ದ್ವಿಜಾಧಮ ।
ಯತಿಷ್ಯೇಽಹಂ ಯಥಾಶಕ್ತಿ ಯೋದ್ಧುಂ ತೈಃ ಸಹ ಸಂಯುಗೇ ।
ದುರ್ಯೋಧನಹಿತಾರ್ಥಾಯ ಜಯೋ ದೈವೇ ಪ್ರತಿಷ್ಠಿತಃ ॥ ೬೪ ॥

ಎಲೈ ದ್ವಿಜಾಧಮನೇ, ಯಾವ ಪಾಂಡವರನ್ನು ನೀನು ದುರ್ಯೋಧನನಿಗಿಂತಲೂ ಬಲಿಷ್ಠರು ಎಂದು ಭಾವಿಸುತ್ತೀಯೋ, ರಣರಂಗದಲ್ಲಿ ಅವರ ಜೊತೆಯಲ್ಲಿ ಯುದ್ಧವನ್ನು ಮಾಡಲು ದುರ್ಯೋಧನನ ಹಿತಕ್ಕಾಗಿ ನಾನು ನನ್ನ ಶಕ್ತಿಗೆ ಅನುಗುಣವಾಗಿ ಪ್ರಯತ್ನವನ್ನು ಮಾಡುವೆನು. ಜಯವು ದೈವವನ್ನು ಅವಲಂಬಿಸಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುಶ್ಚತ್ವಾರಿಂಶದಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೈದನೆಯ ಅಧ್ಯಾಯ

ಕರ್ಣನಿಂದ ಕೃಪರ ನಿಂದೆಯನ್ನು ಕೇಳಿ, ಕರ್ಣನ ಜೊತೆಯಲ್ಲಿ ಅಶ್ವತ್ಥಾಮರ ಕಲಹ. ದುರ್ಯೋಧನನಿಂದ ಕಲಹದ ಉಪಶಮನ ಮತ್ತು ಅಶ್ವತ್ಥಾಮರನ್ನು ಕುರಿತು ಪಾಂಚಾಲರನ್ನು ಕೊಲ್ಲುವಂತೆ ಒತ್ತಾಯ.

ಸಂಜಯಃ

ತಥಾ ಪರುಷಿತಂ ದೃಷ್ಟ್ವಾ ಸೂತಪುತ್ರೇಣ ಮಾತುಲಮ್ ।
ಖಡ್ಗಮುದ್ಯಮ್ಯ ವೇಗೇನ ದ್ರೌಣಿರಭ್ಯಪತದ್ ದ್ರುತಮ್ ॥ ೧ ॥

ಸಂಜಯ– ತಮ್ಮ ಸೋದರಮಾವನನ್ನು ಕುರಿತು ಕರ್ಣನು ಆಡಿದ ಉಗ್ರ ವಚನವನ್ನು ಕೇಳಿ ಅಶ್ವತ್ಥಾಮರು ಖಡ್ಗವನ್ನು ಎತ್ತಿ ವೇಗದಿಂದ ಅಲ್ಲಿಗೆ ಬಂದರು.

ಅಶ್ವತ್ಥಾಮಾ

ಕರ್ಣ ಪಶ್ಯ ಸುದುರ್ಬುದ್ಧೇ ತಿಷ್ಠೇದಾನೀಂ ನರಾಧಮ ।
ಏಷ ತೇಽದ್ಯ ಶಿರಃ ಕಾಯಾದುದ್ಧರಾಮಿ ಸುದುರ್ಮತೇ ॥ ೨ ॥

ಅಶ್ವತ್ಥಾಮಾ– ಎಲೈ ದುರ್ಬುದ್ಧಿಯುಳ್ಳ ಕರ್ಣನೇ, ಇಲ್ಲಿ ನೋಡು. ನರಾಧಮನೇ, ಈಗ ನಿಲ್ಲು. ಅತ್ಯಂತ ದುರ್ಬುದ್ಧಿಯೇ ಈಗ ನಿನ್ನ ಶಿರಸ್ಸನ್ನು ದೇಹದಿಂದ ಕತ್ತರಿಸುತ್ತೇನೆ.

ಸಂಜಯಃ

ತಮುತ್ತಂತಂ ವೇಗೇನ ರಾಜಾ ದುರ್ಯೋಧನಃ ಸ್ವಯಮ್ ।
ನ್ಯವಾರಯತ್ ಮಹಾರಾಜ ಕೃಪಶ್ಚ ದ್ವಿಪದಾಂ ವರಃ ॥ ೩ ॥

ಸಂಜಯ– ಎಲೈ ಮಹಾರಾಜನೇ, ವೇಗದಿಂದ ಕರ್ಣನ ಮೇಲೆ ಬೀಳಲು ಹೋಗುತ್ತಿದ್ದ ಅಶ್ವತ್ಥಾಮರನ್ನು ರಾಜನಾದ ದುರ್ಯೋಧನನು ಸ್ವತಃ ತಾನೂ ಮತ್ತು ಮನುಷ್ಯಶ್ರೇಷ್ಠರಾದ ಕೃಪರೂ ತಡೆದರು.

ಕರ್ಣಃ

ಶೂರೋಽಯಂ ಸಮರಶ್ಲಾಘೀ ದುರ್ಮತಿಶ್ಚ ದ್ವಿಜಾಧಮಃ ।
ಆಸಾದಯತು ಮದ್ವೀರ್ಯಂ ಮುಂಚೇಮಂ ಕುರುಸತ್ತಮ ॥ ೪ ॥

ಕರ್ಣ– ಈ ಬ್ರಾಹ್ಮಣಾಧಮನು ಶೂರ, ಯುದ್ಧಪ್ರಿಯ ಮತ್ತು ದುರ್ಮತಿ ಉಳ್ಳವನು. ಎಲೈ ಕುರುಶ್ರೇಷ್ಠನೇ, ಅವನನ್ನು ಬಿಡು. ಅವನು ನನ್ನ ಪರಾಕ್ರಮಕ್ಕೆ ಗುರಿಯಾಗಲಿ.

ಅಶ್ವತ್ಥಾಮಾ

ತವೈತತ್ ಕ್ಷಮ್ಯತೇಽಸ್ಮಾಭಿಃ ಸೂತಾತ್ಮಜ ಸುದುರ್ಮತೇ ।
ದರ್ಪಮುತ್ಸಿಕ್ತಮೇತತ್ ತೇ ಫಲ್ಗುನೋ ನಾಶಯಿಷ್ಯತಿ ॥ ೫ ॥

ಅಶ್ವತ್ಥಾಮಾ– ಎಲೈ ಸೂತಪುತ್ರನೇ, ಅತ್ಯಂತ ದುರ್ಮತಿಯುಳ್ಳವನೇ, ನಿನ್ನ ಈ ಅಪಚಾರವನ್ನು ನಾವು ಕ್ಷಮಿಸುತ್ತೇವೆ. ಆದರೆ ಈ ನಿನ್ನ ದುರಹಂಕಾರ ಪೂರಿತವಾದ ದರ್ಪವನ್ನು ಅರ್ಜುನನು ನಾಶಗೊಳಿಸುವನು.

ದುರ್ಯೋಧನಃ

ಅಶ್ವತ್ಥಾಮನ್ ಪ್ರಸೀದಸ್ವ ಕ್ಷಂತುಮರ್ಹಸಿ ಮಾನದ ।
ಕೋಪಃ ಖಲು ನ ಕರ್ತವ್ಯಃ ಸೂತಪುತ್ರೇ ಕಥಂಚನ ॥ ೬ ॥

ದುರ್ಯೋಧನ– ಎಲೈ ಮಾನದರೇ, ಅಶ್ವತ್ಥಾಮರೇ, ಪ್ರಸನ್ನರಾಗಿ. ನೀವು ಕ್ಷಮಿಸಬೇಕು. ಯಾವ ಕಾರಣದಿಂದಲೂ ಕರ್ಣನ ಮೇಲೆ ಕೋಪವನ್ನು ಮಾಡಬಾರದು.

ತ್ವಯಿ ಕರ್ಣೇ ಕೃಪೇ ದ್ರೋಣೇ ಮದ್ರರಾಜೇऽಥ ಸೌಬಲೇ ।
ಮಹತ್ಕಾರ್ಯಂ ಸಮಾಯತ್ತಂ ಪ್ರಸೀದ ದ್ವಿಜಸತ್ತಮ ॥ ೭ ॥

ಎಲೈ ದ್ವಿಜಶ್ರೇಷ್ಠರೇ, ನಿಮ್ಮ ಮೇಲೆ, ಕರ್ಣನ ಮೇಲೆ, ಕೃಪರ ಮೇಲೆ, ದ್ರೋಣರ ಮೇಲೆ, ಶಲ್ಯನ ಮೇಲೆ ಮತ್ತು ಶಕುನಿಯ ಮೇಲೆ ದೊಡ್ಡಕಾರ್ಯದ ಹೊಣೆಯು ಬಿದ್ದಿದೆ. ಪ್ರಸನ್ನರಾಗಿ.

ಏತೇ ಹ್ಯಭಿಮುಖಾಃ ಸರ್ವೇ ರಾಧೇಯೇನ ಯುಯುತ್ಸವಃ ।
ಆಯಾಂತಿ ಪಾಂಡವಾ ಬ್ರಹ್ಮನ್ನಾಹ್ವಯಂತಃ ಸಮಂತತಃ ॥ ೮ ॥

ಎಲೈ ಬ್ರಾಹ್ಮಣರೇ, ಈ ಪಾಂಡವರೆಲ್ಲರೂ ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಕರ್ಣನನ್ನು ಆಹ್ವಾನಿಸುತ್ತಾ, ಅವನಿಗೆ ಅಭಿಮುಖವಾಗಿ ಎಲ್ಲ ಕಡೆಯಿಂದಲೂ ಬರುತ್ತಿದ್ದಾರೆ.

ಸಂಜಯಃ

ಕರ್ಣೋऽಪಿ ರಥಿನಾಂ ಶ್ರೇಷ್ಠಶ್ಚಾಪಮುದ್ಯಮ್ಯ ವೀರ್ಯವಾನ್ ।
ಕೌರವಾಗ್ರೈಃ ಪರಿವೃತಃ ಶಕ್ರೋ ದೇವಗಣೈರಿವ ।
ಪರ್ಯತಿಷ್ಠತ ತೇಜಸ್ವೀ ಸ್ವಬಾಹುಬಲಮಾಶ್ರಿತಃ ॥ ೯ ॥

ಸಂಜಯ– ರಥಿಕರಲ್ಲಿ ಶ್ರೇಷ್ಠರಾದ, ಪರಾಕ್ರಮಶಾಲಿಯಾದ ಕರ್ಣನೂ ಸಹ ತನ್ನ ಧನುಸ್ಸನ್ನು ಎತ್ತಿ ದೇವಸಮೂಹದಿಂದ ಇಂದ್ರನು ಪರಿವೃತನಾದಂತೆ ಕೌರವ ಶ್ರೇಷ್ಠರಿಂದ ಸುತ್ತುವರಿಯಲ್ಪಟ್ಟು ತೇಜಸ್ವಿಯಾದ ಅವನು ತನ್ನ ಬಾಹುಬಲವನ್ನು ಆಶ್ರಯಿಸಿ ನಿಂತನು.

ತತಃ ಪ್ರವವೃತೇ ಯುದ್ಧಂ ಕರ್ಣಸ್ಯ ಸಹ ಪಾಂಡವೈಃ ।
ಸಂರಬ್ಧಸ್ಯ ಮಹಾರಾಜ ಸಿಂಹನಾದವಿನಾದಿತಮ್ ॥ ೧೦ ॥

ಎಲೈ ಮಹಾರಾಜನೇ, ಅನಂತರ ಕೋಪಗೊಂಡ ಕರ್ಣನಿಗೂ ಮತ್ತು ಪಾಂಡವರಿಗೂ ಸಿಂಹನಾದದಿಂದ ಕೂಡಿದ ಯುದ್ಧವು ನಡೆಯಿತು.

ತತಸ್ತೇ ಪಾಂಡವಾ ರಾಜನ್ ಪಾಂಚಾಲಾಶ್ಚ ಯಶಸ್ವಿನಃ ।
ದೃಷ್ಟ್ವಾ ಕರ್ಣಂ ಮಹಾಬಾಹುಮುಚ್ಚೈಃ ಶಬ್ದಮಥಾನದನ್ ॥ ೧೧ ॥

ಅಯಂ ಕರ್ಣಃ ಕುತಃ ಕರ್ಣಸ್ತಿಷ್ಠ ಕರ್ಣ ಮಹಾರಣೇ ।
ಯುದ್ಧ್ಯಸ್ವ ಸಹಿತೋಽಸ್ಮಾಭಿರ್ದುರಾತ್ಮನ್ ಪುರುಷಾಧಮ ॥ ೧೨ ॥

ಎಲೈ ರಾಜನೇ, ಆಗ ಪಾಂಡವರು ಮತ್ತು ಕೀರ್ತಿವಂತರಾದ ಪಾಂಚಾಲರು ಮಹಾಬಾಹುವಾದ ಕರ್ಣನನ್ನು ನೋಡಿ ಇವನು ಕರ್ಣ. ಕರ್ಣನು ಎಲ್ಲಿದ್ದಾನೆ? ಕರ್ಣನೇ ನಿಲ್ಲು. ದುರಾತ್ಮನೇ, ಪುರುಷಾಧಮನೇ, ನಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡು ಎಂಬುದಾಗಿ ರಣರಂಗದಲ್ಲಿ ಗಟ್ಟಿಯಾದ ಶಬ್ದದಿಂದ ಕರುಚಿದರು.

ಅನ್ಯೇ ತು ದೃಷ್ಟ್ವಾ ರಾಧೇಯಂ ಕ್ರೋಧರಕ್ತೇಕ್ಷಣಾಬ್ರುವನ್ ।
ಹನ್ಯತಾಮಯಮುತ್ಸಿಕ್ತಃ ಸೂತಪುತ್ರೋಽಲ್ಪಚೇತನಃ ॥ ೧೩ ॥

ಸರ್ವೈಃ ಪಾರ್ಥಿವಶಾರ್ದೂಲೈರ್ನಾನೇನಾರ್ಥೋಽಸ್ತಿ ಜೀವತಾ ।
ಅತ್ಯಂತವೈರೀ ಪಾರ್ಥಾನಾಂ ಸತತಂ ಪಾಪಪೂರುಷಃ ॥ ೧೪ ॥

ಏಷ ಮೂಲಂ ಹ್ಯನರ್ಥಾನಾಂ ದುರ್ಯೋಧನಮತೇ ಸ್ಥಿತಃ ।
ಹತ್ವೈನಮಿತಿ ಜಲ್ಪಂತಃ ಕ್ಷತ್ರಿಯಾಃ ಸಮುಪಾದ್ರವನ್ ॥ ೧೫ ॥

ಇನ್ನು ಕೆಲವರು ಕರ್ಣನನ್ನು ನೋಡಿ, ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ, ಅಹಂಕಾರಿಯೂ, ಅಲ್ಪಚೇತನನೂ ಆದ ಈ ಕರ್ಣನನ್ನು ಎಲ್ಲ ರಾಜಶಾರ್ದೂಲರೂ ಸೇರಿ ಕೊಲ್ಲಿ. ಇವನು ಬದುಕಿರುವುದರಿಂದ ಯಾವ ಪ್ರಯೋಜನವೂ ಇಲ್ಲ. ಇವನು ಪಾಪಪುರುಷನಾದವನು. ಪಾಂಡವರಿಗೆ ಯಾವಾಗಲೂ ಅತ್ಯಂತ ವೈರಿಯಾದವನು. ದುರ್ಯೋಧನನ ಅಭಿಪ್ರಾಯದಂತೆ ನಡೆದುಕೊಳ್ಳುವ ಇವನು ಎಲ್ಲ ಅನರ್ಥಕ್ಕೂ ಮೂಲಕಾರಣನಾದವನು. ಇವನನ್ನು ಕೊಲ್ಲಿ ಎಂದು ಹೇಳುತ್ತಾ ಕ್ಷತ್ರಿಯರು ಅವನ ಕಡೆಗೆ ಧಾವಿಸಿದರು.

ಮಹತಾ ಶರವರ್ಷೇಣ ಛಾದಯಂತೋ ಮಹಾರಥಾಃ ।
ವಧಾರ್ಥಂ ಸೂತಪುತ್ರಸ್ಯ ಪಾಂಡವೇಯೇನ ಚೋದಿತಾಃ ॥ ೧೬ ॥

ಯುಧಿಷ್ಠಿರನಿಂದ ಪ್ರೇರಿಸಲ್ಪಟ್ಟ ಮಹಾರಥರು ಕರ್ಣನ ವಧೆಗಾಗಿ ಬಾಣಗಳ ದೊಡ್ಡ ಮಳೆಯನ್ನು ಅವನ ಮೇಲೆ ಸುರಿಸುತ್ತಾ (ಅವನ ಕಡೆಗೆ ಧಾವಿಸಿದರು).

ತಾಂಸ್ತು ಸರ್ವಾಂಸ್ತಥಾ ದೃಷ್ಟ್ವಾ ಧಾವಮಾನಾನ್ ಮಹಾರಥಾನ್ ।
ನ ವಿವ್ಯಥೇ ಸೂತಪುತ್ರೋ ನ ಚ ತ್ರಾಸಮಗಚ್ಛತ ॥ ೧೭ ॥

ತನ್ನ ಕಡೆಗೆ ಓಡಿಬರುತ್ತಿದ್ದ ಆ ಎಲ್ಲ ಮಹಾರಥರನ್ನು ನೋಡಿ ಸೂತಪುತ್ರನಾದ ಕರ್ಣನು ವ್ಯಥೆಯನ್ನೂ ಪಡಲಿಲ್ಲ, ಭಯವನ್ನೂ ಹೊಂದಲಿಲ್ಲ.

ದೃಷ್ಟ್ವಾ ನಗರಕಲ್ಪಂ ತಮುದ್ಧೂತಂ ಸೈನ್ಯಸಾಗರಮ್ ।
ಪಿಪ್ರೀಷುಸ್ತವ ಪುತ್ರಾಣಾಂ ಸಂಗ್ರಾಮೇಷ್ವಪರಾಜಿತಃ ॥ ೧೮ ॥

ಸಾಯಕೌಘೇನ ಬಲವಾನ್ ಕ್ಷಿಪ್ರಕಾರೀ ಮಹಾಬಲಃ ।
ವಾರಯಾಮಾಸ ತತ್ ಸೈನ್ಯಂ ಸಮಂತಾದ್ ಭರತರ್ಷಭ ॥ ೧೯ ॥

ಎಲೈ ಭರತಶ್ರೇಷ್ಠನೇ, ದೊಡ್ಡ ನಗರದಂತಿದ್ದ ಆ ಸೈನ್ಯಸಾಗರವನ್ನು ನೋಡಿ ಯುದ್ಧದಲ್ಲಿ ಪರಾಜಿತನಾಗದ ಮಹಾಬಲನೂ, ಕ್ಷಿಪ್ರಕಾರಿಯೂ ಆದ ಕರ್ಣನು ನಿನ್ನ ಮಕ್ಕಳನ್ನು ಸಂತೋಷಪಡಿಸಲು ಬಯಸಿ, ಆ ಸೈನ್ಯವನ್ನು ತನ್ನ ಬಾಣಗಳ ಸಮೂಹದಿಂದ ಎಲ್ಲ ಕಡೆಗಳಲ್ಲಿಯೂ ತಡೆದನು.

ತತಸ್ತು ಶರವರ್ಷೇಣ ಪಾರ್ಥಿವಾಸ್ತಮವಾರಯನ್ ।
ಧನೂಂಷಿ ತೇ ವಿಧುನ್ವಾನಾಃ ಶತಶೋಽಥ ಸಹಸ್ರಶಃ ।
ಅಯೋಧಯಂತ ರಾಧೇಯಂ ಶಕ್ರಂ ದೈತ್ಯಗಣಾ ಇವ ॥ ೨೦ ॥

ಆಗ ಆ ರಾಜರೂ ಸಹ ಬಾಣಗಳ ಮಳೆಯಿಂದ ಕರ್ಣನನ್ನು ತಡೆದರು. ಧನುಸ್ಸುಗಳನ್ನು ತೂಗಾಡಿಸುತ್ತಾ ನೂರಾರು, ಸಾವಿರಾರು ಸಂಖ್ಯೆಯಲ್ಲಿದ್ದ ಆ ರಾಜರು ದೈತ್ಯಸಮೂಹಗಳು ಇಂದ್ರನ ಜೊತೆ ಯುದ್ಧವನ್ನು ಮಾಡಿದಂತೆ ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಶರವರ್ಷಂ ತು ತತ್ಕರ್ಣಃ ಪಾರ್ಥಿವೈಃ ಸಮುದೀರಿತಮ್ ।
ಶರವರ್ಷೇಣ ಮಹತಾ ಸಮಂತಾದ್ ವ್ಯಕಿರತ್ ಪ್ರಭೋ ॥ ೨೧ ॥

ಆ ರಾಜರು ಉಂಟುಮಾಡಿದ ಆ ಬಾಣಗಳ ಮಳೆಯನ್ನು ಕರ್ಣನು ತನ್ನ ದೊಡ್ಡ ಬಾಣಗಳ ಮಳೆಯಿಂದ ಎಲ್ಲ ಕಡೆಗಳಲ್ಲಿಯೂ ಚದುರಿಸಿದನು.

ತದ್ಯುದ್ಧಮಭವತ್ತೇಷಾಂ ಕೃತಪ್ರತಿಕೃತೈಷಿಣಾಮ್ ।
ಯಥಾ ದೇವಾಸುರೇ ಯುದ್ಧೇ ಶಕ್ರಸ್ಯ ಸಹ ದಾನವೈಃ ॥ ೨೨ ॥

ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತೀಕಾರವನ್ನು ಮಾಡಲು ಬಯಸಿ ಮಾಡಿದ ಆ ಯುದ್ಧವು ದೇವಾಸುರ ಯುದ್ಧದಲ್ಲಿ ಇಂದ್ರ ಮತ್ತು ದಾನವರ ಯುದ್ಧದಂತೆ ಇದ್ದಿತು.

ತತ್ರಾದ್ಭುತಮಪಶ್ಯಾಮ ಸೂತಪುತ್ರಸ್ಯ ಲಾಘವಮ್ ।
ಯದೇನಂ ಸಮರೇ ಯತ್ತಾ ನಾಪ್ನುವಂತ ಪರೇ ಯುಧಿ ॥ ೨೩ ॥

ರಣರಂಗದಲ್ಲಿ ಪ್ರಯತ್ನಶೀಲರಾದ ರಾಜರು ಕರ್ಣನ ಸಮೀಪಕ್ಕೆ ಬರಲಾರದಂತಹ ಕರ್ಣನ ಅದ್ಭುತವಾದ ಹಸ್ತಲಾಘವವನ್ನು ನಾವು ಅಲ್ಲಿನೋಡಿದೆವು.

ನಿವಾರ್ಯ ಚ ಶರೌಘಾಂಸ್ತಾನ್ ಪಾರ್ಥಿವಾನಾಂ ಮಹಾರಥಃ ।
ಯುಗೇಷ್ವೀಷಾಸು ಧ್ವತ್ರೇಷು ಧ್ವಜೇಷು ಚ ಹಯೇಷು ಚ ।
ಆತ್ಮನಾಮಾಂಕಿತಾನ್ ಬಾಣಾನ್ ರಾಧೇಯಃ ಪ್ರಾಹಿಣೋಚ್ಚಿತಾನ್ ॥

ಮಹಾರಥನಾದ ರಾಧೇಯನು ಆ ರಾಜರ ಬಾಣಸಮೂಹಗಳನ್ನು ನಿವಾರಿಸಿ ಅವರ ನೊಗಗಳಲ್ಲಿ, ಮೂಕಿಗಳಲ್ಲಿ, ಧ್ವಜಗಳಲ್ಲಿ, ಅಶ್ವಗಳಲ್ಲಿ ತನ್ನ ನಾಮದಿಂದ ಅಂಕಿತವಾದ ನಿಶಿತವಾದ ಬಾಣಗಳನ್ನು ಪ್ರಯೋಗಿಸಿದನು.

ತತಸ್ತೇ ವ್ಯಾಕುಲೀಭೂತಾ ರಾಜಾನಃ ಕರ್ಣಪೀಡಿತಾಃ ।
ಬಭ್ರಮುಸ್ತತ್ರ ತತ್ರೈವ ಗಾವಃ ಶೀತಾರ್ದಿತಾ ಇವ ॥ ೨೫ ॥

ಆಗ ಕರ್ಣಪೀಡಿತರಾದ ರಾಜರು ವ್ಯಾಕುಲಗೊಂಡು ಶೀತಪೀಡಿತವಾದ ಗೋವುಗಳಂತೆ ಅಲ್ಲಲ್ಲಿಯೇ ತಿರುಗಾಡಿದರು.

ಹಯಾನಾಂ ವಧ್ಯಮಾನಾನಾಂ ಗಜಾನಾಂ ರಥಿನಾಂ ತಥಾ ।
ತತ್ರ ತತ್ರಾಭ್ಯವೇಕ್ಷಾಮಃ ಸಂಘಾನ್ ಕರ್ಣೇನ ಪಾತಿತಾನ್ ॥ ೨೬ ॥

ಕರ್ಣನಿಂದ ಹೊಡೆದು ಉರುಳಿಸಲ್ಪಟ್ಟ ಅಶ್ವಗಳ, ಗಜಗಳ, ರಥಿಕರ ಸಮೂಹಗಳನ್ನು ನಾವು ಅಲ್ಲಲ್ಲಿನೋಡಿದೆವು.

ಶಿರೋಭಿಃ ಪತಿತೈ ರಾಜನ್ ಬಾಹುಭಿಶ್ಚ ಸಮಂತತಃ ।
ಆಸ್ತೀರ್ಣಾ ವಸುಧಾ ಸರ್ವಾ ಶೂರಾಣಾಮನಿವರ್ತಿನಾಮ್ ॥ ೨೭ ॥

ಎಲೈ ರಾಜನೇ, ಭೂಮಿಯ ಮೇಲೆ ಬಿದ್ದಯುದ್ಧದಿಂದ ಹಿಮ್ಮೆಟ್ಟದಿರುವ ಶೂರರ ಶಿರಸ್ಸುಗಳಿಂದಲೂ, ಬಾಹುಗಳಿಂದಲೂ ಭೂಮಿಯು ಎಲ್ಲ ಕಡೆಗಳಲ್ಲಿಯೂ ಹರಡಲ್ಪಟ್ಟಿತು.

ಹತೈಶ್ಚ ಹನ್ಯಮಾನೈಶ್ಚ ನಿಷ್ಪನದ್ಭಿಶ್ಚ ಸರ್ವಶಃ ।
ಬಭೂವಾಯೋಧನಂ ರೌದ್ರಂ ವೈವಸ್ವತಪುರೋಪಮಮ್ ॥ ೨೮ ॥

ಹತರಾದ ಮತ್ತು ಹೊಡೆಯಲ್ಪಡುತ್ತಾ ಎಲ್ಲ ಕಡೆಗಳಲ್ಲಿಯೂ ಆರ್ತನಾದವನ್ನು ಮಾಡುವ ಆ ಕ್ಷತ್ರಿಯರಿಂದ ಕೂಡಿದ ರಣರಂಗವು ಯಮನ ಪಟ್ಟಣದಂತೆ ನೋಡಲು ಘೋರವಾಯಿತು.

ತತೋ ದುರ್ಯೋಧನೋ ರಾಜಾ ದೃಷ್ಟ್ವಾ ಕರ್ಣಸ್ಯ ವಿಕ್ರಮಮ್ ।
ಅಶ್ವತ್ಥಾಮಾನಮಾಸಾದ್ಯ ತದಾ ವಾಕ್ಯಮುವಾಚ ಹ ॥ ೨೯ ॥

ಆಗ ರಾಜನಾದ ದುರ್ಯೋಧನನು ಕರ್ಣನ ಪರಾಕ್ರಮವನ್ನು ನೋಡಿ ಅಶ್ವತ್ಥಾಮರ ಬಳಿಗೆ ಬಂದು ಮಾತನಾಡಿದನು.

ಯುಧ್ಯತೇಽಸೌ ರಣೇ ಕರ್ಣೋ ದಂಶಿತಃ ಸರ್ವಪಾರ್ಥಿವೈಃ ।
ಪಶ್ಯೈತಾಂ ದ್ರವತೀಂ ಸೇನಾಂ ಕರ್ಣಸಾಯಕಪೀಡಿತಾಮ್ ।
ಕಾರ್ತಿಕೇಯೇನ ವಿಧ್ವಸ್ತಾಮಾಸುರೀಂ ಪೃತನಾಮಿವ ॥ ೩೦ ॥

ಈ ಕರ್ಣನು ಸನ್ನದ್ಧನಾಗಿ ಎಲ್ಲ ರಾಜರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆ. ಕರ್ಣನ ಬಾಣಗಳಿಂದ ಪೀಡಿತವಾಗಿ ಷಣ್ಮುಖನ ಬಾಣಗಳಿಂದ ಪೀಡಿತವಾದ ಅಸುರಸೇನೆಯಂತೆ ಓಡುತ್ತಿರುವ ಈ ಪಾಂಡವರ ಸೇನೆಯನ್ನು ನೋಡು.

ದೃಷ್ಟ್ವೈತಾಂ ನಿರ್ಜಿತಾಂ ಸೇನಾಂ ರಣೇ ಕರ್ಣೇನ ಧೀಮತಾ ।
ಅಭಯಾತ್ಯೇಷ ಬೀಭತ್ಸುಃ ಸೂತಪುತ್ರಜಿಘಾಂಸಯಾ ॥ ೩೧ ॥

ಮೇಧಾವಿಯಾದ ಕರ್ಣನಿಂದ ಪರಾಜಿತವಾದ ಈ ಪಾಂಡವ ಸೈನ್ಯವನ್ನು ನೋಡಿ ಈ ಅರ್ಜುನನು ಕರ್ಣನನ್ನು ಕೊಲ್ಲಲು ಬಯಸಿ ಈ ಕಡೆಗೇ ಬರುತ್ತಿದ್ದಾನೆ.

ತದ್ಯಥಾ ಪಶ್ಯಮಾನಾನಾಂ ಸೂತಪುತ್ರಂ ಮಹಾರಥಮ್ ।
ನ ಹನ್ಯಾತ್ ಪಾಂಡವಃ ಸಂಖೇ ತಥಾ ನೀತಿರ್ವಿಧೀಯತಾಮ್ ॥೩೨॥

ನಾವೆಲ್ಲರೂ ನೋಡುತ್ತಿರುವಂತೆಯೇ ಮಹಾರಥನಾದ ಸೂತಪುತ್ರನಾದ ಕರ್ಣನನ್ನು ಅರ್ಜುನನು ಯುದ್ಧದಲ್ಲಿ ಕೊಲ್ಲದಿರುವಂತೆ ಯುದ್ಧನೀತಿಯನ್ನು ನಿರೂಪಿಸು (ಎಂದು ಹೇಳಿದನು).

ತತೋ ದ್ರೌಣಿಃ ಕೃಪಃ ಶಲ್ಯೋ ಹಾರ್ದಿಕ್ಯಶ್ಚ ಮಹಾರಥಃ ।
ಪ್ರತ್ಯುದ್ಯಯುಸ್ತದಾ ಪಾರ್ಥಂ ಸೂತಪುತ್ರಪರೀಪ್ಸಯಾ ॥ ೩೩ ॥

ಆಗ ಅಶ್ವತ್ಥಾಮರು, ಕೃಪರು, ಶಲ್ಯ, ಮಹಾರಥನಾದ ಕೃತವರ್ಮ - ಇವರು ಕರ್ಣನನ್ನು ರಕ್ಷಿಸಲು ಬಯಸಿ ಅರ್ಜುನನ ಎದುರಾಗಿ ಧಾವಿಸಿದರು.

ಆಯಾಂತಂ ದೃಶ್ಯ ಕೌಂತೇಯಂ ವೃತ್ರಂ ದೇವಚಮೂಮಿವ ।
ಪ್ರತ್ಯುದ್ಯಯೌ ತದಾ ಕರ್ಣೋ ಯಥಾ ಶಕ್ರಃ ಪ್ರತಾಪವಾನ್ ॥ ೩೪ ॥

ವೃತ್ರನು ದೇವಸೇನೆಯ ಕಡೆಗೆ ಬಂದಂತೆ ಅರ್ಜುನನು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ, ಕರ್ಣನು ಪ್ರತಾಪಶಾಲಿಯಾದ ಇಂದ್ರನಂತೆ ಅವನಿಗೆ ಅಭಿಮುಖವಾಗಿ ಧಾವಿಸಿದನು.

ಧೃತರಾಷ್ಟ್ರ:

ಸಂರಬ್ಧಂ ಫಲ್ಗುನಂ ದೃಷ್ಟ್ವಾ ಕಾಲಾಂತಕಯಮೋಪಮಮ್ ।
ಕರ್ಣೋ ವೈಕರ್ತನಃ ಸೂತ ಪ್ರತ್ಯಪದ್ಯತ್ ಕಿಮುತ್ತರಮ್ ॥ ೩೫ ॥

ಧೃತರಾಷ್ಟ್ರ- ಎಲೈ ಸೂತನೇ, ಕಾಲಾಂತಕ ಯಮನಂತೆ ಕೋಪಗೊಂಡ ಅರ್ಜುನನನ್ನು ನೋಡಿ ವೈಕರ್ತನನಾದ ಕರ್ಣನು ಯಾವ ಪರಿಹಾರವನ್ನು ಯೋಚಿಸಿದನು?

ಸ ಹ್ಯಸ್ಪರ್ಧತ ಪಾರ್ಥೇನ ನಿತ್ಯಮೇವ ಮಹಾರಥಃ ।
ಆಶಂಸತೇ ಚ ಬೀಭತ್ಸುಂ ಯುದ್ಧೇ ಜೇತುಂ ಸುದಾರುಣೇ ॥ ೩೬ ॥

ಮಹಾರಥನಾದ ಅವನು ಯಾವಾಗಲೂ ಅರ್ಜುನನ ಜೊತೆಯಲ್ಲಿ ಸ್ಪರ್ಧಿಸುತ್ತಾನಷ್ಟೆ? ದಾರುಣವಾದ ಯುದ್ಧದಲ್ಲಿ ಅರ್ಜುನನನ್ನು ಗೆಲ್ಲಲೂ ಬಯಸುತ್ತಾನೆ.

ಸ ತು ತಂ ಸಹಸಾ ಪ್ರಾಪ್ತಂ ನಿತ್ಯಮತ್ಯಂತವೈರಿಣಮ್ ।
ಕರ್ಣೋ ವೈಕರ್ತನಃ ಸೂತ ಕಮುತ್ತರಮಪದ್ಯತ ॥ ೩೭ ॥

ಎಲೈ ಸೂತನೇ, ಅತ್ಯಂತ ವೈರಿಯಾದ ಅರ್ಜುನನು ತಕ್ಷಣ ಬಂದುದನ್ನು ನೋಡಿ ವೈಕರ್ತನನಾದ ಕರ್ಣನು ಯಾವ ಉತ್ತರವನ್ನು ಯೋಜಿಸಿದನು?

ಸಂಜಯಃ

ಆಯಾಂತಂ ಪಾಂಡವಂ ದೃಷ್ಟ್ವಾ ಗಜಃ ಪ್ರತಿಗಜಂ ಯಥಾ ।
ಅಸಂಭ್ರಾಂತತರಃ ಕರ್ಣಃ ಪ್ರತ್ಯುದೀಯಾದ್ ಧನಂಜಯಮ್ ॥ ೩೮ ॥

ಸಂಜಯ– ತನ್ನ ಬಳಿಗೆ ಬರುತ್ತಿದ್ದ ಅರ್ಜುನನನ್ನು ನೋಡಿ ಕರ್ಣನು ಏನೇನೂ ಗಾಬರಿಯಿಲ್ಲದೆ ಗಜವು ಪ್ರತಿಗಜದ ಕಡೆಗೆ ಹೋಗುವಂತೆ ಧನಂಜಯನ ಕಡೆಗೆ ಧಾವಿಸಿದನು.

ತಮಾಪತಂತಂ ವೇಗೇನ ವೈಕರ್ತನಮಜಿಹ್ಮಗೈಃ ।
ವಾರಯಾಮಾಸ ತೇಜಸ್ವೀ ಪಾಂಡವಃ ಶತ್ರುತಾಪನಃ ॥ ೩೯ ॥

ಶತ್ರುತಾಪನನಾದ, ತೇಜಸ್ವಿಯಾದ ಅರ್ಜುನನು ತನ್ನ ಕಡೆಗೆ ವೇಗದಿಂದ ಸಾಗಿ ಬರುತ್ತಿದ್ದ ಕರ್ಣನನ್ನು ನೇರವಾಗಿ ಸಾಗುವ ಬಾಣಗಳಿಂದ ತಡೆದನು.

ತಂ ಕರ್ಣಃ ಶರಜಾಲೇನ ಛಾದಯಾಮಾಸ ಮಾರಿಷ ।
ವಿವ್ಯಾಧ ಚ ಸುಸಂಕ್ರುದ್ಧಃ ಶರೈಸ್ತ್ರಿಭಿರಜಿಹ್ಮಗೈಃ ॥ ೪೦ ॥

ಎಲೈ ಪೂಜ್ಯನೇ, ಕರ್ಣನು ಅವನನ್ನು ಬಾಣಗಳ ಸಮೂಹದಿಂದ ಆವರಿಸಿದನು. ಮತ್ತು ನೇರವಾಗಿ ಸಾಗುವ ಮೂರು ಬಾಣಗಳಿಂದ ಕೋಪಗೊಂಡು ಅವನನ್ನು ಹೊಡೆದನು.

ತಸ್ಯ ತಲ್ಲಾಘವಂ ಪಾರ್ಥೋ ನಾಮೃಷ್ಯತ ಮಹಾಬಲಃ ।
ತಸ್ಮೈ ಬಾಣಾನ್ ಶಿಲಾಧೌತಾನ್ ಪ್ರಸನ್ನಾಗ್ರಾನಜಿಹ್ಮಗಾನ್ ॥ ೪೧॥

ಪ್ರಾಹಿಣೋತ್ ಸೂತಪುತ್ರಾಯ ತ್ರಿಂಶತಂ ಶತ್ರುತಾಪನಃ ।
ವಿವ್ಯಾಧ ಚೈನಂ ಸಂರಬ್ಧೋ ಬಾಣೇನೈಕೇನ ವೀರ್ಯವಾನ್ ॥ ೪೨ ॥

ಸವ್ಯೇ ಭುಜಾಗ್ರೇ ಬಲವಾನ್ ನಾರಾಚೇನ ಹಸನ್ನಿವ ।
ತಸ್ಯ ವಿದ್ಧಸ್ಯ ವೇಗೇನ ಕರಾಚ್ಚಾಪಂ ಪಪಾತ ಹ ॥ ೪೩ ॥

ಮಹಾಬಲನಾದ ಪಾರ್ಥನು ಕರ್ಣನ ಕ್ಷಿಪ್ರತೆಯನ್ನು ನೋಡಿ ಸಹಿಸಲಿಲ್ಲ. ಶತ್ರುತಾಪನನಾದ ಅವನು ನಿಶಿತವಾದ ತುದಿಯುಳ್ಳ, ನೇರವಾಗಿ ಸಾಗುವ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಮೂವತ್ತು ಬಾಣಗಳನ್ನು ಕರ್ಣನ ಮೇಲೆ ಪ್ರಯೋಗಿಸಿದನು ಮತ್ತು ಪರಾಕ್ರಮಶಾಲಿಯಾದ ಅವನು ಕೋಪಗೊಂಡು ನಗುತ್ತಾ ಒಂದು ಬಾಣದಿಂದ ಕರ್ಣನನ್ನು ಅವನ ಎಡಭುಜದ ಮೂಲೆಯಲ್ಲಿ ಬಲವಾಗಿ ಹೊಡೆದನು. ಆಗ ಕರ್ಣನ ಹಸ್ತದಿಂದ ಅವನ ಧನುಸ್ಸು ಬಿದ್ದಿತು.

ಪುನರಾದಾಯ ತಚ್ಚಾಪಂ ನಿಮೇಷಾರ್ಧಾನ್ಮಹಾಬಲಃ ।
ಛಾದಯಾಮಾಸ ಬಾಣೌಘೈಃ ಫಲ್ಗುನಂ ಕೃತಹಸ್ತವತ್ ॥ ೪೪ ॥

ಮಹಾಬಲನಾದ ಕರ್ಣನು ಅರ್ಧನಿಮಿಷದಲ್ಲಿ ಆ ಧನುಸ್ಸನ್ನು ಪುನಃ ತೆಗೆದುಕೊಂಡು ಸಿದ್ಧಹಸ್ತನಂತೆ ಬಾಣಗಳ ಸಮೂಹದಿಂದ ಅರ್ಜುನನನ್ನು ಆಚ್ಛಾದಿಸಿದನು.

ಶರವೃಷ್ಟಿಂ ತು ತಾಂ ಮುಕ್ತಾಂ ಸೂತಪುತ್ರೇಣ ಭಾರತ ।
ವ್ಯಧಮಚ್ಛರವರ್ಷೇಣ ಸ್ಥಯನ್ನಿವ ಧನಂಜಯಃ ॥ ೪೫ ॥

ಎಲೈ ಭಾರತನೇ, ಸೂತಪುತ್ರನು ಪ್ರಯೋಗಿಸಿದ ಆ ಬಾಣಗಳ ಮಳೆಯನ್ನು ಅರ್ಜುನನು ನಗುತ್ತಾ ತನ್ನ ಬಾಣಗಳ ಮಳೆಯಿಂದ ನಾಶಗೊಳಿಸಿದನು.

ತೌ ಪರಸ್ಪರಮಾಸಾದ್ಯ ಶರವರ್ಷೇಣ ಪಾರ್ಥಿವ ।
ಛಾದಯೇತಾಂ ಮಹೇಷ್ವಾಸೌ ಕೃತಪ್ರತಿಕೃತೈಷಿಣೌ ॥ ೪೬ ॥

ಎಲೈ ರಾಜನೇ, ಮಹಾಧನುರ್ಧಾರಿಗಳೂ ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತಿಯಾಗಿ ಮಾಡುವವರೂ ಆದ ಅವರಿಬ್ಬರು ಪರಸ್ಪರವಾಗಿ ಸಮೀಪಿಸಿ ಬಾಣಗಳ ಮಳೆಯಿಂದ ಪರಸ್ಪರವಾಗಿ ಆಚ್ಛಾದಿಸಿದರು.

ತದದ್ಭುತಮಭೂದ್ ಯುದ್ಧಂ ಕರ್ಣಪಾಂಡವಯೋರ್ಮೃಧೇ ।
ಕ್ರುದ್ಧಯೋರ್ವಾಸಿತಾಹೇತೋರ್ವನ್ಯಯೋರ್ಗಜಯೋರಿವ ॥ ೪೭ ॥

ಕರ್ಣಾರ್ಜುನರ ಯುದ್ಧವು ಚಿಕ್ಕ ಹೆಣ್ಣಾನೆಯ ಸಲುವಾಗಿ ಕ್ರೋಧದಿಂದ ಹೋರಾಡುವ ವನಗಜಗಳ ಯುದ್ಧದಂತೆ ಅದ್ಭುತವಾಗಿದ್ದಿತು.

ತತಃ ಪಾರ್ಥೋ ಮಹೇಷ್ವಾಸೋ ದೃಷ್ಟ್ವಾ ಕರ್ಣಸ್ಯ ವಿಕ್ರಮಮ್ ।
ಮುಷ್ಟಿದೇಶೇ ಧನುಸ್ತಸ್ಯ ಚಿಚ್ಛೇದ ತ್ವರಯಾನ್ವಿತಃ ॥ ೪೮ ॥

ಆಗ ಮಹಾಧನುರ್ಧಾರಿಯಾದ ಅರ್ಜುನನು ಕರ್ಣನ ಪರಾಕ್ರಮವನ್ನು ನೋಡಿ ತ್ವರೆಯಿಂದ ಕೂಡಿ ಅವನ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು.

ಅಶ್ವಾಂಶ್ಚ ಚತುರೋ ಭಲ್ಲೈರನಯದ್ ಯಮಸಾದನಮ್ ।
ಸಾರಥೇಶ್ಚ ಶಿರಃ ಕಾಯಾದಹರಚ್ಛತ್ರುತಾಪನಃ ॥ ೪೯ ॥

ಅವನು ಭಲ್ಲಗಳಿಂದ ಕರ್ಣನ ರಥದ ನಾಲ್ಕು ಕುದುರೆಗಳನ್ನು ಯಮಪಟ್ಟಣಕ್ಕೆ ಕಳುಹಿಸಿದನು. ಶತ್ರುತಾಪನನಾದ ಅವನು ಸಾರಥಿಯ ದೇಹದಿಂದ ಅವನ ಶಿರಸ್ಸನ್ನು ಕತ್ತರಿಸಿದನು.

ಅಥೈನಂ ಛಿನ್ನಧನ್ವಾನಂ ಹತಾಶ್ವಂ ಹತಸಾರಥಿಮ್ ।
ವಿವ್ಯಾಧ ಸಾಯಕೈಃ ಪಾರ್ಥಶ್ಚತುರ್ಭಿಃ ಪಾಂಡುನಂದನಃ ॥ ೫೦ ॥

ಅನಂತರ ಪಾಂಡುನಂದನನಾದ ಅರ್ಜುನನು ಧನುಸ್ಸು ಕತ್ತರಿಸಲ್ಪಟ್ಟು ಅಶ್ವ-ಸಾರಥಿಗಳು ಹತರಾದ ಕರ್ಣನ ಮೇಲೆ ನಾಲ್ಕು ಬಾಣಗಳನ್ನು ಪ್ರಯೋಗಿಸಿದನು.

ಹತಾಶ್ವಾತ್ತು ರಥಾತ್ ತೂರ್ಣಮವಪ್ಲುತ್ಯ ನರರ್ಷಭಃ ।
ಆರುರೋಹ ರಥಂ ತೂರ್ಣಂ ಕೃಪಸ್ಯ ಶರಪೀಡಿತಃ ॥ ೫೧ ॥

ನರಶ್ರೇಷ್ಠನಾದ ಕರ್ಣನು ಅಶ್ವಗಳು ಹತವಾದ ತನ್ನ ರಥದಿಂದ ಶೀಘ್ರವಾಗಿ ಹಾರಿ ಅರ್ಜುನನ ಬಾಣಗಳಿಂದ ಪೀಡಿತನಾಗಿ ಕೃಪರ ರಥವನ್ನು ಏರಿದನು.

ರಾಧೇಯಂ ನಿರ್ಜಿತಂ ದೃಷ್ಟ್ವಾ ತಾವಕಾ ಭರತರ್ಷಭ ।
ಧನಂಜಯಶರೈರ್ನುನ್ನಾಃ ಪ್ರಾದ್ರವಂತ ದಿಶೋ ದಶ ॥ ೫೨ ॥

ಎಲೈ ಭರತರ್ಷಭನೇ, ಕರ್ಣನು ಪರಾಜಿತನಾದುದನ್ನು ನೋಡಿ ಅರ್ಜುನನ ಬಾಣಗಳಿಂದ ಪೀಡಿತರಾದ ನಿನ್ನ ಯೋಧರು ಹತ್ತುದಿಕ್ಕುಗಳಿಗೂ ಓಡಿಹೋದರು.

ದ್ರವತಸ್ತಾನ್ ಸಮಾಲೋಕ್ಯ ರಾಜಾ ದುರ್ಯೋಧನೋ ನೃಪ ।
ನಿವರ್ತಯಾಮಾಸ ತದಾ ವಾಕ್ಯಂ ಚೇದಮುವಾಚ ಹ ॥ ೫೩ ॥

ಎಲೈ ರಾಜನೇ, ಓಡುತ್ತಿರುವ ಅವರನ್ನು ನೋಡಿ ರಾಜನಾದ ದುರ್ಯೋಧನನು ಅವರನ್ನು ಹಿಂದಿರುಗಿಸಿ ಆಗ ಈ ಮಾತನ್ನು ಹೇಳಿದನು.

ಅಲಂ ದ್ರುತೇನ ವಃ ಶೂರಾಸ್ತಿಷ್ಠಧ್ವಂ ಕ್ಷತ್ರಿಯರ್ಷಭಾಃ ।
ಏಷ ಪಾರ್ಥವಧಾಯಾಹಂ ಸ್ವಯಂ ಗಚ್ಛಾಮಿ ಸಂಯುಗೇ ॥
ಅಹಂ ಪಾರ್ಥಾನ್ ಹನಿಷ್ಯಾಮಿ ಸಪಾಂಚಾಲಾನ್ ಸಸೋಮಕಾನ್ ॥

ಎಲೈ ಶೂರರೇ, ಓಡಬೇಡಿ. ಕ್ಷತ್ರಿಯರ್ಷಭರೇ, ನಿಲ್ಲಿ. ಅರ್ಜುನನಿಗಾಗಿ ರಣರಂಗದಲ್ಲಿ ನಾನೇ ಸ್ವತಃ ಹೋಗುತ್ತಿದ್ದೇನೆ. ನಾನು ಪಾಂಚಾಲರಿಂದ ಮತ್ತು ಸೋಮಕರಿಂದ ಸಹಿತರಾದ ಪಾಂಡವರನ್ನು ಕೊಲ್ಲುವೆನು.

ಅದ್ಯ ಮೇ ಯುದ್ಧ್ಯಮಾನಸ್ಯ ಸಹ ಗಾಂಡೀವಧನ್ವನಾ ।
ದ್ರಕ್ಷ್ಯಂತಿ ವಿಕ್ರಮಂ ಪಾರ್ಥಾಃ ಕಾಲಸ್ಯೇವ ಯುಗಕ್ಷಯೇ ॥ ೫೫ ॥

ಈ ದಿನ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡುವ ನನ್ನ ಯುಗಾಂತದಲ್ಲಿ ಮೃತ್ಯುವಿನಂತಹ ಪರಾಕ್ರಮವನ್ನು ಪಾಂಡವರು ನೋಡುವರು.

ಅದ್ಯಮದ್ಬಾಣಜಾಲಾನಿ ವಿಮುಕ್ತಾನಿ ಸಹಸ್ರಶಃ ।
ದ್ರಕ್ಷ್ಯಂತಿ ಸಮರೇ ಯೋಧಾಃ ಶಲಭಾನಾಮಿವಾಯತೀಃ ॥ ೫೬ ॥

ಈ ದಿನ ನನ್ನಿಂದ ಸಹಸ್ರಸಂಖ್ಯೆಯಲ್ಲಿ ಪ್ರಯೋಗಿಸಲ್ಪಟ್ಟ ಬಾಣಗಳನ್ನು ರಣರಂಗದಲ್ಲಿ ಯೋಧರು ಪತಂಗಗಳ ಪಂಕ್ತಿಗಳಂತೆ ನೋಡುವರು.

ಅದ್ಯ ಬಾಣಮಯಂ ವರ್ಷಂ ಸೃಜತೋ ಮಮ ಧನ್ವಿನಃ ।
ಜೀಮೂತಸ್ಯೇವ ಘರ್ಮಾಂತೇ ದ್ರಕ್ಷ್ಯಂತಿ ಯುಧಿ ಸೈನಿಕಾಃ ॥ ೫೭ ॥

ಧನುರ್ಧಾರಿಯಾದ ನಾನು ಈ ದಿನ ಸೃಷ್ಟಿಸುವ ಬಾಣಗಳ ಮಳೆಯನ್ನು ರಣರಂಗದಲ್ಲಿ ಸೈನಿಕರು ಬೇಸಿಗೆಯ ನಂತರ ಮೋಡಗಳು ಸುರಿಸುವ ಮಳೆಯಂತೆ ನೋಡುವರು.

ಜೇಷ್ಯಾಮ್ಯದ್ಯ ರಣೇ ಪಾರ್ಥಂ ಸಾಯಕೈರ್ನತಪರ್ವಭಿಃ ।
ತಿಷ್ಠಧ್ವಂ ಸಮರೇ ಶೂರಾ ಭಯಂ ತ್ಯಜತ ಫಲ್ಗುನಾತ್ ॥ ೫೮ ॥

ಬಾಗಿದ ತುದಿಯುಳ್ಳ ಬಾಣಗಳಿಂದ ಈ ದಿನ ನಾನು ಯುದ್ಧದಲ್ಲಿ ಅರ್ಜುನನನ್ನು ಗೆಲ್ಲುವೆನು. ಶೂರರೇ, ಯುದ್ಧದಲ್ಲಿನಿಲ್ಲಿ. ಅರ್ಜುನನ ಭಯವನ್ನು ಬಿಡಿ.

ನ ಹಿ ಮದ್ವೀರ್ಯಮಾಸಾದ್ಯ ಫಲ್ಗುನಃ ಪ್ರಸಹಿಷ್ಯತಿ ।
ಯಥಾ ವೇಲಾಂ ಸಮಾಸಾದ್ಯ ಸಾಗರೋ ಮಕರಾಲಯಃ ॥ ೫೯ ॥

ಮಕರಾಶ್ರಯವಾದ ಸಾಗರವು ತೀರವನ್ನು ಹೊಂದಿದಂತೆ ನನ್ನ ಪರಾಕ್ರಮವನ್ನು ಹೊಂದಿದ ಅರ್ಜುನನು ಈ ದಿನ ಅದನ್ನು ಸಹಿಸುವುದಿಲ್ಲ.

ಇತ್ಯುಕ್ತ್ವಾ ಪ್ರಯಯೌ ರಾಜಾ ಸೈನ್ಯೇನ ಮಹತಾ ವೃತಃ ।
ಫಲ್ಗುನಂ ಪ್ರತಿ ದುರ್ಧರ್ಷಃ ಕ್ರೋಧಸಂರಕ್ತಲೋಚನಃ ॥ ೬೦ ॥

ಹೀಗೆ ಹೇಳಿ ದುರ್ಧರ್ಷನಾದ, ಕೋಪದಿಂದ ಕೆಂಪಾದ ಕಣ್ಣುಳ್ಳ ರಾಜನಾದ ದುರ್ಯೋಧನನು ದೊಡ್ಡಸೇನೆಯಿಂದ ಸಹಿತನಾಗಿ ಅರ್ಜುನನ ಕಡೆಗೆ ಧಾವಿಸಿದನು.

ತಂ ಪ್ರಯಾಂತಂ ಮಹಾಬಾಹುಂ ದೃಷ್ಟ್ವಾ ಶಾರದ್ವತಸ್ತದಾ ।
ಅಶ್ವತ್ಥಾಮಾನಮಾಸಾದ್ಯ ವಾಕ್ಯಮೇತದುವಾಚ ಹ ॥ ೬೧ ॥

ಮಹಾಬಾಹುವಾದ ಅವನು ಹೋಗುತ್ತಿರುವುದನ್ನು ನೋಡಿದ ಕೃಪರು ಅಶ್ವತ್ಥಾಮರ ಬಳಿಗೆ ಬಂದು ಈ ಮಾತನ್ನಾಡಿದರಷ್ಟೆ!

ಏಷ ರಾಜಾ ಮಹಾಬಾಹುರಮರ್ಷೀ ಕ್ರೋಧಮೂರ್ಚ್ಛಿತಃ ।
ಪತಂಗವೃತ್ತಿಮಾಸ್ಥಾಯ ಫಲ್ಗುನಂ ಯೋದ್ಧುಮಿಚ್ಛತಿ ॥ ೬೨ ॥

ರೋಷಶೀಲನೂ, ಕ್ರೋಧಮೂರ್ಛಿತನೂ, ಮಹಾಬಾಹುವೂ ಆದ ಈ ರಾಜನು ಪತಂಗದ ನಡತೆಯನ್ನು ಅನುಸರಿಸಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತಾನೆ.

ಯಾವನ್ನಃ ಪಶ್ಯಮಾನಾನಾಂ ಪ್ರಾಣಾನ್ ಪಾರ್ಥೇನ ಸಂಗತಃ ।
ನ ಜಹ್ಯಾತ್ ಪುರುಷವ್ಯಾಘ್ರಸ್ತಾವದ್ ವಾರಯ ಕೌರವಮ್ ॥ ೬೩ ॥

ಪುರುಷವ್ಯಾಘ್ರನಾದ ಅವನು ಅರ್ಜುನನ ಜೊತೆಯಲ್ಲಿ ಸಮಾಗಮವನ್ನು ಹೊಂದಿ ನಾವು ನೋಡುತ್ತಿರುವಂತೆಯೇ ಪ್ರಾಣಗಳನ್ನು ಬಿಡುವುದಕ್ಕಿಂತ ಮೊದಲು ದುರ್ಯೋಧನನನ್ನು ನಿವಾರಿಸು.

ಯಾವತ್ ಫಲ್ಗುನಬಾಣಾನಾಂ ಗೋಚರಂ ನಾಧಿಗಚ್ಛತಿ ।
ಕೌರವಃ ಪಾರ್ಥಿವೋ ವೀರಸ್ತಾವದ್ ವಾರಯ ತಂ ದ್ರುತಮ್ ॥ ೬೪ ॥

ವೀರನಾದ ಕೌರವ ರಾಜನು ಅರ್ಜುನನ ಬಾಣಗಳ ವ್ಯಾಪ್ತಿಗೆ ಸಿಲುಕುವುದಕ್ಕಿಂತ ಮೊದಲೇ ಅವನನ್ನು ಶೀಘ್ರವಾಗಿ ಹಿಂದಿರುಗಿಸು.

ಯಾವತ್ ಪಾರ್ಥಶರೈರ್ಘೋರೈರ್ನಿರ್ಮುಕ್ತೋರಗಸನ್ನಿಭೈಃ ।
ನ ಭಸ್ಮೀಕ್ರಿಯತೇ ರಾಜಾ ತಾವದ್ ಯುದ್ಧಾನ್ನಿವಾರ್ಯತಾಮ್ ॥೬೫॥

ಪೊರೆಯನ್ನು ಕಳಚಿದ ಸರ್ಪಗಳಂತಿರುವ ಅರ್ಜುನನ ಘೋರವಾದ ಬಾಣಗಳಿಂದ ರಾಜನು ದಹಿಸಲ್ಪಡುವುದಕ್ಕಿಂತ ಮೊದಲೇ ಅವನನ್ನು ಯುದ್ಧದಿಂದ ನಿವಾರಿಸು.

ಅಯುಕ್ತಮಿವ ಪಶ್ಯಾಮಿ ತಿಷ್ಠತ್ಸ್ವಾಸು ಮಾನದ ।
ಸ್ವಯಂ ಯುದ್ಧಾಯ ಯದ್ ರಾಜಾ ಪಾರ್ಥಂ ಯಾತ್ಯಸಹಾಯವಾನ್ ॥

ಎಲೈ ಮಾನದನೇ, ನಾವು ರಣರಂಗದಲ್ಲಿರುವಾಗ ರಾಜನು ಯಾವ ಸಹಾಯವೂ ಇಲ್ಲದೆ ಸ್ವತಃ ಅರ್ಜುನನನ್ನು ಕುರಿತು ಯುದ್ಧಕ್ಕೆ ಹೋಗುವುದು ಅಯುಕ್ತವಾದುದೆಂದು ಭಾವಿಸುತ್ತೇನೆ.

ದುರ್ಲಭಂ ಜೀವಿತಂ ಮನ್ಯೇ ಕೌರವ್ಯಸ್ಯ ಕಿರೀಟಿನಾ ।
ಯುದ್ಧ್ಯಮಾನಸ್ಯ ಪಾರ್ಥೇನ ಶಾರ್ದೂಲೇನೇವ ಹಸ್ತಿನಃ ॥ ೬೭ ॥

ವ್ಯಾಘ್ರದ ಜೊತೆಯಲ್ಲಿ ಹೋರಾಡುವ ಗಜದ ಜೀವಿತದಂತೆ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವ ಕೌರವನಾದ ದುರ್ಯೋಧನನ ಜೀವಿತವು ದುರ್ಲಭವಾದುದೆಂದು ಭಾವಿಸುತ್ತೇನೆ (ಎಂದು ಹೇಳಿದರು).

ಮಾತುಲೇನೈವಮುಕ್ತಸ್ತು ದ್ರೌಣಿಃ ಶಸ್ತ್ರಭೃತಾಂ ವರಃ ।
ದುರ್ಯೋಧನಮಿದಂ ವಾಕ್ಯಂ ತ್ವರಿತಂ ಸಮಭಾಷತ ॥ ೬೮ ॥

ಹೀಗೆ ಸೋದರಮಾವನಿಂದ ಹೇಳಲ್ಪಟ್ಟ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಅಶ್ವತ್ಥಾಮರು ಶೀಘ್ರವಾಗಿ ದುರ್ಯೋಧನನನ್ನು ಕುರಿತು ಈ ಮಾತನ್ನಾಡಿದರು.

ಮಯಿ ಜೀವತಿ ಗಾಂಧಾರೇ ನ ಯುದ್ಧಂ ಗಂತುಮರ್ಹಸಿ ।
ಮಾಮನಾದೃತ್ಯ ಕೌರವ್ಯ ತವ ನಿತ್ಯಂ ಹಿತೈಷಿಣಮ್ ॥ ೬೯ ॥

ಎಲೈ ಗಾಂಧಾರಿಪುತ್ರನೇ, ನಾನು ಬದುಕಿರುವಾಗ ಯಾವಾಗಲೂ ನಿನ್ನ ಹಿತೈಷಿಯಾದ ನನ್ನನ್ನು ತಿರಸ್ಕರಿಸಿ ನೀನು ಯುದ್ಧಕ್ಕೆ ಹೋಗುವುದು ಹಿತವಲ್ಲ.

ನ ಹಿ ತೇ ಸಂಭ್ರಮಃ ಕಾರ್ಯಃ ಪಾರ್ಥಸ್ಯ ವಿಜಯಂ ಪ್ರತಿ ।
ಅಹಮಾವಾರಯಿಷ್ಯಾಮಿ ಪಾರ್ಥಂ ತಿಷ್ಠ ಸುಯೋಧನ ॥ ೭೦ ॥

ಅರ್ಜುನನನ್ನು ಗೆಲ್ಲುವ ವಿಷಯದಲ್ಲಿ ನೀನು ಗಾಬರಿಯಾಗಬೇಕಾಗಿಲ್ಲ. ನಾನು ಅರ್ಜುನನನ್ನು ತಡೆಯುವೆನು. ಸುಯೋಧನನೇ, ನೀನು ನಿಲ್ಲುವವನಾಗು.

ದುರ್ಯೋಧನಃ

ಆಚಾರ್ಯಃ ಪಾಂಡುಪುತ್ರಾನ್ ವೈ ಪುತ್ರವತ್ ಪರಿರಕ್ಷತಿ ।
ತ್ವಮಪ್ಯುಪೇಕ್ಷಾಂ ಕುರುಷೇ ತೇಷು ನಿತ್ಯಂ ದ್ವಿಜೋತ್ತಮ ॥ ೭೧ ॥

ದುರ್ಯೋಧನ– ದ್ರೋಣಾಚಾರ್ಯರು ಪಾಂಡುಪುತ್ರರನ್ನು ಮಕ್ಕಳಂತೆ ರಕ್ಷಿಸುತ್ತಾರೆ. ಎಲೈ ದ್ವಿಜಶ್ರೇಷ್ಠರೇ, ನೀವಾದರೋ ಯಾವಾಗಲೂ ಅವರನ್ನು ಉದಾಸೀನ ಮಾಡುತ್ತಿದ್ದೀರಿ.

ಮಮ ವಾ ಮಂದಭಾಗ್ಯತ್ವಾನ್ನಂದಸ್ತೇ ವಿಕ್ರಮೋ ಯುಧಿ ।
ಧರ್ಮರಾಜಪ್ರಿಯಾರ್ಥಂ ವಾ ದ್ರೌಪದ್ಯಾ ವಾ ನ ವಿದ್ಮ ತತ್ ॥ ೭೨ ॥

ಯುದ್ಧದಲ್ಲಿ ನಿಮ್ಮ ಪರಾಕ್ರಮವು ಮಂದವಾಗಿರುವುದು ನನ್ನ ದುರದೃಷ್ಟದಿಂದಲೋ ಅಥವಾ ಧರ್ಮರಾಜನ ಹಿತದ ಸಲುವಾಗಿಯೋ ಅಥವಾ ದ್ರೌಪದಿಯ ಹಿತದ ಸಲುವಾಗಿಯೋ ಎಂಬುದನ್ನು ತಿಳಿಯಲಾರೆವು.

ಧಿಗಸ್ತು ಮಮ ಲುಬ್ಧಸ್ಯ ಯತ್ಕೃತೇ ಸರ್ವಬಾಂಧವಾಃ ।
ಸುಖಾರ್ಹಾಃ ಪರಮಂ ದುಃಖಂ ಪ್ರಾಪ್ನುವಂತ್ಯಪರಾಜಿತಾಃ ॥ ೭೩ ॥

ಯಾವ ನನ್ನ ಸಲುವಾಗಿ ಸುಖಾರ್ಹರಾದ, ಅಪರಾಜಿತರಾದ ಎಲ್ಲ ಬಾಂಧವರೂ ಪರಮ ದುಃಖವನ್ನು ಹೊಂದುತ್ತಿದ್ದಾರೆಯೋ ಅಂತಹ ಲೋಭಿಯಾದ ನನಗೆ ಧಿಕ್ಕಾರವಿರಲಿ.

ಕೋ ಹಿ ಶಸ್ತ್ರಭೃತಾಂ ಮುಖ್ಯೋ ಮಹೇಶ್ವರಸಮೋ ಯುಧಿ ।
ಶತ್ರೂನನ್ಷಪಯೇಚ್ಚಕ್ತೋ ಯೋ ನ ಸ್ಯಾದ್ ಗೌತಮೀಸುತಃ ॥ ೭೪ ॥

ಗೌತಮೀಪುತ್ರರಲ್ಲದ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ, ಯುದ್ಧದಲ್ಲಿ ಮಹೇಶ್ವರನಿಗೆ ಸಮರಾದ, ಶತ್ರುಗಳನ್ನು ಸಂಹರಿಸಲು ಶಕ್ತನಾದ ಯಾವನು ತಾನೇ ಶತ್ರುಗಳನ್ನು ನಾಶಗೊಳಿಸದೆ ಇರುವನು?

ಅಶ್ವತ್ಥಾಮನ್ ಪ್ರಸೀದಸ್ವ ನಾಶಯೈತಾನ್ ಮಮಾಹಿತಾನ್ ।
ತವಾಸ್ತ್ರಗೋಚರೇ ಶಕ್ತಾಃ ಸ್ಥಾತುಂ ದೇವಾಪಿ ನಾನಘ ॥ ೭೫ ॥

ಅಶ್ವತ್ಥಾಮರೇ, ಪ್ರಸನ್ನರಾಗಿ. ನನ್ನ ಈ ಶತ್ರುಗಳನ್ನು ನಾಶಗೊಳಿಸಿ. ಎಲೈ ಅನಘರೇ, ನಿಮ್ಮ ಅಸ್ತ್ರಗಳ ವ್ಯಾಪ್ತಿಯಲ್ಲಿ ದೇವತೆಗಳೂ ನಿಲ್ಲಲಾರರು.

ಪಾಂಚಾಲಾನ್ ಸೋಮಕಾಂಶ್ಚೈವ ಜಹಿ ದ್ರೌಣೇ ಸಹಾನುಗಾನ್ ।
ವಯಂ ಶೇಷಾನ್ ಹನಿಷ್ಯಾಮಸ್ತ್ವಯೈವ ಪರಿರಕ್ಷಿತಾಃ ॥ ೭೬ ॥

ಎಲೈ ದ್ರೋಣಪುತ್ರರೇ, ಅನುಚರರಿಂದ ಸಹಿತರಾದ ಪಾಂಚಾಲರನ್ನು ಮತ್ತು ಸೋಮಕರನ್ನು ಕೊಲ್ಲಿ. ನಿಮ್ಮಿಂದ ಚೆನ್ನಾಗಿ ರಕ್ಷಿಸಲ್ಪಟ್ಟು ನಾವು ಉಳಿದವರನ್ನು ಕೊಲ್ಲುವೆವು.

ಏತೇ ಹಿ ಸೋಮಕಾ ಏಷ್ಯಾ ಪಾಂಚಾಲಾಶ್ಚ ಯಶಸ್ವಿನಃ ।
ಮಮ ಸೈನ್ಯೇಷು ಸಂರಬ್ಧಾ ವಿಚರಂತಿ ದವಾಗ್ನಿವತ್ ॥ ೭೭ ॥

ಎಲೈ ಬ್ರಾಹ್ಮಣರೇ, ಈ ಸೋಮಕರು ಮತ್ತು ಕೀರ್ತಿವಂತರಾದ ಪಾಂಚಾಲರು ಕೋಪಗೊಂಡು ನನ್ನ ಸೈನ್ಯದಲ್ಲಿ ದಾವಾಗ್ನಿಯಂತೆ ಸಂಚರಿಸುತ್ತಿದ್ದಾರೆ.

ತಾನ್ ವಾರಯ ಮಹಾಬಾಹೋ ಕೇಕಯಾಂಶ್ಚ ನರೋತ್ತಮ ।
ಪರಾಕುರ್ವಂತಿ ನಿಃಶೇಷಂ ರಕ್ಷ್ಯಮಾಣಾಃ ಕಿರೀಟಿನಾ ॥ ೭೮ ॥

ಎಲೈ ಮಹಾಬಾಹುಗಳೇ, ನರಶ್ರೇಷ್ಠರೇ, ಅವರನ್ನು ಮತ್ತು ಕೇಕಯರನ್ನು ನಿವಾರಿಸಿ. ಅರ್ಜುನನಿಂದ ರಕ್ಷಿಸಲ್ಪಡುವ ಅವರು ಯಾವ ಶೇಷವೂ ಉಳಿಯದಂತೆ ನಮ್ಮನ್ನು ನಿರಾಕರಿಸುತ್ತಿದ್ದಾರೆ.

ಆದೌ ವಾ ಯದಿ ವಾ ಪಶ್ಚಾತ್ತವೇದಂ ಕರ್ಮ ಮಾರಿಷ ।
ತ್ವಮುತ್ಪನ್ನೋ ಮಹಾಬಾಹೋ ಪಾಂಚಾಲಾನಾಂ ವಧಂ ಪ್ರತಿ ॥ ೭೯ ॥

ಎಲೈ ಪೂಜ್ಯರೇ, ಇದು ಮೊದಲಿನ್ನಾಗಲೀ ಅಥವಾ ಕೊನೆಯಲ್ಲಾಗಲೀ ನೀವೇ ಮಾಡಬೇಕಾದ ಕಾರ್ಯ. ಎಲೈ ಮಹಾಬಾಹುಗಳೇ, ನೀವು ಪಾಂಚಾಲರ ವಧೆಗಾಗಿಯೇ ಜನಿಸಿದ್ದೀರಿ.

ಕರಿಷ್ಯಸಿ ಜಗತ್ ಸರ್ವಮಪಾಂಚಾಲಂ ಕಿಲಾಚ್ಯುತ ।
ಏವಂ ಸಿದ್ಧಾಬ್ರುವನ್ ವಾಚೋ ಭವಿಷ್ಯತಿ ಚ ತತ್ತಥಾ ॥ ೮೦ ॥

ಎಲೈ ಪರಾಕ್ರಮದಿಂದ ಚ್ಯುತರಾಗದವರೇ, ನೀವು ಜಗತ್ತನ್ನು ಪಾಂಚಾಲ ರಹಿತವನ್ನಾಗಿ ಮಾಡುವಿರಿ. ಹೀಗೆ ಸಿದ್ಧಪುರುಷರು ಹೇಳಿದ್ದಾರೆ. ಅವರ ಮಾತು ಹಾಗೆಯೇ ನಡೆಯುವುದು.

ನ ತೇಽಸ್ತ್ರೋಚರೇ ಶಕ್ತಾಃ ಸ್ಥಾತುಂ ದೇವಾಃ ಸವಾಸವಾಃ ।
ಕಿಮು ಪಾರ್ಥಾಃ ಸಪಾಂಚಾಲಾಃ ಸತ್ಯಮೇತದ್ ವಚೋ ಮಮ ॥೮೧॥

ಇಂದ್ರನಿಂದ ಸಹಿತರಾದ ದೇವತೆಗಳೂ ಸಹ ನಿಮ್ಮ ಅಸ್ತ್ರದ ವ್ಯಾಪ್ತಿಯಲ್ಲಿ ನಿಲ್ಲಲು ಸಾಧ್ಯವಿಲ್ಲ. ಇನ್ನು ಪಾಂಡವ ಸಹಿತರಾದ ಪಾಂಚಾಲರು ಹೇಗೆ ನಿಂತಾರು? ಈ ನನ್ನ ಮಾತು ಸತ್ಯವಾದುದು.

ನ ತ್ವಾಂ ಸಮರ್ಥಾ ಸಂಗ್ರಾಮೇ ಪಾಂಡವಾಃ ಸಹ ಸೋಮಕೈಃ ।
ಬಲಾದ್ ಯೋಧಯಿತುಂ ವೀರ ಸತ್ಯಮೇತದ್ ಬ್ರವೀಮಿ ತೇ॥ ೮೨ ॥

ಎಲೈ ವೀರರೇ, ಯುದ್ಧದಲ್ಲಿ ಪಾಂಡವರೂ ಮತ್ತು ಸೋಮಕರೂ ಸೇರಿ ನಿಮ್ಮ ಜೊತೆಯಲ್ಲಿ ತಮ್ಮ ಬಲದಿಂದ ಯುದ್ಧವನ್ನು ಮಾಡಲು ಸಮರ್ಥರಲ್ಲ. ಇದನ್ನು ಸತ್ಯವಾಗಿ ನಿಮಗೆ ಹೇಳುತ್ತಿದ್ದೇನೆ.

ಗಚ್ಛ ಗಚ್ಛ ಮಹಾಬಾಹೋ ನ ನಃ ಕಾಲಾತ್ಯಯೋ ಭವೇತ್ ।
ಇಯಂ ಹಿ ದ್ರವತೇ ಸೇನಾ ಪಾರ್ಥಸಾಯಕಪೀಡಿತಾ ॥ ೮೩ ॥

ಮಹಾಬಾಹುಗಳೇ, ಹೊರಡಿ, ಹೊರಡಿ. ನಮಗೆ ಕಾಲವು ಮೀರುವುದು ಬೇಡ. ಅರ್ಜುನನ ಬಾಣಗಳಿಂದ ಪೀಡಿತವಾದ ನಮ್ಮ ಈ ಸೇನೆಯು ಓಡಿಹೋಗುತ್ತಿದೆ.

ಶಕ್ತೋ ಹ್ಯಸಿ ಮಹಾಬಾಹೋ ದಿವ್ಯೇನ ಸ್ವೇನ ತೇಜಸಾ ।
ನಿಗ್ರಹೇ ಪಾಂಡುಪುತ್ರಾಣಾಂ ಪಾಂಚಾಲಾನಾಂ ಚ ಮಾನದ ॥ ೮೪ ॥

ಮಹಾಬಾಹುಗಳೇ, ಮಾನದರೇ, ನಿಮ್ಮ ದಿವ್ಯವಾದ ತೇಜಸ್ಸಿನಿಂದ ಪಾಂಡು ಪುತ್ರರನ್ನು ಮತ್ತು ಪಾಂಚಾಲರನ್ನು ನಿಗ್ರಹಿಸಲು ಸಮರ್ಥರಾಗಿದ್ದೀರಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಚತ್ವಾರಿಂಶದಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತಾರನೆಯ ಅಧ್ಯಾಯ

ಅಶ್ವತ್ಥಾಮ ಮತ್ತು ಧೃಷ್ಟದ್ಯುಮ್ನರ ಯುದ್ಧ. ಅಶ್ವತ್ಥಾಮರ ಪರಾಕ್ರಮ.

ಸಂಜಯಃ

ದುರ್ಯೋಧನೇನೈವಮುಕ್ತೋ ದ್ರೌಣಿರಾಹವದುರ್ಮದಃ ।
ಪ್ರತ್ಯುವಾಚ ಮಹಾಬಾಹೋ ಯಥಾ ವದಸಿ ಕೌರವ ॥ ೧ ॥

ಪ್ರಿಯಾ ಹಿ ಪಾಂಡವಾ ನಿತ್ಯಂ ಮಮ ಚಾಪಿ ಪಿತುಶ್ಚ ಮೇ ।
ತಥೈವಾವಾಂ ಪ್ರಿಯೌ ತೇಷಾಂ ನ ತು ಯುದ್ಧೇ ಕುರೂದ್ವಹ ।
ಶಕ್ತಿತಸ್ತಾತ ಯುದ್ಧ್ಯಾಮಸ್ಸ್ಯಕ್ತ್ವಾ ಪ್ರಾಣಾನಭೀತವತ್ ॥ ೨ ॥

ಸಂಜಯ– ದುರ್ಯೋಧನನಿಂದ ಹೀಗೆ ಹೇಳಲ್ಪಟ್ಟ ಯುದ್ಧ ದುರ್ಮದರಾದ ಅಶ್ವತ್ಥಾಮರು ಅವನನ್ನು ಕುರಿತು- 'ಮಹಾಬಾಹುವಾದ ಕೌರವನೇ, ನೀನು ಹೇಳುವಂತೆ ನನಗೂ ಮತ್ತು ನನ್ನ ತಂದೆಗೂ ಪಾಂಡವರು ಯಾವಾಗಲೂ ಪ್ರಿಯರಾದವರು. ಹಾಗೆ ನಾವಿಬ್ಬರೂ ಸಹ ಅವರಿಗೂ ಪ್ರಿಯರಾದವರು. ಆದರೆ ಯುದ್ಧದಲ್ಲಿ ಅಲ್ಲ. ಎಲೈ ಪ್ರೀತಿಪಾತ್ರನೇ, ನಾವು ಪ್ರಾಣದ ಹಂಗನ್ನು ತೊರೆದು ನಿರ್ಭಯವಾಗಿ ನಮ್ಮ ಶಕ್ತಿ ಇದ್ದಷ್ಟು ಯುದ್ಧವನ್ನು ಮಾಡುತ್ತಿದ್ದೇವೆ.

ಅಹಂ ಕರ್ಣಶ್ಚ ಶಲ್ಯಶ್ಚ ಕೃಪೋ ಹಾರ್ದಿಕ್ಯ ಏವ ಚ ।
ನಿಮೇಷಾತ್ ಪಾಂಡವೀಂ ಸೇನಾಂ ಕ್ಷಪಯೇಮ ನೃಪೋತ್ತಮ ॥ ೩ ॥

ಎಲೈ ರಾಜಶ್ರೇಷ್ಠನೇ, ನಾನು, ಕರ್ಣ, ಶಲ್ಯ, ಕೃಪ ಮತ್ತು ಕೃತವರ್ಮರು ಒಂದು ನಿಮಿಷದಲ್ಲಿ ಪಾಂಡವರ ಸೇನೆಯನ್ನು ನಾಶಮಾಡಲು ಸಮರ್ಥರು.

ತೇ ಚಾಪಿ ಕೌರವೀಂ ಸೇನಾಂ ನಿಮೇಷಾರ್ಧಾತ್ ಕುರೂದ್ವಹ ।
ಕ್ಷಪಯೇಯುರ್ಮಹಾಬಾಹೋ ನ ಸ್ಯಾಮ ಯದಿ ಸಂಯುಗೇ ॥ ೪ ॥

ಎಲೈ ಮಹಾಬಾಹುವೇ, ಕುರುಶ್ರೇಷ್ಠನೇ, ಅವರೂ ಸಹ ರಣರಂಗದಲ್ಲಿ ನಾವಿಲ್ಲದಿದ್ದರೆ ಅರ್ಧನಿಮಿಷದಲ್ಲಿ ಕೌರವ ಸೇನೆಯನ್ನು ನಾಶಮಾಡಿಯಾರು.

ಯುದ್ಧ್ಯತಾಂ ಪಾಂಡವಾನ್ ಶಕ್ತ್ಯಾ ತೇಷಾಂ ಚಾಸ್ಮಾನ್ ಯುಯುತ್ಸತಾಮ್।
ತೇಜಸ್ತು ತೇಜ ಆಸಾದ್ಯ ಪ್ರಶಮಂ ಯಾತಿ ಭಾರತ ॥ ೫ ॥

ಎಲೈ ಭಾರತನೇ, ಪಾಂಡವರು ನಮ್ಮ ಜೊತೆಯಲ್ಲಿ ಮತ್ತು ನಾವು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ಒಂದು ತೇಜಸ್ಸು ಇನ್ನೊಂದು ತೇಜಸ್ಸನ್ನು ಸಮೀಪಿಸಿ ಶಾಂತವಾಗುತ್ತಿದೆ.

ಅಶಕ್ಯಾ ತರಸಾ ಜೇತುಂ ಪಾಂಡವಾನಾಮನೀಕಿನೀ ।
ಜೀವತ್ಸು ಪಾಂಡುಪುತ್ರೇಷು ತದ್ಧಿ ಸತ್ಯಂ ಬ್ರವೀಮಿ ತೇ ॥ ೬ ॥

ಪಾಂಡವರು ಬದುಕಿರುವಾಗ ಪಾಂಡವರ ಸೇನೆಯನ್ನು ನಮ್ಮ ಸಾಮರ್ಥ್ಯದಿಂದ ಗೆಲ್ಲುವುದು ಅಶಕ್ಯವಾದುದು. ಇದನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ.

ಆತ್ಮಾರ್ಥಂ ಯುದ್ಧ್ಯಮಾನಾಸ್ತೇ ಸಮರ್ಥಾಃ ಪಾಂಡುನಂದನಾಃ ।
ಕಿಮರ್ಥಂ ತವ ಸೈನ್ಯಾನಿ ನ ಹನಿಷ್ಯಂತಿ ಭಾರತ ॥ ೭ ॥

ಎಲೈ ಭಾರತನೇ, ತಮ್ಮ ಸಲುವಾಗಿ ಯುದ್ಧವನ್ನು ಮಾಡುತ್ತಿರುವ ಸಮರ್ಥರಾದ ಪಾಂಡುನಂದನರು ನಿನ್ನ ಸೈನ್ಯಗಳನ್ನು ಏಕೆ ನಾಶಮಾಡುವುದಿಲ್ಲ?

ತ್ವಂ ಹಿ ಲುಬ್ಧತಮೋ ರಾಜನ್ ನಿಕೃತಿಜ್ಞಶ್ಚ ಕೌರವ ।
ಸರ್ವಾತಿಶಂಕೀ ಮಾನೀ ಚ ತತೋಽಸ್ಮಾನತಿಶಂಕಸೇ ॥ ೮ ॥

ಎಲೈ ರಾಜನೇ, ಕೌರವನೇ, ನೀನು ಅತ್ಯಂತ ದುರಾಸೆಯುಳ್ಳವನು, ಮೋಸದ ಬುದ್ಧಿಯುಳ್ಳವನು, ಎಲ್ಲರನ್ನೂ ಶಂಕಿಸುವವನು. ಅಹಂಕಾರಭರಿತನು. ಆದ್ದರಿಂದ ನಮ್ಮನ್ನೂ ಶಂಕಿಸುತ್ತಿದ್ದೀಯೆ.

ಅಹಂ ತು ಯತ್ನಮಾಸ್ಥಾಯ ತ್ವದರ್ಥೇ ತ್ಯಕ್ತಜೀವಿತಃ ।
ಏಷ ಗಚ್ಛಾಮಿ ಸಂಗ್ರಾಮಂ ತ್ವತ್ಕೃತೇ ಕುರುನಂದನ ॥ ೯ ॥

ಎಲೈ ಕುರುನಂದನನೇ, ನಾನು ನಿನ್ನ ಸಲುವಾಗಿ ಪ್ರಾಣದ ಆಸೆಯನ್ನು ಬಿಟ್ಟು ಯತ್ನವನ್ನು ಆಶ್ರಯಿಸಿ ಈಗ ಸಂಗ್ರಾಮಕ್ಕೆ ಹೋಗುತ್ತಿದ್ದೇನೆ.

ಯೋತ್ಸ್ಯೇಽಹಂ ಶತ್ರುಭಿಃ ಸಾರ್ಧಂ ಜೇಷ್ಯಾಮಿ ಚ ವರಾನ್ ವರಾನ್।
ಪಾಂಚಲೈಃ ಸಹ ಯೋತ್ಸ್ಯಾಮಿ ಸೋಮಕೈಃ ಕೇಕಯೈಸ್ತಥಾ ।
ಪಾಂಡವೇಯೈಶ್ಚ ಸಂಗ್ರಾಮೇ ತ್ವತ್ಪ್ರಿಯಾರ್ಥಮರಿಂದಮ ॥ ೧೦ ॥

ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡಿ ಶ್ರೇಷ್ಠರಾದವರನ್ನು ಆರಿಸಿ, ಆರಿಸಿ ಗೆಲ್ಲುವೆನು. ಎಲೈ ಆರಿಂದಮನೇ, ನಾನು ಪಾಂಚಾಲರ ಜೊತೆಯಲ್ಲಿಯೂ, ಸೋಮಕರ ಜೊತೆಯಲ್ಲಿಯೂ, ಕೇಕಯರ ಜೊತೆಯಲ್ಲಿಯೂ ಹಾಗೂ ಪಾಂಡವರ ಜೊತೆಯಲ್ಲಿಯೂ ನಿನಗೆ ಪ್ರಿಯವನ್ನು ಮಾಡಲು ಯುದ್ಧವನ್ನು ಮಾಡುವೆನು.

ಅದ್ಯ ಮದ್ಬಾಣನಿರ್ದಗ್ಧಾಃ ಪಾಂಚಾಲಾಃ ಸೋಮಕಾಸ್ತಥಾ ।
ಸಿಂಹೇನೇವಾರ್ದಿತಾ ಗಾವೋ ವಿದ್ರವಿಷ್ಯಂತಿ ಸರ್ವತಃ ॥ ೧೧ ॥

ಈ ದಿನ ಪಾಂಚಾಲರು ಮತ್ತು ಸೋಮಕರು ನನ್ನ ಬಾಣಗಳಿಂದ ದಹಿಸಲ್ಪಟ್ಟು ಸಿಂಹದಿಂದ ಪೀಡಿತವಾದ ಗೋವುಗಳಂತೆ ಎಲ್ಲ ಕಡೆಗಳಲ್ಲಿಯೂ ಓಡಿಹೋಗುವರು.

ಅದ್ಯ ಧರ್ಮಸುತೋ ರಾಜಾ ದೃಷ್ಟ್ವಾ ಮಮ ಪರಾಕ್ರಮಮ್ ।
ಅಶ್ವತ್ಥಾಮಮಯಂ ಲೋಕಂ ಮಂಸ್ಯತೇ ಸಹ ಸೋಮಕೈಃ ॥ ೧೨ ॥

ಈ ದಿನ ರಾಜನಾದ ಯುಧಿಷ್ಠಿರನು ನನ್ನ ಪರಾಕ್ರಮವನ್ನು ನೋಡಿ ಸೋಮಕರ ಜೊತೆಯಲ್ಲಿ ಲೋಕವೆಲ್ಲವೂ ಅಶ್ವತ್ಥಾಮಮಯವಾಗಿದೆ ಎಂದು ತಿಳಿಯುವನು.

ಆಗಮಿಷ್ಯತಿ ನಿರ್ವೇದಂ ಧರ್ಮಪುತ್ರೋ ಯುಧಿಷ್ಠಿರಃ ।
ದೃಷ್ಟ್ವಾ ವಿನಿಹತಾನ್ ಸಂಖೇ ಪಾಂಚಾಲಾನ್ ಸೋಮಕೈಃ ಸಹ ॥೧೩॥

ಯುದ್ಧದಲ್ಲಿ ಸೋಮಕರು ಮತ್ತು ಪಾಂಚಾಲರು ಹತರಾದುದನ್ನು ನೋಡಿ ಧರ್ಮಪುತ್ರನಾದ ಯುಧಿಷ್ಠಿರನು ವೈರಾಗ್ಯವನ್ನು ಹೊಂದುವನು.

ಯೇ ಮಾಂ ಯುದ್ಧೇಽಭಿಯೋತ್ಸ್ಯಂತಿ ತಾನ್ ಹನಿಷ್ಯಾಮಿ ಭಾರತ ।
ನ ಹಿ ತೇ ವೀರ ಮುಚ್ಯೇರನ್ ಮದ್ಬಾಹ್ವಂತರಮಾಗತಾಃ ॥ ೧೪ ॥

ಎಲೈ ಭಾರತನೇ, ನನ್ನ ಜೊತೆಯಲ್ಲಿ ಯಾರು ಯುದ್ಧವನ್ನು ಮಾಡುವರೋ ಅವರನ್ನು ಕೊಲ್ಲುವೆನು. ಎಲೈ ವೀರನೇ, ನನ್ನ ಬಾಹುಗಳ ಮಧ್ಯದಲ್ಲಿ ಸಿಲುಕುವ ಯಾರೂ ನನ್ನಿಂದ ಬಿಡಿಸಿಕೊಳ್ಳಲಾರರು (ಎಂದು ಹೇಳಿದನು).

ಏವಮುಕ್ತ್ವಾ ಮಹಾಬಾಹುಃ ಪುತ್ರಂ ದುರ್ಯೋಧನಂ ತವ ।
ಅಭ್ಯವರ್ತತ ಯುದ್ಧಾಯ ದ್ರಾವಯನ್ ಸರ್ವಧನ್ವಿನಃ ।
ಚಿಕೀರ್ಷುಸ್ತವ ಪುತ್ರಾಣಾಂ ಪ್ರಿಯಂ ಪ್ರಾಣಭೃತಾಂ ವರಃ ॥ ೧೫ ॥

ಮಹಾಬಾಹುವಾದ ಅಶ್ವತ್ಥಾಮರು ನಿನ್ನ ಪುತ್ರನಾದ ದುರ್ಯೋಧನನನ್ನು ಕುರಿತು ಹೀಗೆ ಹೇಳಿ ಪ್ರಾಣವನ್ನು ಧರಿಸಿದವರಲ್ಲಿ ಶ್ರೇಷ್ಠರಾದ ಅವರು ನಿನ್ನ ಪುತ್ರನಿಗೆ ಪ್ರಿಯವನ್ನುಂಟು ಮಾಡಲು ಬಯಸಿ ಎಲ್ಲ ಧನುರ್ಧಾರಿಗಳನ್ನು ಓಡಿಸುತ್ತಾ ಯುದ್ಧಕ್ಕೆ ಹೊರಟರು.

ತತೋಽಬ್ರವೀತ್ ಸ ಕೈಕೇಯಾನ್ ಪಾಂಚಾಲಾನ್ ಗೌತಮೀಸುತಃ ।
ಪ್ರಹರಧ್ವಮಿತಃ ಸರ್ವೇ ಮಮ ಗಾತ್ರೇ ಮಹಾರಥಾಃ ।
ಸ್ಥಿರೀಭೂತಾಶ್ಚ ಯುದ್ಧ್ವಂ ದರ್ಶಯಂತೋಽಸ್ತ್ರಲಾಘವಮ್ ॥ ೧೬ ॥

ಆಗ ಗೌತಮೀಪುತ್ರರಾದ ಅವರು ಕೇಕಯರನ್ನೂ ಮತ್ತು ಪಾಂಚಾಲರನ್ನೂ ಕುರಿತು ಮಹಾರಥರಾದ ನೀವೆಲ್ಲರೂ ನನ್ನ ಶರೀರಕ್ಕೇ ಹೊಡೆಯಿರಿ. ನಿಮ್ಮ ಅಸ್ತ್ರಕೌಶಲಗಳನ್ನು ತೋರಿಸುತ್ತಾ ಸ್ಥಿರವಾಗಿ ನಿಂತು ಯುದ್ಧವನ್ನು ಮಾಡಿ ಎಂದು ಹೇಳಿದರು.

ಏವಮುಕ್ತಾಸ್ತು ತೇ ಸರ್ವೇ ಶಸ್ತ್ರವೃಷ್ಟಿಮಪಾತಯನ್ ।
ದ್ರೌಣಿಂ ಪ್ರತಿ ಮಹಾರಾಜ ಜಲಂ ಜಲಧರಾ ಇವ ॥ ೧೭ ॥

ಎಲೈ ಮಹಾರಾಜನೇ, ಹೀಗೆ ಹೇಳಲ್ಪಟ್ಟ ಅವರು ಮೋಡಗಳು ಮಳೆಯನ್ನು ಸುರಿಸುವಂತೆ ಅಶ್ವತ್ಥಾಮರ ಮೇಲೆ ಶಸ್ತ್ರಗಳ ಮಳೆಯನ್ನು ಸುರಿಸಿದರು.

ತಾನ್ ನಿಹತ್ಯ ಶರಾನ್ ದ್ರೌಣಿರ್ದಶ ವೀರಾನಪೋಥಯತ್ ।
ಪ್ರಮುಖೇ ಪಾಂಡುಪುತ್ರಾಣಾಂ ಧೃಷ್ಟದ್ಯುಮ್ನಸ್ಯ ಚಾಭಿಭೋ ॥ ೧೮ ॥

ಎಲೈ ಶತ್ರುಸಂಹಾರಕನೇ, ಅಶ್ವತ್ಥಾಮರು ಪಾಂಡವರ ಮತ್ತು ಧೃಷ್ಟದ್ಯುಮ್ನನ ಎದುರಿನಲ್ಲಿ ಅವರನ್ನು ಬಾಣಗಳಿಂದ ಹೊಡೆದು ಅವರ ಹತ್ತು ಜನ ವೀರರನ್ನು ನಾಶಗೊಳಿಸಿದರು.

ತೇ ಹನ್ಯಮಾನಾಃ ಸಮರೇ ಪಾಂಚಾಲಾಃ ಸೃಂಜಯಾಸ್ತಥಾ ।
ಪರಿತ್ಯಜ್ಯ ರಣೇ ದ್ರೌಣಿಂ ವ್ಯದ್ರವಂತ ದಿಶೋ ದಶ ॥ ೧೯ ॥

ಯುದ್ಧದಲ್ಲಿ ಅಶ್ವತ್ಥಾಮರಿಂದ ಹೊಡೆಯಲ್ಪಡುತ್ತಿದ್ದ ಪಾಂಚಾಲರೂ ಮತ್ತು ಸೃಂಜಯರೂ ರಣರಂಗವನ್ನು ಬಿಟ್ಟು ಹತ್ತುದಿಕ್ಕುಗಳಿಗೆ ಓಡಿಹೋದರು.

ತಾನ್ ದೃಷ್ಟ್ವಾ ದ್ರವತಃ ಶೂರಾನ್ ಪಾಂಚಲಾನ್ ಸಹಸೋಮಕಾನ್ ।
ಧೃಷ್ಟದ್ಯುಮ್ನೋ ಮಹಾರಾಜ ದ್ರೌಣಿಮಭ್ಯದ್ರವದ್ ಯುಧಿ ॥ ೨೦ ॥

ಎಲೈ ಮಹಾರಾಜನೇ, ಶೂರರಾದ ಪಾಂಚಾಲರು ಸೋಮಕರ ಜೊತೆಯಲ್ಲಿ ಓಡಿಹೋಗುತ್ತಿರುವುದನ್ನು ನೋಡಿ ರಣರಂಗದಲ್ಲಿ ಧೃಷ್ಟದ್ಯುಮ್ನನು ಅಶ್ವತ್ಥಾಮರ ಕಡೆಗೆ ಧಾವಿಸಿದನು.

ತತಃ ಕಾಂಚನಚಿತ್ರಾಣಾಂ ಸಜಲಾಂಬುದನಾದಿನಾಮ್ ।
ವೃತಃ ಶತೇನ ಶೂರಾಣಾಂ ರಥಾನಾಮನಿವರ್ತಿನಾಮ್ ॥ ೨೧ ॥

ಪುತ್ರಃ ಪಾಂಚಾಲರಾಜಸ್ಯ ಧೃಷ್ಟದ್ಯುಮ್ನೋ ಮಹಾರಥಃ ।
ದ್ರೌಣಿಮಿತ್ಯಬ್ರವೀದ್ವಾಕ್ಯಂ ದೃಷ್ಟ್ವಾ ಯೋಧಾನ್ನಿಪಾತಿತಾನ್ ॥ ೨೨ ॥

ಆಚಾರ್ಯಪುತ್ರ ದುರ್ಬುದ್ಧೇ ಕಿಮನೈರ್ನಿಹತೈಸ್ತವ ।
ಸಮಾಗಚ್ಛ ಮಯಾ ಸಾರ್ಧಂ ಯದಿ ಶೂರೋಽಸಿ ಸಂಯುಗೇ ।
ಅಹಂ ತ್ವಾಂ ನಿಹನಿಷ್ಯಾಮಿ ತಿಷ್ಠೇದಾನೀಂ ಮಮಾಗ್ರತಃ ॥ ೨೩ ॥

ಆಗ ಸುವರ್ಣಮಯವಾದ ವಿಚಿತ್ರವಾದ ಕವಚವನ್ನು ಧರಿಸಿದ, ಜಲಸಹಿತವಾದ ಮೇಘಗಳ ಘೋಷವನ್ನು ಹೊಂದಿದ, ಯುದ್ಧದಲ್ಲಿ ಹಿಮ್ಮೆಟ್ಟದಿರುವ, ಶೂರರಾದ ನೂರು ಮಹಾರಥರಿಂದ ಪರಿವೃತನಾಗಿ ಪಾಂಚಾಲರಾಜನ ಪುತ್ರನೂ, ಮಹಾರಥನೂ ಆದ ಧೃಷ್ಟದ್ಯುಮ್ನನು ತನ್ನ ಯೋಧರು ಕೆಳಗೆ ಬೀಳುತ್ತಿರುವುದನ್ನು ನೋಡಿ ಅಶ್ವತ್ಥಾಮರನ್ನು ಕುರಿತು- 'ಆಚಾರ್ಯಪುತ್ರನೇ, ದುರ್ಬುದ್ಧಿಯೇ, ಬೇರೆಯವರನ್ನು ಕೊಂದು ನಿನಗೆ ಏನು ಪ್ರಯೋಜನ? ನೀನು ಶೂರನಾಗಿದ್ದರೆ ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡು. ನನ್ನ ಎದುರಿಗೆ ನಿಲ್ಲು. ಈಗ ನಾನು ನಿನ್ನನ್ನು ಕೊಲ್ಲುವೆನು' ಎಂದು ಹೇಳಿದನು.

ತತಸ್ತಮಾಚಾರ್ಯಸುತಂ ಧೃಷ್ಟದ್ಯುಮ್ನಃ ಪ್ರತಾಪವಾನ್ ।
ಮರ್ಮಭಿದ್ಭಿಃ ಶರೈಸ್ತೀಕ್ಷ್ಣೈರ್ಜಘಾನ ಭರತರ್ಷಭ ॥ ೨೪ ॥

ಎಲೈ ಭರತಶ್ರೇಷ್ಠನೇ, ಆನಂತರ ಪ್ರತಾಪಶಾಲಿಯಾದ ಧೃಷ್ಟದ್ಯುಮ್ನನು ಆಚಾರ್ಯ ಪುತ್ರರಾದ ಅಶ್ವತ್ಥಾಮರನ್ನು ಮರ್ಮಭೇದಕವಾದ ತೀಕ್ಷ್ಣವಾದ ಬಾಣಗಳಿಂದ ಹೊಡೆದನು.

ತೇ ತು ಪಂಕ್ತೀಕೃತಾ ದ್ರೌಣಿಂ ಶರಾ ವಿವಿಶುರಾಶುಗಾಃ ।
ರುಗ್ಮಪುಂಖಾಃ ಪ್ರಸನ್ನಾಗ್ರಾಃ ಸರ್ವಕಾಯಾವದಾರಣಾಃ ।
ಮಧ್ಯರ್ಧಿನ ಇವೋದ್ದಾಮಾ ಭ್ರಮರಾಃ ಪುಷ್ಪಿತಂ ದ್ರುಮಮ್ ॥ ೨೫ ॥

ಸುವರ್ಣಮಯವಾದ ಪುಂಖವನ್ನು ಹೊಂದಿದ, ನಿಶಿತವಾದ ಅಗ್ರಭಾಗವನ್ನು ಹೊಂದಿದ, ಎಲ್ಲ ಶರೀರವನ್ನೂ ಭೇದಿಸುವ, ಪಂಕ್ತಿಯಲ್ಲಿ ಚಲಿಸುವ, ಶೀಘ್ರಗಾಮಿಗಳಾದ ಆ ಬಾಣಗಳು ಮಕರಂದವನ್ನು ಬಯಸುವ ಶ್ರೇಷ್ಠವಾದ ಭ್ರಮರಗಳು ಪುಷ್ಪ ಸಹಿತವಾದ ವೃಕ್ಷವನ್ನು ಪ್ರವೇಶಿಸುವಂತೆ ಅಶ್ವತ್ಥಾಮರ ಶರೀರವನ್ನು ಪ್ರವೇಶಿಸಿದವು.

ಸೋಽತಿವಿದ್ಧೋ ಭೃಶಂ ಕ್ರುದ್ಧಃ ಪದಾಕ್ರಾಂತ ಇವೋರಗಃ ।
ಮಾನೀ ದ್ರೌಣಿರಸಂಭ್ರಾಂತೋ ಬಾಣಪಾಣಿರಭಾಷತ ॥ ೨೬ ॥

ಧೃಷ್ಟದ್ಯುಮ್ನ ಸ್ಥಿರೋ ಭೂತ್ವಾ ಮುಹೂರ್ತಂ ಪ್ರತಿಪಾಲಯ ।
ಯಾವತ್ ತ್ವಾಂ ನಿಶಿತೈರ್ಬಾಣೈಃ ಪ್ರೇಷಯಾಮಿ ಯಮಕ್ಷಯಮ್ ॥೨೭॥

ಬಾಣಗಳಿಂದ ಗಾಢವಾಗಿ ಹೊಡೆಯಲ್ಪಟ್ಟ, ಆತ್ಮಾಭಿಮಾನವುಳ್ಳವರಾದ ಅಶ್ವತ್ಥಾಮರು ಕಾಲಿನಿಂದ ತುಳಿದ ಸರ್ಪದಂತೆ ಬಹಳ ಕೋಪಗೊಂಡು ಗಾಬರಿಗೊಳ್ಳದೆ ಕೈಯಲ್ಲಿ ಬಾಣವನ್ನು ಹಿಡಿದು- 'ಎಲೈ ಧೃಷ್ಟದ್ಯುಮ್ನನೇ, ಸ್ಥಿರವಾಗಿ ನಿಂತು ಒಂದು ಮುಹೂರ್ತದವರೆಗೆ ನೋಡು. ಅಷ್ಟರಲ್ಲಿ ನಾನು ನಿನ್ನನ್ನು ನನ್ನ ಬಾಣಗಳಿಂದ ಯಮಲೋಕಕ್ಕೆ ಕಳುಹಿಸುತ್ತೇನೆ' ಎಂದು ಹೇಳಿದರು.

ದ್ರೌಣೇರೇವಮಥಾಭಾಷ್ಯ ಪಾರ್ಷತಂ ಪರವೀರಹಾ ।
ಛಾದಯಾಮಾಸ ಬಾಣೌಘೈಃ ಸಮಂತಾಲ್ಲಘುಹಸ್ತವತ್ ॥ ೨೮ ॥

ಪರವೀರಘಾತಕರಾದ ಅಶ್ವತ್ಥಾಮರು ಧೃಷ್ಟದ್ಯುಮ್ನನನ್ನು ಕುರಿತು ಹೀಗೆ ಮಾತನಾಡಿ ಕ್ಷಿಪ್ರಹಸ್ತರಾಗಿ ತಮ್ಮ ಬಾಣಗಳ ಸಮೂಹದಿಂದ ಅವನನ್ನು ಎಲ್ಲ ಕಡೆಗಳಿಂದಲೂ ಮುಚ್ಚಿದರು.

ಸ ಛಾದ್ಯಮಾನಃ ಸಮರೇ ದ್ರೌಣಿನಾ ಯುದ್ಧದುರ್ಮದಃ ।
ದ್ರೌಣಿಂ ಪಾಂಚಾಲತನಯೋ ವಾಗ್ಭಿರಾತರ್ಜಯತ್ ತದಾ ॥ ೨೯ ॥

ಅಶ್ವತ್ಥಾಮರಿಂದ ಯುದ್ಧದಲ್ಲಿ ಹೀಗೆ ಆಚ್ಛಾದಿಸಲ್ಪಟ್ಟ ಯುದ್ಧದುರ್ಮದನಾದ, ಪಾಂಚಾಲಪುತ್ರನಾದ ಧೃಷ್ಟದ್ಯುಮ್ನನು ಅಶ್ವತ್ಥಾಮರನ್ನು ತನ್ನ ಮಾತುಗಳಿಂದ ಹೆದರಿಸಿದನು.

ಧೃಷ್ಟದ್ಯುಮ್ನಃ

ನ ಜಾನೀಷೇ ಪ್ರತಿಜ್ಞಾಂ ಮೇ ವಿಪ್ರೋತ್ತ್ರಿಂ ತಥೈವ ಚ ।
ದ್ರೋಣಂ ಹತ್ವಾ ಕಿಲ ಮಯಾ ಹಂತವ್ಯಸ್ತ್ವಂ ಸುದುರ್ಮತೇ ।
ತತಸ್ತ್ವಾಹಂ ನ ಹನ್ಮ್ಯದ್ಯ ದ್ರೋಣೇ ಜೀವತಿ ಸಂಯುಗೇ ॥ ೩೦ ॥

ಧೃಷ್ಟದ್ಯುಮ್ನ– ಎಲೈ ವಿಪ್ರನೇ, ಅತ್ಯಂತ ದುರ್ಬುದ್ಧಿಯುಳ್ಳವನೇ, ನೀನು ನನ್ನ ಉತ್ತ್ರಿಯನ್ನಾಗಲೀ ಅಥವಾ ಪ್ರತಿಜ್ಞೆಯನ್ನಾಗಲೀ ತಿಳಿದಿಲ್ಲ. ದ್ರೋಣರನ್ನು ಕೊಂದು ಅನಂತರ ನಾನು ನಿನ್ನನ್ನು ಕೊಲ್ಲಬೇಕಷ್ಟೆ? ಆದ್ದರಿಂದ ಈ ದಿನ ದ್ರೋಣರು ಬದುಕಿರುವಾಗ ನಿನ್ನನ್ನು ಕೊಲ್ಲುವುದಿಲ್ಲ.

ಇಮಾಂ ತು ರಜನೀಂ ಪ್ರಾಪ್ತಾಮಪ್ರಭಾತಾಂ ಸುದುರ್ಮತೇ ।
ನಿಹತ್ಯ ಪಿತರಂ ತೇಽದ್ಯ ತತಸ್ತ್ವಾಮಪಿ ಸಂಯುಗೇ ।
ನೇಷ್ಯಾಮಿ ಮೃತ್ಯುಲೋಕಾಯೇತ್ಯೇವಂ ಮೇ ಮನಸಿ ಸ್ಥಿತಮ್ ॥ ೩೧ ॥

ಎಲೈ ಅತ್ಯಂತ ದುರ್ಬುದ್ಧಿಯುಳ್ಳವನೇ, ಈ ರಾತ್ರಿಯು ಕಳೆದು ಬೆಳಗಾಗುವುದಕ್ಕಿಂತ ಮೊದಲೇ ನಿನ್ನ ತಂದೆಯನ್ನು ಕೊಂದು ಯುದ್ಧದಲ್ಲಿ ನಿನ್ನನ್ನೂ ಕೊಲ್ಲುತ್ತೇನೆ. (ನಿನ್ನನ್ನೂ ಕೊಂದು ಮೃತ್ಯುಲೋಕಕ್ಕೆ ಕಳುಹಿಸುವೆನೆಂದು ನನ್ನ ಅಭಿಪ್ರಾಯವಿದೆ).

ಯಸ್ತೇ ಪಾರ್ಥೇಷು ವಿದ್ವೇಷೋ ಯಾ ಭಕ್ತಿಃ ಕೌರವೇಷು ಚ ।
ತಾಂ ದರ್ಶಯ ಸ್ಥಿರೋ ಭೂತ್ವಾ ನ ಮೇ ಜೀವನ್ ವಿಮೋಕ್ಷ್ಯಸೇ ॥

ನಿನಗೆ ಪಾಂಡವರಲ್ಲಿ ಯಾವ ದ್ವೇಷವಿದೆಯೋ, ಕೌರವರಲ್ಲಿ ಯಾವ ಭಕ್ತಿ ಇದೆಯೋ ಅದನ್ನು ಯುದ್ಧದಲ್ಲಿ ಸ್ಥಿರವಾಗಿ ನಿಂತು ಪ್ರದರ್ಶಿಸು. ನೀನು ಈ ದಿನ ಬದುಕಿ ನನ್ನಿಂದ ಬಿಡಿಸಿಕೊಂಡು ಹೋಗುವುದಿಲ್ಲ.

ಯೋ ಹಿ ಬ್ರಾಹ್ಮಣ್ಯಮುತ್ಸೃಜ್ಯ ಕ್ಷತ್ರಧರ್ಮರತೋ ದ್ವಿಜಃ ।
ಸ ವಧ್ಯಃ ಸರ್ವಲೋಕಸ್ಯ ಯಥಾ ತ್ವಂ ಪುರುಷಾಧಮ ॥ ೩೩ ॥

ಎಲೈ ಪುರುಷಾಧಮನೇ, ಯಾವ ಬ್ರಾಹ್ಮಣನು ಬ್ರಾಹ್ಮಣ್ಯವನ್ನು ಬಿಟ್ಟು ಕ್ಷತ್ರಿಯ ಧರ್ಮದಲ್ಲಿ ನಿರತನಾಗಿರುತ್ತಾನೆಯೋ ಅವನು ನಿನ್ನಂತೆ ಸರ್ವಲೋಕಗಳಿಗೂ ವಧ್ಯನಾದವನು (ಎಂದು ಹೇಳಿದನು).

ಇತ್ಯುಕ್ತಃ ಪರುಷಂ ವಾಕ್ಯಂ ಪಾರ್ಷತೇನ ದ್ವಿಜೋತ್ತಮಃ ।
ಕ್ರೋಧಮಾಹಾರಯತ್ ತೀವ್ರಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೩೪ ॥

ಹೀಗೆ ಧೃಷ್ಟದ್ಯುಮ್ನನಿಂದ ಉಗ್ರವಾದ ಮಾತುಗಳನ್ನು ಕೇಳಿ ದ್ವಿಜಶ್ರೇಷ್ಠರಾದ ಅಶ್ವತ್ಥಾಮರು ತೀವ್ರವಾಗಿ ಕೋಪವನ್ನು ತಂದುಕೊಂಡು ಅವನನ್ನು ಕುರಿತು 'ನಿಲ್ಲು, ನಿಲ್ಲು' ಎಂದು ಹೇಳಿದರು.

ನಿರ್ದಹನ್ನಿವ ಚಕ್ಷುರ್ಭ್ಯಾಂ ಪಾರ್ಷತಂ ಸೋಽಭ್ಯವೈಕ್ಷತ ।
ಛಾದಯಾಮಾಸ ಚ ಶರೈರ್ನಿಃಶ್ವಸನ್ ಪನ್ನಗೋ ಯಥಾ ॥ ೩೫ ॥

ತಮ್ಮ ಕಣ್ಣುಗಳಿಂದ ಸುಟ್ಟುಬಿಡುವವರಂತೆ ಅವರು ಧೃಷ್ಟದ್ಯುಮ್ನನನ್ನು ನೋಡಿದರು. ಗಟ್ಟಿಯಾಗಿ ಉಸಿರಾಡುವ ಸರ್ಪದಂತಿದ್ದ ಅವರು ಧೃಷ್ಟದ್ಯುಮ್ನನನ್ನು ಬಾಣಗಳಿಂದ ಮುಚ್ಚಿಹಾಕಿದರು.

ಸ ಛಾದ್ಯಮಾನಃ ಸಮರೇ ದ್ರೌಣಿನಾ ರಾಜಸತ್ತಮ ।
ಸರ್ವಪಾಂಚಾಲಸೇನಾಭಿಃ ಸಂವೃತೋ ರಥಸತ್ತಮಃ ॥ ೩೬ ॥

ನಾಕಂಪತ ಮಹಾಬಾಹುಃ ಸ್ವಧೈರ್ಯಂ ಸಮುಪಾಶ್ರಿತಃ ।
ಸಾಯಕಾಂಶ್ಚೈವ ವಿವಿಧಾನಶ್ವತ್ಥಾಮ್ನಿ ಮುಮೋಚ ಹ ॥ ೩೭ ॥

ಎಲೈ ರಾಜಶ್ರೇಷ್ಠನೇ, ಯುದ್ಧದಲ್ಲಿ ಬಾಣಗಳಿಂದ ಹೀಗೆ ಆಚ್ಛಾದಿಸಲ್ಪಟ್ಟ ಸರ್ವ ಪಾಂಚಾಲಸೇನೆಯಿಂದ ಕೂಡಿದ, ರಥಶ್ರೇಷ್ಠನಾದ ಧೃಷ್ಟದ್ಯುಮ್ನನು ಹೆದರಲಿಲ್ಲ. ಮಹಾಬಾಹುವಾದ ಅವನು ತನ್ನ ಧೈರ್ಯವನ್ನು ಅವಲಂಬಿಸಿ ಅಶ್ವತ್ಥಾಮರ ಮೇಲೆ ಅನೇಕ ವಿಧವಾದ ಬಾಣಗಳನ್ನು ಪ್ರಯೋಗಿಸಿದನು.

ತೌ ಪುನಃ ಸನ್ಸ್ಯವರ್ತೇತಾಂ ಪ್ರಾಣದ್ಯೂತಪರೇ ರಣೇ ।
ನಿವಾರಯಂತೌ ಬಾಣೌಘೈಃ ಪರಸ್ಪರಮಮರ್ಷಿಣೌ ।
ಉತ್ಸೃಜಂತೌ ಮಹೇಷ್ವಾಸೌ ಶರವೃಷ್ಟೀಃ ಸಮಂತತಃ ॥ ೩೮ ॥

ಪ್ರಾಣದ್ಯೂತ ಉಳ್ಳ ಆ ಯುದ್ಧದಲ್ಲಿ ಮಹಾಧನುರ್ಧಾರಿಗಳಾದ ಅವರು ಪರಸ್ಪರವಾಗಿ ಕೋಪಗೊಂಡು ತಮ್ಮ ಬಾಣಗಳ ಸಮೂಹಗಳಿಂದ ಪರಸ್ಪರವಾಗಿ ಒಬ್ಬರನ್ನೊಬ್ಬರು ತಡೆಯುತ್ತಾ ಎಲ್ಲ ಕಡೆಗಳಲ್ಲಿಯೂ ಬಾಣಗಳ ಮಳೆಯನ್ನು ಸುರಿಸುತ್ತಾ ಪುನಃ ಒಬ್ಬರನ್ನೊಬ್ಬರು ಎದುರಿಸಿದರು.

ದ್ರೌಣಿಪಾರ್ಷತಯೋರ್ಯುದ್ಧಂ ಘೋರರೂಪಂ ಭಯಾನಕಮ್ ।
ದೃಷ್ಟ್ವಾ ಸಂಪೂಜಯಾಮಾಸುಃ ಸಿದ್ಧಚಾರಣವಾತಿಕಾಃ ॥ ೩೯ ॥

ಘೋರರೂಪವೂ, ಭಯಂಕರವೂ ಆದ ಅಶ್ವತ್ಥಾಮ-ಧೃಷ್ಟದ್ಯುಮ್ನರಿಬ್ಬರ ಯುದ್ಧವನ್ನು ನೋಡಿ ಸಿದ್ಧ-ಚಾರಣಾದಿ ಆಕಾಶ ಸಂಚಾರಿಗಳು ಅದನ್ನು ಪೂಜಿಸಿದರು.

ಶರೌಘೈಃ ಪೂರಯಂತೌ ತಾವಾಕಾಶಂ ಪ್ರದಿಶಸ್ತಥಾ ।
ಅಲಕ್ಷ್ಯೌ ಸಮಯುದ್ಧ್ಯೇತಾಂ ಮಹತ್ ಕೃತ್ವಾ ಶರೈಸ್ತಮಃ ॥ ೪೦ ॥

ಅವರಿಬ್ಬರೂ ಆಕಾಶವನ್ನೂ ಮತ್ತು ದಿಕ್ಕುಗಳನ್ನೂ ಬಾಣಗಳ ಸಮೂಹದಿಂದ ತೊಂಬತ್ತು ಬಾಣಗಳಿಂದ ದೊಡ್ಡ ಕತ್ತಲೆಯನ್ನು ಸೃಷ್ಟಿಸಿ ಒಬ್ಬರಿಗೊಬ್ಬರು ಕಾಣದೆ ಯುದ್ಧವನ್ನು ಮಾಡಿದರು.

ನೃತ್ಯಮಾನಾವಿವ ರಣೇ ಮಂಡಲೀಕೃತಕಾರ್ಮುಕೌ ।
ಪರಸ್ಪರವಧೇ ಯತ್ತೌ ಪರಸ್ಪರಜಯೈಷಿಣೌ ॥ ೪೧ ॥

ಅಯುದ್ಧ್ಯೇತಾಂ ಮಹಾಬಾಹೂ ಚಿತ್ರಂ ಲಘು ಚ ಸುಷ್ಠು ಚ ।
ಸಂಪೂಜ್ಯಮಾನೌ ಸಮರೇ ಯೋಧಮುಖ್ಯೈಃ ಸಹಸ್ರಶಃ ॥ ೪೨ ॥

ಮಹಾಬಾಹುಗಳಾದ ಅವರಿಬ್ಬರೂ ರಣರಂಗದಲ್ಲಿ ನರ್ತನವನ್ನು ಮಾಡುವವರಂತೆ ಪರಸ್ಪರ ವಧೆಯನ್ನು ಮಾಡುವುದರಲ್ಲಿ ಪ್ರಯತ್ನಶೀಲರಾಗಿ, ಪರಸ್ಪರ ಜಯವನ್ನು ಬಯಸಿ ತಮ್ಮ ಧನುಸ್ಸುಗಳನ್ನು ಮಂಡಲಾಕಾರವಾಗಿ ಮಾಡಿ ವಿಚಿತ್ರವಾಗಿ,

ಶೀಘ್ರವಾಗಿ ಮತ್ತು ಚೆನ್ನಾಗಿ ಯುದ್ಧವನ್ನು ಮಾಡಿದರು. ಸಹಸ್ರಾರು ಯೋಧ ಮುಖ್ಯರಿಂದ ಪೂಜಿಸಲ್ಪಟ್ಟವರಾಗಿ ಅವರು ಯುದ್ಧವನ್ನು ಮಾಡಿದರು.

ತೌ ಪ್ರಯುದ್ಧೌ ರಣೇ ದೃಷ್ಟ್ವಾ ವನೇ ವನ್ಯೌ ಗಜಾವಿವ ।
ಉಭಯೋಃ ಸೇನಯೋರ್ಹರ್ಷಸ್ತುಮುಲಃ ಸಮಪದ್ಯತ ॥ ೪೩ ॥

ಕಾಡಿನಲ್ಲಿ ವನಗಜಗಳಂತೆ ರಣರಂಗದಲ್ಲಿ ಅವರಿಬ್ಬರೂ ಯುದ್ಧಮಾಡುವುದನ್ನು ನೋಡಿ ಎರಡು ಸೈನ್ಯಗಳಿಗೂ ತೀವ್ರವಾದ ಹರ್ಷವುಂಟಾಯಿತು.

ಸಿಂಹನಾದರವಾಶ್ಚಾಸನ್ ದಧ್ಮುಃ ಶಂಖಾಂಶ್ಚ ಮಾರಿಷ ।
ವಾದಿತ್ರಾಣ್ಯಭ್ಯವಾದ್ಯಂತ ಶತಶೋಽಥ ಸಹಸ್ರಶಃ ॥ ೪೪ ॥

ಎಲೈ ಶ್ರೇಷ್ಠನೇ, ಯೋಧರು ಸಿಂಹನಾದವನ್ನು ಮಾಡಿದರು. ಶಂಖಗಳನ್ನು ಊದಿದರು. ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ರಣವಾದ್ಯಗಳನ್ನು ಮೊಳಗಿಸಿದರು.

ತಸ್ಮಿಂಸ್ತು ತುಮುಲೇ ಯುದ್ಧೇ ಭೀರೂಣಾಂ ಭಯವರ್ಧನೇ ।
ಮುಹೂರ್ತಮಿವ ತದ್ ಯುದ್ಧಂ ಸಮರೂಪಂ ತದಾಭವತ್ ॥ ೪೫ ॥

ಹೇಡಿಗಳಿಗೆ ಭಯವನ್ನುಂಟು ಮಾಡುವ ಆ ಯುದ್ಧವು ಒಂದು ಮುಹೂರ್ತದ ಕಾಲ ಸಮವಾಗಿ ಕಂಡುಬಂದಿತು.

ತತೋ ದ್ರೌಣಿರ್ಮಹಾರಾಜ ಪಾರ್ಷತಸ್ಯ ಮಹಾತ್ಮನಃ ।
ಧ್ವಜಂ ಧನುಸ್ತಥಾ ಛತ್ರಮುಭೌ ಚ ಪಾರ್ಷ್ಣಿಸಾರಥೀ ।
ಸೂತಮಶ್ವಾಂಶ್ಚ ಚತುರೋ ನಿಹತ್ಯಾಭ್ಯದ್ರವದ್ ರಣೇ ॥ ೪೬ ॥

ಎಲೈ ಮಹಾರಾಜನೇ, ಆನಂತರ ಅಶ್ವತ್ಥಾಮರು ಮಹಾತ್ಮನಾದ ಧೃಷ್ಟದ್ಯುಮ್ನನ ಧ್ವಜವನ್ನೂ, ಧನುಸ್ಸನ್ನೂ ಮತ್ತು ಛತ್ರವನ್ನೂ ಹಾಗೂ ಇಬ್ಬರು ಪಾರ್ಷ್ಣಿಸಾರಥಿಗಳನ್ನೂ, ಸೂತನನ್ನೂ, ನಾಲ್ಕು ಅಶ್ವಗಳನ್ನೂ ಕೊಂದು ರಣರಂಗದಲ್ಲಿ ಅವನ ಕಡೆಗೆ ಧಾವಿಸಿದರು.

ಪಾಂಚಾಲಾಂಶ್ಚೈವ ತಾನ್ ಸರ್ವಾನ್ ಬಾಣೈಃ ಸನ್ನತಪರ್ವಭಿಃ ।
ವ್ಯದ್ರಾವಯದಮೇಯಾತ್ಮಾ ಶತಶೋಽಥ ಸಹಸ್ರಶಃ ॥ ೪೭ ॥

ಅತ್ಯಂತ ಸಾಮರ್ಥ್ಯವುಳ್ಳ ಅವರು ಬಾಗಿದ ತುದಿಯುಳ್ಳ ಬಾಣಗಳಿಂದ ಆ ಎಲ್ಲ ಪಾಂಚಾಲರನ್ನು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಓಡಿಸಿದರು.

ತತಃ ಪ್ರವಿವ್ಯಥೇ ಸೇನಾ ಪಾಂಡವೀ ಭರತರ್ಷಭ ।
ದೃಷ್ಟ್ವಾ ದ್ರೌಣೇರ್ಮಹತ್ಕರ್ಮ ವಾಸವಸ್ಯೇವ ಸಂಯುಗೇ ॥ ೪೮ ॥

ಎಲೈ ಭರತಶ್ರೇಷ್ಠನೇ, ಆಗ ಯುದ್ಧದಲ್ಲಿ ಇಂದ್ರನ ಕರ್ಮಕ್ಕೆ ಸಮಾನವಾದ ಅಶ್ವತ್ಥಾಮರ ಮಹಾಕರ್ಮವನ್ನು ನೋಡಿ ಪಾಂಡವರ ಸೇನೆಯು ಬಹಳ ವ್ಯಥೆಗೊಂಡಿತು.

ಶತೇನ ಚ ಶತಂ ಹತ್ವಾ ಪಾಂಚಾಲಾನಾಂ ಮಹಾರಥಃ ।
ತ್ರಿಭಿಶ್ಚ ನಿಶಿತೈರ್ಬಾಣೈರ್ಹತ್ವಾ ತ್ರೀನ್ ವೈ ಮಹಾರಥಾನ್ ॥ ೪೯ ॥

ದ್ರೌಣಿರ್ದ್ರುಪದಪುತ್ರಸ್ಯ ಫಲ್ಗುನಸ್ಯ ಚ ಪಶ್ಯತಃ ।
ನಾಶಯಾಮಾಸ ಪಾಂಚಾಲಾನ್ ಭೂಯಿಷ್ಠಂ ಯೇ ವ್ಯವಸ್ಥಿತಾಃ ॥೫೦॥

ಮಹಾರಥರಾದ ಅಶ್ವತ್ಥಾಮರು ನೂರು ಬಾಣಗಳಿಂದ ಪಾಂಚಾಲರ ನೂರು ಯೋಧರನ್ನು ಕೊಂದು ಮೂರು ತೀಕ್ಷ್ಣವಾದ ಬಾಣಗಳಿಂದ ಮೂರು ಮಹಾರಥರನ್ನು ಕೊಂದರು. ಧೃಷ್ಟದ್ಯುಮ್ನ ಮತ್ತು ಅರ್ಜುನನು ನೋಡುತ್ತಿರುವಂತೆಯೇ ರಣರಂಗದಲ್ಲಿ ನಿಂತ ಹೆಚ್ಚಿನ ಸಂಖ್ಯೆಯ ಪಾಂಚಾಲರನ್ನು ನಾಶಗೊಳಿಸಿದರು.

ತೇ ವಧ್ಯಮಾನಾಃ ಪಾಂಚಾಲಾಃ ಸಮರೇ ಸಹ ಸೃಂಜಯೈಃ ।
ಅಗಚ್ಚನ್ ದ್ರೌಣಿಮುತ್ಸೃಜ್ಯ ವಿಪ್ರಕೀರ್ಣರಥಧ್ವಜಾಃ ॥ ೫೧ ॥

ರಣರಂಗದಲ್ಲಿ ಅಶ್ವತ್ಥಾಮರಿಂದ ಹೊಡೆಯಲ್ಪಟ್ಟ ಪಾಂಚಾಲರೂ ಮತ್ತು ಸೃಂಜಯರೂ ಅಶ್ವತ್ಥಾಮರನ್ನು ಬಿಟ್ಟು ತಮ್ಮ ರಥಗಳನ್ನೂ, ಧ್ವಜಗಳನ್ನೂ ಬಿಟ್ಟು ಓಡಿಹೋದರು.

ಸ ಜಿತ್ವಾ ಸಮರೇ ಶತ್ರೂನ್ ದ್ರೌಣಪುತ್ರೋ ಮಹಾರಥಃ ।
ನನಾದ ಸುಮಹಾನಾದಂ ತಪಾಂತೇ ಜಲದೋ ಯಥಾ ॥ ೫೨ ॥

ಮಹಾರಥರಾದ ದ್ರೋಣಪುತ್ರರಾದ ಅಶ್ವತ್ಥಾಮರು ಯುದ್ಧದಲ್ಲಿ ಶತ್ರುಗಳನ್ನು ಗೆದ್ದು ಬೇಸಿಗೆಯು ಕಳೆದ ಮೇಲೆ ಮಳೆಗಾಲದಲ್ಲಿ ಮೇಘಗಳು ಗರ್ಜಿಸುವಂತೆ ಮಹಾನಾದವನ್ನು ಮಾಡಿದರು.

ಸ ನಿಹತ್ಯ ಬಹೂನ್ ಶೂರಾನಶ್ವತ್ಥಾಮಾ ವ್ಯರೋಚತ ।
ಯುಗಾಂತೇ ಸರ್ವಭೂತಾನಿ ಭಸ್ಮ ಕೃತ್ವೇವ ಪಾವಕಃ ॥ ೫೩ ॥

ಅಶ್ವತ್ಥಾಮರು ಅನೇಕ ಶೂರರನ್ನು ಕೊಂದು ಯುಗಾಂತದಲ್ಲಿ ಸರ್ವಪ್ರಾಣಿಗಳನ್ನೂ ಭಸ್ಮ ಮಾಡುವ ಅಗ್ನಿಯಂತೆ ಶೋಭಿಸಿದರು.

ಸಂಪೂಜ್ಯಮಾನೋ ಯುಧಿ ಕೌರವೇಯೈ-
ರ್ವಿಜಿತ್ಯ ಸಂಖೇ೭ರಿಗಣಾನ್ ಸಹಸ್ರಶಃ ।
ವ್ಯರೋಚತ ದ್ರೋಣಸುತಃ ಪ್ರತಾಪವಾನ್
ಯಥಾ ಸುರೇಂದ್ರೋ೭ರಿಗಣಾನ್ನಿಹತ್ಯ ॥ ೫೪ ॥

ಯುದ್ಧದಲ್ಲಿ ಶತ್ರುಸಮೂಹವನ್ನು ಸಹಸ್ರ ಸಂಖ್ಯೆಯಲ್ಲಿ ಗೆದ್ದು ಕೌರವರಿಂದ ಸಂಪೂಜ್ಯಮಾನರಾಗಿ, ಪ್ರತಾಪಶಾಲಿಗಳಾದ ದ್ರೋಣಪುತ್ರರಾದ ಅಶ್ವತ್ಥಾಮರು ಶತ್ರುಗಳನ್ನು ಸಂಹಾರ ಮಾಡಿದ ಸುರೇಂದ್ರನಂತೆ ಶೋಭಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಟ್‌ಚತ್ವಾರಿಂಶದಧಿಕಶತತಮೋ೭ಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ತ್ರಯೋದಶೋ೭ಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ತಾನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೇಳನೆಯ ಅಧ್ಯಾಯ

ಸಂಕುಲಯುದ್ಧ

ಸಂಜಯಃ

ತತೋ ಯುಧಿಷ್ಠಿರಶ್ಚೈವ ಭೀಮಸೇನಶ್ಚ ಪಾಂಡವಃ ।
ದ್ರೋಣಪುತ್ರಂ ಮಹಾರಾಜ ಸಮಂತಾತ್ ಪರ್ಯವಾರಯನ್ ॥ ೧ ॥

ಸಂಜಯ– ಎಲೈ ಮಹಾರಾಜನೇ, ಆಗ ಪಾಂಡುಪುತ್ರರಾದ ಯುಧಿಷ್ಠಿರ ಮತ್ತು ಭೀಮಸೇನರು ದ್ರೋಣಪುತ್ರರಾದ ಅಶ್ವತ್ಥಾಮರನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ತತೋ ದುರ್ಯೋಧನೋ ರಾಜಾ ಭಾರದ್ವಾಜೇನ ಸಂವೃತಃ ।
ಅಭ್ಯಯಾತ್ ಪಾಂಡವಾನ್ ಸಂಖೇ ತತೋ ಯುದ್ಧಮವರ್ತತ ।
ಘೋರರೂಪಂ ಮಹಾರಾಜ ಭೀರೂಣಾಂ ಭಯವರ್ಧನಮ್ ॥ ೨ ॥

ಆಗ ರಾಜನಾದ ದುರ್ಯೋಧನನು ದ್ರೋಣರಿಂದ ಕೂಡಿ ಪಾಂಡವರ ಮೇಲೆ ಎರಗಿದನು. ಎಲೈ ಮಹಾರಾಜನೇ, ಆಗ ಭೀರುಗಳಿಗೆ ಭಯಜನಕವಾದ ಘೋರವಾದ ಯುದ್ಧವು ನಡೆಯಿತು.

ಅಂಬಷ್ಠಾನ್ ಮಾಳವಾನ್ ವಂಗಾನ್ ಶಿಬೀಂಸ್ತ್ರಿಗರ್ತಕಾನಪಿ ।
ಪ್ರಾಹಿಣೋನ್ಮೃತ್ಯುಲೋಕಾಯ ಗಣಾನ್ ಕ್ರುದ್ಧೋ ಯುಧಿಷ್ಠಿರಃ ॥ ೩ ॥

ಕೋಪಗೊಂಡ ಯುಧಿಷ್ಠಿರನು ಅಂಬಷ್ಠರನ್ನೂ, ಮಾಳವರನ್ನೂ, ವಂಗರನ್ನೂ, ಶಿಬಿಗಳನ್ನೂ, ತ್ರಿಗರ್ತರನ್ನೂ ಸಮೂಹಗಳಲ್ಲಿ ಮೃತ್ಯುಲೋಕಕ್ಕೆ ಕಳುಹಿಸಿದನು.

ಅಭೀಷಾಹಾನ್ ಶೂರಸೇನಾನ್ ಕ್ಷತ್ರಿಯಾನ್ ಯುದ್ಧದುರ್ಮದಾನ್ ।
ನಿಕೃತ್ಯ ಪೃಥಿವೀಂ ಚಕ್ರೇ ಭೀಮಃ ಶೋಣಿತಕರ್ದಮಾಮ್ ॥ ೪ ॥

ಭೀಮಸೇನನು ಅಭೀಷಾಹರನ್ನೂ, ಶೂರಸೇನರನ್ನೂ, ಯುದ್ಧದುರ್ಮದರಾದ ಕ್ಷತ್ರಿಯರನ್ನೂ ಕೊಂದು ಭೂಮಿಯನ್ನು ರಕ್ತದ ಕೆಸರಿನಿಂದ ಕೂಡಿರುವಂತೆ ಮಾಡಿದನು.

ಯೌಧೇಯಾರಟ್ಟರಾಜನ್ಯಾನ್ ಮದ್ರಕಾಂಶ್ಚ ಗಣಾನ್ ಯುಧಿ ।
ಪ್ರಾಹಿಣೋನ್ಮೃತ್ಯುಲೋಕಾಯ ಕಿರೀಟೀ ನಿಶಿತೈಃ ಶರೈಃ ॥ ೫ ॥

ಅರ್ಜುನನು ತನ್ನ ತೀಕ್ಷ್ಣವಾದ ಬಾಣಗಳಿಂದ ಯೌಧೇಯ ಮತ್ತು ಆರಟ್ಟ ಕ್ಷತ್ರಿಯರನ್ನು, ಮದ್ರಕರ ಗಣಗಳನ್ನು ಯುದ್ಧದಲ್ಲಿ ಮೃತ್ಯುಲೋಕಕ್ಕೆ ಕಳುಹಿಸಿದನು.

ಪ್ರಗಾಢಮಂಜೋಗತಿಭಿರ್ನಾರಾಚೈರಭಿಪೀಡಿತಾಃ ।
ನಿಪೇತುರ್ದ್ವಿರದಾ ಭೂಮೌ ದ್ವಿಶೃಂಗಾ ಇವ ಪರ್ವತಾಃ ॥ ೬ ॥

ನೇರವಾಗಿ ಸಾಗುವ ನಾರಾಚಗಳಿಂದ ಗಾಢವಾಗಿ ಹೊಡೆಯಲ್ಪಟ್ಟ ಗಜಗಳು ಎರಡು ಶಿಖರಗಳುಳ್ಳ ಪರ್ವತಗಳಂತೆ ಭೂಮಿಯಲ್ಲಿ ಬಿದ್ದವು.

ನಿಕೃತ್ತೈರ್ಹಸ್ತಿಹಸ್ತೈಶ್ಚ ಲುಠಮಾನೈಸ್ತತಸ್ತತಃ ।
ರರಾಜ ವಸುಧಾ ಕೀರ್ಣಾ ವಿಸರ್ಪದ್ಭಿರಿವೋರಗೈಃ ॥ ೭ ॥

ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದು ಹೊರಳಾಡುವ ಗಜಗಳ ಸೊಂಡಿಲುಗಳಿಂದ ಹರಡಲ್ಪಟ್ಟ ಭೂಮಿಯು ಚಲಿಸುವ ಸರ್ಪಗಳಿಂದ ಹರಡಲ್ಪಟ್ಟ ಭೂಮಿಯಂತೆ ಶೋಭಿಸಿತು.

ಕ್ಷಿಪ್ತೈಃ ಕನಕಚಿತ್ರೈಶ್ಚ ನೃಪಚರ್ಮಭಿಃ ಕ್ಷಿತಿರ್ಬಭೌ ।
ದ್ಯೌರಿವಾದಿತ್ಯಚಂದ್ರಾದ್ಯೈರ್ಗ್ರಹೈಃ ಕೀರ್ಣಾ ಯುಗಕ್ಷಯೇ ॥ ೮ ॥

ಎಸೆಯಲ್ಪಟ್ಟ ಸುವರ್ಣಚಿತ್ರವಾದ ರಾಜರ ಛತ್ರಗಳಿಂದ ಕೂಡಿದ ಭೂಮಿಯು ಯುಗಕ್ಷಯದಲ್ಲಿ ಆದಿತ್ಯ-ಚಂದ್ರಾದಿ ಗ್ರಹಗಳಿಂದ ಕೂಡಿದ ಆಕಾಶದಂತೆ ಶೋಭಿಸಿತು.

ಹತ ಪ್ರಹರತಾಭೀತಾ ವಿದ್ಧ್ಯತ ವ್ಯವಕೃಂತತ ।
ಇತ್ಯಾಸೀತ್ ತುಮುಲಃ ಶಬ್ದಃ ಶೋಣಾಶ್ವಸ್ಯ ರಥಂ ಪ್ರತಿ ॥ ೯ ॥

ಶೋಣಾಶ್ವರಾದ ದ್ರೋಣರ ರಥದ ಬಳಿಯಲ್ಲಿ ಕೊಲ್ಲಿ ನಿರ್ಭಯವಾಗಿ ಹೊಡೆಯಿರಿ, ಗಾಯಗೊಳಿಸಿ, ಕತ್ತರಿಸಿ ಎಂಬ ತೀವ್ರವಾದ ಶಬ್ದಗಳು ಕೇಳಿಬಂದವು.

ದ್ರೋಣಸ್ತು ಪರಮಕ್ರುದ್ಧೋ ವಾಯವ್ಯಾಸ್ತ್ರೇಣ ಸಂಯುಗೇ ।
ವ್ಯಧಮತ್ ತಾನ್ ಯಥಾ ವಾಯುರ್ಮೇಘಾನಿವ ದುರತ್ಯಯಃ ॥೧೦॥

ಪರಮಕ್ರುದ್ಧರಾದ ದ್ರೋಣರು ತಡೆಯಲು ಅಸಾಧ್ಯವಾದ ಬಿರುಗಾಳಿಯು ಮೋಡಗಳನ್ನು ಚದುರಿಸುವಂತೆ ರಣರಂಗದಲ್ಲಿ ವಾಯವ್ಯಾಸ್ತ್ರದಿಂದ ಶತ್ರುಸೇನೆಯನ್ನು ಚದುರಿಸಿದರು.

ತೇ ಹನ್ಯಮಾನಾ ದ್ರೋಣೇನ ಪಾಂಚಾಲಾಃ ಪ್ರಾದ್ರವನ್ ಭಯಾತ್ ।
ಪಶ್ಯತೋ ಭೀಮಸೇನಸ್ಯ ಪಾರ್ಥಸ್ಯ ಚ ಮಹಾತ್ಮನಃ ॥ ೧೧ ॥

ದ್ರೋಣರಿಂದ ಹೊಡೆಯಲ್ಪಟ್ಟ ಪಾಂಚಾಲರು ಮಹಾತ್ಮರಾದ ಭೀಮಸೇನ ಮತ್ತು ಅರ್ಜುನರು ನೋಡುತ್ತಿರುವಂತೆಯೇ ಭಯದಿಂದ ಓಡಿಹೋದರು.

ತತಃ ಕಿರೀಟೀ ಭೀಮಶ್ಚ ಸಹಸಾ ಸನ್ನ್ಯವರ್ತತಾಮ್ ।
ಮಹತಾ ರಥವಂಶೇನ ಪರಿಗೃಹ್ಯ ಬಲಂ ತವ ॥ ೧೨ ॥

ಆಗ ಭೀಮಸೇನ ಮತ್ತು ಅರ್ಜುನರು ದೊಡ್ಡ ಸೈನ್ಯದ ಸಮೂಹವನ್ನು ತೆಗೆದುಕೊಂಡು ನಿನ್ನ ಸೈನ್ಯವನ್ನು ಉದ್ದೇಶಿಸಿ ತಕ್ಷಣ ಅಲ್ಲಿಗೆ ಬಂದರು.

ಬೀಭತ್ಸುರ್ದಕ್ಷಿಣಂ ಪಾರ್ಶ್ವಮುತ್ತರಂ ತು ವೃಕೋದರಃ ।
ಭಾರದ್ವಾಜಂ ಶರೌಘಾಭ್ಯಾಂ ಮಹದ್ಭ್ಯಾಮಭ್ಯವರ್ಷತಾಮ್ ॥ ೧೩ ॥

ಅರ್ಜುನನು ದ್ರೋಣರ ಬಲಭಾಗದ ಸೈನ್ಯವನ್ನೂ, ಭೀಮಸೇನನು ಎಡಭಾಗದ ಸೈನ್ಯವನ್ನೂ ಹೊಡೆದು ದೊಡ್ಡ ಬಾಣಗಳ ಸಮೂಹದಿಂದ ದ್ರೋಣರನ್ನೂ ಹೊಡೆದರು.

ತೌ ತದಾ ಸೃಂಜಯಾಶ್ಚೈವ ಪಾಂಚಾಲಾಶ್ಚ ಮಹಾರಥಾಃ ।
ಆನ್ವಗಚ್ಛನ್ ಮಹಾರಾಜ ಮತ್ಸ್ಯಾಶ್ಚ ಸಹ ಸೋಮಕೈಃ ॥ ೧೪ ॥

ಎಲೈ ಮಹಾರಾಜನೇ, ಆಗ ಸೃಂಜಯರು ಮಹಾರಥರಾದ ಪಾಂಚಾಲರು, ಮತ್ಸ್ಯರು ಮತ್ತು ಸೋಮಕರು ಭೀಮಾರ್ಜುನರನ್ನು ಹಿಂಬಾಲಿಸಿದರು.

ತಥೈವ ತವ ಪುತ್ರಸ್ಯ ರಥೋದಾರಾಃ ಪ್ರಹಾರಿಣಃ ।
ಮಹತ್ಯಾ ಸೇನಯಾ ಸಾರ್ಧಂ ಜಗ್ಮುರ್ದ್ರೋಣರಥಂ ಪ್ರತಿ ॥ ೧೫ ॥

ಹಾಗೆಯೇ ಪ್ರಹಾರಶೀಲರಾದ ನಿನ್ನ ಪುತ್ರನ ಮಹಾರಥರು ದೊಡ್ಡ ಸೈನ್ಯವನ್ನು ತೆಗೆದುಕೊಂಡು (ದ್ರೋಣರಿಗೆ ಬಲವನ್ನು ಕೊಡಲು) ದ್ರೋಣರ ರಥದ ಬಳಿಗೆ ಬಂದರು.

ತತಃ ಸಾ ಭಾರತೀ ಸೇನಾ ವಧ್ಯಮಾನಾ ಕಿರೀಟಿನಾ ।
ತಮಸಾ ನಿದ್ರಯಾ ಚೈವ ಪುನರೇವ ವ್ಯದೀರ್ಯತ ॥ ೧೬ ॥

ಆಗ ಅರ್ಜುನನಿಂದ ಹೊಡೆಯಲ್ಪಡುತ್ತಿದ್ದ ಕೌರವ ಸೇನೆಯು ಕತ್ತಲೆಯಿಂದಲೂ ಮತ್ತು ನಿದ್ರೆಯಿಂದಲೂ ಪುನಃ ಭಗ್ನವಾಯಿತು.

ದ್ರೋಣೇನ ವಾರ್ಯಮಾಣಾಸ್ತೇ ಸ್ವಯಂ ತವ ಸುತೇನ ಚ ।
ನ ಶಕ್ಯಂತೇ ಮಹಾರಾಜ ಯೋಧಾ ವಾರಯಿತುಂ ತದಾ ॥ ೧೭ ॥

ದ್ರೋಣರಿಂದಲೂ ಮತ್ತು ಸ್ವತಃ ನಿನ್ನ ಪುತ್ರನಿಂದಲೂ ನಿವಾರಿಸಲ್ಪಟ್ಟರೂ ಎಲೈ ಮಹಾರಾಜನೇ, ಯೋಧರನ್ನು ಆಗ ತಡೆಯಲು ಸಾಧ್ಯವಾಗಲಿಲ್ಲ.

ಸಾ ಪಾಂಡುಪುತ್ರಸ್ಯ ಶರೈರ್ದಾರ್ಯಮಾಣಾ ಮಹಾಚಮೂಃ ।
ತಮಸಾ ಸಂವೃತೇ ಲೋಕೇ ವ್ಯದ್ರವತ್ ಸರ್ವತೋಮುಖೀ ॥ ೧೮ ॥

ಪಾಂಡುಪುತ್ರನಾದ ಅರ್ಜುನನ ಬಾಣಗಳಿಂದ ಸೀಳಲ್ಪಟ್ಟ ನಿನ್ನ ಆ ದೊಡ್ಡ ಸೈನ್ಯವು ಲೋಕವೆಲ್ಲವೂ ಕತ್ತಲೆಯಿಂದ ಮುಚ್ಚಲ್ಪಡುತ್ತಿರಲು ಸರ್ವದಿಕ್ಕುಗಳಲ್ಲಿ ಓಡಿಹೋಯಿತು.

ಉತ್ಸೃಜ್ಯ ಶತಶೋ ವಾಹಾಂಸ್ತತ್ರ ಕೇಚಿನ್ನರಾಧಿಪಾಃ ।
ಪ್ರಾದ್ರವಂತ ಮಹಾರಾಜ ಭಯಾವಿಷ್ಟಾಃ ಸಮಂತತಃ ॥ ೧೯ ॥

ಎಲೈ ಮಹಾರಾಜನೇ, ಕೆಲವು ರಾಜರು ನೂರಾರು ಸಂಖ್ಯೆಯಲ್ಲಿ ತಮ್ಮ ವಾಹನಗಳನ್ನು ಬಿಟ್ಟು ಭಯದಿಂದ ಕೂಡಿದವರಾಗಿ ಎಲ್ಲ ಕಡೆಯಲ್ಲಿಯೂ ಓಡಿಹೋದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತಚತ್ವಾರಿಂಶದಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★